

ದೇವಲ ಮಹರ್ಷಿ

ಶ್ರೀ ದೇವಾಂಗ ಪುರಾಣವು

ಓಂ

ಶ್ರೀ ರಾಮಲಿಂಗ ಚಂದ್ರಚೌಡೇಶ್ವರಿ ವರ ಪ್ರಸಾದ ಸಿದ್ಧಿರಸ್ತು

ಶ್ರೀ ಗಾಯತ್ರ್ಯೈ ನಮಃ

ಶ್ರೀ ದೇವಲ ಪರಬ್ರಹ್ಮಣೇ ನಮಃ

ಶ್ರೀ

ದೇವಾಂಗ ಪುರಾಣವು

(ಕನ್ನಡ ವಚನ)

1998

ಪ್ರಕಾಶಕರು :

ಶ್ರೀ ಗಾಯಿತ್ರಿ ಪೀಠ ಮಹಾಸಂಸ್ಥಾನ


ಹೇಮಕೂಟ, ಹಂಪಿ

ಪ್ರಥಮ ಮುದ್ರಣ : ಜುಲೈ ೧೯೭೮
೩೦೦೦ ಪ್ರತಿಗಳು

ದ್ವಿತೀಯ ಮುದ್ರಣ : ಡಿಸೆಂಬರ್ ೧೯೯೮
೨೦೦೦ ಪ್ರತಿಗಳು

(ಕ್ರಯ ರೂ. 60.00)

ಮುದ್ರಕರು :
ವಿಶ್ವ ಪ್ರಿಂಟರ್ಸ್
೧೮, ೨೯ನೇ ಗಲ್ಲಿ, ಕೆ.ಎಂ. ನಾಗಣ್ಣ ರಸ್ತೆ
ಕಬ್ಬನ್ ಪೇಟೆ, ಬೆಂಗಳೂರು - ೫೬೦ ೦೦೨



JAGADGURU SRI SRI SRI DAYANANDAPURI MAHASWAMIJI

ಆಶೀರ್ವಚನ

ಅಖಿಲ ಭಾರತ ದೇವಾಂಗ ಮಹಾ ಸಮ್ಮೇಳನವುಡಿಸೆಂಬರ್ ೪,೫,೬, - ೧೯೯೮ ರಂದು ಸಂಭ್ರಮದಿಂದ ಜರುಗುತ್ತಿರುವ ಸಂದರ್ಭದಲ್ಲಿ ಈ ಮಹಾ ಸಮ್ಮೇಳನದ ಅಂಗವಾಗಿ ವ್ಯವಸ್ಥಾಪಕ ಸಮಿತಿಯವರು "ದೇವಾಂಗ ಪುರಾಣ" ಗ್ರಂಥವನ್ನು ಮರು ಮುದ್ರಣ ಮಾಡಿ ಸಮಸ್ತ ಜನತೆಗೂ ಇದು ತಲುಪುವಂತೆ ಶೀಘ್ರ ವ್ಯವಸ್ಥೆ ಮಾಡಿರುವುದು ಸ್ತುತ್ಯಾರ್ಹವಾಗಿದೆ.

ಯಾವುದೇ ಜನಾಂಗದ ಸರ್ವತೋಮುಖವಾದ ಬೆಳವಣಿಗೆಗೆ ಅದರ ಮೂಲ ಗ್ರಂಥಗಳು ಪುರಾಣಶಾಸ್ತ್ರ ಕಾವ್ಯಾದಿಗಳು ಅತ್ಯಗತ್ಯವಾಗಿದೆ. ಇವು ಕನ್ನಡಿಯಂತಿದ್ದು ತಮ್ಮ ಬಿಂಬವನ್ನು ಕಾಣಲು ಸಹಾಯಕಗಳಾಗಿವೆ. ಮನೆ ನಿರ್ಮಿಸಲು ಬುನಾದಿ ಭದ್ರವಾಗಿರಬೇಕು ಹಾಗೆಯೇ ಜನಾಂಗದ ನಿರ್ಮಾಣಕ್ಕೂ ಮೇಲ್ಕಂಡ ಗ್ರಂಥಗಳು ಸುಭದ್ರ ಬುನಾದಿಯೂ ಮಾರ್ಗದರ್ಶಿಯೂ ಆಗಿರುತ್ತವೆ. ಈ ಲಿಖಿತ ಆಧಾರಗಳು ಕೇವಲ ಪ್ರತೀತಿ, ನಂಬಿಕೆಗಳಿಂದಲೇ ಮೂಲವನ್ನು ಭದ್ರತೆಯಿಂದಿದೆ ಎಂದು ಹೇಳಲಾಗದು. ದೇವಾಂಗ ಧರ್ಮವು ಲೋಕೋನ್ನತವಾದ ನೇಯ್ಗೆ ಕಾಯಕವನ್ನು ಪೂರ್ವಕಾಲದಿಂದಲೂ ನಿರ್ವಹಿಸುತ್ತಾ ಬಂದಿರುವ ಧರ್ಮವಾಗಿದೆ. ಜನತೆಗೆ, ದೇವತೆಗಳಿಗೆ, ಋಷಿಮುನಿಗಳಿಗೆ, ಅಸುರರಿಗೆ, ಮತ್ರ್ಯಲೋಕದವರಿಗೆ ಬಟ್ಟೆಯನ್ನು ಕೊಟ್ಟು ಮಾನವನ್ನು ಸಂರಕ್ಷಿಸುವ ಧರ್ಮ - ಈ ನಮ್ಮ ದೇವಲಧರ್ಮ. ಮೂಲ ಪುರುಷ ದೇವಲ ಮಹರ್ಷಿಯು ವೇದ, ಪುರಾಣ, ಇತಿಹಾಸಗಳಲ್ಲಿಯೂ ಚಿತ್ರ, ಶಿಲ್ಪ, ಸಂಗೀತ, ನೃತ್ಯಗಳಲ್ಲಿಯೂ ಪ್ರಚಲಿತ; ಈತ ಅವತಾರ ಪುರುಷನೂ, ವಸ್ತ್ರ ನಿರ್ಮಾತೃವು ವಸ್ತ್ರ ಬೆಳವಣಿಗೆಯ ಇತಿಹಾಸಕ್ಕೆ ಕಾರಣ ಪುರುಷನೂ ಆಗಿದ್ದಾನೆ. ನಾಗರಿಕ ಜಗತ್ತಿನಲ್ಲಿ ಮಾನಸಂರಕ್ಷಣೆಯೇ ಮಿಗಿಲಾದ ಲೋಕ ಕಲ್ಯಾಣವಾಗಿದೆ. ಇದು ನಮ್ಮ ದೇವಾಂಗದವರಿಗೆಲ್ಲಾ ಅಭಿಮಾನದ ಸಂತೋಷದ ಸಂಗತಿಯಾಗಿದೆ.

ದೇವಾಂಗನು ಶಿವನ ಫಾಲನೇತ್ರದಿಂದ ಉದ್ಭವಿಸಿದನೆಂದು ಪುರಾಣೋಕ್ತವಾಗಿದೆ. ಕೃತಯುಗಕ್ಕೂ ಆದಿಯಲ್ಲಿ ದೇವಾನು ದೇವತೆಗಳೂ, ಮಾನವರೂ ರಾಕ್ಷಸರೂ, ಮಾನ ಸಂರಕ್ಷಣಾ ವಸ್ತ್ರಗಳಿಲ್ಲದೆ ಬಹುತಾಪ ಪಡುತ್ತಿರುವಂತಹ ಸಂಧ್ಯಾ ಕಾಲದಲ್ಲಿ ಈ ಮಹಾ ಪುರುಷನ ಅವತಾರವಾಗಿದೆ. ದೇವಾಂಗ ಎಂದರೆ ಬಟ್ಟೆ ಎಂತಲೂ ಅರ್ಥವಿಧೆ. ದೇವಾಂಗ ದೇವಲನೂ ದೇವಲ ಸ್ಮೃತಿಗ್ರಂಥವನ್ನು ಬರೆದು

ಸ್ಮೃತಿಕಾರನಾಗಿ ಇಡೀ ಮಾನವ ಸಮಾಜದವರು ಅನುಸರಿಸಬೇಕಾದ ನೀತಿ ನಿಯಮಗಳನ್ನು ರೂಪಿಸಿದ್ದಾನೆ. ದೇವಲ ಸ್ಮೃತಿಯು ಮನು ಸ್ಮೃತಿಯಷ್ಟೇ ಪ್ರಾಮುಖ್ಯಗಳಿಸಿದೆ.

ದೇವಾಂಗನು ದೇವನ ಅಂಗದಿಂದ ಹುಟ್ಟಿದವನಾದುದರಿಂದ ದೇವಾಂಗನೆಂದು ದೇವತೆಗಳೆಲ್ಲರ ಪ್ರಾರ್ಥನೆಗಳನ್ನು ಈಡೇರಿಸಿದುದರಿಂದ ದೇವಲನೆಂದೂ ಹೆಸರು ಗಳಿಸಿದ್ದಾನೆ. ದೇವಾಂಗ ದೇವಲ ಎರಡೂ ಹೆಸರುಗಳು ಈತನಿಗಿವೆ.

ದೇವಲ ಮಹರ್ಷಿಯು ಜಗತ್ತಿಗೆ ಸೂತ್ರವಸ್ತ್ರ ಪ್ರದಾತನೇ ಅಲ್ಲದೆ ಅಧ್ಯಾತ್ಮ ತತ್ವ ಭೋದಕನೂ, ರಾಜರ್ಷಿಯೂ ಆಗಿದ್ದನು. ಶ್ರೀ ಕೃಷ್ಣನು ಅರ್ಜುನನಿಗೆ ಗೀತೋಪದೇಶ ಮಾಡಿದಾಗ ದೇವಲನ ವಿಷಯ ಪ್ರಸ್ತಾಪಿಸಿರುವುದು ವಿಶೇಷ ಸಂಗತಿಯಾಗಿದೆ.

ಈ ದೇವಾಂಗ ಪುರಾಣದ ಪ್ರತಿಗಳು ಎಲ್ಲೆಡೆಯೂ ದೊರೆಯುತ್ತಿರಲಿಲ್ಲ. ಹಿಂದೆ ಬೆಂಗಳೂರು ದೇವಾಂಗ ಸಂಘದಿಂದ ಮುದ್ರಣಗೊಂಡ ಪ್ರತಿಗಳು ಮಾರಾಟ ವಾಗಿವೆ. ಆದ್ದರಿಂದ ಹಿಂದಿನ ದೇವಾಂಗ ಪುರಾಣವನ್ನು ಈಗ ಪುನಮುದ್ರಣ ಮಾಡಿಸಲಾಗಿದೆ.

ಜನತೆ ಈಗ ಎಚ್ಚೆತ್ತಿದೆ. ಹಂಪೆ ಹೇಮಕೂಟ ಶ್ರೀ ಗಾಯತ್ರೀ ಪೀಠವೂ ಹಿಂದಿನ ಪೀಠಾಧಿಪತಿಗಳ ತಪಸ್ಸಿನಿಂದಲೂ, ಇಂದಿನ ಗಣ್ಯರ ಪರಿಶ್ರಮದಿಂದಲೂ ಈ ಸದ್ಗ್ರಂಥವನ್ನು ಸಮಸ್ತರಿಗೂ ಪಾರಾಯಣ - ಯೋಗ್ಯವನ್ನಾಗಿ ಮಾಡುವ ಮಹದಾಶಯದಿಂದ ಈ ಮಹಾ ಸಮ್ಮೇಳನದ ವ್ಯವಸ್ಥಾಪಕ ಸಮಿತಿಯು ಪ್ರಕಟಿಸುತ್ತಿರುವುದಕ್ಕಾಗಿ ಇವರೆಲ್ಲರೂ ಅಭಿನಂದನಾರ್ಹರು. ಈ ಗ್ರಂಥವು ಒಂದು ಪವಿತ್ರ ಗ್ರಂಥವಾಗಿದೆ; ಸರ್ವರೂ ಇದನ್ನು ಕೊಂಡು ಪಾರಾಯಣ ಮಾಡಿ ಧನ್ಯರಾಗಲಿ. ವೇದಮಾತೆ ಗಾಯತ್ರಿಯೂ ಕುಲದೇವತೆ ರಾಮಲಿಂಗೇಶ್ವರ ಚೌಡೇಶ್ವರಿಯು ಸಮಸ್ತರಿಗೂ ಸನ್ಮಂಗಳ ನೀಡಲೆಂದು ಹಾರೈಸಲಾಗಿದೆ.

ಶ್ರೀ ಶ್ರೀ ಶ್ರೀ ದಯಾನಂದಪುರಿ ಸ್ವಾಮಿಗಳು

ಬೆಂಗಳೂರು

ತಾ|| 25-11-98



ಶ್ರೀ ಪರಮೇಶ್ವರನ ಫಾಲನೇತ್ರದಿಂದ ದೇವಮಾನವರ ಮಾನರಕ್ಷಣೆಗಾಗಿ
ವಸ್ತ್ರವನ್ನು ಸೃಷ್ಟಿಸಲು ಅವತರಿಸಿದ ಶ್ರೀ ದೇವಲ ಮಹರ್ಷಿ



ಬಿ.ಜಿ. ರಂಗರಾಜು

ಅಧ್ಯಕ್ಷರ ನುಡಿ

ವಿಶ್ವದೆಲ್ಲೆಡೆಯಲ್ಲಿಯೂ ಹರಡಿಕೊಂಡಿರುವ ದೇವಾಂಗ ಜನಾಂಗವು ಭಾರತ ಖಂಡದ ಎಲ್ಲಾ ರಾಜ್ಯಗಳಲ್ಲಿ ವ್ಯಾಪಿಸಿದೆ. ಇವರುಗಳ ಭಾಷೆ, ದೇಶ, ಬೇರೆ ಬೇರೆಯಾಗಿದ್ದರೂ ಪ್ರಧಾನ ವೃತ್ತಿ ಕುಲಕಸುಬಾದ ನೇಕಾರಿಕೆ.

ವಿಶ್ವದ ದೇವಾಂಗ ಜನಾಂಗಕ್ಕೆಲ್ಲಾ ಶ್ರೀ ಹಂಪಿ ಹೇಮಕೂಟ ಶ್ರೀ ಗಾಯತ್ರಿ ಪೀಠ ಮಹಾ ಸಂಸ್ಥಾನವೇ ಏಕೈಕ ಗುರುಪೀಠ. ಇಂತಹ ಪುರಾತನವಾದ ಹಾಗೂ ಮೂಲಸ್ಥಾನ ಗುರುಪೀಠಕ್ಕೆ ಶ್ರೀ ಶ್ರೀ ಶ್ರೀ ದಯಾನಂದಪುರಿ ಮಹಾ ಸ್ವಾಮಿಗಳವರು ಪೀಠಾಧೀಶ್ವರರಾದುದು ದೇವಾಂಗ ಕುಲಕ್ಕೆಲ್ಲಾ ಸಂತೋಷವು ಮತ್ತು ಗೌರವವು ಆಗಿರುತ್ತದೆ.

ಜಗದ್ಗುರು ಶ್ರೀ ಶ್ರೀ ಶ್ರೀ ದಯಾನಂದಪುರಿ ಮಹಾ ಸ್ವಾಮಿಗಳು ದಿನಾಂಕ 30-4-1990 ರಂದು ಗಾಯತ್ರಿ ಪೀಠಾಧೀಶರಾಗಿ ಅಧಿಕಾರ ವಹಿಸಿಕೊಂಡರು. ಅಂದಿನಿಂದ ಇಂದಿನವರೆಗೂ ಅಖಿಲ ಭಾರತದಲ್ಲಿ ಎಲ್ಲಾ ರಾಜ್ಯಗಳಲ್ಲಿ ಸಂಚರಿಸಿ ಜನಾಂಗದ ಸಂಘಟನೆ ಏಳಿಗೆಗಾಗಿ ಅಹರ್ನಿಶಿ ದುಡಿಯುತ್ತಿರುತ್ತಾರೆ. ಶ್ರೀಯವರು ಸಂಚರಿಸಿದ ರಾಜ್ಯಗಳಲ್ಲಿರುವ ದೇವಾಂಗದವರ ಆಚಾರ ವಿಚಾರಗಳು ವಿಭಿನ್ನವಾಗಿವೆಯೆಂದು ಮನಗಂಡು ಎಲ್ಲರನ್ನು ಒಂದೆಡೆ ಸೇರಿಸಬೇಕೆಂದು ಅಖಿಲ ಭಾರತ ದೇವಾಂಗ ಸಮ್ಮೇಳನ ನಡೆಸಲು ಎಲ್ಲಾ ದೇವಾಂಗದವರು ಒಕ್ಕೊರಲಿನಿಂದ, ಒಮ್ಮನದಿಂದ ಬಯಸಿದ ಫಲವೇ ಇಂದಿನ ಅಖಿಲ ಭಾರತ ದೇವಾಂಗ ಮಹಾ. ಸಮ್ಮೇಳನ 98.

ನಮ್ಮ ಜನಾಂಗಕ್ಕೆ ಒದಗಿದ್ದ ಶಾಪನಿವಾರಣೆಯಾದ ಕುರುಹಾಗಿ ಜಗದ್ಗುರು ಪಟ್ಟಾಭಿಷೇಕ ಆದ ಮೇಲೆ ಮೊಟ್ಟ ಮೊದಲನೆ ಈ ಸಮ್ಮೇಳನ ನಡೆಯುತ್ತಿರುವುದು ನಮ್ಮೆಲ್ಲರ ಭಾಗ್ಯವಾಗಿದೆ.

ಈ ಸಮ್ಮೇಳನದ ಪರಿಣಾಮವಾಗಿ ಅಖಂಡ ಭಾರತದಲ್ಲಿರುವ ದೇವಾಂಗ ಜನಾಂಗವೆಲ್ಲಾ ಸಂಘಟನಾ ಪೂರ್ವಕವಾಗಿ ಒಂದುಗೂಡಿ, ರಾಜಕೀಯದಲ್ಲಿ ತಮ್ಮ ಪ್ರಭಾವವನ್ನು ಬೀರಿ ದೇವಾಂಗ ಜನಾಂಗದ ಸರ್ವತೋಮುಖ ಏಳಿಗೆಯಾಗಲು ಸಹಕಾರಿಯಾಗುತ್ತದೆ. ಹಾಗೂ ಶ್ರೀ ಮಠದ ಸರ್ವತೋಮುಖ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಿ, ಧಾರ್ಮಿಕ, ಅಧ್ಯಾತ್ಮಿಕ ಸಾಂಸ್ಕೃತಿಕ ಶೈಕ್ಷಣಿಕ ರೀತಿಗಳಲ್ಲಿ ಉನ್ನತ ಮಟ್ಟದ ವಿವಿಧ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗಿದೆ.

ಬೆಂಗಳೂರು ದೇವಾಂಗ ಸಂಘದಿಂದ 1978ರಲ್ಲಿ ಮುದ್ರಣ ಮಾಡಿಸಿದ್ದ ದೇವಾಂಗ ಪುರಾಣ ಪುಸ್ತಕದ ಪ್ರತಿಗಳು ಮುಗಿದಿದ್ದು, ಕರ್ನಾಟಕದ ನಾನಾ ಮೂಲೆಗಳಿಂದ ಪುರಾಣಕ್ಕೆ ಬೇಡಿಕೆ ಬಂದಿದೆ. ನಮ್ಮ ಜನಾಂಗದ ಆಶೆಯನ್ನು ಪೂರೈಸಲು ಅದೇ ದೇವಾಂಗ ಪುರಾಣವನ್ನು ಮರು ಮುದ್ರಣ ಮಾಡಲು ಮಹಾ ಸಮ್ಮೇಳನದಲ್ಲಿ ಅದನ್ನು ಬಿಡುಗಡೆ ಮಾಡಲು ಏರ್ಪಡಿಸಿರುತ್ತೆ. ಸದ್ಗುರುಗಳ ಕೃಪೆಯಿಂದ ಈ ಕಾರ್ಯ ಕೈಗೊಂಡಿದ್ದು, ಸದ್ಗುರುಗಳವರು ಸಂದೇಶ ನೀಡಿ ಆಶೀರ್ವದಿಸಿರುತ್ತಾರೆ. ಅವರಿಗೆ ನನ್ನ ಶಿರಸಾಷ್ಟಾಂಗ ನಮಸ್ಕಾರಗಳನ್ನು ಅರ್ಪಿಸುತ್ತೇನೆ.

ಈ ದಿವ್ಯ ಪವಿತ್ರವಾದ ಪುರಾಣವನ್ನು ದೇವಾಂಗ ಬಂಧುಗಳೆಲ್ಲರೂ ಅವಶ್ಯವಾಗಿ ಓದಿ ನಮ್ಮ ಮತದ ಪ್ರಾಚೀನತೆಯನ್ನು ಪ್ರಾವಿತ್ರ್ಯತೆಯನ್ನು ಮನಗಂಡು ಸದಾಚಾರ ಸಂಪನ್ನರಾಗಿ ತ್ಯಾಗಮಯಿಗಳಾಗಿ, ದೇಶಧರ್ಮ ಸೇವಾತತ್ಪರರಾಗಿ ಸದ್ಗುರು ಶ್ರೀ ಶ್ರೀ ಶ್ರೀ ದಯಾನಂದ ಪುರಿ ಮಹಾ ಸ್ವಾಮಿಗಳ ಸೇವೆಯನ್ನು ಮನಃಪೂರ್ವಕವಾಗಿ ಮಾಡಿ ಪೂರ್ಣಾನಂದ ಪಡೆಯಲೆಂದು ಹಾರೈಸುತ್ತೇನೆ.

ಬೆಂಗಳೂರು
ತಾ॥ 25-11-98

ಬಿ.ಜಿ. ರಂಗರಾಜು
ಅಧ್ಯಕ್ಷರು
ಅಖಿಲ ಭಾರತ ದೇವಾಂಗ ಮಹಾ ಸಮ್ಮೇಳನ 98.

ಸಂಪಾದಕ ವಾಣಿ

ಆತ್ಮ ಸಾಕ್ಷಾತ್ಕಾರಕ್ಕಾಗಿ ಸಾಧಕರು ಮಾಡುವ ಶ್ರದ್ಧಾಪೂರ್ವಕ ಪ್ರಯತ್ನವೇ ಆಧ್ಯಾತ್ಮಿಕ ಸಾಧನೆ. ಸಾಧನೆಗೆ ಗುರುಗಳ ಮಾರ್ಗದರ್ಶನ ಅವಶ್ಯಕ. ಇಂತಹ ಗುರುಗಳು ಅವತಾರ ಪುರುಷರಾಗಿರಬಹುದು, ಅಯೋನಿಜರಾಗಿ ಜನ್ಮವೆತ್ತಿರಬಹುದು. ಇಂತಹ ಪುಣ್ಯ ಪುರುಷರ ಪುರಾಣ ಗ್ರಂಥಗಳು ಸಮಸ್ತ ಜನರಿಗೆ ಮಾರ್ಗದೀಪಿಗೆಗಳು.

ದೇವಾಂಗ ಬಂಧುಗಳಿಗೆಲ್ಲ ದೇವಾಂಗನ ಪುರಾಣ ಪುಣ್ಯಗ್ರಂಥ. ಪುರಾಣ ಪುಣ್ಯಗ್ರಂಥಗಳ ಪಠನದಿಂದ ಜೀವಿಯ ಮನಸ್ಸಿನ ಮೇಲೆ ಉತ್ತಮ ಪರಿಣಾಮ ಬೀರುತ್ತದೆ. ಉತ್ತಮ ಪ್ರಜೆಯಾಗುವಂತೆ ಮನಃಪರಿವರ್ತನೆಯಾಗುತ್ತದೆ.

ವಿಶ್ವಕ್ಕೆಲ್ಲಾ ದೇವಾಂಗನು ಒಬ್ಬನೇ. ಆತನ ಚರಿತ್ರೆ ಪುಣ್ಯದಾಯಕ. ಇಂತಹ ದೇವಾಂಗನ ಪುರಾಣವನ್ನು ಮುದ್ರಿಸಿ ಅಖಿಲ ಭಾರತ ದೇವಾಂಗ ಸಮ್ಮೇಳನದಲ್ಲಿ ಬಿಡುಗಡೆಮಾಡಿ ಭಾರತ ದೇಶದ ಜನತೆಗೆ ದೊರೆಯುವಂತೆ ಮಾಡಿರುವುದು ಸೂಕ್ತ ಕಾರ್ಯವಾಗಿದೆ.

ಬೆಂಗಳೂರು ದೇವಾಂಗ ಸಂಘದವರು ಹಿಂದೆ ಈ ಪುರಾಣದ ಮುದ್ರಣಕಾರ್ಯ ಕೈಗೊಂಡಿದ್ದರು. ಆದರೆ ಸುಮಾರು 2 ವರ್ಷಗಳಾದರೂ ಈ ಕಾರ್ಯ ನೆರವೇರದೆ ನೆನೆಗುದಿಗೆ ಬಿದ್ದಿತ್ತು. ಅದೂ ಒಳ್ಳೆಯದಕ್ಕೇ ಇರಬೇಕು ; ಏಕೆಂದರೆ ಅಖಿಲ ಭಾರತ ದೇವಾಂಗ ಸಮ್ಮೇಳನ ಸಮಯದಲ್ಲಿ ಮುದ್ರಣವಾಗುವ ಅವಕಾಶ ದೊರೆತು, ಪ್ರಚಾರ ಮತ್ತು ಮಾರಾಟಕ್ಕೆ ಅನುಕೂಲವಾಯಿತು.

ಈ ಸಂದ್ಗ್ರಂಥವನ್ನು ನಮ್ಮ ಸಮಾಜದವರೆಲ್ಲರೂ ಓದಿ ನಮ್ಮ ಜನಾಂಗದ ಇತಿಹಾಸವನ್ನು ತಿಳಿಯಲೆಂದು ಬಯಸುತ್ತೇನೆ. ಪೂಜ್ಯ ಶ್ರೀಗಳವರು ಆಶೀರ್ವಚನವನ್ನು ಅನುಗ್ರಹಿಸಿ, ಪುರಾಣದ ಶ್ರೇಷ್ಠತೆಯನ್ನು ಹೆಚ್ಚಿಸಿರುತ್ತಾರೆ. ಅಖಿಲ ಭಾರತ ದೇವಾಂಗ ಸಮ್ಮೇಳನದ ಅಧ್ಯಕ್ಷರಾದ ಶ್ರೀ ಬಿ.ಜಿ. ರಂಗರಾಜುರವರು ತಮ್ಮ ನುಡಿ ಬರೆದುಕೊಟ್ಟು ಗ್ರಂಥಕ್ಕೆ ಶೋಭೆ ತಂದಿರುತ್ತಾರೆ.

1978 ರಲ್ಲಿ ಬೆಂಗಳೂರು ದೇವಾಂಗ ಸಂಘದವರು ಈ ಪುರಾಣವನ್ನು ಅನೇಕ ದಾಖಲೆಗಳನ್ನು ಪರಿಶೀಲಿಸಿ ಸರಳ ಕನ್ನಡದಲ್ಲಿ ಪ್ರಕಟಿಸಿದ್ದಾರೆ. ಸದರಿ ಪುಸ್ತಕದ ಪ್ರಸ್ತಾವನೆ ಅವಲೋಕಿಸಿದಾಗ ಅವರು ಎಷ್ಟು ಶ್ರಮವಹಿಸಿ ಆ ಪುಸ್ತಕವನ್ನು ಪ್ರಕಟಿಸಿ

ದೇವಾಂಗ ಜನತೆಗೆ ನೀಡಿದ್ದಾರೆಂಬುದು ವ್ಯಕ್ತವಾಗುತ್ತದೆ. ಅದನ್ನು ತಯಾರಿಸಿದ ಸಂಪಾದಕ ಮಂಡಳಿ ಹಾಗೂ ಪ್ರಕಟಣೆ ಮಾಡಿದ ಬೆಂಗಳೂರು ದೇವಾಂಗ ಸಂಘದವರು ಅಭಿನಂದಾನಾರ್ಹರು.

ವಿಶ್ವ ದೇವಾಂಗ ಜಗದ್ಗುರು ಪೀಠವಾದ ಶ್ರೀ ಗಾಯತ್ರಿ ಪೀಠ ಮಹಾಸಂಸ್ಥಾನ, ಹೇಮಕೂಟ, ಹಂಪಿ, ಇಲ್ಲಿ ಅನೇಕ ವರ್ಷಗಳಿಂದ ಗುರುಪರಂಪರೆ ಮುಂದುವರೆಯದೆ ತೆರವಾಗಿತ್ತು. ಜಗದ್ಗುರು ಪೀಠವನ್ನು ಅಲಂಕರಿಸಿದ್ದವರಲ್ಲಿ 5ನೇ ಮುದ್ದುಸಂಗ ಮಹಾಮುನಿಗಳೇ ಕೊನೆಯವರು. ಸರ್ವ ದೇವಾಂಗ ಜನತೆಯ ಪ್ರಯತ್ನದಿಂದ ಶ್ರೀ ಶ್ರೀ ಶ್ರೀ ದಯಾನಂದಪುರಿ ಮಹಾಸ್ವಾಮಿಗಳು ತಾ॥ 30-4-1990 ರಂದು ಈ ಜಗದ್ಗುರು ಪೀಠವನ್ನು ಅಲಂಕರಿಸಿ ದೇವಾಂಗ ಜನಾಂಗದ ಆಶಾಜ್ಯೋತಿಯಾಗಿ ಬೆಳಗಿದ್ದಾರೆ. ಅವರ ತೀವ್ರ ಪ್ರಯತ್ನದಿಂದ ಅಖಿಲ ಭಾರತ ದೇವಾಂಗ ಸಮ್ಮೇಳನ - 98 ವಿಜೃಂಭಣೆಯಿಂದ ನಡೆಯುತ್ತಿದೆ. ಶ್ರೀ ಶ್ರೀಗಳವರ ಕೃಪೆಯಿಂದ ಗುರುಪರಂಪರೆಯು ಮುಂದುವರೆದು, ಆ ಪೀಠವು ವಿಶ್ವಕ್ಕೆಲ್ಲಾ ಮಾದರಿಯಾಗಿರಲೆಂದು ಆಶಿಸಲಾಗಿದೆ. ಈ ಪುರಾಣದ ಕೊನೆಯಲ್ಲಿ ಶ್ರೀ ಶ್ರೀಗಳವರು ಶ್ರೀ ಗಾಯತ್ರಿಪೀಠ ಮಹಾಸಂಸ್ಥಾವನ್ನು ಅಲಂಕರಿಸಿದ ಚರಿತ್ರೆಯನ್ನು ಸೇರಿಸಿ ಮಹಾಜನಾಂಗದ ಅವಗಾಹನೆಗೆ ತರಲಾಗಿದೆ.

ಬೆಂಗಳೂರಿನ ಖ್ಯಾತ ಮುದ್ರಕರಾದ ವಿಶ್ವ ಪ್ರಿಂಟರ್ಸ್‌ರವರು ಈ ಪುಸ್ತಕದ ಮುದ್ರಣವನ್ನು ಸುಮಾರು ಎರಡು ವರ್ಷ ಹಿಂದೆಯೇ ಪ್ರಾರಂಭಮಾಡಿ, ಪೂರ್ತಿ ಪುಸ್ತಕದ ಡಿ.ಟಿ.ಪಿ ಮಾಡಿ ಈವರೆಗೆ ತಾಳ್ಮೆಯಿಂದ ಕಾಯ್ದುಕೊಂಡಿದ್ದು ಪ್ರಸಕ್ತ ಅಖಿಲ ಭಾರತ ಮಹಾಸಮ್ಮೇಳನ 1998 ಸಂದರ್ಭದಲ್ಲಿ ಅತ್ಯಲ್ಪ ಕಾಲದಲ್ಲಿ ಸುಂದರವಾಗಿ ಮುದ್ರಣ ಮಾಡಿಕೊಟ್ಟಿದ್ದಾರೆ. ಅವರಿಗೆ ನನ್ನ ಶುಭ ಹಾರೈಕೆ.

ವಿಶ್ವದ ಇಡೀ ದೇವಾಂಗ ಜನಾಂಗಕ್ಕೆಲ್ಲಾ ಈ ಸದ್ಗ್ರಂಥದಿಂದಲೂ ಪೂಜ್ಯ ಶ್ರೀ ಶ್ರೀ ಶ್ರೀ ದಯಾನಂದಪುರಿ ಮಹಾಸ್ವಾಮಿಗಳವರ ಆಶೀರ್ವಾದದಿಂದಲೂ ಸರ್ವರೀತಿಯಲ್ಲಿ ಏಳ್ಗೆಯಾಗಲೆಂದು ಹಾರೈಸುತ್ತೇನೆ.

ಎಸ್.ಬಿ. ಮುನಿಶಂಕರಪ್ಪ
ಸಂಪಾದಕರು

ಬೆಂಗಳೂರು
ತಾ॥ 20.11.98

ಶ್ರೀ ದೇವಲ ಪರಬ್ರಹ್ಮಣೇ ನಮಃ

ಮೊದಲನೆ ಮುದ್ರಣದ ಪ್ರಸ್ತಾವನೆ

ಮಾನ್ಯ ಧರ್ಮ ಬಂಧು ಭಗಿನಿಯರೇ,

ಜಗತ್ಪಿತನಾದ ಬ್ರಹ್ಮನು ಸೃಷ್ಟಿಯನ್ನು ಮಾಡಿದ ಮೇಲೆ, ದೇವಮಾನವರೆಲ್ಲರೂ ಬೆತ್ತಲೆಯಾಗಿ ಲಜ್ಜಾರಹಿತರಾಗಿ ಸಂಚರಿಸುತ್ತಿದ್ದರು. ಅವರು ತಮ್ಮ ಈ ಸ್ಥಿತಿಯನ್ನು ಅರಿತು ತಮಗೆ ತಾವೇ ಲಜ್ಜೆಗೊಂಡು ಮರದ ಎಲೆ, ನಾರು, ತೊಗಟೆ, ಪಶುಗಳ ಚರ್ಮ ಮತ್ತು ತಮ್ಮ ಕೇಶಗಳಿಂದ ಮಾನಸಂರಕ್ಷಣೆ ಮಾಡಿಕೊಳ್ಳುತ್ತಿದ್ದರು. ಹೀಗಿರಲು ಇದರಿಂದ ಖಿನ್ನರಾದ ಇಂದ್ರಾದಿ ದೇವತೆಗಳು ತಮಗೆ ಮಾನಸಂರಕ್ಷಣಾ ಸಾಧನವನ್ನು ದಯಪಾಲಿಸಬೇಕೆಂದು ಸೃಷ್ಟಿಕರ್ತನಾದ ಬ್ರಹ್ಮನನ್ನು ಪ್ರಾರ್ಥಿಸಿದರು. ಬ್ರಹ್ಮನು ಅವರ ಆ ಸ್ಥಿತಿಯನ್ನು ನೋಡಿ ಕನಿಕರಪಟ್ಟು, ಈ ಕಾರ್ಯವು ತನ್ನಿಂದ ಸಾಧ್ಯವಿರದೆ ಕೇವಲ ಪರಮೇಶ್ವರನಿಂದಲೇ ಸಾಧ್ಯವೆಂಬುದನ್ನು ಮನಗಂಡು ಸಮಸ್ತ ದೇವತೆಗಳಿಂದೊಡಗೂಡಿ, ಕೈಲಾಸಪತಿಯಾದ ಪರಮೇಶ್ವರನಲ್ಲಿಗೆ ಹೋಗಿ, ತಮಗೆ ಮಾನಸಂರಕ್ಷಣಾ ಸಾಧನವನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸಿದರು. ಪರಮೇಶ್ವರನು ಅವರ ಪ್ರಾರ್ಥನೆಯು ಉಚಿತವೆಂದು ಮನಗಂಡು, ಅದನ್ನು ನೆರವೇರಿಸುವುದಾಗಿ ಅಭಯವನ್ನಿತ್ತು, ತನ್ನ ಇಚ್ಛಾಮಾತ್ರದಿಂದಲೇ ದಿವ್ಯರೂಪನಾದ ದೇವಲ (ದೇವಾಂಗ) ನನ್ನು ಸೃಷ್ಟಿಸಿ ಮಾನಸಂರಕ್ಷಣಾ ಸಾಧನವನ್ನು ನಿರ್ಮಿಸುವಂತೆ ಅವನಿಗೆ ಆಜ್ಞಾಪಿಸಿದನು. ಪರಮೇಶ್ವರನ ಅಪ್ಪಣೆಯಂತೆ ದೇವಾಂಗನು ಮಾನಸಂರಕ್ಷಣಾ ಸಾಧನವಾದ ವಸ್ತ್ರ ವನ್ನೂ, ಬ್ರಾಹ್ಮಣ್ಯ ಸಂಪಾದನೆಗಾಗಿ ಸೂತ್ರವನ್ನೂ (ಯಜ್ಞೋಪವೀತ) ನಿರ್ಮಿಸಿ ಸಮಸ್ತರಿಗೂ ಕೊಟ್ಟನು.

ಹೀಗೆ ಅತ್ಯಂತ ಪ್ರಾಚೀನನೂ, ಪವಿತ್ರನೂ, ಚತುರ್ದಶ ಭುವನಗಳ ಮಾನ ಸಂರಕ್ಷಕನೂ ಮತ್ತು ಸಮಸ್ತರಿಗೂ ಬ್ರಾಹ್ಮಣ್ಯ ಸಂಪಾದಿಸಿಕೊಟ್ಟವನೂ ಆದ ಶ್ರೀ ದೇವಲ (ದೇವಾಂಗ) ಪರಬ್ರಹ್ಮನ ದಿವ್ಯವಾದ ಚರಿತ್ರೆಯನ್ನು, ದೇವಾಂಗ ಮತದವರೆಲ್ಲರ ತಿಳಿವಳಿಕೆಗಾಗಿ ಸಂಸ್ಕರಿಸಿ ಬರೆಯಲಾಗಿದೆ.

ಈ ಗ್ರಂಥದಲ್ಲಿ ದೇವಾಂಗನೂ ಸೇರಿದಂತೆ ಏಳು ಅವತಾರಗಳನ್ನು ವಿವರಿಸಲಾಗಿದೆ. ಆದರೆ ದೇವಾಂಗನಲ್ಲದೆ ಏಳು ಅವತಾರಗಳಿದ್ದು ಅವುಗಳನ್ನು ಬ್ರಹ್ಮಾಂಡ ಪುರಾಣದ ಈ ಶ್ಲೋಕದಲ್ಲಿ ವಿವರಿಸಲಾಗಿದೆ.

ದೇವಾಂಗಃ ಪ್ರಥಮಾ ಸೃಷ್ಟಿಃ ಶಂಕರಸ್ಯ ಮಹಾತ್ಮನಃ ।
ವಿದ್ಯಾಧರೋ ದ್ವಾಪರಾದೌ, ಮಧ್ಯೇಽಭೂತ್ ಪುಷ್ಪದಂತಕಃ ।
ಅಂತೇಽವತಾರೋ ಬೇತಾಳ ; ಕಲೌವರರುಚಿ ಸ್ತಥಾ ।
ಚಿತ್ರಯೋಗೀ ದೇವಶಾಲೀ ದೇವದಾಸೋಽಭವಂ ಸ್ತತಃ ॥

ಇದನ್ನು ಪರಿಶೀಲಿಸಿದಲ್ಲಿ ದೇವಾಂಗನು ತಾನಲ್ಲದೆ, ಪ್ರತ್ಯೇಕವಾಗಿಯೇ ಏಳು ಅವತಾರಗಳನ್ನು ಧರಿಸಿದನೆಂದು ಗೊತ್ತಾಗುತ್ತದೆ ಅವು ಹೀಗಿವೆ.

ದೇವಾಂಗನ ಸಪ್ತಾವತಾರಗಳು

1. ವಿದ್ಯಾಧರ. 2. ಪುಷ್ಪದಂತ. 3. ಬೇತಾಳ.
4. ವರರುಚಿ. 5. ಚಿತ್ರಯೋಗಿ 6. ದೇವಶಾಲಿ
7. ದೇವದಾಸ.

ಈ ಗ್ರಂಥದಲ್ಲಿ 5 ನೆಯದಾದ ಚಿತ್ರಯೋಗಿಯ ಅವತಾರವನ್ನು ಬಿಟ್ಟು ದೇವಾಂಗನೂ ಸೇರಿದಂತೆ ಏಳು ಅವತಾರಗಳ ವರ್ಣನೆಯಿದೆ.

ಶ್ರೀ ದೇವಾಂಗನ ಸಪ್ತಾವತಾರಗಳ ಬಗೆಗೆ ಇನ್ನೊಂದು ಶ್ಲೋಕವು ಈ ರೀತಿ ಇದೆ.

ವಿದ್ಯಾಧರಶ್ಚಿತ್ರಯೋಗೀ ಸಾಧುಕೋ ಪುಷ್ಪದಂತಕಃ ।
ಬೇತಾಳ ವರರುಚಿರ್ದಾಸೋ ದೇವಾಂಗ ಸ್ಸಪ್ತನಾಮಕಃ ॥

ದೇವಲನಿಗೆ ದೇವಾಂಗನೆಂದು ಇನ್ನೊಂದು ಹೆಸರು ಇದೆಯಷ್ಟೆ. ಈ ಹೆಸರು ಬರಲು ಕಾರಣಗಳು ಹೀಗಿವೆ :

ದೇವಸ್ಯ ಅಂಗಾತ್ ಸಂಜಾತತ್ವಾತ್ ದೇವಾಂಗ ಇತಿ ।
ಸರ್ವ ದೇವ ಪ್ರಾರ್ಥನಾನಾಂ ಲಾಲೇತಿ ತಸ್ಯ ದೇವಲ ।
ಇತಿ ಚ ನಾಮದ್ವಯ ಮಭೂತ್ ॥ — ದೇವಲೋಪನಿಷತ್

ಇವನು ದೇವನ ಅಂಗದಿಂದ ಹುಟ್ಟಿದವನಾದುದರಿಂದ ದೇವಾಂಗನೆಂದೂ, ದೇವತೆಗಳೆಲ್ಲರ ಪ್ರಾರ್ಥನೆಗಳನ್ನು ಈಡೇರಿಸಿದುದರಿಂದ ದೇವಲನೆಂದೂ ಎರಡು ಹೆಸರುಗಳನ್ನೂ ಹೊಂದಿದ್ದಾನೆ.

ಹೀಗೆ ದೇವಲ ಮಹರ್ಷಿಯು ಜಗತ್ತಿಗೆ ಸೂತ್ರ ವಸ್ತ್ರ ಪ್ರದಾತನೇ ಅಲ್ಲದೆ, ಅಧ್ಯಾತ್ಮ ತತ್ವ ಬೋಧಕನೂ ಆಗಿದ್ದನು. ಶ್ರೀ ಕೃಷ್ಣನು ಅರ್ಜುನನಿಗೆ ಗೀತೋಪದೇಶ ಮಾಡಿದಾಗ ದೇವಲನ ವಿಷಯವಾಗಿಯೂ ನುಡಿದಿದ್ದಾನೆ.

ದೇವಲನು ದುಷ್ಟ ಶಿಕ್ಷಕನೂ ಶಿಷ್ಟರಕ್ಷಕನೂ ಆಗಿದ್ದುದಲ್ಲದೆ, ಸಮಾಜದ ರೀತಿ ನೀತಿ, ನಿಯಮಗಳ ನಿಯಾಮಕನೂ ಆಗಿದ್ದನು. ಈ ಬಗ್ಗೆ ಪರಾಶರರು ತಮ್ಮ "ಮಾಧವೀಯ" ಗ್ರಂಥದಲ್ಲಿ (ಪರಾಶರಸ್ಮೃತಿ ಎಂದು ಪ್ರಸಿದ್ಧವಾಗಿದೆ) ದೇವಲರ ವಾಕ್ಯಗಳನ್ನು ನೂರ ಹದಿನಾಲ್ಕಕ್ಕೂ ಹೆಚ್ಚು ಬಾರಿ ಉದಾಹರಿಸಿದ್ದಾರೆ. ದೇವಾಂಗನು ವೇದಮಾತೆಯಾದ ಗಾಯತ್ರೀಯನ್ನು ತ್ರಿಪಾದ ರೂಪವಾಗಿ ನಿರ್ಮಿಸಿ (ಯಜ್ಞೋಪವೀತದ ಮೂರು ಎಳೆಗಳು) ಅದನ್ನು ಮಂತ್ರಸಹಿತವಾಗಿ ತ್ರಿಮೂರ್ತಿಗಳಿಗೂ ಪ್ರದಾನ ಮಾಡಿದನು. ಗಾಯತ್ರೀಯ 3ನೆಯ ಪಾದವನ್ನು ದೇವಾಂಗನು ನಿರ್ಮಿಸಿದನೆಂದು ಸಿದ್ಧಾಗಮದಲ್ಲಿ ಈ ರೀತಿ ಪ್ರತಿಪಾದಿಸಿದೆ.

ಗಾಯತ್ರೀಂ ಮಂದಗಮನಾಂ ದೃಷ್ಟ್ವಾ ಕರುಣಯಾತದಾ।
ಚಕಾರ ತ್ರಿಪದಾಂ ದೇವೀಂ ದೇವಾಂಗೋ ಜಗದೀಶ್ವರೀಮ್ ॥

ದೇವಾಂಗ ಪರಬ್ರಹ್ಮನು ತನ್ನ ಪ್ರತಿಯೊಂದು ಅವತಾರದಲ್ಲಿಯೂ ವೈದಿಕಧರ್ಮ ಪ್ರತಿಪಾದನೆಗಾಗಿ ಅನೇಕ ಗ್ರಂಥಗಳನ್ನೂ, ಸಾಮಾಜಿಕ ಕಟ್ಟುಪಾಡುಗಳನ್ನೂ ರಚಿಸಿ ಜಗತ್ತಿಗೆ ಮಾರ್ಗದರ್ಶಕನಾಗಿ, ಪರಮೇಶ್ವರನ ಭಕ್ತಿಯನ್ನು ಜನರಲ್ಲಿ ವೃದ್ಧಿಯಾಗುವಂತೆ ಮಾಡಿ ಶಿವಪಾರಮ್ಯವನ್ನು ಪ್ರತಿಪಾದಿಸಿರುವುದು ಈ ಗ್ರಂಥದ ಉದ್ದಕ್ಕೂ ಕಂಡುಬಂದಿದ್ದರೂ ಇತರ ದೇವತೋಪಾಸನೆಗಳನ್ನು ಎಲ್ಲಿಯೂ ಖಂಡಿಸಿಲ್ಲದಿರುವುದು ಈ ಗ್ರಂಥದ ವೈಶಿಷ್ಟ್ಯವಾಗಿದೆ. ಕೊನೆಯ ಅವತಾರವಾದ ದೇವದಾಸಾವತಾರದಲ್ಲಿ ತನ್ನ ಕುಲವೃತ್ತಿಯಾದ ನೇಯ್ಗೆ ಕಾಯಕವನ್ನು ಮೆರೆಸಿ, ಶೈವ ಮತೋದ್ಧಾರಕನಾಗಿ ಶೈವ ಸಂಪ್ರದಾಯವು ಬೇರೂರಿ ನಿಲ್ಲುವಂತೆ ಮಾಡಿ ಅಜರಾಮರ ಕೀರ್ತಿಶಾಲಿಯಾದನು.

ಇಂತಹ ಮಹಾತ್ಮನ ವಿಚಾರದಲ್ಲಿ ಈಗಾಗಲೇ ಸಂಸ್ಕೃತ, ಕನ್ನಡ, ತೆಲುಗು ಮತ್ತು ತಮಿಳು ಭಾಷೆಗಳಲ್ಲಿ ದೇವಾಂಗ ಪುರಾಣಗಳು ಪ್ರಕಟವಾಗಿದ್ದರೂ ಕನ್ನಡದಲ್ಲಿ ದೇವಾಂಗ ಪುರಾಣವು ಈಗ ಅಲಭ್ಯವಾಗಿದೆ. ಈ ಕೊರತೆಯಿಂದಾಗಿ ದೇವಾಂಗ ಮತದವರಿಗೆ ತಮ್ಮ ಮೂಲ ಪುರುಷನ ಮತ್ತು ಪವಿತ್ರವಾದ ತಮ್ಮ ಮತದ ವಿಷಯವೇ ತಿಳಿಯದಾಗಿದೆ. ಈ ಕಾರಣದಿಂದ ಅನೇಕ ಜನ ದೇವಾಂಗ ಮಹನೀಯರು, ಈ ಪುರಾಣವನ್ನು ಮುದ್ರಿಸಬೇಕೆಂದು ಬೆಂಗಳೂರು ದೇವಾಂಗ ಸಂಘವನ್ನು ಒತ್ತಾಯ ಪಡಿಸಿದುದರ ಪರಿಣಾಮವಾಗಿ ಈ ಪ್ರಯತ್ನವನ್ನು ಕೈಗೊಳ್ಳಲಾಯಿತು. ಈ ಮಹತ್ಕಾರ್ಯವನ್ನು ಕೈಗೊಳ್ಳಲು ದೇವಾಂಗ ಸಂಘದವರು 'ದೇವಾಂಗ ಧರ್ಮ ಸಾಹಿತ್ಯ ಸಮಿತಿ' ಎಂಬ ಉಪಸಮಿತಿಯೊಂದನ್ನು ರಚಿಸಿ, ದೇವಾಂಗ ಪುರಾಣ ರಚನಾ ಕಾರ್ಯದ ಹೊಣೆಯನ್ನು ಅವರಿಗೆ ವಹಿಸಿಕೊಟ್ಟರು. ಈ ಉಪಸಮಿತಿಯವರು ಪುರಾಣ ರಚನೆಯ ಕಾರ್ಯವನ್ನು ಕೈಗೊಂಡು, ತಮ್ಮಲ್ಲಿಯೇ ಒಂದು ಸಂಪಾದಕ ಮಂಡಲಿಯನ್ನು ರಚಿಸಿಕೊಂಡು ಕಾರ್ಯೋನ್ಮುಖರಾದರು.

ಈ ಸಂಪಾದಕ ಮಂಡಲಿಯವರು ಪುರಾಣ ರಚನೆಗೋಸ್ಕರ ಪ್ರಚಲಿತವಾಗಿರುವ ದೇವಾಂಗಮತ ಸಾಹಿತ್ಯವನ್ನು ಸಂಗ್ರಹಿಸಲು ಪತ್ರಿಕೆಗಳಲ್ಲಿ ಪ್ರಕಟಿಸಿ, ತಿಳಿದವರಲ್ಲಿ ವಿಚಾರಿಸಿದರು. ಆದರೆ ಈ ಪ್ರಯತ್ನದಿಂದ ದೊರೆತ ಪ್ರಯತ್ನ ಅತ್ಯಲ್ಪ. ಈಗ ದೊರಕಿರುವ ತೆಲುಗು ಮತ್ತು ಕನ್ನಡ ಭಾಷೆಯ ದೇವಾಂಗ ಪುರಾಣಗಳಿಗೆ ಆಧಾರವಾದ ಸಂಸ್ಕೃತ ದೇವಾಂಗ ಪುರಾಣವು ಎರಡು ಭಾಷೆಗಳಲ್ಲೂ ಏಕಮಾತ್ರ ಮೂಲಗ್ರಂಥ ವಾಗಿದ್ದು ಇವುಗಳಲ್ಲಿ ಮೂಲ ವಿಷಯದಲ್ಲಿ ಬದಲಾವಣೆಗಳೇನೂ ಕಂಡುಬರುವುದಿಲ್ಲ. ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿಯೂ ಅದನ್ನು ಬ್ರಹ್ಮಾಂಡ ಪುರಾಣಾಂತರ್ಗತ ವೆಂದು ಉಲ್ಲೇಖಿಸಿಲಾಗಿದೆ. ಅದಲ್ಲದೆ ಸಂಸ್ಕೃತ, ಕನ್ನಡ, ತೆಲುಗು ಮತ್ತು ಇನ್ನಿತರ ಭಾಷೆಗಳಲ್ಲಿ ಇರಬಹುದಾದ ಇತರ ಮೂಲ ದೇವಾಂಗ ಪುರಾಣಗಳಿಗಾಗಿ ಹೆಚ್ಚಿನ ಶ್ರದ್ಧೆಯಿಂದ ಪ್ರಯತ್ನ ಮಾಡಲಾಯಿತು. ಮೈಸೂರು ಓರಿಯಂಟಲ್ ಲೈಬ್ರರಿ, ಮೈಸೂರು ವಿಶ್ವವಿದ್ಯಾಲಯದ ಪುಸ್ತಕ ಭಂಡಾರ, ಬೆಂಗಳೂರು ವಿಶ್ವವಿದ್ಯಾಲಯ ಪುಸ್ತಕ ಭಂಡಾರ ಮತ್ತು ಇನ್ನಿತರ ಕಡೆಗಳಲ್ಲಿಯೂ ಪ್ರಯತ್ನ ಮಾಡಲಾಗಿ ನಮಗೆ ಅಷ್ಟೇನೂ ಲಾಭವಾಗಲಿಲ್ಲ. ಆದುದರಿಂದ ಇಲಕಲ್ಲಿನ ದೇವಾಂಗ ಕುಲಭೂಷಣ ಶಂಕರಪ್ಪ ಬನಪ್ಪಾ ಸಕ್ರಿಯವರು 1923ರಲ್ಲಿ ಬರೆಯಿಸಿ ಪ್ರಕಟಿಸಿದ "ದೇವಾಂಗ ಪುರಾಣವು" ಎಂಬ ಗ್ರಂಥವೇ ಕನ್ನಡ ಭಾಷೆಯಲ್ಲಿ ಸಂಸ್ಕೃತ ಮೂಲವನ್ನುಳ್ಳ ಏಕ ಮಾತ್ರ ಗ್ರಂಥವೆಂದು ಕಂಡುಬಂದಿರುವುದರಿಂದ ನಾವು ಆ ಗ್ರಂಥವನ್ನೇ ಪ್ರಮಾಣ ವಾಗಿ ಇಟ್ಟುಕೊಂಡು, ಪರಿಷ್ಕರಿಸಿ ಈಗಿನ ಸರಳವಾದ ಭಾಷೆಯಲ್ಲಿ ಬರೆದಿ ದ್ದೇವೆ. ಮೂಲಕಥೆಯನ್ನು ಸ್ವಲ್ಪವೂ ವಿಕೃತಗೊಳಿಸದೆ, ಅಲ್ಲಲ್ಲಿ ಕಂಡು ಬಂದ ಪುನರುಕ್ತಿಗಳನ್ನು ತೆಗೆದುಹಾಕಿ ಕಥಾಭಾಗಕ್ಕೆ ಸಂಬಂಧವನ್ನು ಕಲ್ಪಿಸಲು, ಇರುವ ಸಂಬಂಧವನ್ನು ಮತ್ತಷ್ಟು ಭದ್ರಪಡಿಸಲು ಒಂದೆರೆಡು ವಾಕ್ಯಗಳನ್ನು ಅಲ್ಲಲ್ಲಿ ಸೇರಿಸ ಲಾಗಿದೆ. ಕೆಲವು ಕಡೆ ಒಂದೆರೆಡು ವಾಕ್ಯಗಳನ್ನು ಕೈಬಿಡಲಾಗಿದೆ. ಈ ಗ್ರಂಥವನ್ನು ಅದರ ಪುನರ್ಮುದ್ರಣವೆಂದರೂ ತಪ್ಪಲ್ಲ. ಈ ಗ್ರಂಥದಲ್ಲಿ ಇಲ್ಲದ ಹತ್ತಿಯಬೀಜದ ವಿಷಯವನ್ನೂ ಹುಂಜದ ವಿಷಯವನ್ನೂ ಕುದೂರು ಕೆ.ಆರ್. ಲಕ್ಷ್ಮಣ್ಣನವರ 'ವಚನ ದೇವಾಂಗ ಪುರಾಣ' ದಿಂದ ಉದ್ಧರಿಸಿ, ಸಂದರ್ಭಾನುಸಾರ ಟಿಪ್ಪಣಿಯಲ್ಲಿ ಕೊಡಲಾಗಿದೆ. ಈ ಪುರಾಣದಲ್ಲಿಲ್ಲದ ಮಗ್ಗದ ಸಾಮಾನುಗಳ ಮತ್ತು ನೇಯ್ಗೆ ಉಪಕರಣಗಳ ಹೆಸರುಗಳನ್ನು ಇದರಲ್ಲಿ ಸೇರಿಸಲಾಗಿದೆ.

ಮೇಲೆ ತಿಳಿಸಿದ ಗ್ರಂಥಗಳೇ ಅಲ್ಲದೆ ನಮಗೆ ಈ ವರಿವಿಗೆ ದೊರೆತಿರುವ ದೇವಾಂಗ ಮತ ಸಾಹಿತ್ಯ ಕೃತಿಗಳು ಈ ಕೆಳಕಂಡಂತಿವೆ :-

ಬೆಂಗಳೂರು ದೇವಾಂಗ ಧರ್ಮಪ್ರಸಾರ ಮತ್ತು ಸಂಶೋಧನ ಮಂಡಳಿ ಹಾಗೂ ವೈಯಕ್ತಿಕವಾಗಿ ಶ್ರೀ ವೈ. ವಿ. ತಿಮ್ಮಯ್ಯನವರು ಸಂಗ್ರಹಿಸಿರುವ ಕೃತಿಗಳು.

ಮುದ್ರಿತ ಗ್ರಂಥಗಳು

1. ದೇವಾಂಗ ಪುರಾಣಮು (ತೆಲುಗು)
2. ದೇವಾಂಗ ಮತ ಪ್ರಕಾಶಿಕೆ-ಮೈಸೂರು ಶಂಕರಯ್ಯನವರಿಂದ ವಿರಚಿತ-1898
3. ವೇದೋಕ್ತ ಮೂಲಸ್ತಂಭನ - ಮೈಸೂರು ಶಂಕರಯ್ಯನವರಿಂದ ವಿರಚಿತ (ಸಂಸ್ಕೃತ ಮೂಲ, ಕನ್ನಡ ಅನುವಾದ ಸಹಿತ) - 1898.
4. ಕನ್ನಡ ಪದ್ಯರೂಪ ದೇವಾಂಗ ಪ್ರಕಾಶ (ಮುದ್ರಿತ ಕಾಲವಿಲ್ಲ)
5. ಬ್ರಹ್ಮಕರ್ಮ ಸೂತ್ರ - ಬ್ಯಾಡಗಿ ದೇವಾಂಗ ಮಠದ ಸುಬ್ಬಯ್ಯಸ್ವಾಮಿ ವಿರಚಿತ - 1900
6. ದೇವಾಂಗ ಮನುಬ್ರಹ್ಮ ಮೂಲಸ್ತಂಭವೆಂಬ ಉಪನಿಷದ್ವಾಕ್ಯಗಳು ಬೆನಕಪ್ಪಾಶಾಸ್ತ್ರಿ ವನಶಿಗ್ಗಲಿ, ಬ್ಯಾಡಗಿರವರಿಂದ ವಿರಚಿತ-1906
7. ದೇವಾಂಗ ಲಿಂಗಧಾರಣವಾದ ಖಂಡನ- ಶ್ರೀ ನಾಮ್ನಾ ಘಟಿಕಾ ಶತಮಹಾಕವಿ ಶ್ರೀ ಕೃಷ್ಣಾವಧೂತ ಪಂಡಿತರಿಂದ ವಿರಚಿತ -1910.
8. ಶ್ರೀ ದೇವಾಂಗಪುರಾಣ - ಮಲ್ಲಿಕಾರ್ಜುನ ಶಾಸ್ತ್ರಿ ವಿರಚಿತ (ದೇವಾನಾಗರಿ ಲಿಪಿ, ಭಾಷೆ ಕನ್ನಡ) -1914.
9. ದೇವಲ ಸ್ಮೃತಿ (ದೇವಲ ಧರ್ಮಶಾಸ್ತ್ರಮು) ತೆಲುಗು - ಮದರಾಸು ವಾವಿಳ್ಳ ಪ್ರಕಟಿತ -1917.
10. ದೇವಾಂಗ ಸತ್ಪುರುಷ ಶ್ರೀ ರುದ್ರಮುನಿ ಸ್ವಾಮಿಗಳವರ ಚರಿತ್ರೆಯೂ, ಸದ್ಬೋಧವೂ - ರಾಜೋ ರಾಮಚಂದ್ರ ಗುಡಿಸಾಗರ ಮತ್ತು ಫ.ಮ. ಬರದವಾಡ ವಿರಚಿತ.
11. ತೆಲುಗು ದೇವಾಂಗ ಮೂಲಸ್ತಂಭನಮು -1925.
12. ರುದ್ರಭಾರತವೆಂಬ ಬ್ರಹ್ಮಾಂಡ ಪುರಾಣವು.
13. ಶ್ರೀಮದ್ದೇವಲ (ದೇವಾಂಗ) ಪುರಾಣವು - ಕವಿ ಸಿದ್ಧಮಲ್ಲಾರ್ಯ ಯೋಗಿ ವಿರಚಿತ (ಪದ್ಯರೂಪ) ಶಾ। ಶಕ -1835.
14. ಶ್ರೀ ದೇವಾಂಗ ಮತ ಸ್ಪಷ್ಟೀಕರಣ ಅಥವಾ ನೂತನ ವೀರಶೈವ ದೇವಾಂಗರ ಆಕ್ಷೇಪ ಖಂಡಣ - ಬಸಪ್ಪಾ ಬನಪ್ಪಾ ಯಕ್ಕುಂಡಿ ವಿರಚಿತ -1928.
15. ದೇವಾಂಗ ಪುರಾಣವು - ಶ್ರೀ ಶಂಕರಪ್ಪಾ ಬನಪ್ಪಾ ಸಕ್ರಿಯವರಿಂದ ಪ್ರಕಟಿತ -1923(ಪ್ರಸ್ತುತ ಗ್ರಂಥ ರಚನೆಗೆ ಪ್ರಚೋದಕ)
16. ದೇವಾಂಗ ಸುಧಾ - ರಾಜೋ ರಾಮಚಂದ್ರ ಗುಡಿಸಾಗರ ಮತ್ತು ಎಫ್.ಎಂ. ಬರದವಾಡ ವಿರಚಿತ -1927.
17. ವಚನ ದೇವಾಂಗ ಪುರಾಣ-ಕುದೂರು ಕೆ.ಆರ್. ಲಕ್ಷ್ಮಣ್ಣ ವಿರಚಿತ -1932.

18. ದೇವಾಂಗ ನಾಮಾವಳಿ-ಬ್ರಹ್ಮಶ್ರೀ ದೊಡ್ಡಬೆಲೆ ಲಿಂಗಣ್ಣಶಾಸ್ತ್ರಿ ವಿರಚಿತ-1953.
19. ದೇವರ ದಾಸಿಮಾರ್ಯ ಪ್ರಶಸ್ತಿ.
20. ತಮಿಳು ದೇವಾಂಗ ಪುರಾಣ ವಚನಂ.
21. ತಮಿಳು ದೇವಾಂಗ ಪುರಾಣಂ. ಇತ್ಯಾದಿ. ಇತ್ಯಾದಿ.

ಅಪ್ರಕಟಿತ ಓಲೆಗರಿ ಗ್ರಂಥಗಳು

1. ದೇವಾಂಗ ಪ್ರಕಾಶ - ಪದ್ಯರೂಪ
2. ದೇವಾಂಗ ಅಷ್ಟಕ ಮತ್ತು ದೇವಾಂಗ ಸ್ತೋತ್ರ ಸಂಗ್ರಹ (ಇದರಲ್ಲಿ ಸೂರ್ಯನಮಸ್ಕಾರವಿಧಿ, ದೇವಾಂಗ ಸ್ತೋತ್ರ, ಇವುಗಳ ಸಂಗ್ರಹ ಇದೆ. ದೇವಾಂಗ ಸ್ತೋತ್ರಗಳು ದೇವಾಂಗ ಸದಾಶಿವಲಿಂಗನು ಎಂಬ ಅಂಕಿತದಲ್ಲಿ ಕೊನೆಗೊಂಡಿವೆ) ದೇವಾಂಗದ ಚಿಕ್ಕಣ್ಣನವರ ಕುಮಾರ ನರಸಿಂಹಯ್ಯನು ಪ್ರತಿ ಮಾಡಿರುವಂತೆ ಬರೆಯಲಾಗಿದೆ.
3. ಬ್ರಹ್ಮಾಂಡ ಪುರಾಣ - ದ್ವಿತೀಯ ಶಂಭು ದೇವಾಂಗ ವಿರಚಿತ (ದೇವಾಂಗ ಪುರಾಣವಿದೆ)
4. ದೇವಾಂಗ ಪ್ರಕಾಶ ವೇದಸಾರ ಸಿದ್ಧಾಂತ ಪ್ರಕಾಶ. ವಿವರಗಳು ಗೊತ್ತಾಗುವುದಿಲ್ಲ.
5. ದೇವಾಂಗ ಪುರಾಣ - ಸಂಸ್ಕೃತ ಮೂಲ ತೆಲುಗು ಟೀಕು

ಹಸ್ತಲಿಖಿತ ಪ್ರತಿಗಳು

1. ದೇವಾಂಗ ಪ್ರಕಾಶ - ಪದ್ಯರೂಪ
2. ದೇವಾಂಗ ಪುರಾಣ - "
3. ದೇವಾಂಗ ಸ್ಮೃತಿ - ಬೊಂಬಾಯಿ ವಿಶ್ವವಿದ್ಯಾಲಯದ ಗ್ರಂಥ ಭಂಡಾರದ "ಸ್ಮೃತಿ ಸಮುಚ್ಚಯ"ದಿಂದ ಪ್ರತಿ ಮಾಡಿದೆ.
4. ದೇವಾಂಗ ಸುಧಾ ಪದ್ಯರೂಪ ಸುರೇಬಾನದ ಮಳ್ಳೂರ ವಿರಚಿತ.
5. ದೇವಾಂಗ ಪ್ರಕಾಶ ವೇದಸಾರ ಸಿದ್ಧಾಂತ ಪ್ರಕಾಶ (ಪೂರ್ತಿ ಇಲ್ಲ)

ದೇವಾಂಗ ಸಂಘದಲ್ಲಿರುವ ಗ್ರಂಥಗಳು

1. ದೇವಲಬ್ರಹ್ಮ ಬೋಧಕ ಸಟೀಕಾ ತಾತ್ಪರ್ಯ ವೇದೋಕ್ತಮೂಲಸ್ತಂಭನಯ॥ ಶಂಕರಯ್ಯ ಮೈಸೂರು - ವಿರಚಿತ - 1898.

2. ದೇವಾಂಗ ಮತ ಪ್ರಕಾಶಿಕೆ 1898
3. ದೇವಾಂಗ ಮೂಲಸ್ತಂಭ - ಎನ್. ಸಿದ್ದಲಿಂಗಪ್ಪ ವಿರಚಿತ

ಸಂಪಾದಕ ಮಂಡಳಿಯುವರು ಈ ಗ್ರಂಥಗಳನ್ನೆಲ್ಲಾ ಪರಿಶೀಲಿಸಿ ತಾ।। 24-3-77ರ ದೇವಾಂಗ ಜಯಂತಿಯ ಪವಿತ್ರದಿನದಂದು ಬೆಂಗಳೂರಿನಲ್ಲಿ ನಮ್ಮ ಕುಲದೇವತೆಯಾದ ಶ್ರೀ ಚೌಡೇಶ್ವರಿ ದೇವಿಯ ಸನ್ನಿಧಿಯಲ್ಲಿ ಪುರಾಣರಚನಾ ಕಾರ್ಯವನ್ನು ಪ್ರಾರಂಭಿಸಿದರು. ನಂತರ ಅದನ್ನು ಹಸ್ತಪ್ರತಿ ಮಾಡಿದ ಮೇಲೆ ಕನ್ನಡದಲ್ಲಿ ಟೈಪು ಮಾಡಿಸಲಾಯಿತು. ಟೈಪುಮಾಡಿದ ಪ್ರತಿಯನ್ನು ಪರಿಷ್ಕರಿಸಿ ಮೂಲಕ್ಕೆ ಲೋಪವಿಲ್ಲದಂತೆ ಅಲ್ಪ ಸ್ವಲ್ಪ ಬದಲಾವಣೆಗಳೊಡನೆ ಮುದ್ರಣಕ್ಕೆ ಕೊಡಲಾಯಿತು. ಈ ಪರಿಶ್ರಮದ ಪ್ರತಿಫಲವೇ ಈ ದೇವಾಂಗ ಪುರಾಣ.

ಈ ಪುರಾಣದಲ್ಲಿ ನಮ್ಮ ಮತಕ್ಕೆ ಸಂಬಂಧಪಟ್ಟಂತೆ ಶ್ರೀ ಚೌಡೇಶ್ವರೀದೇವಿ ಶ್ರೀ ದೇವಲ, ಶ್ರೀ ದೇವಾಂಗರ ಸ್ತೋತ್ರಗಳನ್ನೂ ಮತ್ತು ದೇವಾಂಗ ಮತಸ್ಥರ ಗೋತ್ರ ಗಳನ್ನೂ ಸಂಗ್ರಹಿಸಿಕೊಡಲಾಗಿದೆ. ಮೇಲ್ಕಂಡ ಸ್ತೋತ್ರಗಳನ್ನು ದೇವಾಂಗ ಮತ ಪ್ರಕಾಶಿಕೆ, ದೇವಾಂಗ ಪ್ರಕಾಶ, ಶ್ರೀ ಚೌಡೇಶ್ವರಿ ಸ್ತೋತ್ರರತ್ನಮಾಲಾ, ವಚನ ದೇವಾಂಗ ಪುರಾಣ, ದೇವಾಂಗ ದರ್ಶನ, ದೇವಾಂಗ ಮಹಾಸಮ್ಮೇಳನ ಸಂಸ್ಮರಣ ಸಂಚಿಕೆ, ದೇವಾಂಗ ವೇದೋಕ್ತ ಮೂಲಸ್ತಂಭನಮು (ತೆಲುಗು), ಇವೇ ಮೊದಲಾದ ಗ್ರಂಥಗಳಿಂದ ಆಯ್ದು ಮತಬಾಂಧವರ ಪ್ರಯೋಜನಕ್ಕಾಗಿ ಕೊಡಲಾಗಿದೆ.

ಹಿಂದೆ ತಿಳಿಸಿದ ಗ್ರಂಥಗಳನ್ನು ಅವಲೋಕಿಸಿಯೂ ನಮ್ಮ ಇತರ ಬಂಧುಗಳಲ್ಲಿ ಇರಬಹುದಾದ ನಮ್ಮ ಮತಕ್ಕೆ ಸಂಬಂಧಪಟ್ಟ ಧಾರ್ಮಿಕ ಗ್ರಂಥಗಳನ್ನು ಆಧರಿಸಿಯೂ ಸಂಶೋಧನೆ ನಡೆಸಿ ದೇವಾಂಗ ಧರ್ಮ ಸಾಹಿತ್ಯವನ್ನು ಆಧುನಿಕರೂಪದಲ್ಲಿ ಹೊರತರು ವುದು ಅತ್ಯಂತ ಅವಶ್ಯಕವಾಗಿದೆ. ಈ ಬಗ್ಗೆ ಸಾಹಿತ್ಯ ಸಂಶೋಧಕರು ನಮ್ಮ ಸಂಘದ ಸಹಕಾರ ಸಹಾಯಗಳನ್ನು ಅಪೇಕ್ಷಿಸಿದಲ್ಲಿ ಸಂಘವು ತನ್ನ ಕೈಲಾದಷ್ಟು ನೆರವು ನೀಡಲು ಸಿದ್ಧವಾಗಿದೆ.

ಆದುದರಿಂದ ನಮ್ಮ ಮತಕ್ಕೆ ಸಂಬಂಧಪಟ್ಟಂತೆ ದೊರೆಯಬಹುದಾದ ಸಾಹಿತ್ಯ ವೆಲ್ಲವನ್ನು ಒಂದೆಡೆ ಕೂಡಿಹಾಕುವ ವ್ಯವಸ್ಥೆಯನ್ನು ಮಾಡಬೇಕಾಗಿರುವುದರಿಂದ ದೇಶದ ನಾನಾಭಾಗಗಳಲ್ಲಿರುವ ನಮ್ಮ ಜನಾಂಗದವರು ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ನಮ್ಮ ಧಾರ್ಮಿಕ ಸಾಹಿತ್ಯ ಸೃಷ್ಟಿಯಲ್ಲಿ ಮುಂದುವರಿಯಬೇಕಾಗಿದೆ. ಹೀಗಿರುವಲ್ಲಿ ನಮ್ಮ ಜನಾಂಗದವರಲ್ಲೇ ಆಗಲಿ, ಇತರರಲ್ಲೇ ಆಗಲಿ, ನಮ್ಮ ಧರ್ಮಕ್ಕೆ ಸಂಬಂಧಪಟ್ಟಂತೆ ಇರಬಹುದಾದ ಪುರಾತನ ಓಲೆಗರಿ ಗ್ರಂಥಗಳು,

ಪ್ರತಿಗಳು, ಮುದ್ರಿತ ಗ್ರಂಥಗಳು, ಇವೇ ಮೊದಲಾದ ಗ್ರಂಥಗಳನ್ನು ದೇವಾಂಗ ಸಂಘದ ಗಮನಕ್ಕೆ ತಂದಲ್ಲಿ ಬಹಳ ಮಟ್ಟಿಗೆ ಉಪಕಾರವಾಗುವುದು.

ದೇವಾಂಗ ಧರ್ಮದ ಸಾಹಿತ್ಯದ ಕೊರತೆಯನ್ನು ಈಗ್ಗೆ 80 ವರ್ಷಗಳ ಹಿಂದೆಯೇ ಅಂದರೆ ಕ್ರಿ. ಶ. 1898ರಲ್ಲೇ ಮನಗಂಡು ಮೈಸೂರಿನ ಆರ್ಷೇಯ ಯಜುರ್ವೇದ ಶಂಕರಯ್ಯನವರು (ಶಿವಶಿಂಕರ ರಾಜಯೋಗಿ) "ದೇವಾಂಗ ಮತ ಪ್ರಕಾಶಿಕೆ" ಎಂಬ ಗ್ರಂಥವನ್ನು ನಮ್ಮ ಮತದ ಕುಲಗುರು ಶ್ರೀ ಶ್ರೀ ಮುದ್ದುಸಂಗಮಹಾಮುನಿಗಳು ಪದ್ಯರೂಪದಲ್ಲಿ ಬರೆದಿದ್ದುದನ್ನು ಟೀಕು ಸಹಿತವಾಗಿ ರಚಿಸಿದ ಗ್ರಂಥವೊಂದು ಮತ್ತು ವೇದೋಕ್ತ ಮೂಲಸ್ತಂಭನವೆಂಬ ಸಂಸ್ಕೃತಮೂಲ ಮತ್ತು ಕನ್ನಡ ಅನುವಾದವುಳ್ಳ ಗ್ರಂಥವಿನ್ನೊಂದು, ಈ ಎರಡು ಗ್ರಂಥಗಳನ್ನೂ ಚಿತ್ರಗಳಸಹಿತ ಬಹಳ ಕಷ್ಟಸಾಧ್ಯವಾಗಿ ಅಚ್ಚುಮಾಡಿಸಿ ನಮ್ಮ ಮತದ ಧಾರ್ಮಿಕ ಗ್ರಂಥಗಳ ಕೊರತೆಯನ್ನು ಸ್ವಲ್ಪಮಟ್ಟಿಗೆ ನೀಗಿದ್ದರು. ಈಗನಮಗೆ ದೊರೆತಿರುವ ಕನ್ನಡ ಭಾಷೆಯ ಮುದ್ರಿತ ಗ್ರಂಥಗಳಲ್ಲೆಲ್ಲಾ ಈ ಎರಡು ಗ್ರಂಥಗಳೇ ಹಳೆಯವು. ಇವರಿಗೆ ನಮ್ಮ ಜನಾಂಗದವರು ಎಷ್ಟು ಋಣಿಗಳಾಗಿದ್ದರೂ ತೀರದು. ಇವರ ಗ್ರಂಥಗಳಲ್ಲಿನ ಚಿತ್ರಗಳನ್ನು ನಾವು ನಮ್ಮ ಈಗಿನ ಗ್ರಂಥದಲ್ಲಿ ಧಾರಾಳವಾಗಿ ಉಪಯೋಗಿಸಿ ಅಳವಡಿಸಿದ್ದೇವೆ. ಇದಕ್ಕೆ ಅನುಮತಿ ಕೊಟ್ಟ ಅವರ ಮನೆತನದ ಎಂ. ಶ್ರೀಕಂಠಯ್ಯನವರಿಗೆ ನಾವು ನಮ್ಮ ಅಂತಃಕರಣಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇವೆ. ಇವರಿಗೂ ಇವರ ಮನೆತನದವರೆಲ್ಲರಿಗೂ ನಮ್ಮ ಕುಲ ದೇವಿ ಶ್ರೀರಾಮಲಿಂಗ ಚೌಡೇಶ್ವರಿಯು ಆಯುರಾರೋಗ್ಯ ಐಶ್ವರ್ಯ ಸತ್ಸಂತಾನಾದಿ ಸಮಸ್ತ ಸನ್ಮಂಗಳಗಳನ್ನು ಕರುಣಿಸಲೆಂದು ಮನಃಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ನಮ್ಮ ಮತದ ಸಾಹಿತ್ಯದ ಕೊರತೆಯನ್ನು ಮನಗಂಡ ಮತ್ತೊಬ್ಬ ಸಮಾಜ ಬಂಧುಗಳಾದ ಇಲಕಲ್ಲಿನ ದೇವಾಂಗ ಕುಲಭೂಷಣ ಶ್ರೀ ಶಂಕರಪ್ಪ ಬನಪ್ಪ ಸಕ್ರಿಯವರು ಕ್ರಿ. ಶ. 1923ರಲ್ಲಿ "ದೇವಾಂಗ ಪುರಾಣ" ವನ್ನು ಸಂಸ್ಕೃತ ಮೂಲ ಮತ್ತು ಕನ್ನಡ ಅನುವಾದ ಸಹಿತ ಬರೆಯಿಸಿ ಪ್ರಕಟಪಡಿಸಿದ್ದರು. ನಮ್ಮ ಧರ್ಮಕ್ಕೆ ಸಂಬಂಧಪಟ್ಟಂತೆ ಮುಖ್ಯ ಮೂಲಾಧಾರ ಗ್ರಂಥವೆಂದರೆ ಸದ್ಯಕ್ಕೆ ಇದೊಂದೇ ಎಂದು ಹೇಳಬಹುದು. ಇದೂ ಈಗ ಅಲಭ್ಯವಾಗಿದೆ.

ಈ ಪುರಾಣವನ್ನೇ ಆಧಾರವಾಗಿಟ್ಟುಕೊಂಡು ಈ ಗ್ರಂಥವನ್ನು ಈಗಿನ ರೂಪದಲ್ಲಿ ಹೊರತರಲು ಬಹಳ ಮಟ್ಟಿಗೆ ಕಾರಣರಾದ ಶ್ರೀ ಶಂಕರಪ್ಪ ಸಕ್ರಿಯವರ ತಮ್ಮನವರಾದ ಶ್ರೀ ವಾಸಪ್ಪ ಸಕ್ರಿಯವರ ಸುಪುತ್ರರಾದ ವಯೋವೃದ್ಧರೂ- ಜ್ಞಾನವೃದ್ಧರೂ, ನಮ್ಮ ಸಮಾಜದ ಸುಪ್ರಸಿದ್ಧ ವಾಣಿಜ್ಯೋದ್ಯಮಿಗಳೂ ಕೊಡುಗೈದೊರೆಗಳೂ, ಮಹಾದಾನಿಗಳೂ ಆದ ಶ್ರೀ ವೆಂಕಪ್ಪ ವಾಸಪ್ಪ ಸಕ್ರಿಯವರು ಈ ಗ್ರಂಥವನ್ನು ಪುನರ್ರಚಿಸಲು

ನಮಗೆ ಅನುಮತಿ ಕೊಟ್ಟುದುದಕ್ಕಾಗಿ ಅವರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು. ಅವರು ಇತ್ತೀಚಿಗೆ ಅಸ್ವಸ್ಥರಾಗಿರುವುದರಿಂದ ಅವರು ಶೀಘ್ರವಾಗಿ ಪೂರ್ಣಗುಣಮುಖ ರಾಗಿ ಎಂದಿನಂತೆ ನಮ್ಮ ಸಮಾಜದ ಸೇವಾಕಾರ್ಯಗಳಲ್ಲಿ ತೊಡಗುವಂತಾಗಲೆಂದು ಹಾರೈಸುತ್ತೇವೆ. ಹಾಗೂ ಅವರ ಸದಿಚ್ಛೆಯಾದ ಹಂಪಿ ಹೇಮಕೂಟ ಶ್ರೀ ಗಾಯತ್ರೀ ಪೀಠವಾದ ದೇವಾಂಗ ಜಗದ್ಗುರು ಪೀಠವು ಬಹುಬೇಗ ದೇವಾಂಗ ಜಗದ್ಗುರುಗಳೊಬ್ಬ ರಿಂದ ಅಲಂಕರಿಸಲ್ಪಟ್ಟು ಅವರ ಮನೋವಾಂಛೆಯು ಪೂರ್ಣವಾಗಿ ನೆರವೇರುವಂತೆ ದೇವಾಂಗ ಜಗದ್ಗುರು ಪೀಠದ ಅಧಿಷ್ಠಾತೃ ದೈವ ಶ್ರೀ ಗಾಯತ್ರೀದೇವಿಯೂ, ನಮ್ಮ ಜನಾಂಗದ ಮೂಲ ಪುರುಷರಾದ ದೇವಲ (ದೇವಾಂಗ) ಮಹರ್ಷಿಗಳೂ ಮತ್ತು ನಮ್ಮ ಕುಲದೈವ ಶ್ರೀ ರಾಮಲಿಂಗ ಚೌಡೇಶ್ವರೀ ದೇವಿಯೂ ಅನುಗ್ರಹಿಸಲೆಂದು ಭಕ್ತಿ ಪೂರ್ವಕವಾಗಿ ಪ್ರಾರ್ಥಿಸುತ್ತೇವೆ. ಇವರೂ ಇವರ ಮನೆತನದವರೂ ಮುಂದೆಯೂ ದಾನಧರ್ಮ ಪರೋಪಕಾರ ನಿರತರಾಗಿ ಸಮಾಜ ಸೇವೆಗಾಗಿ ದುಡಿದು ಕೀರ್ತಿವಂತ ರಾಗಲೆಂದು ಹಾರೈಸುತ್ತೇವೆ.

ನಮ್ಮ ಸಮಾಜದ ಇನ್ನೊಬ್ಬ ಮುಂದಾಳುಗಳಾದ ಕುಮೂರಿನ ಕೆ. ಆರ್. ಲಕ್ಷ್ಮಣ್ಣನವರು ಮತಾಭಿಮಾನದಿಂದ ಕೂಡಿದವರಾಗಿ ನಮ್ಮ ಮತದ ಧಾರ್ಮಿಕ ಸಾಹಿತ್ಯದ ಅಭಾವವನ್ನು ನೀಗಿಸಲು ಪ್ರಯತ್ನಪಟ್ಟು ಕ್ರಿ. ಶ. 1932ರಲ್ಲಿ "ವಚನ ದೇವಾಂಗ ಪುರಾಣ" ವೆಂಬ ಗ್ರಂಥವನ್ನು ಪ್ರಕಟಿಸಿ ಹಳೇ ಮೈಸೂರು ಭಾಗದ ನಮ್ಮ ಸಮಾಜ ಬಂಧುಗಳಿಗೆ ಮಹೋಪಕಾರ ಮಾಡಿರುವರು. ಇವರ ಈ ಸಮಾಜ ಸೇವೆ ಯನ್ನು ನಾವು ಎಷ್ಟು ಸ್ಮರಿಸಿದರೂ ಸ್ವಲ್ಪವೇ. ಈ ಗ್ರಂಥವೂ ಈಗ ಅಲಭ್ಯವಾಗಿದೆ. ಇವರ ಗ್ರಂಥವನ್ನೇ ಆಧಾರವಾಗಿಟ್ಟುಕೊಂಡು ಹತ್ತಿಯಬೀಜದ ಮತ್ತು ಹುಂಜದ ವಿಷಯವನ್ನು ನಮ್ಮ ಈ ಪ್ರಸ್ತುತ ಗ್ರಂಥದಲ್ಲಿ ಸೇರಿಸಿದ್ದೇವೆ. ಇವರ ಮನೆತನದವರೆ ಲ್ಲರಿಗೂ ನಾವು ಕೃತಜ್ಞರಾಗಿರುವುದಲ್ಲದೆ ಅವರೆಲ್ಲರಿಗೂ ಸಮಸ್ತ ಸನ್ಮಂಗಳನ್ನುಂಟು ಮಾಡಲೆಂದು ಭಗವತಿ ಶ್ರೀ ರಾಮಲಿಂಗ ಚೌಡೇಶ್ವರೀ ದೇವಿಯನ್ನು ಪ್ರಾರ್ಥಿಸುತ್ತೇವೆ.

ಈ ಪುಸ್ತಕದ ಸ್ತೋತ್ರಗಳ ಭಾಗದಲ್ಲಿ ಪ್ರಕಟವಾಗಿರುವ ಅನೇಕ ಸ್ತೋತ್ರಗಳೇ ಇತ್ಯಾದಿ ಬರೆದು ಕೊಟ್ಟಿರುವ ಮತ್ತು ಒದಗಿಸಿಕೊಟ್ಟಿರುವವರಾದ ಬೆಂಗಳೂರಿನ ದೇವಾಂಗ ಧರ್ಮಪ್ರಸಾರ ಮತ್ತು ಸಂಶೋಧನ ಮಂಡಳಿಯವರಿಗೂ ನಮ್ಮ ಸಮಾಜ ಬಂಧುಗಳೇ ಆದ ದಕ್ಷಿಣ ಭಾರತದ ಚಲನಚಿತ್ರ ಹಾಗೂ ರಂಗಭೂಮಿಯ ನಟರೂ, ಸುಪ್ರಸಿದ್ಧ ಕರ್ನಾಟಕ ಸಂಗೀತ ವಿದ್ವಾಂಸರೂ ಆದ ಗಾನಾಭಿನಯ ಚಂದ್ರ ಗಾನಕಲಾ ಭೂಷಣ ಶ್ರೀ ಸಿ. ಹೊನ್ನಪ್ಪಭಾಗವತರ್‌ರವರಿಗೂ, ಗದುಗಿನ ಬನಶಂಕರೀ ಪಂಚಾಂಗಕರ್ತೃಗಳಾದ ವೇ|| ಬ್ರ|| ಶ್ರೀ ನಾಗಯ್ಯಸ್ವಾಮಿ ದೇವಾಂಗ ಮಠ ಇವರಿಗೂ, ಇಲಕಲ್ಲಿನ ಉದಯೋನ್ಮುಖ ತರುಣ ಬರಹಗಾರರಾದ ಶ್ರೀ

ಗುರುನಾಥ ನಾಗಲೋಟಿಯವರಿಗೂ, ಬೆಂಗಳೂರಿನ ಕರೇಗುಂಡಿ ಶ್ರೀ ಕೆ. ಹೆಚ್. ಚಿಕ್ಕಣ್ಣಪ್ಪನವರು ಮತ್ತು ಇವರ ಸುಪುತ್ರರು ಶ್ರೀ ಸಿ. ಅಣ್ಣಪ್ಪನವರಿಗೂ ದೇವಾಂಗ ದರ್ಶನವನ್ನು ಬರೆಯಿಸಿದ ದಿ|| ಯ|| ಎಣ್ಣೆಗೆರೆ ಆರ್. ವೆಂಕಟರಾಮಯ್ಯನವರ ಸುಪುತ್ರರೆಲ್ಲರಿಗೂ, ಆಂಧ್ರ ಬಂಧುಗಳ ಗೋತ್ರ ಮತ್ತು ಮನೆತನಗಳನ್ನು ಒದಗಿಸಿಕೊಟ್ಟ ಬೆಂಗಳೂರಿನ ಶ್ರೀ ಕೆ. ವಿ. ಶಿವಭದ್ರಯ್ಯನವರಿಗೂ, ಕೊಳ್ಳೇಗಾಲದ ನಿವೃತ್ತ ಉಪಾಧ್ಯಾಯರಾದ ಶ್ರೀ ವಿ. ನಾರಾಯಣ್‌ರವರಿಗೂ ನಮ್ಮ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇವೆ.

ಈ ಗ್ರಂಥವು ಸರ್ವಾಂಗ ಸುಂದರವಾಗಿ ಹೊರಬರಲು ಕಾರಣರಾಗಿ ಸರ್ವವಿಧದಲ್ಲಿಯೂ ನಮ್ಮನ್ನು ಪ್ರೋತ್ಸಾಹಿಸಿ ಉತ್ತೇಜನಕೊಟ್ಟ ಬೆಂಗಳೂರು ದೇವಾಂಗ ಸಂಘದ ಅಧ್ಯಕ್ಷರಾದ ಶ್ರೀ ಡಿ. ಹನುಮಂತಪ್ಪನವರಿಗೂ ಗೌರವ ಕಾರ್ಯದರ್ಶಿಗಳಾದ ಶ್ರೀ ಬಿ. ಎಸ್. ಪುಟ್ಟಣ್ಣಶೆಟ್ಟರಿಗೂ ಮತ್ತು ದೇವಾಂಗ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರೆಲ್ಲರಿಗೂ ನಮ್ಮ ಹೃತ್ಪೂರ್ವಕ ಧನ್ಯವಾದಗಳು.

ಈ ಗ್ರಂಥದ ಸೌಂದರ್ಯಕ್ಕೆ ಕಾರಣರಾಗಿ ನಮಗೆ ಆರು ಚಿತ್ರಗಳನ್ನು ಬರೆದುಕೊಟ್ಟ ನಗರದ ಪ್ರಸಿದ್ಧ ಚಿತ್ರಕಲಾವಿದರಾದ ಶ್ರೀ ಶ್ರೀನಿವಾಸವರ್ಮರವರಿಗೂ, ನಾಲ್ಕು ಚಿತ್ರಗಳನ್ನು ಬರೆದುಕೊಟ್ಟ ಶ್ರೀ ಜಿ. ಕೆ. ಸತ್ಯರವರಿಗೂ ಎರಡು ಚಿತ್ರಗಳನ್ನು ಬರೆದುಕೊಟ್ಟ ಶ್ರೀ ರಾಜಗೋಪಾಲ್‌ರವರಿಗೂ ನಮ್ಮ ಹೃತ್ಪೂರ್ವಕವಾದ ಧನ್ಯವಾದಗಳು.

ಮೇಲ್ಕಂಡ ಚಿತ್ರಗಳ ಎಲ್ಲಾ ಬ್ಲಾಕುಗಳನ್ನು ಕಾಲಕ್ಕೆ ಸರಿಯಾಗಿ ವರ್ಣರಂಜಿತವಾಗಿ ತಯಾರುಮಾಡಿಕೊಟ್ಟು ಅವುಗಳನ್ನು ಕಲಾತ್ಮಕವಾಗಿ ಮುದ್ರಿಸಿಕೊಟ್ಟು ಈ ಗ್ರಂಥಕ್ಕೆ ಮೆರುಗನ್ನುಂಟುಮಾಡಿಕೊಟ್ಟ ಬೆಂಗಳೂರು (ಕೆ. ಎಂ. ನಾಗಣ್ಣ ರಸ್ತೆ) ಕಬ್ಬನ್‌ಪೇಟೆ ಮೆಯ್ನ್‌ರಸ್ತೆಯಲ್ಲಿರುವ ಜನತಾ ಪ್ರೆಸ್ ಮತ್ತು ಶಶಿ ಬ್ಲಾಕ್ ಮೇಕರ್ಸ್‌ನ ಮಾಲೀಕರೂ, ನಮಗೆ ಬ್ಲಾಕುಗಳ ತಯಾರಿಕೆಯಲ್ಲಿ ಅತ್ಯಮೋಘವಾದ ಸಲಹೆ ಸಹಕಾರಗಳನ್ನು ನೀಡಿದವರೂ ಆದ ಶ್ರೀ ವೀರಭದ್ರಪ್ಪನವರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

ಈ ಗ್ರಂಥದ ಪುರಾಣ ಭಾಗವನ್ನು ನಿಧಾನವಾಗಿಯಾದರೂ ಶ್ರಮವಹಿಸಿ ಅಂದವಾಗಿ ಮುದ್ರಿಸಿಕೊಟ್ಟು ದೇವಾಂಗ ಮಹರ್ಷಿಯ ಬ್ಲಾಕನ್ನು ಒದಗಿಸಿಕೊಟ್ಟ ಸುಪ್ರಭಾತ ಪ್ರೆಸ್‌ನ ಮಾಲೀಕರಾದ ಶ್ರೀ ನರಸಿಂಹಪ್ಪನವರಿಗೂ ಮತ್ತು ಈ ಗ್ರಂಥದ ಸ್ತೋತ್ರ ಭಾಗವನ್ನು ಅತ್ಯಲ್ಪ ಕಾಲದಲ್ಲೇ ಸುಂದರವಾಗಿ ಮುದ್ರಿಸಿಕೊಟ್ಟ ಸುರೇಂದ್ರ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ವೈ. ವಿ. ಸುರೇಂದ್ರನಾಥ್‌ರವರು ಮತ್ತು ಶ್ರೀ ವೈ. ವಿ.

ರಂಗಸ್ವಾಮಿಯವರಿಗೂ ಹಾಗೂ ಈ ಪ್ರೆಸ್‌ಗಳ ಕಾರ್ಮಿಕ ವರ್ಗದವರಿಗೂ ನಮ್ಮ ಅಂತಃಕರಣ ಪೂರ್ವಕ ಧನ್ಯವಾದಗಳು.

ಪ್ರಾಜ್ಞರು ಈ ಗ್ರಂಥದಲ್ಲಿ ಇರಬಹುದಾದ ತಪ್ಪುಗಳನ್ನು ದಯವಿಟ್ಟು ತಿಳಿಸಿದಲ್ಲಿ ಮುಂದಿನ ಆವೃತ್ತಿಯಲ್ಲಿ ಸರಿಪಡಿಸಲಾಗುವುದು. ಈ ದಿವ್ಯ ಪವಿತ್ರತಮ ಪುರಾಣವನ್ನು ದೇವಾಂಗ ಬಂಧುಗಳೆಲ್ಲರೂ ಅವಶ್ಯವಾಗಿ ಓದಿ ತಮ್ಮ ಮತದ ಪ್ರಾಚೀನತೆಯನ್ನೂ ಪಾವಿತ್ರ್ಯತೆಯನ್ನೂ ಅರಿತು ಎಚ್ಚೆತ್ತು ವಿಚಾರವಂತರೂ ಆಚಾರವಂತರೂ ದೇಶ ಧರ್ಮಗಳ ಸೇವಾತತ್ಪರರೂ ಆಗುತ್ತಾರೆಂದು ಆಶಿಸಲಾಗಿದೆ.

ಕೊನೆಯದಾಗಿ ಈ ಗ್ರಂಥವು ಈ ರೂಪದಲ್ಲಿ ಹೊರಬರಲು ಕಾರಣರಾದವರೆಲ್ಲರಿಗೂ, ನಮಗೆ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಸಹಕಾರ ನೀಡಿ ನಮ್ಮ ಸಮಾಜ ಬಂಧುಗಳ ಕೃತಜ್ಞತೆಗೆ ಪಾತ್ರರಾಗಿರುವವರೆಲ್ಲರಿಗೂ ನಮ್ಮ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಸಂಪಾದಕ ಮಂಡಳಿ ಪರವಾಗಿ
ವೈ. ವಿ. ತಿಮ್ಮಯ್ಯ (ವೈ. ಹೆಚ್. ಅ... ಜಿ)
ಉಪಾಧ್ಯಕ್ಷ, ದೇವಾಂಗ ಸಂಘ, ಬೆಂಗಳೂರು

ಚಿರಮಭಿವರ್ಧತಾಂ ದೇವಾಂಗ ಸತ್ಸಂತಾನ ಶ್ರೀಃ

ಓಂ ದ್ಯೌಃ ಶಾಂತಿರಂತರಿಕ್ಷಂ ಶಾಂತಿಃ ।
ಪೃಥಿವೀ ಶಾಂತಿರಾಪಃ ಶಾಂತಿ ರೋಷಧಯಃ ಶಾಂತಿಃ ॥
ವನಸ್ಪತಯಃ ಶಾಂತಿಃ ವಿಶ್ವೇದೇವಾಃ ಶಾಂತಿಃ ಬ್ರಹ್ಮ ಶಾಂತಿಃ ।
ಸರ್ವಂ ಶಾಂತಿಃ ಶಾಂತಿರೇವ ಶಾಂತಿಃ ಸಾಮಾ ಶಾಂತಿರೇಧಿ ॥

ಓಂ ಶಾಂತಿಃ ಶಾಂತಿಃ ಶಾಂತಿಃ

ಹರಿಃ ಓಂ ತತ್ಸತ್

ವಿಷಯಾನುಕ್ರಮಣಿಕೆ

ಪುಟ ಸಂಖ್ಯೆ

ದೇವಾಂಗ ಪುರಾಣ ಪ್ರಾರಂಭ

ಅಧ್ಯಾಯ

ವಿ. ಸೂ. - ಚಿತ್ರಗಳ ಶೀರ್ಷಿಕೆಗಳನ್ನು ಮುದ್ರಿಸಿರುವುದರಲ್ಲಿ ತಪ್ಪುಗಳಿದ್ದರೂ ಆ ಶೀರ್ಷಿಕೆಗಳನ್ನು ಮೂಲಚಿತ್ರಗಳಲ್ಲಿರುವಂತೆಯೇ ಅಕ್ಷರಶಃ ಹಾಗೆಯೇ ಮುದ್ರಿಸಿದೆ. ಇದನ್ನು ದಯವಿಟ್ಟು ಗಮನಿಸಬೇಕಾಗಿ ಕೋರಿಕೆ.


GAYATHRI PEETA MAHA SAMSTHANA

ಓಂ

ಶ್ರೀ ಗುರವೇ ನಮಃ

ಶ್ರೀರಸ್ತು

ದೇವಾಂಗ ಪುರಾಣ

ದೇವಾಂಗ ಮನುಬ್ರಹ್ಮ ಪ್ರತಿಪಾದಕ ವೇದೋಕ್ತ

ಮೂಲ ಸ್ತಂಭನ ಪ್ರಾರಂಭ

ಸೃಷ್ಟಿಪೂರ್ವದಲ್ಲಿ ಸೂತ್ರ ವಸ್ತ್ರ ನಿರ್ಮಾಣ

ಷಣ್ಮುಖನು ಪರಮ ಮಂಗಳ ಸ್ವರೂಪಿಯಾದ ಪರಮೇಶ್ವರನಿಗೆ ನಮಸ್ಕರಿಸಿ, ಪ್ರಭೋ, ಸದಾಶಿವಮೂರ್ತಿಯೇ ವೇದವನ್ನು ಮೂಲವಾಗುಳ್ಳ ದೇವಲ (ದೇವಾಂಗ) ಮತದ ಮಹಾತ್ಮ್ಯವನ್ನು ನನಗೆ ತಿಳಿಸೆಂದು ಪ್ರಾರ್ಥಿಸಿದನು. ಅದಕ್ಕೆ ಈಶ್ವರನು ಕುಮಾರಾ, ಬ್ರಹ್ಮಾದಿ ದೇವತೆಗಳಿಗೂ ಪೂಜನೀಯವಾದ ತಿಳಿಯಲಸಾಧ್ಯವಾದ ದೇವಲ ಮತ ತತ್ವವನ್ನು ನೀನು ಕೇಳಿದವನಾದೆ; ವೇದದಲ್ಲಿರುವ ವಿಚಾರಗಳನ್ನು ಸಂಗ್ರಹಿಸಿ, ಸಮಸ್ತ ಬ್ರಹ್ಮರ್ಷಿ ಮತ್ತು ದೇವರ್ಷಿಗಳ ಮಾನಸಾನಂದಕ್ಕಾಗಿ ಷಣ್ಮುಖ ಈಶ್ವರ ಸಂವಾದ ರೂಪವಾದ ವೇದೋಕ್ತ ಮೂಲಸ್ತಂಭನವು ಕೃತಾದಿ ಮೂರು ಯುಗಗಳಲ್ಲಿಯೂ ವ್ಯವಹಾರ ಯೋಗ್ಯವಾದ ಗ್ರಂಥವಾಗಿ ಅನುಸರಿಸಲ್ಪಡಲಿ. ಮುಂಬರುವ ಕಲಿಯುಗದಲ್ಲಿ ವ್ಯಾಸ ರಚಿತವಾದ ಬ್ರಹ್ಮಾಂಡ ಪುರಾಣದಲ್ಲಿ ಅಡಕವಾಗಿರುವ 'ದೇವಾಂಗ' ಪುರಾಣವನ್ನು ಪ್ರಕಟಿಸುವೆನು ಕೇಳು.

ಸ್ವಯಂಭು ಮನುವಿನಿಂದ ಜ್ಯೋತಿಯೂ, ಆ ಜ್ಯೋತಿಯಿಂದ ಶಕ್ತಿಯೂ, ಆ ಶಕ್ತಿಯಿಂದ ಬ್ರಹ್ಮ ವಿಷ್ಣು ಮಹೇಶ್ವರರೂ ಜನಿಸಿದರು. ಅವರೇ ಸೃಷ್ಟಿ, ಸ್ಥಿತಿ ಲಯಗಳಿಗೆ ಕಾರಣರು. ಅವರ ವಿವಾಹ ಕಾಲದಲ್ಲಿ ಸಮಸ್ತ ದೇವತೆಗಳೂ ಸೂತ್ರ ವಸ್ತ್ರ ವಿಹೀನರಾಗಿ ಬಂದು ನನ್ನನ್ನು ನೋಡಿ ಬಹಳ ನಾಚಿಕೆಗೊಂಡು ತಮಗೆ ಸೂತ್ರ ವಸ್ತ್ರ ನಿರ್ಮಾಪಕನ ಅಗತ್ಯವಾಗಿದೆ ಎಂದು ಕೋರಿದರು. ಆಗ ನಾನು ಅಲ್ಲಿದ್ದವರೆಲ್ಲರನ್ನೂ ನೋಡಿ ಸಮಸ್ತ ಪ್ರಪಂಚದುತ್ಪತ್ತಿಗೆ ಕಾರಣನಾದ ಬ್ರಹ್ಮನು ಸೃಷ್ಟಿಕರ್ತನಾದರೂ ಬ್ರಾಹ್ಮಣ್ಯವನ್ನುಂಟು ಮಾಡುವ ಯಜ್ಞೋಪವೀತ ಮತ್ತು ವಸ್ತ್ರಗಳನ್ನು ನಿರ್ಮಿಸಲು ಅಶಕ್ತನಾಗಿದ್ದನು. ಸೃಷ್ಟಿ ಕಾಲದಲ್ಲಿ ಸೂತ್ರ ವಸ್ತ್ರಗಳ ಆವಶ್ಯಕತೆ ಕಂಡು ಬರದೆ ಇದ್ದುದರಿಂದಲೂ ಆ ಸಮಯದಲ್ಲಿ ಸೂತ್ರ ವಸ್ತ್ರಗಳ ನಿರ್ಮಾಣ ಸಾಮಗ್ರಿ

ಇಲ್ಲದಿದ್ದುದರಿಂದಲೂ ಸೃಷ್ಟಿಪೂರ್ವದಲ್ಲಿ ಸೂತ್ರ ಕರ್ತೃ ದೇವಲನು ಸ್ವಯಂ ಈಶ್ವರನಾದ ನನ್ನಲ್ಲೇ ನೆಲೆಸಿದ್ದುದರಿಂದಲೂ, ನೀನೇ ಸೂತ್ರವಸ್ತ್ರ ಕರ್ತೃವನ್ನು ನಿರ್ಮಿಸಿಕೊಡೆಂದು ನನ್ನಲ್ಲಿ ಬಿನ್ನವಿಸಿದರು. ಆಗ ನಾನು ನನ್ನ ದೇಹಾಂತರ್ಗತ ದೇವಲ ಜ್ಯೋತಿಯನ್ನು ಯೋಗದಿಂದ ಪ್ರಕಾಶಪಡಿಸಿ ಆ ದೇವಲ ಜ್ಯೋತಿಯನ್ನು ಉದ್ದೇಶಿಸಿ ನೀನು ತ್ರಿಮೂರ್ತಿಗಳ ವಿವಾಹ ಸಮಯಕ್ಕೆ ಸರಿಯಾಗಿ ಶೀಘ್ರವಾಗಿ ಸೂತ್ರವಸ್ತ್ರಗಳನ್ನು ನಿರ್ಮಿಸಿ ಬ್ರಹ್ಮಾದಿ ದೇವತೆಗಳಿಗೆ ನೀಡೆಂದು ಅಪ್ಪಣೆ ಕೊಟ್ಟೆನು. ನಂತರ ಆ ಜ್ಯೋತಿರ್ಮಯನಾದ ದೇವಲನು ನನ್ನಾಜ್ಞೆಯಿಂದ ಸ್ಫೂರ್ತಿಗೊಂಡು ಸೃಷ್ಟಿಸ್ಥಿತಿಲಯ ಕರ್ತೃಗಳಾದ ಬ್ರಹ್ಮ ವಿಷ್ಣು ಮಹೇಶ್ವರರ ವಿವಾಹ ಸಮಯದಲ್ಲಿ ಮಂತ್ರ ಪೂರ್ವಕವಾಗಿ ಬ್ರಹ್ಮಾದಿ ದೇವತೆಗಳಿಗೆ ಸೂತ್ರ ವಸ್ತ್ರಗಳನ್ನಿತ್ತು ಮತ್ತೆ ನನ್ನಲ್ಲಿ ಐಕ್ಯಗೊಂಡನು.

ಕೃತಯುಗದಲ್ಲಿ ಸೂತ್ರ ವಸ್ತ್ರ ನಿರ್ಮಾಣ

ಸಕಲ ಜಗತ್ಕರ್ತೃವಾದ ದೇವಾಂಗ ಬ್ರಹ್ಮನೇ ದೇವ, ಮಾನವ, ರಾಕ್ಷಸ, ಯಕ್ಷ, ಪಿಶಾಚಾದಿಗಳಿಗೂ, ಭೂತ, ಭೇತಾಳ, ಅಪಸ್ಮಾರಗ್ರಹಾದಿಗಳಿಗೂ ಸೂತ್ರಪ್ರದಾನಿಯೆಂಬುದಕ್ಕೆ ಈಶ್ವರನು ಉಪನಿಷದ್ವಾಕ್ಯ ವಿಚಾರ ಮಹಿಮೆಗಳಿಂದ ಉದಾಹರಣ ಪೂರ್ವಕವಾಗಿ ಉದ್ಧರಿಸುತ್ತ, ಆ ದೇವಾಂಗನೇ ಜಗದೊಡೆಯನು, ವಿಶ್ವವನ್ನು ಸೃಷ್ಟಿಸಿದವನು, ಬ್ರಹ್ಮನು, ವಿರಾಟಪುರುಷನು ಎಂಬುದಾಗಿ ಮಹೋಪನಿಷತ್ತಿನಲ್ಲಿ ಪ್ರತಿಪಾದಿಸಿದೆ. ಸರ್ವವ್ಯಾಪಕನಾದ ದೇವಾಂಗನೇ ಈ ಜಗತ್ತೆಲ್ಲವನ್ನು ನಿರ್ಮಿಸಿರುವನೆಂದು ನಿರಾಲಂಬೋಪನಿಷತ್ ಪ್ರತಿಪಾದಿಸಿದೆ. ಆ ದೇವಾಂಗನೇ ಮನುವೆಂದೂ ಸೂತ್ರಧಾರಿಯೆಂದೂ ನಿರ್ಮಲಬ್ರಹ್ಮನೆಂದೂ ಜಾಬಾಲೋಪನಿಷತ್ತಿನಲ್ಲಿದೆ. ಆದುದರಿಂದ ತತ್ವಮಸ್ಯಾದಿ ಮಹಾವಾಕ್ಯ ವಿಷಯನಾದುದರಿಂದ ಆ ದೇವಾಂಗನೇ ಜಗತ್ಕರ್ತೃವಲ್ಲದೆ ಮತ್ತಾರೂ ಅಲ್ಲ. ಹೇಗೆಂದರೆ ಈ ಜಗತ್ತೆಲ್ಲವನ್ನು ನಿರ್ಮಿಸಿ ಅದರಿಂದ ಒಳಗೂ ಹೊರಗೂ ವ್ಯಾಪಿಸಿರುವನೆಂದು ವೇದದಲ್ಲಿ ಹೇಳಿರುವುದರಿಂದ ಆ ದೇವಲನೇ ಬ್ರಹ್ಮಾದ್ಯನೇಕ ರೂಪಗಳಿಂದ ತೋರುವನು. ಆ ಪರಬ್ರಹ್ಮ ದೇವಲನಲ್ಲಿ (ದೇವಾಂಗನಲ್ಲಿ) ಚಿಚ್ಛಕ್ತಿ ಸ್ವರೂಪಿಣಿಯಾದ ಚೌಡೇಶ್ವರಿಯು ಆವಿರ್ಭೂತಳಾದಳು. ಆ ಚೌಡೇಶ್ವರಿಯೇ ದೇವಾಂಗ ಕುಲಕ್ಕೆ ಅಧಿದೇವತೆಯಾಗಿ, ಆ ದೇವಾಂಗನ ಮಗಳಾಗಿ ಆದರಿಸಲ್ಪಟ್ಟು, ಸಮಸ್ತ ದೇವತೆಗಳಿಂದಲೂ ಉಪಾಸಿತಳಾದಳೆಂದು ಮುಂಡುಕೋಪನಿಷತ್ತಿನಲ್ಲಿದೆ. ಆದುದರಿಂದ ವಸ್ತ್ರ ವಿಹೀನರಾದ ಸಮಸ್ತ ದೇವತೆಗಳೂ ದೇವಾಂಗನೇ ಈಶ್ವರನೆಂದು ತಿಳಿದು, ಲಜ್ಜೆಗೊಂಡು ದೈನ್ಯದಿಂದ ಬರಲು ಈಶ್ವರನಾದ ಆ ದೇವಾಂಗನು ಅವರನ್ನು ನೋಡಿ, ಬಂದ ಕಾರಣವನ್ನು ತಿಳಿದು ತನ್ನಲ್ಲಿರುವ ಚಿಜ್ಜ್ಯೋತಿಯನ್ನು ಪ್ರಕಟಗೊಳಿಸಿ ನೀನು ಶೀಘ್ರವಾಗಿ ಯಜ್ಞೋಪವೀತಾದಿಗಳನ್ನು ನಿರ್ಮಿಸಿ ಬ್ರಹ್ಮಾದಿ ದೇವತೆಗಳಿಗೆ ನೀಡೆಂದು ಆಜ್ಞಾಪಿಸಿದನು.

ಆಗ ಆ ಚಿಚ್ಛಕ್ತಿಯು ಸಾಕಾರಳಾಗಿ ಕೃತಯುಗದಲ್ಲಿ ಬ್ರಹ್ಮಾದಿ ದೇವತೆಗಳಿಗೆ ಯಜ್ಞೋಪವೀತ ವಸ್ತ್ರಾದಿಗಳನ್ನು ಕೊಡುವಳು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ವರ್ಣದವರಿಗೆ ಯಜ್ಞೋಪವೀತವೇ ಪರಮಶ್ರೇಷ್ಠ ಸಾಧನವೆಂಬುದಾಗಿ ವೇದವಾಕ್ಯ ವಿರುವುದರಿಂದ ಈ ತ್ರಿವರ್ಣದವರಿಗೆ ಯಜ್ಞೋಪವೀತ ವಸ್ತ್ರಾದಿಗಳನ್ನು ಕೊಡುವಳು. ದ್ವಿಜ (ಉಪನಯನ) ಸಂಸ್ಕಾರವಿಲ್ಲದವರಿಗೆ ವಸ್ತ್ರವೊಂದನ್ನೇ ಕೊಡುವಳು. ಯಜ್ಞಾದಿ ಕರ್ಮಗಳನ್ನು ಆಚರಿಸಲು ಯಜ್ಞೋಪವೀತಧಾರಣೆಯು ಅತ್ಯವಶ್ಯಕವಾದುದು. ಆ ತ್ರಿಗುಣಸ್ವರೂಪಿ ಯಜ್ಞೋಪವೀತವನ್ನು ಮತ್ತು ವಸ್ತ್ರವನ್ನು ದೇವಾಂಗನು ಮೊದಲು ಬ್ರಾಹ್ಮಣರಿಗೆ ಕೊಟ್ಟನು. ಆ ಬ್ರಾಹ್ಮಣರು ಅವುಗಳೆರಡನ್ನೂ ಕ್ಷತ್ರಿಯರಿಗೂ, ವೈಶ್ಯರಿಗೂ ಕೊಟ್ಟು ಶೂದ್ರರಿಗೆ (ಇತರರಿಗೆ) ವಸ್ತ್ರ ಮಾತ್ರ ಕೊಟ್ಟರು. ಶೂದ್ರರು ವೇದೋಕ್ತ ಕರ್ಮವನ್ನಾಚರಿಸಲು ಅನಧಿಕಾರಿಗಳಾದುದರಿಂದ ಅವರು ಯಜ್ಞೋಪವೀತ ವನ್ನು ಪಡೆಯಲಿಲ್ಲ. ಆದುದರಿಂದ ದೇವಾಂಗನು ಬ್ರಾಹ್ಮಣರಿಗಿಂತಲೂ ಅಧಿಕನೆಂದು ತಿಳಿ. ಆ ಚಿಚ್ಛಕ್ತಿಯು ತೇಜೋರೂಪವಾದ ತ್ರಿಗುಣಾತ್ಮಕವಾದ ಗಾಯತ್ರೀಯೆಂದೂ ವ್ಯವಹರಿಸಲ್ಪಡುವುದೆಂದು ಕಠೋಪನಿಷದ್ವಾಕ್ಯವಿರುವುದು. ಈಶ್ವರನು ಸ್ವಸ್ವರೂಪ ವುಳ್ಳವನಾಗಿ ತನ್ನ ಐದನೇ ಮುಖದಲ್ಲಿ ಜನಿಸಿದ ವಿಶ್ವಕರ್ಮನಿಗೆ ಜಗತ್ತಿನ ಅಳತೆಯನ್ನು ತಿಳಿಯಲು ಯಾವ ಸಾಧನವೂ ಇಲ್ಲದಿರುವುದನ್ನು ಕಂಡು ಸೂತ್ರವನ್ನು ದೇವಾಂಗ ನಿಂದಲೇ ಅನುಗ್ರಹಿಸಿದನು.

ಆ ಸೂತ್ರದಿಂದ ವಿಶ್ವಕರ್ಮನು ಜಗತ್ತಿನ ಅಳತೆಯನ್ನು ತಿಳಿದುಕೊಂಡು ಅದನ್ನು (ಸೂತ್ರವನ್ನು) ರಹಸ್ಯ ಸ್ಥಳದಲ್ಲಿ ಮುಚ್ಚಿಟ್ಟನು. ನಂತರ ತಾನೂ ಸೂತ್ರ ಧರಿಸಿ ಬ್ರಾಹ್ಮಣನಾಗಬೇಕೆಂದು ಯೋಚಿಸಿ ಮುಚ್ಚಿಟ್ಟಿದ್ದ ಸೂತ್ರವನ್ನೇ ಮಂತ್ರೋಚ್ಚಾರಣೆ ಇಲ್ಲದೆ (ಅಮಂತ್ರಕವಾಗಿ) ಯಜ್ಞೋಪವೀತವಾಗಿ ಧರಿಸಲು ಆ ಸೂತ್ರಗಳೆಲ್ಲಾ ಸುಟ್ಟು ಸುಟ್ಟು ಹೋದವು. ಅದನ್ನು ಕಂಡು ಅತ್ಯಂತ ಭಯಗೊಂಡು ಅವನು ಈಶ್ವರನನ್ನು ಉಪಾಸನೆ ಮಾಡಿದನು. ಆನಂತರ ಈಶ್ವರಾನುಗ್ರಹದಿಂದ ವಿಶ್ವಕರ್ಮನು ಮತ್ತೆ ದೇವಾಂಗನಿಂದ ಮಂತ್ರೋಪದೇಶ ಪೂರ್ವಕವಾಗಿ ಸೂತ್ರಗಳನ್ನು (ಯಜ್ಞೋಪವೀತ ವನ್ನು) ಪಡೆದು ಧರಿಸಿದನು.

ಹೀಗೆಯೇ ಅಮಂತ್ರಕವಾಗಿ ಯಜ್ಞೋಪವೀತವನ್ನು ಧರಿಸಿ ದಗ್ಧಯಜ್ಞೋಪ ವೀತರಾದ ಮನ್ವಾದಿಗಳನ್ನು ದೇವಾಂಗನು ನೋಡಿ ಅತಿ ಕರುಣದಿಂದ ಗಾಯತ್ರೀ ಮಂತ್ರೋಪದೇಶ ಪೂರ್ವಕವಾಗಿ ಅವರೆಲ್ಲರಿಗೂ ಯಜ್ಞೋಪವೀತ ಧಾರಣೆ ಮಾಡಿಸಿ ದನು. ಆದುದರಿಂದ ಯಾರೂ ಮಂತ್ರೋಪದೇಶವಿಲ್ಲದೆ (ಅಮಂತ್ರಕವಾಗಿ) ಯಜ್ಞೋ ಪವೀತ ಧಾರಣೆ ಮಾಡಬಾರದು. ಇದು ಅಯುಕ್ತವು.

ಓಂ ಭೂರ್ಭುವಸ್ಸುವಃ ತತ್ಸ ವಿತುರುರ್ವರೇಣ್ಯಂ,
ಭರ್ಗೋದೇವಸ್ಯ ಧೀಮಹಿ ಧಿಯೋಯೋನಃ ಪ್ರಚೋದಯಾತ್.

ಅನ್ವಯಾರ್ಥ :—ಬ್ರಹ್ಮಚೈತನ್ಯ ಪ್ರಾಣಸ್ವರೂಪ ದುಃಖನಾಶಕ ಸುಖಸ್ವರೂಪ, ಯಾವಾತನು ನಮ್ಮ ಬುದ್ಧಿಯನ್ನು ವಿಶೇಷವಾಗಿ ಪ್ರೇರಣೆಮಾಡುವನೋ ಆ ಶ್ರೇಷ್ಠವಾದ ಪಾಪನಾಶಕ ಪ್ರಕಾಶ ತೇಜಸ್ವಿ ದಿವ್ಯಬ್ರಹ್ಮವನ್ನು ಧ್ಯಾನಮಾಡೋಣ (ಧರಿಸೋಣ).

ಗೂಢಾರ್ಥ :—ಯಾರು ಉತ್ಪತ್ತಿ ಸ್ಥಿತಿ ಪ್ರಳಯಕರ್ತನೋ! ಜಗತ್ತಿಗೆ ಪ್ರಾಣಸ್ವರೂಪ ಸರ್ವಾಧಾರನೋ! ಸಮಸ್ತ ಪಾಪಗಳನ್ನು ದೂರಮಾಡುವಂತಹ ಪರಮಾತ್ಮನೋ! ಸಮಸ್ತವಾದ ವಿವಿಧ ಜಗತ್ತಿನಲ್ಲೆಲ್ಲಾ ವ್ಯಾಪಿಸಿಕೊಂಡಿರುವ ಸರ್ವವ್ಯಾಪಿಯೋ! ಯಾವಾತನು ನಮ್ಮ ಬುದ್ಧಿಯನ್ನು ವಿಶೇಷವಾಗಿ ಪ್ರೇರಣೆಮಾಡುವನೋ, ಸಮಸ್ತವಾದ ಜಗತ್ತನ್ನು ಸೃಷ್ಟಿಸುವನೋ, ದೇದೀಪ್ಯಮಾನನಾದ ತೇಜೋಮಯನಾದ ಈಶ್ವರನ, ವರಿಸಲು (ಸ್ವೀಕರಿಸಲು) ಅರ್ಹವಾದ, ಉಪಾಸಿಸಲು ಶ್ರೇಷ್ಠವಾದ, ಪರಮೇಶ್ವರ ಪ್ರಕಾಶರೂಪವಾದ ತೇಜಸ್ಸನ್ನು ನಾವು ಧರಿಸಿ ಧ್ಯಾನಮಾಡೋಣ.

ಭಾವಾರ್ಥ :—ಹೇ ಪರಮೇಶ್ವರನೇ! ನೀನು ಸರ್ವಾಧಾರನೂ, ಸರ್ವ ದುಃಖ ನಿವಾರಕನೂ ಆಗಿರುತ್ತೀಯೆ! ಅಂತಹ ಜಗದುತ್ಪಾದಕನಾದ ಮತ್ತು ಸರ್ವಾಶ್ರಯನಾದ ನಿನ್ನ ಉತ್ತಮೋತ್ತಮವಾದ ಬ್ರಹ್ಮಸ್ವರೂಪವನ್ನು ನಾವು ಧ್ಯಾನಿಸುತ್ತೇವೆ, ಸಚ್ಚಿದಾನಂದಸ್ವರೂಪಿಯಾದ ಹೇ ಪರಮಾತ್ಮಾ ನಮ್ಮೆಲ್ಲರ ಬುದ್ಧಿಗಳನ್ನು ಪ್ರೇರೇಪಿಸಿ ಶ್ರೇಷ್ಠಾಚಾರದ ಸತ್ಯಮಾರ್ಗದಲ್ಲಿ ನಮ್ಮನ್ನು ನಡೆಸು.

(ಸೂರ್ಯಮಂಡಲಾಂತರ್ಗತವಾದ ಪರಬ್ರಹ್ಮ ತೇಜಶ್ಶಕ್ತಿಯು ಈ ಏಳು ಲೋಕಗಳನ್ನೂ ವ್ಯಾಪಿಸಿ, ಅವುಗಳ ಚೈತನ್ಯಕ್ಕೆ ಕಾರಣವಾಗಿರುವುದು. ಇಂತಹ ಪರಮಾತ್ಮಶಕ್ತಿಯು ತನ್ನ ಪ್ರಭಾವಂತವಾದ ಶಕ್ತಿಯಿಂದ ನಮ್ಮ ಬುದ್ಧಿಶಕ್ತಿಗಳನ್ನು ಪ್ರೇರೇಪಿಸಿ ನಮ್ಮನ್ನು ಕಾರ್ಯೋನ್ಮುಖರನ್ನಾಗಿ ಮಾಡಲಿ.)

ಓಂಕಾರವೇ ರುದ್ರ ಬ್ರಹ್ಮಸ್ವರೂಪಿಯು, ಅದೇ ಸರ್ವಭೂತಾಂತರಾತ್ಮ, ಅದೇ ಸಮಸ್ತಪಾಪನಾಶಕ. ಅದೇ ಅಕ್ಷರ ಬ್ರಹ್ಮ. ಅದೇ ಯಜ್ಞೋಪವೀತವೆಂದು ತಿಳಿದು ಯಜ್ಞೋಪವೀತವನ್ನು ಧರಿಸತಕ್ಕದ್ದು. ಅದು ಪರಬ್ರಹ್ಮ ಸಾಧನವಾದುದರಿಂದಲೇ ಯಜ್ಞೋಪವೀತಕ್ಕೆ 'ಬ್ರಹ್ಮಸೂತ್ರ'ವೆಂದು ಹೆಸರು. ಇದು ಸಮಸ್ತ ಸೂತ್ರಗಳಿಗೂ ಮೂಲಾಧಾರವೆಂದು ಯಾರಿಂದ ತಿಳಿಯಲ್ಪಡುವುದೋ ಆತನೇ ಸಮಸ್ತವೇದಗಳನ್ನು ತಿಳಿದ ವಿಪ್ರನು.

(ಈ ರೀತಿ ತಿಳಿದು ಯಜ್ಞೋಪವೀತನನ್ನು ಮಂತ್ರ ಪೂರ್ವಕವಾಗಿ ಬ್ರಹ್ಮ ಜ್ಞಾನಿಯು ಧರಿಸತಕ್ಕದ್ದು.)

ಆ ದೇವಲನೇ ಬ್ರಹ್ಮಚಾರಿಯೂ ನಿಷ್ಕಳಂಕನೂ, ನಿತ್ಯನೂ, ನಿರ್ಮಲನೂ, ನಿರ್ವಿಕಲ್ಪನೂ, ಸಚ್ಚಿದಾನಂದ ಸ್ವರೂಪನೂ, ಮಾಯಾರಹಿತನೂ, ಅತರ್ಕನೂ, ಮತ್ತು ಅಭೋಕ್ತನೂ ಆಗಿರುವನು. ಆ ದೇವಾಂಗನೇ ಸಗುಣನು, ಸವಿಕಲ್ಪನೂ ಸೂತ್ರಾತ್ಮನೂ, ತ್ರಿಮೂರ್ತಿ ಸ್ವರೂಪನೂ ಆಗಿರುವನು. 'ಓಂ ಇತ್ಯೇಕಾಕ್ಷರಂ ಬ್ರಹ್ಮ,' 'ಪ್ರಜ್ಞಾನಂ ಬ್ರಹ್ಮ,' 'ಅಹಂ ಬ್ರಹ್ಮಾಸ್ಮಿ,' 'ತತ್ವಮಸಿ' ಮತ್ತು 'ಅಯಮಾತ್ಮಾ ಬ್ರಹ್ಮ' ಎಂಬ ಮಹಾವಾಕ್ಯಗಳ ಲಕ್ಷ್ಯಾರ್ಥವು ದೇವಲನೇ ಅಂದರೆ ದೇವಾಂಗನೇ ಆಗಿರುವನು.

ಇಲ್ಲಿಗೆ ವೇದೋಕ್ತ ಮೂಲಸ್ತಂಭನ ಗ್ರಂಥದಲ್ಲಿನ ಕೃತಯುಗದಲ್ಲಿ ದೇವಾಂಗ ಮತ ಪ್ರಾಶಸ್ತ್ಯವು ಸಮಾಪ್ತವಾದುದು.

ಓಂ ಕೃಷ್ಣಾರ್ಪಣಮಸ್ತು.

ತ್ರೇತಾಯುಗದಲ್ಲಿ ಸೂತ್ರ ವಸ್ತ್ರ ನಿರ್ಮಾಣ

ತ್ರೇತಾಯುಗದಲ್ಲಿ ವಸ್ತ್ರಸೂತ್ರಗಳಿಲ್ಲದವರಾಗಿ ದೇವತೆಗಳು ಲಜ್ಜೆಯಿಂದ, ಮಾನಸಂರಕ್ಷಣೆಗಾಗಿ ಶಿವನನ್ನು ಕಂಡು ಪ್ರಾರ್ಥಿಸಿದರು. ಶಿವನು ಅವರ ಪ್ರಾರ್ಥನೆಯಿಂದ ಸುಪ್ರಸನ್ನನಾಗಿ ಸ್ವಾಯಂಭುವ ಮನುರೂಪಿ ದೇವಲನನ್ನು ಧ್ಯಾನಿಸಿದನು. ಆಗ ದೇವಲನು ಶಿವನ ಶಿರದಲ್ಲಿರುವ ಸಹಸ್ರಾರ ಕಮಲ ಮಧ್ಯದಿಂದ ಬ್ರಹ್ಮರಂಧ್ರದ ಮೂಲಕವಾಗಿ ಪ್ರಕಟವಾಗಿ, ಬ್ರಹ್ಮ ವಿಷ್ಣು ಮಹೇಶ್ವರಾದಿ ಸಮಸ್ತ ದೇವತೆಗಳಿಗೆ ಸೂತ್ರವಸ್ತ್ರಗಳನ್ನು ನೀಡಿದನು. ಆಮೇಲೆ ಕಾಂಡನೆಂಬ ಋಷಿಯು ಬಂದು ನನಗೂ ಸೂತ್ರವಸ್ತ್ರಗಳನ್ನು ಅನುಗ್ರಹಿಸೆಂದು ದೇವಾಂಗನನ್ನು ಪ್ರಾರ್ಥಿಸಿದನು. ಆಗ ದೇವಾಂಗ ಬ್ರಹ್ಮನು ಈಗ ಸೂತ್ರ, ವಸ್ತ್ರಗಳಿಲ್ಲದಿರುವುದರಿಂದ ನಾಳೆ ಕೊಡುವೆನೆಂದು ಹೇಳಿದನು. ಅದಕ್ಕೆ ಕಾಂಡ ಋಷಿಯು ಕ್ರೋಧಗೊಂಡು ಸಮಸ್ತ ದೇವತೆಗಳಿಗೆ ಸೂತ್ರವಸ್ತ್ರಗಳನ್ನು ಕೊಟ್ಟು ನನಗೆ ಮಾತ್ರ ಇಲ್ಲವೆನ್ನುವೆಯಾದುದರಿಂದ ನೀನು ಕೀಟನಾಗೆಂದು ಶಾಪ ಕೊಟ್ಟನು. ಆಗ ದೇವಾಂಗ ಬ್ರಹ್ಮನು ಶಾಪಕೊಟ್ಟ ಆ ಕಾಂಡ ಋಷಿಯನ್ನು ಉದ್ದೇಶಿಸಿ, ನೀನು ನಾಳೆ ನನ್ನಲ್ಲಿಗೆ ಬಂದು ಸೂತ್ರವಸ್ತ್ರಗಳನ್ನು ಪಡೆ ಎಂದು ಹೇಳಿದರೂ ಕೂಡ ನೀನು ಆತುರಪಟ್ಟು ಶಾಪವನ್ನು ಕೊಟ್ಟೆಯಾದರೂ, ನಿನ್ನ ಆ ಶಾಪವು ನನ್ನ ಜೀವನ ಸಾಧನವೇ ಆಗಿದ್ದು 'ತಂತೋತ್ಸರ್ವಂ ಜಗದಸೃಜತ್' ಎಂದು ವೇದವಾಕ್ಯವಿದ್ದು ತಂತುವಿನಿಂದಲೇ ಸಮಸ್ತವನ್ನು ಸೃಷ್ಟಿಸಿರುವೆನಾದುದರಿಂದ ತಂತುವಿಗೂ ನನಗೂ ಅಭೇದವಿರುವುದು.

ಲೋಕದಲ್ಲಿ ಕಾರ್ಯಕಾರಣಗಳಿಗೆ ಅಭೇದವಿದ್ದು, ಈ ಜಗತ್ತಿನಲ್ಲಿರುವ ಸಮಸ್ತವೂ ಸಹ ನನ್ನಿಂದಲೇ ಸೃಷ್ಟಿಸಲ್ಪಟ್ಟಿರುವುದರಿಂದ ಸರ್ವ ಜಗತ್ತೂ ಬ್ರಹ್ಮ ಸ್ವರೂಪವಾಗಿದ್ದು

ಬ್ರಹ್ಮನೇ ನಾನಾಗಿರುವಲ್ಲಿ ನಿನ್ನ ಶಾಪದಿಂದ ನನಗೇನೂ ಹಾನಿಯಿಲ್ಲ. ಅದನ್ನು ನಾನು ಪರಿಗ್ರಹಿಸಿರುವೆನೆಂದು ಹೇಳಿ ಮತ್ತೆ ತನ್ನ ಸ್ವಸ್ಥಾನವನ್ನು ಹೊಂದಿದನು. ಅನಂತರ ಷಣ್ಮುಖನು ಪರಮಾತ್ಮನನ್ನು ಕುರಿತು ದೇವಾಂಗನ ಉತ್ಪತ್ತಿ ವಿಷಯವಾಗಿ ಶ್ರುತಿ, ಸ್ಮೃತಿಗಳಿಗೆ ವಿರೋಧವಲ್ಲದ ಪ್ರಮಾಣಗಳನ್ನು ಅಪ್ಪಣೆಕೊಡಿಸಬೇಕೆಂದು ಪ್ರಾರ್ಥಿಸಿದನು. ಅದಕ್ಕೆ ಈಶ್ವರನು ಎಲೈ ಷಣ್ಮುಖನೇ ಹೇಳುತ್ತೇನೆ ಕೇಳು. ವೇದಗಳು ಸ್ವಯಂ ಪ್ರಮಾಣಗಳು. ಹಾಗೆಯೇ ಪುರಾಣೇತಿಹಾಸಗಳು ಸಹ ಪ್ರಮಾಣವು. ಆದರೆ ವೇದ, ಸ್ಮೃತಿಗಳಿಗೆ ಪುರಾಣೇತಿಹಾಸಗಳು ವಿರೋಧಾರ್ಥವುಳ್ಳವುಗಳಾಗಿದ್ದರೆ ಪ್ರಮಾಣ ಗಳೆನಿಸವು. ವೇದ ಸಮ್ಮತವಾಗಿದ್ದರೆ ಮಾತ್ರ ಅವು ಪ್ರಮಾಣಗಳೆನಿಸುವುವು.

ಆ ಪುರಾಣಗಳು ಹದಿನೆಂಟು. ಅವು ಯಾವುವೆಂದರೆ, ಬ್ರಹ್ಮಪುರಾಣ, ಪದ್ಮ ಪುರಾಣ, ವಿಷ್ಣುಪುರಾಣ, ಶಿವಪುರಾಣ, ಭಾಗವತಪುರಾಣ, ಮಾರ್ಕಂಡೇಯಪುರಾಣ, ನಾರದೀಯಪುರಾಣ, ಅಗ್ನಿಪುರಾಣ, ಭವಿಷ್ಯಪುರಾಣ, ಬ್ರಹ್ಮವೈವರ್ತಪುರಾಣ, ಲಿಂಗಪುರಾಣ, ವರಾಹಪುರಾಣ, ಸ್ಕಾಂದಪುರಾಣ, ವಾಮನಪುರಾಣ, ಕೂರ್ಮ ಪುರಾಣ, ಮತ್ಸ್ಯಪುರಾಣ, ಗರುಡಪುರಾಣ ಮತ್ತು ಬ್ರಹ್ಮಾಂಡಪುರಾಣ. ಇವು ಶ್ರುತಿ, ಸ್ಮೃತಿಗಳನ್ನು ಅನುಸರಿಸಿ ಪ್ರಮಾಣಗಳೆನಿಸಿವೆ. ಇವುಗಳು ಬ್ರಹ್ಮ, ವಿಷ್ಣು, ಶಿವ, ಅಗ್ನಿ ಮತ್ತು ಸೂರ್ಯ ದೇವತಾಕವಾದವುಗಳು. ರಾಮಾಯಣ ಮಹಾಭಾರತ ಗಳೆರಡೂ ಇತಿಹಾಸಗಳು. ಎಲೈ ಷಣ್ಮುಖನೇ, ದೇವಲನಿಂದಲೇ ಸಮಸ್ತ ಪ್ರಾಣಿಗಳೂ ಉತ್ಪನ್ನವಾಗಿ ಜೀವಿಸಿ ಲಯ ಹೊಂದುತ್ತವೆ. ಆ ದೇವಲನೇ ಪರಬ್ರಹ್ಮನೆಂದು ಈಶಾವಾಸ್ಯೋಪನಿಷತ್ ಪ್ರಮಾಣವಿರುವುದು. ಜಗತ್ತಿಗೆ ಉತ್ಪತ್ತಿ ಸ್ಥಿತಿ ಲಯಗಳು ಯಾವ ದೇವಲನಿಂದಲೇ ಆಗುತ್ತವೆಯೋ ಅವನೇ ಬ್ರಹ್ಮನು. ಹೀಗೆಂದು ವ್ಯಾಸರು ಬ್ರಹ್ಮಸೂತ್ರದಲ್ಲಿ ಹೇಳಿರುವರು. ಮೊದಲು ಬ್ರಹ್ಮವೊಂದೇ ಇತ್ತು. ಇಂದ್ರನ ಹೊರತು ಶ್ರೇಷ್ಠನು ಯಾರೂ ಇರಲಿಲ್ಲ. ಇಂದ್ರಾಗ್ನಿಗಳು ದೇವತೆಗಳಲ್ಲಿ ಮೊದಲ ನೆಯವರು. ಜಗತ್ತಿಗೆ ಸೂರ್ಯನು ಆತ್ಮಸ್ವರೂಪನು. ಹೀಗೆ ವೇದೋಕ್ತವಾಗಿ ದೇವಾಂಗ ಬ್ರಹ್ಮನಿಗೆ ನಾನಾ ದೇವತಾ ರೂಪಗಳು ಪ್ರತಿಪಾದಿಸಲ್ಪಟ್ಟಿವೆ.

ಹೇಗೆಂದರೆ ದೇವಾಂಗನೇ ಸೂತ್ರ ಬ್ರಹ್ಮನು. ದೇವಾಂಗನೇ ಸತ್ಯನು. ಅವನೇ ಬ್ರಹ್ಮನು. ದೃಶ್ಯಶ್ರಾವ್ಯವಾದ ಜಗತ್ತೆಲ್ಲವೂ ಮಿಥ್ಯಾ ಸ್ವರೂಪವು. ಆ ದೇವಾಂಗ ಬ್ರಹ್ಮನಿಂದ ಅವ್ಯಕ್ತ ತತ್ವವೂ, ಅವ್ಯಕ್ತ ತತ್ವದಿಂದ ಮಹತ್ತತ್ವವೂ, ಆ ಮಹತ್ತತ್ವದಿಂದ ಅಹಂಕಾರ ತತ್ವವೂ, ಆ ಅಹಂಕಾರ ತತ್ವದಿಂದ ಆಕಾಶತತ್ವವೂ, ಆಕಾಶತತ್ವದಿಂದ ವಾಯು ತತ್ವವೂ, ಆ ವಾಯು ತತ್ವದಿಂದ ಅಗ್ನಿ ತತ್ವವೂ, ಆ ಅಗ್ನಿ ತತ್ವದಿಂದ ಜಲ ತತ್ವವೂ, ಜಲ ತತ್ವದಿಂದ ಪೃಥ್ವೀ ತತ್ವವೂ, ಆ ಪೃಥ್ವೀ ತತ್ವದಿಂದ ಓಷಧಿಗಳೂ ಜನಿಸಿದುವೆಂದು ಉಪನಿಷದ್ವಾಕ್ಯಗಳಿರುವುದರಿಂದಲೂ ಓಂಕಾರ (ಪ್ರಣವ) ಸ್ವರೂಪಿಯಾದ ದೇವಾಂ ಬ್ರಹ್ಮನೇ ಸರ್ವಸ್ವರೂಪನೆಂಬುದಾಗಿ ತಿಳಿದು ಬರುತ್ತದೆ. ಆ ದೇವಾಂಗನೇ ಪುರುಷ

ನೆಂದೂ, ಸೂತ್ರಬ್ರಹ್ಮನೆಂದೂ, ಅವನೇ ಪ್ರಜರನ್ನು ಸೃಷ್ಟಿಸಲು ಇಚ್ಛಿಸಿದನೆಂದೂ ದೇವಲಬ್ರಹ್ಮನಿಂದಲೇ ಚತುರ್ಮುಖ ಬ್ರಹ್ಮನು ಹುಟ್ಟಿದನೆಂದೂ, ಆ ಚತುರ್ಮುಖ ನಿಂದಲೇ ರುದ್ರನು ಜನಿಸಿದನೆಂದೂ ಬ್ರಹ್ಮೋಪನಿಷತ್, ಸುಬಾಲೋಪನಿಷತ್ ವಾಕ್ಯವು. ದಿವ್ಯ ಸ್ವರೂಪನೂ, ಅಗ್ನಿ ಸ್ವರೂಪನೂ, ಆತ್ಮ ಸ್ವರೂಪನೂ ಆದ ಆ ದೇವಲ ಬ್ರಹ್ಮನೇ ಸೃಷ್ಟಿಗೂ ಪೂರ್ವದಲ್ಲಿ ಇದ್ದ ಸದ್ವಸ್ತುವು.

ತಂತುಧಾರಿಯಾದ ದೇವಲನೇ ಬ್ರಹ್ಮನು. ಅವನೇ ರುದ್ರನು. ಆ ರುದ್ರನೇ ಅಗ್ನಿತಂತು. ವಿಶ್ವಕರ್ಮನಿಗೆ ಸಪ್ತ ತಂತುವನ್ನು ಕೊಟ್ಟವನೂ, ಸರಸ್ವತಿ ವೀಣೆಗೆ ಶತತಂತುವಾದವನೂ ಅವನೇ. ಆ ದೇವಾಂಗನೇ ನಾನು. ನಾನೇ ಆ ದೇವಲನು. ಅಗ್ನಿಗೆ ಹವಿಸ್ಸು ಆಗಿರುವೆನು. ಸೂತ್ರವೇ ಯಜ್ಞ ಸ್ವರೂಪ. ಸೂತ್ರಧಾರಿಯು ಶುಚಿಯಾಗುವನು. ಸೂತ್ರವು ಬ್ರಹ್ಮ ಸ್ವರೂಪವು. ಅದರಿಂದ ಅವಿಚಾರಿಯೂ ಶುಚಿಯಾಗುವನು. ಅದೇ ಪರಮಾತ್ಮ ಸ್ವರೂಪವಾದುದು. ಅನ್ನ ಸ್ವರೂಪವಾದುದು. ಸೂತ್ರವನ್ನು ಅನ್ನವೆಂದೇ ಭಾವಿಸಬೇಕು. ಆ ದೇವಲನಿಂದಲೇ ದೇವತೆಗಳು ಸೂತ್ರ ಧಾರಿಗಳಾಗಿ ಯಜ್ಞಮಾಡಿ ಪೂಜ್ಯರೆನಿಸಿದರು. ತಂತುಗಳೇ ಜಗದ್ರೂಪಿಗಳು. ಚಂದ್ರನು ತಂತು ಸ್ವರೂಪನೇ. ತಂತುವಿನಿಂದಲೇ ಸರ್ವ ಜಗತ್ತು ಹುಟ್ಟಿತು. ವಾಲಖಿಲ್ಯರೂ ತಂತುವಿನಿಂದಲೇ ಜನಿಸಿದರು. ಅವರು ಸೂತ್ರಧಾರಿಗಳಾಗಿ ಜಗತ್ತಿನಲ್ಲಿ ಯೋಗಿಗಳೆನಿಸಿದರೆಂದು ಅನೇಕ ಶ್ರುತಿ ವಾಕ್ಯಗಳಿರುವುವು. ಯಾವಾಗ ಅವ್ಯಕ್ತವಿದ್ದು, ಹಗಲೂ ರಾತ್ರಿಯೂ ಇರಲಿಲ್ಲವೋ ಆ ಕಾಲದಲ್ಲಿ ಸೂತ್ರಬ್ರಹ್ಮನಾದ ದೇವಲನೊಬ್ಬನೇ ಇದ್ದನು.

ದೇವಾಂಗನೋರ್ವನೇ ದೇವ ದೇವನು, ಸರ್ವ ಪ್ರಾಣಿಗಳಲ್ಲಿ ಚೈತನ್ಯ ಸ್ವರೂಪಿ ಯಾಗಿ ಗುಪ್ತನಾಗಿರುವವನು, 'ಅವನೇ ಸರ್ವವ್ಯಾಪಿಯು', ಸರ್ವ ಭೂತಾಂತ ರಾತ್ಮನು, ಸರ್ವಕರ್ಮಾಧ್ಯಕ್ಷನು, ಸರ್ವಭೂತಾಧಿವಾಸನು, ಸಾಕ್ಷಿಚೇತನನು, ಜ್ಞಾನ ರೂಪನು, ಮತ್ತು ನಿರ್ಗುಣನು. ಒಂದೇ ಇದ್ದುದನ್ನು ಅನೇಕವಾಗಿ ಪ್ರಕಟಮಾಡಿದ ಆ ದೇವಾಂಗನು ತ್ರೇತಾಯುಗದಲ್ಲಿ ಬ್ರಹ್ಮಾದಿಗಳಿಗೂ ಇನ್ನುಳಿದ ಸಮಸ್ತರಿಗೂ, ಕರ್ಮಾನುಷ್ಠಾನಕ್ಕೆ ಸಾಧನವಾದ ಯಜ್ಞೋಪವೀತವನ್ನು ವಸ್ತ್ರಾದಿಗಳನ್ನು ಅನು ಗ್ರಹಿಸಿ ವಿಶ್ವವನ್ನೆಲ್ಲಾ ಸಂತುಷ್ಟವನ್ನಾಗಿ ಮಾಡಿದನು. ಆದುದರಿಂದ ದೇವಾಂಗನೇ ಲೋಕ ಪ್ರಸಿದ್ಧನು. ಮಾನಾಭಿಮಾನ ವ್ಯಾಪಕನು. ಗುರುಗಳಿಗೆ ಗುರುವೂ ಓಂಕಾರ ಸ್ವರೂಪಿಯೂ ಆದ ಅವನಿಂದಲೇ ತ್ರಿಮೂರ್ತಿಗಳೂ ಜನಿಸಿದರು. ಆ ತ್ರಿಮೂರ್ತಿ ಗಳಿಂದಲೇ ಲೋಕಗಳಾದವು. ಅವನೇ ಬ್ರಹ್ಮನು. ಅವನೇ ಸತ್ಯನು. ಅವನಿಂದಲೇ ಸರ್ವವು ಜೀವಿಸುತ್ತದೆ.

ಇಲ್ಲಿಗೆ ವೇದೋಕ್ತ ಮೂಲಸ್ತಂಭನ ಗ್ರಂಥದಲ್ಲಿನ ತ್ರೇತಾಯುಗದಲ್ಲಿ ದೇವಾಂಗ ಮತ ಪ್ರಾಶಸ್ತ್ಯವು ಸಮಾಪ್ತವಾದುದು.

ಓಂ ಕೃಷ್ಣಾರ್ಪಣಮಸ್ತು.

ದ್ವಾಪರಯುಗದಲ್ಲಿ ಸೂತ್ರ ವಸ್ತ್ರ ನಿರ್ಮಾಣ

ದ್ವಾಪರಯುಗದಲ್ಲಿ ಮೂವತ್ತುಮೂರು ಕೋಟಿ ದೇವತೆಗಳು ಅಂಬಾಸಮೇತನಾದ ಸದಾಶಿವನನ್ನು ನೋಡಿ ನಾವು ಲಜ್ಜಾವಶರಾಗಿರುವುದರಿಂದ ಸೂತ್ರವಸ್ತ್ರಾದಿಗಳನ್ನು ನೀಡೆಂದು ಪ್ರಾರ್ಥಿಸಿದರು. ಆಗ ಕೈಲಾಸಾಧಿಪತಿಯಾದ ಶಿವನು ತನ್ನ ಬ್ರಹ್ಮಸ್ಥಾನದ ಸಹಸ್ರಾರ ಕಮಲಮಧ್ಯಸ್ಥನಾದ ದೇವಲ ಮಹಾ ಋಷಿಯನ್ನು ಕುರಿತು ಈ ದ್ವಾಪರ ಯುಗದಲ್ಲಿ ಸಮಸ್ತ ದೇವತೆಗಳಿಗೆ ಸೂತ್ರವಸ್ತ್ರಗಳನ್ನು ಅನುಗ್ರಹಿಸಿ ಮತ್ತೆ ಸ್ವಸ್ಥಾನವನ್ನು ಸೇರೆಂದು ನುಡಿದನು. ಆಗ ದೇವಲ ಮಹಾಋಷಿಯು ದೇವಾಂಗ ರೂಪದಿಂದ ಹೊರಬಂದು, ಸಮಸ್ತ ದೇವತೆಗಳಿಗೂ ಮಂತ್ರಪೂರ್ವಕವಾಗಿ ಸೂತ್ರ, ವಸ್ತ್ರಾದಿಗಳನ್ನನುಗ್ರಹಿಸಿ ತನ್ನ ಸ್ವಸ್ಥಾನವನ್ನು ಸೇರಿದನು.

ಆಗ ಷಣ್ಮುಖನು, ಪ್ರಭೋಶಂಕರಾ, ನನಗೆ ಆ ದೇವಾಂಗನ ಸ್ವರೂಪವನ್ನು ತಿಳಿಸೆಂದು ಪ್ರಾರ್ಥಿಸಲಾಗಿ ಶಂಕರನು ಷಣ್ಮುಖನನ್ನು ಕುರಿತು, ಹೀಗೆಂದು ಹೇಳಿದನು. ಸರ್ವಜ್ಞನಾದ ಕುಮಾರನೇ ದೇವಾಂಗನ ಸ್ವರೂಪವನ್ನು ಕೇಳು.

ಆ ದೇವಾಂಗನೇ ಸರ್ವಕರ್ತೃವು, ಸದಾ ಸೂತ್ರಾತ್ಮಕನು, ಪ್ರಭುವೂ ಆಗಿರುವನಲ್ಲದೆ ಅವನು ಪಂಚತತ್ವ ಸ್ವರೂಪಿಯು ಮತ್ತು ವ್ಯಾಪಿಯು. ಅವನು ಹಗಲು ರಾತ್ರಿಗಳನ್ನುಂಟು ಮಾಡುವವನು. ಅವನೇ ಬ್ರಹ್ಮ, ವಿಷ್ಣು, ರುದ್ರರೂ, ನವಗ್ರಹಗಳ ಸಮೂಹವೂ ಆಗಿರುವನಲ್ಲದೆ, ಪರಬ್ರಹ್ಮ ಸ್ವರೂಪಿಯಾದ ಚಿಜ್ಜ್ಯೋತಿಯೂ ತಾನಾಗಿರುವನು. ಆ ಜ್ಯೋತಿಯು ಅವನಿಂದಲೇ ಪ್ರಕಾಶಿಸುತ್ತದೆ. ಆ ದೇವಾಂಗನೇ ಸ್ವಯಂಭುವೂ ದೇವದೇವೇಶನೂ, ಪರಂಜ್ಯೋತಿಯೂ, ಸದಾ ನಿರ್ಮಲನೂ, ನಿರಾಕಾರ ಸ್ವರೂಪಿಯೂ, ಪಂಚಾಂಗನೂ, ಪಂಚವರ್ಣನೂ, ಪ್ರಣವಸ್ವರೂಪಿಯೂ ಮತ್ತು ಪರಬ್ರಹ್ಮನೂ ಆಗಿ ನಿರಂತರ ಪ್ರಕಾಶಿಸುತ್ತಿರುತ್ತಾನೆ. ಆ ದೇವಾಂಗನೇ ಪರಬ್ರಹ್ಮನು. ಆ ದೇವಾಂಗನು ವಿಶ್ವವನ್ನು ಸೃಷ್ಟಿಮಾಡಲು ಇಚ್ಛೆಸಿದೊಡನೆಯೇ ಆ ಇಚ್ಛೆಯಿಂದ ಮಾಯಾಸಮೇತ ಮೂಲಾಹಂಕಾರವು ಈ ಲೋಕದಲ್ಲಿ ಹುಟ್ಟುತ್ತದೆ. ಆ ಜಗದ್ರೂಪಿಯಾದ ದೇವಾಂಗನಲ್ಲಿಯೇ ಸರ್ವವೂ ಇರುವುದು. ಅವನಿಗೂ ನನಗೂ ಭೇದವೇ ಇಲ್ಲವು. ಭೇದವು ತೋರಿದರೂ ಅದು ಬರೀ ಭ್ರಾಂತಿ. ಹಗ್ಗ ಹಾವು (ರಜ್ಜು ಸರ್ಪ) ನ್ಯಾಯದಂತೆ ನನಗೂ ಸಮಸ್ತಕ್ಕೂ ಆ ದೇವಾಂಗನೇ ಅಧಿಷ್ಠಾನನಾಗಿರುವನು. ಆ ದೇವಾಂಗನ ಆಪಾದ ಮಸ್ತಕ ಪರ್ಯಂತ ಹದಿನಾಲ್ಕು ಲೋಕಗಳು ಸ್ಥಿತವಾಗಿರುವುವು. ಆತನ ಪಾದದಲ್ಲಿ

ಅತಲವೂ, ಪಾದದ ಊರ್ಧ್ವಭಾಗದಲ್ಲಿ ವಿತಲವೂ, ಮಣಿಕಾಲಿನಲ್ಲಿ ಸುತಲವೂ, ಜಾನುವಿನಲ್ಲಿ ತಲಾತಲವೂ, ತೊಡೆಗಳಲ್ಲಿ ಮಹಾತಲವೂ, ಗುಹ್ಯ ಸ್ಥಾನದಲ್ಲಿ ರಸಾತಲವೂ, ಸೊಂಟದಲ್ಲಿ ಪಾತಾಳವೂ ಈ ರೀತಿ ಏಳು ಅಧೋಲೋಕಗಳೂ ಕ್ರಮವಾಗಿ ಅವನ ಅರ್ಧ ಶರೀರದಲ್ಲಿ ಇರುವುವು. ಇನ್ನು ಏಳು ಊರ್ಧ್ವಲೋಕಗಳು ಅಂದರೆ ಉದರ ಮಧ್ಯದಲ್ಲಿ ಭೂಲೋಕವೂ, ಹೊಕ್ಕಳಿನಲ್ಲಿ ಭುವರ್ಲೋಕವೂ, ಹೃದಯದಲ್ಲಿ ಸುವರ್ಲೋಕವೂ, ಕಂಠದಲ್ಲಿ ಮಹರ್ಲೋಕವೂ, ಮುಖದಲ್ಲಿ ಜನೋಲೋಕವೂ, ಹಣೆಯಲ್ಲಿ (ಲಲಾಟದಲ್ಲಿ) ತಪೋಲೋಕವೂ, ಶಿರಸ್ಸಿನಲ್ಲಿ ಸತ್ಯಲೋಕವೂ, ಈ ಪ್ರಕಾರ ಏಳು ಲೋಕಗಳೂ ಸೇರಿ ಹದಿನಾಲ್ಕು ಲೋಕಗಳೂ ದೇವಾಂಗನಲ್ಲಿ ಕ್ರಮವಾಗಿ ಇರುವುವು. ದೇವಾಂಗನ ಮನಸ್ಸಿನಿಂದ ಚಂದ್ರನೂ, ನೇತ್ರಗಳಿಂದ ಸೂರ್ಯನೂ, ಮುಖದಿಂದ ಅಗ್ನಿಯೂ, ಪ್ರಾಣದಿಂದ ವಾಯುವೂ ಜನಿಸಿದವು. ಹೊಕ್ಕಳಿನಿಂದ (ನಾಭಿಯಿಂದ) ಆಕಾಶವೂ, ಶಿರಸ್ಸಿನಿಂದ ಸ್ವರ್ಗವೂ, ಪಾದಗಳಿಂದ ಭೂಮಿಯೂ, ಕಿವಿಗಳಿಂದ ದಿಕ್ಕುಗಳೂ ಈ ರೀತಿಯಾಗಿ ಸಮಸ್ತ ಲೋಕಗಳೂ ಉಂಟಾದುವು. ಆ ದೇವಾಂಗನಿಂದಲೇ ಈಶಕೋಟಿಯೂ, ಹರಿ, ಅಜಕೋಟಿಗಳೂ, ಜೀವಕೋಟಿಗಳೂ, ಅಗ್ನಿಯೂ ಉತ್ಪನ್ನವಾದುವು. ಆದುದರಿಂದಲೇ ಸಮಸ್ತ ದೇವತೆಗಳಿಗೂ ಪ್ರಾಚೀನನಾದ ದೇವಾಂಗನು ಸಾಕ್ಷಾತ್ ವಿಶ್ವಗುರುವಾಗಿರುವನು.

ಮುನಿಗಳಲ್ಲಿ ಬ್ರಾಹ್ಮಣವರ್ಣವೂ, ದೇವತೆಗಳಲ್ಲಿ ಕ್ಷತ್ರಿಯ ವರ್ಣವೂ, ಅಪ್ಸರರಲ್ಲಿ ವೈಶ್ಯವರ್ಣವೂ, ಯಕ್ಷರಲ್ಲಿ ಶೂದ್ರವರ್ಣವೂ ಈ ರೀತಿ ನಾಲ್ಕು ವರ್ಣಗಳು ಹುಟ್ಟಿದುವು. ಚತುರ್ವರ್ಣದವರಿಗೂ ಉಪದೇಶ ಮಾಡುವವರಲ್ಲಿ ಕಾರಣನಾದ ಅಗ್ನಿಸ್ವರೂಪಿಯಾದ ಸೂತ್ರಧಾರಕನಾದ ದೇವಾಂಗನು ಗುರುಗಳಿಗೆ ಗುರುವಾಗಿರುವನು. ಈ ರೀತಿ ಸಮಸ್ತವನ್ನೂ ಧರಿಸಿರುವ ದೇವಾಂಗನು ಪ್ರತಿಕಲ್ಪದಲ್ಲಿ ಲೋಕಹಿತಾರ್ಥವಾಗಿ ಜಟಾ ಮೇಖಲಾ ಕೌಪೀನಯುಕ್ತನಾಗಿ ಭಸ್ಮಾಂಗನಾಗಿ ಬ್ರಹ್ಮಸೂತ್ರಧಾರಿಯಾಗಿರುವನು. ಅಕ್ಷಮಾಲಾ ಕಮಂಡಲು ಧರನಾಗಿ, ಪವಿತ್ರನಾಗಿ, ಸರ್ವಮಂಗಳ ಮೂರ್ತಿಯಾಗಿ, ಸುರಸೇವ್ಯನಾಗಿ, ಸರ್ವರಿಗೂ ಉಪದೇಶಕನಾಗಿ, ಸರ್ವಾಭಿಮತ ಶ್ರೇಷ್ಠನಾಗಿ, ಸರ್ವಕಾರ್ಯಕರ್ತನಾಗಿ, ಸರ್ವೇಶ್ವರನಾಗಿ, ಸೂತ್ರಾತ್ಮಕ ಬ್ರಹ್ಮನೆನಿಸುವನು. ಆ ದೇವಾಂಗನು ಅಂತರಂಗದಲ್ಲಿ ಆತ್ಮರೂಪಿಯಾಗಿ ಬಹಿರಂಗದಲ್ಲಿ ಜಗದ್ಗುರುವಾಗಿ ಮುಕ್ತಿ ಜ್ಯೋತಿ ಸ್ವರೂಪನಾಗಿ ತಾರಕ ಬ್ರಹ್ಮನೆನಿಸಿರುವನು. ಹಂಸಮಂತ್ರದ ಅಕ್ಷರದ್ವಯಗಳಿಂದ ಕೂಡಿದ ನಿತ್ಯಚಿತ್ತ ಕಮಲದಲ್ಲಿ ಪ್ರಕಾಶಮಾನನಾಗಿ ಜಗತ್ಕಾರಣನಾಗಿ, ಸರ್ವವ್ಯಾಪಿಯಾಗಿ, ಸಮಸ್ತ ಚರಾಚರ ಪ್ರಾಣಾಂತರ್ಗತನಾಗಿ, ಸ್ವತಂತ್ರನಾಗಿ, ತತ್ವಮಸಿ ಮಹಾವಾಕ್ಯದ ಲಕ್ಷ್ಯಾರ್ಥಬೋಧಕನಾಗಿ ಭಾವಿಸತಕ್ಕ ತೇಜಸ್ಸಿಗೆ ಕಾರಣನಾದ, ಪ್ರಣವ ಸ್ವರೂಪಿಯಾದ, ಸಮಸ್ತಾಲಂಕಾರ ಭೂಷಿತನಾದ, ಗುರು ಪದವನ್ನು ಧ್ಯಾನಿಸತಕ್ಕದ್ದು. ಅಗ್ನಿಯಿಂದ ವಿಶ್ವ ಸಂಭವವೂ ವಿಷಮಸ್ಥಾನಗಳೂ ಗರ್ಭವನ್ನು ಧರಿಸಿದವು. ಅಗ್ನಿಯಿಂದಲೇ ಸುವರ್ಣೋತ್ಪತ್ತಿಯಾಯಿತು. ದೇವಲನೇ ಆ ಅಗ್ನಿಸ್ವರೂಪನು.

ಓಕಾಂರವು ಬ್ರಹ್ಮವಾಗಿ ವಿಶ್ವಬೀಜವಾಗಿ ವೃದ್ಧಿಯಾಗುತ್ತದೆ. ತ್ರಿಮೂರ್ತಿಗಳ ಸ್ವರೂಪದಲ್ಲಿ ದೇವಾಂಗನೇ ಸೂತ್ರಧಾರಕನು. 'ಏಕಾಕ್ಷರ ಪ್ರಣವ'ವೇ ಬ್ರಹ್ಮವು. ಆ ದೇವಾಂಗನೇ ಸ್ವಯಂ ಪ್ರಕಾಶನೂ, ಪ್ರಣವ ಸ್ವರೂಪಿಯೂ, ಬೀಜರೂಪನೂ, ಪರಮಾತ್ಮನೂ ಮತ್ತು ಸದಾಶಿವನೂ, ತ್ರಿಮೂರ್ತಿ ಸ್ವರೂಪನೂ, ಆದಿಶಕ್ತಿ ಸಮೇತನೂ ಸ್ವಯಂಭುವೂ, ಮತ್ತು ದೇವದೇವೇಶನೂ ಆದ ದಿವ್ಯಮೂರ್ತಿಯು. ಆ ದೇವಾಂಗನೇ ಗುಣತ್ರಯಾತ್ಮಕನೂ, ಜ್ಞಾನಿಯೂ, ಚೇತನಾತ್ಮಕನೂ, ಲೋಕಗುರುವೂ ಆಗಿ ಕೋಟಿಚಂದ್ರ, ಕೋಟಿಸೂರ್ಯ ಸಮಪ್ರಭನಾಗಿ ಪ್ರಕಾಶಿಸುತ್ತಾನೆ. ಮಾಯಾರಹಿತ ನಾಗಿ, ಪರಬ್ರಹ್ಮಸ್ವರೂಪಿಯಾಗಿ, ಬ್ರಹ್ಮಸೂತ್ರ ಸಂಯುಕ್ತನಾಗಿ ಕಂಗೊಳಿಸುವನು. ದೇವಾಂಗನ ಹಸ್ತನಿರ್ಮಿತವಾದ ತಂತುವೇ, ಸಕಲ ಸುರಾಸುರರಿಗೂ, ಮನುಷ್ಯರಿಗೂ ಸಕಲ ಲೋಕಗಳಿಗೂ, ಮಂಗಳಕರವಾಗಿದ್ದು ಇಷ್ಟಾರ್ಥಗಳನ್ನು ನೀಡುವುದು.

ಆ ದೇವಾಂಗನು ಕಲ್ಪಕಲ್ಪಾಂತರಗಳಲ್ಲೂ ಪ್ರಪಂಚದಲ್ಲಿ ಪ್ರಕಟನಾಗಿ, ಯಾವಾಗಲೂ ಸಾಯುಜ್ಯಕ್ಕೆ ಕಾರಣ ಸ್ವರೂಪನಾಗಿ ತಂತುಗರ್ಭನಾಗಿ ಶೋಭಿಸುವನು. ವಿಶ್ವವ್ಯಾಪನಾದ, ಮಹಾಯೋಗಿಯಾದ, ಸದಾ ನಿರ್ಮಲನಾದ, ನಿತ್ಯನಾದ, ನಿರ್ಗುಣ ನಾದ ಸತ್ಯ ಜ್ಞಾನಸ್ವರೂಪಿಯಾದ, ಓಂಕಾರಕ್ಕೆ ನೆಲೆಯಾದ, ಅರಳಿದ ಸಹಸ್ರಾರ ಕಮಲ ಮಧ್ಯದಲ್ಲಿ ಪ್ರತ್ಯಕ್ಷನಾಗಿದ್ದು, ಜ್ಞಾನ ಮತ್ತು ಸಾಯುಜ್ಯಗಳಿಗೆ ಕಾರಣನಾಗಿ, ಆತ್ಮ ಸ್ವರೂಪಿಯಾದ ದೇವಾಂಗನು ತನ್ನ ಮತವನ್ನು ಪ್ರಕಾಶಿಸುತ್ತಾ, ತಾನೇತಾನಾಗಿ ಜಗತ್ತಿನಲ್ಲಿ ಯಾವಾಗಲೂ ಆನಂದದಿಂದಿರುವನು. ಸುರೇಶನಾದ ಫಾಲ ನೇತ್ರನಲ್ಲಿ ಜನಿಸಿದ ಆ ದೇವಾಂಗನು ಸೂರ್ಯಕಾಂತಿ ಸದೃಶನಾಗಿ ಗೋವಿಂದನಾಗಿ ಭೂಸುರೋತ್ತಮನಾಗಿ ಅಗ್ನಿಯಾಗಿ ಮನುವಾಗಿ ಇರುವನು. ಬ್ರಹ್ಮಸಹಸ್ರ ಮಧ್ಯ ದಲ್ಲಿ ಜ್ಞಾನಿಯಾಗಿಯೂ ಜ್ಯೋತಿಸ್ವರೂಪನಾಗಿಯೂ ಸರ್ವೋಪದೇಶಕನಾಗಿಯೂ ಸೂತ್ರಧಾರಿಯಾಗಿಯೂ ಆ ದೇವಾಂಗನು ಪ್ರಕಾಶಿಸುವನು. ವರ್ಣಾಶ್ರಮಧರ್ಮ ವಿಹಾರಿಯಾದ ದೇವಾಂಗನು ಆ ಧರ್ಮಗಳಲ್ಲಿ ನಿರತರಾಗಿರುವ, ಯಕ್ಷ, ರಾಕ್ಷಸ, ಗಂಧರ್ವ, ದಿಕ್ಪಾಲಕರೇ ಮೊದಲಾದ ಸಮಸ್ತರಿಗೂ ಅಧಿಪತಿಯಾಗಿರುವನು.

ಹೀಗೆ ಬೋಧಿಸಿದ ಶಂಕರನನ್ನು ಕುರಿತು ಷಣ್ಮುಖನು, ಎಲೈ ದೇವದೇವನಾದ, ಮಹಾಪ್ರಾಜ್ಞನಾದ ಕರುಣಾನಿಧಿಯಾದ, ಪರಮೇಶ್ವರನೇ, ದೇವಾಂಗನಿಂದ ನಿರ್ಮಿಸಲ್ಪಟ್ಟ ಯಜ್ಞೋಪವೀತದ ಮಹಾತ್ಮ್ಯವನ್ನು ಅಪ್ಪಣೆ ಕೊಡಿಸೆಂದನು. ಅದಕ್ಕೆ ಈಶ್ವರನು, ಮೂರೆಳೆಗಳಿಂದ ಕೂಡಿರುವುದೇ ಉಪವೀತವು. ದೇವಾಂಗ ನಿರ್ಮಿತವಾದ ಗಾಯತ್ರೀ ಮಂತ್ರವು ಮೂರು ಪಾದಗಳುಳ್ಳದುದರಿಂದ ಅದು ತಂತುತ್ರಯದಿಂದಲೇ ಕೂಡಿರುವುದು. ಎಲೈ ಕುಮಾರನೇ ದೇವಾಂಗ ಬ್ರಹ್ಮನ (ದೇವಬ್ರಾಹ್ಮಣ) ವಂಶದವರಿಗೆ ಶೂದ್ರತ್ವವು ನಿಶ್ಚಯವಾಗಿಯೂ ಇಲ್ಲ. ದೇವಪೂಜ್ಯ ನಾದ ದೇವಾಂಗನು ಹುಟ್ಟಿನಿಂದಲೇ ಬ್ರಹ್ಮನಾಗಿ ದೇವಾಂಗನೆಂಬ ಹೆಸರೇ ಶುದ್ಧ ಬ್ರಹ್ಮ

ನೆಂಬುದನ್ನು ಸ್ಪಷ್ಟವಾಗಿ ಪ್ರತಿಪಾದಿಸುತ್ತದೆ. ಯಜ್ಞೋಪವೀತ ಮಂತ್ರವು (ಗಾಯತ್ರೀಯು) ಮೂರು ಪಾದಗಳುಳ್ಳದ್ದಾಗಿದ್ದು, ಯಜ್ಞೋಪವೀತವಾದರೂ ಸೂತ್ರತ್ರಯಾತ್ಮಕವಾಗಿದ್ದು ಮಂತ್ರಪೂರ್ವಕವಾಗಿ ಧರಿಸುವುದರಿಂದಲೇ ಬ್ರಹ್ಮತ್ವವು ಸಿದ್ಧಿಸುವುದಿಲ್ಲ. ಜ್ಞಾನವಿಲ್ಲದೆ ಬ್ರಹ್ಮತ್ವವು ಸಿದ್ಧಿಸುವುದಿಲ್ಲ. ಆದರೆ ಯಜ್ಞೋಪವೀತಧಾರಿಯಾಗಿ ದೇವಾಂಗ ವಂಶೋದ್ಭವನಾಗಿದ್ದರೆ ಮೋಕ್ಷವು ಸಿದ್ಧಿಸುವುದು. ಇದು ನಿಶ್ಚಯ.

ಈ ಮೂಲಸ್ತಂಭನ ಗ್ರಂಥದ ಪಠಣ ಶ್ರವಣ ಮಾಡಿದ ಸರ್ವರೂ ಮುಕ್ತರಾಗುವರು. ಬುದ್ಧಿವಂತರಾದವರೆಲ್ಲರೂ ಈ ಗ್ರಂಥವನ್ನು ಸರ್ವಪ್ರಯತ್ನದಿಂದಲೂ ಪಾರಾಯಣ ಮಾಡಿ ಮುಕ್ತರಾಗುವುದು. ಮಹಾಪ್ರಾಜ್ಞನಾದ ಎಲೈ ಕುಮಾರನೇ, ನನ್ನಿಂದ ಹೇಳಲ್ಪಟ್ಟ ವೇದೋಕ್ತ ಮೂಲಸ್ತಂಭನವನ್ನು ಸಮಸ್ತರೂ ಸತ್ಯವೆಂದು ತಿಳಿಯುವುದು. ಎಲೈ ಚೌಡೇಶ್ವರಿಯೇ ನಿನಗೆ ನಮಸ್ಕಾರ. ಸತ್ಯನಾದ ನಿರ್ವಿಕಲ್ಪನಾದ ಸಚ್ಚಿದಾನಂದನಾದ ಧೀಮಂತನಾದ ರಾಮಲಿಂಗನೇ ನಿನಗೆ ನಮಸ್ಕಾರ.

ಇಲ್ಲಿಗೆ ಮೂಲಸ್ತಂಭನ ಮುಗಿಯಿತು.

ಓಂ

ಶ್ರೀ ದೇವಲ ಪರಬ್ರಹ್ಮಣೇ ನಮಃ

ಪುರಾಣ ಪ್ರಾರಂಭ ಪೂರ್ವದಲ್ಲಿ

ಇಷ್ಟದೇವತಾ ಧ್ಯಾನ

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ ।
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ ॥ ೧ ॥

ಯಂ ಬ್ರಹ್ಮಾ ವರುಣೇಂದ್ರರುದ್ರ ಮರುತಃ ।
ಸ್ತುನ್ವನ್ತಿ ದಿವ್ಯೈಸ್ತವೈಃ ।
ವೇದೈಸ್ಸಾಙ್ಗ ಪದಕ್ರಮೋಪನಿಷದೈಃ ।
ಗಾಯಂತಿಯಂ ಸಾಮಗಾಃ ।
ಧ್ಯಾನಾವಸ್ಥಿತ ತದ್ಗತೇನ ಮನಸಾ ।
ಪಶ್ಯನ್ತಿಯಂ ಯೋಗಿನಃ ।
ಯಸ್ಯಾಂತಂ ನವಿದುಃ ಸುರಾಸುರಗಣಾಃ ।
ದೇವಾಯ ತಸ್ಮೈ ನಮಃ ॥ ೨ ॥

ನಮಸ್ತೇ ರಾಮಲಿಂಗಾಯ ಚೂಡಾಂಬಾಯೈ ನಮೋ ನಮಃ ।
ಸ್ವಯಂಭು ಮನವೇ ನಿತ್ಯಂ ನಮೋ ದೇವಾಂಗ ರೂಪಿಣೇ ॥ ೩ ॥

ಮುಕ್ತಾವಿದ್ರುಮ ಹೇಮ ನೀಲ ಧವಳಛಾಯೈಮುಖೈಸ್ತ್ರೀಕ್ಷಣೈಃ ।
ಯುಕ್ತಾಮಿಂದು ನಿಬದ್ಧ ರತ್ನ ಮಕುಟಾಂ ತತ್ವಾರ್ಥ ವರ್ಣಾತ್ಮಿಕಾಂ ॥
ಗಾಯತ್ರೀಂ ವರದಾಭಯಾಂಕುಶ ಕಶಾಂ ಗದಾಂ ಶಂಖಂ
ಚಕ್ರ ಮಥಾರವಿಂದಯುಗಳಾಂ ಹಸ್ತೈರ್ವಹಂತೀಂ ಭಜೇ ॥ ೪ ॥

ಸರ್ವಮಂಗಳ ಮಾಂಗಲ್ಯೇ ಶಿವೇಸರ್ವಾರ್ಥಸಾಧಕೇ ॥
ಶರಣ್ಯೇತ್ರ್ಯಂಬಕೇ ದೇವಿ ನಾರಾಯಣೀ ನಮೋಸ್ತುತೇ ॥ ೫ ॥

ಆದೌ ಈಶ್ವರ ಫಾಲ ನೇತ್ರ ಜನನಂ ಬ್ರಹ್ಮಾದಿಭಿಃಪೂಜಿತಂ ।
ಪ್ರಾವೀಣ್ಯಂ ಪರಮಂ ಪವಿತ್ರ ಕುಶಲಂ ಸೂತ್ರಾಧಿಕಾರಂ
ಮಹತ್ । ಓಂ ಕಾರಾಂತರ ದೀಪ್ಯಮಾನ
ನಿಗಮ ಸ್ತೋತ್ರಾರ್ಹಮಾನಂ ಶಿವಂ । ಶ್ರೀ ದೇವಾಂಗ ಗುರುಂ
ಸ್ಮರಾಮಿ ನಿರತಂ ಹೃತ್ಸಾರ ಸಂಭಾವಯೇ ॥ ೬ ॥

ಪ್ರಥಮಂ ಕಾಶೀಕ್ಷೇತ್ರಂಚ ಶ್ರೀಶೈಲಂಚ ದ್ವಿತೀಯಕಂ ।
ತೃತೀಯಂ ಹೇಮಕೂಟಂಚ ಶೋಣಾಚಲ ಚತುರ್ಥಕಂ ।
ಪಂಚಮಂ ಶಂಭು ಶೈಲಂಚ ಪಂಚಶೈಲಂ ಪ್ರಕೀರ್ತಿತಂ
ದೇವಾಂಗ ಗುರುಪೀಠಾನಾಂ ಮನುಬ್ರಹ್ಮಂ ಜಗದ್ಗುರುಂ ॥ ೭ ॥

ಕೈಲಾಸೇ ಶಂಭು ಶೈಲೇಪಸ್ಥಿತಂ ಗಾಯತ್ರೀ ಪೀಠಕಂ ।
ಪಾಲಯಂತಂ ಮಹಾತ್ಮಾನಂ ಮನುಬ್ರಹ್ಮಂ ಜಗದ್ಗುರುಂ ॥ ೮ ॥

ದೇವಾಂಗಶ್ಚ ಸದಾಚಾರೀ ಪುನರ್ಜನ್ಮಂತು ಬ್ರಾಹ್ಮಣಃ ।
ಪ್ರತಾಪಿ ಪುನರ್ಜನ್ಮಂಚ ಜಾಯತೇ ಸಪ್ತನಾಮಕಃ ॥ ೯ ॥

ವಿದ್ಯಾಧರಶ್ಚಿತ್ರಯೋಗೀ ಸಾಧುಕೋ ಪುಷ್ಪದಂತಕಃ ।
ಭೇತಾಳ ವರರುಚಿರ್ದಾಸೋ ದೇವಾಂಗಸ್ಸಪ್ತ ನಾಮಕಃ ॥ ೧೦ ॥

ಮನುಬ್ರಹ್ಮಕುಲೇಜಾತಂ ಗರ್ಭಬ್ರಾಹ್ಮಣನಿಶ್ಚಯಂ
ಶೂದ್ರತ್ವಂ ನಾಸ್ತಿತದ್ವಂಶಂ ದೇವಾಂಗೋ ಬ್ರಹ್ಮರೂಪಿಣೇ ॥ ೧೧ ॥

ಓಂ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ಪೂರ್ಣ
ಮುದಚ್ಯತೇ । ಪೂರ್ಣಸ್ಯ ಪೂರ್ಣಮಾದಾಯ
ಪೂರ್ಣಮೇವಾವಶಿಷ್ಯತೇ ॥ ೧೨ ॥

॥ ಓಂ ಶಾಂತಿಃ ಶಾಂತಿಃ ಶಾಂತಿಃ
ಹರಿಃ ಓಂ ॥

ಪಾರ್ವತಿಯ ಮುಖ ಕಮಲಕ್ಕೆ ಸೂರ್ಯ ಸದೃಶನಾದ, ಭಕ್ತರಿಗೆ ಬೇಡಿದ ಇಷ್ಟಾರ್ಥವನ್ನು ನೀಡುವ ಏಕದಂತನಾದ ಗಣಪತಿಯನ್ನು ಹಗಲಿರುಳೂ ಉಪಾಸಿಸುವೆನು.

ಯಾರ ಕೈಯಲ್ಲಿ ಕಮಲವಿರುವುದೋ, ಆ ಲಕ್ಷ್ಮಿಯ ಹತ್ತಿರದಲ್ಲೇ ಆಕೆಯ ಪತಿಯಾದ ಪುರಾಣ ಪುರುಷನಾದ ಶ್ರೀ ನಾರಾಯಣನಿದ್ದು, ಆ ನಾರಾಯಣನ ನಾಭಿಯಲ್ಲಿ ಚತುರ್ಮುಖನಾದ ಬ್ರಹ್ಮನಿದ್ದು, ಆ ಬ್ರಹ್ಮನ ಕಂಠಗಳಲ್ಲಿ ಚತುರ್ವೇದಗಳಿದ್ದು, ಆ ವೇದಗಳಿಂದಲೇ ಸಮಸ್ತ ಯಜ್ಞ ಕ್ರಿಯೆಗಳೆಲ್ಲವೂ ನಡೆಯುವುವು.

ಕಮಲಾಸನೆಯಾದ ಶ್ರೀ ಶಾರದೆಯು ಅಷ್ಟೈಶ್ವರ್ಯಗಳಿಂದ ಉಂಟಾಗುವ ದುರ್ಬುದ್ಧಿಗಳೆಂಬ ರೋಗಗಳನ್ನೆಲ್ಲಾ ತೊಲಗಿಸಿ ನನ್ನನ್ನು ರಕ್ಷಿಸಲಿ. ಶರತ್ಕಾಲದಲ್ಲಿ ಅರಳಿದ ಕಮಲದಂತೆ ಅಗಲವಾದ ಮುಖವುಳ್ಳವಳಾಗಿಯೂ, ಬೇಡಿದಿಷ್ಟಾರ್ಥವನ್ನು ಕರುಣಿಸುವವಳಾಗಿಯೂ, ವಿದ್ಯಾನಿಧಿಯೂ ಆದ ಶಾರದೆಯು ಯಾವಾಗಲೂ ನನ್ನ ಮುಖ ಕಮಲ (ಜಿಹ್ವೆ)ದಲ್ಲಿ ನೆಲಸಿರಲಿ.

ಶಾಂತಾಕಾರನೂ, ಭುಜಗಶಯನನೂ ಪದ್ಮನಾಭನೂ, ದೇವೇಶನೂ, ವಿಶ್ವಾಕಾರನೂ, ಗಗನ ಸದೃಶನೂ ಮೇಘವರ್ಣನೂ, ಶುಭಾಂಗನೂ, ಲಕ್ಷ್ಮೀಕಾಂತನೂ, ಕಮಲನಯನನೂ, ಯೋಗಿಹೃದಯ ಧ್ಯಾನ ಗಮ್ಯನೂ ಸಂಸಾರ ಭಯವನ್ನು ನಾಶ ಮಾಡುವವನೂ, ಸರ್ವಲೋಕೈಕನಾಥನೂ ಆದ ವಿಷ್ಣುವನ್ನು ನಮಸ್ಕರಿಸುವೆನು.

ಮಂಗಳ ಸ್ವರೂಪನೂ, ಸುಖವೀಯುವವನೂ, ಜ್ಞಾನ ನೇತಾನಾಗಿರುವವನೂ, ಚಂದ್ರನನ್ನು ಹಣೆಯಲ್ಲಿ ಧರಿಸಿರುವವನೂ, ಸಮಸ್ತರ ಹೃದಯದಲ್ಲಿ ತೋರುವವನೂ, ಹಣೆಗಣ್ಣನೂ, ಪಂಚಬಾಣ (ಮನ್ಮಥ) ಹರನೂ, ಭಕ್ತಪಾಲಕನೂ, ಭೋಗಮೋಕ್ಷಪ್ರದನೂ, ಕೈಲಾಸಪತಿಯೂ, ಶೂಲಪಾಣಿಯೂ ಆದ ಶಂಭುವನ್ನು ನಮಸ್ಕರಿಸುವೆನು.

ವಸಿಷ್ಠನಿಗೆ ಮರಿಮಗನೂ, ಶಕ್ತಿಋಷಿಗೆ ಮೊಮ್ಮಗನೂ, ಪರಾಶರನಿಗೆ ಮಗನೂ, ಶುಕಮುನಿಗೆ ತಂದೆಯೂ, ತಪೋನಿಧಿಯೂ ಆದ ವ್ಯಾಸರನ್ನು ನಮಸ್ಕರಿಸುವೆನು.

ಇಷ್ಟದೇವತಾಧ್ಯಾನ ಸ್ತೋತ್ರ ಸಮಾಪ್ತವಾದುದು.

ಓಂ

ಶ್ರೀ ಚೌಡಾಂಬಾಯೈನಮಃ

ಮೊದಲನೆಯ ಅಧ್ಯಾಯ

ದೇವಾಂಗೋದ್ಭವ

ಕ್ಷೇತ್ರಗಳಲ್ಲಿ ಪರಮ ಪವಿತ್ರಕ್ಷೇತ್ರವಾದ ನೈಮಿಶಾರಣ್ಯದಲ್ಲಿ ತಪೋಧನರೂ, ಸತ್ಕರ್ಮಾಚರಣೆಯಲ್ಲೇ ಮನಸ್ಸುಳ್ಳವರೂ, ಅನೇಕ ಸೋಮಯಾಗಗಳನ್ನು ಮಾಡಿ ಸೋಮಯಾಜಿಗಳೆನಿಸಿದವರೂ, ಅಗ್ನಿಹೋತ್ರಿಗಳಾದವರೂ ಆದ ಶೌನಕರೇ ಮೊದಲಾದ ಋಷಿಶ್ರೇಷ್ಠರು ಲೋಕ ಕಲ್ಯಾಣಾರ್ಥವಾಗಿ ಬಹುಕಾಲ ನಡೆಯುವ ದೀರ್ಘಸತ್ರ ವೆಂಬಯಾಗವನ್ನು ಮಾಡುತ್ತಿದ್ದರು. ಇದನ್ನು ತಿಳಿದು ಇವರನ್ನು ಸಂದರ್ಶಿಸಲು ವೇದ ವ್ಯಾಸ ಮಹರ್ಷಿಯ ಶಿಷ್ಯನೂ ಮಹಾತಪಸ್ವಿಯೂ ಪರಮಜ್ಞಾನಿಯೂ ಆದ ಲೋಮಶ ನೆಂಬ ಸೂತಪುರಾಣಿಕನು ಅಲ್ಲಿಗೆ ಬಂದನು.

ಆಗ ಸತ್ರಯಾಗದಲ್ಲಿ ತೊಡಗಿದ್ದ ಶೌನಕಾದಿಗಳು ಆ ಸೂತ ಪುರಾಣಿಕನನ್ನು ನೋಡಿದೊಡನೆಯೇ ಗೌರವದಿಂದ ಎಲ್ಲರೂ ಮೇಲೆದ್ದು ಅರ್ಘ್ಯಪಾದ್ಯಾದಿಗಳನ್ನಿತ್ತು ಸತ್ಕರಿಸಿ ಅವನನ್ನು ಈ ರೀತಿ ಪ್ರಶ್ನಿಸಿದರು. ಎಲೈ ಸೂತ ಮಹರ್ಷಿಯೇ, ಈ ದೀರ್ಘಸತ್ರ ಯಾಗವು ಇನ್ನೂ ಬಹಳ ಕಾಲ ನಡೆಯಲಿರುವುದರಿಂದಲೂ ತದಂಗವಾಗಿ ನಾವು ಸತ್ಕಥಾ ಶ್ರವಣದಲ್ಲಿ ಮನಸ್ಸುಳ್ಳವರಾಗಿರುವುದರಿಂದಲೂ ನೀನು ನಮ್ಮ ಮೇಲೆ ಕೃಪೆಯಿಟ್ಟು ಈ ಪುಣ್ಯಕಥೆಯನ್ನು ನಮಗೆ ಸವಿಸ್ತಾರವಾಗಿ ಅಪ್ಪಣೆ ಕೊಡಿಸು.

ಮಹಾಪ್ರಾಜ್ಞನಾದ ಸೂತ ಮಹರ್ಷಿಯೇ, ಈ ಲೋಕದಲ್ಲಿ ಬ್ರಾಹ್ಮಣ್ಯವನ್ನುಂಟು ಮಾಡುವ ಯಜ್ಞೋಪವೀತ (ಬ್ರಹ್ಮಸೂತ್ರ) ಹಾಗೂ ಸಮಸ್ತರ ಮಾನಸಂರಕ್ಷಕವಾದ ವಸ್ತ್ರದ ನಿರ್ಮಾಪಕನು ಯಾರು? ಅವನು ಹೇಗೆ ಜನಿಸಿದ? ಆ ಮಹಾತ್ಮನ ದಿವ್ಯ ಚರಿತ್ರೆಯನ್ನು ನಮಗೆಲ್ಲರಿಗೂ ಬೋಧಿಸುವವನಾಗೆಂದು ಕೈಮುಗಿದು ಕೇಳಿಕೊಂಡರು. ಅದಕ್ಕೆ ಲೋಮಶನು ಎಲೈ ಶೌನಕಾದಿ ಮುನಿಗಳಿರಾ, ನೀವು ಯೋಗ್ಯಕಾಲದಲ್ಲಿ ಆ ಮಹಾಮಹಿಮನ, ಪುಣ್ಯಪುರುಷನ ಕಥೆಯನ್ನು ಕೇಳಲಪೇಕ್ಷೆಪಟ್ಟಿರುವಿರಿ, ಸಾಧು, ಸಾಧು, ಆತನೇ ದೇವಾಂಗನು. ಆತನ ದಿವ್ಯಚರಿತ್ರೆಯು ವ್ಯಾಸೋಕ್ತವಾದ ಬ್ರಹ್ಮಾಂಡ ಪುರಾಣದಲ್ಲಿ ಅಂತರ್ಗತವಾಗಿದ್ದು ಅದನ್ನು ನನಗೆ ತಿಳಿದಮಟ್ಟಿಗೆ ಯಥಾ ರೀತಿಯಾಗಿ ಹೇಳುವೆನು, ತಾವು ನಿರ್ಮಲ ಮನಸ್ಸಿನಿಂದ ಕೂಡಿದವರಾಗಿಯೂ, ಶ್ರದ್ಧಾಭಕ್ತಿ ಗಳಿಂದಲೂ, ಸಾವಧಾನದಿಂದಲೂ ಆಲಿಸಿ ಎಂದು ಹೇಳಲುಪಕ್ರಮಿಸಿದನು.

ಎಲೈ ಶೌನಕಾದಿಗಳಿರಾ, ಪೂರ್ವದಲ್ಲಿ ನಾರದ ಮಹರ್ಷಿಯು ಸತ್ಯಲೋಕಕ್ಕೆ ಹೋಗಿ ಬ್ರಹ್ಮನನ್ನು ನೋಡಿ ನಮಸ್ಕರಿಸಿ, ಲೋಕಾನುಗ್ರಹಕ್ಕಾಗಿ ಈ ರೀತಿ ನುಡಿದನು. ಯಾರ ಆಜ್ಞೆಯಿಂದ ಬ್ರಹ್ಮ ವಿಷ್ಣು ರುದ್ರರು ಜಗತ್ತಿನ ಉತ್ಪತ್ತಿ ಸ್ಥಿತಿ ಲಯಗಳಿಗೆ ಕಾರಣ ಕರ್ತರಾದರೋ ಆ ಆತ್ಮ ರೂಪಿಯೂ ಮಂಗಳಕರನೂ ಆದ ಆ ಪರಮಾತ್ಮನನ್ನು ನಮಸ್ಕರಿಸಿ, ಎಲೈ ಪಿತಾಮಹನೇ, ಯಾರ ಚರಿತ್ರೆಯು ಲೋಕದಲ್ಲಿ ಅತ್ಯಂತ ಪುಣ್ಯ ಕರವಾದುದೋ ಸರ್ವಪಾಪನಾಶಕವಾದುದೋ ಶುಭಕರವಾದುದೋ ಮತ್ತು ಯಾವುದರ ಶ್ರವಣದಿಂದ ಸಮಸ್ತ ಪ್ರಾಣಿಗಳೂ ಕೃತಕೃತ್ಯರಾಗುವರೋ ಅಂತಹ ಚರಿತ್ರೆಯನ್ನು ನನಗೆ ಹೇಳೆಂದು ಪ್ರಾರ್ಥಿಸಿದನು. ಅದಕ್ಕೆ ಬ್ರಹ್ಮನು ಎಲೈ ನಾರದನೇ, ರಹಸ್ಯ ವಾದುದೂ, ಸಂತೋಷಜನಕವಾದುದೂ, ಪವಿತ್ರವಾದುದೂ, ಪಾಪನಾಶಕವಾದುದೂ ಆದ ದೇವಾಂಗನ ಚರಿತ್ರೆಯನ್ನು ಹೇಳುವೆನು ಕೇಳು. ಪುರಾತನವಾದುದೂ, ಮಹಾ ದೇವನ ಮಹಾತ್ಮ್ಯವನ್ನು ಪ್ರತಿಪಾದಿಸುವಂತಹುದೂ, ಅತ್ಯಂತ ಪುಣ್ಯಕರವೂ ಆದ ದೇವಾಂಗನ ಚರಿತ್ರೆಯನ್ನು ಕೇಳಿ ಕೃತಕೃತ್ಯನಾಗು.

ಸರ್ವವ್ಯಾಪಿಯೂ, ಸುಖದಾಯಕನೂ, ಸಚ್ಚಿದಾನಂದಸ್ವರೂಪಿಯೂ, ಶಾಶ್ವತನೂ, ಸರ್ವಲೋಕೇಶನೂ, ಪರಾತ್ಪರನೂ, ಅಪ್ರಮೇಯನೂ, ದುರ್ಧರ್ಷನೂ, ನಿರ್ಗುಣನೂ, ನಿರುಪದ್ರವನೂ ಆದ ಮಹಾದೇವನು ಒಂದಾನೊಂದು ಸಮಯದಲ್ಲಿ ಪ್ರಪಂಚವನ್ನು ಸೃಷ್ಟಿಸಲಿಚ್ಛಿಸಿದನು. ಆತನ ಇಚ್ಛಾಮಾತ್ರದಿಂದಲೇ ತ್ರಿಗುಣಾತ್ಮಿಕ ಳಾದ ಶಕ್ತಿಯು ಆವಿರ್ಭವಿಸಿದಳು. ಆ ಯೋಗಿನಿಯಾದ, ಪ್ರಕಾಶಮಾನಳಾದ, ಜಗದು ದ್ಧಾರಕಳಾದ, ಪೂಜ್ಯಳಾದ ಆದಿಶಕ್ತಿಯಾದ ಆಕೆಯ ರಜೋಗುಣದಿಂದ ನಾನು ಜನಿಸಿದೆನು. ಆಕೆಯ ಸತ್ವಗುಣದಿಂದ ಜಗತ್ಪ್ರಭುವಾದ ನಾರಾಯಣನೂ, ತಮೋಗುಣ ದಿಂದ ಮಹಾಬಲಿಷ್ಠನಾದ ಕಾಲರುದ್ರನೂ ಪ್ರಾದುರ್ಭವಿಸಿದರು ಎಂದನು. ಅದಕ್ಕೆ ನಾರದನು ಬ್ರಹ್ಮನನ್ನು ಕುರಿತು, ದೇವದೇವನೂ ಜಗತ್ಸ್ವಾಮಿಯೂ ಪರಮೇಷ್ಠಿಯೂ ಆದ ಪಿತಾಮಹನೇ ನೀನು ಪ್ರಕೃತಿ ಸ್ವರೂಪಳಾದ ಆ ಚಿಚ್ಛಕ್ತಿಯಿಂದ ಜನಿಸಿ ಈ ಪ್ರಪಂಚವನ್ನು ಹೇಗೆ ಸೃಷ್ಟಿಸಿದೆ ? ಎಂಬುದನ್ನು ವಿಸ್ತಾರವಾಗಿ ಹೇಳೆನಲು, ಬ್ರಹ್ಮನು ನಾರದನನ್ನು ಕುರಿತು, ಎಲೈ ಬುದ್ಧಿವಂತನಾದ ಮುನಿಶ್ರೇಷ್ಠನಾದ ನಾರದನೇ, ನೀನು ಅತ್ಯಂತ ಸಮಯೋಚಿತವಾಗಿ ಕೇಳಿದೆ. ಹೇಳುವೆನು ಕೇಳು.

ಆ ರಜೋಗುಣ ವಿಶಿಷ್ಟಳಾದ ಚಿಚ್ಛಕ್ತಿಯಿಂದ ನಾನು ಜನಿಸಿದ ಮೇಲೆ ಆ ಮಹಾದೇವನನ್ನೇ ಸಚ್ಚಿದಾನಂದ ನಿಲಯ ಪರಬ್ರಹ್ಮನೆಂದು ದೃಢವಾಗಿ ನಂಬಿ ಆ ಶಂಕರನ ಅನುಗ್ರಹವನ್ನು ಪಡೆಯಲಿಚ್ಛಿಸಿ ತಪವನ್ನಾಚರಿಸಿದೆನು. ಬಹುಕಾಲ ಕಳೆದ ಮೇಲೆ ಆ ಜಗತ್ಪ್ರಭುವಾದ ಮಹಾದೇವನು ಪ್ರತ್ಯಕ್ಷನಾದನು. ಭಕ್ತವತ್ಸಲನಾದ ಸುಖ ಕರನಾದ ಪ್ರಸನ್ನನಾದ ಆ ಪರಮಾತ್ಮನನ್ನು ನೋಡಿ ನಾನು ಬಹುಭಕ್ತಿಯಿಂದ ಆನಂದ ಬಾಷ್ಪಗಳಿಂದ ಕೂಡಿದವನಾಗಿ ಈ ರೀತಿ ಸ್ತುತಿಸಿದೆನು. ದೇವದೇವನಾದ, ಪಾರ್ವತೀ

ಪತಿಯಾದ, ನೀಲಕಂಠನಾದ, ಶೂಲಪಾಣಿಯಾದ ನಿನಗೆ ನಮಸ್ಕಾರ. ನಾಗಭೂಷಣ ನಾದ, ಚಂದ್ರಮೌಳಿಯಾದ, ನಿತ್ಯನಾದ, ನಿರ್ವಿಕಾರನಾದ, ಸದಾನಂದನಾದ, ಧೀಮಂತನಾದ ನಿನಗೆ ನಮಸ್ಕಾರ. ವೇದವೇದಾಂತವೇದ್ಯನಾದ, ಆತ್ಮರೂಪಿಯಾದ ನಿನಗೆ ನಮಸ್ಕಾರ. ಎಂದು ಸ್ತುತಿಸಿದೆನು. ಹೀಗೆ ಸ್ತುತಿಸಿದ ನನ್ನನ್ನು ಆ ಮಹಾದೇವನು ನೋಡಿ ಆದರದಿಂದ ಮಹಾಭಾಗ್ಯವಂತನಾದ ಎಲೈ ಬ್ರಹ್ಮನೆ ನೀನು ಧನ್ಯನು. ನಿನ್ನ ತಪಸ್ಸಿನಿಂದ ನಾನು ಸಂತುಷ್ಟನಾಗಿರುವೆನು ನಿನ್ನಿಷ್ಟಾರ್ಥವೇನು ನುಡಿ ಅದನ್ನು ನೆರವೇರಿ ಸುವೆನೆಂದು ಅಭಯ ಕೊಟ್ಟನು. ಆಗ ನಾನು ಸಂತುಷ್ಟನಾಗಿ ಓ ದಯಾಸಿಂಧೂ, ಪುರಾಣಪುರುಷ, ಪ್ರಭೂ, ಮಹಾದೇವಾ, ಶಂಕರ, ನಿನ್ನ ಅನುಗ್ರಹದಿಂದ ನಾನು ಸೃಷ್ಟಿ ಕರ್ತನಾಗಬೇಕೆಂದು ಬಯಸುವೆನೆಂದೆನು. ಅದಕ್ಕೆ ಪರಮಾತ್ಮನು ಎಲೈ ಬ್ರಹ್ಮನೇ ನಿನ್ನ ಕೋರಿಕೆಯು ಸಿದ್ಧಿಸುವುದು. ಇಂದಿನಿಂದ ನೀನು ಚರಾಚರಾತ್ಮಕವಾದ ಪ್ರಪಂಚ ವನ್ನು ಸೃಷ್ಟಿಸಲು ಸಮರ್ಥನಾಗುವೆಯೆಂದು ವರವನ್ನು ಕರುಣಿಸಿ ಅಂತರ್ಧಾನನಾದನು.

ಆಮೇಲೆ ನಾನು ದೇವದೇವನೂ ಶೂಲಪಾಣಿಯೂ ಆದ ಆ ಪರಮಾತ್ಮನ ಅನು ಗ್ರಹದಿಂದ ಆ ಕ್ಷಣವೇ ಚರಾಚರಾತ್ಮಕವಾದ ಪ್ರಪಂಚವನ್ನು ಸೃಷ್ಟಿಸಿದೆನು. ಅನಂತರ ಸಮಸ್ತ ದೇವತೆಗಳೂ, ಅಪ್ಸರರೇ ಮೊದಲಾದ ಸಮಸ್ತ ಪ್ರಜೆಗಳೂ ಹುಟ್ಟಿದರು. ಇವರೆ ಲ್ಲರೂ ಜನ್ಮದಾರಭ್ಯ ವಸ್ತ್ರಹೀನರಾಗಿ, ದಿಗಂಬರರಾಗಿ, ಸರ್ವಾವಯಗಳು ಪ್ರಕಟ ವಾಗಿದ್ದು, ಲಜ್ಜಾಹೀನರಾಗಿ ಸಂಚರಿಸುತ್ತಿದ್ದರು. ಕೆಲವರು ಕೇಶಗಳಿಂದಲೂ, ಕೆಲವರು ಮರದ ತೊಗಟೆಗಳಿಂದಲೂ, ಕೆಲವರು ಎಲೆಗಳಿಂದಲೂ ತಮ್ಮ ಮಾನ ಮುಚ್ಚಿಕೊಂಡು ನಾಚಿಕೆ ಇಲ್ಲದೆ ವರ್ತಿಸುತ್ತಿದ್ದರು. ಇವರೆಲ್ಲರ ಈ ವರ್ತನೆಯನ್ನು ನೋಡಿ ನಾನು ಪರಿತಾಪದಿಂದ ಸಮಸ್ತ ಜನರ ಮಾನ ಸಂರಕ್ಷಣೆಗಾಗಿ ವಸ್ತ್ರ ನಿರ್ಮಾಣ ಕಾರ್ಯವನ್ನು ತಿಳಿಯಲಿಚ್ಛೆಯುಳ್ಳವನಾಗಿ ಕೈಲಾಸದಲ್ಲಿರುವ ಪಾರ್ವತೀಪತಿಯಾದ ಪರಮೇಶ್ವರನ ಬಳಿಗೆ ಹೋದೆನು.

ಅಲ್ಲಿ ವಜ್ರಸಿಂಹಾಸನರೂಢನಾಗಿದ್ದು ಕೇಶ (ಕೂದಲು), ತೊಗಟೆ, ಎಲೆಗಳನ್ನೇ ವಸ್ತ್ರವನ್ನಾಗುಳ್ಳ ಪ್ರಮಥ ಗಣಗಳೂ, ದೇವ, ಗಂಧರ್ವ, ಯಕ್ಷ, ರಾಕ್ಷಸ, ಕಿನ್ನರ, ಗರುಡ, ಸಿದ್ಧ, ಚಾರಣರಿಂದಲೂ, ನಾಗರು, ವಿದ್ಯಾಧರರು, ಆದಿತ್ಯರು, ವಸುಗಳು, ಮತ್ತು ಉಗ್ರಮೂರ್ತಿಗಳಾದ ರುದ್ರರಿಂದಲೂ ಸೇವ್ಯ ಮಾನನಾದ ಪರಮ ಮಂಗಳ ನಾದ, ಅವಿನಾಶಿಯಾದ ಆ ಪರಮಾತ್ಮನನ್ನು ಕಂಡು ಸಂತೋಷಭರಿತನಾಗಿ ನಮಸ್ಕರಿಸಿ ಬಹು ಭಕ್ತಿಯಿಂದ ಸಕಲ ಲೋಕ ಸುಖದಾಯಕನಾದ ಶಂಕರನನ್ನು ಕುರಿತು ಎಲೈ ದೇವದೇವನಾದ ಜಗದ್ರೂಪಿಯಾದ ಶಂಕರನೇ ನಿನಗೆ ನಮಸ್ಕಾರ. ಜ್ಞಾನಗಮ್ಯನಾದ, ನೀಲಕಂಠನಾದ, ಶಂಭುವಾದ, ಪುರಾತನನಾದ, ನಿತ್ಯನಾದ, ನಿರಾತಂಕನಾದ ಪರಮಾತ್ಮನೇ ನಿನಗೆ ನಮಸ್ಕಾರವೆಂದು ವಿನಮ್ರತೆಯಿಂದ ಸ್ತುತಿಸಿದೆನು. ಆಗ ಶಂಕರನು ಈ ರೀತಿಯಾಗಿ ಸ್ತುತಿಸಿದ ನನ್ನನ್ನು ನೋಡಿ ಚತುರಾನನನೇ ನಿನಗೆ ಕ್ಷೇಮವೇ, ನಿನ್ನಿಂದ

ಸೃಷ್ಟಿಸಲ್ಪಟ್ಟ ಜಗತ್ತಿಗೆ ಕ್ಷೇಮವೇ, ನಿನ್ನಿಂದ ನಿರ್ಮಾಣವಾದ ಚರಾಚರಾತ್ಮಕವಾದ ಈ ಜಗತ್ತಿನಲ್ಲಿ ದೇವತೆಗಳೂ ಪ್ರಜೆಗಳೂ ಚಿತ್ರಬೆಯಾಗಿರುವುದರಿಂದ ಬಹು ಹೇಯರಾಗಿ ಕಾಣುತ್ತಾರೆ. ಆದುದರಿಂದ ನೀನು ಅವರ ಮಾನಸಂರಕ್ಷಣೆಗಾಗಿಯೂ ಅಲಂಕಾರ ಕ್ಕಾಗಿಯೂ, ಹೊದ್ದುಕೊಳ್ಳುವುದಕ್ಕಾಗಿಯೂ ವಸ್ತ್ರ ನಿರ್ಮಾಣ ಕರ್ತೃವನ್ನು ಸೃಷ್ಟಿಸೆಂದನು. ಆಗ ನಾನು ನನ್ನ ಮನಸ್ಸಿನಲ್ಲಿದ್ದುದನ್ನೇ ಆ ಭಗವಂತನು ಹೇಳಿದುದನ್ನು ಕೇಳಿ ಆ ಶಂಕರನನ್ನು ನೋಡಿ ಅಂಜಲೀ ಬದ್ಧನಾಗಿ ಎಲೈ ಮಹಾದೇವ ಜಗನ್ನಾಥಾ, ನೀಲಕಂಠ, ದಯಾನಿಧೇ ಚಂದ್ರಶೇಖರಾ, ಸರ್ವಜ್ಞಾ, ಸರ್ವಾಲಂಕಾರಾ ಎಂದು ಸ್ತುತಿಸಿ ಆ ಪರಮಾತ್ಮನನ್ನು ಕುರಿತು, ಎಲೈ ಶಂಭುವೇ ನಿನ್ನಾಜ್ಞೆಯಿಂದ ಈ ಸಮಸ್ತ ಜಗತ್ತನ್ನೂ ನಾನು ಸೃಷ್ಟಿಸಿರುವೆನು. ಆದರೆ ವಸ್ತ್ರ ನಿರ್ಮಾಪಕನನ್ನು ನಿರ್ಮಿಸಲು ನನ್ನಿಂದಾಗಲಿಲ್ಲ. ಸೃಷ್ಟಿಸಲಿಕ್ಕೂ, ರಕ್ಷಿಸಲಿಕ್ಕೂ, ಸಂಹರಿಸಲಿಕ್ಕೂ ನೀನೇ ಸಮರ್ಥನು. ನಿನ್ನ ಕಿಂಕರನಾದ ನನಗೆ ಆ ವಸ್ತ್ರ ಕರ್ತೃವನ್ನು ಸೃಷ್ಟಿಸುವುದು ಅಸಾಧ್ಯವೆಂದು ನುಡಿದೆನು. ಆಗ ಪರಮಾತ್ಮನು ನನ್ನನ್ನು ನೋಡಿ ಎಲೈ ಬ್ರಹ್ಮನೇ ಇದೇನಾಶ್ಚರ್ಯ ವಿಶ್ವವನ್ನು ನಿರ್ಮಿಸಿದ ನಿನಗೆ ವಸ್ತ್ರ ನಿರ್ಮಾಪಕನೊಬ್ಬನನ್ನು ನಿರ್ಮಿಸುವುದೊಂದು ಅಸಾಧ್ಯ ಕಾರ್ಯವೇ ? ಈ ರೀತಿ ಏಕೆ ನುಡಿಯುವೆ ಎಂದನು. ನಾನು ಮತ್ತೆ ಪಾರ್ವತೀಪತಿಯಾದ ಆ ಭಗವಂತನನ್ನು ಪ್ರಾರ್ಥಿಸಿ ಅಮೃತ ಸ್ವರೂಪಿಯಾದ ಎಲೈ ಭಗವಂತನೇ ಸರ್ವಜ್ಞನಾದ ನಿನಗೆ ಹೇಳುವುದೇನಿದೆ ? ನನಗೆ ಸಾಧ್ಯಾಸಾಧ್ಯವಾದವು ಗಳೆಲ್ಲವನ್ನು ಸರ್ವಜ್ಞನಾದ ನೀನೇ ಬಲ್ಲೆ. ಸಮಸ್ತ ದೇವತೆಗಳಿಗೂ ಪೂರ್ವ ಸೃಷ್ಟಿಯಲ್ಲಿ ವಸ್ತ್ರ ಪ್ರದಾನ ಮಾಡಿದ ಮನುವು ನಿನ್ನಲ್ಲಿಯೇ ಐಕ್ಯ ಹೊಂದಿರುವನು. ಆತನ ಹೊರತು ಬೇರೊಬ್ಬರು ವಸ್ತ್ರ ನಿರ್ಮಿಸಲು ಸಮರ್ಥರಲ್ಲ. ಆದುದರಿಂದ ಜಗತ್ತು ಭೂ ಸ್ವರ್ಗಾದಿ ಸಮಸ್ತ ಲೋಕಗಳಲ್ಲಿ ವಸ್ತ್ರಗಳನ್ನು ನಿರ್ಮಿಸಲು ನೀನೇ ಶಕ್ತನಲ್ಲದೆ, ಅದು ಅನ್ಯರಿಂದ ಅಸಾಧ್ಯ ಎಂದು ಬಿನ್ನವಿಸಿದೆನು. ಎಲೈ ಪುತ್ರನೇ ಆಗ ಶಿವನು ಪ್ರಸನ್ನನಾಗಿ ತಾನು ಧ್ಯಾನಾಸಕ್ತನಾಗಲು ಕ್ಷಣಕಾಲ ಆ ಶಂಭು ನಿಲಯವು ಸ್ತಬ್ಧವಾಯಿತು. *

---

* ಈ ರೀತಿ ಧ್ಯಾನಿಸಲಾಗಿ ಆ ಶಂಭುವಿನ ಸಹಸ್ರಾರ ಕಮಲ ಮಧ್ಯದಲ್ಲಿ ಅಧಿಷ್ಠಾನ ನಾಗಿದ್ದ ದೇವಲ ಪರಬ್ರಹ್ಮನು ಶಿವನನ್ನು ಕುರಿತು ತನ್ನನ್ನು ಧ್ಯಾನಿಸಿದ ಕಾರಣವನ್ನು ಕೇಳಿದನು. ಅದಕ್ಕೆ ಶಿವನು ದೇವಲ ಪರಬ್ರಹ್ಮನನ್ನು ಕುರಿತು ಎಲೈ ಪ್ರಭುವೇ, ಚಿಜ್ಜ್ಯೋತಿ ಸ್ವರೂಪಿಯೇ, ಸರ್ವಮಂಗಳ ಕಾರಣನೇ, ಅಜ ಹರಿಹರರ ನಿಯಾಮಕನೇ, ದೇವತೆಗಳೆಲ್ಲರೂ ವಸ್ತ್ರವಿಹೀನರಾಗಿ, ಲಜ್ಜಾಹೀನರಾಗಿ, ದಿಗಂಬರರಾಗಿ ಮಾನಾಭಿ ಮಾನಗಳ ಪರಿವೆ ಇಲ್ಲದವರಾಗಿ ವರ್ತಿಸುತ್ತಿರುವುದರಿಂದಲೂ, ಬ್ರಾಹ್ಮಣ್ಯ ಸಂಪಾದನೆ ಗಾಗಿಯೂ, ಸಮಸ್ತರ ಮಾನಸಂರಕ್ಷಣೆಗಾಗಿಯೂ ನೀನು ಸೂತ್ರವಸ್ತ್ರಗಳನ್ನು ನಿರ್ಮಿಸಿ ಕೊಟ್ಟು ಜಗತ್ತನ್ನು ಉದ್ಧರಿಸಬೇಕೆಂದು ಪ್ರಾರ್ಥಿಸುತ್ತೇನೆಂದು ಹೇಳಿದನು. ಅದಕ್ಕೆ



ಶ್ರೀ ಮಹಾಕೈಲಾಸವಾಸಿ ಶಿವಫಾಲ ನೇತ್ರೋದ್ಭವ ಶ್ರೀ ದೇವಾಂಗ ಮಹಾಋ

ಚಿತ್ರ: ದೇವಾಂಗಮತ ಪ್ರಕಾಶಿಕೆ ಕೃಪೆಯಿಂದ

ಈ ರೀತಿ ಧ್ಯಾನಾಸಕ್ತನಾದ ಆ ಪರಮಾತ್ಮನಿಂದ ಒಂದಾನೊಂದು ಮಹತ್ತರವಾದ ಜ್ಯೋತಿಯು ಪ್ರಾದುರ್ಭವಿಸಿ ಪುರುಷಾಕಾರವನ್ನು ತಾಳಿತು. ಆ ಪುರುಷನು ಜಟಾಧಾರಿಯಾಗಿ, ವಲ್ಕಲಾಂಬರನಾಗಿ, ದಂಡ ಕಮಂಡಲುಧಾರಿಯಾಗಿ, ಮಹಾ ತೇಜಸ್ವಿಯಾಗಿ, ದರ್ಭಪಾಣಿಯಾಗಿ, ರುದ್ರಾಕ್ಷಿಗಳ ಹಾರವನ್ನು ಧರಿಸಿದವನಾಗಿ, ಕೇಯೂರ ಕಂಕಣ ಶೋಭಿತನಾಗಿ, ವಿನೀತನಾಗಿ ನಿರ್ಮಲಜ್ಞಾನಿಯಾಗಿ, ಮೇಧಾವಿಯಾಗಿ ಜಿತೇಂದ್ರಿಯನಾಗಿ, ಕೋಟಿ ಸೂರ್ಯಪ್ರಕಾಶವುಳ್ಳವನಾಗಿ, ತನ್ನ ತೇಜಸ್ಸಿನಿಂದ ದಶದಿಕ್ಕುಗಳನ್ನು ಬೆಳಗುವವನಾಗಿ, ಸರ್ವಕರ್ಮಕ್ಕೆ ಸಾಧನೀಯವಾದ ಯಜ್ಞೋಪವೀತಧಾರಿಯಾಗಿ, ಉದಾರಗುಣ ಸಂಪನ್ನನಾಗಿ, ಸತ್ಯವಾದಿಯಾಗಿ, ದೃಢವ್ರತನಾಗಿ ಚತುರನಾಗಿ, ಕುಶಲನಾಗಿ, ಕೀರ್ತಿಭೂಷಣನಾಗಿ, ನೋಡುವ ಸಮಸ್ತರನ್ನು ಆಶ್ಚರ್ಯಗೊಳಿಸುವವನಾಗಿ ಪರಮಾತ್ಮನ ದಿವ್ಯ ಸನ್ನಿಧಿಯಲ್ಲಿ ಕಂಗೊಳಿಸುತ್ತಿದ್ದನು. ಆಗ ಮಹಾದೇವನು ಸಕಲ ದೇವತೆಗಳೂ ಕೇಳುವಂತೆ, ಆ ದಿವ್ಯ ಪುರುಷನಿಗೆ ದೇವಲನೆಂದು ನಾಮಕರಣ ಮಾಡಿದನು. ಆ ದೇವಲನು ಶಂಭುವಿನ ಮುಂಭಾಗದಲ್ಲಿ ಅಂಜಲೀಬದ್ಧನಾಗಿ ನಿಂತು, ಅನಾಮಯನಾದ ಸದಾಶಿವನನ್ನು ಈ ರೀತಿ ಸ್ತುತಿಸಿದನು.

ದೇವಲ ಪರಬ್ರಹ್ಮನು ಹರನನ್ನು ಕುರಿತು ಎಲೈ ಶಂಭುವೇ, ನಾನು ಸೂತ್ರವಸ್ತ್ರಗಳನ್ನೇ ನಿರ್ಮಿಸಿ ಕೊಡಲು ಸಿದ್ಧನಾಗಿರುವೆನು. ಆದರೆ ಈಗಿನ ನನ್ನ ಸ್ಥಿತಿಯಲ್ಲಿ ಇದು ಅಸಾಧ್ಯವಾದುದರಿಂದ ನಾನು ನಿನ್ನ ಶರೀರದ ಯಾವ ಭಾಗದಲ್ಲಿ ಪ್ರಕಟವಾಗಬೇಕೆಂದು ನೀನು ಇಚ್ಛಿಸುವಿಯೋ ಆ ಭಾಗದಲ್ಲಿ ಪ್ರಕಟನಾಗಿ, ಸರ್ವರ ಬ್ರಾಹ್ಮಣ್ಯ ಸಂಪಾದನೆಗಾಗಿಯೂ, ಮಾನಸಂರಕ್ಷಣೆಗಾಗಿಯೂ ಸೂತ್ರವಸ್ತ್ರಗಳನ್ನು ನಿರ್ಮಿಸಿಕೊಡುವೆನು ಎಂದನು. ಅದಕ್ಕೆ ಶಂಭುವು ಕ್ಷಣಕಾಲ ಯೋಚಿಸಿ ಶರೀರಕ್ಕೆಲ್ಲ ಶಿರಸ್ಸು ಪ್ರಧಾನಾಂಗವಾದುದರಿಂದ ತನ್ನ ಫಾಲದಲ್ಲಿ ಪ್ರಕಟವಾಗಿ ಸಮಸ್ತರನ್ನು ಉದ್ಧರಿಸಬೇಕೆಂದು ಬೇಡಿಕೊಂಡನು. ಆಗ ದೇವಲ ಪರಬ್ರಹ್ಮನು ಶಿವನ ಹಣೆ ಮಧ್ಯವನ್ನು ಭೇದಿಸಿಕೊಂಡು ಬರಲಾಗಿ ಅದರಿಂದುಂಟಾದ ನೋವನ್ನು ತಡೆಯಲಾರದ ಶಂಭುವು ಗಟ್ಟಿಯಾಗಿ ರೋದಿಸಿದನು. ಆ ಭೀಕರ ರೋದನದಿಂದ ಸಮಸ್ತ ವಿಶ್ವವು ತಲ್ಲಣಗೊಂಡು ಸಮಸ್ತರೂ ಭಯಗೊಂಡವರಾಗಿ ಕಂಗೆಟ್ಟು ರೋದಿಸಿದರು. ಈ ರೀತಿ ಶಂಭುವು ತಾನು ರೋದಿಸಿದುದಲ್ಲದೆ ಸಮಸ್ತರೂ ರೋದಿಸುವಂತೆ ಮಾಡಿದುದರಿಂದ ಅವನಿಗೆ ರುದ್ರನೆಂದು ಹೆಸರಾಯಿತು. ಶಿವನ ಫಾಲದಿಂದ ಪ್ರಕಟನಾದ ದೇವಲನು ನೋವನ್ನು ತಾಳಲಾರದೆ ಸಂಕಟಪಡುತ್ತಿರುವ ಶಂಭುವನ್ನು ಸಂತೈಸುತ್ತಾ ಶಿವನ ಫಾಲಮಧ್ಯದಲ್ಲಿ ತಾನು ಪ್ರಕಟನಾದ ಸ್ಥಳವು ನೇತ್ರಾಕಾರವಾಗಿ ಉದ್ಬುದ್ಧವಾಗಿದ್ದು ವಿರೂಪವಾಗಿದ್ದುದರಿಂದ ಶಿವನನ್ನು ಕುರಿತು ನೀನು ಮುಂದೆ ' ವಿರೂಪಾಕ್ಷ 'ನೆಂದೂ, ' ತ್ರಿನೇತ್ರ 'ನೆಂದೂ, ' ಫಾಲನೇತ್ರ 'ನೆಂದೂ ಪ್ರಸಿದ್ಧನಾಗು. ನಿನ್ನ ಆ ಮೂರನೇ ನೇತ್ರವು ವಿಶ್ವದ ಜ್ಞಾನ ಜ್ಯೋತಿಯ ನೇತ್ರವಾಗಿ ನೀನು ಇನ್ನು ವಿಶ್ವಗುರುವಾಗಿ ವಿಖ್ಯಾತನಾಗು ಎಂದು ಆಶೀರ್ವದಿಸಿದನು.

(ದಂತ ಕಥೆ)

ದೇವದೇವನಾದ ಚಂದ್ರಶೇಖರನಾದ ನಿನಗೆ ನಮಸ್ಕಾರ, ಫಾಲನೇತ್ರನಾದ, ಕಪರ್ದಿಯಾದ, ಗಂಗಾಧರನಾದ, ನಾಗಕುಂಡಲನಾದ ನಿನಗೆ ನಮಸ್ಕಾರ. ನೀಲಕಂಠಾ, ಸರ್ಪಭೂಷಣಾ, ಖಟ್ವಾಂಗಧಾರೀ, ಶೂಲಪಾಣೀ, ಪರಮಾತ್ಮಾ ನಿನಗೆ ನಮಸ್ಕಾರ. ವಿಶಾಲವಕ್ಷನಾದ, ದಿವ್ಯನಾದ, ದೀರ್ಘ ಬಾಹುವಾದ, ಯೋಗಯೋಗೀಶ್ವರನಾದ, ಯೋಗ್ಯನಾದ, ನಿತ್ಯನಾದ, ಗಜಚರ್ಮಧಾರಿಯಾದ ನಿನಗೆ ನಮಸ್ಕಾರ. ಶುದ್ಧ ಸ್ಫಟಿಕರೂಪನಾದ, ಸೋಮಸೂರ್ಯಾಗ್ನಿನೇತ್ರನಾದ, ನಿರ್ಮಲಜ್ಞಾನದಿಂದ ತಿಳಿಯಲ್ಪಡುವವನಾದ, ಸಚ್ಚಿದಾನಂದರೂಪಿಯಾದ ನಿನಗೆ ನಮಸ್ಕಾರ. ವೇದಾಂತ ವೇದ್ಯನಾದ, ಶಂಭುವಾದ, ಪರಮಾತ್ಮನಾದ, ಯಜ್ಞಾಂಗನಾದ, ಯಜ್ಞರೂಪನಾದ, ಯಜ್ಞಕರ್ತೃವಾದ, ಅಷ್ಟಮೂರ್ತಿಯಾದ ನಿನಗೆ ನಮಸ್ಕಾರ. ಅಗ್ನಿಸ್ವರೂಪಿಯಾದ, ಪುರಾಣ ಪುರುಷನಾದ, ಪಾಪನಾಶಕನಾದ, ಸತ್ಯಸಂಧನಾದ ನಿನಗೆ ನಮಸ್ಕಾರ. ಧರ್ಮಸ್ವರೂಪಿಯಾದ, ಮೇರುಚಾಪನಾದ, ವೇದಗಳನ್ನೇ ಅಶ್ವಗಳನ್ನಾಗುಳ್ಳ, ರುದ್ರಸ್ವರೂಪಿಯಾದ, ಅಪಾರ ತೇಜಸ್ವಿಯಾದ ನಿನಗೆ ನಮಸ್ಕಾರ. ಪಶುಪತಿಯಾದ, ಕೋಟಿಸೂರ್ಯಪ್ರಭನಾದ, ಸೂಕ್ಷ್ಮರೂಪನಾದ, ಅನಂತಮೂರ್ತಿಯಾದ ನಿನಗೆ ನಮಸ್ಕಾರ. ಪಾರ್ವತೀಪತಿಯಾದ, ಮಾರಸಂಹಾರಕನಾದ, ಅಜ್ಞಾನವೆಂಬ ಕತ್ತಲೆಗೆ ಸೂರ್ಯಪ್ರಾಯನಾದ ನಿನಗೆ ನಮಸ್ಕಾರ. ಸರ್ವೇಶ್ವರನಾದ, ಸರ್ವಸ್ವರೂಪಿಯಾದ ವಿಶ್ವಮೂರ್ತಿಯಾದ, ದಕ್ಷಯಜ್ಞವಿನಾಶಕನಾದ, ನಿರ್ಮಲಾತ್ಮನಾದ ನಿನಗೆ ನಮಸ್ಕಾರ. ಭಕ್ತಪರಾಧೀನನಾದ, ಧೀರನಾದ, ಶಾಂಬರೀಮಾಯಾಯುಕ್ತನಾದ, ಮಾಯಾ ರಹಿತನಾದ, ಪವಿತ್ರನಾದ, ಸರ್ವರಕ್ಷಕನಾದ ನಿನಗೆ ನಮಸ್ಕಾರ ಎಂದು ಸ್ತುತಿಸಿದನು.

ನಂತರ ಮಹಾ ದೇವನನ್ನು ಕುರಿತು ಎಲೈ ಶಂಭುವೇ ನನ್ನನ್ನು ಏಕೆ ಸ್ಮರಿಸಿದೆ? ನನ್ನಿಂದೇನಾಗಬೇಕು? ಭಕ್ತವತ್ಸಲನಾದ ಶಂಕರನೇ ನಾನು ಮಾಡಬೇಕಾದ ಕಾರ್ಯ ವೇನು? ದೇಹಧಾರಿಗಳಾದ ಸಮಸ್ತ ಪ್ರಾಣಿಗಳೂ ಸದಾ ದುಃಖವನ್ನನುಭವಿಸಬೇಕಲ್ಲದೆ ಸುಖವು ಎಂದೂ ದೊರೆಯದು. ಪಂಚಭೂತಾತ್ಮವಾದ ಈ ಜಡದೇಹವು ಪಂಚಪ್ರಾಣ ಯುಕ್ತವಾಗಿ, ದಶೇಂದ್ರಿಯಯುಕ್ತವಾಗಿ, ಮನೋಬುದ್ಧಿ ಚಿತ್ತಾಹಂಕಾರಗಳೆಂಬ ಇಪ್ಪತ್ನಾಲ್ಕು ತತ್ವಗಳನ್ನೊಳಗೊಂಡು ದೇಹವೆನಿಸುವುದು. ಇಪ್ಪತ್ತೈದನೆಯ ತತ್ವವೇ ಜೀವನು. ಅವನು ನಿತ್ಯನು, ಸನಾತನನು, ಆತನಿಗೆ ಜೀವಾತ್ಮ ಪರಮಾತ್ಮನೆಂದು ಎರಡು ಭೇದಗಳುಂಟು. ಇಪ್ಪತ್ನಾಲ್ಕು ತತ್ವಗಳಿಂದ ಒಡಗೂಡಿದ ಈ ದೇಹವನ್ನು ಅಜ್ಞಾನಿ ಯಾದವನು ದೇಹವೇ ತಾನೆಂದು ತಿಳಿಯುವನು. ಅವನು ಅಜ್ಞಾನಪಾಶದಿಂದ ಬದ್ಧನಾಗಿ ಯಾವಾಗಲೂ ದುಃಖವನ್ನನುಭವಿಸಿ ಅನಿರ್ವಾಚ್ಯವಾದ ಅಜ್ಞಾನದಿಂದ ಅವಿವೇಕವುಳ್ಳವ ನಾಗುವನು ಆ ಅವಿವೇಕದಿಂದ ಅಭಿಮಾನವೂ ಆ ಅಭಿಮಾನದಿಂದ ಕಾಮಾದಿ ಅರಿಷಡ್ವರ್ಗ ಗಳೂ ಮತ್ತು ಈರ್ಷ್ಯಾದಿ ದಶ ಗುಣಗಳೂ ಹುಟ್ಟಿದುವು. ಇವುಗಳಲ್ಲಿ ತಾನು ಕರ್ತೃವಾಗಿ ಮನೋವಾಕ್ಕಾಯಗಳೆಂಬ ತ್ರಿಕರಣಗಳಿಂದ ತ್ರಿವಿಧ ಕರ್ಮಗಳನ್ನಾಚರಿಸಿ ಆ ಕರ್ಮವು ತೀರುವವರೆಗೂ ಅದರ ಫಲವನ್ನು ಅನುಭವಿಸಬೇ ಬೇಕಾಗುವುದು. ಅದುದರಿಂದ

ಸಂಸಾರವೆಂಬ ಮಹಾಸಾಗರದಲ್ಲಿ ಮುಳುಗಿದ ದೇಹಿಗೆ ಅನಿವಾರ್ಯವಾದ ತ್ರಿವಿಧ ಕರ್ಮಗಳಿಂದ ಪಾರವೇ ಕಾಣುವುದಿಲ್ಲ. ಇನ್ನು ಅದನ್ಯವಾದ ಕರ್ಮವನ್ನು ಅನುಭವಿಸುವ ಪ್ರಾಣಿಗೆ ಸುಖವು ಎಂದೂ ದೊರೆಯದು. ಈ ಹೇಯವಾದ ದೇಹವನ್ನು ಧರಿಸಿರಲು ನಾನು ಹೇಗೆತಾನೆ ಇಷ್ಟಪಡಲಿ ? ಆದರೂ ಚಿಂತೆಯಿಲ್ಲ. ನನ್ನನ್ನು ಯಾವ ಕಾರ್ಯಕ್ಕಾಗಿ ಆಹ್ವಾನಿಸಿದೇ ? ನನ್ನಿಂದೇನಾಗಬೇಕು ? ಎಂದು ದೇವಲನು ಪರಮಾತ್ಮನನ್ನು ಪ್ರಶ್ನಿಸಿದನು. ಇದನ್ನು ಕೇಳಿ ಫಾಲಲೋಚನನಾದ ಪರಮಾತ್ಮನು ಗಾಂಭೀರ್ಯದಿಂಡ ಕೂಡಿದ ದೇವಲನನ್ನು ಸಮಾಧಾನಗೊಳಿಸುತ್ತಾ, ಎಲೈ ಭಾಗ್ಯವಂತನಾದ ನಿರ್ದೋಷಿಯಾದ ದೇವಲನೇ, ನೀನು ಈ ವಿಷಯದಲ್ಲಿ ಸ್ವಲ್ಪವೂ ಯೋಚಿಸಬೇಡ. ಸುವ್ರತನಾದ ಎಲೈ ದೇವಲನೇ, ಲೋಕೋಪಕಾರಕ್ಕಾಗಿಯೇ, ನಾನು ನಿನ್ನನ್ನು ಸೃಷ್ಟಿಸಿರುವೆನು. ಆರು ಜನ್ಮಗಳನ್ನು ತಾಳಿ ದಶದಿಕ್ಕುಗಳಲ್ಲಿ ನಿನ್ನ ಕೀರ್ತಿಯನ್ನು ವಿಸ್ತಾರವಾಗಿ ಹರಡು. ಏಳನೆಯ ಜನ್ಮದಲ್ಲಿ ನನ್ನಲ್ಲೇ ಐಕ್ಯಗೊಳ್ಳುವೆ. ನೀನು ಏನೂ ಚಿಂತಿಸಬೇಡ. ಎಲೈ ಮುನಿಪುಂಗವನಾದ ದೇವಲನೇ, ಪ್ರಕೃತದಲ್ಲಿ ನಾನು ಹೇಳುವುದನ್ನು ಕೇಳು.

ಪೂರ್ವದಲ್ಲಿ ವೇದಗಳು ನನ್ನಿಂದ ಹುಟ್ಟುವಾಗಲೇ ಅವುಗಳೊಡನೆ ಜಗತ್ತಿನ ಅಲಂಕಾರಕ್ಕೆ ಕಾರಣಗಳಾದ ತಂತುಗಳು ಜನಿಸಿದವು. ಅಂದಿನಿಂದ ಈವರೆವಿಗೂ ತಂತುಗಳು ವಿಷ್ಣುವಿನ ನಾಭಿ ಕಮಲದಲ್ಲಿರುವುವು. ಆದುದರಿಂದ ನೀನು ಅವುಗಳಲ್ಲಿ ಆಸಕ್ತಿಯುಳ್ಳವನಾಗಿ ವಿಷ್ಣುವಿನ ಬಳಿಗೆ ಹೋಗಿ ಆ ತಂತುವನ್ನು ಪಡೆ. ನಿನ್ನ ಕೌಶಲ್ಯದಿಂದ ದಿವ್ಯವಸ್ತ್ರಗಳನ್ನು ಆ ತಂತುಗಳಿಂದ ನೇಯ್ದು, ಆ ವಸ್ತ್ರಗಳನ್ನು ಸಮಸ್ತರಿಗೂ ಪ್ರೀತಿ ಪೂರ್ವಕವಾಗಿ ಕೊಟ್ಟು ಅವರ ಅಭಿಮಾನವನ್ನು ರಕ್ಷಿಸಿ ಕೀರ್ತಿವಂತನಾಗು. ದೇವತೆಗಳಿಗೆ ವಸ್ತ್ರಗಳನ್ನು ಕೊಟ್ಟು ಅವರ ಅಂಗಗಳನ್ನು ಅಲಂಕರಿಸು. ಇದರಿಂದ ಎಲೈ ದೇವಲನೇ ನೀನು ದೇವಾಂಗನೆಂಬ ನಾಮದಿಂದ ಯಶೋವಂತನಾಗು ಎಂದು ಪರಮಾತ್ಮನು ಅಜ್ಞಾಪಿಸಿದನು. ಆಗ ಮುನಿಪುಂಗವನಾದ ದೇವಲನು ಅಂಜಲೀ ಬದ್ಧನಾಗಿ ಭಕ್ತಿಯಿಂದ ಕರ್ತವ್ಯಪರನಾಗಿ ಸಾಂಬಶಿವನನ್ನು ಕುರಿತು ದೇವದೇವನಾದ, ಜಗತ್ಪತಿಯಾದ, ಪಾರ್ವತೀ ವಲ್ಲಭನಾದ, ದಯಾನಿಧಿಯಾದ ಮಹಾದೇವನೇ ನನ್ನ ಕರ್ತವ್ಯವನ್ನು ತಿಳಿಸು. ನಾನು ಯಾವ ದೇಶದಲ್ಲಿರಬೇಕು ? ಯಾವ ಪಟ್ಟಣದಲ್ಲಿ ವಾಸಿಸಬೇಕು? ಮುಂದೆ ನನ್ನ ವಂಶದಲ್ಲಿ ಎಂತಹವರು ಜನಿಸುವರು ? ಅವರ ನಡೆನುಡಿ ವರ್ತನೆಗಳು ಹೇಗೆ? ಈ ಎಲ್ಲವನ್ನು ಕೃಪೆಮಾಡಿ ಅಪ್ಪಣೆ ಕೊಡಬೇಕೆಂದನು. ಅದಕ್ಕೆ ಪರಮಾತ್ಮನು ಎಲೈ ದೇವಲನೇ, ನಿನ್ನ ಮುಂದಿನ ಕರ್ತವ್ಯವನ್ನು ಹೇಳುತ್ತೇನೆ ಕೇಳು.

ನವರತ್ನಗಳಿಗೆ ನೆಲೆಯಾದ ಸರ್ವಭೋಗಾಶ್ರಯವಾದ ಅನೇಕ ಓಷಧಿಗಳಿಂದೊಡಗೂಡಿದ, ನಾನಾ ವೃಕ್ಷ ಸಮೂಹದಿಂದ ಕೂಡಿದ, ಅಸಂಖ್ಯಾತ ಪರ್ವತಗಳಿಂದ ಕೂಡಿದ, ನಕ್ಷತ್ರಮಂಡಲದಿಂದ ಆವೃತವಾದ, ಗಂಗಾದಿ ಮಹಾನದಿಗಳಿಂದ ಕೂಡಿದ,

ಪರಿಪೂರ್ಣವಾದ, ಸಮುದ್ರವೇ ಒಡ್ಯಾಣವಾಗುಳ್ಳ ಸಪ್ತದ್ವೀಪಸಂಯುಕ್ತವಾದ, ನಗಸಮೂಹ ದಿಂದ ಕೂಡಿದ ಈ ಪೃಥ್ವಿಯಲ್ಲಿ ಜಂಬೂದ್ವೀಪವಿರುವುದು. ಆ ಜಂಬೂದ್ವೀಪದಲ್ಲಿ ಸಮಸ್ತ ದೇವತೆಗಳಿಗೆ ಆವಾಸಸ್ಥಾನವಾದ ದತ್ತೂರಪುಷ್ಪ ಸದೃಶವಾದ, ಸುವರ್ಣಮಯ ವಾದ, ಶುಭಕರವಾದ ಮೇರುಪರ್ವತವಿದೆ. ಆ ಮೇರು ಪರ್ವತದೆತ್ತರ ಮೂವತ್ತೆರಡು ಲಕ್ಷಗಾವುದವಿದ್ದು ಹದಿನಾರುಲಕ್ಷಗಾವುದ ಪಾತಾಳಕ್ಕಿಳಿದಿರುವುದು. ಆ ಮೇರು ಪರ್ವತದ ದಕ್ಷಿಣ ಭಾಗದಲ್ಲಿ ಭರತಖಂಡವಿದೆ ಆ ಭರತ ಖಂಡದಲ್ಲಿ ಸರ್ವಸುಖಕ್ಕೆ ನೆಲೆಯಾದ ನಗರವೆಂಬ ದೇಶವಿದೆ. ಆ ದೇಶದಲ್ಲಿ ಬಹು ವಿಸ್ತಾರವಾದ, ಅಮರಾವತಿಗೆ ಸಮಾನವಾದ, ಸುವರ್ಣಮಯ ಕೋಟೆ, ಕೊತ್ತಳಗಳಿಂದೊಪ್ಪುವ ಅಪಾರ ಹರ್ಷ ವನ್ನೀಯುವ ವಜ್ರ ವೈಡೂರ್ಯಾದಿ. ರತ್ನಗಳಿಂದ ತುಂಬಿದ ಗೃಹಗಳಿಂದೊಪ್ಪುವ ಆಮೋದ ಪಟ್ಟಣವಿದೆ. ಎಲೈ ದೇವಲನೇ ಆ ಪಟ್ಟಣದಲ್ಲಿ ನೀನು ಪಟ್ಟಾಭಿಷಿಕ್ತನಾಗಿ, ರಾಜ್ಯವನ್ನಾಳು ನಿನ್ನ ವಂಶವರ್ಧನೆಯನ್ನು ಕೇಳಿದೆಯಲ್ಲಾ ? ಅದನ್ನು ಹೇಳುತ್ತೇನೆ ಕೇಳು. ನಿನ್ನ ವಂಶದವರು ದಾತೃಗಳಾಗಿ, ಸತ್ಯಸಂಧರಾಗಿ, ಪರೋಪಕಾರ ನಿರತರಾಗಿ, ಬುದ್ಧಿವಂತರಾಗಿ, ಸದಾಚಾರ ಸಂಪನ್ನ ರಾಗಿ, ದೇವಬ್ರಾಹ್ಮಣರಾಗಿ, ವಿಶ್ವಾಸಪರರಾಗಿ, ವೀರ್ಯವಂತರಾಗಿ, ಕುಶಲಕರ್ಮಿಗಳಾಗಿ ಇರುವರು. ಇನ್ನು ನೀನು ಪ್ರಕೃತ ಕಾರ್ಯಪರನಾಗಿ, ಶೀಘ್ರವಾಗಿ, ಮಹಾ ತೇಜಸ್ವಿಯಾದ, ವಿಷ್ಣುವಿನ ಬಳಿಗೆ ಹೋಗಿ, ಆ ವಿಷ್ಣುವಿನಲ್ಲಿರುವ ತಂತುಗಳನ್ನು ಪಡೆದು, ದಿವ್ಯ ವಸ್ತ್ರಗಳನ್ನು ನೇಯ್ದು ಸಮಸ್ತ ದೇವತೆಗಳನ್ನು ಅಲಂಕರಿಸು ಎಂದನು. ಈ ರೀತಿ ಹೇಳಿದ ಪರಮಾತ್ಮನಿಗೆ ದೇವಲನು ಪ್ರಣಾಮಮಾಡಿ ಸಂತೋಷದಿಂದ ವಿಷ್ಣುವನ್ನು ನೋಡಲು ಕ್ಷೀರಸಾಗರಕ್ಕೆ ತೆರಳಲು ಸಿದ್ಧನಾದನು.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿ ಬ್ರಹ್ಮ ನಾರದ ಸಂವಾದ ರೂಪ ಉತ್ತರ ಖಂಡದಲ್ಲಿ ದೇವಾಂಗೋದ್ಭವ ಎಂಬ ಮೊದಲನೆಯ ಅಧ್ಯಾಯ ಮುಗಿದುದು.

ಓಂ

ಎರಡನೆಯ ಅಧ್ಯಾಯ

ಶ್ರೀ ಚೌಡೇಶ್ವರಿ ವರ ಪ್ರಸಾದ ಮತ್ತು ರಾಕ್ಷಸೋಪಾಖ್ಯಾನ

ಹೀಗೆ ದೇವಲನು ಕ್ಷೀರಸಾಗರಕ್ಕೆ ತೆರಳಲು ಸಿದ್ಧನಾಗಿ, ಪಾರ್ವತಿಗೆ ನಮಸ್ಕರಿಸಿ, ಸರ್ವಲೋಕೇಶ್ವರಿಯಾದ ಮಂಗಳಮೂರ್ತಿಯಾದ ಎಲೈ ದೇವಿಯೇ, ನನ್ನನ್ನು ನಿನ್ನ

ಕೃಪಾದೃಷ್ಟಿಯಿಂದ ನೋಡು. ಕುತೂಹಲವಿಶಿಷ್ಟನಾಗಿ ಕ್ಷೀರ ಸಮುದ್ರಕ್ಕೆ ಹೋಗುವ ನನ್ನನ್ನು ಸದಾ ಅನುಗ್ರಹಿಸು ಎಂದು ಪ್ರಾರ್ಥಿಸಿದ ದೇವಲನನ್ನು ಪಾರ್ವತಿಯು ಕರುಣೆಯಿಂದೀಕ್ಷಿಸಿ ಆತನನ್ನು ಕುರಿತು ಎಲೈ ಸಾಧುವೇ ನೀನು ಹೊರಡು. ಸಮಯ ಬಂದಾಗ ನಾನು ಸಹಾಯ ಮಾಡುವೆನು. ನಿನಗೆ ಯಾವಾಗ ಶತ್ರುಗಳಿಂದ ತೊಂದರೆ ಯಾಗುವುದೋ ಆಗ ನನ್ನನ್ನು ಸ್ಮರಿಸು. ನಾನು ಕೂಡಲೇ ಬಂದು ನಿನ್ನ ವೈರಿಗಳೆಲ್ಲರನ್ನೂ ನಾಶಮಾಡುವೆನು. ನೀನು ಭಯಪಡಬೇಡ ಎಂದು ಹೇಳಿದಳು. ದೇವದೇವೋತ್ತಮನ ಪತ್ನಿಯಾದ ಪಾರ್ವತಿಯ ಅಭಯವನ್ನು ಪಡೆದ ದೇವಲನು ತಂತು ಸಂಗ್ರಹೇಚ್ಛೆಯಿಂದ ಕ್ಷೀರಸಾಗರಕ್ಕೆ ಹೊರಟನು.

ಎಲೈ ನಾರದನೇ ಹೀಗೆ ಹೊರಟ ಮಹಾತೇಜಸ್ವಿಯಾದ ದೇವಲನು ಕ್ಷೀರಸಾಗರದ ತೀರವನ್ನು ಸೇರಿ ಅಲ್ಲಿದ್ದ ಮನೋಹರವಾದ ಸುವರ್ಣಾಶ್ರಮವನ್ನು ಕಂಡನು. ಆ ಆಶ್ರಮವು ರಸಾಲ, ಸಾಲ, ತಕ್ಕೋಲ, ತಮಾಲ, ನಾರಿಕೇಳ, ಸಪ್ತಪರ್ಣ, ಕುರುವಕ, ಲಕುಚ, ಪನಸ, ಮೊದಲಾದ ವಿಧವಿಧಗಳಾದ ಮಹಾವೃಕ್ಷಗಳಿಂದಲೂ, ಅನೇಕ ವಿಧ ಬಳ್ಳಿಗಳಿಂದಲೂ, ಸಮುದ್ರ ತರಂಗಗಳಿಗೆ ಪ್ರತಿಬಂಧಕಗಳಾಗಿರುವ ಇನ್ನೂ ಅನೇಕ ಜಾತಿಯ ವೃಕ್ಷಗಳಿಂದಲೂ ನಿಬಿಡವಾಗಿ, ಕಿವಿಗಿಂಪಾದ ಭ್ರಮರಗಳ ಝೇಂಕಾರ ರವ ಹಾಗೂ ಕೋಗಿಲೆಯೇ ಮೊದಲಾದ ಅನೇಕ ಪಕ್ಷಿಗಳ ಕಲಕಲ ನಿನಾದಗಳಿಂದಲೂ ಕೂಡಿದ್ದ ಆ ಆಶ್ರಮದಲ್ಲಿ ತಪಸ್ಸನ್ನಾಚರಿಸಲು ನಿಶ್ಚಯಿಸಿದನು. ಆ ಮಹಾ ಘೋಷ ಯುಕ್ತವಾದ ಯಾವ ಕ್ಷೀರಸಾಗರದ ನೆಲೆಯು ವಿಂಧ್ಯಪರ್ವತಕ್ಕೆ ನಿಲುಕಲಿಲ್ಲವೋ, ಯಾವುದರ ವಿಸ್ತಾರವು ಗರುಡನಿಂದ ತಿಳಿಯಲಸಾಧ್ಯವಾಯಿತೋ, ಯಾವುದು ತಿಮಿಂಗಿಲಗಳಿಂದ ಕೂಡಿ ನೆಲದ ಭ್ರಾಂತಿಯನ್ನುಂಟುಮಾಡುವುದೋ, ಯಾವುದು ದೇವದಾನವರು ಮತ್ತೆ ತನ್ನನ್ನು ಕಡೆದಾರೆಂಬ ಭಯದಿಂದ ದಂಡೆಯಲ್ಲಿ ಬಿದ್ದ ನೊರೆ ಯಿಂದ ತನ್ನ ರಕ್ಷಣೆಗಾಗಿ ಕೋಟೆಯನ್ನು ಕಟ್ಟಲುದ್ಯುಕ್ತವಾಗಿದೆಯೋ ಎಂಬಂತೆ ಕಾಣುವುದೋ, ಮೀನುಗಳ ರೆಕ್ಕೆಗಳ ಬಡಿತದಿಂದ ಆಕಾಶಕ್ಕೆಸೆಯಲ್ಪಟ್ಟ ಆ ಸಮುದ್ರ ಜಲದ ತುಂತುರು ಹನಿಗಳು ದೇವತೆಗಳಿಂದ ತನ್ನ ಪೂಜೆಗರ್ಪಿಸಲ್ಪಟ್ಟ ಮುಕ್ತ (ಮುತ್ತು) ಗಳೆಂಬ ಪುಷ್ಪಗಳಂತೆ ತೋರುವುದೋ, ಹಿಂದಿನ ಹೊಟ್ಟೆಕಿಚ್ಚಿನಿಂದ ಅಗಸ್ತ್ಯ ನನ್ನು ಹಿಡಿಯಲು (ಬಂಧಿಸಲು) ಸಮಸ್ತ ದಿಕ್ಕುಗಳಲ್ಲೂ ತನಗೆ ಬಾಹು ಸಮಾನವಾದ ಭಯಾನಕವಾದ ಅಲೆಗಳನ್ನು ವಿಸ್ತರಿಸಿದಂತೆ ಒಪ್ಪಿ, ರಾಜಹಂಸಯುಕ್ತವಾಗಿ ಕಾಣು ವುದೋ, ಯಾವುದು ಭೀಕರವಾದ ಜಲ ಜಂತುಗಳಿಂದ ಕೂಡಿದ್ದೂ ಸಮಸ್ತ ದೇವತೆ ಗಳಿಗೆ [illegible] ಭೀಕರವಾದ ಬೇರೆ ಪ್ರಾಣಿಗಳಿಲ್ಲವೆಂಬ ಭ್ರಮೆಯನ್ನುಂಟು ಮಾಡು ವುದೋ ಅಂತಹ ಕ್ಷೀರಸಾಗರವನ್ನು ನೋಡಿ ದೇವಲನು ಬಹು ಸಂತೋಷ ಭರಿತನಾದನು.

ಹೀಗೆ ಸಂತೋಷಭರಿತನಾದ ದೇವಲನು ಉಲ್ಲಾಸಯುಕ್ತನಾಗಿ ವಿಷ್ಣುವಿನ ಅನುಗ್ರಹವನ್ನು ಪಡೆಯಲು ಸಂಕಲ್ಪಿಸಿ, ಸ್ಥಿರ ಮನಸ್ಸನಾಗಿ, ಆಚಮನಮಾಡಿ,

ಶುದ್ಧಾತ್ಮನಾಗಿ, ಯಮನಿಯಮಾದಿ ಅಷ್ಟಾಂಗ ಯೋಗಯುಕ್ತನಾಗಿ, ನಿಶ್ಚಲನಾಗಿ ಜಿತೇಂದ್ರಿಯನಾಗಿ ಅನನ್ಯಮನಸ್ಕನಾಗಿ ಕುಳಿತು ಪ್ರಸನ್ನಮುಖನಾದ, ಜಗನ್ನಿಯಾಮಕನಾದ ನಾಶರಹಿತನಾದ, ಮಹಾ ವಿಷ್ಣುವನ್ನು ಕುರಿತು ದೇವದೇವನಾದ ಭಕ್ತವತ್ಸಲನೇ ನಿನಗೆ ನಮಸ್ಕಾರ. ಕಮಲಾಕ್ಷನಾದ, ಮಧುಸೂದನನಾದ, ಲಕ್ಷ್ಮೀಪತಿಯಾದ, ಪುರುಷೋತ್ತಮನಾದ ನಿನಗೆ ನಮಸ್ಕಾರ. ಸರ್ವಲೋಕಾಧಿಪತಿಯಾದ, ಸಮಸ್ತ ಜೀವಿಗಳಿಗೆ ಆಧಾರಭೂತನಾದ, ಚತುರ್ಭುಜನಾದ, ಶಾರ್ಙ್ಗ ಧನುರ್ಧಾರಿಯಾದ ನಿನಗೆ ನಮಸ್ಕಾರ. ಕೌಸ್ತುಭರತ್ನದಿಂದಲಂಕೃತನಾದ, ಶಂಖ, ಚಕ್ರಗದಾಪಾಣಿಯಾದ, ಗರುಡವಾಹನನಾದ, ಶೇಷಶಾಯಿಯಾದ, ಲಕ್ಷ್ಮೀಪತಿಯಾದ, ಸಮಸ್ತರಿಂದ ಸೇವಿತನಾದ, ಪುಣ್ಯಮೂರ್ತಿಯಾದ, ಪಾಪನಾಶಕನಾದ, ದೈತ್ಯದರ್ಪ ಮರ್ದನನಾದ ನಿನಗೆ ನಮಸ್ಕಾರ. ವೇದ ವೇದ್ಯನಾದ, ಜ್ಞಾನಗಮ್ಯನಾದ, ಬುದ್ಧಿ ಪ್ರದಾಯಕನಾದ, ಇಂದ್ರನೀಲರತ್ನದಂತೆ ದೇಹಕಾಂತಿಯುಳ್ಳ, ದುಃಖಿತರ ದುಃಖಗಳನ್ನು ನೀಗಿಸುವವನಾದ ನಿನಗೆ ನಮಸ್ಕಾರ. ಮುಕುಂದನಾದ, ಭೋಗಮೋಕ್ಷಪ್ರದನಾದ, ಪರಬ್ರಹ್ಮಸ್ವರೂಪಿಯಾದ, ವಿರಾಡ್ರೂಪಿಯಾದ ನಿನಗೆ ನಮಸ್ಕಾರವೆಂದು ಸ್ತುತಿಸುತ್ತ ಕಠಿನ ವ್ರತಗಳಿಂದ ಘೋರವಾದ ತಪಸ್ಸನ್ನಾಚರಿಸಿದನು.

ಅವನ ತಪೋಜ್ವಾಲೆಯು ಮೂರು ಲೋಕಗಳನ್ನು ವ್ಯಾಪಿಸಿತು. ಇಂದ್ರಾದಿ ದೇವತೆಗಳು ಅವನ ತಪೋಜ್ವಾಲೆಯಿಂದ ತಲ್ಲಣಗೊಂಡು ಸ್ಥಿತಿಕರ್ತನಾದ ಮಹಾವಿಷ್ಣುವನ್ನು ಮೊರೆಹೊಕ್ಕು ದೇವಲನ ಘೋರ ತಪಸ್ಸಿನಿಂದ ಮೂರು ಲೋಕಗಳೂ ಕಂಗೆಟ್ಟಿರುವುದರಿಂದ ಲೋಕಾನುಗ್ರಹಾರ್ಥವಾಗಿ ಅವನ ಇಷ್ಟಾರ್ಥವನ್ನು ಈಡೇರಿಸಬೇಕೆಂದು ಪ್ರಾರ್ಥಿಸಿದರು. ಅವರ ಈ ಪ್ರಾರ್ಥನೆಯನ್ನು ಕೇಳಿದ ವಿಷ್ಣುವು ತಾನೂ ಸಹ ದೇವಲನ ತಪಸ್ಸನ್ನು ಮೆಚ್ಚಿಕೊಂಡಿರುವುದಾಗಿ ತಿಳಿಸಿ, ಆ ಇಂದ್ರಾದಿಗಳ ಕೋರಿಕೆಯಂತೆ ದೇವಲನ ಇಷ್ಟಾರ್ಥವನ್ನು ನೆರವೇರಿಸುವುದಾಗಿ ಅಭಯವಿತ್ತು ಅವರನ್ನು ಕಳುಹಿಸಿಕೊಟ್ಟನು. ಅನಂತರ ಇಂದ್ರನೀಲಜಲಾಗ್ರದಲ್ಲಿ ಉದಯಿಸುವ ಚಂದ್ರನ ಬೆಳದಿಂಗಳಂತೆ ಒಪ್ಪುವ ಮಂದಹಾಸವದನಾರವಿಂದನಾದ ಭಗವಾನ್ ಮಹಾವಿಷ್ಣುವು ದೇವಲನಿಗೆ ಪ್ರತ್ಯಕ್ಷನಾಗಿ ಮಹಾಭಾಗನಾದ ದೇವಲನೇ ನೀನು ಧನ್ಯ ಧನ್ಯ ಧನ್ಯ. ಜಗತ್ಕಲ್ಯಾಣಾರ್ಥವಾಗಿ ನೀನಾಚರಿಸಿದ ತಪಸ್ಸಿಗೆ ಸಂತುಷ್ಟನಾಗಿ ನಾನು ಪ್ರತ್ಯಕ್ಷನಾಗಿರುವೆನು. ಬೇಕಾದ ವರಗಳನ್ನು ಕೇಳು. ಈಗಲೇ ಕೊಡುವೆನೆಂದನು. ಈ ರೀತಿ ನಾರಾಯಣನು ನುಡಿದುದನ್ನು ಕೇಳಿ ದೇವಲನು ಬಹಳ ಹರ್ಷದಿಂದ, ದೇವದೇವನೇ, ಜಗನ್ನಾಥನೇ, ದಯಾನಿಧಿಯೇ, ಲಕ್ಷ್ಮೀಕಾಂತನೇ, ನೀನು ಪ್ರಸನ್ನನಾದುದರಿಂದ ನಾನು ಧನ್ಯನಾದೆ. ಪರಮಪುರುಷನಾದ ನಾರಾಯಣನೇ, ನಾನು ಮಹಾದೇವನಿಂದ, ವಸ್ತ್ರಗಳನ್ನು ನಿರ್ಮಿಸಲು ಆಜ್ಞಪ್ತನಾಗಿ ವಸ್ತ್ರ ನಿರ್ಮಾಣಕ್ಕಾಗಿ ಬೇಕಾಗಿರುವ, ನಿನ್ನಲ್ಲಿರುವ ತಂತುಗಳ ಯಾಚನೆಗಾಗಿ ನಿನ್ನ ಬಳಿ ಬಂದಿರುವೆನು.



ಶ್ರೀ ದೇವಾಂಗರುಷಿ ಕ್ಷೀರಾಬ್ಧಿಗೆ ಹೋಗಿ ಶ್ರೀ ಮಹಾವಿಷ್ಣುವಿನಸ್ತದಿಂದ ತಂತ್ತು ತರುವಿಕೆ.

ಚಿತ್ರ: ದೇವಾಂಗ ಮಠ ಪ್ರಕಾಶಿಕೆ ಕೃಪೆಯಿಂದ.

ಹೃಷೀಕೇಶನೇ ಆ ತಂತುಗಳನ್ನು ದಯಪಾಲಿಸಿ ನಿನ್ನ ದರ್ಶನದಿಂದ ಪಾವನನಾದ, ನನ್ನ ಮನೋರಥವನ್ನು ಈಡೇರಿಸೆಂದನು. ಹೀಗೆಂದ ದೇವಲನನ್ನು ನೋಡಿ ನಾರಾಯಣನು ಹಾಗೆಯೇ ಆಗಲೆಂದು ಅಭಯವಿತ್ತು ತನ್ನ ನಾಭಿ ಕಮಲದಲ್ಲಿದ್ದ ತಂತುಗಳನ್ನು ಅನುಗ್ರಹಿಸಿ, ಎಲೈ ದೇವಲನೇ ಜಗದುತ್ಪತ್ತಿ ಕಾಲಕ್ಕೆ ಮೊದಲೇ ಈ ತಂತುಗಳು ನಿರ್ಮಿಸಲ್ಪಟ್ಟು ಅಂದಿನಿಂದ ಈವರೆವಿಗೂ ನನ್ನಿಂದ ರಕ್ಷಿಸಲ್ಪಟ್ಟಿವೆ. ಈಗ ನಿನ್ನಿಂದ ಇವುಗಳ ಉಪಯೋಗವಾಗಬೇಕಾಗಿದೆ. ಆದುದರಿಂದ ನೀನು ಕೌಶಲ್ಯದಿಂದ ವಸ್ತ್ರಗಳನ್ನು ನಿರ್ಮಿಸಿ ಸಮಸ್ತ ದೇವತೆಗಳಿಗೆ ಕೊಟ್ಟು, ಅವುಗಳಿಂದ ಅವರನ್ನು ಭೂಷಿತರನ್ನಾಗಿ ಮಾಡಿ ಅವರ ಮಾನವನ್ನು ರಕ್ಷಿಸು. ನೀನು ಮಾಡುವ ಈ ಕಾರ್ಯಕ್ಕೆ ಮಹಾ ಮಾಯಾವಿಗಳಾದ ದೈತ್ಯರು ಮುನಿವೇಷಧಾರಿಗಳಾಗಿ ಬಂದು ನಿನಗೆ ಮೋಸ ಮಾಡುವರು. ನೀನು ಆ ದೈತ್ಯರ ವಿಷಯದಲ್ಲಿ ಬಹು ಜಾಗರೂಕನಾಗಿದ್ದು ನಿನ್ನ ಪರಾಕ್ರಮದಿಂದ ಅವರನ್ನೆಲ್ಲಾ ಕೊಂದು ಬಹಳ ಎಚ್ಚರಿಕೆಯಿಂದ ಈ ತಂತುಗಳನ್ನು ರಕ್ಷಿಸು ಎಂದನು. ಎಲೈ ನಾರದನೇ, ಪೂಜ್ಯನಾದ ವಿಷ್ಣುವು ಈ ರೀತಿ ಎಚ್ಚರಿಸಿ, ಅಪ್ಪಣೆ ಕೊಟ್ಟು, ಸಂತೋಷ ಚಿತ್ತದಿಂದ ತನ್ನ ಸುದರ್ಶನ ಚಕ್ರವನ್ನು ದೇವಲನ ರಕ್ಷಣೆಗಾಗಿ ಅವನಿಗೆ ಅನುಗ್ರಹಿಸಿದನು.

ಹೀಗೆ ದೈತ್ಯಾರಿಯಾದ ವಿಷ್ಣುವಿನಿಂದ ಅನುಗ್ರಹೀತನಾಗಿ, ಸುದರ್ಶನ ಚಕ್ರ ಪಡೆದ ದೇವಲನು ಹರುಷದಿಂದ ಜಗದ್ಗುರುವಾದ ದೇವದೇವನಾದ ವಿಷ್ಣುವಿಗೆ ಕೈ ಮುಗಿದು, ಎಲೈ ಲಕ್ಷ್ಮೀರಮಣನಾದ ನಾರಾಯಣನೇ ನೀನು ನನ್ನನ್ನು ಎಚ್ಚರಿಸಿದುದರಿಂದ ನಾನು ಅನುಗ್ರಹೀತನಾದೆನು. ನಿನ್ನ ದಯೆಯಿಂದ ವಸ್ತ್ರಗಳನ್ನು ನಿರ್ಮಿಸುವೆನು. ನಿನ್ನಪ್ಪಣೆಯಂತೆಯೇ ಸಮಸ್ತ ದೇವತೆಗಳಿಗೂ ವಸ್ತ್ರಗಳನ್ನೀಯುವೆನೆಂದು ಹೇಳಿ ಅತಿ ಭಕ್ತಿಯಿಂದ ನಮಸ್ಕರಿಸಿ, ದಿವ್ಯ ಮಂಗಳ ವಿಗ್ರಹನಾದ ಆ ನಾರಾಯಣನನ್ನು ಕಣ್ಣು ತುಂಬ ತೃಪ್ತಿ ಸಮಾಧಾನಗಳಿಂದ ಸ್ವಲ್ಪ ಕಾಲ ಎವೆಯಿಕ್ಕದೆ ಈಕ್ಷಿಸಿ ಅವನ ಆಶೀರ್ವಾದ ಅನುಗ್ರಹಗಳನ್ನು ಪಡೆದು ಜಂಬೂ ದ್ವೀಪಕ್ಕೆ ಹೊರಟನು.

ಅನಂತರ ದೇವಲನು ಜಂಬೂ ದ್ವೀಪವನ್ನು ಸೇರಿ; ಅಲ್ಲಿ ಲವಣ ಸಮುದ್ರದ ದಡದಲ್ಲಿದ್ದ ಲೋಕಕಂಟಕರಾದ ಮಾಯಾವಿಗಳಾದ ದೈತ್ಯರಿಂದ ನಿರ್ಮಿಸಲ್ಪಟ್ಟ ಕೃತ್ರಿಮ ಋಷ್ಯಾಶ್ರಮವೊಂದನ್ನು ನೋಡಿದನು. ಆ ಆಶ್ರಮವು ಸಿಹಿಮಾವು, ಪನಸ, ಬೇವು, ಬೆಳವಲ, ದತ್ತೂರ, ನೇರಳೆ, ಕಿತ್ತಳೆ, ನಿಂಬೆ, ಹಿಪ್ಪೆ ಮೊದಲಾದ ಫಲವೃಕ್ಷಗಳಿಂದಲೂ ಮಾಲತಿ, ಜಾಜಿ, ಶಿರೀಷ, ಕೇತಕಿ ಮೊದಲಾದ ಪುಷ್ಪ ಗಿಡಗಳಿಂದಲೂ ನಯನ ಮನೋಹರವಾಗಿತ್ತು. ಇಂತಹ ಮಾಯಾಶ್ರಮವನ್ನು ಕಂಡ ದೇವಲನು ಆಶ್ಚರ್ಯಭರಿತನಾಗಿ, ಈ ಆಶ್ರಮವು ಯಾರದಾಗಿರಬಹುದು. ಇದು ನನ್ನ ಮನಸ್ಸನ್ನು ಸಂತೋಷಗೊಳಿಸುತ್ತಿದೆ. ಈ ಆಶ್ರಮವನ್ನು ನಿರ್ಮಿಸಿದ ಮಹಾತ್ಮನ ತಪೋ

ಮಹಿಮೆಯು ಅಸದೃಶವಾದುವೆಂದು ಭಾವಿಸುತ್ತಾ ಆ ಆಶ್ರಮದ ಒಳಹೊಕ್ಕನು. ಆ ಆಶ್ರಮದಲ್ಲಿ ಒಬ್ಬ ದೈತ್ಯನು ಋಷಿ ವೇಷಧಾರಿಯಾಗಿ ತನ್ನಂತೆಯೇ ಕಪಟ ಋಷಿ ವೇಷಧಾರಿಗಳಾದ ಅನೇಕ ಕಪಟ ಶಿಷ್ಯರಿಂದ (ದೈತ್ಯರಿಂದ) ಸೇವಿತನಾಗಿ ಶುಚಿರ್ಭೂತನಾಗಿ ಸುಮ್ಮಸುಮ್ಮನೆಯೇ ಮಂತ್ರಗಳನ್ನು ಜಪಿಸುವವನಂತೆ ತನ್ನ ತುಟಿಗಳನ್ನು ಅಲುಗಾಡಿಸುತ್ತಾ ಜಪಮಾಲೆಯನ್ನು ತಿರುಗಿಸುತ್ತಾ ಇದ್ದು ದೇವಲನು ಆಶ್ರಮದ ಒಳಹೊಕ್ಕುದನ್ನು ಕಂಡನು. ಆ ಕಪಟಿಯು ದೇವಲನನ್ನು ನೋಡಿ ವತ್ಸಾ ನೀನಾರು? ನಿನ್ನ ಹೆಸರೇನು? ಇಲ್ಲಿಗೆ ಬರಲು ಕಾರಣವೇನು? ಎಂದು ಕೇಳಿದನು.

ಅದಕ್ಕೆ ಮುನಿಪುಂಗವನಾದ ದೇವಲನು, ಆ ಕಪಟ ಮುನಿಗೆ ನಮಸ್ಕರಿಸಿ ಅವನ ಕಪಟವನ್ನು ತಿಳಿಯದೆ ಎಲೈ ಮುನಿಶ್ರೇಷ್ಠಾ ನಾನು ಪಾರ್ವತೀಪತಿಯಾದ ಪರಮೇಶ್ವರನ ಮಾನಸಪುತ್ರನು. ನನ್ನ ಹೆಸರು ದೇವಲನು. ವಸ್ತ್ರಗಳನ್ನು ನಿರ್ಮಿಸಲು ಶಿವನು ನನಗೆ ಅಪ್ಪಣೆ ಕೊಟ್ಟಿರುವನು. ಅವನ ಅಪ್ಪಣೆಯಂತೆ ನಾನು ವಿಷ್ಣುವಿನಿಂದ ತಂತುಗಳನ್ನು ಸಂಪಾದಿಸಿಕೊಂಡು ಬಂದಿರುವೆನೆಂದನು. ಅದಕ್ಕೆ ಆ ಕಪಟ ತಪಸ್ವಿಯು ತಂತುಗಳನ್ನು ಅಪಹರಿಸಲು ಯೋಚಿಸಿ ಎಲೈ ದೇವಲ ಮುನಿಯೇ ಸಾಧು, ಸಾಧು, ಎಂದು ಹೇಳಿ! ನೀನು ಈ ದಿನ ನನ್ನ ಆಶ್ರಮದಲ್ಲಿ ವಿಶ್ರಮಿಸಿಕೊಂಡು ನಾಳೆ ಪ್ರಾತಃ ಕಾಲ ಹೋಗು ಎಂದನು. ಆ ಕಪಟ ಮುನಿಯ ಮಾತಿಗೆ ಮರುಳಾಗಿ ದೇವಲನು ಹಾಗೆಯೇ ಆಗಲೆಂದೊಪ್ಪಿ ಆ ರಾತ್ರಿ ಅಲ್ಲಿಯೇ ತಂಗಿ ನಿದ್ರಾವಶನಾದನು.

ಹೀಗೆ ನಿದ್ರಾವಶನಾದ ಆ ದೇವಲನನ್ನು ಕಂಡು ಆ ಕಪಟ ಮುನಿಯು ವಿಷ್ಣುದತ್ತವಾದ ತಂತುಗಳನ್ನು ದೇವಲನಿಂದ ಅಪಹರಿಸಲೆತ್ನಿಸಿ, ಮಧ್ಯರಾತ್ರಿಯಲ್ಲಿ ತನ್ನ ಅನುಯಾಯಿಗಳಾದ ಮಹಾ ಬಲಿಷ್ಠರಾದ ಕ್ರೂರ ರಾಕ್ಷಸರೊಡನೆ ಆ ಮಹಾ ಮುನಿಯಾದ ದೇವಲನನ್ನು ಕೊಲ್ಲಲುದ್ಯುಕ್ತನಾದನು. ಇವರ ಸನ್ನಾಹದಿಂದ ಎಚ್ಚರಗೊಂಡ ದೇವಲನು ಈ ಕುಟಿಲಾತ್ಮಕನ ಕಾಪಟ್ಯವನ್ನು ತಿಳಿದು, ಸನ್ನಾಹಗೊಂಡ ಅವರು ತನ್ನ ಮೇಲೆ ಎರಗುವಷ್ಟರಲ್ಲಿಯೇ ತನ್ನ ರಕ್ಷಣೆಗಾಗಿ ಸುದರ್ಶನ ಚಕ್ರವನ್ನು ಅವರ ಮೇಲೆ ಪ್ರಯೋಗಿಸಿದನು. ದೇವಲನಿಂದ ಪ್ರಯೋಗಿಸಲ್ಪಟ್ಟ ಸಹಸ್ರಾರು ಅರಗಳುಳ್ಳ ಸುದರ್ಶನ ಚಕ್ರವು ಕೋಟಿ ಸೂರ್ಯ ಪ್ರಕಾಶಮಾನವಾಗಿ ಹೊಳೆಯುತ್ತಾ, ಆ ದೈತ್ಯರನ್ನು ನಾಶಮಾಡತೊಡಗಲು ಆ ಚಕ್ರದಿಂದ ಛಿನ್ನ ಭಿನ್ನಾಂಗರಾದ ದೈತ್ಯರು, ಅತ್ಯಂತ ಭಯಗೊಂಡವರಾಗಿ ದಶದಿಕ್ಕುಗಳಿಗೆ ದಿಕ್ಕಾಪಾಲಾಗಿ ಓಡಿಹೋದರು. ಇದನ್ನು ಕಂಡ ಆ ದೈತ್ಯರಲ್ಲಿ ಅಗ್ರಗಣ್ಯರಾದ ಮಹಾ ಪರಾಕ್ರಮಶಾಲಿಗಳಾದ, ಅನ್ಯರಿಂದ ಜಯಿಸಲಸಾಧ್ಯರಾದ ವಜ್ರಮುಷ್ಟಿ, ಧೂಮ್ರವಕ್ತ್ರ, ಧೂಮ್ರಾಕ್ಷ, ಚಿತ್ರಸೇನ, ಪಂಚಸೇನರೆಂಬ ಐದು ಮಂದಿ ದಾನವಾಧಿಪರು ಕಳೆದುಳಿದ ಸಮಸ್ತ ದೈತ್ಯ ಸೇನೆಯಿಂದ ಕೂಡಿದವರಾಗಿ ದೇವಲನ ಮೇಲೆ ಮತ್ತೆ ದಂಡೆತ್ತಿ ಬಂದರು. ಅವರು ತಮ್ಮ ಬಾಣ ವೃಷ್ಟಿಗಳಿಂದ ದಶದಿಕ್ಕುಗಳನ್ನೂ ಮುಚ್ಚುವವರಾಗಿ ಸಮಸ್ತ ದೈತ್ಯರೂ ಅತ್ಯಂತ

ಕೋಪಾವೇಶದಿಂದ ತೀಕ್ಷ್ಣವಾದ ಬಾಣಗಳಿಂದ ಆ ದೇವಲನನ್ನು ಹೊಡೆಯಲು ಪ್ರಾರಂಭಿಸಿದರು. ಆಗ ದೇವಲನು ವಿಷ್ಣುದತ್ತವಾದ ಸುದರ್ಶನ ಚಕ್ರವನ್ನು ಅವರ ಮೇಲೆ ಮತ್ತೆ ಪ್ರಯೋಗಿಸಲಾಗಿ ಅದು ಆ ದೈತ್ಯರನ್ನು ಕೊಲ್ಲಲು ಅಸಮರ್ಥವಾಯಿತು.

ಆಗ ದೇವಲನು ಚಿಂತಾಕುಲನಾಗಿ, ಆ ದೈತ್ಯರ ಬಾಣಪ್ರಹಾರಗಳಿಂದ ಜರ್ಝರಿತ ದೇಹವುಳ್ಳವನಾಗಿ ಜಗದ್ಧಾರಿಣಿಯಾದ ಚಂಡಿಕೆಯನ್ನು ಭಕ್ತಿಯಿಂದ ಹೀಗೆಂದು ಸ್ತುತಿಸಿದನು. ಎಲೈ ದೇವಿ, ದುರ್ಗೆಯಾದ, ಅಷ್ಟೈಶ್ವರ್ಯ ಸಮನ್ವಿತೆಯಾದ, ಚಂಡಿಯಾದ, ರಕ್ತನೇತ್ರೆ (ಕೆಂಪಾದ ಕಣ್ಣುಗಳುಳ್ಳವಳಾದ) ಯಾದ, ಕೃಷ್ಣಶರೀರೆಯಾದ, ಸಿಂಹವಾಹಿನಿಯಾದ ಸರ್ವೇಶ್ವರನ ಪತ್ನಿಯಾದ ನಿನ್ನನ್ನು ಸ್ತುತಿಸುವೆನು. ವಿಶ್ವೇಶ್ವರಿಯಾದ, ಜಗಜ್ಜನನಿಯಾದ, ಸೃಷ್ಟಿ ಸ್ಥಿತಿ ಸಂಹಾರ ಕಾರಣೆಯಾದ, ಹೈಮವತಿಯಾದ, ಭೀಕರ ಖಡ್ಗಪಾಣಿಯಾದ, ಮಂಗಳೆಯಾದ, ಪ್ರಚಂಡಬಾಹುಗಳುಳ್ಳವಳಾದ, ದೈತ್ಯದರ್ಪವಿನಾಶಿನಿಯಾದ, ಮಹಾ ಬಲಿಷ್ಠೆಯಾದ ದೇವಿಯೇ ನಿನ್ನನ್ನು ಸ್ತುತಿಸುವೆನು. ರತ್ನಕಿರೀಟಧಾರಿಗಳಾದ ಸುರಾಸುರರ ಶಿರಸ್ಸುಗಳಿಂದ ನಮಸ್ಕರಿಸಲ್ಪಟ್ಟು ಪೂಜಿಸಲ್ಪಟ್ಟ ಪಾದಕಮಲಗಳುಳ್ಳ, ರಕ್ತವರ್ಣಕೇಶಿಯಾದ, ರಕ್ತದಂಷ್ಟ್ರೆಯಾದ, ಗದಾಕೋದಂಡ ಧಾರಿಣಿಯಾದ ನಿನಗೆ ವಂದಿಸುವೆನು. ಮಹಾದೇವಿಯೇ, ಚಾರುಭೂಷಿಣಿಯೇ, ಪದ್ಮಪತ್ರಾಕ್ಷಿಯೇ ನನ್ನನ್ನು ರಕ್ಷಿಸು ಎಂದು ಸ್ತುತಿಸಿ ಮೊರೆಯಿಟ್ಟನು. ಆ ಮೊರೆಯನ್ನು ಕೇಳಿ ಭಕ್ತವತ್ಸಲೆಯಾದ ಮಹಾದೇವಿಯಾದ, ಚಂಡಿಕಾಂಬೆಯು ಆ ರಣರಂಗದಲ್ಲಿ ಕಾಣಿಸಿಕೊಂಡಳು.

ಹೀಗೆ ಪ್ರತ್ಯಕ್ಷಳಾದ ದೇವಿಯನ್ನು ದೇವಲನು ನೋಡಿ ಭಕ್ತಿಯಿಂದ ಆಕೆಯನ್ನು ಕುರಿತು ಎಲೈ ವಿಶ್ವೇಶ್ವರಿಯೇ, ಸಮಸ್ತಲೋಕ ಪೂಜಿತೆಯೇ ನಿನಗೆ ನಮಸ್ಕಾರ. ಚಂಡಿಕೆಯೇ, ದುರ್ಗೆಯೇ, ಶಂಕರಾರ್ಧಶರೀರಿಣಿಯೇ, ಕಮಲಪತ್ರಾಕ್ಷಿಯೇ, ಪುಣ್ಯಶರೀರಿಣಿಯೇ ನಿನಗೆ ನಮಸ್ಕಾರ. ಸರ್ವೇಶ್ವರನರ್ಧಾಂಗಿಯೇ, ದೈತ್ಯನಾಶಿನಿಯೇ, ಭಕ್ತವತ್ಸಲೆಯೇ ಚಂಡಿಕೆಯೇ ನಿನಗೆ ನಮಸ್ಕಾರ, ನಿನಗೆ ನಮಸ್ಕಾರ ಎಂದು ಸ್ತುತಿಸಿ ಎಲೈ ದೇವಿಯೇ ಪಾಪಿಗಳಾದ ಈ ರಾಕ್ಷಸರನ್ನು ಕೊಂದು ನನ್ನನ್ನು ರಕ್ಷಿಸೆಂದನು. ಈ ರೀತಿ ದೇವಲನಿಂದ ಸ್ತುತಿಸಲ್ಪಟ್ಟ ದೇವಿಯು ಪ್ರಸನ್ನವದನದಿಂದ ಎಲೈ ಪುತ್ರಾ ದೇವಲ ಅಂಜಬೇಡ. ನಿನಗೆ ಕ್ಷೇಮವಾಗಲಿ. ನನ್ನ ಸಾಮರ್ಥ್ಯವನ್ನಾದರೂ ನೋಡು. ಇಗೋ ಈ ಕ್ಷಣವೇ ನನ್ನ ಈ ಶೂಲಾಯುಧದಿಂದ ದುರಾತ್ಮರಾದ ಈ ದೈತ್ಯರೆಲ್ಲರನ್ನೂ ಕೊಂದು ನಿರ್ನಾಮಮಾಡಿ ಅವರ ರಕ್ತವನ್ನು ಚೆಲ್ಲಾಡುವೆನು ಎಂದು ಅಭಯಕೊಟ್ಟು ಚಂಡಿಕಾಂಬೆಯು ಅಟ್ಟಹಾಸಮಾಡಿದಳು.

ಚತುರ್ಭುಜೆಯಾದ, ದೀರ್ಘ ಜಿಹ್ವಳಾದ, ರಕ್ತನೇತ್ರೆಯಾದ, ಮಹಾ ಬಲಿಷ್ಠೆಯಾದ, ಶೂಲ, ಚಕ್ರ, ಗದಾಧಾರಿಣಿಯಾದ, ಭಯಂಕರವಾದ ಖಡ್ಗದಿಂದ ವೈರಿಗಳನ್ನು ನಾಶಮಾಡುವವಳಾದ, ಕೋಟಿ ಸೂರ್ಯಪ್ರಭೆಯಿಂದ ಕೂಡಿದ



ಶ್ರೀ ದೇವಾಂಗನು ಶ್ರೀ ಮಹಾವಿಷ್ಣುವಿನಿಂದ ತಂತು ತರುವಾಗ್ಯೆ ಪಂಚಸೇನ, ವ್ಯಾಘ್ರವಕ್ತ್ರ, ಸರ್ಪಜಿಹ್ವ, ಖಡ್ಗಜಿಹ್ವ ರಾಕ್ಷಸರನ್ನು ವಧಿಸಿದ ಶ್ರೀ ಚೌಡೇಶ್ವರೀಯವತಾರ ಚಿತ್ರ. ದೇವಾಂಗ ಮತ ಪ್ರಕಾಶಿಕೆ ಕೃಪೆಯಿಂದ

ಕಿರೀಟವುಳ್ಳ, ಕಾಡಿಗೆಯಂತೆ ಕಪ್ಪಾದ ಮೈಬಣ್ಣವುಳ್ಳ, ಆ ಚಂಡಿಕಾದೇವಿಯು ದೈತ್ಯ ಸಂಹಾರಕವಾದ ತನ್ನ ಶೂಲಾಯುಧವನ್ನು ಗಿರಗಿರನೆ ತಿರುಗಿಸಿ ಬಲಿಷ್ಠರಾದ ಆ ದಾನವರ ಮೇಲೆ ಪ್ರಯೋಗಿಸಿದಳು. ಆ ದಾನವರೆಲ್ಲರೂ ಶಸ್ತ್ರಾಸ್ತ್ರ ಪ್ರಾಣಿಗಳಾಗಿ ಉಗ್ರರೂಪಿಣಿಯಾದ ಆ ಚಂಡಿಕೆಯನ್ನು ನೋಡಿ ಕೊಲ್ಲಲು ಸಿದ್ಧರಾಗಿ ದೇವಿಯ ಮೇಲೇರಿ ಬಂದರು. ಎಲೈ ನಾರದನೇ, ಹೀಗೆ ದೇವಿಯ ಮೇಲೇರಿ ಬಂದ ಸಮಸ್ತ ದಾನವರೂ ಆಕೆಯ ಕಿರೀಟದ ಕಿರಣಗಳ ಕಾಂತಿಯಿಂದಲೇ ಕಣ್ಣು ಕಾಣದವರಾಗಲು ಕುಪಿತಳಾದ ಆ ದೇವಿಯು ತನ್ನ ಸುತ್ತಲೂ ಮುತ್ತಿರುವ ದೈತ್ಯರನ್ನು ತನ್ನ ಕೆಂಗಣ್ಣುಗಳಿಂದ ಈಕ್ಷಿಸಿ ಹುಂಕಾರಮಾಡಿ ತನ್ನ ತಲೆಯನ್ನು ಸುತ್ತಲೂ ತಟ್ಟನೆ ಒಮ್ಮೆ ತಿರುಗಿಸಿ ಕೊಡಹಲು ಆ ರಭಸಕ್ಕೆ ದೇವಿಯ ಶಿರಸ್ಸಿನ ಬಿಚ್ಚಿದ್ದ ಜಟಾರವ ಮಾತ್ರದಿಂದಲೇ ದೈತ್ಯರೆಲ್ಲ ಸ್ತಂಭಿತರಾಗಿ ಮೂರ್ಛಿತರಾದರು.

ಆ ಘೋರರೂಪಿಣಿಯಾದ ಚಂಡಿಕೆಯು, ಶೂಲದ ಮೊನೆಗಳಿಂದಲೂ, ಗದಾ, ಖಡ್ಗ, ಚಕ್ರಗಳಿಂದಲೂ, ಅನೇಕ ದೈತ್ಯರನ್ನು ಲೀಲಾಜಾಲವಾಗಿ ಕೊಂದಳು. ಇದರಿಂದ ಕಂಗೆಟ್ಟ ದೈತ್ಯರು ಭಯ ವಿಹ್ವಲರಾಗಿ ಪಲಾಯನ ಮಾಡಿದರು. ನಂತರ ದೇವಿಯು ಆ ಐದು ಮಂದಿ ದೈತ್ಯ ಪ್ರಮುಖರನ್ನೂ ಬೆನ್ನಟ್ಟಿ ಭಯಂಕರವಾದ ತನ್ನ ಶೂಲಾಯುಧದಿಂದ ಪ್ರಹರಿಸಿದಳು. ಅವರು ಆ ಪ್ರಹರಕ್ಕೆ ಜರ್ಝರಿತರಾಗಿ ಸೀಳಲ್ಪಟ್ಟ ದೇಹವುಳ್ಳವರಾಗಿ ರಕ್ತಕಾರುತ್ತಾ ಪ್ರಾಣಬಿಟ್ಟರು. ದೇವಲನು ಆ ದೇವಿಯಿಂದ ಕೊಲ್ಲಲ್ಪಟ್ಟ ಆ ಐದು ಮಂದಿ ದೈತ್ಯರ ಐದು ವರ್ಣದ ರಕ್ತದಲ್ಲಿ ತಾನು ವಿಷ್ಣುವಿನಿಂದ ಹೊಂದಿದ್ದ ತಂತುಗಳನ್ನು ಅದ್ದಿ ಪಂಚವರ್ಣದವುಗಳನ್ನಾಗಿ ಮಾಡಿದನು. ಯಾವ ಕಾರಣದಿಂದ ಚೂಡಾಸಂಬಂಧವಾದ ಪ್ರಭಾಜಾಲಗಳಿಂದ ದೈತ್ಯರನ್ನು ಸ್ತಂಭನಗೊಳಿಸಿದಳೋ ಆ ಕಾರಣದಿಂದ ತ್ರಿಭುವನೇಶ್ವರಿಯಾದ ಚಂಡಿಕಾಂಬೆಯು ಚೌಡೇಶ್ವರಿದೇವಿಯೆಂಬ ನಾಮದಿಂದ ಪ್ರಸಿದ್ಧಳಾಗಿರುವಳು. ಆ ಚೌಡೇಶ್ವರಿಯು ಅತ್ಯಂತ ಪ್ರಸನ್ನ ಮುಖದಿಂದ ದೇವಲನನ್ನು ನೋಡಿ, ಮುನಿಪುಂಗವಾ, ವತ್ಸಾ, ನೀನು ಎಲ್ಲಿಗೆ ಹೋಗಬೇಕೆಂದಿರುವೆಯೋ ಅಲ್ಲಿಗೆ ಹೋಗು. ಎಲೈ ಜಾಣನೇ, ನೀನು ನನ್ನನ್ನು ಸ್ಮರಿಸಿದಾಕ್ಷಣವೇ ನಿನ್ನ ಬಳಿಗೆ ಬರುವೆನೆಂದು ಅಭಯವಿತ್ತು ತಾನು ಅಲ್ಲಿಯೇ ಅಂತರ್ಧಾನಳಾದಳು.

ನಂತರ ದೇವಲನು ಮಹದೈಶ್ವರ್ಯಸಂಪನ್ನವಾದ ಆಮೋದ ಪಟ್ಟಣಕ್ಕೆ ಹೋದನು. ಆಗ ಆಶ್ಚರ್ಯಭರಿತನಾದ ನಾರದನು, ಎಲೈ ಸುರಶ್ರೇಷ್ಠನಾದ ಚತುರನಾದ ಪಿತಾಮಹನೇ, ವಂಚಕ ದೈತ್ಯನ ಪುತ್ರರಾದ ಆ ವಜ್ರಮುಷ್ಟಿ ಮೊದಲಾದ ದೈತ್ಯರು, ದೇವಲನಿಗೆ ವಿಷ್ಣುವಿನಿಂದ ಕೊಡಲ್ಪಟ್ಟ ಸುದರ್ಶನ ಚಕ್ರದಿಂದ ಏಕೆ ಕೊಲ್ಲಲ್ಪಡಲಿಲ್ಲ ? ಆ ದೈತ್ಯರ ಪ್ರಭಾವವೆಂತಹುದು ? ದಯವಿಟ್ಟು ಅದನ್ನು ಹೇಳಬೇಕೆಂದನು. ಅದಕ್ಕೆ ಬ್ರಹ್ಮನು ಕಾರಣವನ್ನು ವಿವರಿಸುತ್ತಾ, ಆ ದೈತ್ಯರು

ಯುದ್ಧಕ್ಕೆ ಸಿದ್ಧಳಾದ ಉಗ್ರರೂಪಿಣಿಯಾದ ದೇವಿಯನ್ನು ನೋಡಿ ಈಕೆಯೊಡನೆ ಯುದ್ಧಮಾಡುವುದು ತಮ್ಮಿಂದ ಸಾಧ್ಯವಿಲ್ಲವೆಂದು ತಿಳಿದು ರಥ, ಕಾಲಾಳು, ಆನೆ, ಕುದುರೆಗಳಿಂದ ಯುಕ್ತವಾದ ಚತುರಂಗ ಬಲಸಮೇತರಾಗಿ ನಾನಾಯುಧಗಳನ್ನು ಧರಿಸಿದ ಅನೇಕ ದೈತ್ಯರೊಂದಿಗೆ ಒಟ್ಟಾಗಿ ಯುದ್ಧಕ್ಕೆ ಬಂದರು. ಈ ಪ್ರಕಾರ ಯುದ್ಧ ಸನ್ನದ್ಧರಾದ ದೈತ್ಯರ ಸೈನ್ಯಗಳಲ್ಲಿ ರಥನೇಮಿಧ್ವನಿಗಳು, ರಥಾಕ್ಷಧ್ವನಿಗಳು, ಗಾಳಿಯಲ್ಲಿ ಹಾರಾಡುವ ಧ್ವಜಗಳ ಪಟಪಟ ಧ್ವನಿಗಳು, ಕುದುರೆಗಳ ಹೇಷಾರವಗಳು, ಗಜಗಳ 'ಬೃಂಹಿತ'ಗಳು (ಘೀಳಿಡುವ ಶಬ್ದ) ದೈತ್ಯರ ಸಿಂಹನಾದಗಳು, ಧನುಸ್ಸುಗಳ ಟೇಂಕಾರ ಗಳು, ಸಮಸ್ತ ದಿಕ್ಕುಗಳಲ್ಲಿಯೂ ವ್ಯಾಪಿಸಿ ಮೂರು ಲೋಕಗಳನ್ನೂ ಕಿವುಡನ್ನಾಗಿ ಮಾಡಿದುವು. ಆಗ ದೇವಿಯು ಯುದ್ಧಸನ್ನದ್ಧರಾಗಿ ಬಂದ ದೈತ್ಯ ಸೇನೆಗಳನ್ನು ನೋಡಿ ಅತ್ಯಂತ ಕುಪಿತೆಯಾಗಿ ತನ್ನ ಗದೆಯಿಂದ ಅನೇಕ ರಥಗಳನ್ನು ಪುಡಿಪುಡಿ ಮಾಡಿ, ಆ ಗದೆಯ ಒಂದೇ ಹೊಡೆತದಿಂದ ರಥಿಕರನ್ನೂ, ಅಶ್ವಗಳನ್ನೂ, ಸಾರಥಿಗಳನ್ನೂ, ಪತಾಕೆ ಗಳನ್ನೂ ನಾಶಮಾಡಿದಳು. ಈ ರೀತಿ ಎರಡು ಸಹಸ್ರ ನಾಲ್ಕು ನೂರು ಮಂದಿ ದೈತ್ಯರನ್ನು ಕೊಂದು ವಿಜೃಂಭಿಸಿದಳು. ಮತ್ತು ಆ ದೇವಿಯ ಗದೆಯಿಂದ ಅನೇಕ ಗಜಗಳ ದಂತಗಳು ಮುರಿದುವು. ಕುಂಭಸ್ಥಳಗಳು ಸೀಳಲ್ಪಟ್ಟವು. ಅನೇಕ ಗಜಗಳು ಛಿನ್ನಭಿನ್ನ ಮಸ್ತಕಗಳಿಂದ ಕೂಡಿದುವುಗಳಾಗಿ ಮುತ್ತುಗಳನ್ನು ಸುರಿಸುತ್ತ ಘಾಸಿಪಟ್ಟ ಶರೀರವುಳ್ಳವುಗಳಾಗಿ ಮೂರ್ಛೆಹೊಂದಿ ಮೃತಿಹೊಂದಿದುವು.

ಆ ಚಂಡಿಕಾಂಬೆಯು ರಣರಂಗದಲ್ಲಿ ಅಟ್ಟಹಾಸದಿಂದ ಮೆರೆಯುತ್ತ ತನ್ನ ಖಡ್ಗ ವನ್ನು ಝುಳಪಿಸುತ್ತ ಅಸಂಖ್ಯ ದೈತ್ಯರ ಮಸ್ತಕಗಳನ್ನು ಕತ್ತರಿಸಿ ಅವರ ಬುರುಡೆಗಳನ್ನು ಕುಂಭಗಳನ್ನೊಡೆಯುವಂತೆ, ತನ್ನ ಕಾಲುಗಳಿಂದ ಮೆಟ್ಟಿ ಚೆಂಡಾಡಿದಳು. ಯುದ್ಧಾಶ್ವ ಗಳನ್ನು ತುಂಡುತುಂಡಾಗಿ ಖಂಡಿಸುತ್ತ, ರಥಗಳನ್ನು ನಾಶಮಾಡಿ ಮಾವುತರನ್ನು ಕೊಂದು, ಅಶ್ವಾರೋಹಿಗಳನ್ನು ನೆಲಕ್ಕೆ ಕೆಡಹಿ, ಗತಪ್ರಾಣರನ್ನಾಗಿ ಮಾಡಿ, ಆನೆಗಳ ಸೊಂಡಿಲುಗಳನ್ನು ಕಡಿದಳು. ಇಂದ್ರನು ವಜ್ರಾಯುಧದಿಂದ ಪರ್ವತಗಳನ್ನುರುಳಿಸು ವಂತೆ ಆಕೆಯು ತನ್ನ ಶೂಲ, ಚಕ್ರ, ಗದಾ ಖಡ್ಗಗಳಿಂದ ಆ ದೈತ್ಯರ ಚತುರಂಗ ಬಲ ಸಮೇತವಾದ ಸಮಸ್ತ ಸೈನ್ಯವನ್ನೂ, ದಂಡಪಾಣಿಯಾದ ಯಮನಂತೆಯೂ, ಪ್ರಳಯ ಕಾಲದ ಭೈರವನಂತೆಯೂ ನಾ ಶ ಮಾ ಡಿ, ಅದರಿಂದುಂಟಾದ ರಕ್ತ ಪ್ರವಾಹದಲ್ಲಿ ಓಲಾಡಿ ರಕ್ತಸ್ನಾನ ಮಾಡಿ, ಆ ಘೋರ ರೂಪಿಣಿಯು ಬಾರಿಬಾರಿಗೂ ಸಿಂಹನಾದ ಮಾಡುತ್ತಾ ಆ ರಣರಂಗದಲ್ಲಿ ನಲಿದಾಡಿದಳು.

ಈ ಯುದ್ಧದಲ್ಲಿ ದೇವಿಯ ದೃಷ್ಟಿಯಿಂದ ತಪ್ಪಿಸಿಕೊಂಡ ಅಳಿದುಳಿದ ರಾಕ್ಷಸರು ಭಯದಿಂದ, ತಮ್ಮ ಪ್ರಾಣಗಳನ್ನುಳಿಸಿಕೊಳ್ಳಲು, ದಿಕ್ಕುದಿಕ್ಕಿಗೆ ಚೆಲ್ಲಾಪಿಲ್ಲಿಯಾಗಿ ಪಲಾಯನ ಮಾಡಿದರು. ಈ ರೀತಿ ದೇವಿಯು, ಆ ದೈತ್ಯರ ಸಮಸ್ತ ಸೈನ್ಯವನ್ನೂ ನಾಶಮಾಡಲು ಅಲ್ಲಿಯೇ ಕಾದಿದ್ದ ಭೂತ, ಭೇತಾಳ, ಶಾಕಿನೀ, ಡಾಕಿನೀ, ಯಕ್ಷ,

ಪಿಶಾಚಗಳ ಸಮೂಹವು ಅತ್ಯಂತ ಸಂತೋಷದಿಂದ ಮಾಂಸಭಕ್ಷಣ, ರಕ್ತಪಾನ ಮಾಡಲಿಚ್ಛೆಯಿಂದ ಆ ರಣರಂಗಕ್ಕೆ ಬಂದು ಮಾಂಸವನ್ನೂ ಕೊಬ್ಬನ್ನೂ ಭಕ್ಷಿಸಿ, ರಕ್ತಪಾನಮಾಡಿ ಹರ್ಷದಿಂದ ಕುಣಿದಾಡಿದುವು. ಇತ್ತ ಅಳಿದುಳಿದು ಪಲಾಯನ ಮಾಡಿದ ರಾಕ್ಷಸರು ತಮ್ಮ ರಾಜನ ಬಳಿಗೆ ಹೋಗಿ ವಜ್ರಮುಷ್ಟಿಯೇ ಮೊದಲಾದ ದೈತ್ಯರು ಚತುರಂಗ ಬಲಸಮೇತರಾಗಿ ಮೃತರಾದ ಎಲ್ಲ ಸಂಗತಿಯನ್ನೂ ಆ ದೈತ್ಯ ರಾಜನಿಗೆ ತಿಳಿಸಿದರು.

ಎಲೈ ನಾರದನೇ, ಪೂರ್ವಕಲ್ಪದ ಪ್ರಳಯ ಕಾಲದಲ್ಲಿ ಚರಾಚರಾತ್ಮಕವಾದ ಸಮಸ್ತಪ್ರಪಂಚವೂ ಜಲಮಯವಾಗಿತ್ತು. ಭಗವಂತನಾದ ನಾರಾಯಣನು ಶೇಷ ಶಯನನಾಗಿಯೋಗದಲ್ಲಿದ್ದನು. ಆಗ ಜಗತ್ಪ್ರಭುವಿನ ದೇಹದಿಂದ ಅಧಿಕ ಸ್ವೇದೋತ್ಪತ್ತಿ ಯಾಯಿತು. ಎಲೈ ನಾರದನೇ, ಆ ಸ್ವೇದದಿಂದ (ಆ ಬೆವರಿನಿಂದ) ಐದು ಜನ ದಾನವರು ಹುಟ್ಟಿದರು. ಅವರೇ ಅಮಿತ ವಿಕ್ರಮರಾದ ವಜ್ರಮುಷ್ಟಿ, ಧೂಮ್ರವಕ್ತ್ರ, ಧೂಮ್ರಾಸ್ಯ, ಚಿತ್ರಸೇನ, ಪಂಚಸೇನ ನಾಮಕರು. ಈ ಘೋರದಾನವರು ಯೋಗ ದಲ್ಲಿದ್ದ ನಾರಾಯಣನನ್ನು ಕಂಡು ಅವನನ್ನು ಕೊಲ್ಲಲು ಹವಣಿಸುತ್ತಿರಲಾಗಿ, ಯೋಗ ದಿಂದೆಚ್ಚೆತ್ತ ನಾರಾಯಣನು ಆ ಐವರು ದಾನವರ ಸಂಚನ್ನು ತಿಳಿದು, ಅವರೊಡನೆ ಬಾಹುಯುದ್ಧವನ್ನು ಮಾಡಿ ಅವರನ್ನು ಕೊಲ್ಲಲಾಗದೆ ಯೋಚಿಸುತ್ತಾ ಅವರನ್ನು ಕುರಿತು, ಎಲೈ ದೈತ್ಯ ಪುಂಗವರೇ, ನಿಮ್ಮ ಪರಾಕ್ರಮಕ್ಕೆ ಮೆಚ್ಚಿರುವೆನು. ನಿಮ್ಮ ಯುದ್ಧದಿಂದ ನಾನು ಸಂತುಷ್ಟನಾಗಿರುವೆನು. ಬೇಕಾದ ವರಗಳನ್ನು ಕೇಳಿಕೊಳ್ಳಿರಿ. ಈಗಲೇ ಕೊಡುವೆನು ಎಂದನು. ಅದಕ್ಕೆ ಆ ದೈತ್ಯರು ಆ ನೀಲಮೇಘಶ್ಯಾಮನನ್ನು ಕುರಿತು ದಯಾನಿಧಿಯಾದ ಭಗವಂತನೇ ಪದ್ಮನಾಭನೇ ನಮ್ಮ ಪರಾಕ್ರಮವನ್ನು ಮೆಚ್ಚಿರುವೆಯಾದರೆ ನಿನ್ನ ಸುದರ್ಶನ ಚಕ್ರದಿಂದ ನಮಗೆ ಮರಣವಾಗದಂತೆ ಕರುಣಿ ಸೆಂದರು. ಭಗವನ್ನಾರಾಯಣನು, ತಥಾಸ್ತು (ಹಾಗೆಯೇ ಆಗಲೆಂದು) ಎಂದು ಅವರಿಗೆ ವರವನ್ನಿತ್ತನು.

ಅನಂತರ ಮಹಾ ಪರಾಕ್ರಮಿಗಳಾದ ಆ ಐದು ಜನ ದೈತ್ಯರಾಜರೂ ಪಾತಾಳ ಲೋಕವನ್ನಾಶ್ರಯಿಸಿದ್ದು, ಕೆಲಕಾಲಾನಂತರ ಶುಕ್ರಾಚಾರ್ಯನ ಆಶ್ರಮಕ್ಕೆ ಬಂದರು. ಅಲ್ಲಿ ಬಹುಕೀರ್ತಿವಂತೆಯಾದ, ತೊಂಡೆ ಹಣ್ಣಿನಂತೆ ತುಟಿಯುಳ್ಳ, ಭೃಂಗಕುಂತಳೆ ಯಾದ, ಕೋಲ್ಮಿಂಚಿನಂತೆಯೂ ಸುವರ್ಣದಂತೆಯೂ ಥಳಥಳಿಸುವ ದೇಹಕಾಂತಿ ಯುಳ್ಳವಳಾದ, ಸೃಷ್ಟಿಕರ್ತನಾದ ಬ್ರಹ್ಮನಿಂದ ಪ್ರಯತ್ನ ಪೂರ್ವಕವಾಗಿ ಸೃಷ್ಟಿಸಲ್ಪಟ್ಟ, ತ್ರಿಲೋಕ ಸುಂದರಿಯಾದ ದೇವಯಾನಿಯೆಂಬ ಶುಕ್ರಾಚಾರ್ಯನ ಪುತ್ರಿಯನ್ನು ಕಂಡು, ಆದುಷ್ಟರು ಕಾಮಪರವಶರಾಗಿ ಆಕೆಯ ಬಳಿಗೆ ಹೋಗಿ ಬಹು ದೈನ್ಯದಿಂದ ಆಕೆಯನ್ನು ಕುರಿತು ಎಲೌ ಸುಂದರಿ! ನಾರೀಮಣಿ, ನಿನಗೆ ಮಂಗಳಕರವಾದ, ಹಿತವಾದ ನಮ್ಮ ಮಾತನ್ನು ಕೇಳು. ನಾವೈವರೂ ಈ ಮೂರು ಲೋಕಗಳಲ್ಲಿಯೂ ದಾನವಾಧೀಶರೆಂದು

ಪ್ರಖ್ಯಾತರಾಗಿರುವೆವು. ನಮ್ಮೈವರಲ್ಲಿ ನೀನು ಇಷ್ಟಪಟ್ಟವನೊಬ್ಬನನ್ನು ವರಿಸು ಎಂದರು. ಅವರ ಈ ಮಾತನ್ನು ಕೇಳಿ ಭಾರ್ಗವ ಪುತ್ರಿಯಾದ ಆ ದೇವಯಾನಿಯು, ಅತ್ಯಂತ ಕೋಪಗೊಂಡು, ಆ ಪಾಪಿಗಳನ್ನು ಗದರಿಸಿ ಎಲೈ ದುರಾತ್ಮರೇ, ನೀವು ನನ್ನನ್ನು ಗುರುಪುತ್ರಿಯೆಂದು ತಿಳಿದೂ ಈ ರೀತಿ ಮಾತನಾಡುವಿರಾ? ಸಾಮರ್ಥ್ಯದ ಕೊಬ್ಬಿನಿಂದ ಯುಕ್ತಾಯುಕ್ತವನ್ನು ತಿಳಿಯದೆ ಈ ರೀತಿ ಮಾತನಾಡಲು ನಿಮಗೆ ಬುದ್ಧಿಯು ಹೇಗೆ ಬಂತು? ಎಲೈ ದುರ್ಬುದ್ಧಿಗಳೇ ನೀವು ನಷ್ಟಬಲರಾಗಿ. ನನ್ನಂತಹವಳಿಂದಲೇ ನಿಮ್ಮ ದರ್ಪವು ನಾಶವಾಗಿ, ಅವಳಿಂದಲೇ ಕೊಲ್ಲಲ್ಪಡುವಿರಿ! ಎಂದು ಶಾಪಕೊಟ್ಟು ಆ ದೇವಯಾನಿಯು ತನ್ನ ಮನೆಯನ್ನು ಸೇರಿದಳು. ದೇವಯಾನಿಯಿಂದ ಶಪಿಸಲ್ಪಟ್ಟ ಆ ದೈತ್ಯರು ಚಿಂತೆಗೊಂಡು, ಧೃತಿಗೆಡದೆ ಶಮದಮಾದಿಗಳಿಂದ ಕೂಡಿದವರಾಗಿ ದೃಢವಾದ ಭಕ್ತಿಯಿಂದ ಶಿವನನ್ನು ತಪಸ್ಸಿನಿಂದ ಸಂತೋಷಗೊಳಿಸಲಾಗಿ, ಪೂಜ್ಯನಾದ ಆ ಫಾಲಾಕ್ಷನು ಪ್ರತ್ಯಕ್ಷನಾದನು. ಪ್ರತ್ಯಕ್ಷನಾದ ಪರಮಾತ್ಮನನ್ನು ನೋಡಿ ಅಂಜಲೀ ಬದ್ಧರಾಗಿ ನಮ್ರತೆಯಿಂದ ಆ ಐವರು ದೈತ್ಯರೂ, ಎಲೈ ಶಂಕರನೇ ಸಮಸ್ತರೂ ನಮ್ಮ ರಕ್ತವನ್ನು ಧರಿಸುವವರಾಗಲಿ ಎಂದು ವರವನ್ನು ಕೇಳಲು, ಶಂಕರನು ಹಾಗೆಯೇ ಆಗಲೆಂದು ವರವನ್ನಿತ್ತು ಅಂತರ್ಧಾನನಾದನು. ಎಲೈ ನಾರದನೇ ಕಾಲಕರ್ಮಯೋಗದಿಂದ, ಈ ಐವರು ದೈತ್ಯರು ದೇವಲನನ್ನು ಕೊಲ್ಲುವುದಕ್ಕೋಸ್ಕರ ಅಡ್ಡಗಟ್ಟಿದರು. ಆ ಸಮಯದಲ್ಲಿ, ಮಹಾದೇವಿಯಾದ ಚೌಡೇಶ್ವರಿಯು ಬಲಿಷ್ಠರಾದ ಅವರನ್ನು ಕೊಂದಳು. ದೇವಲನು ಅವರ ರಕ್ತದಿಂದಲೇ ಪಂಚವರ್ಣಗಳನ್ನು ನಿರ್ಮಿಸಿ, ಸೂತ್ರಗಳಿಗೆ ಬಣ್ಣ ಹಾಕಿದನು. ಈ ರೀತಿಯಾಗಿ ಆ ಐದು ಜನ ದೈತ್ಯರಿಗೆ, ಪರಮಾತ್ಮನು ಕೊಟ್ಟ ವರವು ಈಡೇರಿತು.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿ ಬ್ರಹ್ಮನಾರದ ಸಂವಾದ ರೂಪ ಉತ್ತರ ಖಂಡದ ದೇವಾಂಗ ಚರಿತ್ರೆಯಲ್ಲಿ ಶ್ರೀ ಚೌಡೇಶ್ವರಿ ವರ ಪ್ರಸಾದ ಮತ್ತು ರಾಕ್ಷಸೋಪಾಖ್ಯಾನ ಹೆಂಬ ಎರಡನೆಯ ಅಧ್ಯಾಯ ಮುಗಿದುದು.

ಓಂ

ಮೂರನೆಯ ಅಧ್ಯಾಯ

ದೇವಾಂಗ ಪಟ್ಟಾಭಿಷೇಕ

ಅನಂತರ ದೇವಲನು ಬಹಳ ಹರ್ಷದಿಂದ ಆಮೋದಪಟ್ಟಣಾಭಿಮುಖವಾಗಿ ಪ್ರಯಾಣ ಮಾಡಿದನು. ದಾರಿಯಲ್ಲಿ, ಅನೇಕಾನೇಕ ದೇಶಗಳನ್ನೂ, ದುರ್ಗಮಗಳಾದ ಘೋರಾರಣ್ಯಗಳನ್ನೂ, ಪರ್ವತಗಳನ್ನೂ, ಕ್ರಮಿಸುತ್ತಾ, ಪುಣ್ಯ ನದಿಗಳನ್ನು ದಾಟುತ್ತಾ

ಬಹು ರಮಣೀಯವಾದ ಆಮೋದ ಪಟ್ಟಣದ ಬಳಿಗೆ ಬರುತ್ತಿರುವಂತೆಯೇ ಆ ಪಟ್ಟಣದ ಹೊರಭಾಗದಲ್ಲಿ ರಾಜನಾದ ಸುನಾಭನೂ ಆ ಪಟ್ಟಣದ ಸಮಸ್ತ ಪ್ರಜೆಗಳೂ ಶಿವನಪ್ಪಣೆ ಯಂತೆ, ಮಹಾತ್ಮನಾದ ದೇವಲನ ಆಗಮನವನ್ನು ತಿಳಿದು, ರಾಜನು , ಮಂತ್ರಿಪುತ್ರರು ಬಲಶಾಲಿಗಳಾದ ಭಟರು, ವಣಿಜರು, ಇವರೇ ಮೊದಲಾದವರಿಂದೊಡಗೂಡಿ, ಗಾಯಕ ರಿಂದಲೂ, ನರ್ತಕಿಯರಿಂದಲೂ ಅನೇಕ ಮಂಗಳ ವಾದ್ಯಗಳ ಸಮೇತನಾಗಿ ಭಾವಿ ಮಹಾರಾಜನಾದ ದೇವಲನನ್ನು ಎದುರುಗೊಂಡನು.

ಆ ಸಮಸ್ತರಿಂದ ಸ್ವಾಗತಿಸಲ್ಪಟ್ಟು ಮರ್ಯಾದಿತನಾದ ದೇವಲನು ಸಂತೋಷ ಭರಿತನಾದನು. ಆಗ ಅಲ್ಲಿ ನೆರೆದಿದ್ದ ಮಂತ್ರಿಗಳು, ಪುರೋಹಿತರೇ ಮೊದಲಾದ ಸಮಸ್ತ ಪೌರರೂ, ಆ ದೇವಲನನ್ನು ನೋಡಿ ಭೋ ಸ್ವಾಮಿಯೇ, ಈ ಪಟ್ಟಣವು ನಿನ್ನದು. ನಿನ್ನವರೇ ಆದ ನಮ್ಮೆಲ್ಲರನ್ನೂ ನೀನು ಪರಿಪಾಲಿಸಿ ರಕ್ಷಿಸು. ದೇವದೇವನಾದ ಪರಮಾತ್ಮನ ಅಪ್ಪಣೆಯಾಗಿದೆ. ಎಲೈ ಪ್ರಾಜ್ಞನೇ ಮನೋಹರವಾದ ಈ ಆಮೋದ ಪಟ್ಟಣವನ್ನು ಪ್ರವೇಶಿಸು ಎಂದು ಪ್ರಾರ್ಥಿಸಿದರು. ಇದರಿಂದ ಸಂತೋಷಭರಿತನಾದ ದೇವಲನು ಅವರೆಲ್ಲರ ಪ್ರಾರ್ಥನೆಯನ್ನು ಮನ್ನಿಸಿ ಪಟ್ಟಣವನ್ನು ಪ್ರವೇಶಿಸಲು ಸಮ್ಮತಿ ಸಿದನು. ಆಗ ಶಂಖಗಳೂ, ಮಹಾ ಭೇರಿಗಳೂ, ಮೃದಂಗಗಳೂ, ಕಹಳೆಗಳೂ ಇವೇ ಮೊದಲಾದ ಅನೇಕ ವಾದ್ಯಗಳು ಭೋರ್ಗರೆಯಲು ಅವುಗಳ ನಿನಾದವು ದಶದಿಕ್ಕು ಗಳನ್ನೂ ವ್ಯಾಪಿಸಿತು. ಭಟ್ಟಂಗಿಗಳು ಸ್ತುತಿ, ಗೀತ, ಗಾನ, ನರ್ತನ, ವಾದ್ಯಗಳಿಂದ ಕೂಡಿದವರಾಗಿ ಪರಾಕು ಹೇಳುತ್ತಿರಲು ಶ್ರೀಮಾನ್ ದೇವಲನು ಆನಂದದಾಯಕವಾದ ಆಮೋದ ಪಟ್ಟಣವನ್ನು ಪ್ರವೇಶಿಸಿದನು.

ಆ ಪಟ್ಟಣವು ವಿಸ್ತಾರಕ್ಕೆರಡರಷ್ಟು ದೀರ್ಘ (ಉದ್ದ) ವಾಗಿದ್ದುದಲ್ಲದೆ, ಸುವರ್ಣ ಪ್ರಾಕಾರಗಳಿಂದಲೂ, ಬಂಗಾರದ ಗೋಪುರಗಳಿಂದಲೂ, ಪಾತಾಳವನ್ನು ಮುಟ್ಟು ವಂತಿರುವ ಬಹಳ ಆಳವಾದ ಕಂದಕಗಳಿಂದಲೂ, ರತ್ನಾಲಂಕೃತ ಬುರುಜುಗಳಿಂದಲೂ ಎತ್ತರವಾದ ಧ್ವಜಪತಾಕೆಗಳಿಂದಲೂ ಅಲಂಕೃತವಾಗಿತ್ತು. ದೇವ ಗಂಗಾ ಸಮಾನ ವಾದ ಸರೋವರಗಳು ದಿವ್ಯವಾದ ಕಮಲಗಳಿಂದ ಕೂಡಿದ್ದು, ಮದಗಜಗಳು ತಮ್ಮ ಸೊಂಡಿಲುಗಳಿಂದ ಆ ಕಮಲಗಳನ್ನು ಕಿತ್ತು ಹಾಕುತ್ತಿದ್ದುವು. ಅಲ್ಲಲ್ಲಿ ನಾನಾ ವಿಧವಾದ ಉಪವನಗಳೂ, ವಿಸ್ತಾರವಾದ ಕೆರೆಗಳೂ, ಕೊಳಗಳೂ ಶೋಭಿಸುತ್ತಿದ್ದುವು. ಆ ಪಟ್ಟಣದಲ್ಲಿದ್ದ ಭವನಗಳು ಅನೇಕ ಉಪ್ಪರಿಗೆಗಳಿಂದ ಕೂಡಿದ್ದು ರತ್ನಾಲಂಕೃತಗಳಾಗಿ ಮುಗಿಲೆತ್ತರದಲ್ಲಿ ಚಂದ್ರನಿಗೆ ವಿಶ್ರಾಂತಿ ಸ್ಥಾನಗಳಾಗಿರುವುವೋ ಎಂಬಂತೆ ಒಪ್ಪುತ್ತಿ ದ್ದುವು. ಪ್ರಾಕಾರ ಶಿಖರಗಳು ಸೂರ್ಯಮಂಡಲವನ್ನು ಮುಟ್ಟುವಂತಿದ್ದುವು. ಅಲ್ಲಿಯ ರಮ್ಯವಾದ ವಿಹಾರವನಗಳು ನಂದನವನವನ್ನು ಮೀರಿಸುತ್ತಿದ್ದುವು. ಅಲ್ಲಿಯ ವೇಶ್ಯಾಸ್ತ್ರೀಯರು ಸೌಂದರ್ಯದಲ್ಲಿ ಅಪ್ಸರೆಯರನ್ನು ಮೀರಿಸುವವರಾಗಿದ್ದರು. ಅದರಿಂದ ಅಪ್ಸರಸ್ತ್ರೀಯರು ನಾಚಿ ಇಳೆಯಲ್ಲಿ ಸಂಚರಿಸುವುದನ್ನೇ ಬಿಟ್ಟರು.


ಸಮಸ್ತ ಸುಖಸಂತೋಷಗಳಿಗೆ ನೆಲೆಯಾದ ಈ ಪಟ್ಟಣವನ್ನು ನೋಡಿ ದೇವ ಗಂಧರ್ವರು ದೇವಲೋಕವಾಸವನ್ನು ತ್ಯಜಿಸಿ ಅಲ್ಲಿಯೇ ನೆಲೆಸಲು ಅಪೇಕ್ಷಿಸುವರು. ಪ್ರತಿಯೊಂದು ರಾಜಮಾರ್ಗದಲ್ಲಿಯೂ, ಪರ್ವತೋಪಮಗಳಾದ ರಥಗಳು ಸಂಚರಿಸುತ್ತಿದ್ದುವು. ಸಿಂಧು ದೇಶದ ಅಶ್ವಗಳಿಂದ ತುಂಬಿದ ಅಶ್ವಶಾಲೆಗಳು ಬಹು ರಮಣೀಯವಾಗಿದ್ದುವು. ದಾರಿಯ ಇಕ್ಕೆಲಗಳಲ್ಲೂ ವಿವಿಧ ಪುಷ್ಪವನಗಳಿಂದ ಕೂಡಿದ್ದಾಗಿದ್ದು ಚಂಪಕ, ಅಶೋಕ, ಪಾದರಿ, ಸಿಹಿಮಾವು, ಸರ್ಜ, ಕೆಂಕಲೆ, ತಮಾಲ, ನಾರಿಕೇಳ, ಹಲಸು, ಪಿಚುಮಂದ, ಮಾಧವಿ, ವಜ್ರದಂತಿ, ನೇರಳೆ ಇವೇ ಮೊದಲಾದ ಫಲವೃಕ್ಷಗಳಿಂದಲೂ, ಪುನ್ನಾಗ, ಪಾರಿಜಾತ, ಸುಪರ್ಣ, ಕೇತಕಿ, ಗೋರಂಟಿ, ಸಪ್ತಪರ್ಣ, ದಾಸವಾಳ ಮೊದಲಾದ ಪುಷ್ಪತರುಗಳಿಂದಲೂ ನಿಂಬೆ, ಕಿತ್ತಳೆ, ನೆಲ್ಲಿ, ದಾಳಿಂಬೆ ಮೊದಲಾದ ಫಲವೃಕ್ಷಗಳಿಂದಲೂ, ಶಿರೀಷ, ಜಾಜಿ, ಮಲ್ಲಿಗೆ ಮೊದಲಾದ ಪುಷ್ಪಲತೆಗಳಿಂದಲೂ, ಕೋಗಿಲೆಗಳ ಮಧುರಾಲಾಪಗಳಿಂದಲೂ, ಪಾರಿವಾಳಗಳ ಮಂಜುಳ ಕೂಜಿತಗಳಿಂದಲೂ, ಗರುಡ, ಚಕ್ರವಾಕ, ಕೌಶಿಕ, ಕ್ರೌಂಚ, ಕಾರಂಡ ಮೊದಲಾದ ಪಕ್ಷಿಸಂಕುಲಗಳಿಂದಲೂ, ಪುಷ್ಪಗಳ ಮಧುರ ರಸವನ್ನು ಹೀರಿ ಮತ್ತಗಳಾದ ದುಂಬಿಗಳ ಝೇಂಕಾರದಿಂದಲೂ, ಮತ್ತು ಅನೇಕ ವಿಧವಾದ ಪಕ್ಷಿವೃಂದಗಳಿಂದಲೂ ಅತಿ ರಮಣೀಯವಾದ ತರು ಗುಲ್ಮ ಲತಾ ಸಮೂಹಗಳಿಂದಲೂ, ಕಂಗೊಳಿಸುತ್ತಿದ್ದ ಆ ಪಟ್ಟಣವು ಬಹಳ ಮನರಂಜನೀಯವಾಗಿತ್ತು.

ಇಂತಹ ಪಟ್ಟಣವನ್ನು ದೇವಲನು ಪ್ರವೇಶಿಸಲು, ಆ ಪುರದ ದ್ವಿಜಸ್ತ್ರೀಯರು ಮಂಗಳ ಗೀತೆಯೊಡನೆ ಆ ಮಹಾಪುರುಷನಿಗೆ ಆರತಿಯನ್ನೆತ್ತಿದರು. ಆ ಸಮಾರಂಭವನ್ನು ವೀಕ್ಷಿಸುವುದಕ್ಕಾಗಿ ನಗರದ ರಾಜಮಾರ್ಗಗಳ ಇಕ್ಕೆಲಗಳಲ್ಲೂ ಶೋಭಿಸುತ್ತಿದ್ದ ಉಪ್ಪರಿಗೆಗಳಲ್ಲಿ ಕುಳಿತ ಭೂಸುರ ಕನ್ಯೆಯರು ದೇವಲನ ಮೇಲೆ ಪುಷ್ಪವೃಷ್ಟಿಯನ್ನು ಕರೆದರು. ಇಕ್ಕೆಲಗಳ ಮುಂಗಡೆಯಲ್ಲಿ ಜನರ ಗದ್ದಲವನ್ನು ತಡೆಯಲು ದಂಡಪಾಣಿಗಳಾದ ಭಟರು ಅವರನ್ನು ಪಕ್ಕಕ್ಕೆ ಸರಿಸುತ್ತಿದ್ದರು. ಬ್ರಾಹ್ಮಣರು ದೇವಲನ ಸುತ್ತಮುತ್ತ ವೇದಘೋಷ ಮಾಡುತ್ತಾ ಸ್ವಸ್ತಿ ವಾಚನ ಮಾಡುತ್ತಿದ್ದರು. ದೇವಲನ ಆಗಮನವನ್ನು ಆದರ ಪೂರ್ವಕವಾಗಿ ನೀಲನೇತ್ರೆಯರಾದ ಪುರಸ್ತ್ರೀಯರು ವೀಕ್ಷಿಸುತ್ತಿರಲು, ಪುರೋಹಿತರು, ಮಂತ್ರಿಗಳು ಮೊದಲಾದ ಪರಿವಾರದಿಂದೊಡಗೂಡಿದ ದೇವಲನು ಅರಮನೆಯನ್ನು ಪ್ರವೇಶಿಸಿದನು.

ಒಂದು ಶುಭದಿನ, ಶುಭತಾರೆ, ಶುಭ ಲಗ್ನದಲ್ಲಿ ಮಂಗಳವಾದ್ಯಗಳು ಭೋರ್ಗರೆಯುತ್ತಿರಲು, ವಂದಿಮಾಗಧರು ಪರಾಕುಗಳನ್ನು ಹೇಳುತ್ತಾ ದೇವಲನ ಗುಣಗಾನ ಮಾಡುತ್ತಿರಲು, ಮಂತ್ರಿಗಳೂ ಸಕಲ ಪೌರರೂ, ಸಾಮಂತರೂ ಓಲೈಸುತ್ತಿರಲು, ಬ್ರಾಹ್ಮಣರು ವೇದಘೋಷ ಮಾಡುತ್ತಿರಲು ರತ್ನ ಸಿಂಹಾಸನಾರೋಹಣ ಮಾಡಿದ

ದೇವಲನಿಗೆ ರತ್ನಕುಂಭಗಳಲ್ಲಿ ಸಂಗ್ರಹಿಸಿ ತಂದ ಸಪ್ತ ಸಮುದ್ರಗಳ, ಪುಣ್ಯ ನದಿಗಳ ಹಾಗೂ ತೀರ್ಥಗಳ ಪವಿತ್ರ ಜಲಗಳಿಂದ ಅಭಿಷೇಚಿಸಿ, ಬಹು ವೈಭವದಿಂದಲೂ ಸಂಭ್ರಮದಿಂದಲೂ, ಪಟ್ಟಾಭಿಷೇಕವನ್ನು ಮಾಡಿದರು. ಪಟ್ಟಾಭಿಷಿಕ್ತನಾದ ದೇವಲನು ಸಮಸ್ತ ಪೌರರಿಂದ, ಸಾಮಂತಾದಿಗಳಿಂದ ಕೂಡಿದವನಾಗಿ, ದೇವ ಸಮೂಹ ದಿಂದ ಕೂಡಿದ ಮಹೇಂದ್ರನು ಅಮರಾವತಿಯಲ್ಲಿ ಶೋಭಿಸುವಂತೆ ವಿರಾಜಮಾನನಾಗಿ ಕಂಗೊಳಿಸಿದನು. ಈ ರೀತಿ ರತ್ನ ಸಿಂಹಾಸನಾರೂಢನಾಗಿ ಓಲೈಸಿಕೊಳ್ಳುತ್ತಿದ್ದ ದೇವಲನಿಗೆ ರಾಜನಾದ ಸುನಾಭನೂ, ರಾಜಪುತ್ರರು, ಮಂತ್ರಿಗಳು, ಸಾಮಂತರು ಮತ್ತು ಇನ್ನಿತರ ಸಮಸ್ತ ಅಧಿಕಾರ ವರ್ಗದವರೂ ಭಕ್ತಿ, ಗೌರವ, ಪ್ರೇಮಗಳಿಂದ ನಮಸ್ಕರಿಸಿ, ರಾಜ್ಯಲಾಂಛನವಾದ ರಾಜಮುದ್ರೆಯನ್ನು ಅರ್ಪಿಸಿ, ಈ ರಾಜ್ಯವು ಪ್ರತಿ ವರ್ಷ ಆರು-ಕೋಟಿ ವರಹಗಳ ವರಮಾನವುಳ್ಳದ್ದೆಂದು ಬಿನ್ನೈಸಿಕೊಂಡು ಆ ದೇಶದ ಸಮಸ್ತ ರಾಜ ಮರ್ಯಾದೆಗಳನ್ನೂ ಸಮರ್ಪಿಸಿ ಆದಾಯ ವೆಚ್ಚಗಳನ್ನು ಹೊಸದಾಗಿ ಅಭಿಷಿಕ್ತ ನಾದ ರಾಜನ ಗಮನಕ್ಕೆ ತಂದರು. ಅನಂತರ ದೇವಲ ಮಹಾರಾಜನು ಈ ಸುಸಂದರ್ಭ ದಲ್ಲಿ ದೈವಭಕ್ತರಾದ ಬ್ರಾಹ್ಮಣರಿಗೆ ನೂರು ಅಗ್ರಹಾರಗಳನ್ನು ದಾನವಾಗಿ ಕೊಟ್ಟು, ಬೊಕ್ಕಸದಲ್ಲಿದ್ದ ಸುವರ್ಣಾದಿಗಳನ್ನು ಸಮಸ್ತ ಬ್ರಾಹ್ಮಣರಿಗೂ, ಸ್ತುತಿಪಾಠಕರಿಗೂ, ಗಾಯಕರಿಗೂ, ಹುಟ್ಟು ಕುರುಡರಿಗೂ, ಅನಾಥರಿಗೂ ಪಾತ್ರವರಿತು ದಾನಮಾಡಿ ಅವರನ್ನೆಲ್ಲಾ ಸಂತೋಷಗೊಳಿಸಿದನು. ಅಲ್ಲದೆ ಆ ದೇಶದ ಅಧಿಕಾರಿಗಳನ್ನು ಬರಮಾಡಿ ಅವರಿಗೆ ಸರ್ವಸಿದ್ಧಗಳಾದ ಭರವಸೆಗಳನ್ನಿತ್ತು, ಅವರು ಪ್ರಜೆಗಳ ಪ್ರೇಮ, ವಿಶ್ವಾಸಗಳನ್ನು ಗಳಿಸಿ ಕೀರ್ತಿ ಸಂಪನ್ನರಾಗಿ ಆಡಳಿತ ನಡೆಸಬೇಕೆಂದು ಅಪ್ಪಣೆ ಕೊಟ್ಟು ಸನ್ಮಾನಿಸಿ ಅವರವರ ಸ್ಥಳಗಳಿಗೆ ಕಳುಹಿಸಿದನು. ಆ ದೇವಲ ಮಹಾರಾಜನು ಸುಬುದ್ಧಿ, ಕಾರ್ಯ ದಕ್ಷ, ನೀತಿಮಂತ, ದೀರ್ಘದರ್ಶಿನರೆಂಬ ಆಡಳಿತದಕ್ಷರಾದ ನಾಲ್ವರು ತೀಕ್ಷ್ಣಮತಿ ಗಳನ್ನು ಮಂತ್ರಿಗಳನ್ನಾಗಿ ನೇಮಿಸಿಕೊಂಡನು. ಆ ನಾಲ್ವರು ಮಂತ್ರಿಗಳೂ ಮಹಾರಾಜ ನಾದ ದೇವಲನಪ್ಪಣೆಯ ಮೇರೆಗೆ ರಾಜ್ಯಭಾರ ನಡೆಸುತ್ತಾ ದೇವಲನಿಗೆ ಕಾಲೋಚಿತ ಮಂತ್ರಾಲೋಚನೆಗಳನ್ನು ಹೇಳುತ್ತಾ ಪರಮ ಸಂತೋಷವನ್ನುಂಟು ಮಾಡಿದರು.

ಈ ರೀತಿಯಾಗಿ ಬ್ರಹ್ಮನು ಹೇಳಲು, ಅದಕ್ಕೆ ನಾರದನು, ಎಲೈ ಪಿತಾಮಹನೇ, ಆಮೋದ ಪಟ್ಟಣಕ್ಕೆ ಭದ್ರಬಾಹುವಿನ ಮಗನಾದ ಬಹು ತೇಜಸ್ವಿಯೂ ಮತ್ತು ಮಹಾ ಪರಾಕ್ರಮಶಾಲಿಯೂ ಆದ ಸುನಾಭನೆಂಬುವನು ಮೊದಲು ರಾಜನಾಗಿದ್ದನು. ಅವನು ದೇವಲನಿಗೆ ತನ್ನ ರಾಜ್ಯವನ್ನು ವಹಿಸಿಕೊಡಲು ಕಾರಣವೇನು? ಈ ರೀತಿ ಪರಮಾತ್ಮನ ಅಪ್ಪಣೆಯಾಗಲು ಕಾರಣವಾದರೂ ಏನು? ಅವನ ಚರಿತ್ರೆ ಪ್ರಭಾವಗಳು ಎಂತಹವು? ಈ ಎಲ್ಲಾ ವಿಚಾರಗಳನ್ನು ಸವಿಸ್ತಾರವಾಗಿ ಹೇಳಬೇಕೆಂದನು. ಅದಕ್ಕೆ ಬ್ರಹ್ಮನು ಆಮೋದ ಪಟ್ಟಣಕ್ಕೆ ರಾಜನಾದ ಸುನಾಭನ ಚರಿತ್ರೆಯನ್ನು ಹೇಳುವೆನು ಕೇಳು. ದೇವಲನು ಪಟ್ಟಾಭಿಷಿಕ್ತನಾದ ನಂತರ ಧರ್ಮಾತ್ಮನಾದ ಹಿಂದಿನ ರಾಜನಾದ



ಚಿತ್ರ : ದೇವಾಂಗಮಠ ಪ್ರಕಾಶಿಕೆ ಕೃಪೆಯಿಂದ.

ಸುನಾಭನು ಪತ್ನಿ ಸಮೇತನಾಗಿ ದೇವಲನನ್ನು ಕಂಡು ಹರ್ಷದಿಂದ ಕೂಡಿದವನಾಗಿ, ಅವನನ್ನು ಕುರಿತು ಸರ್ವಜ್ಞನಾದ ಪರಾಕ್ರಮಿಯಾದ ದೇವಲ ಮಹಾರಾಜನೇ ನಾವು ಇನ್ನು ಹೋಗುವೆವು. ನಮಗೆ ಅಪ್ಪಣೆಯನ್ನು ಕೊಡು ಎಂದನು. ಆದಕ್ಕೆ ದೇವಲನು ಆಶ್ಚರ್ಯಭರಿತನಾಗಿ ಸುನಾಭನನ್ನು ನೋಡಿ, ಎಲೈ ಸುನಾಭ ಮಹಾರಾಜನೇ, ನೀನು ಹೋಗುವುದೆಲ್ಲಿಗೆ ? ಇದು ನನಗೆ ಆಶ್ಚರ್ಯವಾಗಿದೆ. ಎಲೈ ಸದ್ಗುಣಿಯೇ ನಾವು ಇಲ್ಲಿಯೇ ಇರುವೆವು. ನೀನೂ ನಮ್ಮೊಡನೆಯೇ ಇದ್ದು ನಮಗೆ ರಾಜ್ಯಾಡಳಿತದಲ್ಲಿ ಸಹಾಯಕನಾಗಿರು ಎಂದು ಸುನಾಭನಿಗೆ ಹೇಳಿದನು. ಆಗ ಸುನಾಭನು ದೇವಲನನ್ನು ಉದ್ದೇಶಿಸಿ, ಎಲೈ ದೇವಲರಾಜೇಂದ್ರನೇ, ನಾನು ಇಲ್ಲಿ ಇರುವುದು ಸರಿಯಲ್ಲ. ನನ್ನ ಮನಸ್ಸೆಲ್ಲಾ ಹೊರಡುವುದರಲ್ಲೇ ಆಸಕ್ತವಾಗಿದೆ. ನಿನ್ನನುಗ್ರಹದಿಂದ ನಾನು ದುಸ್ತರವಾದ ಶಾಪದಿಂದ ವಿಮುಕ್ತನಾದೆನು. ನನಗೆ ಅಪ್ಪಣೆಯನ್ನು ಕೊಡು. ನಾನು ತೆರಳುವೆನು ಎಂದನು. ಇದರಿಂದ ದೇವಲನು ಆಶ್ಚರ್ಯಚಕಿತನಾಗಿ ಮಹಾತ್ಮನಾದ ಸುನಾಭನೇ, ನಿನ್ನ ಪೂರ್ವ ಚರಿತ್ರೆಯೇನು ? ನೀನು ಶಾಪಗ್ರಸ್ತನಾಗಲು ಕಾರಣವೇನು ? ಇದು ಬಹು ಸೋಜಿಗವಾಗಿದೆ. ಕುತೂಹಲನಾದ ನನಗೆ ಎಲ್ಲವನ್ನು ಹೇಳೆನಲು ಅದಕ್ಕೆ ನೃಪೋತ್ತಮನಾದ ಸುನಾಭನು ಎಲೈ ದೇವಲ ಮಹಾರಾಜನೆ ನೀನು ಕೇಳಿದುದರಿಂದ ನನ್ನ ಪೂರ್ವ ಚರಿತ್ರೆಯನ್ನು ಹೇಳುತ್ತೇನೆ ಕೇಳು.

ಪೂರ್ವದಲ್ಲಿ ನಾನು ಗಂಧರ್ವ ರಾಜನಾದ ರುಕ್ಮರಥನೆಂಬುವನ ಮಗನಾಗಿದ್ದೆನು. ನನ್ನ ತಂದೆಯು ಮಹಾ ಸಮರ್ಥನೂ, ಸತ್ಯವಾದಿಯೂ, ತೇಜಸ್ವಿಯೂ, ತಪೋನಿಧಿಯೂ ಆಗಿದ್ದನು. ಅವನು ಸಕಲೈಶ್ವರ್ಯ ಸಂಪನ್ನನಾಗಿ ತ್ರಿಭುವನಗಳಲ್ಲಿ ಪ್ರಸಿದ್ಧನಾಗಿದ್ದನು. ಅಷ್ಟವಸುಗಳಲ್ಲಿ ಕೊನೆಯ ವಸುವಿನಿಂದ ಹೆಣ್ಣು ನವಿಲಿನಲ್ಲಿ ಜನಿಸಿದನು. ಅವನು ಮಹೇಂದ್ರ ಪರ್ವತದ ತಪ್ಪಲಿನಲ್ಲಿದ್ದ, ಬಹು ರಮಣೀಯವಾದ, ಚಿನ್ನದ ಪ್ರಾಕಾರಗಳನ್ನು ಹೊಂದಿದ ವಜ್ರ, ವೈಡೂರ್ಯ ನಿರ್ಮಿತಗಳಾದ ಮಂಟಪಗಳುಳ್ಳ ಅರಮನೆಗಳಿಂದ ಕೂಡಿದ ಅನುಪಮವಾದ, ಸಮಸ್ತೈಶ್ವರ್ಯ ಸಂಪನ್ನವಾದ, ಸರ್ವಭೋಗಗಳಿಗೆ ನೆಲೆಯಾದ ಲಕ್ಷ್ಮೀವರ್ಧನವೆಂಬ ಪಟ್ಟಣದ ರಾಜನಾಗಿದ್ದು ಅಲ್ಲಿ ಅವನು ಸಮಸ್ತ ಗಂಧರ್ವರನ್ನು ಪರಿಪಾಲಿಸುತ್ತಿದ್ದನು. ಆ ನನ್ನ ತಂದೆಗೆ ಪಾರಿಜಾತ ಪರ್ವತಕ್ಕೆ ಒಡೆಯನಾದ ಹೇಮಮಾಲಿಯ ಪುತ್ರಿಯಾದ ಸುಕೋಮಲೆಯಾದ ಪದ್ಮಕೋಮಲೆ ಎಂಬುವಳು ಪತ್ನಿಯಾಗಿದ್ದಳು. ಆಕೆಯೇ ನನ್ನ ತಾಯಿ. ನನ್ನ ತಂದೆಯು ಹೇಮಮಾಲಿಯನ್ನು ಯುದ್ಧದಲ್ಲಿ ಜಯಿಸಿ ಆಕೆಯನ್ನು ಮದುವೆಯಾಗಿದ್ದನು. ಸುನಾಭನು ತನ್ನ ಸಂಗತಿಯನ್ನು ಈ ರೀತಿಯಾಗಿ ಹೇಳಲು ಋಷಿಪುಂಗವನಾದ ದೇವಲ ಮಹಾರಾಜನು ಸುನಾಭನನ್ನು ಕುರಿತು ಪುರುಷೋತ್ತಮನಾದ ಸುನಾಭನೇ ಇದುವರೆವಿಗೂ ನೀನು ಹೇಳಿದುದೆಲ್ಲವೂ ವಿಸ್ಮಯಕರವಾಗಿದ್ದು ನಿನ್ನ ಪಿತನಾದ ರುಕ್ಮರಥನು ಎಂಟನೆಯ ವಸುವಿನಿಂದ ಮಯೂರಿಯಲ್ಲಿ ಹೇಗೆ ಜನಿಸಿದನು ? ಈ ಚರಿತ್ರೆಯನ್ನು ನನಗೆ ತಿಳಿಸೆನಲು,

ಅದಕ್ಕೆ ಸುನಾಭನು ಸಂತೋಷದಿಂದ ತನ್ನ ತಂದೆಯ ಚರಿತ್ರೆಯನ್ನು ದೇವಲನಿಗೆ ಹೇಳಲುಪಕ್ರಮಿಸಿದನು.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿ ಬ್ರಹ್ಮನಾರದ ಸಂವಾದ ರೂಪ ಉತ್ತರ ಖಂಡದ ದೇವಾಂಗ ಚರಿತ್ರೆಯಲ್ಲಿ ದೇವಾಂಗ ಪಟ್ಟಾಭಿಷೇಕವೆಂಬ ಮೂರನೆಯ ಅಧ್ಯಾಯ ಮುಗಿದುದು.

ಓಂ

ನಾಲ್ಕನೆಯ ಅಧ್ಯಾಯ

ಸುನಾಭೋಪಾಖ್ಯಾನ

ಸುನಾಭನು ದೇವಲನನ್ನು ಕುರಿತು ಎಲೈ ದೇವಲ ಮಹಾರಾಜನೇ ನನ್ನ ತಂದೆಯ ಚರಿತ್ರೆಯನ್ನು ಹೇಳುವೆನು ಕೇಳು. ಎಲೈ ಪುಣ್ಯ ಚರಿತ್ರನೇ ಪೂರ್ವದಲ್ಲಿ ಅಷ್ಟೈಶ್ವರ್ಯ ಸಂಪನ್ನನಾದ ಸಾವಿತ್ರನೆಂಬ ಎಂಟನೆಯ ವಸುವು ಪ್ರಸಿದ್ಧನಾಗಿದ್ದನು. ಮಹಾಪರಾಕ್ರಮ ಶಾಲಿಯಾದ ತೇಜಸ್ವಿಯಾದ ದೇವೇಂದ್ರನಿಗೆ ಸಮಾನನಾದ ಆತನು ಚಂದ್ರಮೌಳಿಯಾದ ಪರಮಾತ್ಮನನ್ನು ಬಹು ಭಕ್ತಿಯಿಂದ ಪ್ರತಿ ದಿನವೂ ಆರಾಧಿಸುತ್ತಿದ್ದನು. ಅವನು ಒಂದಾನೊಂದು ದಿನ ಅನೇಕ ರತ್ನಖಚಿತವಾದ ಕೋಟಿಸೂರ್ಯಪ್ರಕಾಶಮಾನ ವಾದ ಕಿರೀಟವನ್ನು ಧರಿಸಿಕೊಂಡು ಹಾರ ಕೇಯೂರ ಕಂಕಣಾದ್ಯಲಂಕಾರಗಳಿಂದಲಂಕೃತ ವಾದ ದಿವ್ಯ ವಿಮಾನಾರೂಢನಾಗಿ ಪರಮಾತ್ಮನ ಸೇವೆಗಾಗಿ ರಜತಾಚಲವಾದ ಕೈಲಾಸ ಪರ್ವತಕ್ಕೆ ಬಂದನು. ಅಲ್ಲಿದ್ದ ಚಂದ್ರ ಪುಷ್ಕರವೆಂಬ ಸರೋವರವನ್ನು ಕಂಡು ಹರ್ಷ ದಿಂದ ಅದರಲ್ಲಿದ್ದ ಕಮಲಗಳನ್ನು ತಾನು ಹೊಂದುವ ಆಸೆಯಿಂದ ಕೂಡಿದವನಾಗಿ ಅದರ ಒಳಗೆ ಬಂದನು. ಆ ಸರೋವರವು ಕಮಲಗಳಿಂದಲೂ ರಾಜಹಂಸಗಳಿಂದಲೂ ಚಕ್ರವಾಕ, ಕಾರಂಡ, ನೀರು ಕೋಳಿಗಳಿಂದ ಕೂಡಿದ್ದು ಮತ್ತಭೃಂಗಗಳಿಂದ ಆವೃತವಾಗಿತ್ತು. ತನ್ನ ಸುತ್ತಲೂ ಮಳಲ ದಿಣ್ಣೆಗಳಿಂದ ಕಂಗೊಳಿಸುತ್ತಾ ಆ ಸರೋವರವು ಸಾವಿತ್ರನ ಮನಸ್ಸನ್ನು ಆಕರ್ಷಿಸಿತು. ಅದರ ತೀರವು ಪುನ್ನಾಗ, ಮಲ್ಲಿಗೆ, ಮಾಧವಿ, ಪಾರಿಜಾತ ಮೊದಲಾದ ಪುಷ್ಪತರುಗಳಿಂದಲೂ, ರಸಾಲ, ಹಲಸು, ಪಿಪ್ಪಲ ಮೊದಲಾದ ಫಲ ವೃಕ್ಷಗಳಿಂದಲೂ, ಕೋಗಿಲೆ, ಶುಕ, ಸಾರಿಕಾ ಮೊದಲಾದ ಪಕ್ಷಿಗಳ ಧ್ವನಿಗಳಿಂದಲೂ, ಭೃಂಗಗಳ ಝೇಂಕಾರಗಳಿಂದಲೂ, ಅನೇಕ ಪಕ್ಷಿಗಳಿಗಾಶ್ರಯವಾದ ನಾನಾ ವಿಧಗಳಾದ ವೃಕ್ಷ, ತರು ಲತೆ ಗುಲ್ಮಗಳ ಸಮೂಹಗಳಿಂದ ನಿಬಿಡವಾಗಿದ್ದು ಶೋಭಿಸುತ್ತಿತ್ತು.

ಈ ರೀತಿ ಮನೋಹರವಾಗಿದ್ದ, ಜನರಹಿತವಾದ, ಆ ಸರೋವರದ ತೀರದ ಉದ್ಯಾನವನಗಳಿಂದ ಸುಗಂಧವಾದ ಮಂದ ಮಾರುತವು ಬೀಸುತ್ತಿರಲು, ಇದರಿಂದ ಸಂತೋಷ ಪರವಶನಾದ ಸಾವಿತ್ರನು ಮುಂದೆ ಅಡಿಯಿಡಲಾರದೆ ಅಲ್ಲೇ ನಿಶ್ಚೇಷ್ಟಿತನಾಗಿ ಕಾಮೋದ್ರಿಕ್ತನಾದನು. ಕುಸುಮಾಯುಧನ ಪುಷ್ಪ ಬಾಣಗಳಿಂದ ಗಾಯಗೊಂಡವನಾಗಿ, ಮನ್ಮಥ ಜ್ವರಪೀಡಿತನಾಗಿ ಕಂಗೆಟ್ಟು, ತನ್ನಷ್ಟಕ್ಕೆ ತಾನೇ ಮಾತನಾಡಿಕೊಳ್ಳುತ್ತಾ ಖಿನ್ನನಾಗಿ, ಮನ್ಮಥನನ್ನು ನಿರ್ದಯನೆಂದು ದೂಷಿಸುತ್ತಾ, ತನ್ನ ಮುಂದೆ ಕಾಣುತ್ತಿದ್ದ ಪಲ್ಲವಗಳು ಮನ್ಮಥನ ಧನುಸ್ಸಿನಿಂದ ಹೊರಟು ಬಂದ ಹರಿತವಾದ ಬಾಣಗಳೆಂದು ಭ್ರಮಿಸುತ್ತಾ, ಭ್ರಮರಗಳನ್ನು ಉರಿಯುತ್ತಿರುವ ಕೆಂಡಗಳೆಂದೇ ತಿಳಿದನು. ಹೀಗೆ ಮತಿಗೆಟ್ಟ ಅವನಿಗೆ ಮಂದಮಾರುತನ ತಂಗಾಳಿಯು ಬಿರುಗಾಳಿಯಂತೆ ತೋರುತ್ತಿರಲು, ಆ ಪುಷ್ಪಪರಾಗಗಳೇ ಅಗ್ನಿಕಣಗಳಂತೆ ಕಂಡವು ! ಅವನು ಮನ್ಮಥನನ್ನು ಮತ್ತೂ ದೂಷಿಸುತ್ತಾ ಎಲೈ ಮನ್ಮಥನೇ ನನ್ನನ್ನು ಈ ರೀತಿ ನಿನ್ನ ವಜ್ರಾಯುಧ ಸಮಾನವಾದ ಪುಷ್ಪ ಬಾಣಗಳಿಂದ ಪ್ರಹರಿಸಿ ಜರ್ಝರಿತನನ್ನಾಗಿ ಮಾಡಿ, ನನ್ನ ಸರ್ವಾವಯುವಗಳನ್ನೂ ಬೆಂಕಿಯಂತೆ ದಹಿಸಿ, ಚಿತ್ರಹಿಂಸೆ ಮಾಡಿ ಕೊಲ್ಲುತ್ತಿರುವೆ ಎಂದು ಪ್ರಲಾಪಿಸುತ್ತಿದ್ದನು. ಈ ರೀತಿ ಕಾಮವಿಕಾರದಿಂದ ಮತಿಗೆಟ್ಟು, ಸಾವಿತ್ರನು ಅಲ್ಲಿಯೇ ಮನೋಹರವಾಗಿ ತನ್ನ ಗರಿಗಳನ್ನು ಕೆದರಿಕೊಂಡು ಸಣ್ಣ ಸಣ್ಣ ಹೆಜ್ಜೆಗಳಿಂದ ಕುಣಿಯುತ್ತಿದ್ದ ಮಯೂರಿಯನ್ನು (ಹೆಣ್ಣು ನವಿಲನ್ನು) ಕಂಡು ಕಾಮೋದ್ದೀಪಿತನಾಗಿ, ತನ್ನ ಶಾಂಬರಿ ಮಾಯಾ ಪ್ರಭಾವದಿಂದ, ತನ್ನ ಕಾಮಪಿಪಾಸೆಯನ್ನು ತೀರಿಸಿಕೊಳ್ಳಲು, ಅದನ್ನು ತನ್ನ ಗೆಳತಿಯನ್ನಾಗಿ ಮಾಡಿಕೊಂಡು ಅವಳೊಡನೆ ಬಹು ಪ್ರೇಮದಿಂದ ಕ್ರೀಡಿಸಿದನು. ಆ ಮಯೂರಿಯಲ್ಲಿ ಅವನ ತೇಜಸ್ಸಿನಿಂದ ಸಕಲ ಜಗತ್ತನ್ನೂ ಬೆಳಗುವ ಮಹಾ ತೇಜಸ್ವಿಯಾದ ಒಬ್ಬ ಪುತ್ರನು ಜನಿಸಿದನು. ಆಮೇಲೆ ಆ ಯುವತಿಯು ಅವನ ಪ್ರಭಾವದಿಂದ ತನ್ನ ಹಿಂದಿನ, ಮಯೂರಿಯ ಸ್ವರೂಪವನ್ನು ಹೊಂದಿ ಅಲ್ಲಿ ಸಂಚರಿಸುತ್ತಿದ್ದಳು.

ಅನಂತರ ತೃಪ್ತ ಕಾಮನಾದ ಸಾವಿತ್ರನು ಆ ಪುತ್ರನನ್ನು ತನ್ನ ವಿಮಾನದಲ್ಲಿ ಕೂರಿಸಿಕೊಂಡು ಸ್ವರ್ಗಕ್ಕೆ ಬಂದು ತನ್ನ ಇಬ್ಬರು ಪತ್ನಿಯರಿಗೆ ಬಹು ಸಂತೋಷದಿಂದ ಕೊಟ್ಟನು. ಅವನು ಸಮಸ್ತ ದೇವತೆಗಳಿಂದೊಡಗೂಡಿ ಆ ಮಗುವಿಗೆ ರುಕ್ಮರಥನೆಂದು ನಾಮಕರಣ ಮಾಡಿದನು. ಆ ರುಕ್ಮರಥನು ಜಗದ್ವಿಖ್ಯಾತನಾಗಿ, ಕೆಲವು ಕಾಲ ಕಳೆದ ನಂತರ ತಪಸ್ಸನ್ನಾಚರಿಸಲು ಮಹೇಂದ್ರ ಪರ್ವತಕ್ಕೆ ಹೋದನು. ಅವನು ಆ ಮಹೇಂದ್ರ ಪರ್ವತದಲ್ಲಿ ಶುಚಿರ್ಭೂತನಾಗಿ ಜಿತೇಂದ್ರಿಯನಾಗಿ ದೃಢ ಮನಸ್ಸಿನಿಂದ ಬ್ರಹ್ಮನನ್ನು ಕುರಿತು ತಪಸ್ಸನ್ನಾಚರಿಸಿದನು.

ಹೀಗೆ ಏಕ ಮನಸ್ಕನಾಗಿ ತಪಸ್ಸನ್ನಾಚರಿಸುತ್ತಿರಲು ಅವನ ದೃಢ ಶರೀರವು ತಪಸ್ಸಿನಿಂದ ಕೃಶವಾಗಿ ಮೂಳೆಯ ಹಂದರವಾಗಿ ಕಾಣಿಸುತ್ತಿತ್ತು. ಅವನ ತಪಸ್ಸಿಗೆ

ಭಗವಾನ್ ಬ್ರಹ್ಮ ದೇವನು ಮೆಚ್ಚಿ ಪ್ರತ್ಯಕ್ಷನಾಗಿ ಆ ರುಕ್ಮರಥನಿಗೆ ಯಾರಿಂದಲೂ ಮರಣವಾಗದಂತೆ ವರವನ್ನಿತ್ತನು. ರುಕ್ಮರಥನು ಆ ವರದಿಂದ ಗರ್ವಿತನಾಗಿ ಸಕಲ ಲೋಕಗಳಲ್ಲಿಯೂ ತನಗೆಣೆಯಾರೂ ಇಲ್ಲವೆಂದು ಅಹಂಕಾರದಿಂದ ಸಂಚರಿಸುತ್ತಿದ್ದನು. ಹೀಗಿರಲಾಗಿ ಅವನು ಒಂದು ದಿನ ವಿಶ್ವಕರ್ಮನ ಬಳಿಗೆ ಬಂದು ಗರ್ವದಿಂದ ಎಲೈ ವಿಶ್ವಕರ್ಮನೇ ಮಹೇಂದ್ರ ಪರ್ವತದಲ್ಲಿ ನನಗಾಗಿ ರಮಣೀಯವಾದ ಒಂದು ಪಟ್ಟಣವನ್ನು ನಿರ್ಮಿಸಿಕೊಡೆಂದನು. ಅದಕ್ಕೆ ವಿಶ್ವಕರ್ಮನು ಸಿಟ್ಟುಗೊಂಡು, ಎಲೈ ರುಕ್ಮರಥನೇ ನೀನಾಡಿದ ಮಾತು ತಿರ್ಯಗ್ಜಾತೀಯವೆಂದು ತಿರಸ್ಕರಿಸಿ ಹೀಯಾಳಿಸಿದನು. ಇದರಿಂದ ಅವಮಾನಿತನಾದ ರುಕ್ಮರಥನು ಕ್ರೋಧಗೊಂಡು ಅವನ ಮೇಲೆ ಯುದ್ಧಕ್ಕೆ ಸಿದ್ಧನಾದನು. ಇದನ್ನು ಕಂಡು ವಿಶ್ವಕರ್ಮನೂ ಅವನೊಡನೆ ಯುದ್ಧಕ್ಕೆ ಸಿದ್ಧನಾದನು. ಹೀಗೆ ಯುದ್ಧ ಸನ್ನದ್ಧರಾದ ಅವರಿಬ್ಬರೂ ಒಬ್ಬರೊಡನೊಬ್ಬರು ಯುದ್ಧ ಮಾಡುತ್ತಿರಲು, ರುಕ್ಮರಥನಿಂದ ಬಿಡಲ್ಪಟ್ಟ ವಜ್ರಾಯುಧ ಸಮಾನವಾದ ಬಾಣಗಳಿಂದ ವಿಶ್ವಕರ್ಮನು ನೊಂದು ಗಾಯಗೊಂಡು ಸೋತನು.

ಸೋತ ವಿಶ್ವಕರ್ಮನು ರುಕ್ಮರಥನಿಗೆ ಬ್ರಹ್ಮನಿಂದ ಕೊಡಲ್ಪಟ್ಟ, ಯಾರಿಂದಲೂ ಮರಣವಾಗದ ವರವನ್ನು ತಿಳಿದು ಅವನೊಡನೆ ಸ್ನೇಹ ಮಾಡಿಕೊಂಡು, ಆ ಮಹೇಂದ್ರ ಗಿರಿಯಲ್ಲಿ ರಮಣೀಯವಾದ ಒಂದು ಪಟ್ಟಣವನ್ನು ಕಟ್ಟಿಕೊಟ್ಟನು. ಆ ಪಟ್ಟಣವು ಹೇಮಪ್ರಾಕಾರಗಳಿಂದಲೂ ವಜ್ರ, ವೈಡೂರ್ಯಗಳ ತೋರಣಗಳಿಂದಲೂ, ಅರಮನೆಗೆ ಸಮಾನವಾದ ಗಗನ ಚುಂಬಿ ಗೃಹಗಳಿಂದಲೂ ಶೋಭಿತವಾಗಿ, ಲಕ್ಷ್ಮೀವರ್ಧನವೆಂಬ ಹೆಸರಿನಿಂದ ಕಂಗೊಳಿಸುತ್ತಾ ಸಮಸ್ತ ಭೋಗ ಸಮೃದ್ಧವಾಗಿ ತನಗೆಣೆಯಾದ ಬೇರೊಂದು ಪಟ್ಟಣವಿಲ್ಲವೆಂಬಂತೆ ಮೆರೆಯುತ್ತಿತ್ತು. ವಿಶ್ವಕರ್ಮನಿಂದ ನಿರ್ಮಿತವಾದ ಆ ದಿವ್ಯ ಸುಂದರ ನಗರವನ್ನು ರುಕ್ಮರಥನು ನೋಡಿ ಬಹಳ ಸಂತೋಷಗೊಂಡು ಆ ಪಟ್ಟಣದಲ್ಲಿ ತಾನು ಪಟ್ಟಾಭಿಷಿಕ್ತನಾಗಿ ಸಮಸ್ತ ಗಂಧರ್ವರನ್ನು ಪರಿಪಾಲಿಸುತ್ತಿದ್ದನು.

ಎಲೈ ದೇವಲ ಮಹಾರಾಜನೇ ಶೂರನಾದ ಆ ರುಕ್ಮರಥನು, ಗಂಧರ್ವರನ್ನು ಪರಿಪಾಲಿಸುತ್ತಾ ತನ್ನ ಸಾಮರ್ಥ್ಯದಿಂದ ಲೋಕಕಂಟಕರಾದ ಅಸಂಖ್ಯಾತ ರಾಕ್ಷಸರನ್ನು ಯುದ್ಧದಲ್ಲಿ ನಾಮಾವಶೇಷ ಮಾಡಿದನು. ಇದರಿಂದಾಗಿ ಸಮಸ್ತ ದೇವತೆಗಳೂ ರಾಕ್ಷಸರೊಡನೆ ಯುದ್ಧ ಸಂಭವಿಸಿದಾಗ, ಅವನ ಸಹಾಯವನ್ನೇ ಬೇಡುತ್ತಿದ್ದರು. ಹೀಗಿರಲು ಬಲಿಷ್ಠನಾದ ರುಕ್ಮರಥನು ಬೇಟೆಯಾಡಲಿಚ್ಛೆಯಿಂದ ಸಮಸ್ತ ಗಂಧರ್ವರಿಂದ ಕೂಡಿದವನಾಗಿ ಅಲ್ಲಿದ್ದ ಪಾರಿಜಾತ ವನಕ್ಕೆ ಬಂದು ಮನೋಹರವಾದ ಸರೋವರವೊಂದನ್ನು ಕಂಡನು.

ಆ ಸರೋವರದಲ್ಲಿ ತನ್ನ ಸಖಿಯರಿಂದೊಡಗೂಡಿ ಜಲಕ್ರೀಡೆಯಾಡುತ್ತಿದ್ದ ಸರ್ವಲಕ್ಷಣ ಸಂಪನ್ನೆಯಾದ, ಮಿಂಚಿನಂತೆ ಮೈಬಣ್ಣವುಳ್ಳ, ಒಬ್ಬ ನಾರೀಮಣಿಯನ್ನು

ನೋಡಿ, ಆಕೆಯ ರೂಪಕ್ಕೆ ಮೋಹಗೊಂಡ ರುಕ್ಮರಥನು, ಆಕೆಯ ಬಳಿಸಾರಿ, ಸಖಿಯರುಗಳಿಂದ ಎಲೈ ಸುಲಕ್ಷಣೆಯಾದ ಬಾಲೆಯೇ ನೀನಾರು. ಯಾರಮಗಳು, ನಿನ್ನ ಹೆಸರೇನೆಂದು ಕೇಳಿದನು. ಅದಕ್ಕೆ ಆಕೆಯು ಮೃದುಸ್ವರದಿಂದ ಎಲೈ ಸುಭಗಾ ನಾನು ಹೇಮಮಾಲಿಯೆಂಬ ಗಂಧರ್ವ ರಾಜನಮಗಳು. ಇದೋ ಸಮೀಪದಲ್ಲಿಯೇ ಇರುವ ವಿಲಾಸಪುರವೆಂಬ ನಗರದಲ್ಲಿ ನನ್ನ ತಂದೆಯಿರುವನು. ನನ್ನ ಹೆಸರು ಪದ್ಮಕೋಮಲೆ ಎಂದು ಹೇಳಿ ತನ್ನ ಗೆಳತಿಯರೊಡನೆ ತನ್ನ ಪುರಾಭಿಮುಖಳಾಗಿ ತೆರಳಿದಳು. ಇದನ್ನು ಕೇಳಿ ರುಕ್ಮರಥನು ಅವಳಲ್ಲೇ ನೆಟ್ಟ ಮನಸ್ಸುಳ್ಳವನಾಗಿ ಅವಳ ತಂದೆಯಾದ ಹೇಮಮಾಲಿಯ ಬಳಿಗೆ ತನ್ನ ಮಂತ್ರಿಗಳನ್ನು ಕನ್ಯಾರ್ಥವಾಗಿ ಕಳುಹಿಸಿದನು.

ವಿಚಕ್ಷಣರಾದ ಆ ಮಂತ್ರಿಗಳು ವಿಲಾಸ ನಗರಕ್ಕೆ ಬಂದು ಗಂಧರ್ವರಾಜನಾದ ಹೇಮಮಾಲಿಯನ್ನು ಕಂಡು, ತಮ್ಮೊಡೆಯನ ಅಭೀಷ್ಟವನ್ನು ತಿಳುಹಿಸಿದರು. ಹೇಮಮಾಲಿಯು ಅದನ್ನು ಕೇಳಿ ಅತ್ಯಂತ ಸೊಕ್ಕಿನಿಂದ ಆ ಮಂತ್ರಿಗಳನ್ನು ಕುರಿತು ತಿರ್ಯಗ್ಯೋನಿಯಲ್ಲಿ ಹುಟ್ಟಿದ ನಿಮ್ಮ ರಾಜನಿಗೆ, ದೇವಗಂಧರ್ವರು ಬೇಡಿದರೂ ಕೊಡದಿರುವ ಸರ್ವಾಂಗ ಸುಂದರಿಯಾದ ನನ್ನ ಮಗಳನ್ನು ಹೇಗೆ ಕೊಡುವುದು? ಆ ದುರ್ಬುದ್ಧಿಯು ನಿಮ್ಮನ್ನು ನನ್ನ ಬಳಿಗೆ ಹೇಗೆ ತಾನೆ ಕಳುಹಿಸಿದನು? ಸ್ವಯಂ ವರಾರ್ಹಳಾದ ನನ್ನ ಪುತ್ರಿಯನ್ನು ನಾನು ಯಾರಿಗೂ ಕೊಡುವುದಿಲ್ಲವೆಂದು ಹೇಳಿ, ಆ ಮಂತ್ರಿಗಳನ್ನು ಹಿಂದಕ್ಕೆ ಅಟ್ಟಿದನು. ಇದರಿಂದ ಖೇದಗೊಂಡ ಆ ಮಂತ್ರಿಗಳು ತಮ್ಮೊಡೆಯನಾದ ರುಕ್ಮರಥನ ಬಳಿಗೆ ಬಂದು ನಡೆದುದೆಲ್ಲವನ್ನೂ ಬಿನ್ನೈಸಿದರು. ಇದನ್ನು ಕೇಳಿ ಕುಪಿತನಾದ ಮಹಾತೇಜಸ್ವಿಯಾದ ರುಕ್ಮರಥನು ನಾನು ಈಗಲೇ ಹೋಗಿ ಆ ವಿಲಾಸಪುರಿಯನ್ನು ಸುಟ್ಟುಬೂದಿ ಮಾಡುವೆನು. ಹೇಮಮಾಲಿಯನ್ನು ಕೊಂದು ತುಂಡರಿಸುವೆನು ಎಂದು ನುಡಿದು ರಥಾರೋಹಣ ಮಾಡಿ ಸಮಸ್ತ ಸೇನೆಯೊಡನೆ ಅತಿ ಶೀಘ್ರವಾಗಿ ಆ ಪಟ್ಟಣದ ಸಮೀಪಕ್ಕೆ ಬಂದು ವೈರಿ ಭಯಂಕರವಾದ ಧನುಷ್ಟೇಂಕಾರವನ್ನು ಮಾಡಿ ಹೇಮಮಾಲಿಯನ್ನು ಯುದ್ಧಕ್ಕೆ ಕರೆದನು.

ಹೇಮಮಾಲಿಯು ತನ್ನ ಮೇಲೆ ರುಕ್ಮರಥನು ಯುದ್ಧಕ್ಕೆ ಬಂದಿರುವುದನ್ನು ತಿಳಿದು ಅತ್ಯಂತ ಕೋಪಾಟೋಪದಿಂದ ಅವನ ಮೇಲೆ ಯುದ್ಧ ಮಾಡಲು ನಿಶ್ಚಯಿಸಿ ತನ್ನ ಸಮಸ್ತ ಸೇನಾ ಸಮೇತನಾಗಿ ದಂಡೆತ್ತಿ ಹೊರಟು ಬಂದನು. ಹೀಗೆ ಆ ಮಹಾ ಪರಾಕ್ರಮಿಗಳೀರ್ವರೂ ಒಬ್ಬರಿಗೊಬ್ಬರೆದುರಾಗಿ ಭಯಂಕರವಾಗಿ ಯುದ್ಧ ಮಾಡಿದರು. ಯಮನ ದಂಡಾಯುಧಕ್ಕೆ ಸಮಾನವಾದ ರುಕ್ಮರಥನ ಬಾಣಗಳಿಂದ ಬಹಳವಾಗಿ ನೊಂದ ಹೇಮಮಾಲಿಯು ಮೂರ್ಛೆಗೊಂಡವನಾಗಿ ನೆಲದ ಮೇಲೆ ಬಿದ್ದನು. ಹೀಗೆ ಮೂರ್ಛಿತನಾಗಿ ನೆಲಕ್ಕೆ ಬಿದ್ದ ಹೇಮಮಾಲಿಯನ್ನು ಉದಾರಿಯಾದ ರುಕ್ಮರಥನು ಕನಿಕರದಿಂದ ಶೈತ್ಯೋಪಚಾರ ಮಾಡಿ ಆದರಿಸಿದನು. ಅವನ ಆರೈಕೆಯಿಂದ ಎಚ್ಚರಗೊಂಡ

ಹೇಮಮಾಲಿಯು, ಪಕ್ಕದಲ್ಲಿದ್ದು ತನ್ನನ್ನು ಉಪಚರಿಸುತ್ತಿದ್ದ ತನ್ನ ವೈರಿ ರುಕ್ಮರಥನನ್ನು ಕಂಡು ನಾಚಿದವನಾಗಿ ಅವನನ್ನು ಕುರಿತು ಎಲೈ ಮಹಾಭಾಗನಾದ ರುಕ್ಮರಥನೇ ಸಾಧು ಸಾಧು. ನಿನ್ನ ಸಹಾಯದಿಂದ ಸಂತುಷ್ಟನಾದ ನಾನು ಈ ದಿನವೇ ನನ್ನ ಪುತ್ರಿಯನ್ನು ನಿನಗೆ ವಿವಾಹ ಮಾಡಿಕೊಡುವೆನು, ಪರಿಗ್ರಹಿಸು ಎಂದು ಹೇಳಿ ಅವನನ್ನು ಸಮಾಧಾನ ಗೊಳಿಸಿ ತನ್ನ ಪುರಕ್ಕೆ ಕರೆದುಕೊಂಡು ಹೋಗಿ ತನ್ನ ಪುತ್ರಿಯಾದ ಪದ್ಮಕೋಮಲೆ ಯನ್ನು ಬಹು ವಿಜೃಂಭಣೆಯಿಂದ ರುಕ್ಮರಥನಿಗೆ ವಿವಾಹ ಮಾಡಿಕೊಟ್ಟನು.

ಇದರಿಂದ ಸಂತುಷ್ಟನಾದ ರುಕ್ಮರಥನು ತನ್ನ ಪತ್ನಿಯಾದ ಪದ್ಮಕೋಮಲೆ ಯೊಡನೆ ತನ್ನ ರಾಜಧಾನಿಯಾದ ಲಕ್ಷ್ಮೀವರ್ಧನಪುರಕ್ಕೆ ಬಂದು ಎಂದಿನಂತೆ ರಾಜ್ಯವನ್ನು ಪರಿಪಾಲಿಸುತ್ತಿದ್ದನು. ಸಾರ್ವಭೌಮನಾದ ದೇವಲನೇ ಆ ಮಹಾನುಭಾವರಾದ ಪದ್ಮ ಕೋಮಲೆ ರುಕ್ಮರಥರೇ ನನ್ನ ತಾಯಿ ತಂದೆಗಳು. ಅವರು ನನಗೆ ಸ್ವರ್ಣಕೇತುವೆಂದು ಹೆಸರಿಟ್ಟಿದ್ದರು. ದಿನದಿನಕ್ಕೆ ನಾನು ಪ್ರವರ್ಧಮಾನನಾಗಿ ಪ್ರಾಪ್ತ ವಯಸ್ಕನಾಗಲು, ಚಿತ್ರರೇಖೆಯೆಂಬ ಕನ್ಯೆಯನ್ನು ತಂದು ನನಗೆ ವಿವಾಹ ಮಾಡಿದರು. ಒಂದು ದಿನ ನಾನು ನನ್ನ ಪತ್ನಿ ಚಿತ್ರರೇಖೆಯೊಂದಿಗೆ ವಿಮಾನದಲ್ಲಿ ಕೈಲಾಸ ಪರ್ವತಕ್ಕೆ ಪಾರ್ವತೀ ಪರಮೇಶ್ವರರ ದರ್ಶನಕ್ಕೆ ಹೋದೆನು. ಹೋದವನು ಆ ಪರ್ವತದ ವನದಲ್ಲಿನ ಕೊಳ ವೊಂದರಲ್ಲಿ ಪಾರ್ವತೀ ಪರಮೇಶ್ವರರು ಏಕಾಂತದಲ್ಲಿ ಜಲಕ್ರೀಡಾಸಕ್ತರಾಗಿದ್ದು ತನ್ಮಯ ರಾಗಿದ್ದುದನ್ನು ಅರಿಯದೆ ನಾನು ಆ ವನದ ಒಳ ಹೊಕ್ಕೆನು. ನನ್ನನ್ನು ಕಂಡ ಶಂಕರನು ಅತ್ಯಂತ ಕೋಪದಿಂದ ಎಲೈ ದುರ್ಬುದ್ಧಿಯೇ ಏನು ಕಾರಣ ನನ್ನೀ ಏಕಾಂತ ಸ್ಥಳಕ್ಕೆ ಬಂದು ವಿಘ್ನಮಾಡಿದೆ. ಮದಾಂಧನಾದ ನೀನು ನಿನ್ನ ಮಹಿಮೆಯನ್ನೆಲ್ಲಾ ಕಳೆದು ಕೊಂಡು ಮನುಷ್ಯನಾಗಿ ಹುಟ್ಟು. ನಿನ್ನ ಪಾಪದಿಂದಾಗಿ ನಿನ್ನ ಪತ್ನಿಯೂ ಮನುಷ್ಯಳಾಗಿಯೇ ಹುಟ್ಟಿ ನಿನಗೆ ಪತ್ನಿಯಾಗಲಿ ಎಂದು ಶಪಿಸಿದನು.

ಶಂಕರನು ಈ ರೀತಿ ಶಪಿಸಲು ನಾನು ಗಡಗಡನೆ ನಡುಗುತ್ತಾ, ಅತ್ಯಂತ ಖಿನ್ನನಾಗಿ ಭಗವನ್, ದೇವದೇವ ದಯಾನಿಧೇ, ಪಾರ್ವತೀಪತೇ, ಸಮುದ್ರದಂತೆ ಅಪಾರವಾದ ಈ ಘೋರ ಶಾಪದ ವಿಮುಕ್ತಿಯನ್ನು ಕರುಣಿಸೆಂದು ಪ್ರಾರ್ಥಿಸಲು ಆಗ ಪರಮಾತ್ಮನು ಪ್ರಸನ್ನನಾಗಿ ಲೋಕೋಪಕಾರಕ್ಕಾಗಿ ಭೂಲೋಕಕ್ಕೆ ನನ್ನಿಂದ ಕಳುಹಿಸಲ್ಪಟ್ಟ ದೇವಾಂಗನೆಂಬ ನಿಷ್ಕಳಂಕನಾದ ಬಹು ಪ್ರಖ್ಯಾತನಾದ, ಮುನೀಶ್ವರನು ಎಂದು ನಿನ್ನ ಬಳಿಗೆ ಬಂದು ನಿನ್ನಿಂದ ರಾಜನಾಗಿ ಅಭಿಷಿಕ್ತನಾಗುವನೋ ಆ ದಿನವೇ ನೀನು ಸಮಸ್ತ ಪಾಪಗಳಿಂದ ಬಿಡುಗಡೆಹೊಂದಿ, ಶಾಪಮುಕ್ತನಾಗುವೆ ಎಂದು ನುಡಿದು ದೇವಿಯಾದ ಪಾರ್ವತಿಯೊಡನೆ ಅಂತರ್ಧಾನನಾದನು.

ಈ ಕಾರಣದಿಂದ ನಾನು, ಆಮೋದ ಪಟ್ಟಣಕ್ಕೆ ಒಡೆಯನಾದ ಭದ್ರ ಬಾಹು ವೆಂಬ ರಾಜನಿಗೆ ಇಂದುಮತಿಯಲ್ಲಿ ಹುಟ್ಟಿದೆನು. ನನ್ನ ತಾಯಿ ತಂದೆಗಳು ನನಗೆ

ಸುನಾಭನೆಂದು ಹೆಸರಿಟ್ಟರು. ನನ್ನ ತಂದೆ ಭದ್ರಬಾಹು ಮಹಾರಾಜನು ಕಾಶೀರಾಜನ ಪುತ್ರಿಯಾದ ಈ ಕಲಾವತಿಯನ್ನು ನನಗೆ ಮದುವೆ ಮಾಡಿದನು. ಎಲೈ ದೇವಲನೇ ನನ್ನ ಎಲ್ಲಾ ಸಂಗತಿಯನ್ನೂ ಸವಿಸ್ತಾರವಾಗಿ ನಿನಗೆ ಹೇಳಿರುವೆನು. ಎಲೈ ಪೂಜ್ಯನೇ ನಿನ್ನನುಗ್ರಹದಿಂದ ಈಶ್ವರನಿಂದ ಕೊಡಲ್ಪಟ್ಟ ಶಾಪಪಂಜ ಸಾಗರವನ್ನು ದಾಟಿರುವೆನು ಎಂದು ಹೇಳಿದನು.

ಎಲೈ ನಾರದನೇ ಈರೀತಿ ನುಡಿದ ಸುನಾಭನು ಅವನ ಪತ್ನಿ ಕಲಾವತಿಯೂ ಮನುಷ್ಯ ದೇಹಗಳನ್ನು ತ್ಯಜಿಸಿ, ಅವರೀರ್ವರೂ ಅನೇಕಾಲಂಕಾರಯುಕ್ತರಾಗಿ ದಿವ್ಯ ದೇಹಿಗಳಾಗಿ ಅಲ್ಲಿಗೆ ಆಗಮಿಸಿದ ದಿವ್ಯ ವಿಮಾನಾರೋಹಣ ಮಾಡಿ, ದೇವಲನನ್ನು ಸಮಾಧಾನಗೊಳಿಸಿ ತಮ್ಮ ಸ್ಥಳಕ್ಕೆ ತೆರಳಿದರು. ಇತ್ತ ದೇವಲನಾದರೂ ಅವರೀರ್ವರ ಮಾನುಷ ದೇಹಗಳಿಗೆ ಯಥಾವಿಧಿಯಾಗಿ ಉತ್ತರ ಕ್ರಿಯಾದಿಗಳನ್ನು ಮಾಡಿದನು. ಎಲೈ ನಾರದನೇ ಶುಭಕರವಾದ ಈ ಸುನಾಭನ ಚರಿತ್ರೆಯೆಲ್ಲವನ್ನೂ ನಿನಗೆ ಹೇಳಿರುವೆನು ಎಂದನು.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿ ಬ್ರಹ್ಮನಾರದ ಸಂವಾದ ರೂಪ ಉತ್ತರ ಖಂಡದ ದೇವಾಂಗ ಚರಿತ್ರೆಯಲ್ಲಿ ಸುನಾಭೋಪಾಖ್ಯಾನವೆಂಬಲ್ಲಿಗೆ ನಾಲ್ಕನೆಯ ಅಧ್ಯಾಯ ಮುಗಿದುದು.

ಐದನೆಯ ಅಧ್ಯಾಯ

ಯಕ್ಷೋಪಾಖ್ಯಾನ

ಎಲೈ ನಾರದನೇ ಮಹದೈಶ್ವರ್ಯ ಸಂಪನ್ನನಾದ ಹಾಗೂ ವಸ್ತ್ರ ನಿರ್ಮಾಣ ಚತುರನಾದ, ದೇವಲ ಮಹಾರಾಜನು ತನ್ನ ಮಂತ್ರಿಗಳೆಲ್ಲರನ್ನೂ ಕರೆದು ಎಲೈ ಮಂತ್ರಿಗಳಿರಾ, ವಸ್ತ್ರಗಳನ್ನು ನಿರ್ಮಿಸಲು ನೇಯಿಗೆಯ (ವಸ್ತ್ರ ನಿರ್ಮಾಣ) ಉಪಕರಣ ಗಳು ಅವಶ್ಯಕವಾಗಿರುವುದರಿಂದ, 'ನಾನು ಮೇರು ಪರ್ವತಕ್ಕೆ ಹೋಗಿ ಅಲ್ಲಿರುವ ಮಹಾ ಶಿಲ್ಪಿಯಾದ ಮಯನನ್ನು ಕಂಡು ಅವನಿಂದ ಸಕಲೋಪಕರಣಗಳನ್ನೂ ಮಾಡಿಸಿ ಕೊಂಡು ಶೀಘ್ರವಾಗಿ ಹಿಂದಿರುಗುವೆನು ಎಂದನು. ಅದಕ್ಕೆ ಮಂತ್ರಿಗಳು ಎಲೈ ಪುಣ್ಯಾತ್ಮನಾದ ಪ್ರಭುವೇ ನಾವೂ ಸಹ ನಿನ್ನ ಜೊತೆಯೇ ಚತುರಂಗ ಬಲ ಸಮೇತರಾಗಿ ಹೊರಟುಬರುವೆವು. ನಮ್ಮನ್ನು ನಿನ್ನೊಡನೆ ಕರೆದುಕೊಂಡು ಹೋಗುವುದು ಶ್ರೇಯಸ್ಕರ. ಮಹಾ ತೇಜಸ್ವಿಯೇ, ನೀನು ರಾಜನಾಗಿದ್ದು ಏಕಾಂಗಿಯಾಗಿ ಹೋಗುವುದು ಉಚಿತವಲ್ಲ. ನಾವೂ ನಿನ್ನೊಡನೆ ಬರಲು ಅಪ್ಪಣೆಯನ್ನು ಕೊಡೆಂದರು. ಮಂತ್ರಿಗಳ ಈ ಮಾತನ್ನು ಕೇಳಿ ದೇವಲನು ಎಲೈ ಮಂತ್ರಿಗಳೇ, ನೀವು ಹೀಗೆನ್ನಬೇಡಿ,

ನೀತಿಕೋವಿದರಾದ ನೀವು ಇಲ್ಲೇ ರಾಜ್ಯವನ್ನಾಳಿಕೊಂಡು ಇರಿ. ನೀವು ನನ್ನೊಡನೆ ಬಂದರೆ ರಾಜ್ಯಪರಿಪಾಲಿಸುವವರಾರು? ರಾಜ್ಯವು ಅರಾಜಕವಾಗುವುದು. ಆದುದರಿಂದ ನೀವು ನನ್ನೊಡನೆ ಬರುವುದು ಉಚಿತವಲ್ಲ. ನಾನು ಮಹಾಸಮರ್ಥನಾದ ಮಯನಿಂದ ನೇಯಿಗೆಯ ಸಕಲೋಪಕರಣಗಳನ್ನೂ ಪಡೆದು ಬೇಗ ಬರುವೆನು. ನೀವು ಇಲ್ಲಿಯೇ ಇದ್ದು ಧರ್ಮದಿಂದ ರಾಜ್ಯಪರಿಪಾಲನೆ ಮಾಡುತ್ತಿರಿ ಎಂದು ಮಂತ್ರಿಗಳನ್ನೂ ಮತ್ತು ಸಮಸ್ತ ಪರಿವಾರವನ್ನೂ ಸಮಾಧಾನಪಡಿಸಿದನು. ನಂತರ ಮಹಾಪ್ರತಾಪಶಾಲಿಯಾದ ದೇವಲನು ಮೇರುಪರ್ವತಕ್ಕೆ ಹೋಗಲು ನಿಶ್ಚಯಿಸಿ ಅನೇಕ ಬಾಣಗಳಿಂದ ಕೂಡಿದ ಬತ್ತಳಿಕೆಯನ್ನೂ ಸರ್ವೋತ್ಕೃಷ್ಟನಾದ ಧನುಸ್ಸನ್ನೂ ಧರಿಸಿ, ಮೇರುಪರ್ವತಕ್ಕೆ ಹೊರಟನು.

ಹೀಗೆ ಹೊರಟ ದೇವಲನು ಮಾರ್ಗಮಧ್ಯದಲ್ಲಿ ಗಾರ್ಗ್ಯ ಮುನಿಯ ಆಶ್ರಮವನ್ನು ಕಂಡು ಆ ಮಹಾಮಹಿಮನನ್ನು ಕಾಣಲಿಚ್ಛೆಯಿಂದ ಆಶ್ರಮವನ್ನು ಒಳಹೊಕ್ಕು ತಪಸ್ವಿ ಶ್ರೇಷ್ಠನಾದ ನಿರ್ಮಲ ಜ್ಞಾನಿಯಾದ ಗಾರ್ಗ್ಯಋಷಿಯನ್ನು ಕಂಡು ಅವನ ಬಳಿಗೆ ಬಂದನು.

ಧರ್ಮಜ್ಞನಾದ ಗಾರ್ಗ್ಯಋಷಿಯು ತನ್ನ ಬಳಿಗೆ ಬಂದ ದೇವಲ ಮಹಾರಾಜನನ್ನು ನೋಡಿ ಎಲೈ ಮಹಾಬಾಹೂ ನೀನಾರು? ನಿನ್ನ ಹೆಸರೇನು? ಯಾವ ಕಾರ್ಯನಿಮಿತ್ತ ಒಬ್ಬನೇ ಬಂದಿರುವೆ ಎಂದನು. ಅದಕ್ಕೆ ದೇವಲನು ಆ ಗಾರ್ಗ್ಯ ಋಷಿಯನ್ನು ಕುರಿತು ಎಲೈ ಮುನಿಪುಂಗವನೇ ನಾನು ಪರಮೇಶ್ವರನ ಮಾನಸಪುತ್ರನಾದ ದೇವಲನು. ನೇಯಿಗೆಯ (ವಸ್ತ್ರ ನಿರ್ಮಾಣದ) ಉಪಕರಣಗಳ ಸಲುವಾಗಿ ಮಯನಲ್ಲಿಗೆ ಹೊರಟಿರುವೆನು. ಮಾರ್ಗ ಮಧ್ಯದಲ್ಲಿ ತಮ್ಮ ಪುಣ್ಯಾಶ್ರಮವನ್ನು ಕಂಡು ತಮ್ಮ ದರ್ಶನಮಾಡಿ ತಮ್ಮ ಆಶೀರ್ವಾದವನ್ನು ನನ್ನ ತಲೆಯ ಮೇಲೆ ಹೊತ್ತು ಹೋಗಲಪೇಕ್ಷೆಯಿಂದ ತಮ್ಮಲ್ಲಿಗೆ ಬಂದಿರುವೆನು. ತಮ್ಮ ದರ್ಶನದಿಂದ ನಾನು ಧನ್ಯನಾದೆನು ಎಂದು ಹೇಳಿದನು. ಇದನ್ನು ಕೇಳಿದ ಗಾರ್ಗ್ಯ ಋಷಿಯು ಸಂತೋಷಪಟ್ಟು ದೇವಲನನ್ನು ಕುರಿತು ಎಲೈ ದೇವಲ ಮಹಾರಾಜನೇ ನಿನಗೆ ಸ್ವಾಗತವು. ನಿನ್ನ ರಾಜ್ಯವೆಲ್ಲಾ ಸುಭಿಕ್ಷವಾಗಿದೆಯೇ? ನಿನ್ನ ಪ್ರಜೆಗಳೆಲ್ಲರೂ ಸುಖವಾಗಿರುವರೇ? ಎಂದು ಅವನ ಕ್ಷೇಮ ಸಮಾಚಾರಗಳನ್ನು ಆದರದಿಂದ ವಿಚಾರಿಸಿದನು. ಅದಕ್ಕೆ ದೇವಲನು ಎಲೈ ಪುಣ್ಯಪುರುಷನಾದ ತಪೋಧನನೇ ನಿನ್ನನುಗ್ರಹದಿಂದ ಪ್ರಜೆಗಳಾದಿಯಾಗಿ ನಾವೆಲ್ಲರೂ ಕ್ಷೇಮ. ನನ್ನ ರಾಜ್ಯವೆಲ್ಲ ಸುಭಿಕ್ಷವಾಗಿದೆ ಎಂದನು. ಅವನ ಮಾತನ್ನು ಕೇಳಿ ಗಾರ್ಗ್ಯ ಮಹಾಮುನಿಯು ಸಂತೋಷಪಟ್ಟು ಪ್ರೇಮದಿಂದ ಅವನನ್ನು ಸತ್ಕರಿಸಿದನು. ನಂತರ ಗಾರ್ಗ್ಯ ಮಹರ್ಷಿಯು ಅವನು ಆರಾತ್ರಿ ತನ್ನ ಆಶ್ರಮದಲ್ಲೇ ತಂಗಿದ್ದು ವಿಶ್ರಮಿಸಿಕೊಂಡು ತನ್ನ ಆದರಾತಿಥ್ಯವನ್ನು ಸ್ವೀಕರಿಸಿ ಹೋಗಬೇಕೆಂದನು. ಅದಕ್ಕೆ ದೇವಲನು ಹಾಗೆಯೇ ಆಗಲೆಂದು ಒಪ್ಪಿ ಆರಾತ್ರಿಯೆಲ್ಲಾ ಆ ಮುನಿಯೊಡನೆ ಇಷ್ಟಾಲಾಪಗಳಿಂದ

ಕಳೆದನು. ಪ್ರಾತಃಕಾಲ ತನ್ನ ನಿತ್ಯಾಹ್ನಿಕ ಕರ್ಮಗಳನ್ನು ತೀರಿಸಿಕೊಂಡು, ಆತನ ಅಪ್ಪಣೆ ಪಡೆದು ಪ್ರಯಾಣೋನ್ಮುಖನಾದನು.

ಹೀಗೆ ಹೊರಟ ಮಹಾಪರಾಕ್ರಮಿಯಾದ ದೇವಲನು ಮಾರ್ಗದಲ್ಲಿ ನಾನಾ ದೇಶಗಳನ್ನು ಸಂದರ್ಶಿಸುತ್ತಾ, ಅನೇಕ ನದಿಗಳನ್ನು ದಾಟುತ್ತಾ ಮನುಷ್ಯರಹಿತವಾದ ಮಹಾಭಯಂಕರವಾದ ಒಂದು ಅರಣ್ಯವನ್ನು ಪ್ರವೇಶಿಸಿದನು. ಆ ಅರಣ್ಯವು ಸಿಂಹ, ಶಾರ್ದೂಲ, ಗಂಡಭೇರುಂಡ, ಖಡ್ಗಮೃಗ, ಕಾಡುಕೋಣ, ಕಾಡಾನೆ, ಕರಡಿ, ಶರಭ, ಕಾಡಹಂದಿ, ಕಾಡೆತ್ತು ಮೊದಲಾದ ಕ್ರೂರ ಜಂತುಗಳಿಂದಲೂ ಚಮರೀಮೃಗ, ಜಿಂಕೆ, ಗೋಪುಚ್ಛ ಇವೇ ಮೊದಲಾದ ಸಾಧು ಪ್ರಾಣಿಗಳು ಹಾಗೂ ಅನೇಕ ವಿಧವಾದ ದುಷ್ಟ ಮೃಗಗಳ ಹಿಂಡುಗಳಿಂದಲೂ, ವಿಧ ವಿಧವಾದ ವೃಕ್ಷಗಳು, ಗುಲ್ಮ ಲತಾದಿಗಳಿಂದಲೂ ಬಗೆಬಗೆಯ ಪಕ್ಷಿಗಳು, ಕ್ರಿಮಿಕೀಟಗಳೇ ಮೊದಲಾದ ಉಪದ್ರವಿಜೀವಿಗಳಿಂದಲೂ, ಕೂಡಿದ್ದು ಪ್ರವೇಶಿಸಲು ದುರ್ಗಮವಾಗಿತ್ತು. ಆ ಅರಣ್ಯವು ಎಲ್ಲೆಲ್ಲೂ ಸಿಂಹಗಳ ಗರ್ಜನೆ ಗೂಬೆಗಳ ಕೂಗಾಟ ಹಾಗೂ ಇನ್ನಿತರ ಭಯಂಕರ ಮೃಗಪಕ್ಷಿ ಕೀಟಗಳೇ ಮೊದಲಾದವುಗಳ ಕರ್ಕಶಧ್ವನಿಗಳಿಂದ ತುಂಬಿ ಭೀತಿ ಜನಕವಾಗಿತ್ತು.

ಇಂತಹ ಘೋರಾರಣ್ಯದಲ್ಲಿ ದೇವಲನು ಹೋಗುತ್ತಿರಲಾಗಿ ಒಂದು ಬಲಿಷ್ಠವಾದ ಸಿಂಹವು ಗಾಳಿಯಿಂದ ಮನುಷ್ಯವಾಸನೆ ಹಿಡಿದು ಛಂಗನೆ ಹಾರುತ್ತಾ ತನ್ನ ಕೇಸರಗಳನ್ನು ನಿಮಿರಿಸಿ ಬಾಲವನ್ನು ಮೇಲೆತ್ತಿ ಗರ್ಜಿಸುತ್ತಾ ಕೋರೆಹಲ್ಲುಗಳಿಂದ ಕೂಡಿದ ತನ್ನ ಬಾಯಿಯನ್ನು ತೆರೆದುಕೊಂಡು ದೇವಲನನ್ನು ಕಬಳಿಸಲು ಅವನ ಮೈಮೇಲೇರಿ ಬಂದಿತು. ಅದನ್ನು ಕಂಡು ಮಹಾಪರಾಕ್ರಮಿಯಾದ ದೇವಲನು ತನ್ನ ಧನುಸ್ಸನ್ನು ತೆಗೆದುಕೊಂಡು ಹೆದೆಯನ್ನೇರಿಸಿ ಅಗ್ನಿಸಮಾನವಾದ ಕ್ರೂರ ಬಾಣಗಳನ್ನು ಆಕರ್ಣಾಂತ ವಾಗಿ ಎಳೆದು ಅದರ ಮೇಲೆ ಪ್ರಯೋಗಿಸಿದನು. ಆದರೂ ಆ ಸಿಂಹವು ಸಾಯದಿರಲು ಸಿಂಹಪರಾಕ್ರಮಿಯಾದ ದೇವಲನು ರೋಷದಿಂದ ಆ ಕೇಸರಿಯ ಹಣೆಯನ್ನು ಎರಡು ಭಲ್ಲೆಗಳಿಂದ ಏಕಕಾಲದಲ್ಲಿ ಪ್ರಹರಿಸಿದನು. ಅದರಿಂದ ಆ ಮೃಗೇಂದ್ರವು ಚಡ ಪಡಿಸಿ ರೊಚ್ಚಿಗೆದ್ದು ಸಿಡಿಲಿನಂತೆ ಭಯಂಕರವಾಗಿ ಗರ್ಜಿಸುತ್ತಾ, ದೇವಲನ ಮೇಲೆ ಮಹಾರಭಸದಿಂದ ನುಗ್ಗಿಬರಲು ದೇವಲನು ಸಿಟ್ಟಿಗೆದ್ದು ಅತ್ಯುತ್ತಮವಾದ ಅನೇಕ ಬಾಣಗಳನ್ನು ಪ್ರಯೋಗಿಸಿ ಅದರ ಮುಖವನ್ನು ಮುಚ್ಚಿ ತನ್ನ ಬತ್ತಳಿಕೆಯಲ್ಲಿದ್ದ ಒಂದು ಭಲ್ಲೆಯಿಂದ ಅದರ ಕತ್ತನ್ನು ಬಲವಾಗಿ ತಿವಿದನು. ಅದರಿಂದ ಜರ್ಝರಿತವಾದ ಆ ಕೇಸರಿಯು ತನ್ನ ಕಿವಿಗಳಿಂದಲೂ, ಕಣ್ಣುಗಳಿಂದಲೂ ರಕ್ತವನ್ನು ಸುರಿಸುತ್ತಾ ಗತ ಪ್ರಾಣವಾಗಿ ಭೂಮಿಯ ಮೇಲೆ ಬಿದ್ದಿತು.

ಆಗ ದಿವ್ಯ ಗಂಧದಿಂದ ಲೇಪಿಸಲ್ಪಟ್ಟ ಶರೀರನಾದ, ದಿವ್ಯ ಪುಷ್ಪಮಾಲಾ ಲಂಕೃತನಾದ ತನ್ನ ಎದುರಿಗೆ ನಿಂತ ದಿವ್ಯ ಪುರುಷನನ್ನು ದೇವಲನು ಕಂಡು ಬಹು ಕುತೂಹಲದಿಂದ ಎಲೈಪುರುಷೋತ್ತಮನೇ ನಿನ್ನನ್ನು ಕಂಡು ನನಗೆ ಬಹಳ ಆಶ್ಚರ್ಯ

ವಾಗಿದೆ. ನೀನಾರು? ನಿನ್ನ ವೃತ್ತಾಂತವೇನು ಹೇಳೆಂದನು. ಆಗ ಆ ಪುರುಷನು ದೇವಲನನ್ನು ಕುರಿತು ಪುಣ್ಯವಂತನಾದ ಎಲೈ ರಾಜೇಂದ್ರನೇ ನಾನು ಬಹುಕಾಲದಿಂದ ಘೋರ ಶಾಪಗ್ರಸ್ತನಾಗಿದ್ದು ಈ ದಿನ ನಿನ್ನಿಂದ ಆ ಶಾಪದಿಂದ ಮುಕ್ತನಾಗಿ ಕೃತಕೃತ್ಯನಾಗಿ ಧನ್ಯನಾದೆನು. ನೀನು ನನ್ನನ್ನು ಶಾಪಮುಕ್ತನನ್ನಾಗಿ ಮಾಡಿ ಉದ್ಧರಿಸಿ ಪುಣ್ಯಭಾಜನನಾದೆ. ನನ್ನ ಶಾಪ ವೃತ್ತಾಂತವನ್ನು ಹೇಳುವೆನು ಕೇಳು.

ಮಹಾ ಪ್ರಭೂ, ರಾಜೇಂದ್ರನಾದ ದೇವಲನೇ, ನಾನು ಕುಬೇರನ ಸೇವಕನಾದ ಕಪಿಂಜಲನೆಂಬ ಯಕ್ಷನು. ಒಂದು ದಿನ ನಾನು ಬೇಟೆಯಾಡಲು ಮನಸ್ಸುಳ್ಳವನಾಗಿ, ನನ್ನ ಒಡನಾಡಿಗಳಾದ ಅನೇಕ ಯಕ್ಷರಿಂದೊಡಗೂಡಿ ಘೋರವಾದ ಒಂದು ಅರಣ್ಯವನ್ನು ಪ್ರವೇಶಿಸಿ ಅನೇಕ ಘಾತಕ ಮೃಗಗಳನ್ನು ಕೊಂದು ಮುಂದೆ ಮುಂದೆ ರಭಸದಿಂದ ನುಗ್ಗಿ ಬರುತ್ತಿದ್ದೆನು. ಆಗ ಒಂದು ಗಂಡು ಜಿಂಕೆಯು ನನ್ನನ್ನು ಕಂಡು ಅಂಜಿಕೆಯಿಂದ ಓಡಿ ಹೋಗಲಾರಂಭಿಸಿತು. ಕಾಲಪ್ರೇರಿತನಾದ ನಾನು ಆ ಜಿಂಕೆಯನ್ನು ಬೆನ್ನಟ್ಟಿ ಹಿಂಬಾಲಿಸಿದೆನು. ಆದರೂ ಆ ಮೃಗವು ನನ್ನ ಬಾಣದ ಗುರಿಗೆ ಸಿಗದೆ ತಪ್ಪಿಸಿಕೊಳ್ಳುತ್ತಿರಲು, ನಾನು ಇನ್ನಷ್ಟು ವೇಗದಿಂದ ಅದರ ಬೆನ್ನಟ್ಟಿ ಕೋಪದಿಂದ ಒಂದು ಕ್ರೂರವಾದ ಬಾಣವನ್ನು ಪ್ರಯೋಗಿಸಿದೆನು. ಆ ಬಾಣವು ಅದರ ಮೈಯನ್ನು ತೂರಿಕೊಂಡು ಹೋಯಿತು. ಇಷ್ಟಾದರೂ ಆ ಮೃಗವು ತಪ್ಪಿಸಿಕೊಂಡು ಸಮೀಪದಲ್ಲೇ ಇದ್ದ ಮಹಾತ್ಮನಾದ ಗೌತಮ ಮಹರ್ಷಿಯ ಆಶ್ರಮವನ್ನು ಹೊಕ್ಕಿತು.

ಅಷ್ಟರಲ್ಲಿ ಹೊರಗೆ ಹೋಗಿದ್ದ ಗೌತಮ ಋಷಿಯು ಆಶ್ರಮಕ್ಕೆ ಬಂದು ರಕ್ತ ಸುರಿಸುತ್ತಾ ಭಯವಿಹ್ವಲವಾಗಿ ಬಾಣದ ಗಾಯದಿಂದ ಬಹುವಾಗಿ ನೊಂದಿದ್ದ ಆ ಮೃಗವನ್ನು ಕಂಡು, ಅದರ ಬೆನ್ನಟ್ಟಿದ್ದ ಧನುರ್ಧಾರಿಯಾದ ನನ್ನನ್ನು ದಿಟ್ಟಿಸಿ ನೋಡಿದನು. ದಯಾಮಯನಾದ ಆ ಮಹರ್ಷಿಯು ಗಾಯಗೊಂಡ ಆ ಮೃಗದಲ್ಲಿ ಕರುಣೆಗೊಂಡು, ಸಿಟ್ಟಿನಿಂದ ನನ್ನನ್ನು ನೋಡಿ ಎಲೈ ದುರಾತ್ಮನೇ ನಮ್ಮಾಶ್ರಮದಲ್ಲಿ ಮೃಗವನ್ನು ಕೊಲ್ಲಲುದ್ಯುಕ್ತನಾದೆಯಾ? ಎಲೈ ಪಾಪಿಯೇ ನಮ್ಮ ಆಶ್ರಮದ ಈ ಮೃಗವನ್ನು ಸಿಂಹದಂತೆ ಬೆನ್ನಟ್ಟಿ ಬಂದೆಯಾದುದರಿಂದ ನೀನು ಸಿಂಹನಾಗಿ ಹುಟ್ಟಿ ಪಶು ಹಿಂಸಕನಾಗಿ ಪ್ರಾಣಿಗಳನ್ನು ಭಕ್ಷಿಸುತ್ತಾ ಪಾಪಾಚರಣೆಯುಳ್ಳವನಾಗೆಂದು ಶಪಿಸಿದನು. ಎಲೈ ದೇವಲ ಮುನೀಶ್ವರನೇ, ನಾನು ಋಷಿಯ ಆ ಶಾಪದಿಂದ ಭಯಗೊಂಡು ಆ ಗೌತಮ ಮುನಿಯನ್ನು ಕುರಿತು ಭಗವನ್, ಮುನಿಶ್ರೇಷ್ಠಾ ಪ್ರಸನ್ನನಾಗು. ನನ್ನಲ್ಲಿ ಕೃಪೆಯಿಟ್ಟು ಶಾಪವಿಮೋಚನೆಯನ್ನು ಅನುಗ್ರಹಿಸೆಂದು ಪ್ರಾರ್ಥಿಸಿದೆನು. ನನ್ನಲ್ಲಿ ಕರುಣೆಗೊಂಡು ಆ ತಪೋನಿಧಿಯಾದ ಗೌತಮ ಋಷಿಯು ಎಲೈ ಕ್ರೂರಿಯೇ ಶಿವಮಾನಸಪುತ್ರನಾದ, ಸರ್ವರ ಮಾನಾಭಿಮಾನವನ್ನು ರಕ್ಷಿಸುವವನಾದ, ಮಹಾ ತೇಜಸ್ವಿಯೂ, ಬಹು ಬಲಾಢ್ಯನೂ ಆದ ದೇವಾಂಗನು ನಿನ್ನನ್ನು ಶಾಪದಿಂದ ಮುಕ್ತಿಗೊಳಿಸುವನು ಎಂದು ಹೇಳಿ ಹೊರಟು ಹೋದನು.

ನಾನು ಸಿಂಹವಾಗಿ ಭಯಂಕರವಾದೀ ಅರಣ್ಯದಲ್ಲಿ ಶಾಪಗ್ರಸ್ತನಾಗಿ ನಿನಗಾಗಿ ಕಾಯುತ್ತಾ ಬಹುಕಾಲ ಸಂಚರಿಸುತ್ತಿದ್ದೆನು. ಎಲೈ ಪುರುಷೋತ್ತಮನೇ ನಾನು ನನ್ನ ಪುಣ್ಯವಶದಿಂದ ಈಗ ನಿನ್ನಿಂದ ಶಾಪವಿಮುಕ್ತನಾಗಿ ನನ್ನ ಪೂರ್ವರೂಪವನ್ನು ಪಡೆದೆನು. ಇದೇ ನನ್ನ ಚರಿತ್ರೆಯು. ಎಲೈ ಪುರುಷಶ್ರೇಷ್ಠನೇ ಇಲ್ಲಿಗೆ ಮೂರು ಗಾವುದ ದೂರದಲ್ಲಿ ಉತ್ತರ ದಿಕ್ಕಿನಲ್ಲಿ ವಾಮದೇವ ಋಷಿಯ ಬಹು ಮನೋಹರವಾದ ಆಶ್ರಮವಿದೆ. ಋಷಿಶ್ರೇಷ್ಠನಾದ ವಾಮದೇವನನ್ನು ನೀನು ಅವಶ್ಯವಾಗಿ ಕಾಣು ಎಂದು ಹೇಳಿ ಆ ಯಕ್ಷನು ಆಗ ಅಲ್ಲಿಗೆ ಆಗಮಿಸಿದ ದಿವ್ಯ ವಿಮಾನಾರೂಢನಾಗಿ ತನ್ನ ಸ್ವಸ್ಥಾನವನ್ನು ಸೇರಿದನು.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿ ಬ್ರಹ್ಮನಾರದ ಸಂವಾದ ರೂಪ ಉತ್ತರ ಖಂಡದ ದೇವಾಂಗ ಚರಿತ್ರೆಯಲ್ಲಿ ಯಕ್ಷೋಪಾಖ್ಯಾನವೆಂಬ ಐದನೆಯ ಅಧ್ಯಾಯ ಮುಗಿದುದು.

ಆರನೆಯ ಅಧ್ಯಾಯ

ರಾಕ್ಷಸ ಶಾಪವಿಮೋಚನೆ

ಈ ರೀತಿಯಾಗಿ ಕಪಿಂಜಲನೂ, ದೇವಲನೂ ಒಬ್ಬರನ್ನೊಬ್ಬರು ಬೀಳ್ಕೊಂಡರು. ನಂತರ ದೇವಲನು ಆ ಘೋರಾರಣ್ಯವನ್ನು ಕ್ರಮಿಸಿದನು. ತ್ರಿಲೋಕ ಪಾವನೆಯಾದ, ದಿವ್ಯಳಾದ, ಪಾಪಗಳೆಂಬ ಮೋಡಗಳಿಗೆ ಚಂಡಮಾರುತ ಪ್ರಾಯಳಾದ ಫಾಲಾಕ್ಷನ ಜಟಾಜೂಟವಾಸಿನಿಯಾದ, ನಿರ್ಮಲವಾದ ಕಾಂತಿಯುಳ್ಳ, ತ್ರಿಪಥಗೆಯಾದ ಅನೇಕಾನೇಕ ಜಲಚರಗಳಿಂದ ಕೂಡಿದ ಪುಷ್ಪಮಾಲೆಗಳಂತೆ ಒಪ್ಪುವ ಅಲೆಗಳಿಂದ ವಿರಾಜಿತಳಾದ, ಘೋರ ಪಾಪಗಳಿಂದ ಕೂಡಿದ, ತನ್ನಲ್ಲಿ ಮಿಂದ ಸಮಸ್ತರನ್ನೂ ಉದ್ಧರಿಸುತ್ತೇನೆಂದು ಅಭಯವೀಯುತ್ತಿರುವ, ಯಾವಳ ಸ್ಮರಣ ಮಾತ್ರದಿಂದಲೇ, ಸ್ಮರಿಸಿದ ಸರ್ವರೂ ಪಾಪಮುಕ್ತರಾಗಿ ವಿಷ್ಣುಧಾಮವಾದ ವೈಕುಂಠವನ್ನು ಹೊಂದುವರೋ, ಯಾರ ದರ್ಶನ ಮಾತ್ರದಿಂದಲೇ ಪಾಪವೆಂಬ ತೃಣಕ್ಕೆ ಅಗ್ನಿ ಸೋಕಿದಂತಾಗಿ, ಅವರ ಪಾಪಗಳೆಲ್ಲವೂ ಭಸ್ಮವಾಗಿ, ಮೋಕ್ಷ ಪಡೆಯುವರೋ, ಪರ್ವ ಪುಣ್ಯಕಾಲಗಳಲ್ಲಿ, ಯಾರು ಆಕೆಯಲ್ಲಿ ಸ್ನಾನಮಾಡಿ ತಾವು ಮಾಡಿದ ಬ್ರಹ್ಮಹತ್ಯಾದಿ ಮಹಾ ಪಾತಕಗಳನ್ನು ಕಳೆಮುಕೊಳ್ಳುವರೋ, ಯಾವ ಪವಿತ್ರ ನದಿಯ ತೀರದಲ್ಲಿ ಮೂರು ದಿನಗಳು ವಾಸಿಸುವುದರಿಂದಲೂ ಮತ್ತು ಸ್ನಾನಪಾನಗಳಿಂದಲೂ ತಮ್ಮ ಒಳಹೊರಗಿನ ಸಮಸ್ತ ಪಾಪಗಳಿಂದ ಬಿಡಲ್ಪಟ್ಟು ತಮ್ಮ ಅನೇಕ ಜನ್ಮಕೃತವಾದ ಪಾಪಗಳಿಂದ ಮುಕ್ತರಾಗಿ ಅವರು ದೇಹಾವಸಾನದಲ್ಲಿ ಮೋಕ್ಷ ಪಡೆಯುವರೋ ಅಂತಹ ಗಂಗಾ ನದಿಯ

ಪುಣ್ಯಕರವಾದ ಜಲದಿಂದ ತನ್ನ ಪಿತೃಗಳಿಗೆ ತರ್ಪಣಗಳನ್ನು ಕೊಟ್ಟು ತನ್ನ ವಂಶಜರಾದ ಪಿತೃಗಳು, ಮಿತ್ರರು, ಬಂಧು ಬಾಂಧವರು, ಗುರುಗಳು, ಆಚಾರ್ಯರು, ಸ್ವಾಮಿಗಳು ಇವರ ಸಹಿತರಾಗಿ ದುಸ್ತರವಾದ ನರಕವನ್ನು ದಾಟಿ ಆನಂದಭರಿತರಾಗಿ ದಿವ್ಯ ತೇಜಸ್ವಿಗಳಾಗಿ ನರ್ತಿಸುತ್ತಾ ಶಿವಲೋಕವನ್ನು ಹೊಂದಿ ಸದಾ ಸುಖಿಸುವರೋ, ಮುನಿಶ್ರೇಷ್ಠರು, ಯೋಗಿಗಳು, ಬ್ರಹ್ಮವಾದಿಗಳು ಮುಕ್ತಿಕಾಮರಾಗಿ ಧರ್ಮವೃದ್ಧಿ ಕರಳಾದ ಗಂಗೆಯನ್ನು ಆಶ್ರಯಿಸುವರೋ ಅಂತಹ ಗಂಗಾ ನದಿಯನ್ನು ಕಂಡು ರಾಜೋತ್ತಮನಾದ ದೇವಲನು ಸಂತೋಷಭರಿತನಾಗಿ, ತನ್ನ ಆಹ್ನಿಕವನ್ನು ತೀರಿಸಿ ಕೊಂಡು ಮುಂದೆ ಸಾಗಿ, ಮಹಾತ್ಮನಾದ ವಾಮದೇವ ಋಷಿಯ ಆಶ್ರಮವನ್ನು ಸೇರಿದನು.

ಆ ಆಶ್ರಮವು ಫಲಪುಷ್ಪಭರಿತಗಳಾದ ಮರಗಿಡಗಳಿಂದಲೂ, ಕಮಲಗಳ ಕೊಳ ಗಳಿಂದಲೂ ಕೂಡಿತ್ತು. ತಮ್ಮ ಸ್ವಭಾವಜನ್ಯವಾದ ವೈರವನ್ನು ಬಿಟ್ಟು ಪರಸ್ಪರ ಸ್ನೇಹದಿಂದ ವರ್ತಿಸುವ ಕಾಡುಮೃಗಗಳಿಂದಲೂ, ಅನೇಕ ವಿಧಗಳಾದ ಪಕ್ಷಿಗಳಿಂದಲೂ ಕೂಡಿದ್ದು ತಪಸ್ಸಿಗೆ ಪ್ರಶಾಂತ ಸ್ಥಳವಾಗಿತ್ತು. ಆ ತಪೋವನದಲ್ಲಿ ಹೆಣ್ಣು ಚಿಗರೆಗಳು ನಿರ್ಭಯವಾಗಿ ಸಂಚರಿಸುತ್ತಿದ್ದು ಸಿಂಹಗಳು ಅವುಗಳ ಮೈಗಳನ್ನು ತುರಿಸುತ್ತಿದ್ದವು. ಸಾರಂಗಗಳು ತಮ್ಮ ಕೊಂಬುಗಳಿಂದ ಹುಲಿಗಳನ್ನು ತುರಿಸುತ್ತಿದ್ದವು. ಸಿಂಹದ ಮರಿಗಳು ಆನೆಗಳ ಕುಂಭ ಸ್ಥಳಗಳ ಮೇಲೆ ಹತ್ತಿ ಕುಣಿದಾಡುತ್ತಿದ್ದವು. ಕೆಳಗಿದ್ದ ಸಿಂಹದ ಮರಿಗಳು ಅಲ್ಲಿಯ ಪರ್ವತಾಗ್ರದಲ್ಲಿದ್ದ ತಮ್ಮ ತಾಯಂದಿರನ್ನು ಸೇರಲು ಆನೆಗಳ ಮೇಲೇರಿ ಹೋಗುತ್ತಿದ್ದವು. ಆನೆಯ ಮರಿಗಳು ಭೇರುಂಡಗಳ ಕಂಠಗಳನ್ನು ತಮ್ಮ ಸೊಂಡಿಲುಗಳಿಂದ ಬಳಸಿ ಹಿಡಿದು ಸಂತೋಷದಿಂದ ಜೋತುಬಿದ್ದು ಪರಸ್ಪರ ಮೈತ್ರಿಯಿಂದ ಆಟವಾಡುತ್ತಿದ್ದುವು. ಹೀಗೆ ಸಮಸ್ತ ಪ್ರಾಣಿಗಳೂ ಏಕೋಭಾವದಿಂದ ಅಲ್ಲಿ ಅಲೆದಾಡುತ್ತಿದ್ದವು.

ಇದೆಲ್ಲವನ್ನೂ ನೋಡಿದ ದೇವಲನು ಆಶ್ಚರ್ಯಭರಿತನಾಗಿ ಎಲ್ಲವೂ ಮಹಾತ್ಮ ನಾದ, ತಪೋಧನನಾದ, ಪರಮಜ್ಞಾನಿಯಾದ ವಾಮದೇವ ಋಷಿಯ ಪ್ರಭಾವವೆಂದು ಭಾವಿಸಿ, ಸ್ವಾಧ್ಯಾಯಿಗಳಾದ ಅನೇಕ ಋಷಿಮುನಿಗಳಿಂದಲೂ, ಶಿಷ್ಯ ಸಮೂಹದಿಂದಲೂ ಸೇವಿತನಾಗಿ, ವೇದವೇದಾಂಗಗಳ ತತ್ವಾರ್ಥಗಳನ್ನು ಬಲ್ಲವನಾಗಿ, ಪವಿತ್ರನಾಗಿ ವಿನಯಾ ಚಾರಸಂಪನ್ನನಾಗಿ, ಮಹಾಜ್ಞಾನಿಯಾಗಿ, ತೇಜೋರಾಶಿಯಾಗಿ, ಅನ್ಯರಿಂದ ದುರ್ಧರ್ಷನಾಗಿ, ಅಗ್ನಿಯಂತೆ ಪ್ರಕಾಶಿಸುವವನಾಗಿ ಇರುವ ಆ ಮುನಿಪುಂಗವನನ್ನು ನೋಡಿ, ಭಕ್ತಿಯಿಂದ ಸಾಷ್ಟಾಂಗ ಪ್ರಣಾಮ ಮಾಡಿದನು. ತನಗೆ ಪ್ರಣಾಮ ಮಾಡಿದ ದೇವಲನನ್ನು ನೋಡಿ ವಾಮದೇವನು ಅವನು ಬಂದಿರುವ ಕಾರ್ಯಕಾರಣಗಳನ್ನು ತನ್ನ ದಿವ್ಯದೃಷ್ಟಿಯಿಂದ ತಿಳಿದು ಅವನನ್ನು ಪ್ರೀತಿಪೂರ್ವಕವಾಗಿ ಮೈದಡವಿ ಮೇಲಕ್ಕೆತ್ತಿ ಕ್ಷೇಮ ಸಮಾಚಾರವನ್ನು ವಿಚಾರಿಸಿ ಉಚಿತಾಸನವನ್ನು ಕೊಟ್ಟು ಕುಳ್ಳಿರಿಸಿದನು.

ದೇವಲನು ಆ ಋಷಿಶ್ರೇಷ್ಠನನ್ನು ಕುರಿತು, ದುಷ್ಟನಿಗ್ರಹ ತತ್ಪರನೇ, ಜ್ಞಾನಾಲಂಕೃತನೇ, ಮುನಿಪುಂಗವನೇ, ತಮ್ಮ ದರ್ಶನದಿಂದ ನಾನು ಪುನೀತನಾದೆ, ಧನ್ಯನಾದೆ. ತಾವು ಕ್ಷೇಮವೇ, ತಮ್ಮ ತಪಸ್ಸು ನಿರ್ವಿಘ್ನವಾಗಿ ನಡೆಯುತ್ತಿದೆಯೋ ಎಂದು ಪ್ರತಿಯಾಗಿ ಅವನ ಕ್ಷೇಮವನ್ನು ವಿಚಾರಿಸಿದನು. ಆ ವಾಮದೇವ ಋಷಿಯು ದೇವಲನನ್ನು ಕುರಿತು ಎಲೈ ಪರಾಕ್ರಮಿಯಾದ ದೇವಲನೇ ಏನು ಹೇಳೋಣ ಇಲ್ಲಿಯವರಿವಿಗೂ ನಾವು ವೇದಾಧ್ಯಯನ, ಯಜ್ಞ, ತಪಸ್ಸು, ಇವುಗಳ ಆಚರಣೆಯಿಂದ ನಿರ್ಭಯವಾಗಿ, ಯಾವ ಪೀಡೆಯೂ ಇಲ್ಲದೆ ನಿರ್ವಿಘ್ನವಾಗಿ ಸುಖವಾಗಿ ಕಾಲ ಕಳೆದೆವು. ಈ ಹಿಂದೆ ನಾವು ಯಾವ ವಿಧವಾದ ಭಯವನ್ನೇ ಆಗಲಿ ದುಃಖವನ್ನೇ ಆಗಲಿ ಅರಿಯದಿದ್ದೆವು. ಆದರೆ ಈಗ ನಮ್ಮ ತಪಸ್ಸಿಗೆ ವಿಘ್ನವುಂಟಾಗಿದೆ. ನಮ್ಮಾಶ್ರಮವಾಸಿಗಳಿಗೆ ಭೀತಿಯುಂಟಾಗಿ ಬಹು ವ್ಯಥೆಯಾಗಿದೆ. ಇಲ್ಲಿರುವ ಸ್ನೇಹಮಯಿ ಮೃಗಗಳಿಗೆ ವಿನಾಶ ಸನ್ನಿಹಿತವಾಗಿದೆಯೆಂದು ನುಡಿದನು. ಆಗ ದೇವಲನು ವಿನಯದಿಂದ, ಭಗರ್ವ ಈರೀತಿ ತಮಗೂ, ತಮ್ಮ ಆಶ್ರಮವಾಸಿಗಳಿಗೂ, ಭಯವನ್ನುಂಟು ಮಾಡಿ ಬಾಧಿಸುವ ಪಾಪಿ ಯಾರು? ಅವನೆಲ್ಲಿರುವನು? ಅವನ ಹೆಸರೇನು? ಅವನು ದೈತ್ಯನೋ! ರಾಕ್ಷಸನೋ! ಮನುಷ್ಯನೋ ತಿಳಿಸಿ ಅವನು ಯಾರಾದರೂ ಸರಿ. ವಜ್ರಾಯುಧಕ್ಕೆ ಸಮಾನವಾದ, ಚಿನ್ನದ ಹಿಡಿಯುಳ್ಳ ಅಗ್ನಿ ಸಮಾನಗಳಾದ, ನನ್ನೀ ಕ್ರೂರವಾಗ, ಹರಿತಗಳಾದ ಬಾಣಗಳಿಂದ ಈಗಲೇ ನಾನು ನಿಶ್ಚಯವಾಗಿಯೂ ಅವನನ್ನು ಕೊಂದು, ಕೆಡವಿ, ನಿಮ್ಮ ಭಯವನ್ನೂ ದುಃಖವನ್ನೂ ನಿವಾರಿಸುವೆನು. ಹೆದರಬೇಡಿ ಎಂದನು. ಆಗ ವಾಮದೇವನು ತಮ್ಮ ಭಯ ದುಃಖಗಳು ದೂರವಾಗಿ ಇಷ್ಟಾರ್ಥ ಪೂರೈಸಿತೆಂದು ಹರ್ಷಿತನಾಗಿ ದೇವಲನನ್ನು ಕುರಿತು ಈ ರೀತಿ ಹೇಳಿದನು.

ಮಹಾಭಾಗನಾದ ದೇವಲನೇ ಇಲ್ಲಿಗೆರಡು ಹರಿದಾರಿಗಳ ದೂರದಲ್ಲಿ ಬಹು ಕ್ರೂರನೂ ಬಹಳ ಪಾಪಿಯೂ, ಮಹಾ ಪರಾಕ್ರಮಿಯೂ ಆದ ಕುಂಡಿಕನೆಂಬ ರಕ್ಕಸನು ಅಲ್ಲಿರುವ ಪರ್ವತದ ತುದಿಯಲ್ಲಿನ ಗುಹೆಯಲ್ಲಿರುವನು. ಅವನ ಭಯದಿಂದ ಸಮಸ್ತ ಪ್ರಾಣಿಗಳೂ ಒಂದು ಯೋಜನ ಪರ್ಯಂತ ಸುಳಿದಾಡುವುದಿಲ್ಲ. ನಾವು ಅವನನ್ನು ನಮ್ಮ ತಪೋಬಲದಿಂದ ಶಿಕ್ಷಿಸಲು ಸಮರ್ಥರಾಗಿದ್ದರೂ, ತಪೋಹಾನಿಯಾಗುತ್ತದೆಂದು ಅವನನ್ನು ಸಹಿಸಿಕೊಂಡಿರುವೆವು. ನೀನು ಭೂಪಾಲನೂ ಮಹಾ ವೀರ್ಯವಂತನೂ ಆಗಿರುವುದರಿಂದ ಸರ್ವರಕ್ಷಕನಾಗಿರುವೆ. ರಾಜರಿಗೆ ಬ್ರಾಹ್ಮಣರ ದುಃಖವನ್ನು ಹೋಗಲಾಡಿಸುವುದೇ ಮುಖ್ಯ ವ್ರತ. ಅವರ ಸಂರಕ್ಷಣೆಯ ಹೊರತು ಬೇರೆ ಶ್ರೇಷ್ಠ ಧರ್ಮವಿಲ್ಲ. ದುಃಖಿತರಾದ ಬ್ರಾಹ್ಮಣರಿಗೆ, ದುರ್ಬಲರಾದ ತಪಸ್ವಿಗಳಿಗೆ ಅಭಯ ಪ್ರದಾನ ಮಾಡುವುದೇ ರಾಜರ ಪರಮ ಧರ್ಮವೆಂದು ಅನೇಕ ಶಾಸ್ತ್ರಗಳು ಹೇಳುತ್ತಿವೆ. ಬ್ರಾಹ್ಮಣರನ್ನು ಸಂತೋಷಗೊಳಿಸುವುದೇ ಪರಮಪುಣ್ಯ. ಲೋಕದಲ್ಲಿ ಬ್ರಹ್ಮಹತ್ಯೆಗಿಂತಲೂ ಅಧಿಕವಾದ ಪಾಪವೇ ಇಲ್ಲ. ಬ್ರಾಹ್ಮಣರ ರಕ್ಷಣೆಯ

ಹೊರತು ಬೇರೆ ಪುಣ್ಯವಿಲ್ಲ. ಯಾರು ಬ್ರಾಹ್ಮಣರನ್ನು ದ್ವೇಷಿಸುವನೋ ಅವನು ಸದಾವಾಗಲೂ ದುಃಖವನ್ನು ಅನುಭವಿಸಿ ಅಂತ್ಯದಲ್ಲಿ ಘೋರನರಕವನ್ನು ಹೊಂದು ವನಲ್ಲದೆ ನೀಚನಾಗಿ ಹುಟ್ಟುವನು. ಯಾರು ಬ್ರಾಹ್ಮಣರನ್ನು ರಕ್ಷಿಸುವನೋ ಅವನು ಈ ಲೋಕದ ಸುಖವನ್ನು ಅನುಭವಿಸಿ ಸ್ವರ್ಗಭೋಗವನ್ನು ಪಡೆದು ನಂತರ ಆ ರೋಗಿಯಾಗಿ ಧನವಂತನಾಗಿ ಉತ್ತಮ ಕುಲದಲ್ಲಿ ಜನಿಸಿ, ಅಸಾಧಾರಣಗುಣ ಸಂಪನ್ನನಾಗಿ ಸದಾ ಸುಖವನ್ನು ಅನುಭವಿಸುವನು. ಯಾರು ಈಶ್ವರ ಪ್ರೀತ್ಯರ್ಥ ನಾಗಿ ಬುದ್ಧಿವಂತರಾದ ಬ್ರಾಹ್ಮಣರನ್ನು ಯಾವ ಕಾರಣದಿಂದಲಾದರೂ ತೃಪ್ತಿಗೊಳಿ ಸುವರೋ, ಅವರು ಜನ್ಮರಹಿತರಾಗಿ ಮೋಕ್ಷ ಪಡೆಯುವರು.

ಅವರಿಂದ ಸಮಸ್ತ ದೇವತೆಗಳೂ ಸಂತುಷ್ಟರಾಗಿ ತೃಪ್ತಿ ಹೊಂದುವರು. ಯಾವ ದ್ವಿಜೋತ್ತಮನು ವೇದ, ವೇದಾರ್ಥಗಳನ್ನು ಅಭ್ಯಾಸ ಮಾಡಿರುವನೋ ಅವನ ಸರ್ವಾಯವಗಳಲ್ಲಿ ಸಮಸ್ತ ದೇವತೆಗಳೂ ವಾಸಿಸುವರು. ಅಂತಹವನು ಸರ್ವರಿಂದಲೂ ಪೂಜನೀಯನಾಗಿರುವನು. ಎಲೈ ರಾಜೇಂದ್ರನಾದ ದೇವಲನೇ, ಸಮಸ್ತ ದೇವತೆಗಳೂ, ಪುಣ್ಯ ನದಿಗಳೂ, ಬ್ರಾಹ್ಮಣೋತ್ತಮನಲ್ಲಿ ನೆಲೆಯಾಗಿರುವುವು. ವೇದವಿದನಾದ ಬ್ರಾಹ್ಮಣನನ್ನು ಪ್ರತಿ ದಿನವೂ ಪೂಜಿಸತಕ್ಕದ್ದು. ವೇದಜ್ಞರಾದ ಬ್ರಾಹ್ಮಣರಿಗೆ ವಿನಯದಿಂದ ನಮಸ್ಕರಿಸಿದರೆ, ಸಮಸ್ತ ದೇವತೆಗಳಿಗೂ ನಮಸ್ಕರಿ ಸಿದಂತಾಗಿ ಪಾಪಗಳೆಲ್ಲಾ ದೂರವಾಗುವುವು. ಧರ್ಮವನ್ನು ಬಯಸುವ ಮನುಷ್ಯನಿಗೆ ಬ್ರಾಹ್ಮಣರನ್ನು ಸಂತೋಷಪಡಿಸುವುದರ ಹೊರತು ಶ್ರೇಷ್ಠ ಧರ್ಮವಿಲ್ಲ. ಬಹಳ ಹೇಳಿ ಪ್ರಯೋಜನವೇನು?

ಸಹಸ್ರಾಶ್ವಮೇಧಗಳೂ, ಕೋಟಿ ಗಂಗಾ ಸ್ನಾನಗಳೂ, ಬ್ರಾಹ್ಮಣರನ್ನು ರಕ್ಷಿಸುವ ಪುಣ್ಯದ ಹದಿನಾರರಲ್ಲೊಂದು ಭಾಗಕ್ಕೆ ಸಮನಲ್ಲ. ಆದುದರಿಂದ ಎಲೈ ಮಹಾಬಾಹುವೇ, ಆ ದುಷ್ಟ ರಾಕ್ಷಸನಿಂದ ಪೀಡಿತರಾಗಿರುವ ಆರ್ತರಾದ ನಮ್ಮಂತಹವರನ್ನು ಕಾಪಾಡುವುದಕ್ಕಾಗಿಯೇ ಆ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟಿ ರುವ ನೀನು, ಸಜ್ಜನರನ್ನು ಸದಾ ಬಾಧಿಸುತ್ತಾ ಕೋಟಿಗಟ್ಟಲೆ ಪ್ರಾಣಿ ಗಳನ್ನು ನಾಶ ಮಾಡುತ್ತಿರುವ ಆ ಪಾಪಿಯನ್ನು ಕೊಂದು ನಮಗೊದಗಿರುವ ಸಂಕಷ್ಟಗಳಿಂದ ಪಾರುಮಾಡು. ನಿನಗೆ ಮಂಗಳವಾಗಲಿ ಎಂದು ಆ ವಾಮದೇವನು ನುಡಿದನು. ಆದಕ್ಕೆ ದೇವಲನು ಎಲೈ ಮುನೀಂದ್ರನೇ, ಈಗಲೇ ಆ ಪಾಪಿ ರಕ್ಕಸ ನನ್ನು ನಿಶ್ಚಯವಾಗಿಯೂ ಕೊಲ್ಲುವೆನು. ತಪಸ್ವಿಗಳಾದ ತಾವೆಲ್ಲರೂ ನಿಶ್ಚಿಂತರಾಗಿರಿ ಎಂದು ಹೇಳಿ ವಾಮದೇವ ಋಷಿಯ ಅಪ್ಪಣೆ ಪಡೆದು ಬಾಣಬತ್ತಳಿಕೆಗಳಿಂದ ಸನ್ನದ್ಧನಾಗಿ ಧನುಷ್ಪಾಣಿಯಾಗಿ ಆ ದೈತ್ಯನನ್ನು ಕೊಲ್ಲಲು ಶೀಘ್ರವೇ ಹೊರಟನು.

ಹೀಗೆ ಸನ್ನದ್ಧನಾಗಿ ಹೊರಟ ದೇವಲನು, ಆ ದೈತ್ಯನಿರುವ ಪರ್ವತದ ಗುಹೆಯ ಬಳಿಗೆ ಬಂದನು. ಆ ಪ್ರದೇಶವು ಸತ್ತ ಪ್ರಾಣಿಗಳ ತಲೆಬುರುಡೆಗಳಿಂದಲೂ,

ಮೂಳೆ ಮುಂಡಗಳಿಂದಲೂ, ಕರುಳುಗಳಿಂದಲೂ, ಕೊಬ್ಬಿನಿಂದಲೂ, ಕೂದಲುಗಳಿಂದಲೂ ಕೊಂಬುಗಳಿಂದಲೂ, ಕಾಲುಗಳಿಂದಲೂ, ಕರುಳಿಲ್ಲದ ಹರಿದ ಹೊಟ್ಟೆಗಳಿಂದಲೂ, ಕೂಡಿ ದುರ್ಗಂಧಮಯವಾಗಿದ್ದು, ಕಾಲಿಡಲು ಸ್ಥಳವಿಲ್ಲದೆ ನಡೆದು ಹೋಗುವುದೇ ದುಸ್ತರವಾಗಿತ್ತು. ಅಲ್ಲದೆ ಕೆಲವು ಪ್ರಾಣಿಗಳ ಕಾಲುಗಳನ್ನು ಬಂಧಿಸಿಯೂ, ಮಾನವರ ಕೈಗಳನ್ನೂ, ಭುಜಗಳನ್ನೂ, ಕುತ್ತಿಗೆಗಳನ್ನೂ, ಕತ್ತರಿಸಿಯೂ ಅಲ್ಲಿ ಚೆಲ್ಲಾಪಿಲ್ಲಿಯಾಗಿ ಹರಡಲಾಗಿತ್ತು. ಅನೇಕಾನೇಕ ಪ್ರಾಣಿಗಳು ಗತಪ್ರಾಣಗಳಾಗಿ ಅವುಗಳಲ್ಲಿ ಕೆಲವು ಹೀನಸ್ವರದಿಂದ ಅಂಗಹೀನಗಳಾಗಿ ಭೂಮಿಯಲ್ಲಿ ಬಿದ್ದು ಹೊರಳಾಡುತ್ತಿದ್ದುವು. ಕೆಲವು ಸಂಕಟದಿಂದ ಒದ್ದಾಡುತ್ತಿದ್ದುವು. ಕೆಲವು ಪ್ರಾಣವಿದ್ದೂ ಸಹ ಬದುಕಿದ ಹೆಣಗಳಂತೆ ನಿಶ್ಚೇಷ್ಟಿತಗಳಾಗಿ ಬಿದ್ದಿದ್ದು ನೋಡಲು ಬಹಳ ಭಯಾನಕವಾಗಿ ಹೆದರಿಕೆಯನ್ನುಂಟು ಮಾಡುವುವುಗಳಾಗಿ, ಪರ್ವತೋಪಮವಾಗಿ, ರಾಶಿ ರಾಶಿಗಳಾಗಿ ಬಿದ್ದಿದ್ದುವು. ಆ ಪ್ರದೇಶವು ರಕ್ತ ಪಿಪಾಸುಗಳಾದ ಶವ ಭಕ್ಷಕಗಳಾದ ಅನೇಕಾನೇಕ ಕಾಗೆ, ಗೂಗೆ, ಹದ್ದು, ನರಿ, ಗಿಡಗಗಳಿಂದ ಕೂಡಿದ್ದಾಗಿದ್ದು, ಅವು ಆ ಶರೀರಗಳ ಮೇಲೆ ಕುಳಿತು ರಕ್ತಪಾನಮಾಡಿ ಮಾಂಸವನ್ನು ಕಿತ್ತು ತಿನ್ನುತ್ತಿದ್ದ ದೃಶ್ಯವು ಘೋರವಾಗಿ ಕಾಣುತ್ತ ಭೂಮಿಯ ಮೇಲಿನ ಯಮಲೋಕದಂತೆ ಕಾಣುತ್ತಿತ್ತು. ಆ ಪ್ರಾಣಿಗಳ ರಕ್ತ ಪ್ರವಾಹವು ಹರಿದು ಹೆಪ್ಪುಗಟ್ಟಿ ದುರ್ಗಂಧವು ಸರ್ವತ್ರ ವ್ಯಾಪಿಸಿ ಅಸಹ್ಯವಾಗಿತ್ತು. ದಯಾಸಾಗರನಾದ ದೇವಲನು, ಇದನ್ನೆಲ್ಲಾ ಕಂಡು ಅನುಕಂಪದಿಂದ ಆ ಪ್ರಾಣಿಗಳ ದುರವಸ್ಥೆಗಾಗಿ ಸಂಕಟಪಡುತ್ತಾ 'ಹಾ' ಯೆಂದು ತನ್ನ ಹಣೆಯನ್ನು ಕೈಗಳಿಂದ ಬಡಿದುಕೊಳ್ಳುತ್ತಾ, ಅಯ್ಯೋ ಪಾಪಾತ್ಮನಾದ ಈ ದುಷ್ಟ ರಕ್ಕಸನಿಂದ ಎಷ್ಟು ಪ್ರಾಣಿಗಳು ಕೊಲ್ಲಲ್ಪಟ್ಟು ಗತಪ್ರಾಣಗಳಾಗಿ ಬಿದ್ದಿರುವುವಲ್ಲಾ ಎಂದು ಮರುಗಿದನು.

ಹೀಗೆ ಮರುಗಿದ ಪರಾಕ್ರಮಿಯಾದ ದೇವಲನು ತನ್ನ ಧನುಸ್ಸನ್ನು ಮೇಲೆತ್ತಿ ತನ್ನ ಬರವನ್ನು ಆ ರಾಕ್ಷಸನಿಗೆ ತಿಳಿಸುವ ರೀತಿಯಲ್ಲಿ ಸಿಡಿಲಿನಂತೆ ಧನುಷ್ಟೇಂಕಾರ ಮಾಡುತ್ತಾ ಗುಹೆಯಲ್ಲಿ ವಿಶ್ರಮಿಸುತ್ತಿದ್ದ ಕುಂಡಿಕನನ್ನು ಸಿಟ್ಟಿಗೆಬ್ಬಿಸಿದನು. ತೇಜಸ್ವಿಯಾದ ದೇವಲನ ಧನುರ್ಘೋಷವನ್ನು ಕೇಳಿದ ಆ ಕುಂಡಿಕನು ಕ್ರೋಧಯುಕ್ತನಾಗಿ ತನ್ನ ರಕ್ತಲಿಪ್ತ ಶೂಲಾಯುಧವನ್ನು ಕೈಗೆತ್ತಿಕೊಂಡು ಆ ಗಿರಿಯ ಗುಹೆಯಿಂದ ಹೊರ ಬಂದನು. ಅವನು ಅಂಜನಾದ್ರಿಗೆ ಸಮಾನವಾದ ಶರೀರವುಳ್ಳವನಾಗಿ ಕೆಂಪುಗೂದಲುಗಳುಳ್ಳವನಾಗಿ ಉದ್ದವಾದ ಕೋರೆದಾಡೆಗಳುಳ್ಳವನಾಗಿ, ದೀರ್ಘದೇಹಿಯಾಗಿ, ಮಹಾಬಲನಾಗಿ, ಕೋಪದಿಂದ ಕೆಂಪಾದಕಣ್ಣುಗಳುಳ್ಳವನಾಗಿ ದೇವಲನ ಮೈಮೇಲೆ ಎರಗಿದನು. ಹೀಗೆ ತನ್ನ ಮೇಲೆ ಎರಗಿಬಂದ ಆ ದೈತ್ಯನನ್ನು ನೋಡಿ ಮಹಾಬಾಹುವಾದ ದೇವಲನು ಕ್ರೋಧದಿಂದ ತನ್ನ ಹರಿತವಾದ ಬಾಣಗಳಿಂದ ಅವನನ್ನು ಪ್ರಹರಿಸಿ ಗಾಯಗೊಳಿಸಿ ಅವನು ಆಶ್ಚರ್ಯಚಕಿತನಾಗುವಂತೆ ಮಾಡಿದನು. ಹೀಗೆ ಪ್ರಹರಿ

ಸಲ್ಪಟ್ಟ ಆ ರಾಕ್ಷಸನು ನೊಂದು, ಕೋಪದಿಂದ ಭಯಂಕರವಾಗಿ ಅರಚುತ್ತಾ ತುಮುಲನಾದವನ್ನು ಮಾಡಿ ತನ್ನ ಶೂಲಾಯುಧವನ್ನು ಮೇಲಕ್ಕೆತ್ತಿ ದೇವಲನನ್ನು ಕೊಲ್ಲಲು ಮುಂದೆ ಮುಂದೆ ಬರುತ್ತಿದ್ದನು. ಆಗ ದೇವಲನು ಮೂರುಬಾಣಗಳನ್ನು ಪ್ರಯೋಗಿಸಿ ಆ ರಕ್ಕಸನ ಶೂಲಾಯುಧವನ್ನು ಮೂರುತುಂಡುಗಳನ್ನಾಗಿ ಮಾಡಿದನು. ಇದರಿಂದ ಆ ದೈತ್ಯನು ನಷ್ಟಶೂಲನಾಗಿ ತನ್ನ ಹಲ್ಲುಗಳನ್ನು ಕಟಕಟನೆ ಕಡಿಯುತ್ತಾ, ಕೂಡಲೇ ಅಲ್ಲಿದ್ದ ವೃಕ್ಷಗಳನ್ನು ಕಿತ್ತುಕೊಂಡು ಸಿಂಹನಾದ ಮಾಡುತ್ತಾ ದೇವಲನನ್ನು ಹೊಡೆಯಲು ವೇಗವಾಗಿ ಬರುತ್ತಿದ್ದನು. ದೇವಲನು ತನ್ನ ಮೇಲೇರಿ ಬರುತ್ತಿದ್ದ ರಾಕ್ಷಸನು ತನ್ನಮೇಲೆ ಪ್ರಯೋಗಿಸಬೇಕೆಂದು ಹಿಡಿದಿದ್ದ ಸಮಸ್ತ ವೃಕ್ಷಗಳನ್ನೂ ಮೊನೆಚಾದ ಅನೇಕ ಬಾಣಗಳಿಂದ ತುಂಡು ತುಂಡಾಗಿ ಕತ್ತರಿಸಿ, ಆ ದೈತ್ಯನನ್ನು ಕುರಿತು ಎಲೈ ದೈತ್ಯಾಧಮಾ, ನಿನ್ನ ಶೂಲವು ಮುರಿಯಿತು. ನನ್ನ ಮೇಲೆ ಪ್ರಯೋಗಿಸಬೇಕೆಂದಿದ್ದ ಸಮಸ್ತ ವೃಕ್ಷಗಳೂ ಕತ್ತರಿಸಲ್ಪಟ್ಟುವು. ಇನ್ನು ಮೇಲೆ ಏನು ಮಾಡುವಿಯೋ ಮಾಡು ನೋಡುವೆನು. ಶಾಂತರಾದ, ದುರ್ಬಲರಾದ ತಪಸ್ವಿಗಳನ್ನು ಕೊಂದು ತಿಂದು ಕೊಬ್ಬಿದವನಾಗಿ ಗರ್ವದಿಂದ ನಿರ್ಭಯನಾಗಿರುವೆ. ಈ ಮಹಾ ಪಾಪಗಳನ್ನು ಮಾಡಿರುವ ನೀನು ಅದರ ಪರಿಣಾಮವನ್ನೀಗ ಅನುಭವಿಸು. ನನ್ನೀಬಾಣಗಳಿಂದ ನಿನ್ನ ಸೊಕ್ಕನ್ನು ಮುರಿಯುವೆನು ಎಂದು ನುಡಿದನು.

ಇದನ್ನು ಕೇಳಿದ ರಾಕ್ಷಸನು ಸಿಟ್ಟಿಗೆದ್ದು ಒಂದು ದೊಡ್ಡ ಬಂಡೆಯನ್ನೆತ್ತಿ ಅವನ ಮೇಲೆ ಹಾಕಿ ಸಾಯಿ ಎಂದನು. ದೇವಲನು ತನ್ನ ಮೇಲೆ ಬೀಳುತ್ತಿರುವ ಆ ಮಹಾ ಬಂಡೆಯನ್ನು ವಜ್ರಾಯುಧಕ್ಕೆ ಸಮಾನವಾದ ಬಾಣಗಳಿಂದ ಮಾರ್ಗಮಧ್ಯದಲ್ಲಿಯೇ ಪುಡಿಪುಡಿ ಮಾಡಿ ಅವನ ಸರ್ವಾಂಗಗಳ ಮೇಲೆ ಬಾಣಗಳ ಮಳೆಯನ್ನೇ ಕರೆದನು. ಇದರಿಂದ ಬಹಳವಾಗಿ ಬಳಲಿದ ಆ ರಾಕ್ಷಸನು ಕ್ರೋಧದಿಂದ ಎಲೈ ಮೂಢನೇ ಎಲ್ಲಿ ಹೋಗುವೆ. ಕಾಲವಶನಾಗಿ ನನ್ನ ಕೈಗೆ ಸಿಕ್ಕಿರುವೆ. ವಜ್ರಾಯುಧಕ್ಕೆ ಸಮನಾದ ನನ್ನೀಮುಷ್ಟಿಯಿಂದ ನಿನ್ನನ್ನು ಛಿದ್ರಛಿದ್ರಮಾಡಿ ರಕ್ತಹೀರಿ ತೃಪ್ತನಾಗಿ ನಿಶ್ಚಿಂತೆಯಿಂದಿರುವೆನು ಎನ್ನುತ್ತಾ ತನ್ನ ಬಲವಾದ ಮುಷ್ಟಿಯನ್ನು ಎತ್ತಿ ಮೈಮೇಲೆ ಬರುತ್ತಿರಲು, ದೇವಲನು ತನ್ನ ಒಂದೇ ಬಾಣದಿಂದ ಆ ರಾಕ್ಷಸನ ತೋಳನ್ನು ಕತ್ತರಿಸಿದುದಲ್ಲದೆ ಒಂದು ಭಲ್ಲೆಯಿಂದ ಎಡಭುಜವನ್ನು ಕತ್ತರಿಸಿದನು, ಇದರಿಂದ ನಷ್ಟಬಾಹುವಾದ ರಾಕ್ಷಸನು ಘರ್ಜಿಸುತ್ತಾ ತನ್ನ ಅಗಲವಾದ ಬಾಯನ್ನು ತೆರೆದು ತನ್ನ ಕೋರೆಹಲ್ಲುಗಳಿಂದಲೇ ಇವನನ್ನು ಸೀಳುವೆನೆಂದು ಬರುತ್ತಿದ್ದನು. ದೇವಲನು ಅವನ ಸನ್ನಾಹವನ್ನು ತಿಳಿದು ಸರ್ರನೆ ಕೊಂಚ ಪಕ್ಕಕ್ಕೆ ಸರಿದು, ತನ್ನ ಹರಿತವಾದ ಅರ್ಧ ಚಂದ್ರಾಯುಧದಿಂದ, ಅವನ ಶಿರಸ್ಸನ್ನು ಒಂದೇ ಏಟಿಗೆ ಕತ್ತರಿಸಿದನು. ಅವನ ತಲೆಯು ಇಂದ್ರನ ವಜ್ರಾಯುಧದ ಪೆಟ್ಟಿಗೆ ಉರುಳಿದ ಪರ್ವತದಂತೆ ಭೂಮಿಯ ಮೇಲೆ ಬಿದ್ದಿತು.

ಆಗ ಆ ಶರೀರದಿಂದ, ದಿವ್ಯರೂಪವುಳ್ಳ, ದಿವ್ಯದೇಹಿಯಾದ, ತನ್ನ ದೇಹಕಾಂತಿಯಿಂದ ದಶದಿಕ್ಕುಗಳನ್ನೂ ಬೆಳಗುತ್ತಿರುವ ಮೇಲೆದ್ದು ಬರುವ ಒಬ್ಬ ಪುರುಷನು ದೇವಲನ ದೃಷ್ಟಿಗೋಚರನಾದನು. ದೇವಲನು ಅವನನ್ನು ನೋಡಿ ಅಯ್ಯಾ ಮಹಾಪುರುಷನೇ ನೀನು ಯಾರು ಹೇಳೆಂದು ಕೇಳಿದನು. ಅದಕ್ಕೆ ಆ ಪುರುಷನು ಎಲೈ ರಾಜೇಂದ್ರನೇ ನಿನ್ನಿಂದ ನಾನು ಘೋರಶಾಪದಿಂದ ಮುಕ್ತನಾಗಿ ಪವಿತ್ರನಾದೆನು. ನನಗೆ ತಟ್ಟಿದ್ದ ಶಾಪಾಗ್ನಿಯು ನಿನ್ನಿಂದ ನಂದಿತು. ನೀನು ಕೇಳಿದುದರಿಂದ ನನ್ನ ವೃತ್ತಾಂತವನ್ನು ಹೇಳುವೆನು ಕೇಳು.

ಎಲೈ ಮಹಾಪುರುಷನೇ ನಾನು ಇಕ್ಷ್ವಾಕು ರಾಜನ ಮಗನಾದ ವಿಶಾಲಮಹಾರಾಜನ ಮಗನು. ನನ್ನ ಹೆಸರು ಅಗ್ರಧನ್ವ. ಮಹಾ ಬಲಶಾಲಿಯಾದ ನಾನು ರಾಜಧಾನಿಯಾದ ವಿಶಾಲನಗರದಲ್ಲಿದ್ದು ರಾಜ್ಯವನ್ನು ಧರ್ಮದಿಂದ ಆಳುತ್ತಿದ್ದೆನು. ಹೀಗಿರಲು ವಿಕಟನೆಂಬ ರಾಕ್ಷಸನು ತಾನಿದ್ದ ಪ್ರದೇಶದಲ್ಲಿದ್ದ ಅನೇಕ ತಪಸ್ವಿಗಳನ್ನು ಬಾಧಿಸುತ್ತ ಉಪದ್ರವ ಕೊಡುತ್ತಿದ್ದನು. ನಾನು ಈ ವರ್ತಮಾನವನ್ನು ಕೇಳಿ, ಪಾಪಕರ್ಮಿಯಾದ ಆ ವಿಕಟನನ್ನು ಕೊಂದು, ಸಮಸ್ತರ ದುಃಖವನ್ನೂ ಪರಿಹರಿಸಿದೆನು.

ಆ ದುಷ್ಕರ್ಮಿಯ ತಮ್ಮನಾದ ಕರ್ಕಶನೆಂಬ ರಾಕ್ಷಸನು ನನ್ನ ಮೇಲೆ ಯುದ್ಧ ಮಾಡಲು ಸಾಮರ್ಥ್ಯವಿಲ್ಲದೆ, ತನ್ನ ಅಣ್ಣನನ್ನು ಕೊಂದ ನನ್ನ ಮೇಲೆ ಸೇಡು ತೀರಿಸಿಕೊಳ್ಳಲು ಕಪಟವೇಷದಿಂದ ಅಡಿಗೆಯವನಾಗಿ ಬಂದು ನನ್ನ ಅರಮನೆಯಲ್ಲಿ ಸೇರಿಕೊಂಡನು. ನನಗೆ ಅವನ ಮೋಸದ ಸುಳಿವು ತಿಳಿಯದಂತೆ ಅವನು ಬಹಳ ಎಚ್ಚರದಿಂದ ಹೊಂಚುಹಾಕಿಕೊಂಡಿದ್ದು ಸಮಯ ಕಾಯುತ್ತಿದ್ದನು. ಒಂದು ದಿನ ಅಗ್ನಿಯಂತೆ ದೇದೀಪ್ಯಮಾನವಾದ ತೇಜಸ್ಸುಳ್ಳ ಋಷಿಶ್ರೇಷ್ಠನಾದ ದೂರ್ವಾಸನು ಅತಿಥಿಯಾಗಿ ನನ್ನರಮನೆಗೆ ಬಂದನು. ನಾನು ಆ ಮುನಿಯನ್ನು ಭಕ್ತಿಯಿಂದ ಎದುರುಗೊಂಡು ಶೈತ್ಯೋಪಚಾರ ಮಾಡಿ, ಅವನನ್ನು ಭೋಜನಕ್ಕೆ ಆಹ್ವಾನಿಸಿದೆನು. ಆ ನನ್ನ ಕೋರಿಕೆಯನ್ನು ದೂರ್ವಾಸಮುನಿಯು ಒಪ್ಪಿದನು. ಆ ಮಹಾತ್ಮನ ಭೋಜನಕ್ಕಾಗಿ ಸಕಲ ವ್ಯವಸ್ಥೆಗಳನ್ನೂ ಮಾಡಲು ಕಪಟ ಬಾಣಸಿಗನಿಗೆ ಆಜ್ಞೆ ಮಾಡಿದೆನು. ಆ ಸಮಯವನ್ನೇ ಹೊಂಚಿ ಕಾಯುತ್ತಿದ್ದ ಬಾಣಸಿಗ ವೇಷಧಾರಿಯಾಗಿದ್ದ ಕರ್ಕಶನು, ನನ್ನಮೇಲೆ ಸೇಡನ್ನು ತೀರಿಸಿಕೊಳ್ಳಲು, ಇದೇ ತಕ್ಕ ಸಮಯವೆಂದು ಯೋಚಿಸಿ ನನಗೆ ತಿಳಿಯದಂತೆ ನರಮಾಂಸವನ್ನು ಪಾಕಮಾಡಿ ಅದನ್ನು ದೂರ್ವಾಸಮುನಿಗೆ ಬಡಿಸಿದನು. ದೂರ್ವಾಸನು ಅದರಲ್ಲಿದ್ದ ಮಾನವ ಕೇಶವನ್ನು ನೋಡಿ ಅದು ನರಮಾಂಸವೆಂದು ತಿಳಿದು ಭುಜಿಸದೆ ಕೋಪದಿಂದ ಮೇಲಕ್ಕೆದ್ದು ನನ್ನನ್ನು ಕುರಿತು ಎಲಾ ಪಾಪಿ, ದುರಾತ್ಮಾ ಅತಿಥಿಯಾಗಿ ಬಂದ ನನಗೆ

ನರಮಾಂಸ ಬಡಿಸಿದೆಯಾ ಎಂದು ಅತ್ಯಂತ ಕೋಪಯುಕ್ತನಾದುದನ್ನು ಕಂಡು, ನಾನು ನಿಜವಾಗಿಯೂ ನಿರಪರಾಧಿಯೆಂದು ಎಷ್ಟು ಕೇಳಿಕೊಂಡರೂ, ಲಕ್ಷ್ಯಕ್ಕೆ ತಾರದೆ ಎಲೈ ದುಷ್ಕರ್ಮಿಯೇ ನನಗೆ ನರಮಾಂಸವನ್ನು ಬಡಿಸಿದೆಯಾದುದರಿಂದ ನೀನು ನರಭಕ್ಷಕನಾದ ದುರಾಚಾರಿಯಾದ ರಾಕ್ಷಸನಾಗೆಂದು ಶಪಿಸಿದನು. ಇದರಿಂದ ನಾನು ಅತ್ಯಂತ ಖಿನ್ನನಾಗಿ ಆ ಮುನಿವರ್ಯನನ್ನು ಕುರಿತು ಭಗವನ್, ಪ್ರಭೂ, ಮುನಿಪುಂಗವನೇ, ನನ್ನ ಮೇಲೆ ಕೃಪೆಯಿಟ್ಟು ಈ ಶಾಪವಿಮೋಚನೆಯನ್ನು ತಿಳಿಸೆಂದು ಪ್ರಾರ್ಥಿಸಲು ಆ ದೂರ್ವಾಸನು ನನ್ನಲ್ಲಿ ಕರುಣೆಗೊಂಡು, ನನ್ನನ್ನು ಕುರಿತು, ಶಿವನ ಮಾನಸ ಪುತ್ರನಾದ ದೇವಾಂಗನೆಂದು ಪ್ರಸಿದ್ಧನಾದ, ಸಕಲರ ಮಾನರಕ್ಷಕನಾದ ಮಹಾ ಪರಾಕ್ರಮಿಯಾದ, ತೇಜಸ್ವಿಯಾದ ಮುನಿಪುಂಗವನು, ನಿನ್ನನ್ನು ಶಾಪದಿಂದ ವಿಮೋಚನೆಗೊಳಿಸುವನು ಎಂದು ನುಡಿದು ನಿರ್ಗಮಿಸಿದನು.

ನಂತರ ನಾನು ಶಾಪಗ್ರಸ್ತನಾಗಿ ದೈತ್ಯನಾಗಿ ಹುಟ್ಟಿ ಬಹುಕಾಲದಿಂದಲೂ ಈ ಅರಣ್ಯದಲ್ಲಿದ್ದು ಹಸಿವಿನಿಂದ ಪೀಡಿತನಾಗಿ ಅಸಂಖ್ಯಾತ ಪ್ರಾಣಿಗಳನ್ನೂ, ಮನುಜರನ್ನೂ ಭಕ್ಷಿಸುತ್ತಾ ಸಂಚರಿಸುತ್ತಿದ್ದೆನು. ಪಾಪಿಯಾದ ನಾನು ಈ ದಿನ ನಿನ್ನಿಂದ ಶಾಪವಿಮುಕ್ತಿ ಹೊಂದಿ ಪುನೀತನಾದೆನು. ಎಲೈ ದೇವಲನೇ ನನ್ನ ವೃತ್ತಾಂತವೆಲ್ಲವನ್ನೂ ಅರುಹಿದೆನು. ನಾನು ಹೋಗಲು ಅಪ್ಪಣೆ ಕೊಡು. ನಿನಗೆ ಮಂಗಳವಾಗಲಿ ಎಂದು ನುಡಿದು ಹರ್ಷಭರಿತನಾಗಿ ಸ್ವರ್ಗಕ್ಕೆ ತೆರಳಿದನು. ಇದರಿಂದ ದೇವಲನು ಆಶ್ಚರ್ಯಯುಕ್ತನಾಗಿ ಮತ್ತೆ ವಾಮದೇವ ಋಷಿಯ ಆಶ್ರಮಕ್ಕೆ ಬಂದನು. ಅಲ್ಲಿ ವಾಮದೇವಋಷಿಯಿಂದ ಸತ್ಕರಿಸಲ್ಪಟ್ಟು ಅವನಪ್ಪಣೆ ಪಡೆದು ಕನಕಾಚಲಕ್ಕೆ ತೆರಳಿದನು.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿ ಬ್ರಹ್ಮನಾರದ ಸಂವಾದ ರೂಪ ಉತ್ತರಖಂಡದ ದೇವಾಂಗ ಚರಿತ್ರೆಯಲ್ಲಿ ರಾಕ್ಷಸ ಶಾಪವಿಮೋಚನೆಯೆಂಬ ಆರನೆಯ ಅಧ್ಯಾಯ ಮುಗಿದುದು.

ಏಳನೆಯ ಅಧ್ಯಾಯ

ಮಯನೋಪಕರಣ (ವಸ್ತ್ರನಿರ್ಮಾಣೋಪಕರಣ) ಸಂಪಾದನ
ಚೌಡೇಶ್ವರಿ ವಸ್ತ್ರ ಅಕ್ಷಯ ವರಪ್ರದಾನ
ವಸ್ತ್ರನಿರ್ಮಾಣ ಪ್ರಾರಂಭ

ಅನಂತರ ಧೀರನಾದ ದೇವಲನು ಕನಕಾಚಲಕ್ಕೆ ಬಂದು ಪರಿಶುದ್ಧ ಕಾರ್ಯವುಳ್ಳ ತ್ವಷ್ಟೃಪುತ್ರನಾದ ಮಯನ ಮಂದಿರವನ್ನು ಹೊಕ್ಕನು. ಮಯನು ದೇವಲನನ್ನು

ನೋಡಿ ಆನಂದದಿಂದ ಎದುರುಗೊಂಡು ಅರ್ಘ್ಯಪಾದ್ಯಗಳಿಂದ ಆದರಿಸಿ ಸತ್ಕರಿಸುತ್ತ ಎಲೈ ಮಹಾಮತಿಯಾದ, ಮಹಾಬಾಹುವಾದ ದೇವಲರಾಜೇಂದ್ರನೇ ನೀನೊಬ್ಬನೇ ಇಲ್ಲಿಗೆ ಬರಲು ಕಾರಣವೇನು? ನಿಜವಾದ ಸಂಗತಿಯನ್ನು ತಿಳಿಸೆಂದನು. ಅದಕ್ಕೆ ದೇವಲನು ಮಹಾಬಾಹುವಾದ ತ್ವಷ್ಟೃಪುತ್ರನಾದ ಮಯನೇ, ನನ್ನ ಆಗಮನದ ಕಾರಣವನ್ನು ಹೇಳುವೆನು ಕೇಳು. ಎಲೈ ಸಮರ್ಥನೇ, ನೇಯಿಗೆಯ ಉಪಕರಣಗಳ ಸಲುವಾಗಿ ನಿನ್ನ ಬಳಿಗೆ ಬಂದಿರುವೆನು. ನೀನು ಕುಶಲನೂ, ಜಾಣನೂ, ಸಮರ್ಥನೂ ಆಗಿರುವೆ, ಆದುದರಿಂದ ನೀನು ನೇಯಿಗೆಯ ಸಕಲೋಪಕರಣಗಳನ್ನು ನಿರ್ಮಿಸಿಕೊಡು. ನಾನು ಅವುಗಳಿಂದ ವಸ್ತ್ರಗಳನ್ನು ಶೀಘ್ರವಾಗಿ ನೇಯ್ದು ದೇವತೆಗಳಿಗೆ ಕೊಡ ಬೇಕಾಗಿದೆ ಎಂದನು.

ಅದನ್ನು ಕೇಳಿ ಮಯನು ಪರಮ ಸಂತೋಷದಿಂದ ಹಾಗೆಯೇ ಆಗಲೆಂದು ಹೇಳಿ ಕೂಡಲೆ ನೇಯಿಗೆಯ ಉಪಕರಣಗಳಾದ ವಜ್ರದಕುಂಟೆ, ರತ್ನ ಖಚಿತವಾದ ವೈಡೂರ್ಯದ/ಹಲಗೆ ವಜ್ರದ ಹಲ್ಲಿನ ಸ್ಯೂತಿ, (ತಟ್ಟು) ಪುಷ್ಪಾಕಾರವಾದ ಪುಷ್ಯರಾಗ, ಗೋಮೇಧಿಕಗಳಿಂದ ಕೂಡಿದ ಮರಕತಲಾಳಿಯನ್ನೂ, ವಜ್ರದ ಹಿಡಿಯುಳ್ಳ ಹಲಗೆ ಯಕೀಲುಗಳನ್ನು, ಗಾರುತ್ಮಕರತ್ನದ ಪೇಟದ ಹಲಗೆಯನ್ನು, ಅನೇಕರತ್ನಗಳಿಂದ ರಚಿಸಿದ ದಂಡಗಳುಳ್ಳ ವಜ್ರದಕೀಲೂ, ವಜ್ರದಹಿಡಿಯೂ ಉಳ್ಳ ಸುತ್ತುವ(ಭ್ರಮಣ)ಸಾಧನವಾದ ವಿಚಿತ್ರರಾಟೆಯನ್ನೂ, ಕುಂಟೆಯನ್ನು ತಿರುಗಿಸಲು ವಜ್ರದಕುಂಟೆಬೆಣೆಯನ್ನೂ, ಮಗ್ಗದ ಗುಂಡಿ (ಗುಳಿ) ಯಿಂದ ಅಚ್ಚುಗಳಿಗೆ ಸೂತ್ರದಿಂದ ಸಂಪರ್ಕ ಕಲ್ಪಿಸುವ ಕಾಲುಗಳಿಂದ ತುಳಿಯಲ್ಪಡುವ ಸುವರ್ಣದ ಹಾವುಗೆ ಚಕ್ಕೆಗಳನ್ನೂ ಪುಷ್ಪಾಕಾರವಾಗಿ ಕೆತ್ತಿದ ರತ್ನಗಳಿಂದ ಕೂಡಿದ ಸುವರ್ಣದ ಪಟ್ಟಿಯಿಂದ ಅಲಂಕೃತವಾದ ಉಕ್ಕಿನ ಅಲಗುಳ್ಳ ಹರಿತವಾದ ಚೂರಿಯನ್ನೂ, ಟಾವಣಕೋಲು, ದೊಣ್ಣೆ, ಸಲಗೆ, ಅಣಿಕೋಲು, ಚಿತ್ರವಿಚಿತ್ರ ನಮೂನೆಗಳನ್ನು ಬಟ್ಟೆಯ ಮೇಲೆ ಅಳವಡಿಸಲು ಸೂತ್ರದಿಂದ ಮಾಡಿದ ಬೇಲುಹಾಕುವ ಅಡಿಯನ್ನೂ, ಕೊಂಗಾಣಿ, ಕದಿರು, ಹಗ್ಗಕಟ್ಟಲು ಗೂಟ, ಹಾಸುಹಾಕುವ ಅರಗಣಿ, ನೂಲು ತೋಡುವ ಪರಟೆ ಮತ್ತು ಗುಪ್ಪುಗಳು, ದಬ್ಬೆಗಳಿಂದ ಮಾಡಿದ ರಾಡು, ತಟ್ಟೀಕಾಲು, ಕುಂಚ, ಕೊಳವೆ ಇವೇ ಮೊದಲಾದ ನೇಯ್ಗೆಯ ಸಮಸ್ತೋಪಕರಣಗಳನ್ನು ನಿರ್ಮಿಸಿ ಆ ಕುಶಲ ಮತಿಯು ಅವುಗಳೆಲ್ಲವನ್ನು ಬುದ್ಧಿವಂತನಾದ ದೇವಲನಿಗೆ ಸಮರ್ಪಿಸಿ ಎಲೈ ದೇವಲ ಮಹಾರಾಜೇಂದ್ರನೇ ಈ ಉಪಕರಣಗಳ ಮಹಿಮೆ (ಉಪಯೋಗವನ್ನು) ಯನ್ನು ಹೇಳುವೆನು ಕೇಳು.

ಈ ಕುಂಟೆಯಲ್ಲಿ ಅನೇಕ ವಸ್ತ್ರಗಳನ್ನು ಸುತ್ತಿದರೂ ಅದು ತುಂಬುವುದೇ (ಭರ್ತಿ ಯಾಗುವುದೇ) ಇಲ್ಲ. ಇದರ ಪ್ರಮಾಣ ಅಂತಹುದ್ದು. ಈ ಹಲಗೆಯೂ, ಲಾಳಿಯೂ ಒಂದಕ್ಕೊಂದು ಸಂಬಂಧಿಸಲ್ಪಟ್ಟು ಕೆಲಸ ಮಾಡುವುವು. ಇದರಲ್ಲಿ ಸಂಶಯವಿಲ್ಲ.

ಹಲಗೆಯ ಎರಡೂ ಕೊನೆಗಳಲ್ಲಿರುವ ಈ ಕೀಲುಗಳು ಇಚ್ಛಾಧೀನಗಳು ಮತ್ತು ಹಾಸಿನ ತಂತುವನ್ನು ಬಡಿಯುವ ಹಲಗೆಯನ್ನು ಸಮತೋಲನವಾಗಿಡುವುವು. ಮಾನರಕ್ಷಕನಾದ ದೇವಲನೇ ಪಂಚವರ್ಣದ ತಂತುಗಳನ್ನು ಅರಗಣಿಯಲ್ಲಿ (ಹಾಸು) ಪಾಗಡಿಯಾಗಿ ಮಾಡಿ, ಆ ಪಾಗಡಿಯ ಎಳೆಗಳನ್ನು (ತಂತುಗಳನ್ನು) ಕೆಚ್ಚುವ ಮೂಲಕವಾಗಲೀ ಅಥವಾ ಮಲಚುವುದರಿಂದಾಗಲೀ ಈ ತಟ್ಟಿನಲ್ಲಿ ತುಂಬಿ (ಒಳಗೆ ತೆಗೆದುಕೊಂಡು) ಒಂದು ಉದ್ದನೆಯ ಸಲಾಕಿಗೆ ಸೂತ್ರಗಳಿಂದ ಕಟ್ಟಿ ಕುಂಟೆಯ ಒಂದು ಭಾಗದಲ್ಲಿ ಉದ್ದುದ್ದವಾಗಿ ಕೊರೆದಿರುವ ಸ್ಥಳದಲ್ಲಿ ಅಳವಡಿಸಿ ಹಾವುಗೆ ಚಕ್ಕೆ (ಮಗ್ಗನಗುಂಡಿಯಲ್ಲಿರುವ ಕಾಲುಗಳಿಂದತುಳಿಯುವ ಸಾಧನ) ಗಳಿಗೆ ಸಂಬಂಧ ಕಲ್ಪಿಸಿ ಒಂದರನಂತರ ಇನ್ನೊಂದನ್ನು ತುಳಿದರೆ ಆ ತಂತುಗಳ ಮಧ್ಯೆ ಲಾಳಿಯು ಸರಾಗವಾಗಿ ಸಾಗಲು ಸ್ಥಳವಾಗಿ, ಆ ಸ್ಥಳದಲ್ಲಿ ತಂತುಗಳಿಂದ ಸುತ್ತಲ್ಪಟ್ಟ ಕಂಡಿಕೆಯನ್ನೊಳಗೊಂಡ ಲಾಳಿಯನ್ನು ತನ್ನ ಎರಡೂ ಕೈಗಳಿಂದ ಆ ಕಡೆಯಿಂದ ಈ ಕಡೆಗೆ ಈ ಕಡೆಯಿಂದ ಆ ಕಡೆಗೆ ಸರಾಗವಾಗಿ ಎಸೆದು ಹಲಗೆಯನ್ನು ಬಡಿದರೆ ಕಂಡಿಕೆಯ ತಂತುಗಳು ಹಾಸಿನಲ್ಲಿ ಹೊಕ್ಕು ವಸ್ತ್ರವಾಗಿ ಮಾರ್ಪಡುತ್ತದೆ. ಹೀಗೆ ಮಾರ್ಪಟ್ಟ ವಸ್ತ್ರವನ್ನು ಕುಂಟೆಬೆಸೆಯಿಂದ ಕುಂಟೆಯನ್ನು ತಿರುಗಿಸಿ ಅದಕ್ಕೆ ಸುತ್ತಿಕೊಳ್ಳಬೇಕು. ಹೀಗೆ ಸುತ್ತಿಕೊಂಡು ನೇಯುತ್ತಿದ್ದಂತೆ ಆಕಸ್ಮಾತ್ತಾಗಿ ಎಳೆ ಕಿತ್ತುಹೋದರೆ ತಟ್ಟಿನ ಸಂದಿನಲ್ಲಿ (ಮನೆ) ರುವ ಇನ್ನೊಂದೆಳೆಗೆ ಅದನ್ನು ಮಲಚಿ (ಜೋಡಿಸಿ) ಎಳೆದುಕೊಳ್ಳಬೇಕು. ಆ ಮನೆಯ ಎರಡುತಂತುಗಳೂ ಕಿತ್ತರೆ ಅವುಗಳನ್ನು ಊಸಿ (ಎಳೆಗಳನ್ನು ತಟ್ಟಿನಮನೆಗೆ ತುಂಬುವ ಸಾಧನ) ಯಿಂದ ಒಳಕ್ಕೆ ತೆಗೆದುಕೊಳ್ಳಬೇಕು. ಈ ರೀತಿ ಐದು ವರ್ಣದ ತಂತುಗಳನ್ನು ನೀನು ನಿನ್ನ ಬುದ್ಧಿಗನುಸಾರವಾಗಿ ಉಪಯೋಗಿಸಿ ನಿನ್ನ ಇಚ್ಛೆಗನುಸಾರವಾಗಿ ಎಷ್ಟು ಬೇಕಾದರೂ ವಸ್ತ್ರಗಳನ್ನು ನಿರ್ಮಿಸಬಹುದು. ಇವನ್ನು ನಿನಗೆ ಸ್ಥೂಲವಾಗಿ ತಿಳಿಸಿದ್ದೇನೆ. ನೀನು ನಿನ್ನ ಬುದ್ಧಿಯನ್ನು ಉಪಯೋಗಿಸಿ ವಿಧವಿಧ ವರ್ಣದ ವಸ್ತ್ರಗಳನ್ನು ನಿರಾತಂಕವಾಗಿ ಯಾವ ಅಡ್ಡಿಯೂ ಇಲ್ಲದೆ ನಿರ್ಮಿಸಬಹುದು. ಇದರಲ್ಲಿ ಸಂಶಯಪಡಬೇಡ ಎಂದು ಹೇಳಿ ಸುವರ್ಣದ ಪಟ್ಟಿಯುಳ್ಳ ವಜ್ರಖಚಿತವಾದ ಎಂಟು ಘಂಟೆಗಳಿಂದೊಪ್ಪುವ ಮಹಾ ಶಕ್ತ್ಯಾಯುಧವೊಂದನ್ನು ದೇವಲನಿಗೆ ನೀಡಿದನು. ದೇವಲನು ಅದನ್ನು ಸಂತೋಷದಿಂದ ಸ್ವೀಕರಿಸಿ ಮಯನಿಗೆ ಗೌರವದಿಂದ ನಮಸ್ಕರಿಸಿ ತಾನೂ ಅವನಿಂದ ಸತ್ಕೃತನಾಗಿ ತನ್ನ ಪುರಕ್ಕೆ ಬಂದನು.

ಹೀಗೆ ತನ್ನ ಪುರಕ್ಕೆ ಬಂದ ದೇವಲನು ಆ ನೇಯ್ಗೆ ಸಾಧನಗಳನ್ನು ಮತ್ತು ತಂತುಗಳನ್ನೂ * ತನ್ನ ಸ್ವಬುದ್ಧಿಯಿಂದಲೇ ನೇಯ್ಗೆಕಾರ್ಯಕ್ಕನುಕೂಲವಾಗಿ

---

* ವಚನ ದೇವಾಂಗ ಪುರಾಣ ಶ್ರೀ ಕುದೂರು ಲಕ್ಷ್ಮಯ್ಯ ವಿರಚಿತ ಗ್ರಂಥದಲ್ಲಿ ದೇವಾಂಗನಿಗೆ ಶ್ರೀ ಮಹಾವಿಷ್ಣುವಿನಿಂದ ಹತ್ತಿಬೀಜಗಳು ದೊರೆತ ಬಗೆಗೆ ಈ ರೀತಿ ಉಲ್ಲೇಖವಿದೆ: ಅದನ್ನು ಅಲ್ಲಿರುವಂತೆಯೇ ಕೊಡಲಾಗಿದೆ. (ಮುಂದಿನ ಪುಟ ನೋಡಿ

ಜೋತೆಗೆ ಮಾಡಿದನು. ಯಾಕೆಂದರೆ ಅವುಗಳ ಪ್ರಮಾಣವು ಅವನ ಇಚ್ಛಾಧೀನವಾಗಿದ್ದವು. ಹೀಗೆಂದು ಸೂತನು ಶೌನಕಾದಿ ಮುನಿಗಳಿಗೆ ಆ ಹೇಳಲು ಶೌನಕಾದಿಗಳು ಎಲೈ ಅನಘನಾದ ಸೂತನೇ, ನೇಯ್ಗೆ ಸಂಬಂಧದ ಯೋಜನೆಯು ಬಹು ಕಠಿಣವಾದುದು. ಹೀಗಿದ್ದೂ ಅಂಥಾ ಯೋಜನೆಯನ್ನು ಮಾಡುವುದರಲ್ಲಿ ದಕ್ಷನಾದ ಮಹಾ ಬುದ್ಧಿಶಾಲಿಯಾದ ದೇವಲನಿಗೆ ಮಯನಿಂದ ಕೊಡಲ್ಪಟ್ಟ ಸಾಧನ ಸಲಕರಣೆಗಳಿಂದ ಏನು ಪ್ರಯೋಜನ. ಸಕಲವನ್ನೂ ರಚಿಸುವುದರಲ್ಲಿ ಪ್ರವೀಣನಾದ ದೇವಲ ಮಹಾರಾಜನು ತ್ವಷ್ಟೃಪುತ್ರನಾದ ಮಯನ ಬಳಿಗೆ ಏಕೆ ಹೋದನು. ಎಲೈ ತತ್ವವಿಶಾರದನಾದ ಸೂತಪೌರಾಣಿಕನೇ ಇದನ್ನು ನಮಗೆ ತಿಳಿಸೆಂದು ನುಡಿದರು. ಅದಕ್ಕೆ ಸೂತನು ಶಂಕರನ ಅನುಗ್ರಹದಿಂದ ದೇವಲನಿಗೆ ಸಮಸ್ತ ಸಾಧನಗಳ ಯೋಜನೆಯು ತಾನಾಗಿಯೇ ಬಹು ಸರಳವಾಗಿ ಸಿದ್ಧಿಸಿತ್ತು. ಮಹಾತ್ಮನೂ ಯೋಗಿಯೂ, ಪ್ರಭುವೂ ಆದ ದೇವಲನು ಸಕಲೋಪಕರಣಗಳ ರಚನೆಯಲ್ಲಿ ಸಮರ್ಥನಾಗಿದ್ದರೂ ಬಹುಕಾಲದಿಂದಲೂ ಶಾಪಗ್ರಸ್ತರಾಗಿ ನರಳುತ್ತಿದ್ದ ಆ ರಾಕ್ಷಸ, ಆ ಸಿಂಹ ಇವರೀರ್ವರ ಶಾಪ ವಿಮೋಚನೆಯ ಕಾರಣದಿಂದಾಗಿ ನೇಯ್ಗೆಯ ಉಪಕರಣಗಳ ನೆಪದಿಂದ ಮಯನ ಬಳಿಗೆ ಹೋಗಬೇಕಾಯಿತು.

ಚತುರನೂ, ದಕ್ಷನೂ, ಮಹಾತ್ಮನೂ ಆದ ದೇವಲನಿಗೆ ಮೂರು ಲೋಕಗಳಲ್ಲಿಯೂ ಅಸಾಧ್ಯವಾದುದು ಯಾವುದೂ ಇಲ್ಲ. ಅವನು ತಾನೇ ನೇಯ್ಗೆಯ ಉಪಕರಣಗಳೆಲ್ಲವನ್ನೂ ತನ್ನ ಬುದ್ಧಿ ಕುಶಲತೆಯಿಂದ ಸಜ್ಜುಗೊಳಿಸಿ ಚಂಡಿಕಾಂಬಿಯಾದ ಚೌಡೇಶ್ವರಿ ದೇವಿಯನ್ನು ಭಕ್ತಿಯಿಂದ ಧ್ಯಾನಿಸಿದನು. ಮಹಾತ್ಮನಾದ ದೇವಲನು ಸ್ಮರಿಸಿದಕ್ಷಣದಲ್ಲಿಯೇ ಜಗದಂಬೆಯಾದ ಚೌಡೇಶ್ವರಿ ದೇವಿಯು ದೇವಲನ ಬಳಿಗೆ ಬಂದು ಪ್ರೀತಿಪೂರ್ವಕವಾಗಿ ಎಲೈ ಪುರುಷಶ್ರೇಷ್ಠನಾದ ವತ್ಸ ದೇವಲನೇ,

---

ಅಧ್ಯಾಯ ೧. ದೇವಾಂಗ ಸಂಭವಂ, ಪುಟ ೮ (ಹಿಂದಿನ ಪುಟದಿಂದ

ಈಶ್ವರನು ದೇವಲನನ್ನು ಕುರಿತು ಈ ರೀತಿ ಹೇಳುತ್ತಾನೆ. "ಹೇ, ಮುನಿಶ್ರೇಷ್ಠನೇ ಪೂರ್ವದಲ್ಲಿ ವೇದಗಳು ಉತ್ಪನ್ನವಾಗತಕ್ಕ ಸಮಯದಲ್ಲಿ ಲೋಕಾಲಂಕಾರ ಪ್ರಾಯವಾದ ಹತ್ತಿ ಬೀಜಗಳು ವೇದಗಳೊಡನೆ ಉತ್ಪನ್ನವಾಗಿ, ಅವು ವಿಷ್ಣುನಾಭೀಕಮಲದಲ್ಲಿ ಸೇರಿರುತ್ತವೆ. ಆ ಬೀಜಗಳ ಉದ್ದಿಶ್ಯವಾಗಿ ನೀನು ವಿಷ್ಣುವಿನ ಸನ್ನಿಧಿಗೆ ಹೋಗಿ ಬೀಜಗಳನ್ನನುಗ್ರಹಿಸಿಕೊಂಡು ತಂದು ಬಗೆಬಗೆಯಾದ ವಸ್ತ್ರಗಳನ್ನು ನೈಯ್ದು ಎಲ್ಲಾ ಪ್ರಜೆಗಳಿಗೂ ಸಂತೋಷದಿಂದ ಸಮರ್ಪಿಸಿ ಲೋಕಾಭಿಮಾನವನ್ನು ಕಾಪಾಡಿ ಕೀರ್ತಿಯನ್ನು ಸಂಪಾದಿಸುವುದು. ದೇವತೆಗಳಿಗೆ ವಸ್ತ್ರಗಳನ್ನು (ನಿರ್ಮಿಸಿ) ಕೊಟ್ಟು ದೇವಾಂಗಗಳನ್ನು ಅಲಂಕರಿಸಿ ಅದರಿಂದ ದೇವಾಂಗನೆಂಬ ಮತ್ತೊಂದು ನಾಮಧೇಯವನ್ನು ಹೊಂದುವುದು."

ನಿನ್ನಿಂದೇನಾಗಬೇಕು ? ನನ್ನನ್ನು ಸ್ಮರಿಸಿದ ಕಾರಣವೇನು ? ನಿನ್ನಿಷ್ಟಾರ್ಥವೇನು ? ಹೇಳು, ಸಲ್ಲಿಸುವೆನು ಎಂದು ಅಭಯಕೊಟ್ಟಳು. ಅದಕ್ಕೆ ದೇವಲನು ಸಂತೋಷ ಭರಿತನಾಗಿ ದೇವಿಗೆ ಸಾಷ್ಟಾಂಗ ಪ್ರಣಾಮಮಾಡಿ ಬಹುವಿಧವಾಗಿ ಸ್ತುತಿಸಿ ಎಲೈ ದೇವಿಯೇ, ನಿನ್ನ ದರ್ಶನದಿಂದ ನಾನು ಕೃತಕೃತ್ಯನಾಗಿ ಧನ್ಯನಾದೆನು. ನಿನ್ನ ಅನುಗ್ರಹದಿಂದ ನನ್ನ ಮನೋರಥವು ಸಫಲವಾಯಿತು. ನಾನು ಶಿವನಪ್ಪಣೆಯಂತೆ ವಸ್ತ್ರಗಳನ್ನು ನಿರ್ಮಿಸಲಿಕ್ಕೆ ತೊಡಗುತ್ತೇನೆ. ಭಕ್ತವತ್ಸಲೆ, ನಿನ್ನಿಂದ ನೇಯಲ್ಪಟ್ಟ ವಸ್ತ್ರಗಳು ಅಕ್ಷಯವಾಗಬೇಕು. ಮೂರು ಲೋಕಗಳಲ್ಲಿ ಸಮಸ್ತರಿಗೂ ವಸ್ತ್ರಗಳನ್ನು ಕೊಡಬೇಕಾಗಿದೆ. ನಿನ್ನ ಅನುಗ್ರಹದಿಂದ ನಾನು ನೇಯುವವಸ್ತ್ರಗಳು ಅಕ್ಷಯವಾಗಲಿ. ನಾನು ದೇವಾದಿಗಳಿಗೆ ಅವರವರ ಇಚ್ಛೆಯಂತೆ ಅವುಗಳನ್ನು ಕೊಟ್ಟು ಕೃತಕೃತ್ಯನಾಗುವ ಹಾಗೆ ನನ್ನನ್ನು ಅನುಗ್ರಹಿಸಬೇಕೆಂದು ದೇವಿಯನ್ನು ಪ್ರಾರ್ಥಿಸಿದನು. ಅದಕ್ಕೆ ದೇವಿಯು ಅತ್ಯಾದರದಿಂದ ಎಲೈ ರಾಜೇಂದ್ರನಾದ ದೇವಲನೇ ನಿನ್ನ ಪ್ರಾರ್ಥನೆಯು ಖಂಡಿತವಾಗಿಯೂ ನೆರವೇರುವುದು ಎಂದು ಅವನಿಗೆ ಸಂತೋಷವುಂಟಾಗುವಂತೆ ಮಧುರವಾಗಿ ನುಡಿದು, ಎಲೈ ಅನಘನೇ ನೀನು ದಿವ್ಯವಾದ ಈ ಕಂಕಣವನ್ನು ಧರಿಸಿದವನಾಗಿ ಕೌಶಲ್ಯದಿಂದ ನಾನಾ ವರ್ಣಗಳ ವಸ್ತ್ರಗಳನ್ನು ನೇಯುವವನಾಗು. ಅವುಗಳೆಲ್ಲಾ ಅಕ್ಷಯವಾಗುವುವು. ಇದರಲ್ಲಿ ಅನುಮಾನವಿಲ್ಲ. ನೀನು ಯಾವ ತರಹ ವಸ್ತ್ರಗಳನ್ನು ರಚಿಸಿದರೂ, ಒಂದೇ ವಸ್ತ್ರ ನಿರ್ಮಿಸಿದರೂ ಅವೆಲ್ಲಾ ಅಕ್ಷಯಗಳಾಗುವುವು ಎಂದು ನುಡಿದು ಆದರದಿಂದ ತನ್ನ ಕಂಕಣವನ್ನು ಅನುಗ್ರಹಿಸಿ ಅವನನ್ನು ಸಂತೋಷಗೊಳಿಸಿ ಅಂತರ್ಧಾನಳಾದಳು.

ಅಧ್ಯಾಯ ೨. ದೇವಾಂಗ ಸಂಭವಂ, ಪುಟ ೧೧-೧೨ ;

ವಿಷ್ಣುವನ್ನು ಕುರಿತು ದೇವಲನು, ಎಲೈ ಜಗದ್ರಕ್ಷಕನಾದ ಲಕ್ಷ್ಮೀವಲ್ಲಭನೇ ! ನಿನ್ನ ದರ್ಶನದಿಂದ ನಾನು ಕೃತಾರ್ಥನಾದೆನು. ಪರಶಿವಮೂರ್ತಿಯ ಆಜ್ಞಾನುಸಾರ ವಸ್ತ್ರಗಳನ್ನು ನಿರ್ಮಿಸುವುದಕ್ಕಾಗಿ ನಿನ್ನ ನಾಭೀಕಮಲದಲ್ಲಿರತಕ್ಕ ಹತ್ತಿ ಬೀಜಗಳನ್ನು ಪಡೆದುಕೊಂಡು ಹೋಗಲು ಬಂದಿದ್ದೇನೆ. ಹೇ, ಹೃಷಿಕೇಶಾ ! ದಯವಿಟ್ಟು ಹತ್ತಿಯ ಬೀಜಗಳನ್ನು ದಯಪಾಲಿಸಬೇಕೆಂದು ಕೇಳಿಕೊಂಡನು.

ಭಕ್ತವತ್ಸಲನಾದ ಲಕ್ಷ್ಮೀರಮಣನು ದೇವಲನನ್ನು ನೋಡಿ, ಎಲೈ ಭಕ್ತನೇ, ಈ ಬೀಜಗಳನ್ನು ಜಗತ್ತು ಹುಟ್ಟಿದಾಗಲಿಂದಲೂ ಕಾಪಾಡಿದೆನು. ಈಗ ನಿನ್ನಿಂದ ವಿನಿಯೋಗವಾಗತಕ್ಕ ಕಾಲವು ಪ್ರಾಪ್ತವಾಯಿತು. ನೀನು ಈ ಬೀಜಗಳನ್ನು ತೆಗೆದುಕೊಂಡು ಹೋಗಿ ವಸ್ತ್ರಗಳನ್ನು ನೇಯ್ದು ದೇವಾದಿ ದೇವತೆಗಳಿಗೆಲ್ಲಾ ಕೊಟ್ಟು ಅವರ ಮಾನಸಂರಕ್ಷಣೆಯನ್ನು ಮಾಡೆಂದು ಆಶೀರ್ವದಿಸಿಕೊಟ್ಟು ಎಲೈ ದೇವಲನೆ, ನೀನು ಹೋಗತಕ್ಕ ದಾರಿಯಲ್ಲಿ ದುರ್ಮಾರ್ಗರಾದ ರಾಕ್ಷಸರು ಬಹಳ ಮಾಯಾವಿಗಳು. ಅವರು ಹತ್ತಿ ಬೀಜಗಳ ನಿಮಿತ್ತನಾಗಿ ಮುನಿವೇಷಗಳನ್ನು ಧರಿಸಿಕೊಂಡು ಮೋಸಪಡಿಸಲು ಬರುತ್ತಾರೆ. ನೀನು ಎಚ್ಚರಿಕೆಯಿಂದ ಇರಬೇಕು ಎಂದು ಹೇಳಿ ಕಳಿಸಿದನು.

ಅನಂತರ ಶ್ರೀಮಂತನೂ ಕುಶಲನೂ ಆದ ದೇವಲನು ನೇಯಿಗೆಯಲ್ಲಿ ತೊಡಗುವುದಕ್ಕಾಗಿ ಶುಭ ಮುಹೂರ್ತ ನಿಶ್ಚಯಿಸಲು ಜ್ಯೋತಿಷ್ಯವನ್ನು ಬಲ್ಲ ವಿಪ್ರೋತ್ತಮರನ್ನು ಬರಮಾಡಿಕೊಂಡು ಅವರಿಂದ ಮುಹೂರ್ತವನ್ನು ನಿಶ್ಚಯಿಸಿ ಪುಣ್ಯಾಹವಾಚನ ಮಾಡಿಸಿ, ಅವರನ್ನು ಭೋಜನ ದಕ್ಷಿಣೆಗಳಿಂದ ಸಂತೋಷಗೊಳಿಸಿ, ಆ ಸುಮುಹೂರ್ತದಲ್ಲಿ ನೇಯ್ಗೆಯ ಸಕಲೋಪಕರಣಗಳನ್ನು ಸಿದ್ಧಗೊಳಿಸಿ, ದೇವಿಯಿಂದ ಅನುಗ್ರಹಿಸಲ್ಪಟ್ಟ ಕಂಕಣವನ್ನು ಧರಿಸಿ, ಅಮೂಲ್ಯವಾದ ವಸ್ತ್ರಗಳನ್ನು ನೇಯಲು ಪ್ರಾರಂಭಿಸಿದನು.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿ ಬ್ರಹ್ಮನಾರದ ಸಂವಾದ ರೂಪ ಉತ್ತರ ಖಂಡದ ದೇವಾಂಗ ಚರಿತ್ರೆಯಲ್ಲಿ ಮಯನೋಪಕರಣ ಸಂಪಾದನ, ಚೌಡೇಶ್ವರಿ ವಸ್ತ್ರ ಅಕ್ಷಯ ವರಪ್ರದಾನ, ವಸ್ತ್ರ ನಿರ್ಮಾಣ ಪ್ರಾರಂಭವೆಂಬ ಏಳನೆಯ ಅಧ್ಯಾಯ ಮುಗಿದುದು.

ಅಧ್ಯಾಯ ೮. ವಸ್ತ್ರನಿರ್ಮಾಣ ಪ್ರಾರಂಭವು ಪುಟ ೩೫-೩೭;

ನಂತರ ದೇವಲನು ನೇಯ್ಗೆ ಸಾಮಗ್ರಿಗಳನ್ನು ತೆಗೆದುಕೊಂಡು ಬರುತ್ತಿರುವಾಗ ದಾರಿಯಲ್ಲಿ ತನ್ನಲ್ಲಿದ್ದ ಹತ್ತೀ ಬೀಜಗಳು ಕೆಳಕ್ಕೆ ಬೀಳಲು ಅಲ್ಲಿದ್ದ ಒಂದು ಕೋಳಿ ಹುಂಜವು ಆ ಬೀಜಗಳನ್ನು ನುಂಗಲಾಗಿ ದೇವಲನು ಅದನ್ನು ಕುರಿತು ಎಷ್ಟು ವಿಧವಾಗಿ ಬೇಡಿಕೊಂಡಾಗ್ಯೂ ಹುಂಜವು ಆ ಬೀಜಗಳನ್ನು ಕೊಡಲಿಲ್ಲಾ. ನಂತರ ಆ ಹುಂಜವನ್ನು ಕುರಿತು ಎಲೈ ಹುಂಜವೇ, ಈ ಬೀಜಗಳಿಂದ ವಸ್ತ್ರಗಳನ್ನು ನಿರ್ಮಾಣಮಾಡಿ ದೇವತೆಗಳೇ ಮೊದಲಾದ ಸಮಸ್ತ ಜನಗಳಿಗೂ ಕೊಡಬೇಕಾಗಿರುತ್ತೆ. ಇದರಿಂದ ಲೋಕಾಭಿಮಾನವು ಉಳಿಯಬೇಕಾಗಿರುವುದರಿಂದ ಈ ಕಾಲದಲ್ಲಿ ನೀನು ನನಗೆ ತೊಂದರೆ ಕೊಡಬೇಡ. ನೀನು ಹತ್ತಿಬೀಜಗಳನ್ನು ಹಿಂತಿರುಗಿಸಿಕೊಟ್ಟರೆ ನೇಯ್ಗೆಯ ಅಗಲ (ಪನ್ನ)ದ ಅಳತೆಗೆ ನಿನ್ನ ಹೆಸರನ್ನು ಇಡುತ್ತೇನೆ. ನಿನ್ನ ಹೆಸರು ಶಾಶ್ವತವಾಗಿ ನೆಲೆಸುತ್ತದೆಂದು ಹೇಳಿದ ನಂತರ ಆ ಹುಂಜವು ಹತ್ತೀ ಬೀಜಗಳನ್ನು ವಾಪಸ್ಸು ಕೊಟ್ಟಿತು. ಈಗಲೂ ಆ ಹುಂಜದ ಹೆಸರು ಪ್ರತಿ ತಟ್ಟಿನಲ್ಲೂ ರೂಢಿಯಲ್ಲಿರುತ್ತದೆ.

ತರುವಾಯ ದೇವಲನು ಆ ಹತ್ತೀ ಬೀಜಗಳನ್ನು ತಂದು ಪಾತಿಮಾಡಿ ಆ ಬೀಜಗಳನ್ನು ನೆಟ್ಟನು. ಆ ಬೀಜಗಳು ಪರಶಿವಮೂರ್ತಿಯ ಕೃಪೆಯಿಂದ ಮೊಳಕೆಯನ್ನೈದಿ ಗಿಡವಾಗಿ ಹತ್ತಿ ಕಾಯಿಗಳು ಬಿಟ್ಟವು. ಆ ಕಾಯಿಗಳಲ್ಲಿ ಮಯನು ನಿರ್ಮಿಸಿಕೊಟ್ಟ ಸಾಮಗ್ರಿಗಳ ಸಹಾಯದಿಂದ ನೂಲನ್ನು ತಯಾರ್‍ಮಾಡಿಕೊಂಡನು.

ಎಂಟನೆಯ ಅಧ್ಯಾಯ

ದೇವಾಂಗನಿಂದ ದೇವತೆಗಳಿಗೆ ವಸ್ತ್ರಪ್ರದಾನ

ಅನಂತರ ಸೂತಪುರಾಣಿಕನು ಎಲೈ ಶೌನಕಾದಿ ಮುನಿಗಳಿರಾ, ಶ್ರೀಮಂತನೂ ಮತಿವಂತನೂ ಆದ ದೇವಲನು ಚೌಡೇಶ್ವರಿಯಿಂದ ತನಗೆ ಅನುಗ್ರಹಿಸಲ್ಪಟ್ಟ, ಕಂಕಣದ ಪ್ರಭಾವದಿಂದಲೂ, ಕರಕೌಶಲ್ಯದಿಂದಲೂ, ಆ ದೇವಿಯ ವರಪ್ರಸಾದದಿಂದಲೂ ನಾನಾ ವಿಧವಾದ ವಸ್ತ್ರಗಳನ್ನೂ ಅಂದರೆ ನೇತ್ರಬಂಧಾವಳಿ, ಪಟ್ಟಬಂಧಾವಳಿ, ಹಂಸಬಂಧಾವಳಿ, ಹಂಸಪೂಜಾವಳಿ, ಚಂದ್ರಾವಳೀ, ತಾರಾವಳೀ, ಚಂದ್ರತಾರಾವಳಿ, ಮೇಘಾವಳೀ ಇವೇ ಮೊದಲಾದ ನಾನಾ ಬಗೆಗಳ ಅಂಚಿನಿಂದ ಕೂಡಿದ, ಅನೇಕ ವಿಧವಾದ ವರ್ಣಗಳಿಂದ ಕೂಡಿದ ಶುಭ್ರ (ಬಿಳುಪು) ಕಪ್ಪು, ಹಳದಿ, ಕೆಂಪು, ಹಸಿರು ಬಣ್ಣಗಳ ಬಗೆಬಗೆಯಾದ ವಿಚಿತ್ರವಾದ ನವನ ಮನೋಹರವಾದ ವಸ್ತ್ರಗಳನ್ನು ನೇಯ್ದನು.

ನಂತರ ಅವುಗಳನ್ನು ತೆಗೆದುಕೊಂಡು ವಿಷ್ಣುವಿನ ಸನ್ನಿಧಿಗೆ ಹೋಗಿ ಆತನಿಗೆ ಭಕ್ತಿಪೂರ್ವಕವಾಗಿ ನಮಸ್ಕರಿಸಿ ಮನೋಹರವಾದ ಪೀತಾಂಬರವನ್ನೂ, ಲಕ್ಷ್ಮೀದೇವಿಗೆ ಬಿಳುಪಾದ, ನಯವಾದ ವಸ್ತ್ರಗಳನ್ನೂ, ಸುಂದರವಾದ ಕೆಂಪು ವಸ್ತ್ರಗಳನ್ನು ಭೂದೇವಿಗೂ ಅರ್ಪಿಸಿ ಲಕ್ಷ್ಮೀನಾರಾಯಣರಿಂದ ಆಶೀರ್ವದಿಸಲ್ಪಟ್ಟು ಅನೇಕ ಮಣಿಭೂಷಣಾದಿಗಳಿಂದ ಸನ್ಮಾನಿತನಾಗಿ, ಶ್ವೇತದ್ವೀಪವಾಸಿಗಳಾದ ಸಮಸ್ತ ವಿಷ್ಣುಭಕ್ತರಿಗೂ ಅವರವರ ಯೋಗ್ಯತಾನುಸಾರ ವಸ್ತ್ರಗಳನ್ನು ನೀಡಿ ಅವರಿಂದ ಅನೇಕ ವಿಧಗಳಾದ ಕಿರೀಟಗಳು ಮತ್ತು ವಾಹನಗಳಿಂದ ಮರ್ಯಾದಿಸಲ್ಪಟ್ಟು ಸಂತುಷ್ಟನಾದನು.

ಅನಂತರ ದೇವಲನು ಸತ್ಯಲೋಕಕ್ಕೆ ಹೋಗಿ ಸೃಷ್ಟಿಕರ್ತನಾದ ಬ್ರಹ್ಮದೇವನಿಗೆ ಕೆಂಪು ವಸ್ತ್ರಗಳನ್ನೂ, ಸರಸ್ವತಿಗೆ ಧವಳಾಂಬರವನ್ನೂ, ಸಾವಿತ್ರಿಗೆ ಪೀತಾಂಬರವನ್ನೂ, ಗಾಯತ್ರಿಗೆ ಅರುಣಾಂಬರವನ್ನೂ (ಕೆಂಪು) ಪ್ರಜಾಪತಿಗೆ ಶುಭ್ರಾಂಬರವನ್ನೂ ಅರ್ಪಿಸಿದನು. ಪುಲಸ್ತ್ಯನಿಗೆ ಹಾರೀತಾ (ಹಸಿರು) ಂಬರವನ್ನೂ ಇತ್ತನು. ಆ ಬ್ರಹ್ಮ ಸಭೆಯಲ್ಲಿದ್ದ ಸಮಸ್ತ, ಗಂಧರ್ವರು, ಕಿನ್ನರರು, ಸಿದ್ಧಸಾಧ್ಯರು, ಚಾರಣರು ಮತ್ತು ಮಹರ್ಷಿಗಳಿಗೂ ಅವರವರ ಅಪೇಕ್ಷೆಯಂತೆ ವಸ್ತ್ರಗಳನ್ನು ನೀಡಿದನು.

ಆ ಮೇಲೆ ದೇವಲನು ಯೋಚನಾ ಮಗ್ನನಾಗಿ ತನ್ನ ನಂತರವೂ ವಸ್ತ್ರನಿರ್ಮಾಣ ಕಾರ್ಯವು ಅವ್ಯಾಹತವಾಗಿ ನಡೆದುಕೊಂಡು ಬರಲು ಮತ್ತು ಸಾಮಾನ್ಯರು ಮೊದಲಗೊಂಡು ಸಮಸ್ತರೂ ಇದರ ಪ್ರಯೋಜನ ಹೊಂದಲೆಂಬ ಸದಿಚ್ಛೆಯಿಂದ ಬ್ರಹ್ಮದೇವನಿಗೆ ಸಾಷ್ಟಾಂಗ ಪ್ರಣಾಮ ಮಾಡಿ ಎಲೈ ಸುರಜ್ಯೇಷ್ಠನಾದ ದಯಾನಿಧಿಯಾದ ಸ್ವಾಮಿಯೇ

ಸಮಸ್ತ ಪ್ರಜೆಗಳಿಗೂ ಮಾನಸಂರಕ್ಷಣ ಸಾಧನವಾದ ತಂತುಗಳನ್ನು ಮುಂದಕ್ಕೂ ನನ್ನ ವಂಶಜರು ಎಂದೆಂದೂ ಪಡೆದುಕೊಂಡು ವಸ್ತ್ರ ನಿರ್ಮಾಪಕರಾಗುವಂತೆ ಕರುಣಿಸೆಂದು ಪ್ರಾರ್ಥಿಸಿದನು. ಆಗ ಸೃಷ್ಟೀಶನಾದ ಬ್ರಹ್ಮನು ದೇವಲನನ್ನು ಕುರಿತು ಎಲೈ ದೇವಲನೇ ಆ ತಂತುಗಳು ನಿನ್ನ ವಂಶಜರಿಗೆ ಹೇಗೆ ದೊರೆಯುವುವು ಎಂಬುದನ್ನು ಹೇಳುವೆನು ಕೇಳು. ವಿಷ್ಣುವಿನ ನಾಭಿಯಲ್ಲಿ ಮಾನಿ, ಅಭಿಮಾನಿ ಎಂಬೀರ್ವರು ಸ್ತ್ರೀಯರಿದ್ದು ಅವರು ನೂಲನ್ನು ಉತ್ಪಾದಿಸುವುದಕೋಸ್ಕರ ಸ್ಥಾವರಗಿಡಗಳಾಗಿ ಜನಿಸುವರು. ಅವರಿಂದಲೇ ನೂಲು ತಯಾರಿಸಲು ಬೇಕಾಗುವ ವಸ್ತುವುಂಟಾಗುವುದು ಆ ಗಿಡಗಳಿಂದ ನಿನ್ನ ವಂಶಜರು ತಂತು ಉತ್ಪಾದನಾ ವಸ್ತುವನ್ನು ನಿರಂತರವಾಗಿ ಪಡೆಯುವರು. ಸಂಶಯಪಡಬೇಡ ಎಂದನು. ಈ ರೀತಿ ಬ್ರಹ್ಮನು ನುಡಿಯಲು ದೇವಲನು ಸಂತೋಷ ಗೊಂಡು ಆತನಿಂದ ಬೀಳ್ಕೊಂಡು ಸ್ವರ್ಗವನ್ನು ಸೇರಿದನು.

ಅಲ್ಲಿ ದೇವೇಂದ್ರನಿಗೆ ಕೆಂಪು ವಸ್ತ್ರವನ್ನೂ, ಶಚಿದೇವಿಗೆ ಪೀತಾಂಬರವನ್ನೂ, ಜಯಂತನಿಗೆ ಶುಭ್ರಾಂಬರವನ್ನೂ ನೀಡಿದನು. ಅಷ್ಟವಸುಗಳು, ದ್ವಾದಶಾದಿತ್ಯರು, ಏಕಾದಶರುದ್ರರು, ಬ್ರಹ್ಮರ್ಷಿಗಳು, ಗಂಧರ್ವರು ಅಪ್ಸರ ಸ್ತ್ರೀಯರು ಇತ್ಯಾದಿ ಸಮಸ್ತ ದೇವತೆಗಳಿಗೂ ಅವರವರ ಸ್ಥಾನಮಾನಗಳಿಗನುಸಾರ ದಿವ್ಯವಸ್ತ್ರಗಳನ್ನು ಅನುಗ್ರಹಿಸಿದನು. ಆ ಸಮಸ್ತರಿಂದಲೂ ಆನೆ, ಅಶ್ವ, ರತ್ನಹಾರಾಲಂಕಾರಗಳಿಂದಲೂ, ನಾನಾ ವಿಧಗಳಾದ ಮಂತ್ರಾಸ್ತ್ರಗಳಿಂದಲೂ ಮರ್ಯಾದಿತನಾಗಿ ಸಂತುಷ್ಟನಾಗಿ ರಾಜೋತ್ತಮನಾದ ದೇವಲನು ಅಲ್ಲಿಂದ ಮೇರು ಪರ್ವತಕ್ಕೆ ಹೋದನು. ಅಲ್ಲಿದ್ದ ದೇವತೆಗಳು, ವಿದ್ಯಾಧರರು, ಗಂಧರ್ವರು, ಸಿದ್ಧರು, ಚಾರಣರು ಸಾಧ್ಯರು, ಕಿಂಪುರುಷರು, ಯಕ್ಷರು, ಕಿನ್ನರರು, ಗರುಡರು, ಮಹಾತ್ಮರಾದ ಮುನೀಶ್ವರರೇ ಮೊದಲಾದ ಸಮಸ್ತರಿಗೂ ಶುಭ್ರ, ಕೆಂಪು, ನೀಲಿ, ಹಸಿರು, ಹಳದಿ ಇತ್ಯಾದಿ ನಾನಾ ವರ್ಣಗಳ ವಸ್ತ್ರಗಳನ್ನು ಕರುಣಿಸಿ ಅವರಿಂದ ಸನ್ಮಾನಿತನಾಗಿ, ತ್ವಷ್ಟೃ ಪುತ್ರನಾದ ಮಯನಿಗೆ ಅವನಿಷ್ಟಪ್ರಕಾರ ಅನೇಕ ನಯನ ಮನೋಹರವಾದ ವಸ್ತ್ರಗಳನ್ನಿತ್ತು ಅವನಿಂದ ನಾನಾ ಪ್ರಕಾರವಾದ ಆಯುಧಗಳಿಂದಲೂ ಅನೇಕ ವಿಧವಾದ ಭೂಷಣಗಳಿಂದಲೂ ಸತ್ಕೃತನಾಗಿ ಶೀಘ್ರವಾಗಿ ಮಹೇಂದ್ರ ಪರ್ವತಕ್ಕೆ ಬಂದನು.

ಮಹಾಮತಿಯಾದ ದೇವಲನು ಅಲ್ಲಿದ್ದ ಗಂಧರ್ವರಿಗೆ ಮನೋಹರವಾದ ವಸ್ತ್ರಗಳನ್ನು ಕೊಟ್ಟು ಅವರಿಂದ ಮರ್ಯಾದಿತನಾಗಿ ಮಲಯಾದ್ರಿಗೆ ಬಂದು ಅಲ್ಲಿದ್ದ ಸಿದ್ಧರಿಗೆ ವಸ್ತ್ರಗಳನ್ನು ಕೊಟ್ಟು ಸಂತೋಷಪಡಿಸಿ ಅವರಿಂದ ಸತ್ಕೃತನಾಗಿ ಸಹ್ಯಾದ್ರಿಗೆ ಬಂದು ಅಲ್ಲಿದ್ದ ಕಿನ್ನರರಿಗೆ ಯೋಗ್ಯ ವಸ್ತ್ರಗಳನ್ನು ಕೊಟ್ಟು ಹರ್ಷಪಡಿಸಿ ಹಿಮವತ್ಪರ್ವತಕ್ಕೆ ಬಂದನು. ಅಲ್ಲಿದ್ದ ಕಿಂಪುರುಷರಿಗೆ ವಸ್ತ್ರಗಳನ್ನು ಕೊಟ್ಟು ಅಲ್ಲಿಂದ ವಿಂಧ್ಯಪರ್ವತದಲ್ಲಿದ್ದ ಚಾರಣರಿಗೂ, ಋಕ್ಷವಂತ ಪರ್ವತದಲ್ಲಿದ್ದ ಅನೇಕ ವಿದ್ಯಾಧರ

ರಿಗೂ, ಅಲ್ಲಿಂದ ಪಾರಜಾದ್ರಿಗೆ ಬಂದು ಅಲ್ಲಿದ್ದ ಗಂಧರ್ವ ಸಮುದಾಯಕ್ಕೂ ಅವರವರ ಯೋಗ್ಯತಾನುಸಾರ ವಸ್ತ್ರಗಳನ್ನು ಕೊಟ್ಟು ಸಂತೋಷಪಡಿಸಿ ಮುಂದೆ ಹೊರಟು ಅರಣ್ಯವಾಸಿಗಳಾದ ತಪಸ್ವಿಗಳಿಗೂ, ಮಹಾಮುನಿಗಳಿಗೂ, ಋಷಿಕುಮಾರರಿಗೂ, ಮಹಾತ್ಮರಿಗೂ ಅವರವರ ಪತ್ನಿಯರಾದ ಪತಿವ್ರತಾ ಶಿರೋಮಣಿಯರಾದ ಋಷಿಪತ್ನಿಯರಿಗೂ, ಋಷಿ ಕನ್ಯೆಯರಿಗೂ ವಸ್ತ್ರಗಳನ್ನು ಕೊಟ್ಟು ಅವರನ್ನು ಸಂತೋಷಗೊಳಿಸಿದನು. ಅಲ್ಲಿಂದ ಅಗ್ನಿಪುರಕ್ಕೆ ಬಂದು ಅಗ್ನಿದೇವನಿಗೆ ಕೃಷ್ಣಾಂಬರವನ್ನು (ಕಪ್ಪು ವಸ್ತ್ರ) ಅರ್ಪಿಸಿ ಅವನಿಂದ ಮರ್ಯಾದೆ ಹೊಂದಿದನು.

ಅಲ್ಲಿಂದ ಸಂಯಮಿನಿ (ಯಮಪುರಿ) ಪುರಕ್ಕೆ ಬಂದು ಯಮನಿಗೆ ಕೃಷ್ಣಾಂಬರವನ್ನರ್ಪಿಸಿ ಅವನ ಭಕ್ತರಿಗೆ ಕಪ್ಪು ವಸ್ತ್ರಗಳನ್ನು ಕೊಟ್ಟು ನೈಋತ್ಯ ದಿಕ್ಕಿಗೆ ಬಂದು ತದಧಿಪತಿಯಾದ ನಿಋುತಿಗೆ ಪೀತಾಂಬರವನ್ನು ಕೊಟ್ಟನು. ಅಲ್ಲಿಂದ ವರುಣನ ಗೃಹಕ್ಕೆ ಬಂದು ಅವನಿಗೆ ಶುಭ್ರಾಂಬರವನ್ನೂ ಅವನ ಪಟ್ಟಣದಲ್ಲಿದ್ದ ಸಮಸ್ತರಿಗೆ ದಿವ್ಯಾಂಬರಗಳನ್ನು ಕೊಟ್ಟು ಸಂತೋಷಗೊಳಿಸಿದನು. ವರುಣನಿಂದ ಮನೋಹರವಾದ ಮುಕ್ತಾಹಾರ, ರತ್ನಹಾರಗಳಿಂದ ಮರ್ಯಾದಿತನಾದನು. ಅಲ್ಲಿಂದ ವಾಯುವಿನ ಪಟ್ಟಣಕ್ಕೆ ಬಂದು ವಾಯುದೇವನಿಗೆ ಹಾರೀತಾಂಬರವನ್ನರ್ಪಿಸಿ ಅವನಿಂದ ಮರ್ಯಾದಿತನಾಗಿ ಉತ್ತರ ದಿಕ್ಕಿನಲ್ಲಿನ ಅಲಕಾವತೀ ಪಟ್ಟಣಕ್ಕೆ ಬಂದು ಅಲ್ಲಿನ ಅಧಿಪತಿಯಾದ ಕುಬೇರನಿಗೆ ನಾನಾ ಬಣ್ಣದ ವಸ್ತ್ರಗಳನ್ನು ಸಮರ್ಪಿಸಿದನು. ಅವನ ಪುತ್ರನಾದ ನಳಕೂಬರನಿಗೆ ಅನೇಕ ವಸ್ತ್ರಗಳನ್ನು ಕೊಟ್ಟು ಸಂತೋಷಗೊಳಿಸಿ ಕುಬೇರನಿಂದ ರತ್ನಕುಂಡಲಗಳು ಕೋಟಿಸೂರ್ಯಪ್ರಕಾಶಮಾನಗಳಾದ ರತ್ನಕಿರೀಟ ಮತ್ತು ಅನೇಕಾಭರಣಗಳಿಂದ ಮರ್ಯಾದಿತನಾದನು. ನಂತರ ದೇವಲನು ಈಶಾನ್ಯ ದಿಕ್ಕಿಗೆ ಬಂದು ತದಧಿಪತಿಯಾದ ಶಂಭುವಿಗೆ ಶುಭ್ರವಸ್ತ್ರವನ್ನು ಸಮರ್ಪಿಸಿ ಅಲ್ಲಿದ್ದ ಪ್ರಮಥ ಭೂತಗಣಗಳಿಗೆ ಬೆಲೆಬಾಳುವ ವಸ್ತ್ರಗಳನ್ನು ಕೊಟ್ಟು ಅವರಿಂದ ಮರ್ಯಾದೆ ಹೊಂದಿದನು.

ಈ ರೀತಿ ಧರ್ಮಾತ್ಮನೂ, ಕೀರ್ತಿವರ್ಧಕನೂ ಆದ ದೇವಲ ರಾಜನು ಸಮಸ್ತ ದೇವತೆಗಳ, ಮಹಾತ್ಮರಾದ ಋಷಿಗಳ, ಅಷ್ಟಕುಲ ಪರ್ವತವಾಸಿಗಳ ಮಾನರಕ್ಷಣೆಮಾಡಿ ಅವರೆಲ್ಲರನ್ನು ಸಂತೋಷಗೊಳಿಸಿದನು. ಮುನಿಸತ್ತಮನಾದ ದೇವಲನು ದಿವ್ಯಾಂಬರಗಳಿಂದ ದೇವತೆಗಳ ಅಂಗಗಳನ್ನು ಅಲಂಕರಿಸಿದುದರಿಂದ ದೇವಾಂಗನೆಂದು ವಿಶ್ವದಲ್ಲಿ ವಿಖ್ಯಾತನಾದನು.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿ ಬ್ರಹ್ಮನಾರದ ಸಂವಾದ ರೂಪ ಉತ್ತರ ಖಂಡದ ದೇವಾಂಗ ಚರಿತ್ರೆಯಲ್ಲಿ ದೇವಾಂಗನು ದೇವತೆಗಳಿಗೆ ವಸ್ತ್ರಪ್ರದಾನ ಮಾಡಿದ ನೆಂಬಲ್ಲಿಗೆ ಎಂಟನೆಯ ಅಧ್ಯಾಯ ಮುಗಿದುದು.

ಒಂಭತ್ತನೆಯ ಅಧ್ಯಾಯ

ದೇವಾಂಗನಿಂದ ಮರ್ತ್ಯ ಪಾತಾಳಲೋಕವಾಸಿಗಳಿಗೆ ವಸ್ತ್ರಪ್ರದಾನ

ಸೂತನು ಹೇಳುತ್ತಾನೆ. ಅನಂತರ ದೇವಾಂಗ ರಾಜಋಷಿಯು ಭೂಲೋಕಕ್ಕೆ ಬಂದು ಜಂಬೂ ದ್ವೀಪವನ್ನು ಹೊಕ್ಕು, ಆ ದ್ವೀಪವನ್ನು ಆಳುತ್ತಿದ್ದ ಪೃಥುರಾಜನ ರಾಜಧಾನಿಯಾದ ವಜ್ರಪುರವನ್ನು ಸೇರಿದನು. ಪೃಥುರಾಜನಿಗೂ ಅಲ್ಲಿದ್ದವರೆಲ್ಲರಿಗೂ ಅನೇಕ ರೀತಿಯ ವಸ್ತ್ರಗಳನ್ನು ಕೊಟ್ಟನು. ಪೃಥುರಾಜನಿಂದ ಆನೆ, ಕುದುರೆ, ಅಲಂಕಾರಗಳಿಂದ ಸನ್ಮಾನಿತನಾಗಿ ಸಂತೋಷಪಟ್ಟು ಪ್ಲಕ್ಷ ದ್ವೀಪಕ್ಕೆ ಬಂದನು. ಅದರ ಅಧಿಪತಿಯಾದ ಶೂರಸೇನ ಮಹಾರಾಜನಿಗೆ ಅನೇಕ ವಸ್ತ್ರಗಳನ್ನು ಕೊಟ್ಟು ಅವನಿಂದ ಮದೋನ್ಮತ್ತಗಳಾದ ಆನೆಗಳನ್ನು ಪಡೆದು, ಮರ್ಯಾದಿತನಾದನು. ನಂತರ ಕುಶದ್ವೀಪಕ್ಕೆ ಬಂದು ಅದರ ರಾಜನಾದ ಕುಶರಾಜನಿಗೆ ದಿವ್ಯಾಂಬರಗಳನ್ನು ಕೊಟ್ಟು ಆ ಕುಶಮಹಾರಾಜನಿಂದ ದಿವ್ಯಾಶ್ವಗಳನ್ನು ಪಡೆದು ಸನ್ಮಾನಿತನಾಗಿ, ಕ್ರೌಂಚ ದ್ವೀಪಕ್ಕೆ ಬಂದನು. ಅಲ್ಲಿಯ ರಾಜನಾದ ಮಹಾ ತೇಜಸ್ವಿಯಾದ ಹೇಮಾಕ್ಷನಿಗೆ ನಾನಾ ವರ್ಣದ ವಸ್ತ್ರಗಳನ್ನು ಕೊಟ್ಟು ಅವನಿಂದ ತೋರಮುತ್ತುಗಳು, ಇಂದ್ರ ನೀಲ ಮಣಿಗಳು, ಉತ್ತಮಾಶ್ವಗಳು, ಮದ್ದಾನೆಗಳು ಇನ್ನೂ ಅನೇಕಾಲಂಕಾರಗಳನ್ನು ಪಡೆದು ಸನ್ಮಾನಿತನಾಗಿ ಸಂತೋಷಗೊಂಡು ಮಹದೈಶ್ವರ್ಯ ಸಂಪನ್ನನಾದ ದೇವಲನು ಶಾಕ ದ್ವೀಪಕ್ಕೆ ಬಂದನು. ಅಲ್ಲಿಯ ರಾಜನಾದ ಅಭಿರಾಮನಿಗೆ ಬಹು ವಿಧಗಳಾದ ವಸ್ತ್ರಗಳನ್ನು ಕೊಟ್ಟು ಅವನಿಂದ ಅನೇಕ ರಥಗಳು, ಉತ್ತಮವಾದ ಮೇನೆಗಳು, ಪಲ್ಲಕ್ಕಿಗಳು ಇತ್ಯಾದಿ ಅನೇಕ ಭೂಷಣಗಳನ್ನು ಪಡೆದು ಸನ್ಮಾನಿತನಾಗಿ ಶಾಲ್ಮಲಿ ದ್ವೀಪಕ್ಕೆ ಬಂದನು. ಅಲ್ಲಿಯ ಮಹಾರಾಜನಾದ ಶಾಲಿಹೋತ್ರನಿಗೆ ದಿವ್ಯಾಂಬರ ಗಳನ್ನು ಕೊಟ್ಟು ಅವನಿಂದ ಅನೇಕ ಉತ್ತಮಾಶ್ವಗಳನ್ನು ಹೊಂದಿ ಸನ್ಮಾನಿತನಾಗಿ ಪುಷ್ಕರ ದ್ವೀಪಕ್ಕೆ ಬಂದನು. ಭಾನುಮಂತನೆಂಬ ಅಲ್ಲಿಯ ಮಹಾರಾಜನಿಗೆ ಅನೇಕ ವಸ್ತ್ರಗಳನ್ನು ಕೊಟ್ಟು ಬುದ್ಧಿಶಾಲಿಯಾದ ದೇವಲನು ಅವನಿಂದ ಆನೆ, ಕುದುರೆ ಇತ್ಯಾದಿ ನಾನಾ ಪ್ರಕಾರಗಳಾದ ರತ್ನಾಲಂಕಾರಗಳನ್ನು ಪಡೆದು ಸತ್ಕೃತನಾದನು.

ಪುನಃ ಜಂಬೂ ದ್ವೀಪಕ್ಕೆ ಬಂದು ಕರ್ನಾಟಕ, ಮಾಳವ, ಕೊಂಕಣ, ದ್ರಾವಿಡ ಮತ್ಸ್ಯ, ಕೇಕಯ, ಆಂಧ್ರ, ಕಳಿಂಗ, ಕುಳಿಂದ, ಚೋಳ, ನೇಪಾಳ, ಮದ್ರ, ಸಿಂಧು ಯುಗಂಧರ, ವಿಧರ್ಭ, ಕುರುಪಾಂಚಾಲ, ಬರ್ಬರ, ಚೈತ್ಯ, ಕರೂಶ, ತ್ರಿಗರ್ತ, ತೆಂಕಣ, ಮರಾಟ, ಲಾಟ, ನಿಷಧ, ಘೂರ್ಜರ, ಶಕ, ಸಾಲ್ವ, ಅಂಗ, ವಂಗ, ತುಂಡಿ ಕೇರ, ಮಲ್ಲಿಕ ಇವೇ ಮೊದಲಾದ ಸಮಸ್ತ ದೇಶಗಳ ರಾಜರುಗಳನ್ನು ಕಂಡು ಅವರೆಲ್ಲ

ರಿಗೂ ಮನೋಹರಗಳಾದ ನಾನಾ ವರ್ಣಗಳ ವಸ್ತ್ರಸಮೂಹಗಳನ್ನು ಕೊಟ್ಟನು. ಅವರೆಲ್ಲರಿಂದಲೂ ನೀಡಲ್ಪಟ್ಟ ಆನೆಗಳು, ಕುದುರೆಗಳು ಅಲಂಕಾರಗಳು, ಪಲ್ಲಕ್ಕಿಗಳು ಮುತ್ತು ರತ್ನಗಳು, ಶಸ್ತ್ರಗಳು, ಗೋವುಗಳು, ಶುಭಕರಗಳಾದ ರಥಗಳು, ದಾಸದಾಸೀ ಜನರೆಲ್ಲರನ್ನು ಪಡೆದು ಅವರಿಂದ ಸನ್ಮಾನಿತನಾಗಿ ಅವರೆಲ್ಲರನ್ನು ಸಂತೋಷಗೊಳಿಸಿದನು. ದೇವಲನು ಜಂಬೂ ದ್ವೀಪವಾಸಿಗಳಾದ ಸಮಸ್ತ ಬ್ರಾಹ್ಮಣರಿಗೂ, ಕ್ಷತ್ರಿಯರಿಗೂ, ವೈಶ್ಯರಿಗೂ, ಶೂದ್ರರಿಗೂ ಇನ್ನುಳಿದ ಸಮಸ್ತರಿಗೂ ಅವರವರ ಯೋಗ್ಯತಾನುಸಾರ ಅನೇಕ ವಸ್ತ್ರಗಳನ್ನು ಕೊಟ್ಟು ಅವರೆಲ್ಲರನ್ನು ಸಂತೋಷಗೊಳಿಸಿದನು.

ಎಲೈ ಬ್ರಾಹ್ಮಣೋತ್ತಮರಾದ ಋಷಿವರ್ಯರೇ ಹೀಗೆ ದೇವಲನು ಒಂದು ಕೋಟಿ ರಥಗಳು ಎರಡು ಕೋಟಿ ಗೋರಥಗಳು (ಬಂಡಿಗಳು) ಎರಡು ಕೋಟಿ ಸರ್ವೋತ್ತಮವಾದ ಮದಗಜಗಳು, ನಾಲ್ಕು ಕೋಟಿ ಮಂಗಳಕರಗಳಾದ ಅಶ್ವಗಳು, ಒಂದು ಕೋಟಿ ಪಲ್ಲಕ್ಕಿಗಳು ಇವುಗಳಿಂದಲೂ ಮತ್ತು ಒಂದು ಕೋಟಿ ಮೂವತ್ತಾರು ಲಕ್ಷ ದಾಸದಾಸಿಯರಿಂದಲೂ ಪರಿವೃತನಾಗಿ ಆಮೋದ ಪಟ್ಟಣಕ್ಕೆ ಎಲ್ಲರನ್ನೂ ಕಳುಹಿಸಿ ಕೊಟ್ಟು ತಾನು ಪಾತಾಳಕ್ಕೆ ತೆರಳಿದನು.

ಆ ಪಾತಾಳ ಲೋಕವು ಸರ್ಪರಾಜನಾದ ವಾಸುಕಿಯ ಫಣಾರತ್ನಗಳ ಕಾಂತಿಯಿಂದ ಶೋಭಿತವಾಗಿ ನಾಗಕನ್ಯೆಯರಿಂದ ಕೂಡಿದುದಾಗಿ ಅನೇಕ ಸರ್ಪಗಳಿಂದ ಭರಿತವಾಗಿ ಸಕಲ ಭೋಗಗಳಿಂದ ಯುಕ್ತವಾಗಿತ್ತು. ಇದನ್ನು ಆಳುತ್ತಿದ್ದ ಮಹಾ ಬಲಶಾಲಿಯಾದ ಸರ್ಪರಾಜನಾದ ವಾಸುಕಿಯ ಬಳಿಗೆ ದೇವಲನು ಬಂದು ಅವನಿಗೆ ನಾನಾ ವಿಧವಾದ ವಸ್ತ್ರಗಳನ್ನು ಕೊಟ್ಟನು. ಅಲ್ಲಿದ್ದ ಚಿತ್ರಸೇನನಿಗೆ ದಿವ್ಯಾಂಬರಗಳನ್ನು ಸರ್ಪರಾಜನಾದ ತಕ್ಷಕನಿಗೆ ಕೆಂಪು ವಸ್ತ್ರಗಳನ್ನು, ನೀಲ ವಸ್ತ್ರಗಳನ್ನು ಕೊಟ್ಟು, ಐರಾವತನಿಗೆ ಶುಭ್ರ ವಸ್ತ್ರಗಳನ್ನು, ಸೌರಭೇಯನಿಗೆ ಪೀತಾಂಬರಗಳನ್ನೂ, ವೈಶಾಲಿಯರೆಂಬ ನಾಗರಿಗೆ ಚಿತ್ರವಿಚಿತ್ರವಾದ ವಸ್ತ್ರಗಳನ್ನೂ, ಸೌರಭೇಯರೆಂಬ ನಾಗರಿಗೆ ಅವರ ಇಚ್ಛಿತ ವಸ್ತ್ರಗಳನ್ನೂ ಕೊಟ್ಟು ಮನ್ನಣೆ ಮಾಡಿದನು. ಇದರಿಂದ ವಾಸುಕಿಯು ಬಹು ಸಂತೋಷಗೊಂಡು ದೇವಲನಿಗೆ ಬಹು ಬೆಲೆಯ ರತ್ನಗಳನ್ನೂ, ಮಹಾ ಬಲಶಾಲಿಗಳೂ ಸರ್ಪರಾಜರೂ ಆದ ಚಿತ್ರಸೇನಾದಿ ನಾಗರು ಪ್ರೀತಿಯಿಂದ ಅನೇಕ ರತ್ನಗಳನ್ನೂ, ಅವನಿಗೆ ಸಮರ್ಪಿಸಿ ಅವನನ್ನು ಸಂತೋಷಪಡಿಸಿದರು.

ಮಹಾ ಬಲಶಾಲಿಯಾದ ದೇವಲನು ಆದಿಶೇಷನ ಗೃಹಕ್ಕೆ ಬಂದು ಅವನಿಗೂ ಅವನ ಪತ್ನಿಯರಿಗೂ ಅಲ್ಲಿದ್ದ ಸಮಸ್ತರಿಗೂ ಬಿಳುಪು, ಕಪ್ಪು, ಹಳದಿ ಮೊದಲಾದ ನಾನಾ ವರ್ಣದ ವಸ್ತ್ರಗಳನ್ನು ಕೊಟ್ಟನು. ಧೃತರಾಷ್ಟ್ರನೇ ಮೊದಲಾದ ಆದಿಶೇಷನ ಮಂತ್ರಿಗಳಾದ ಸರ್ಪಶ್ರೇಷ್ಠರಿಗೂ ಅವರ ಪತ್ನಿಯರಿಗೂ ಸಮೀಚೀನವಾದ ವಸ್ತ್ರಗಳನ್ನಿತ್ತು ಪಾತಾಳ ಲೋಕದಲ್ಲಿದ್ದ ಇನ್ನುಳಿದ ಸಮಸ್ತರಿಗೂ ದಿವ್ಯಾಂಬರಗಳನ್ನು ಅನುಗ್ರಹಿಸಿ

ಸಂತೋಷಗೊಳಿಸಿದನು. ದೇವಲನ ಈ ಸ್ತುತ್ಯಕಾರ್ಯದಿಂದ ಸಂತುಷ್ಟಗೊಂಡ ಸರ್ಪಾಧೀಶನಾದ ಆದಿಶೇಷನು, ಸುಂದರಿಯಾದ ತನ್ನ ಪುತ್ರಿ 'ಚಂದ್ರರೇಖೆ' ಎಂಬುವಳನ್ನು ಅವನಿಗೆ ವಿವಾಹ ಮಾಡಿಕೊಟ್ಟು ಅನೇಕ ದಿವ್ಯರತ್ನಗಳನ್ನು ಕಾಣಿಕೆಯಾಗಿ ಸಮರ್ಪಿಸಿದನು. ಈ ಸಂದರ್ಭದಲ್ಲಿ ಅಲ್ಲಿ ನೆರೆದಿದ್ದ ಸಮಸ್ತ ನಾಗರೂ ದೇವಲನನ್ನು ಮುಕ್ತಾಹಾರಮಣಿಗಳಿಂದಲೂ, ವಜ್ರವೈಡೂರ್ಯಗಳಿಂದಲೂ ಇನ್ನೂ ಇತರ ವಿಧವಾದ ದಿವ್ಯ ರತ್ನಗಳಿಂದಲೂ ಸನ್ಮಾನಿಸಿ ತಮ್ಮ ಸಂತೋಷವನ್ನು ಕೃತಜ್ಞತೆಯಿಂದ ವ್ಯಕ್ತಪಡಿಸಿದರು. ದೇವಲನು ಆದಿಶೇಷನ ಪುತ್ರಿ ಚಂದ್ರರೇಖೆಯನ್ನು ಸ್ವೀಕರಿಸಿ ಭೂಲೋಕಕ್ಕೆ ಬಂದನು.

ಈ ರೀತಿ ತ್ರಿಲೋಕವಾಸಿಗಳೆಲ್ಲರಿಗೂ ದೇವಲನು ವಸ್ತ್ರಗಳನ್ನಿತ್ತು ಅವರ ಅಭಿಮಾನವನ್ನು ರಕ್ಷಿಸಿ ತ್ರಿಲೋಕಮಾನಸಂರಕ್ಷಕನೆಂದು ವಿಖ್ಯಾತನಾಗಿ ಆಮೋದ ಪಟ್ಟಣಕ್ಕೆ ಬಂದು ರಾಜಸಭೆಯನ್ನು ತ್ವರಿತವಾಗಿ ಸೇರಿಸಿದನು. ಅಲ್ಲಿ ನೆರೆದಿದ್ದ ಸಮಸ್ತ ಮಂತ್ರಿಗಳೂ, ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ, ಶೂದ್ರರೂ, ಇನ್ನುಳಿದ ಸಮಸ್ತರೂ ತಮ್ಮ ಮಹಾರಾಜನಾದ ದೇವಾಂಗನಿಂದ ವಿವಿಧ ವಸ್ತ್ರಗಳನ್ನು ಪಡೆದು ಅನುಗ್ರಹೀತರಾಗಿ ಅವುಗಳನ್ನು ಬಹು ಸಂತೋಷದಿಂದ ಧರಿಸಿ ತಮ್ಮ ಮಾನಸಂರಕ್ಷಣೆ ಮಾಡಿದ ದೇವಾಂಗನನ್ನು ಕೊಂಡಾಡಿದರು. ಈ ರೀತಿ ಮೂರು ಲೋಕಕ್ಕೂ ಮಹಾತ್ಮನಾದ ದೇವಾಂಗನು ವಸ್ತ್ರಗಳನ್ನು ನೀಡಿ ಸಮಸ್ತರ ಮಾನಸಂರಕ್ಷಣೆ ಮಾಡಿ ಸಂತುಷ್ಟ ಹೃದಯನಾಗಿ ಲೋಕದಲ್ಲೆಲ್ಲ ಯಶಸ್ವಿಯಾಗಿ ವಿರಾಜಿಸಿದನು.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿ ಬ್ರಹ್ಮನಾರದ ಸಂವಾದ ರೂಪ ಉತ್ತರ ಖಂಡದ ದೇವಾಂಗ ಚರಿತ್ರೆಯಲ್ಲಿ ದೇವಾಂಗನು ಮರ್ತ್ಯ ಪಾತಾಳ ಲೋಕವಾಸಿಗಳಿಗೆ ವಸ್ತ್ರಗಳನ್ನು ಕೊಟ್ಟನೆಂಬಲ್ಲಿಗೆ ಒಂಭತ್ತನೆಯ ಅಧ್ಯಾಯ ಮುಗಿದುದು.

ಹತ್ತನೆಯ ಅಧ್ಯಾಯ

ದೇವಾಂಗನಿಂದ ಶಂಕರನಿಗೆ ವಸ್ತ್ರಪ್ರಧಾನ ಹಾಗೂ ನಂದೀಧ್ವಜ ಸಂಪಾದನೆ

ಸೂತನು ಎಲೈ ಋಷಿ ಪುಂಗವರೇ ಅನಂತರ ಮಹದೈಶ್ವರ್ಯ ಸಂಪನ್ನನಾದ ದೇವಾಂಗನು ಬಹು ಅಮೂಲ್ಯವಾದ ಅಂಬರಗಳನ್ನು ತೆಗೆದುಕೊಂಡು, ತನ್ನ ಪಿತನಾದ, ಪಾರ್ವತೀಪತಿಯಾದ ಶಂಭುವನ್ನು ಕಾಣಲು ಕೂಡಲೇ ಆ ಪರಮಾತ್ಮನವಾಸಸ್ಥಾನವಾದ

ಕೈಲಾಸವನ್ನು ಕುರಿತು ಹೊರಟು ಆ ರಜತಾದ್ರಿಯನ್ನು ನೋಡಿದನು. ಆ ರಜತಾಚಲವು ನಾನಾವಿಧಗಳಾದ ರತ್ನಗಳಿಂದ ಭೂಷಿತವಾಗಿ ಮಂದಾರ, ಪಾಟಲ, ಚಂಪಕ, ಅಶೋಕ, ಪುನ್ನಾಗ, ಬಕುಲ, ಕುಂದ, ಚಂದನ, ಮಾಧವಿ, ಮಲ್ಲಿಕಾ, ಕೋವಿದಾರ, ಆರಗು, ನ್ಯಗ್ರೋಧ ಮೊದಲಾದ ವೃಕ್ಷರಾಜಗಳಿಂದ ಆವೃತವಾಗಿ ಸುವರ್ಣಭೂಮಿಯನ್ನುಳ್ಳದ್ದಾಗಿತ್ತು. ಮುಕ್ತ, ಗೋಮೇಧಿಕ, ವೈಡೂರ್ಯ ಪದ್ಮರಾಗ, ಪುಷ್ಯರಾಗ ಮೊದಲಾದ ರತ್ನಗಳ ಕಾಂತಿಯಿಂದ ದೇದೀಪ್ಯಮಾನವಾಗಿ ವಿರಾಜಿಸುತ್ತಿತ್ತು. ಅಲ್ಲಿಯ ವನಗಳು ಕೋಗಿಲೆಗಳ ಕುಕೂರವಗಳಿಂದ ಕರ್ಣಾನಂದವನ್ನುಂಟುಮಾಡುತ್ತಿದ್ದುವು. ಮನ್ಮಥಾರಿಯಾದ ಆ ಪರಮಾತ್ಮನ ಪರ್ವತದಲ್ಲಿರುವ ಭ್ರಮರಗಳು ಭಯಗೊಂಡು ಹಾರಾಟವನ್ನು ಬಿಟ್ಟಿರುವುವೋ ಎಂಬಂತೆ ಸಂಪಿಗೆಯ ಕುಸುಮಗಳಲ್ಲಿ ಸ್ತಬ್ಧಗಳಾಗಿ ಕುಳಿತಿದ್ದುವು. ಅಲ್ಲಿದ್ದ ಸರೋವರಗಳು ಸಹಸ್ರದಳ ಪದ್ಮಗಳಿಂದಲೂ, ಕಾರಂಡ, ನೀರುಕೋಳಿ, ಇವುಗಳಿಂದ ಪರಿವೃತವಾಗಿ, ಹೆಣ್ಣುಭ್ರಮರಗಳಿಂದಲೂ ಕೂಡಿದ್ದುವು. ವಿಕಸಿತ ಕಮಲಗಳೆ ಏಕೆ ಹೆದರುವಿರಿ. ನಿಮ್ಮಿಂದಲೇ ನಮ್ಮ ರಾಜನಾದ ಮನ್ಮಥನು ಪುರಾರಿಯಾದ ಪರಮಾತ್ಮನಿಂದ ದಹಿಸಲ್ಪಟ್ಟನು. ನಿಮ್ಮ ಸೊಕ್ಕನ್ನು ಬಿಡಿರೆಂದು ಮಕರಂದರಹಿತಗಳಾದ ಕಮಲಗಳನ್ನು ತಮ್ಮ ಚಂಚುನುಡಿಗಳಿಂದ ಚುಚ್ಚುತ್ತಿರುವ ಭ್ರಮರಗಳಿಂದಲೂ, ಹೊಯ್ದಾಡುವ ತುಂತುರು ಹನಿಗಳಿಂದ ಕೂಡಿದ ಕಮಲಗಳು ಪರಮಾತ್ಮನ ಮಸ್ತಕದಿಂದ ಗಂಗಾನದಿಯು ಭೂಮಿಗಿಳಿಯುತ್ತಿರುವುದನ್ನು ಸೂಚಿಸುತ್ತಿರುವುವೋ ಎಂಬಂತೆ ಶೋಭಿಸುತ್ತಿದ್ದುವು. ಅನೇಕ ಮನೋಹರವಾದ ಕಾಸಾರಗಳಿಂದ ಕೂಡಿದ ಕೈಲಾಸವನ್ನು ಕಂಡ ದೇವಾಂಗನು ಸಂತೋಷಭರಿತನಾಗಿ ಮುಂದೆ ನಡೆಯುತ್ತ ದೇವದೇವನಾದ ಆ ಪರಮಾತ್ಮನ ಮಂದಿರವನ್ನು ಪ್ರವೇಶಿಸಿದನು.

ಆ ಮಂದಿರವು ಸುವರ್ಣಪ್ರಾಕಾರಗಳಿಂದಲೂ, ರತ್ನಗೋಪುರಗಳಿಂದಲೂ ಗಗನಚುಂಬಿಗಳಾದ ಚಂದ್ರಕಾಂತ ಶಿಲೆಗಳ ಸೌಧಗಳಿಂದಲೂ, ನಾನಾರತ್ನಗಳಿಂದ ಮಾಡಿದ ಬಿಸಿಲುಮಚ್ಚುಗಳಿಂದಲೂ, ಕಾಂಚನದ ಹೆಬ್ಬಾಗಿಲುಗಳಿಂದಲೂ, ಹವಳದ ಕಂಬಗಳಿಂದಲೂ ಕೂಡಿತ್ತು. ವೈಡೂರ್ಯದ ತೊಲೆಗಳಿಂದಲೂ, ಪುಷ್ಯರಾಗರತ್ನಗಳಿಂದ ಮಾಡಿದ ಹಲಗೆಗಳ ಹೊದ್ದಿಕೆಗಳಿಂದಲೂ ಗೋಮೇಧಿಕಗಳಿಂದ ಮಾಡಿದ ಲೋವೆಗಳಿಂದಲೂ ತುಂಬಿತ್ತು. ರತ್ನದ ನೆಲೆಗಟ್ಟುಗಳಿಂದಲೂ, ನಾನಾ ವಿಧ ರತ್ನಗಳನ್ನು ಕೆತ್ತಿದ ಚಿನ್ನದ ಗೋಡೆಗಳಿಂದಲೂ ಪರಿಮಳಯುಕ್ತವಾದ ಧೂಪದ ಹೊಗೆಯಿಂದಲೂ ಆವೃತವಾಗಿತ್ತು. ಲೇಪಿಸಲ್ಪಟ್ಟ ಕಸ್ತೂರಿಯ ಗಂಧದಿಂದಲೂ, ಚಂದ್ರ ಸೂರ್ಯಾಗ್ನಿಗಳ ಪ್ರಕಾಶವನ್ನು ಧಿಕ್ಕರಿಸುವ ನಾನಾ ರತ್ನಗಳ ಕಾಂತಿಯ ಕಿರಣ ಸಮೂಹಗಳಿಂದಲೂ ಮತ್ತು ಇನ್ನುಳಿದ ಸಮಸ್ತ ಸುಗಂಧ ದ್ರವ್ಯಗಳ ಸುವಾಸನೆಯಿಂದಲೂ ಯುಕ್ತವಾಗಿ ಶೋಭಿಸುತ್ತಿತ್ತು.

ಇಂತಹ ದಿವ್ಯನಿಲಯದಲ್ಲಿ ದಿಕ್ಪಾಲಕರಿಂದಲೂ, ರುದ್ರರಿಂದಲೂ, ಆದಿತ್ಯರಿಂದಲೂ, ವಸುಗಳಿಂದಲೂ, ಸುರರಿಂದಲೂ, ಸಿದ್ಧ, ಚಾರಣ, ಗಂಧರ್ವ, ವಿದ್ಯಾಧರ, ಮಹೋರಗ, ಕಿನ್ನರ, ಗರುಡ, ಯಕ್ಷರಿಂದಲೂ, ಸನಕಾದಿ ತಪೋಧನರಿಂದಲೂ, ಸಾಧ್ಯ, ಕಿಂಪುರುಷ, ಅಪ್ಸರಸ್ತ್ರೀಯರಿಂದಲೂ, ಕಶ್ಯಪ, ಅತ್ರಿ, ಭರದ್ವಾಜ, ಜಾಬಾಲಿ, ಜಮದಗ್ನಿ, ಮರೀಚಿ ಮೊದಲಾದ ಮುನಿಗಳಿಂದಲೂ ವಸಿಷ್ಠ, ಶುಕ, ಶೌನಕ ಹಾರೀತ, ವಾಮದೇವ, ಪರಾಶರ, ಕಣ್ವ, ಕುತ್ಸ, ಶತಾನಂದ, ಶೈಬ್ಯ, ಗೌತಮ, ಶಕ್ತಿ, ಶಾಂಡಿಲ್ಯ, ಚ್ಯವನ, ಉದ್ದಾಲಕ, ಭೃಗು, ಅಗಸ್ತ್ಯ, ಪುಲಹ, ಮಾರ್ಕಂಡೇಯ, ಊರ್ವ, ದೂರ್ವಾಸ, ವಿಶ್ವಾಮಿತ್ರ ಮೊದಲಾದ ಮಹರ್ಷಿಗಳ ಸಮೂಹಗಳಿಂದಲೂ, ಷಣ್ಮುಖ, ಗಜಾನನ, ವೀರಭದ್ರಾದಿ ಅನೇಕ ಪ್ರಮಥಗಣಗಳಿಂದಲೂ, ವೇತ್ರಪಾಣಿಯಾದ ನಂದೀಶ್ವರನಿಂದಲೂ ಸಂಸೇವಿತನಾದ ಉಮಾಸೇವಿತನಾದ, ಸಜ್ಜನ ಮನೋನಿಲಯನಾದ, ರತ್ನಸಿಂಹಾಸನಾರೂಢನಾದ ಮಹಾದೇವನನ್ನು ಕಂಡು ದೇವಾಂಗನು ರೋಮಾಂಚಿತನಾಗಿ ಆನಂದ ತುಂಬಿದ ಹೃದಯನಾಗಿ ಅಂಜಲೀಬದ್ಧನಾಗಿ ಸಾಷ್ಟಾಂಗ ನಮಸ್ಕಾರ ಮಾಡಿ ಪರಮಾತ್ಮನನ್ನು ಕುರಿತು ಈರೀತಿ ಸ್ತುತಿಸಿದನು.

ಹೇ ಸಜ್ಜನಮನೋವಾಸಿಯೇ, ಭಕ್ತ ಸುಖಂಕರನೇ, ಜ್ಞಾನಸ್ವರೂಪಿಯೇ, ಚಂದ್ರಮೌಳಿಯೇ, ನಾಶರಹಿತನೇ ಫಾಲಾಕ್ಷನೇ, ಮನ್ಮಥಧ್ವಂಸಿಯೇ, ಭವಪಾಶವಿಮೋಚಕನೇ, ಭಕ್ತಪರಿಪಾಲಕನೇ, ಭೋಗಮೋಕ್ಷ ಪ್ರದಾಯಕನೇ, ಗಿರೀಶ್ವರನೇ, ಶೂಲಪಾಣಿಯೇ, ಶಂಭುವೇ ನಿನಗೆ ನಮಸ್ಕಾರ. ಸುರಾಸುರಶ್ರೇಷ್ಠರ ಕಿರೀಟರತ್ನಗಳ ಕಾಂತಿಯಿಂದೊಪ್ಪುವ ಪಾದಕಮಲವುಳ್ಳವನೇ, ಪಾರ್ವತೀಪ್ರಿಯನೇ, ಪುಣ್ಯಮೂರ್ತಿಯೇ, ಸೂರ್ಯಚಂದ್ರಾಗ್ನಿನೇತ್ರನೇ, ದಕ್ಷಯಜ್ಞನಾಶಕನೇ, ಶೇಷ ಕಂಕಣಧಾರಿಯೇ, ಗಜಚರ್ಮಾಂಬರಧಾರಿಯೇ, ಪರಮಾತ್ಮನೇ ನಿನಗೆ ನಮಸ್ಕಾರ. ಸೃಷ್ಟಿ, ಸ್ಥಿತಿ, ಸಂಹಾರ ಕಾರಣನೇ ಇಂದ್ರ, ವಿಷ್ಣು, ಬ್ರಹ್ಮ ಪೂಜಿತನೇ, ನಿರ್ಮಲಾತ್ಮನೇ, ತ್ರಿಪುರಸಂಹಾರಿಯೇ, ಮೇರುಪರ್ವತವನ್ನೇ ಧನುಸ್ಸಾಗುಳ್ಳವನೇ, ಜಯಶೀಲನೇ, ಗಜಾಸುರಸಂಹಾರಿಯೇ, ಜಟಾಧಾರಿಯೇ, ಪರಮಾತ್ಮನೇ ನಿನಗೆ ನಮಸ್ಕಾರ. ನಿರ್ಮಲವಾದ ಚಂದ್ರಕಾಂತಶಿಲೆಯ ಮೇಲುಪ್ಪರಿಗೆಯಲ್ಲಿ ರತ್ನಪೀಠಾರೂಢನಾಗಿ ಪರ್ವತರಾಜಪುತ್ರಿಯಾದ ಪಾರ್ವತಿಯ ವಿಲಾಸರಮ್ಯ ಸವಿಮಾತುಗಳಿಗೆ ಮೋಹಿತನಾಗಿ ಸುಗಂಧ ವಿಶಿಷ್ಟಗಳಾದ ದಿವ್ಯಚಂದನಗಂಧದಿಂದಲೂ, ಕುಸುಮಮಾಲೆಗಳಿಂದಲೂ ಒಪ್ಪುವ ಶರೀರವುಳ್ಳ ಪರಮಾತ್ಮನೇ ನಿನಗೆ ನಮಸ್ಕಾರ. ಧಗಧಗಾಯಮಾನವಾಗಿ ಹೊಳೆಯುವ ಕಿರಣಗಳ ಸಮೂಹಯುಕ್ತವಾದ ರತ್ನಗಳ ಗೋಡೆಗಳಿಂದ ಕೂಡಿರುವ ನಿಜಗೃಹದಲ್ಲಿ ಅತ್ಯುನ್ನತವಾದ ವಜ್ರಸಿಂಹಾಸನಾರೂಢನಾದ, ಪಾರ್ವತೀ ಸಮೇತನಾದ, ಭೂತಕೋಟಿ ಸೇವಿತನಾದ, ಯೋಗಿಗಳು, ಮುನೀಂದ್ರರುಗಳಿಂದ ಸ್ತುತ್ಯನಾದ, ವಿಶ್ವಮೂರ್ತಿಯಾದ, ಪರಶಿವನೇ ನಿನಗೆ ನಮಸ್ಕಾರ. ಸಾಯಂನಾಟ್ಯದಿಂದ ಅಲೆದಾಡುತ್ತಿರುವ ಜಟಾಜೂಟವಾಸಿನಿಯಾದ ಗಂಗೆಯಿಂದ ಬ್ರಹ್ಮನವಾಹನ

ವಾದ ಹಂಸಕ್ಕೆ ವೃಷ್ಟಿಯ ಭ್ರಾಂತಿಯನ್ನುಂಟುಮಾಡುವ, ಕಿರೀಟದಲ್ಲಿ ಕಂಗೊಳಿಸುವ ಚಂದ್ರನಿಂದೊಪ್ಪುವ, ಚಂದ್ರಕಾಂತಶಿಲೆಗಳಿಂದ ನಿರ್ಮಿತವಾದ ಉಪ್ಪರಿಗೆಗಳಲ್ಲಿ ವಾಸಮಾಡುವ ದೇವಸ್ತ್ರೀಯರ ಶ್ರಮವನ್ನು ಹೋಗಲಾಡಿಸುವ ಸಾಂಬಮೂರ್ತಿಗೆ ನಮಸ್ಕಾರ. ಜಗನ್ನಾಥನೇ ಭಕ್ತಾಭೀಷ್ಟಪ್ರದಾಯಕನೇ, ಮಹಾದೇವನೇ ನನ್ನನ್ನು ರಕ್ಷಿಸು ರಕ್ಷಿಸು ಎಂದು ಪ್ರಾರ್ಥಿಸಿ, ಎಲೈ ದೇವೇಶನೇ ನಿನ್ನನುಗ್ರಹದಿಂದ ವಸ್ತ್ರಗಳನ್ನು ನೇಯ್ದೆನು. ಕರುಣಾಕರನೇ ಪರಮೇಶನೇ ಉಳಿದ ಸೂತ್ರಗಳನ್ನು ಏನು ಮಾಡಲೆಂದು ಕೇಳಿದನು.

ಅದಕ್ಕೆ ಶಿವನು, ವೇದಮಾತೆಯಾದ ಗಾಯತ್ರಿಯನ್ನು, ಪ್ರಣವ, ತ್ರಿವ್ಯಾಹೃತಿ ಸಹಿತ ಗಾಯತ್ರಿಮಂತ್ರ ಪೂರ್ವಕವಾಗಿ ಧ್ಯಾನಿಸಿ, ತ್ರಿಗುಣಾತ್ಮಕವಾದ ಉಪವೀತ ವನ್ನು ನಿರ್ಮಿಸಿ, ಅದರಲ್ಲಿ ಆ ವೇದಮಾತೆಯನ್ನು ಆವಾಹಿಸಿ ಅದನ್ನು ದ್ವಿಜರಿಗೂ, ಸ್ತ್ರೀಯರಿಗೆ ಪೂಜ್ಯವಾದ ಮಾಂಗಲ್ಯಧಾರಣೆಗೂ ಶಾಸ್ತ್ರವಿಧಿಯಂತೆ ಕೊಡತಕ್ಕದ್ದು. ಒಂದು ಸೂತ್ರವನ್ನು ಉಪನಯನದಲ್ಲೂ, ಎರಡನ್ನು ವಿವಾಹದಲ್ಲೂ, ಮೂರನೆಯದನ್ನು ಉತ್ತರೀಯವಾಗಿಯೂ ವಿಧಿ ಪೂರ್ವಕವಾಗಿ ಧರಿಸತಕ್ಕದ್ದು. ಈ ಯಜ್ಞೋಪವೀತ ವನ್ನು ನಾಭಿ ಮತ್ತು ಉದರ ಇವುಗಳ ಮಧ್ಯದಲ್ಲಿ ಬಲಗಡೆಗೆ ಉತ್ತರೀಯ ರೂಪವಾಗಿ ಧರಿಸುವುದು. ಈ ಕ್ರಮಕ್ಕೆ ವಿರುದ್ಧವಾಗಿ ಧರಿಸುವುದು ನಿಷಿದ್ಧ ಹಾಗೂ ನಿಷ್ಫಲವೆಂದು ದೇವಾಂಗನಿಗೆ ಹೇಳಿದನು. ನಂತರ ದೇವಾಂಗನು ವೇದಮಂತ್ರೋಕ್ತವಾದ ಯಜ್ಞೋಪವೀತವನ್ನು ಮೊದಲು ಬ್ರಹ್ಮನಿಗೂ, ವಿಷ್ಣುವಿಗೂ, ಶಿವನಿಗೂ ಅರ್ಪಿಸಿದನು. ಆ ಮೇಲೆ ಇಂದ್ರಾದಿ ದಿಕ್ಪಾಲಕರಿಗೂ ಬ್ರಹ್ಮರ್ಷಿಗಳಿಗೂ, ದೇವರ್ಷಿಗಳಿಗೂ, ಗಂಧರ್ವ ರಿಗೂ, ನವಗ್ರಹಗಳಿಗೂ ಇನ್ನುಳಿದ ಸಮಸ್ತರಿಗೂ ವೇದಮಾತೆಯಾದ ಗಾಯತ್ರೀರೂಪ ವಾದ ಆ ಯಜ್ಞಸೂತ್ರವನ್ನು ಮಂತ್ರಪೂರ್ವಕವಾಗಿ ಅನುಗ್ರಹಿಸಿದನು. ನಂತರ ವಿವಿಧ ವರ್ಣರಂಜಿತ ವಸ್ತ್ರಗಳನ್ನು ದೇವದೇವನಾದ ಶಂಕರನಿಗೂ ವಿಶ್ವಮಾತೆಯಾದ ಶಂಕರಿಗೂ ಭಕ್ತಿಯಿಂದ ಸಮರ್ಪಿಸಿದನು.

ಈ ರೀತಿ ಸಮರ್ಪಿಸಲ್ಪಟ್ಟ ದಿವ್ಯಾಂಬರಗಳನ್ನು ಪಾರ್ವತೀ ಪರಮೇಶ್ವರರು ಧರಿಸಿ ಪುಳುಕಿತರಾಗಿ ಪರಮಹರ್ಷವನ್ನು ಹೊಂದಿ ದೇವಲನನ್ನು ಮರ್ಯಾದಿಸಿ, ಎಲೈ ದೇವಾಂಗನೇ ವೇದಮಂತ್ರ ಪೂರ್ವಕವಾಗಿ, ವಿಧಿವತ್ತಾಗಿ, ಗಾಯತ್ರೀ ಸ್ವರೂಪವಾದ ಯಜ್ಞಸೂತ್ರವನ್ನೂ ಮತ್ತು ಮಾನಸಂರಕ್ಷಕವಾದ ವಸ್ತ್ರಗಳನ್ನೂ ನಿರ್ಮಿಸಿ ನೀನು ಬ್ರಾಹ್ಮಣಶ್ರೇಷ್ಠರಿಗಿಂತಲೂ ಶ್ರೇಷ್ಠನಾದೆ ಎಂದು ದೇವಲನನ್ನು ಆಶೀರ್ವದಿಸಿದರು. ತದನಂತರ ದೇವಲನು ಗಣಪತಿಯ ಬಳಿಗೆ ಹೋಗಿ ಅವನಿಗೆ ದಿವ್ಯದುಕೂಲಗಳನ್ನು ಸಮರ್ಪಿಸಿ ಭೃಂಗಿ ಮೊದಲಾದ ಪ್ರಮಥರಿಗೆ ದಿವ್ಯಾಂಬರಗಳನ್ನು ಅವರಿಗೆ ತಕ್ಕಂತೆ ಕೊಟ್ಟನು.

ಅನಂತರ ದೇವಲನು ಅಮೂಲ್ಯವಾದ ದಿವ್ಯಾಂಬರಗಳನ್ನು ತೆಗೆದುಕೊಂಡು ಪರಮಾತ್ಮನಪ್ಪಣೆಯಿಂದ ಅವನ ಅಂತಃಪುರವನ್ನು ಹೊಕ್ಕು ಮಹಾದೇವಿಯಾದ

ಭದ್ರಕಾಳಿಗೆ ಕೆಂಪುವಸ್ತ್ರವನ್ನೂ, ಕುಮಾರಸ್ವಾಮಿಯ ಪತ್ನಿಯಾದ ದೇವಸೇನೆಗೆ ಪೀತಾಂಬರವನ್ನೂ ಅರ್ಪಿಸಿದನು. ಆ ಮೇಲೆ ತನ್ನ ಇಷ್ಟದೈವವಾದ ಚೌಡೇಶ್ವರಿ ದೇವಿಗೆ ದಿವ್ಯಾಂಬರಗಳನ್ನು ಕೊಡಲು ಉತ್ಸುಕನಾಗಿ ಪೂಜ್ಯಳಾದ ಆ ದೇವಿಯನ್ನು ಹೃದಯದಲ್ಲಿ ಧ್ಯಾನಿಸಿದನು. ದೇವಾಂಗನಿಂದ ಧ್ಯಾನಿಸಲ್ಪಟ್ಟ ಚೌಡೇಶ್ವರೀದೇವಿಯು ಅವನಿಗೆ ಪ್ರತ್ಯಕ್ಷಳಾದಳು. ದೇವಾಂಗನು ಬಹಳಸಂತೋಷದಿಂದ ಬದ್ಧಾಂಜಲಿಯಾಗಿ ವಿನಯದಿಂದ ಆ ದೇವಿಯನ್ನು ಕುರಿತು ಈ ರೀತಿ ಸ್ತುತಿಸಿದನು.

ಅಮ್ಮಾ, ಚೌಡೇಶ್ವರೀತಾಯಿ, ಶಿವೆ, ಶಂಕರಿ ನಿನ್ನನುಗ್ರಹದಿಂದ ನಾನು ಬಹುವಿಧಗಳಾದ ಅನೇಕ ದಿವ್ಯಾಂಬರಗಳನ್ನು ರಚಿಸಿ ಮೂರುಲೋಕಗಳ ಸಮಸ್ತರಿಗೂ ಕೊಟ್ಟೆನು. ಭಕ್ತವತ್ಸಲೇ ಈ ನಾನಾವಿಧವಾದ ದಿವ್ಯಾಂಬರಗಳನ್ನು ನೀನು ಕೃಪೆ ಮಾಡಿ ಸ್ವೀಕರಿಸು. ಈ ನಿನ್ನ ದಾಸನಾದ ನನ್ನಿಂದ ನಿರ್ಮಿತಗಳಾದ ಈ ವಸ್ತ್ರಗಳನ್ನು ನೀನು ಧರಿಸಿ ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕೆಂದು ಬಹುಪರಿಯಾಗಿ ಪ್ರಾರ್ಥಿಸಿ ದಿವ್ಯಾಂಬರಗಳನ್ನು ಅಂಬೆಗೆ ಸಮರ್ಪಿಸಿದನು. ಇದರಿಂದ ಪ್ರಸನ್ನಳಾದ ಚೌಡೇಶ್ವರಿ ದೇವಿಯು ಪರಮ ಪ್ರೀತಿಯಿಂದ ಅವುಗಳನ್ನು ಸ್ವೀಕರಿಸಿ ದೇವಲನನ್ನು ಅನುಗ್ರಹಿಸಿ ಅಂತರ್ಧಾನಳಾದಳು.

ಈ ರೀತಿ ಸೂತನು ನುಡಿಯಲು ಋಷಿಗಳು ಎಲೈ ಅನಘನಾದ ಸೂತನೇ ನಾವು ಪಾರ್ವತಿಯೇ ಚೌಡೇಶ್ವರಿ ಎಂಬುವಾಗಿ ತಿಳಿದಿದ್ದೆವು. ಆದರೆ ದೇವಾಂಗನು ಪರಮಾತ್ಮನ ಸನ್ನಿಧಿಯಲ್ಲಿಯೇ ಜಗದಂಬೆಗೆ ದಿವ್ಯಾಂಬರಗಳನ್ನು ಕೊಟ್ಟನಷ್ಟೆ! ಹೀಗಿದ್ದೂ ಏನು ಕಾರಣದಿಂದ ಮಹಾಮತಿಯಾದ ದೇವಲನು ಮತ್ತೆ ಅಂಬರಗಳನ್ನು ಆಕೆಗೆ ಕೊಟ್ಟನು? ಭೇದಬುದ್ಧಿಯಿಂದ ಕೊಟ್ಟನೋ? ಪ್ರೇಮಾತಿಶಯದಿಂದ ಕೊಟ್ಟನೋ? ಎಲೈ ತತ್ವಾರ್ಥಕೋವಿದನಾದ ಸೂತನೇ ನಮ್ಮ ಈ ಸಂಶಯವನ್ನು ಪರಿಹರಿಸೆಂದು ನುಡಿದರು. ಅದಕ್ಕೆ ಸೂತನು ಎಲೈ ಮಹಾಭಾಗರಾದ ಋಷಿವರ್ಯರೇ ನೀವು ನುಡಿದುದು ಸರಿಯೆ! ದುರ್ಗಾದೇವಿಗೂ ಚೌಡೇಶ್ವರೀದೇವಿಗೂ ನಿಸ್ಸಂಶಯವಾಗಿ ಭೇದವಿಲ್ಲ. ಆದರೆ ದೇವಾಂಗನು ಚೌಡೇಶ್ವರಿಗೆ ಪ್ರತ್ಯೇಕವಾಗಿ ಅಂಬರಗಳನ್ನು ಕೊಟ್ಟದ್ದು ಆಕೆಯು ಮೊದಲು ತನಗೆ ಚೌಡೇಶ್ವರಿಯಾಗಿ ವರಪ್ರದಾನ ಮಾಡಿದ ವಾತ್ಸಲ್ಯಕ್ಕಾಗಿಯೇ ಹೊರತು ಬೇರೆಯಲ್ಲ. ದೇವಾಂಗನು ಅವರೀರ್ವರಲ್ಲಿ ಎಂದೂ ಭೇದವನ್ನು ಎಣಿಸಿದವನೇ ಅಲ್ಲ. ಆ ಚೌಡೇಶ್ವರಿಯು ಶಂಕರನ ಪತ್ನಿಯಾದುದರಿಂದ ಶಂಕರಿ ಎನಿಸಿರುವಳು. ಶಬ್ದಗಳ ಪ್ರತ್ಯಯಾರ್ಥವನ್ನು ವಿಚಾರಿಸಿ ನೋಡಿದರೆ ಅವರಿಬ್ಬರಿಗೂ ಭೇದವೇ ಇಲ್ಲ. ಪಾರ್ವತಿಯೇ ಚೌಡೇಶ್ವರಿಯು, ಚೌಡೇಶ್ವರಿಯೇ ಪಾರ್ವತಿಯು ನೀವು ಅನುಮಾನಿಸಬೇಡಿ ಎಂದನು. ಅನಂತರ ದೇವಾಂಗನು ಆ ಶೈಲವಲ್ಲಿನ ಸಮಸ್ತ ಕನ್ಯೆಯರಿಗೂ ದಿವ್ಯಾಂಬರಗಳನ್ನಿತ್ತು ಸಂತೋಷಪಡಿಸಿದನು.

ಚಂತ ಪ್ರಚಂಡರೆಂಬ ಶಿವನ ದ್ವಾರಪಾಲಕರಿಗೆ ಕ್ರಮವಾಗಿ ಕೆಂಪು ಶುಭ್ರಾಂಬರಗಳನ್ನು ಕೊಟ್ಟು ಪರಮಾತ್ಮನ ಆಲಯಕ್ಕೆ ಬಂದನು. ಅಲ್ಲಿ ಪರಮಾತ್ಮನ ಅಪ್ಪಣೆಯ ಮೇರೆಗೆ ಕೃತಸ್ಥಲಾ, ಊರ್ವಶಿ, ರಂಭಾ, ಮೇನಕಾ, ಪುಂಜಿಕಸ್ಥಲಾ, ತಿಲೋತ್ತಮೆ ಮೊದಲಾದ ಅಪ್ಸರೆಯರು ಶಿವನ ಮುಂದೆ ನಾಟ್ಯವಾಡಿದರು. ಅವರು ಅಂಗವಿಕ್ಷೇಪಗಳಿಂದಲೂ, ಗೀತೆಗಳಿಂದಲೂ, ಭಾವವನ್ನು ಬೋಧಿಸುವ ಅನುಲೋಮ, ಪ್ರತಿಲೋಮ, ಸ್ವರಗಾನದಿಂದ ನರ್ತನ ಮಾಡಿ ಪರಮಾತ್ಮನಿಗೆ ಸಂತೋಷವನ್ನುಂಟು ಮಾಡಿದರು. ಆ ಅಪ್ಸರಸ್ತ್ರೀಯರ ನಾಟ್ಯ ಕೌಶಲ್ಯಕ್ಕೆ ಸಂತುಷ್ಟನಾದ ಶಿವನು ಅವರಿಗೆ ಅಂಬರಗಳನ್ನು ಅನುಗ್ರಹಿಸಲಿಚ್ಛೆಯಿಂದ ದೇವಾಂಗನನ್ನು ನೋಡಲು, ನೋಟಮಾತ್ರ ದಿಂದಲೇ ಪರಮಾತ್ಮನ ಅಭಿಪ್ರಾಯವನ್ನು ಗ್ರಹಿಸಿದ ದೇವಾಂಗನು ಆಕ್ಷಣವೇ ನಾನಾ ವರ್ಣದ ವಿಚಿತ್ರ ದಿವ್ಯಾಂಬರಗಳನ್ನು ಪರಮಾತ್ಮನ ಅನುಗ್ರಹದಿಂದ ತನ್ನ ಇಚ್ಛಾಮಾತ್ರ ದಿಂದಲೇ ಸೃಷ್ಟಿಸಿದನು. ಈ ಅದ್ಭುತವನ್ನು ಇಂದ್ರಾದಿ ದೇವತೆಗಳು ನೋಡಿ ವಿಸ್ಮಿತರಾದರು. ನಂತರ ಮಹಾದೇವನು ಆ ಅಂಬರಗಳನ್ನು ದೇವಲನಿಂದ ಸ್ವೀಕರಿಸಿ ಕ್ರಮವಾಗಿ ಇಂದ್ರಾದಿದೇವತೆಗಳಿಗೂ, ಋಷಿಗಳಿಗೂ, ಗಂಧರ್ವರಿಗೂ, ಅಪ್ಸರಸ್ತ್ರೀಯರಿಗೂ ನೀಡಿ ಅವರೆಲ್ಲರನ್ನೂ ಹರ್ಷಗೊಳಿಸಿ ದೇವಾಂಗನಿಗೆ ಪರಶುನಾಮಕ ಆಯುಧವನ್ನೂ ಸರ್ವ ಶತ್ರುನಾಶಕವಾದ ದಿವ್ಯವಾದ ನಂದೀಧ್ವಜವನ್ನೂ ಅನುಗ್ರಹಿಸಿದನು. ಅವುಗಳನ್ನು ದೇವಾಂಗನು ಭಕ್ತಿಪೂರ್ವಕವಾಗಿ ಸ್ವೀಕರಿಸಿದನು. ಪರಮಾತ್ಮನು ದೇವಾಂಗನನ್ನು ಕುರಿತು, ಎಲೈ ದೇವಾಂಗನೇ ಸರ್ವಶತ್ರುನಾಶಕವಾದ ಈ ನಂದೀಧ್ವಜದಿಂದ ಮೂರು ಲೋಕಗಳಲ್ಲಿಯೂ ನೀನು ಜಯಶಾಲಿಯಾಗಿ ಸದಾಸುಖವನ್ನು ಹೊಂದು ಎಂದು ಆಶೀರ್ವದಿಸಿದನು. ದೇವಾಂಗನು ಪ್ರಸಾದವೆಂದು ಪರಮಾತ್ಮನಪ್ಪಣೆಯನ್ನಂಗೀಕರಿಸಿ ಆಜ್ಞಾಧಾರಕನಾಗಿ ನಡೆಯುವೆನೆಂದು ಹೇಳಿದನು.

ಆಗ ಭಕ್ತವತ್ಸಲನಾದ ಪರಮಾತ್ಮನು ಸೂರ್ಯನನ್ನು ನೋಡಿ ಮಧುರವಾಣಿಯಿಂದ ಜಗತ್ಪ್ರಕಾಶಕನಾದ ಸೂರ್ಯನೇ, ನಿನ್ನ ತಂಗಿಯಾದ ಕೀರ್ತಿವಂತಳಾದ ದೇವದತ್ತೆಯನ್ನು ರಾಜರ್ಷಿಯೂ ಶೂರನೂ ಆದ ಈ ದೇವಾಂಗನಿಗೆ ವಿವಾಹ ಮಾಡಿಕೊಡೆಂದು ನುಡಿಯಲು ಸೂರ್ಯನು ಸಂತೋಷದಿಂದ ತಲೆದೂಗುತ್ತಾ ಭಗವಂತನೇ, ಅನಘನೇ, ದೇವದೇವನೇ ತಮ್ಮ ಅಪ್ಪಣೆಯಂತೆಯೇ ಆಗಲೆಂದು ನುಡಿದು, ನನ್ನ ಮನಸ್ಸಿನಲ್ಲಿಯೂ ನನ್ನ ತಂಗಿಯಾದ ದೇವದತ್ತೆಯನ್ನು ದೇವಾಂಗನಿಗೆ ವಿವಾಹಮಾಡಿಕೊಡಬೇಕೆಂದು ಇದ್ದುದರಿಂದ ನನ್ನ ಮನೋರಥವು ಸಫಲವಾಯಿತೆಂದು ನುಡಿದನು. ಅಲ್ಲಿದ್ದವರೆಲ್ಲರೂ ಸೂರ್ಯನನ್ನು ಬಹಳ ಒಳ್ಳೆಯದೇ ಆಯಿತೆಂದು ಕೊಂಡಾಡಿದರು. ಸೂರ್ಯನು ತನ್ನ ಅಭೀಷ್ಟದಂತೆ ನಡೆಯಲು ಒಪ್ಪಿದುದರಿಂದ ಪರಮಾತ್ಮನು ಸಂತೋಷಗೊಂಡನು. ಮಹಾದೇವಿಯು ಸಹ ಹಾಗೆಯೇ ಮಾಡೆಂದು ಸೂರ್ಯನಿಗೆ ಆಜ್ಞಾಪಿಸಿದಳು. ಇಂದ್ರನೇ ಮೊದಲಾದ ಸಮಸ್ತ ದೇವತೆಗಳೂ ತಮ್ಮ ಸಮ್ಮತಿಯನ್ನಿತ್ತರು. ಪರಮಾತ್ಮನು ಅಲ್ಲಿ ನೆರೆದಿದ್ದ ಸಮಸ್ತರಿಗೂ ಅಂಬರಗಳನ್ನು ಅನುಗ್ರಹಿಸಿ, ಪಾರ್ವತಿಯೊಡನೆ ತನ್ನ ಅಂತಃಪುರವನ್ನು

ಪ್ರವೇಶಿಸಿದನು. ಪರಮಾತ್ಮನ ಸೇವೆಗಾಗಿ ಬಂದ ದೇವಾಂಗನೂ ಮತ್ತು ಸಮಸ್ತರೂ ತಮ್ಮ ತಮ್ಮ ಪುರಗಳಿಗೆ ತೆರಳಿದರು.

ಇಲ್ಲಿಗೆ ಬ್ರಹ್ಮಾಂಡಪುರಾಣದಲ್ಲಿ ಬ್ರಹ್ಮನಾರದ ಸಂವಾದರೂಪ ಉತ್ತರಖಂಡದ ದೇವಾಂಗ ಚರಿತ್ರೆಯಲ್ಲಿ ದೇವಾಂಗನು ಶಂಕರನಿಗೆ ವಸ್ತ್ರಗಳನ್ನು ಕೊಟ್ಟು ನಂದೀಧ್ವಜ ಸಂಪಾದನೆ ಮಾಡಿದನೆಂಬಲ್ಲಿಗೆ ಹತ್ತನೆಯ ಅಧ್ಯಾಯ ಮುಗಿದುದು.

ಹನ್ನೊಂದನೆಯ ಅಧ್ಯಾಯ

ದೇವಾಂಗನಿಗೆ ರಂಭಾ ಶಾಪ

ಅನಂತರ ದೇವಲನು ಕೈಲಾಸ ಪರ್ವತದಿಂದಿಳಿದು ಆಮೋದ ಪಟ್ಟಣಕ್ಕೆ ಬರುವ ಮಾರ್ಗಮಧ್ಯದಲ್ಲಿ ಒಂದು ಸರೋವರವನ್ನು ಕಂಡನು. ಆ ಸರೋವರವು ಕನ್ನೈದಿಲೆಗಳಿಂದ ಮತ್ತು ಶತಪತ್ರಕಮಲಗಳಿಂದ ತುಂಬಿದ್ದು, ಕ್ರೀಡಿಸುತ್ತಿರುವ ರಾಜಹಂಸಗಳಿಂದ ಕೂಡಿ, ನಿರ್ಮಲ ಜಲದಿಂದ ತುಂಬಿ ಶೋಭಿಸುತ್ತಿತ್ತು. ಆ ಸರೋವರದ ಸುತ್ತಲೂ, ಫಲಪುಷ್ಪಭರಿತಗಳಾದ ವೃಕ್ಷಗಳು ಸಿಬಿಡವಾಗಿದ್ದು ನೋಡಲು ಮನೋಹರವಾಗಿದ್ದುವು. ರಾಜೋತ್ತಮನಾದ ದೇವಾಂಗನು, ಅಲ್ಲಿ ತನ್ನ ನಿತ್ಯಕರ್ಮಗಳನ್ನು ತೀರಿಸಿಕೊಂಡು ಸ್ನಾನಮಾಡಿ ಶುಚಿರ್ಭೂತನಾಗಿ ಶಿವಪೂಜಾರ್ಥವಾಗಿ, ಅಲ್ಲಿದ್ದ ಕಮಲಗಳನ್ನು ಸಂಗ್ರಹಿಸಿ, ಅವುಗಳಿಂದ ಮಹಾದೇವನನ್ನು ಭಕ್ತಿಯಿಂದ ಅರ್ಚಿಸಿ, ಪೂಜಿಸಿ ಆಮೋದ ಪಟ್ಟಣಕ್ಕೆ ಹೊರಡಲನುವಾದನು.

ಆ ಸಮಯದಲ್ಲಿ ಅಲ್ಲಿಯೇ ಇದ್ದ ಮೋಹನಾಂಗಿಯಾದ ರಂಭೆಯೆಂಬ ಅಪ್ಸರೆಯು ಸರ್ವಾಂಗಸುಂದರನಾದ, ದೇವಾಂಗನನ್ನು ಮೊದಲೇ ನೋಡಿ ಮೋಹಿತಳಾಗಿದ್ದು ಸಮಯವನ್ನು ನಿರೀಕ್ಷಿಸುತ್ತಾ ಇದ್ದಳು. ಅವಳು ದೇವಾಂಗನು ಒಬ್ಬನೇ ಇದ್ದುದನ್ನು ನೋಡಿ ಕಾಮಿತಳಾಗಿ ಅವನ ಸಮೀಪಕ್ಕೆ ಬಂದಳು. ಅವಳ ತುಟಿಗಳು ತೊಂಡೆಹಣ್ಣಿನಂತೆಯೂ, ನೇತ್ರಗಳು ಖಂಜರೀಟ ಪಕ್ಷಿಗಳ ನೇತ್ರದಂತೆ ಚಂಚಲದಿಂದ ಕೂಡಿದವುಗಳಾಗಿಯೂ ಇದ್ದುವು. ಮುಖವು ಪೂರ್ಣಚಂದ್ರನಂತೆಯೂ ಕೇಶಗಳು ಕಾರ್ಮೋಡದಂತೆಯೂ ಕರ್ಣಗಳು ಶಷ್ಕುಲಿಯಂತೆಯೂ ರೆಪ್ಪೆಗಳು ಸಿಂಜಿನಿಯಂತೆಯೂ, (ಧನುಸ್ಸಿನ ಹೆದೆಯಂತೆ), ಹುಬ್ಬುಗಳು ಬಿಲ್ಲುಗಳಂತೆಯೂ ಬಾಗಿದ್ದುವು. ಕಟಾಕ್ಷವು (ನೋಟವು) ಬಾಣಗಳಂತೆ, ಹೊಳೆಯುವಗಲ್ಲಗಳು ಕನ್ನಡಿಯಂತೆ ಇದ್ದುವು. ನಾಸಿಕವು ತಿಲಪುಷ್ಪದಂತೆಯೂ, ಹಣೆಯು ಅಷ್ಟಮಿಯ ಚಂದ್ರನಂತೆಯೂ, ಮನೋಹರವಾದ

ಕುತ್ತಿಗೆಯು ಶಂಖದಂತೆಯೂ, ಕುಚಗಳು ಸುವರ್ಣಕುಂಭಗಳಂತೆಯೂ, ಹಸ್ತಗಳು ಮೃದುವಾದ ಚಿಗುರುಗಳಂತೆಯೂ, ಬಾಹುಗಳು ಹವಳದ ಬಳ್ಳಿಯಂತೆಯೂ ಇದ್ದುವು. ತೆಳುವಾದ ಉದರದಿಂದಲೂ, ಬಳುಕುವ ಕೃಶವಾದ ನಡುವಿನಿಂದಲೂ, ಸ್ವಲ್ಪ ಬಾಗಿದ ಬೆನ್ನಿನಿಂದಲೂ, ಹುತ್ತದಂತೊಪ್ಪುವ ಆಳವಾದ ನಾಭಿಯಿಂದಲೂ, ಹುತ್ತ (ನಾಭಿ) ವನ್ನು ಪ್ರವೇಶಿಸಿದ ಸರ್ಪದಂತೊಪ್ಪುವ ರೋಮರಾಜಿಗಳಿಂದಲೂ, ಬಾಳೆಯ ಕಂಬ ದಂತೊಪ್ಪುವ ತೊಡೆಗಳಿಂದಲೂ, ಮಳಲದಿಣ್ಣೆಯಂತೊಪ್ಪುವ ಪೃಷ್ಟಗಳಿಂದಲೂ, ಗೂಢಗುಲ್ಫದಿಂದಲೂ ಶೋಭಿಸುತ್ತಿದ್ದಳು. ಕಹಳೆಯಂತೊಪ್ಪುವ ಕಣಕಾಲುಗಳಿಂದಲೂ ಕಮಲದಂತೊಪ್ಪುವ ಪಾದಗಳಿಂದಲೂ ಮತ್ತು ಮಿಂಚಿನ ಕಾಂತಿಯಂತೊಪ್ಪುವ ಶರೀರದಿಂದಲೂ ಸರ್ವಾಂಗ ಸುಂದರಿಯಾಗಿದ್ದು; ರತ್ನದ ಓಲೆಗಳ ಕಾಂತಿಯಿಂದ ಬೆಳಗುತ್ತಿದ್ದ ಕಪೋಲವುಳ್ಳವಳಾಗಿ, ಮುತ್ತಿನ ಮೂಗುತಿಯಿಂದೊಪ್ಪುವ, ಸ್ವಲ್ಪ ಮಟ್ಟಿಗೆ ಅಲುಗಾಡುತ್ತಿರುವ ನಾಸಿಕವುಳ್ಳವಳಾಗಿ, ಹೊಯ್ದಾಡುವ ಕಂಠಾಭರಣ ಗಳಿಂದ ಬಾಗಲ್ಪಟ್ಟ ಶರೀರವುಳ್ಳವಳಾಗಿದ್ದಳು. ಮುತ್ತುಗಳಿಂದ ಝಣಝಣ ಧ್ವನಿಮಾಡುವ ಒಡ್ಯಾಣದಿಂದ ಬಿಗಿಯಲ್ಪಟ್ಟ ಕಟಿಯುಳ್ಳವಳಾಗಿ, ಸ್ವಲ್ಪ ಸಡಲಿದ ನೆರಿಗೆಯ ಪೀತಾಂಬರವುಳ್ಳವಳಾಗಿ, ಓರೆಮಾಡಲ್ಪಟ್ಟ ಸೆರಗಿನಿಂದಾಗಿ ಕಾಣುತ್ತಿರುವ ಸ್ತನವುಳ್ಳವಳಾಗಿ, ವಿಲಾಸಯುಕ್ತವಾದ ನೋಟಗಳಿಂದ ಕೂಡಿ ನೋಡಿದವರನ್ನು ಮೋಹಗೊಳಿಸುವವಳಾಗಿ, ಪರಿಮಳಯುಕ್ತವಾದ ಚಂದನಗಂಧವನ್ನು ಅಂಗಾಂಗಗಳಿಗೆ ಲೇಪಿಸಿಕೊಂಡವಳಾಗಿ, ಕುಸುಮಮಾಲೆಗಳಿಂದ ಅಲಂಕೃತಳಾಗಿದ್ದು, ರಂಭೆಯು ಮಂದಗಮನದಿಂದ ತನ್ನ ಬಳಿಗೆ ಬಂದುದನ್ನು ದೇವಾಂಗನು ನೋಡಿದನು.

ತನ್ನ ಬಳಿಗೆ ಬಂದ ಅವಳನ್ನು ನೋಡಿದ ದೇವಾಂಗನು ಎಲೈ ರಂಭೆಯೇ ನೀನು ಯಾವ ಕಾರಣದಿಂದಾಗಿ ಇಲ್ಲಿಗೆ ಬಂದೆ? ಸುಂದರಿ, ಗೆಳತಿಯರನ್ನು ಬಿಟ್ಟು ನೀನೊಬ್ಬಳೇ ಇಲ್ಲಿಗೆ ಏಕೆ ಬಂದೆ? ನನ್ನಿಂದೇನಾಗಬೇಕು? ಎಲೈ ವರಾನನೇ ಹೇಳೆಂದನು. ಅದಕ್ಕೆ ಆಕೆಯು ಮುಖವನ್ನು ತಗ್ಗಿಸಿ ಹುಸಿನಗೆ ನಗುತ್ತಾ, ಕಾಲಹೆಬ್ಬೆರಳಿನಿಂದ ಭೂಮಿಯನ್ನು ಕೆರೆಯುತ್ತಾ, ರಾಜೇಂದ್ರನಾದ ದೇವಾಂಗನೇ! ಮನ್ಮಥ ಸಮಾನನಾದ ನಿನ್ನನ್ನು ಕೈಲಾಸಪರ್ವತದಲ್ಲಿ ನೋಡಿದಾಗಿನಿಂದ, ನನ್ನ ಮನಸ್ಸು ನಿನ್ನಲ್ಲಿ ನೆಟ್ಟಿರುವುದು. ಅಂದಿನಿಂದ ಈವರಿವಿಗೂ ನನಗೆ ನಿನ್ನದೇ ಧ್ಯಾನವಾಗಿ ನಿನ್ನಲ್ಲಿ ಸುಖಪಡಲು ಹಾತೊರೆಯುತ್ತಿರುವೆನು. ರತಿಕೂಜಿತಗಳಿಂದಲೂ, ಬಹುವಿಧಗಳಾದ ಕಲಾಬಂಧಗಳಿಂದಲೂ, ನನ್ನನ್ನೊಂದು ಸಾರಿ, ನಿನ್ನ ಅಂಗಸಂಗದಿಂದ ಸುಖಪಡಿಸು. ಎಲೈ ಬುದ್ಧಿವಂತನೇ, ನೀನು ಮಹಾದೃಢನು ನಿನ್ನ ಮಹಾಬಾಹುಗಳಿಂದ ನನ್ನನ್ನೊಂದು ಬಾರಿ ಸೆಳೆದಪ್ಪಿ ಗಾಢವಾಗಿ ಆಲಂಗಿಸು. ಎಲೈ ರಾಜೋತ್ತಮನೇ, ತಡಮಾಡದೆ ನನ್ನ ಮನೋರಥವನ್ನು ಪೂರೈಸು ಎಂದು ಆತುರದಿಂದ ನುಡಿದಳು.

ಈ ಮಾತುಗಳನ್ನು ಕೇಳಿ, ಜಿತೇಂದ್ರಿಯನೂ, ಜಾಣನೂ, ಆದ ದೇವಾಂಗನು ಶಿವ ಶಿವಾಯೆಂದು ತನ್ನ ಕಿವಿಗಳನ್ನು ಮುಚ್ಚಿಕೊಂಡು ರಂಭೆಯನ್ನು ಕುರಿತು, ಎಲೈ ಚದುರೆಯಾದ ರಂಭೆಯೇ, ನನ್ನಲ್ಲಿ ಈ ರೀತಿ ಸಂಭಾಷಿಸುವುದು ನಿನಗೆ ತರವಲ್ಲ. ಎಲೈ ಶೋಭನಾಂಗಿ ನನ್ನಂತಹವನಿಗೆ ಇಂತಹ ಕೆಲಸವು ಸರ್ವಥಾ ಯೋಗ್ಯವಲ್ಲ. ಎಲೈ ಕಾಮಿನಿ, ಈ ನಿನ್ನ ಇಷ್ಟವನ್ನು ಈಡೇರಿಸಲು ನಾನು ಸಮರ್ಥನೂ ಅಲ್ಲ. ನಾನು ವಿರಾಗಿ ಎಂಬುದನ್ನು ನೀನರಿಯೆಯಾ? ಹೀಗಿದ್ದೂ ನನ್ನನ್ನು ನೀನು ಹೇಗೆ ಕಾಮಿಸಿದೆ ಮನೋಹರರಾದ ದೇವತೆಗಳನೇಕರು ನಿನ್ನ ಕಾಮುಕರಾಗಿಲ್ಲವೇ? ಅವರಿಂದಲೇ ನೀನು ಸುಖಹೊಂದು, ನನ್ನೊಡನೆ ನಿನ್ನ ಸಂಬಂಧವು ವಿಹಿತವಲ್ಲ. ಈ ಅಕಾರ್ಯದಿಂದ ತೇಜೋಹಾನಿಯೂ ಪುಣ್ಯನಾಶವೂ ಆಗುವುದು. ಸತ್ಪುರುಷರಿಗೆ ವೇಶ್ಯಾಸ್ತ್ರೀಯರ ಸಹವಾಸವು ಪಾಪವನ್ನುಂಟುಮಾಡುವುದು. ವೇಶ್ಯೆಯನ್ನು ದುಶ್ಶೀಲರೇ ಭೋಗಿಸುವರು. ಒಂದು ವೇಳೆ ಸತ್ಪುರುಷರು ನಿಂದಿತರಾದ ವೇಶ್ಯೆಯರಲ್ಲಿ ಭೋಗಿಸಿದರೆ ಉಭಯತ್ರರೂ ಪಾಪಗಳಿಗೆ ಭಾಗಿಗಳಾಗುವರು. ಎಲೈ ರಂಭೆಯೇ ನೀನು ವೇಶ್ಯೆಯು. ಅದರಿಂದ ನಾನು ನಿನ್ನನ್ನು ಅವಶ್ಯಕವಾಗಿ ನಿರಾಕರಿಸುವೆನು. ನನ್ನಿಂದ ನಿನಗೇನೂ ಪ್ರಯೋಜನವಿಲ್ಲ. ನಾನು ಆಮೋದಪಟ್ಟಣಕ್ಕೆ ಶೀಘ್ರವಾಗಿ ಹೋಗಬೇಕಾಗಿರುವುದು. ಎಲೈ ಉತ್ತಮ ಸ್ತ್ರೀಯಳೇ ನೀನು ನಿನ್ನಿಚ್ಛೆಯಂತೆ ಬೇಕಾದಲ್ಲಿಗೆ ತೆರಳು. ನನ್ನಿಂದ ನಿನ್ನ ಮನೋರಥವು ಖಂಡಿತ ಸಿದ್ಧಿಸದು. ಈ ರೀತಿ ದೇವಾಂಗನು ಸುರಾಂಗನೆಯಾದ ರಂಭೆಗೆ ತಿಳಿಸಿದನು.

ಇದರಿಂದ ಆಕೆಯು ಕೋಪಗೊಂಡರೂ, ವಿನಯದಿಂದ ತಲೆದೂಗುತ್ತಾ, ಎಲೈ ರಾಜೋತ್ತಮನೇ ಏನು ಉತ್ತರಕೊಟ್ಟೆ? ಬುದ್ಧಿವಂತನಾದ ನೀನು ಈ ರೀತಿ ನುಡಿಯುವುದು ಉಚಿತವಲ್ಲ. ನನ್ನನ್ನು ಈ ಲೋಕದ ಸಾಮಾನ್ಯ ಸ್ತ್ರೀಯೆಂದು ಎಣಿಸಬೇಡ. ತ್ರಿಲೋಕಸುಂದರಿ ರಂಭೆಯಾದ ನಾನು ದೈನ್ಯದಿಂದ ಪ್ರಾರ್ಥಿಸುತ್ತಿರಲು, ನೀನು ಇಂತಹ ಮಾತುಗಳನ್ನಾಡಬಹುದೇ? ನನ್ನನ್ನು ಸಾಮಾನ್ಯ ನಿಂದಿತ ಗಣಿಕಸ್ತ್ರೀಯೆಂದು ಹೇಳುವೆಯಾ? ನಿಷ್ಪಾಪರಾದ ಋಷಿವರ್ಯರು ಶಾಸ್ತ್ರ ನಿಯಮದ ಪ್ರಕಾರ ತಮ್ಮಿಂದ ಆಚರಿಸಲ್ಪಟ್ಟ ಯಜ್ಞಗಳಿಗೆ ನನ್ನ ಸಹವಾಸವೇ ಫಲವೆಂದು ಹೇಳಿರುವುದನ್ನು ನೀನು ಕೇಳಿಲ್ಲವೇ? ಪವಿತ್ರಳಾದ ನನ್ನನ್ನು ಹೆಚ್ಚು ಅವಮಾನಿಸಬೇಡ. ಮೂರು ಲೋಕಗಳಲ್ಲಿಯೂ, ನನ್ನ ಸಮಾನಳಾದ ಸುಂದರಿಯೇ ಇಲ್ಲ. ಮಹಾತ್ಮರಾದ ಪರಾಶರ, ಅತ್ರಿ ಮೊದಲಾದ ಮುನಿಗಳು, ನನ್ನ ದರ್ಶನ ಮಾತ್ರದಿಂದಲೇ ಭ್ರಷ್ಟರಾಗಿ ತಪೋಭಂಗ ಹೊಂದಿದರು. ಬಹು ದೃಢವ್ರತರಾದ ತಪಸ್ವಿಗಳೂ, ಮುನಿಗಳೂ ಕೂಡ ನನ್ನ ಕಡೆಗಣ್ಣಿನ ನೋಟಮಾತ್ರದಿಂದಲೇ ಭಗ್ನತಪರಾಗುವರು. ಜಿತೇಂದ್ರಿಯರಾದ ಅನೇಕರು ನಷ್ಟಪುಣ್ಯರಾಗಿರುವರು. ಶುದ್ಧಮನಸ್ಕರೂ, ನಿರ್ಮಲ ಜ್ಞಾನಿಗಳೂ ಆದ ಎಲ್ಲಾ ಯೋಗಿಗಳೂ ನನ್ನನ್ನು ನೋಡಿದ ಮಾತ್ರದಿಂದಲೇ ಜಾರಶಿಖಾಮಣಿಗಳಾದರು. ಪರಮ ಸೌಭಾಗ್ಯವತಿಯೂ, ಲೋಕಸುಂದರಿಯೂ ಆದ ನಾನು, ಇಷ್ಟು ವಿಧವಾಗಿ ಪ್ರಾರ್ಥಿಸುತ್ತಿದ್ದರೂ, ನನ್ನನ್ನು ಏಕೆ ಸ್ವೀಕರಿಸುವುದಿಲ್ಲ?

ನನ್ನಸಂಗವು ಪುಣ್ಯಾತ್ಮರಿಗೆ ದೊರೆಯುವುದಲ್ಲದೆ ಅನ್ಯರಿಗೆ ದೊರೆಯದು. ನನ್ನನ್ನು ನಿಂದಿತಳೆಂದು ನೀನು ಹೇಗೆ ನುಡಿಯುವೆ ? ಈರೀತಿ ಯಾಚಿಸುತ್ತಿರುವ ನನ್ನನ್ನು ಅವಮಾನಿಸಬೇಡ. ಜಯಂತ, ಮನ್ಮಥ, ವಸಂತ, ನಲಕೂಬರರೇ ಮೊದಲಾದ ಶ್ರೇಷ್ಠರೂ, ರೂಪವಂತರೂ ನನ್ನ ಚೆಲುವಿನ ಹದಿನಾರನೆಯ ಒಂದು ಭಾಗವನ್ನು ಸಹ ಹೋಲರು. ನಿನ್ನ ದರ್ಶನವಾದಂದಿನಿಂದ ನಾನು ವ್ಯಾಕುಲಿತಳಾಗಿ ದೇವಾಂಗನನ್ನು ಎಂದುನೋಡುವೆನೋ ? ಅವನು ನನ್ನನ್ನು ಎಂದು ಸ್ವೀಕರಿಸುವನೋ ? ಅವನ ಮುಖ ಚಂದ್ರನನ್ನು ಎಂದಿಗೆ ಕಾಣುವೆನೋ ? ನನಗೆಂದು ಆ ಸಮಯವು ಸಿಗುವುದೋ ? ಎಂದು ನಿನ್ನನ್ನೂ, ನಿನ್ನ ರೂಪವನ್ನೂ, ನಿನ್ನ ಮಾತನ್ನೂ ಪುನಃ ಪುನಃ ನೆನೆಸಿಕೊಂಡು, ವಿರಹತಾಪದಿಂದ ಈವರಿವಿಗೂ ನಿನ್ನ ಧ್ಯಾನದಲ್ಲೇ ಕಾಲವನ್ನು ಕಳೆದೆನು. ಮಲಗು ವಾಗ, ನಡೆಯುವಾಗ, ನಿಂತಾಗ, ಮಾತಾಡುವಾಗ ಇನ್ನುಳಿದ ಸಮಸ್ತ ಕೆಲಸ ಕಾರ್ಯಗಳಲ್ಲಿಯೂ ನಿನ್ನ ಸ್ಮರಣೆಯಲ್ಲೇ ಇದ್ದು, ಎಂದು ನಿನ್ನನ್ನು ಕಂಡೆನೋ ಅಂದಿನಿಂದ ಮನ್ಮಥನು ತನ್ನ ಮೊನಚಾದ ಕುಸುಮ ಬಾಣಗಳಿಂದ ನನ್ನ ಸರ್ವಾಂಗ ಗಳನ್ನೂ ಬಾಧಿಸಿ ದಹಿಸುತ್ತಿರುವನು. ಆ ಕುಸುಮಬಾಣಗಳು ನನಗೆ ಅಗ್ನಿ ಸದೃಶ ಗಳಾಗಿವೆ. ಆ ಮನ್ಮಥನಿಂದ ಪ್ರಯೋಗಿಸಲ್ಪಟ್ಟ ಕುಸುಮ ಬಾಣಗಳೇ ನನಗೆ ವಿರಹ ತಾಪವನ್ನು ಹೆಚ್ಚಿಸುತ್ತಿರುವುವು. ಎಲೈ ಪ್ರಭೋ ಮನ್ಮಥನ ಬಾಣದ ಪ್ರಹಾರಕ್ಕೆ ನನ್ನನ್ನು ಗುರಿಮಾಡಬೇಡ. ಈ ಕೂಡಲೇ ನನ್ನನ್ನಂಗೀಕರಿಸಿ ನನ್ನ ಈ ಕಾಮಾಗ್ನಿ ಯನ್ನು ಶಮನಗೊಳಿಸು. ನಿನ್ನ ಅಧರಾಮೃತವನ್ನು ಪಾನಮಾಡಿಸಿ, ನನ್ನ ಒಳ ನೆನೆಗುದಿಯನ್ನು ಆರಿಸು. ಎಲೈ ದಯಾನಿಧಿಯೇ, ಬೇಡಿಕೊಳ್ಳುತ್ತಿರುವ ನನ್ನನ್ನು ತಿರಸ್ಕರಿಸುವುದು ನಿನಗುಚಿತವಲ್ಲ. ನಿನ್ನ ಬಾಹುಗಳಿಂದ ನನ್ನನ್ನು ಬಿಗಿಯಾಗಿ ಬಂಧಿಸಿ ಪರಸ್ಪರ ಅಧರಪಲ್ಲವಗಳ ದಂತಕ್ಷತದಿಂದ ನನ್ನನ್ನು ಸಂತೋಷಪಡಿಸು. ಎಲೈ ಮಾರಸುಂದರನೇ, ರತಿಕಲಾಕೌಶಲ್ಯದಿಂದ, ಮುಗುಳ್ನಗೆಯಿಂದ, ಸವಿನೋಟದಿಂದ, ಸವಿಮಾತುಗಳಿಂದ ತಡಮಾಡದೆ, ನನ್ನೊಡನೆ ಸುಖವನ್ನು ಅನುಭವಿಸು. ಎಂದು ಹೇಳಿದಳು.

ಆಗಲೂ ದೇವಾಂಗನು ಸ್ಥಿರಮನಸ್ಕನಾಗಿದ್ದುದನ್ನು ಕಂಡು, ರಂಭೆಯು ಎಲೈ ದೇವಾಂಗನೇ ನಿನ್ನ ಮನಸ್ಸನ್ನು ಬ್ರಹ್ಮನು ವಜ್ರದಿಂದ ಮಾಡಿರಬಹುದು. ಅಯ್ಯೋ ನಾನೆಷ್ಟು ಪ್ರಾರ್ಥಿಸಿದರೂ ನೀನು ದಯದೋರಲೊಲ್ಲೆ. ಒಂದು ಮಾತನ್ನೂ ಆಡ ಲೊಲ್ಲೆ, ಮೂಕನಂತಿರುವೆ. ತ್ರಿಲೋಕಸುಂದರಿಯಾದ ರಂಭೆಯು ನಿನ್ನ ಪಾದದ ಮೇಲೆ ಬಿದ್ದು ಅತಿ ದೈನ್ಯದಿಂದ ಬೇಡುತ್ತಿರುವಳೆಂದು ತಿಳಿಯಲೊಲ್ಲೆಯಾ ? ಪ್ರತ್ಯುತ್ತರ ವನ್ನಾದರೂ ಕೊಡು. ಎಲೈ ಭೂಪತಿಯೇ ನಿನ್ನ ಹೃದಯವು ಅತಿ ನಿಷ್ಠುರವೆಂದು ನಿಸ್ಸಂಶಯವಾಗಿ ನಾನು ತಿಳಿಯುವೆನು. ಸಮ್ಮತಿಸುವೆಯೋ ಇಲ್ಲವೋ ? ಹೇಳು. ನಾನು ಕೂಡಲೇ ಹೊರಟುಹೋಗುವೆನು ! ಎಂದು ಆಕೆಯು ನುಡಿದಳು.

ದೇವಾಂಗನು ಆ ಮಾತುಗಳನ್ನು ಕೇಳಿ ನಗುತ್ತಾ, ಶೋಭನಾಂಗಿಯೇ, ಮೊದಲೇ ನಾನು ನಿನಗೆ ಉತ್ತರವನ್ನು ಕೊಟ್ಟಿಲ್ಲವೇ? ಈ ರೀತಿಯ ದುಷ್ಕಾರ್ಯಕ್ಕೆ ನನ್ನ ಮನಸ್ಸು ಸರ್ವಥಾ ಒಪ್ಪುವುದಿಲ್ಲ. ಈ ದೇಹವು ಮಲಮೂತ್ರಕ್ಕೆ ನೆಲೆಯಾಗಿದ್ದು ಅತಿನಿಂದಿತವಾದುದು. ಮೆದುಳು, ಕೊಬ್ಬು, ಮಾಂಸ, ಅಸ್ಥಿ, ಚರ್ಮ, ರಕ್ತ ಇವುಗಳಿಂದ ಕೂಡಿ ನವದ್ವಾರಗಳುಳ್ಳದುದಾಗಿದ್ದು, ಯಾವಾಗಲೂ ನಾನಾ ರೋಗಗಳಿಂದ ಪೀಡಿತವಾಗಿದ್ದು ಅತಿ ಹೇಯವಾದ ಈ ಶರೀರದ ಸುಖವು ಎಂದಿಗೂ ಸ್ಥಿರವಲ್ಲ. ಬುದ್ಧಿವಂತನಾದ ಮನುಷ್ಯನು, ತುಚ್ಛವಾದ ಈ ಶರೀರದ ಭೋಗವನ್ನು ಬಯಸಬಾರದು. ಶರೀರ ಭೋಗದಿಂದ ಲಭಿಸುವ ಸುಖವು ಎಂದೂ ಶಾಶ್ವತವಲ್ಲ. ಅದು ಪಾಪ ಮೂಲವೇ ಹೊರತು ಅನ್ಯಥಾ ಬೇರೆಯಲ್ಲ. ಪ್ರಾಜ್ಞರಾದವರು ಅದನ್ನು ಅಪೇಕ್ಷಿಸಬಾರದು. ಯಾವ ಮೂಢಾತ್ಮನು ಸ್ವಸ್ತ್ರೀಯ ಹೊರತು ಪರಸ್ತ್ರೀಯನ್ನು ಕಾಮಿಸುವನೋ? ಅವನ ಜನ್ಮ ಜನ್ಮಾಂತರಗಳ ಪುಣ್ಯಗಳೆಲ್ಲವೂ ನಾಶಹೊಂದುವುವು. ಪರಸ್ತ್ರೀ ಕಾಮುಕನಾದ ಮೂಢನು ಪಾಪರಾಶಿಯನ್ನು ಸಂಪಾದಿಸಿ, ದುಃಖಕರವಾದ ನರಕವನ್ನು ಹೊಂದಿ, ಯಮಕಿಂಕರರಿಂದ ಪೀಡಿಸಲ್ಪಡುವನು. ಯಾವ ತಿಳಿಗೇಡಿಯು, ಮನೋಭ್ರಾಂತಿಯಿಂದ ಪರನಾರಿಯನ್ನಾಲಿಂಗಿಸಿ ಅದಕ್ಕಿಂತ ಮಿಗಿಲಾದ ಸುಖವಿಲ್ಲವೆಂದು, ತಿಳಿಯುವನೋ? ಆ ದುರುಳನು ಇಹದಲ್ಲಿ ಕರ್ಮಭ್ರಷ್ಟನಾಗಿ, ಪರದಲ್ಲಿ ಯಮಕಿಂಕರರಿಂದ, ಕಾದ ಕಬ್ಬಿಣದ ಸ್ತ್ರೀಯ ಪ್ರತಿಮೆಗೆ, ಇವಳು ಸ್ತ್ರೀಯಳು, ಇವಳನ್ನು ಆಲಂಗಿಸೆಂದು ಪೀಡಿಸಲ್ಪಡುವನು. ಯಾರು ಮುಂದಿನ ದುಃಖಗಳನ್ನು ತಿಳಿದೂ ಪರಸ್ತ್ರೀಯಳನ್ನು ಅನುಭವಿಸುವನೋ? ಆ ದುಷ್ಟನ ಹಸ್ತವನ್ನು ಚೇಳಿನಿಂದ ತುಂಬಿದ ಹಳ್ಳದಲ್ಲಿ ಇಡಿಸಿ, ಅವುಗಳನ್ನು ಹೊರದೆಗೆಯೆಂದು ಬಾರಿ ಬಾರಿಗೂ ಪೀಡಿಸುವರು. ಯಾರು ಪರಸ್ತ್ರೀಯನ್ನು ಚುಂಬಿಸುವನೋ? ಆ ಮೂರ್ಖನನ್ನು ಯಮದೂತರು ವಿಷಪೂರ್ಣವಾದ ಹಲ್ಲುಳ್ಳ ನಾಗರಹಾವನ್ನು ಚುಂಬಿಸೆಂದು ಬಲವಂತಪಡಿಸುವರು. ಯಾರು ಕಾಮಮೋಹಿತನಾಗಿ, ಪರಸ್ತ್ರೀಯನ್ನು ನೋಡುವನೋ? ಆ ಮೂಢನ ನೇತ್ರಗಳನ್ನು ಸಿಟ್ಟಿನಿಂದ ಸೂಜಿಗಳಿಂದ ಚುಚ್ಚುವರು. ಪರಸ್ತ್ರೀಯ ಸಂಗದಿಂದ ಪಾಪವೃದ್ಧಿಯೇ ಆಗುವುದು. ಪಾಪಗಳಲ್ಲಿ, ಪರಸ್ತ್ರೀಸಂಗವೇ ಅತಿ ಹೆಚ್ಚಿನದೆಂದು ಸ್ಮೃತಿ ಶಾಸ್ತ್ರಗಳಲ್ಲಿ ಪ್ರಸಿದ್ಧವಾಗಿರುವುದು. ಪಾಪಭೀರುವಾದ ನನಗೆ ಪರಸ್ತ್ರೀ ಗಮನವು ವಿಹಿತವಲ್ಲ. ನಾನು ತ್ರಿಲೋಕಸುಂದರಿಯೂ, ಪರಮಪವಿತ್ರಳೂ, ಪುಣ್ಯವಂತೆಯೂ ಆಗಿದ್ದೇನೆ. ನನ್ನ ಭೋಗವೇ ತಪಸ್ಸಿನ ಫಲವೆಂದು ತಿಳಿದು ತಪೋಧನರಾದ ಋಷಿಗಳು ಅಂಗೀಕರಿಸಿದರೆಂದು ನೀನು ನುಡಿದೆಯಲ್ಲವೇ? ಅವರ ಗತಿಯೇನಾಯಿತು? ವಿಚಾರ ಮಾಡಿದರೆ ನಿನ್ನ ನಡೆನುಡಿಗಳು ನನ್ನ ಮನಸ್ಸಿಗೆ ಸ್ವಲ್ಪವೂ ಸೇರುವುದಿಲ್ಲ. ಬಹುನಿಂದಿತವೂ, ಅನಿತ್ಯವೂ ಆದ ಈ ಶರೀರಕ್ಕೆ ಸೌಖ್ಯವೆಲ್ಲಿಯದು. ನಿನ್ನ ಭೋಗವಾದರೂ ಅನಿತ್ಯವು. ನಿನ್ನಿಂದ ಅವಮಾನಗೊಂಡವರ ಸಾಮ್ಯವು ನನಗೇತಕ್ಕೆ? ತಮ್ಮಿಂದ ಮಾಡಲ್ಪಟ್ಟ ಪಾಪ ಪುಣ್ಯಗಳನ್ನು ತಾವೇ ಅನುಭವಿಸಬೇಕು. ಬೇರೆಯವರ ಅಥವಾ

ಅನ್ಯರ ನಡತೆ ನನಗೇಕೆ? ಬಹಳ ಹೇಳಿ ಪ್ರಯೋಜನವೇನು? ನಿನ್ನನ್ನು ನಾನು ಕಣ್ಣೆತ್ತಿಯೂ ನೋಡಲಾರೆನು. ಅಂದಮೇಲೆ ಇನ್ನುಳಿದ ಅನ್ಯವಿಚಾರಗಳು ನನ್ನಿಂದ ಸಂಭವಿಸುವುದೇ? ನೀನೇ ತಿಳಿದುಕೋ. ಎಲೈ ರಂಭೆಯೇ ನೀನು ಇಲ್ಲಿಂದ ಹೊರಡು ಎಂದನು.

ಈ ರೀತಿ ದೇವಾಂಗನಿಂದ ನಿರಾಕರಿಸಲ್ಪಟ್ಟ ರಂಭೆಯು ಅತ್ಯಂತ ಶೋಕದಿಂದಲೂ, ಕೋಪದಿಂದಲೂ ದೇವಾಂಗನನ್ನು ನಿಂದಿಸುತ್ತಾ, ಎಲೈ ಮೂಢಾ ನಿನ್ನ ಮಾತಿಗೆ ಧಿಕ್ಕಾರ! ಅಭೇದ್ಯವಾದ ನಿನ್ನ ಮನಸ್ಸಿಗೆ ಧಿಕ್ಕಾರ! ನಿತ್ಯಾನಿತ್ಯವಿವೇಕಕ್ಕೂ, ನಿನ್ನ ಜ್ಞಾನಕ್ಕೂ ಧಿಕ್ಕಾರ! ಅರಸಿಕನಾದ ನಿನಗೆ ರಸಿಕಳಾದ ನನ್ನ ಸುಖವು ದೊರಕುವುದೆಂತು? ರಸಿಕ ಶಿಖಾಮಣಿಯು ತನ್ನ ಪುಣ್ಯ ಪ್ರಭಾವದಿಂದ ನನ್ನನ್ನು ಪಡೆದು ಸುಖಿಸುವನು. ನೀನು ಮೂಢನೆಂದು ಅರಸಿಕನೆಂದು ನಾನು ನೆನೆಸಿರಲಿಲ್ಲ. ದೈನ್ಯದಿಂದ ಪ್ರಾರ್ಥಿಸುವ ನನ್ನ ಮಾತನ್ನು ನೀನು ಗ್ರಹಿಸಲಿಲ್ಲ. ಆದುದರಿಂದ ನೀನು ಅತ್ಯಂತ ಬಡತನವನ್ನು ಹೊಂದಿ ಶತ್ರುಗಳಿಂದ ಮುತ್ತಲ್ಪಟ್ಟು ಅವರಿಂದ ಬಂಧಿತನಾಗಿ ನನ್ನ ಶಾಪದಿಂದ ಪೌರುಷಹೀನನಾಗು. ಐದು ಸಾವಿರ ವರ್ಷಗಳವರಿವಿಗೂ ನಿನ್ನ ವಂಶಜರು ಶೂದ್ರತ್ವವನ್ನು ಹೊಂದಿದ್ದು, ಅನಂತರ ಅವರಿಗೆ ಬ್ರಹ್ಮನ ಅನುಗ್ರಹದಿಂದ ಬ್ರಾಹ್ಮಣತ್ವವು ಪ್ರಾಪ್ತವಾಗುವುದು. ಈ ರೀತಿ ರಂಭೆಯು ದೇವಾಂಗನನ್ನು ಶಪಿಸಿ ಹೊರಟು ಹೋದಳು. ಇತ್ತ ದೇವಾಂಗರಾಜನು ಒಂದು ಕ್ಷಣ ಚಿಂತಿಸಿ ಈಶ್ವರನ ಆಜ್ಞೆಯೆಂದು ತಿಳಿದು ತನ್ನ ಪಟ್ಟಣಕ್ಕೆ ಬಂದನು.

ಇಲ್ಲಿಗೆ ಬ್ರಹ್ಮಾಂಡಪುರಾಣದಲ್ಲಿ ಬ್ರಹ್ಮ ನಾರದ ಸಂವಾದ ರೂಪ ಉತ್ತರಖಂಡದ ದೇವಾಂಗ ಚರಿತ್ರೆಯಲ್ಲಿ ದೇವಾಂಗನಿಗೆ ರಂಭೆಯು ಶಾಪಕೊಟ್ಟಳೆಂಬಲ್ಲಿಗೆ ಹನ್ನೊಂದನೆಯ ಅಧ್ಯಾಯ ಮುಗಿದುದು.

ಹನ್ನೆರಡನೆಯ ಅಧ್ಯಾಯ

ದೇವಾಂಗ ವಿವಾಹ

ಮಹಾತೇಜಸ್ವಿಯಾದ ಸೂರ್ಯನು ತನ್ನ ತಂಗಿಯ ಲಗ್ನವನ್ನು ಮಾಡಲೋಸುಗ ಲೋಕೇಶನಾದ ಬ್ರಹ್ಮನ ಬಳಿಗೆ ಹೋಗಿ ಎಲೈ ಲೊಕಪೂಜಿತನಾದ ಚತುರಾಸ್ಯನೇ ನಿನಗೆ ನಮಸ್ಕಾರ. ಶ್ರೀ ಶಂಕರ ಪಾರ್ವತಿಯರ ಅಪ್ಪಣೆ ಮೇರೆಗೆ ನನ್ನ ತಂಗಿಯಾದ ದೇವದತ್ತೆಯನ್ನು ಅಪಾರ ತೇಜಸ್ವಿಯಾದ ದೇವಾಂಗನಿಗೆ ಕೊಟ್ಟು ವಿವಾಹಮಾಡಲು ಇಚ್ಛಿಸಿರುವೆನು. ಆದುದರಿಂದ ಎಲೈ ಲೋಕಸ್ವಾಮಿಯಾದ ಚತುರ್ಮುಖನೇ ನಿನ್ನ ಸಿದ್ಧಾಂತರೀತಿಯಾಗಿ ಶುಭಮುಹೂರ್ತವನ್ನು ನೋಡಿ ಲಗ್ನ ನಿಶ್ಚಯಿಸಿಕೊಡು. ಎಲೈ ಸೃಷ್ಟಿಕರ್ತನೇ ನೀನು ನಮಗೆಲ್ಲಾ ಹಿರಿಯನಾಗಿದ್ದು ಒಡೆಯನೂ ಆಗಿರುವೆ ಎಂದನು.

ಅದಕ್ಕೆ ಬ್ರಹ್ಮನು, ಸೂರ್ಯನನ್ನು ಕುರಿತು ಎಲೈ ಸೂರ್ಯನೇ ಇಂದಿಗೆ ಎಂಟನೆಯ ದಿನದಲ್ಲಿ ವೈಶಾಖ ಮಾಸದ ಶುಕ್ಲ ಪಕ್ಷದ ಪಂಚಮಿ ಸೋಮವಾರವು ಪ್ರಶಸ್ತವಾಗಿದೆ. ಆ ದಿನ ರಾತ್ರಿ ಏಳು ಘಳಿಗೆ ಕಳೆದ ಮೇಲೆ ಶುಭಧನುರ್ಲಗ್ನವು ಪಾಣಿಗ್ರಹಣಕ್ಕೆ ಉತ್ತಮವಾಗಿದೆ ಎಂದು ಬ್ರಹ್ಮನು ವಿವಾಹಮುಹೂರ್ತವನ್ನು ನಿಶ್ಚಯಿಸಿ ತಿಳಿಸಿದನು. ಸೂರ್ಯನು ಹಾಗೆಯೇ ಆಗಲೆಂದು ನುಡಿದು ಬಹುಪ್ರೀತಿಯಿಂದ ಜಗತ್ಪಿತನಾದ ಬ್ರಹ್ಮನನ್ನು ನೀನು ಸಪರಿವಾರನಾಗಿ ಆ ದಿನ ಅವಶ್ಯವಾಗಿ ಬರಬೇಕೆಂದು ಪ್ರಾರ್ಥಿಸಿ, ಚತುರ್ಮುಖನ ಪತ್ನಿಯರನ್ನೂ ಪ್ರತ್ಯೇಕವಾಗಿ ಆಹ್ವಾನಿಸಿದನು.

ಅಲ್ಲಿಂದ ಪರಶಿವನನ್ನು ಆಹ್ವಾನಿಸಲು ಕೈಲಾಸಕ್ಕೆ ತೆರಳಿ ಪಾರ್ವತೀಸಹಿತನಾದ ದೇವದೇವೇಶನಾದ ಮುಕ್ಕಣ್ಣನ ಬಳಿಬಂದು ದಿನಮಣಿಯು, ಮಹಾದೇವನೇ, ಜಗತ್ಸ್ವಾಮಿಯೇ, ದೇವಾಂಗನ ವಿವಾಹವು ದೇವದತ್ತೆಯೊಡನೆ ನಿನ್ನ ಅಪ್ಪಣೆಯಂತೆ ವೈಶಾಖ ಶುದ್ಧ ಪಂಚಮಿ ತಿಥಿಯಂದು ನಿಶ್ಚಯಿಸಿದೆ. ಆ ದಿನ ಜಗಜ್ಜನಕ, ಜಗಜ್ಜನನಿಯರಾದ ನೀವಿಬ್ಬರೂ ಸಮಸ್ತ ಪರಿವಾರದಿಂದ ಕೂಡಿದವರಾಗಿ ಅವಶ್ಯವಾಗಿ ಆಗಮಿಸಬೇಕೆಂದು ನುಡಿದನು. ಪಾರ್ವತೀ ಪರಮೇಶ್ವರರು ಹಾಗೆಯೇ ಆಗಲೆಂದು ಹೇಳಿದರು. ಆ ಮೇಲೆ ಸೂರ್ಯನು ವಿಘ್ನೇಶನನ್ನೂ ಷಣ್ಮುಖನನ್ನೂ, ವೀರಭದ್ರನನ್ನೂ, ನಂದೀಶ್ವರನನ್ನೂ ಇನ್ನುಳಿದ ಸಮಸ್ತ ಪ್ರಮಥರನ್ನೂ ಕಂಡು ಅವರೆಲ್ಲರನ್ನೂ ತನ್ನ ತಂಗಿಯ ವಿವಾಹಕ್ಕೆ ಆದರ ಪೂರ್ವಕವಾಗಿ ಆಹ್ವಾನಿಸಿದನು.

ಅನಂತರ ಶ್ವೇತದ್ವೀಪಕ್ಕೆ ಬಂದು ಜಗತ್ಪ್ರಭುವಾದ ನಾರಾಯಣನನ್ನು ಕಂಡು ಜಗನ್ನಾಥನಾದ ನಾರಾಯಣನೇ, ಪ್ರಭುವೇ, ನನ್ನ ತಂಗಿಯನ್ನು ದೇವಾಂಗನಿಗೆ, ಇದೇ ವೈಶಾಖ ಶುದ್ಧ ಪಂಚಮಿ ಸೋಮವಾರದಂದು ವಿವಾಹಮಾಡಲು ನಿಶ್ಚಯಿಸಿರುವೆನು. ಮಹಾಭಾಗನೇ ನೀನು ನಿನ್ನ ಸಮಸ್ತ ಪರಿವಾರದೊಡಗೂಡಿ ಈ ಮಂಗಳ ಕಾರ್ಯಕ್ಕೆ ಆಗಮಿಸಿ ನೂತನ ವಧೂವರರನ್ನು ಆಶೀರ್ವದಿಸಿ ಈ ಕಾರ್ಯವನ್ನು ನೆರವೇರಿಸಿ ಕೊಡಬೇಕೆಂದನು. ವಿಷ್ಣುವು ಹಾಗೆಯೇ ಆಗಲೆಂದು ನುಡಿದನು. ನಂತರ ಜಗಚ್ಚಕ್ಷುವಾದ ಸೂರ್ಯನು ಲಕ್ಷ್ಮಿಯನ್ನೂ, ವಸುಂಧರೆಯಾದ ಭೂದೇವಿಯನ್ನೂ, ವಿಷ್ಣುವಿನ ಸಮಸ್ತ ಪರಿವಾರವನ್ನೂ ವಿವಾಹಕ್ಕೆ ಆಮಂತ್ರಿಸಿದನು. ಅನಂತರ ಸ್ವರ್ಗಕ್ಕೆ ಬಂದು ಶಚೀಸಮೇತನಾದ ಇಂದ್ರನನ್ನೂ, ಅವನ ಪುತ್ರನಾದ ಜಯಂತನನ್ನೂ ವಿವಾಹಕ್ಕೆ ಆಹ್ವಾನಿಸಿ ಇಂದ್ರನ ಆಸ್ಥಾನದಲ್ಲಿದ್ದ ಬ್ರಹ್ಮರ್ಷಿಗಳನ್ನೂ, ಆದಿತ್ಯರನ್ನೂ, ಅಷ್ಟವಸುಗಳನ್ನೂ, ಏಕಾದಶರುದ್ರರನ್ನೂ, ಗಂಧರ್ವರನ್ನೂ ಇನ್ನುಳಿದ ಸಮಸ್ತ ದೇವತೆಗಳನ್ನೂ ಲಗ್ನಕ್ಕೆ ಬರಹೇಳಿ ತನ್ನ ಲೋಕಕ್ಕೆ ಬಂದನು. ಸೂರ್ಯನ ಅಪ್ಪಣೆಯ ಪ್ರಕಾರ ಅವನ ಮಂತ್ರಿಗಳಾದ ನಂದೋಪನಂದರು, ದಿಕ್ಪಾಲಕರನ್ನೂ ದೇವರ್ಷಿಗಳನ್ನೂ, ಬ್ರಹ್ಮರ್ಷಿಗಳನ್ನೂ, ವಿದ್ಯಾಧರರನ್ನೂ ಉಳಿದ ಸಮಸ್ತ ದೇವತೆಗಳನ್ನೂ ಆದರ

ಪೂರ್ವಕವಾಗಿ ಲಗ್ನಕ್ಕೆ ಎಲ್ಲರೂ ಆಗಮಿಸಬೇಕೆಂದು ಆಹ್ವಾನಿಸಿ ಸೂರ್ಯನಿಗೆ ಎಲ್ಲ ಸಂಗತಿಗಳನ್ನೂ ತಿಳಿಸಿದರು.

ಇತ್ತ ಸಂಪತ್ಕಾಲಿಯಾದ ದೇವಾಂಗನು ಸುಬುದ್ಧಿ, ಕಾರ್ಯದಕ್ಷರೆಂಬ ತನ್ನ ಮಂತ್ರಿಗಳನ್ನು ಕರೆದು ಎಲೈ ಮಂತ್ರಿವರ್ಯರೇ ನೀವಿಬ್ಬರೂ, ಈಗಿಂದೀಗಲೇ ಜಗಚ್ಚಕ್ಷು ವಾದ ಭಗವಾನ್ ಸೂರ್ಯದೇವನ ಬಳಿಗೆ ಹೋಗಿ ಆತನಿಂದ ಹೇಳಲ್ಪಟ್ಟ ಶುಭ ಲಗ್ನವನ್ನು ನಿಶ್ಚಯಿಸಿಕೊಂಡು ಬೇಗ ಬನ್ನಿ ಎಂದು ಆಜ್ಞಾಪಿಸಿದನು. ಅವರಿಬ್ಬರೂ ಹಾಗೆಯೇ ಆಗಲೆಂದು ಹೇಳಿ ಪರಮ ಸಂತೋಷದಿಂದ ಸೂರ್ಯಲೋಕಕ್ಕೆ ಹೊರಟು ಮಾರ್ಗದಲ್ಲಿ ನಾನಾಶುಭ ಶಕುನಗಳನ್ನೂ ಕಾಣುತ್ತಾ, ಒಳ್ಳೆಯ ಮುಹೂರ್ತದಲ್ಲಿ ಸೂರ್ಯನ ಬಳಿಗೆ ಬಂದರು.

ಕುಶಲಮತಿಗಳಾದ ಸುಬುದ್ಧಿ, ಕಾರ್ಯದಕ್ಷರು ಅಲ್ಲಿ ಸೂರ್ಯನ ಪರಿವಾರದಿಂದ ಸತ್ಕೃತರಾಗಿ ಲೋಕಬಾಂಧವನಾದ ಸೂರ್ಯನೊಡನೆ ವಿವಾಹದ ಬಗ್ಗೆ ಮಾತುಕತೆ ನಡೆಸಿದರು. ಮಾತುಕತೆಯಲ್ಲಿ ಸೂರ್ಯನು ಬ್ರಹ್ಮದೇವನು ನಿಶ್ಚಯಿಸಿಕೊಟ್ಟಿದ್ದ ಶುಭಲಗ್ನವನ್ನು ತಿಳಿಸಿದನು. ಆ ಲಗ್ನಮುಹೂರ್ತವನ್ನು ದೇವಾಂಗನ ಮಂತ್ರಿಗಳು ಗೊತ್ತುಮಾಡಿಕೊಂಡು ಸೂರ್ಯನಿಂದ, ಬೀಳ್ಕೊಂಡು ಆಮೋದ ಪಟ್ಟಣಕ್ಕೆ ಬಂದು ಸಂಗತಿಯೆಲ್ಲವನ್ನೂ ದೇವಾಂಗನಿಗೆ ತಿಳಿಸಿದರು.

ಸೂರ್ಯಲೋಕದಲ್ಲಿ ಸೂರ್ಯನು ತನ್ನ ಮಂತ್ರಿಯಾದ ವೀರಮಾರ್ತಾಂಡ ನನ್ನು, ಕರೆದು ಎಲೈ ವೀರಮಾರ್ತಾಂಡನೇ ನಿನಗೆ ಮಂಗಳವಾಗಲಿ. ನನ್ನಪ್ಪಣೆಯಂತೆ ನೀನು ಈ ದಿನವೇ ಆಮೋದಪಟ್ಟಣಕ್ಕೆ ಚತುರಂಗ ಬಲ ಸಮೇತನಾಗಿ ಹೋಗಿ ಅಲ್ಲಿ ದೇವಾಂಗನನ್ನು ಕಂಡು ಇಂದಿಗೆ ಮೂರನೆಯ ದಿನ ಪಂಚಮಿತಿಥಿಯ ಸೋಮವಾರ ದಂದು ದೇವದತ್ತೆಯೊಡನೆ ಅವನ ವಿವಾಹ ಲಗ್ನದ ಮುಹೂರ್ತವು ನಿಶ್ಚಯಿಸಿದೆಯೆಂದು, ಅವನಿಗೂ ಅವನ ಪರಿವಾರದವರೆಲ್ಲರಿಗೂ ತಿಳಿಸಿ ಸಮಸ್ತರನ್ನು ಕರೆದುಕೊಂಡು ಬಾ ಎಂದು ಆಜ್ಞಾಪಿಸಿದನು.

ವೀರಮಾರ್ತಾಂಡನು ತನ್ನ ಒಡೆಯನ ಅಪ್ಪಣೆಯನ್ನು ಶಿರಸಾವಹಿಸಿ ಅಸಂಖ್ಯಾತ ರಥಗಳಿಂದ, ಕುದುರೆಗಳಿಂದ, ಆನೆಗಳಿಂದ, ಕಾಲಾಳುಗಳಿಂದ, ಕೂಡಿದವನಾಗಿ ಶೀಘ್ರ ವಾಗಿ ಆಮೋದ ಪಟ್ಟಣಕ್ಕೆ ಬಂದನು. ದೇವಾಂಗನು ಸೂರ್ಯನ ಮಂತ್ರಿಯಾದ ವೀರಮಾರ್ತಾಂಡನ ಆಗಮನವನ್ನು ತನ್ನ ದೂತರಿಂದ ತಿಳಿದು, ತನ್ನ ಮಂತ್ರಿಗಳನ್ನು ತನ್ನ ಸಮಸ್ತ ಪರಿವಾರದೊಂದಿಗೆ ಸೂರ್ಯನ ಮಂತ್ರಿಯಾದ ವೀರಮಾರ್ತಾಂಡನನ್ನು ಎದುರುಗೊಳ್ಳಲು ಕಳುಹಿಸಿದನು. ದೇವಾಂಗನ ಮಂತ್ರಿಗಳು ಆ ವೀರಮಾರ್ತಾಂಡ ನನ್ನು ದೇವದುಂದುಭಿ, ತೂರ್ಯವಾದ್ಯ ಸಮೇತ ಆದರದಿಂದ ಎದುರುಗೊಂಡು ಆತನನ್ನು ಪುರದೊಳಕ್ಕೆ ಬಹು ಸಂಭ್ರಮದಿಂದ ಕರೆ ತಂದರು. ವೀರಮಾರ್ತಾಂಡನು

ಪಟ್ಟಣವನ್ನು ಪ್ರವೇಶಿಸಿ, ಸಮಸ್ತ ಪರಿವಾರದೊಡನೆ ಅರಮನೆಯನ್ನು ಪ್ರವೇಶಿಸಿದನು.

ಅರಮನೆಯಲ್ಲಿ ದೇವಾಂಗನು ಅವನನ್ನು ಆದರದಿಂದ ಎದುರುಗೊಂಡು ಸತ್ಕರಿಸಿದನು. ಆಗ ವೀರಮಾರ್ತಾಂಡನು ದೇವಾಂಗನನ್ನು ನೋಡಿ ಆದರ ಪೂರ್ವಕವಾಗಿ, ಎಲೈ ದೇವಾಂಗ ರಾಜೇಂದ್ರನೇ ಇಂದಿಗೆ ಮೂರನೆಯ ದಿನಕ್ಕೆ ಸರಿಯಾಗಿ ನಿನ್ನ ಲಗ್ನವು ಸೂರ್ಯನ ತಂಗಿಯಾದ ದೇವದತ್ತೆಯೊಡನೆ ನಿಶ್ಚಯವಾಗಿದೆ. ನೀನು ಕೂಡಲೇ, ಸಮಸ್ತ ಪರಿವಾರದೊಡನೆ ಸೂರ್ಯನ ಪಟ್ಟಣಕ್ಕೆ ಬರಬೇಕೆಂದು ತಿಳಿಸಿದನು. ಅಲ್ಲದೆ ಅಲ್ಲಿದ್ದ ಅವನ ಮಂತ್ರಿಗಳನ್ನೂ, ಬ್ರಾಹ್ಮಣರನ್ನೂ, ಕ್ಷತ್ರಿಯರನ್ನೂ ಉಳಿದ ಸಮಸ್ತ ಸಾಮಾಜಿಕರನ್ನೂ ಲಗ್ನಕ್ಕೆ ಆಹ್ವಾನಿಸಿ, ಈ ದಿನವೇ ಪ್ರಯಾಣ ಬೆಳಸಬೇಕೆಂದು ಕೋರಲು, ಅದಕ್ಕೆ ದೇವಲನು ಎಲೈ ಮಹಾಭಾಗನಾದ ವೀರಮಾರ್ತಾಂಡನೇ ನೀನು ಈ ದಿನ ನಡೆ ನಾವು ಸಮಸ್ತರಿಂದ ಕೂಡಿಕೊಂಡು ನಾಳೆ ಪ್ರಾತಃಕಾಲ ಹೊರಟು ಬರುವೆವು ಎಂದನು. ಸೂರ್ಯನ ಮಂತ್ರಿಯು ಆ ಮಾತಿಗೆ ಒಪ್ಪಿ ತನ್ನ ಸ್ವಸ್ಥಾನಕ್ಕೆ ತೆರಳಿ ದೇವಾಂಗನ ಆಗಮನವನ್ನು ಸೂರ್ಯನಿಗೆ ಅರುಹಿದನು.

ಇದನ್ನು ಕೇಳಿ ಸೂರ್ಯನು ತ್ವಷ್ಟ್ರುವಿನ ಬಳಿಗೆ ಹೋಗಿ ಎಲೈ ಭಗವಂತನೇ ನನ್ನ ತಂಗಿಯಾದ ದೇವದತ್ತೆಯ ಲಗ್ನವು ಅತಿ ಸಮೀಪವಾಗಿರುವುದರಿಂದ, ನೀನು ಈ ಮಂಗಳಕಾರ್ಯದ ಸಲುವಾಗಿ ಶೀಘ್ರವಾಗಿ ಬಂದು ವಿವಾಹ ಮಂಟಪವನ್ನು ನಿರ್ಮಿಸಿಕೊಡು. ಈ ಕಾರ್ಯಕ್ಕೆ ನೀನೇ ಸಮರ್ಥನು ಎಂದನು. ತ್ವಷ್ಟ್ರುವು ಅದಕ್ಕೆ ಬಹು ಸಂತೋಷದಿಂದ ಒಪ್ಪಿ ಶುಭಕರವಾದ ವಿವಾಹ ಮಂಟಪವನ್ನು ನಿರ್ಮಿಸ ತೊಡಗಿದನು.


ಆ ಮಂಟಪವು ಸುವರ್ಣ ಪ್ರಾಕಾರದಿಂದಲೂ, ಹವಳದ ಕಂಭಗಳಿಂದಲೂ ವಜ್ರದ ಹಲಗೆಗಳಿಂದಲೂ ಒಪ್ಪುತ್ತ ರತ್ನದ ಸೋಪಾನಗಳಿಂದಲೂ, ಪುಷ್ಯರಾಗದ ಕದಗಳಿಂದಲೂ ಶೋಭಿಸುತ್ತಿತ್ತು. ಗೋಡೆ ಮತ್ತು ನೆಲಗಟ್ಟುಗಳು ನಾನಾವಿಧವಾದ ರತ್ನದಿಂದ ಕೆತ್ತಲ್ಪಟ್ಟು ನಯನ ಮನೋಹರವಾಗಿತ್ತು. ಅಲ್ಲಲ್ಲಿ ಹಾಕಿದ ವಿರಾಮಾಸನಗಳಿಂದಲೂ ಮಂಚಗಳಿಂದಲೂ ಮತ್ತು ಅನೇಕ ಉನ್ನತ ದ್ವಾರಗಳಿಂದಲೂ ಕೂಡಿದ್ದು ಸಾವಿರ ಕಂಬಗಳ ಏಳು ಸಾಲುಗಳಿಂದೊಂದು ಕಡೆಯೂ, ಸಾವಿರ ಕಂಬಗಳ ಐದುಸಾಲುಗಳಿಂದ ಮತ್ತೊಂದು ಕಡೆಯೂ ಶೋಭಾಯಮಾನವಾಗಿತ್ತು. ರತ್ನಗಳ ಕಾಂತಿಯಿಂದ ಹೊಳೆಯುವ ನಾನಾವಿಧ ಬಣ್ಣಗಳಿಂದ ಯುಕ್ತವಾಗಿದ್ದು ನಾಲ್ಕುದಿಕ್ಕುಗಳಲ್ಲಿಯೂ ಗಾವುದವಿಸ್ತಾರವಾದ ವಿವಾಹ ಮಂಟಪವನ್ನು ವಿಶ್ವಕರ್ಮನು ನಿರ್ಮಿಸಿದನು.

ಆ ಮಂಟಪದ ಮಧ್ಯದಲ್ಲಿ ನೂತನ ವಧೂವರರಿಗಾಗಿ, ರಮ್ಯವಾದ ಮುತ್ತುಗಳಿಂದ ರಚಿತವಾದ ಮುಹೂರ್ತ ಮಂಟಪವನ್ನು ರಚಿಸಿ ಅದರಲ್ಲಿ ವಧೂವರರಿಬ್ಬರೂ

ಕೂಡಲು ಯೋಗ್ಯವಾದ ಚತುಷ್ಕೋಣದ ಪೀಠಗಳೆರಡನ್ನು ನಿರ್ಮಿಸಿದ್ದನು. ಬ್ರಾಹ್ಮಣರಿಗಾಗಿ ಒಂದು ಕಡೆ ಅನೇಕ ಆಸನಗಳನ್ನೂ, ಇನ್ನುಳಿದವರಿಗಾಗಿ ಎಲ್ಲಾ ಕಡೆಯಲ್ಲಿಯೂ ಅನೇಕ ಆಸನಗಳನ್ನೂ, ಉನ್ನತ ಮತ್ತು ತಗ್ಗಾದ ಅನೇಕಾನೇಕ ಆಸನಗಳನ್ನೂ ಸಿದ್ಧಪಡಿಸಿದನು. ಆ ಮಂಟಪವು ಅನೇಕ ರತ್ನದೀಪಗಳಿಂದಲೂ, ಅನೇಕ ಶಿಖರಗಳಿಂದ ಕೂಡಿದ ಶಿವಾಲಯಗಳಿಂದಲೂ, ಅಲಂಕರಿಸಲ್ಪಟ್ಟ ವಿಚಿತ್ರಗಳಾದ ಸುವರ್ಣ ಕುಂಭಗಳಿಂದ ತೇಜೋಮಯವಾಗಿದ್ದು, ಅದನ್ನು ನಿರ್ಮಿಸಲು ವಿಶ್ವಕರ್ಮನು ತನ್ನ ಕರಕೌಶಲವೆಲ್ಲವನ್ನು ಉಪಯೋಗಿಸಿದ್ದನು. ಇಂತಹ ಮನೋಹರವಾದ ವಿವಾಹ ಮಂಟಪವನ್ನು ನಿರ್ಮಿಸಿದ ವಿಶ್ವಕರ್ಮನು ತನ್ನ ಅಳಿಯನಾದ ಸೂರ್ಯನಿಗೆ ಅದೆಲ್ಲವನ್ನೂ ತೋರಿಸಲಾಗಿ ಸೂರ್ಯನು ಸಂತೋಷಪಟ್ಟು ತನ್ನ ಮಾವನಾದ ವಿಶ್ವಕರ್ಮನನ್ನು ಪುನಃಪುನಃ ಹೊಗಳಿ ತನ್ನ ಕೃತಜ್ಞತೆಗಳನ್ನು ಅರ್ಪಿಸಿದನು.

ಇತ್ತ ದೇವಾಂಗ ರಾಜನು, ಕೈಲಾಸಕ್ಕೆ ಹೋಗಿ ತನ್ನ ವಿವಾಹಕ್ಕೆ ಬರಬೇಕೆಂದು ಪ್ರಭುವಾದ ಶಿವನನ್ನು ಭಕ್ತಿಯಿಂದ ವಿನಯಪೂರ್ವಕವಾಗಿ ಪ್ರಾರ್ಥಿಸಿದನು. ವಿಷ್ಣುವನ್ನೂ, ಬ್ರಹ್ಮನನ್ನೂ ಭಕ್ತಿಯಿಂದ ಆಮಂತ್ರಿಸಿದನು. ಇಂದ್ರನನ್ನೂ ದಿಕ್ಪಾಲಕರನ್ನೂ ಆಹ್ವಾನಿಸಿದನು. ಅನೇಕ ಭೂಪಾಲರನ್ನು ತನ್ನ ಮಂತ್ರಿಗಳ ಮೂಲಕ ಕರೆಸಿಕೊಂಡನು. ದೇವಾಂಗನು ಮರುದಿನ ಪ್ರಾತಃಕಾಲದಲ್ಲೆದ್ದು ತನ್ನ ನಿತ್ಯಕರ್ಮಗಳನ್ನು ತೀರಿಸಿಕೊಂಡು ಸುಮುಹೂರ್ತದಲ್ಲಿ ಬ್ರಾಹ್ಮಣ ಸಮೂಹದಿಂದ, ಚತುರಂಗ ಬಲ ಸಮೇತನಾಗಿ ಸ್ತುತಿಪಾಠಕರಿಂದ ಹೊಗಳಿಸಿಕೊಳ್ಳುತ್ತಾ, ಮಂಗಳವಾದ್ಯಗಳ ಸಮೇತನಾಗಿ, ಬಹು ವಿಜೃಂಭಣೆಯಿಂದ ಹೊರಟು ಸೂರ್ಯ ಲೋಕವನ್ನು ಸೇರಿದನು. ಬ್ರಹ್ಮನೇ ಮೊದಲಾದ ದೇವತೆಗಳೂ, ಶಿವನೇ ಮೊದಲಾದ ಮಹಾಗಣಗಳೂ, ವಿಷ್ಣುವೇ ಮೊದಲಾದ ಭಾಗವತರೂ ದೇವಾಂಗನ ವಿವಾಹಕ್ಕೆ ಹೊರಟು ಸೂರ್ಯಲೋಕವನ್ನು ಸೇರಿದರು. ಸೂರ್ಯನೂ ಅವನ ಪರಿವಾರದವರೂ ವಿವಾಹಕ್ಕೆ ಬಂದ ಸಮಸ್ತರನ್ನೂ ಆದರದಿಂದ ಬರಮಾಡಿಕೊಂಡರು.

ಮಹಾತೇಜಸ್ವಿಯಾದ ಸೂರ್ಯನು ತನ್ನ ತಂಗಿಯಾದ ದೇವದತ್ತೆಯನ್ನು ವಿವಾಹ ಮಂಟಪಕ್ಕೆ ನಿಶ್ಚಯಿಸಲ್ಪಟ್ಟ ಶುಭಮುಹೂರ್ತದಲ್ಲಿ ಕರೆತಂದನು. ಸಮಸ್ತ ದೇವತೆಗಳ ಸಮ್ಮುಖದಲ್ಲಿ ತ್ರಿಲೋಕಸುಂದರಿಯೂ, ಬಾಲೆಯೂ, ಸಕಲರನ್ನೂ ಮೋಹಗೊಳಿಸುವವಳೂ, ಪೂರ್ಣಚಂದ್ರಬಿಂಬಾನನೆಯೂ, ಕಮಲಾಕ್ಷಿಯೂ, ಮಂಗಳೆಯೂ, ಮಿಂಚಿನಂತೆ ಹೊಳೆಯುವ ಶರೀರವುಳ್ಳವಳೂ, ಕಮಲದಂತೊಪ್ಪುವ ಪಾದಗಳುಳ್ಳವಳೂ, ಕೀರ್ತಿಮತಿಯೂ, ಮತ್ತು ಮನೋಹರೆಯೂ ಆದ ದೇವದತ್ತೆಯು, ಇಂದ್ರನಿಗೆ ಶಚಿಯು ಒಪ್ಪುವಂತೆ ದೇವಲನಿಗೆ ತಕ್ಕವಳಾಗಿ ಶೋಭಿಸಿ



ಶ್ರೀ ಕೈಲಾಸ ಪರ್ವತದಲ್ಲಿ ಶ್ರೀ ದೇವಾಂಗ ಮನು ಬ್ರಂಹ ರಾಜರುಷಿಯು ಕಶ್ಯಪ ಪುತ್ರಿ ದೇವದತ್ತೆಯಂನ್ನು,
ಶಿವ. ಶಿವೆ, ಶಾರದೆ ಋಷಿ ಸಕಲ ದೇವತ ಪ್ರಮಥರೊಡನೆ-ವಿವಾಹವಾದ ಪ್ರಥಮಾವತಾರದಲ್ಲಿ

ಚಿತ್ರ. ದೇವಾಂಗ ಮತ ಪ್ರಕಾಶಿಕೆ ಕೃಪೆಯಿಂದ.

ದಳು. ದೇವಾಂಗ ರಾಜನು ಬ್ರಹ್ಮನೇ ಮೊದಲಾದ ಸಮಸ್ತ ದೇವತೆಗಳಿಂದ ಆಜ್ಞಾಪ್ತನಾಗಿ ಪ್ರೇಮದಿಂದ ಆ ಕನ್ಯೆಯಾದ ದೇವದತ್ತೆಯ ಕಂಠದಲ್ಲಿ ಮಂಗಳಸೂತ್ರವನ್ನು ಧರಿಸಿದನು. ನೆರೆದಿದ್ದ ಸಮಸ್ತ ಬ್ರಾಹ್ಮಣರು ವೇದ ಮಂತ್ರ ಘೋಷಿಸುತ್ತಿರಲು, ಎಲ್ಲರೂ ನೂತನ ವಧೂವರರ ಮೇಲೆ ಅಕ್ಷತಾರೋಪಣ ಮಾಡಿದರು. ಮುತ್ತೈದೆಯರು ಸೋಬಾನೆ ಪದಗಳನ್ನು ಹಾಡುತ್ತಾ ಆರತಿ ಎತ್ತಿದರು. ಕಲ್ಪವೃಕ್ಷ, ಕಾಮಧೇನು, ಚಿಂತಾಮಣಿಗಳು ಇಂದ್ರನಪ್ಪಣೆಯಂತೆ ನೆರೆದಿದ್ದವರೆಲ್ಲರಿಗೂ ಭೋಜನೋಪಚಾರಾದಿ ಆತಿಥ್ಯವನ್ನು ನಡೆಸಿದುವು. ಈ ರೀತಿ ನಾಲ್ಕು ದಿನಗಳಪರ್ಯಂತ ವಿವಾಹ ಮಹೋತ್ಸವವು ಅತಿ ವಿಜೃಂಭಣೆಯಿಂದ ನಡೆಯಿತು.

ದೇವಾಂಗ ರಾಜನು ಪರಮಾನಂದಭರಿತನಾಗಿ ಭಕ್ತಿಯಿಂದ ಮೊದಲು ಪಾರ್ವತೀ ಪರಮೇಶ್ವರರಿಗೆ ಉತ್ಸವ ಸಮಯದಲ್ಲಿ ವಸ್ತ್ರಗಳನ್ನು ಅರ್ಪಿಸಿದನು. ಬ್ರಹ್ಮ ವಿಷ್ಣುವಾದಿದೇವತೆಗಳಿಗೂ ದಿವ್ಯಾಂಬರಗಳನ್ನು ಉಡುಗೊರೆಯಾಗಿ ಸಮರ್ಪಿಸಿ ವಿವಾಹ ಮಹೋತ್ಸವಕ್ಕೆ ಆಗಮಿಸಿದ್ದ ಸಮಸ್ತರಿಗೂ, ನಾನಾ ವಿಧಗಳಾದ ವಸ್ತ್ರಗಳನ್ನಿತ್ತು, ಆದರಿಸಿ ಸಂತೋಷಗೊಳಿಸಿದನು. ಭೈರವನಿಗೂ ಒಂದು ವಸ್ತ್ರವನ್ನೀಯ ಹೋಗಲು ಭೈರವನು ಅದನ್ನು ನಿರಾಕರಿಸಿ ಸಿಟ್ಟು ಮತ್ತು ಹೊಟ್ಟೆಕಿಚ್ಚುಗಳಿಂದ ಕೂಡಿದವನಾಗಿ, ತಲೆಯಲ್ಲಾಡಿಸುತ್ತಾ, ಎಲೈ ರಾಜನೇ ಬಹುಕಾಲದ ಮೇಲೆ ನನ್ನ ವಿಷಯದಲ್ಲಿ ನಿನಗೆ ಈಗ ಮರುಕವುಂಟಾದಂತೆ ಕಾಣುತ್ತದೆ. ಸಮಸ್ತರಿಗೂ ಈ ಮೊದಲೇ ವಸ್ತ್ರಗಳನ್ನು ಕೊಟ್ಟು, ಉಳಿದ ವಸ್ತ್ರವನ್ನು ನನಗೆ ಕೊಡಲು ಬಂದೆಯಾ ! ಈ ಮೊದಲೇ ನೀನು ನನಗೇಕೆ ವಸ್ತ್ರಗಳನ್ನು ಕೊಡಲಿಲ್ಲ. ಎಲ್ಲರಿಗೂ ಕೊಟ್ಟು ಉಳಿದ ವಸ್ತ್ರವನ್ನು ನಾನು ಸ್ವೀಕರಿಸುವುದಿಲ್ಲ. ಇದು ನನಗೆ ಬೇಕಿಲ್ಲ ಎಂದು ನುಡಿದು ಸುಂದರನಾದ ಆ ಭೈರವನು ದೇವಾಂಗನು ತನಗೆ ಕೊಡಲು ತಂದ ವಸ್ತ್ರವನ್ನು ಅವನ ಕೈಯಿಂದ ಕಿತ್ತುಕೊಂಡು ಅವಿವೇಕದಿಂದ ಚೂರು ಚೂರಾಗಿ ಹರಿದು ಬನ್ನೀಗಿಡದ ಮೇಲೆ ಬಿಸಾಡಿ ನನಗೆ ಉತ್ತಮವಾದ ಶುಭ್ರವಾದ ಸದಾ ಶುಚಿಯಾಗಿರುವ ವಸ್ತ್ರವನ್ನು ಕೊಡೆಂದು ಕೇಳಿದನು.

ದೇವಾಂಗನು ಇದೆಲ್ಲವನ್ನು ನೋಡಿ ಈತನು ದುರ್ಮಾರ್ಗನಾಗಿರುವುದರಿಂದ, ತಾನು ಕೊಡಹೋದ ವಸ್ತ್ರವನ್ನು ಈ ರೀತಿ ಮಾಡಿದನೆಂದು ತಿಳಿದು ಎಲೈ ಭೈರವನೇ ಇನ್ನು ನಿನಗೆ ನಾನು ವಸ್ತ್ರವನ್ನು ಕೊಡುವುದಿಲ್ಲ. ಬಂದ ದಾರಿಯನ್ನು ಹಿಡಿಯೆಂದು ನುಡಿದನು. ಆಗ ದುಷ್ಟ ಭೈರವನು ಗೌರೀಶನ ಬಳಿಗೆ ಬಂದು ಆತನ ಪಾದಗಳಿಗೆ ನಮಸ್ಕರಿಸಿ ಎಲೈ ದೇವನೇ ದೇವಾಂಗನು ಸಮಸ್ತ ದೇವತೆಗಳಿಗೂ ಕ್ರಮವಾಗಿ ವಸ್ತ್ರವನ್ನು ಕೊಟ್ಟು ನನಗೆ ಮಾತ್ರ ವಸ್ತ್ರಗಳನ್ನು ಕೊಡುವುದಿಲ್ಲವೆಂದು ಹೇಳಿದನೆಂದು ಸುಳ್ಳು ಸಂಗತಿಯನ್ನು ತಿಳಿಸಿದನು. ಶಂಕರನು ಇದನ್ನು ಕೇಳಿ ದೇವಾಂಗನನ್ನು ಕರೆದು ಭೈರವನಿಗೆ ಅವನಿಷ್ಟದಂತೆ ಅತಿ ಸ್ವಚ್ಛವಸ್ತ್ರ ಒಂದನ್ನು ವಿಧಿಪ್ರಕಾರ

ಕೊಡೆಂದನು. ಅದಕ್ಕೆ ದೇವಾಂಗನು ಎಲೈ ದೇವೇಶನಾದ ಭಗವಂತನೇ ನಾನು ಈ ಮೊದಲು ಭೈರವನಿಗೆ ಮನೋಹರವಾದ ದಿವ್ಯಾಂಬರವೊಂದನ್ನು ಕೊಡಹೋದೆನು. ಅಗೋ ನೋಡು ಅದು ಬನ್ನೀಗಿಡದ ಮೇಲಿದೆ ಎಂದು ನುಡಿದು ಆಕಡೆ ಬೆರಳು ಮಾಡಿ ತೋರಿಸಿದನು. ಇತ್ತ ಭೈರವನು ಪರಶಿವನನ್ನು ನೋಡಿ, ಎಲೈ ದೇವೇಶನೇ, ಇವನು ಕೊಟ್ಟ ವಸ್ತ್ರವನ್ನು ನಾನು ತೆಗೆದುಕೊಳ್ಳಲು ಉತ್ಸುಕನಾಗದೆ ಅದನ್ನು ಚೂರು ಚೂರಾಗಿ ಹರಿದು ಬನ್ನೀಗಿಡದ ಮೇಲೆ ಎಸೆದನು. ನಾನು ಭಯಂಕರನೂ, ಸದಾ ಶುಚಿಯಾಗಿಯೂ ಇರುವುದರಿಂದ ಈ ರೀತಿ ಮಾಡಿದೆನೆಂದನು. ಹೀಗೆಂದ ಭೈರವನನ್ನು ಶಂಭುವು ನೋಡಿ ಎಲೈ ಕುಮತಿಯೇ, ನೀನು ಇಲ್ಲಿಂದ ತೊಲಗು, ನೀನು ಸದಾ ಬನ್ನೀವೃಕ್ಷದಡಿಯಲ್ಲೇ ವಾಸವಾಗಿರೆಂದು ನುಡಿದನು.

ಇತ್ತ ಸೂರ್ಯನು ಮದಗಜಗಳನ್ನೂ, ವಾಯುವೇಗದಿಂದ ಕೂಡಿದ ಅಶ್ವಗಳನ್ನೂ, ವಿಚಿತ್ರಗಳಾದ ಅನೇಕ ಆಭರಣಗಳನ್ನೂ, ಅನೇಕ ದಾಸಿಯರನ್ನೂ ತಂಗಿಯಾದ ದೇವದತ್ತೆಗೆ ಬಳುವಳಿಯಾಗಿ ಕೊಟ್ಟನು. ಬ್ರಹ್ಮ ವಿಷ್ಣು, ಮಹೇಶ್ವರರು ತಮ್ಮ ತಮ್ಮ ಸ್ವಸ್ಥಾನಗಳಿಗೆ ತೆರಳಿದರು. ಇಂದ್ರನೇ ಮೊದಲಾದ ಸಮಸ್ತ ದೇವತೆಗಳೂ, ಉಳಿದ ಬ್ರಹ್ಮರ್ಷಿಗಳೇ ಮೊದಲಾದವರೆಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಹೋದರು. ದೇವಾಂಗರಾಜನು ಭಾರ್ಯಾಸಮೇತನಾಗಿ ಸಕಲ ಸೇನೆಯಿಂದೊಡಗೂಡಿ, ಛಾಯಾದೇವಿ ಮತ್ತು ಸೂರ್ಯನ ಅಪ್ಪಣೆಯನ್ನು ಪಡೆದು, ಅವರಿಂದ ಬೀಳ್ಕೊಂಡು ಆಮೋದ ಪಟ್ಟಣಕ್ಕೆ ಹೊರಟನು.

ಆಮೋದಪಟ್ಟಣಕ್ಕೆ ಬಂದ ದೇವಾಂಗನು, ಧರ್ಮದಿಂದ ರಾಜ್ಯಪರಿಪಾಲಿಸುತ್ತಾ ಸಮಸ್ತ ಪ್ರಜೆಗಳನ್ನು ಆನಂದಗೊಳಿಸುತ್ತಾ, ಭಾರ್ಯೆಯಾದ ದೇವದತ್ತೆಯೊಡನೆ, ಇಂದ್ರನು ಶಚಿಯೊಡಗೂಡಿ ಸೌಖ್ಯಪಡುವಂತೆ ಬಹುಕಾಲ ಸುಖದಿಂದ ಇದ್ದನು. ಈ ದೇವಾಂಗ ವಿವಾಹ ಚರಿತ್ರೆಯನ್ನು ಯಾರುಭಕ್ತಿಯಿಂದ ಸಂಪೂರ್ಣವಾಗಿ ಕೇಳುವರೋ, ಪ್ರೀತಿಯಿಂದ ಕೇಳಿಸುವರೋ, ಅವರ ಸಕಲಿಷ್ಟಾರ್ಥಗಳು ಸಿದ್ಧಿಸುವುವು. ಯಾರು ದೇವಾಂಗನೃಪತಿಯ ವಿವಾಹ ಮಹೋತ್ಸವ ಕಥಾ ಶ್ರವಣದಲ್ಲಿ ವಸ್ತ್ರಗಳನ್ನು ದಾನವಾಗಿ ಕೊಡುವರೋ ಅವರು ಈಶ್ವರ ಕೃಪೆಯಿಂದ ಬಹುಕಾಲದವರೆವಿಗೂ ಸರ್ವಸುಖವನ್ನನುಭವಿಸುವರು.

ಇಲ್ಲಿಗೆ ಬ್ರಹ್ಮಾಂಡಪುರಾಣದಲ್ಲಿ ಬ್ರಹ್ಮ ನಾರದ ಸಂವಾದ ರೂಪ ಉತ್ತರಖಂಡದ ದೇವಾಂಗ ಚರಿತ್ರೆಯಲ್ಲಿ ದೇವಾಂಗ ವಿವಾಹವೆಂಬ ಹನ್ನೆರಡನೆಯ ಅಧ್ಯಾಯ ಮುಗಿದುದು.

ಹದಿಮೂರನೆಯ ಅಧ್ಯಾಯ

ದೇವಾಂಗ ರಾಜ್ಯ ಪರಿಪಾಲನೆ

ಸೂತನು ಹೇಳುತ್ತಾನೆ " ಮಹಾಪರಾಕ್ರಮಿಯಾದ ದೇವಾಂಗ ರಾಜರ್ಷಿಯು ಪ್ರಜೆಗಳೆಲ್ಲರನ್ನೂ ತನ್ನ ಮಕ್ಕಳಂತೆ ಭಾವಿಸುತ್ತಾ, ಅವರನ್ನು ಆನಂದಗೊಳಿಸುತ್ತಾ, ಭೂಮಿಯನ್ನು ಪರಿಪಾಲಿಸುತ್ತಿದ್ದನು. ದೇವರಾಜನಾದ ಇಂದ್ರನಂತೆ ದೇವಾಂಗನು ಧರ್ಮದಿಂದ ರಾಜ್ಯವಾಳುತ್ತಿದ್ದನು. ಸಮಸ್ತ ಪ್ರಜೆಗಳೂ ಸೌಖ್ಯದಿಂದಿದ್ದರು. ಎಲ್ಲರೂ ಪರಮಾನಂದಭರಿತರಾಗಿರಲು ರಾಜ್ಯವು ದಿನೇ ದಿನೇ ಅಭಿವೃದ್ಧಿಗೊಳ್ಳುತ್ತಿತ್ತು. ಭೂಮಿಯು ಸಮಸ್ತ ಸಸ್ಯಫಲಭರಿತವಾಗಿ ಗುಣವಂತನಾದ ಪತಿಯನ್ನು ಪಡೆದ ಪತಿವ್ರತೆಯಂತೆ ಒಪ್ಪುತ್ತಿತ್ತು. ಮೇಘಗಳು ಸಕಾಲದಲ್ಲಿ ಸಾಕಷ್ಟು ವೃಷ್ಟಿಸುತ್ತಿದ್ದು, ಅತಿವೃಷ್ಟಿ, ಅನಾವೃಷ್ಟಿಯನ್ನೆಂದೂ ಮಾಡುತ್ತಿರಲಿಲ್ಲ. ಪಶುಪಕ್ಷಿ ಮೊದಲಾದ ಸಮಸ್ತ ಪ್ರಾಣಿಗಳಿಗೆ ಯಾವ ಪೀಡೆಯೂ ಇಲ್ಲದೆ ರಾಜ್ಯವು ಶತ್ರುಭಯವಿಲ್ಲದೆ, ಕಾಲಕ್ಕೆ ಸರಿಯಾಗಿ ಮಳೆಯಾಗುತ್ತ, ಭೂಮಿಯು ಸರ್ವೌಷಧಿಗಳಿಂದ ಕೂಡಿ ಸಂಪೂರ್ಣ ಫಲ ಭರಿತವಾಗಿದ್ದು ಸಮಸ್ತರೂ ತಮ್ಮ ತಮ್ಮ ಕೆಲಸ ಕಾರ್ಯಗಳಲ್ಲಿ ಮಗ್ನರಾಗಿ ಸರ್ವ ವಿದ್ಯಾಸಂಪನ್ನರಾಗಿ, ವಿನಯಾಚಾರತತ್ಪರರಾಗಿ ವರ್ತಿಸುತ್ತಿದ್ದರು.

ಬ್ರಾಹ್ಮಣರು ತಪೋನಿಷ್ಠರಾಗಿ ಯಜ್ಞಾದಿ ಸತ್ಕರ್ಮಗಳಲ್ಲಿ ನಿರತರಾಗಿಯೂ, ಕ್ಷತ್ರಿಯರು ವೀರ್ಯಸಂಪನ್ನರಾಗಿಯೂ, ಕಲಾವಿದರು ಕೀರ್ತಿವಂತರಾಗಿಯೂ, ಸುಶೀಲರಾಗಿಯೂ ಇದ್ದರು. ವೈಶ್ಯರು ನಿತ್ಯವೂ ಗೋಪೋಷಣ ತತ್ಪರರಾಗಿಯೂ, ಧನಧಾನ್ಯಸಂಪನ್ನರಾಗಿಯೂ, ಸಕಲ ವ್ಯಾಪಾರಗಳಲ್ಲಿ ಲಾಭಯುಕ್ತರಾಗಿಯೂ, ಸದಾಚಾರಸಂಪನ್ನರಾಗಿಯೂ, ಕೀರ್ತಿ, ವಿನಯಭೂಷಿತರಾಗಿಯೂ, ಪುರಾಣ ಶ್ರವಣೋದ್ಯುಕ್ತರಾಗಿಯೂ, ಸದಾ ಜ್ಞಾನಾಭಿಷಿಗಳಾಗಿಯೂ, ಪೂಜ್ಯರನ್ನು ಪೂಜಿಸುವವರಾಗಿಯೂ ಇದ್ದರು. ಶೂದ್ರರು ಸತ್ಪುರುಷ ಸೇವಾಪರರಾಗಿಯೂ, ಧರ್ಮವನ್ನು ವೃದ್ಧಿಗೊಳಿಸುವವರಾಗಿಯೂ, ಅಧಿಕವಾದ ಧಾನ್ಯಗಳ ವೃದ್ಧಿಯುಳ್ಳವರಾಗಿಯೂ, ಸುಖವಾಗಿ ಬಾಳುತ್ತಿದ್ದರು.

ಆತನ ರಾಜ್ಯದಲ್ಲಿ ಕುಂಟರು, ಕಿವುಡರು, ಕುರುಡರು, ರೋಗಿಗಳು ಯಾರೂ ಇರಲಿಲ್ಲ. ಧೂರ್ತರೂ, ದುಃಖಿತರೂ, ಕುರೂಪಿಗಳೂ ಇರಲಿಲ್ಲ. ಗತಿಸಿದ ವೃದ್ಧ (ಹಿರಿಯ) ರಿಗೆ ಪಿಂಡೋದಕವು ಕೊಡದಿರುವುದು ಕಂಡುಬರುತ್ತಿರಲಿಲ್ಲ. ಸ್ತ್ರೀಯರು ಶೀಲ ಸಂಪನ್ನರಾಗಿ, ಪತಿವ್ರತೆಯರಾಗಿ, ಪತಿವಿಯೋಗವಿಲ್ಲದೆ, ಮುತ್ತೈದೆಯರಾಗಿ, ಸುಖ ಸಂತೋಷದಿಂದಿದ್ದರು. ಆ ರಾಜ್ಯದಲ್ಲಿ ಬಂಜೆಯರು, ದುಶ್ಶೀಲೆಯರು, ದುಷ್ಟೆಯರು ಇಲ್ಲದೆ, ಕೇವಲ ಪತಿಭಕ್ತಿಪರಾಯಣೆಯರಾದ ಪತಿವ್ರತಾಸ್ತ್ರೀಯರೇ ಒಪ್ಪುತ್ತಿದ್ದರು.

ಕಲಹ, ಮಾತ್ಸರ್ಯದ ಮಾತೇ ಇರಲಿಲ್ಲ. ಕೃಪಣರ ಸುದ್ದಿಯಂತೂ ಕೇಳೇ ಇರಲಿಲ್ಲ. ಆಕಸ್ಮಿಕದ ಭಯವೇ ಇಲ್ಲ. ಪ್ರಜೆಗಳೆಲ್ಲರೂ ಅನ್ಯೋನ್ಯ ಸ್ನೇಹಯುಕ್ತರಾಗಿಯೂ, ಸದಾ ಸಂತುಷ್ಟಮನಸ್ಕರಾಗಿಯೂ, ವಿನಯಾಚಾರಸಂಪನ್ನರಾಗಿಯೂ, ಧರ್ಮ ಪರಾಯಣರಾಗಿಯೂ ತಮ್ಮ ತಮ್ಮ ವೃತ್ತಿ ವ್ಯಾಪಾರಗಳಲ್ಲಿ ತತ್ಪರರಾಗಿ ಶೋಭಿಸುತ್ತಿದ್ದರು. ಭೂಮಿಯು ಸರ್ವಸಸ್ಯಸಮೃದ್ಧವಾಗಿ ಪ್ರಜೆಗಳೆಲ್ಲರಿಗೂ ಆನಂದವನ್ನುಂಟು ಮಾಡುತ್ತಿತ್ತು.

ಈ ರೀತಿ ಧರ್ಮದಿಂದ ರಾಜ್ಯವಾಳುತ್ತಿದ್ದ ಮಹಾತೇಜಸ್ವಿಯಾದ ದೇವಾಂಗ ದೇವದತ್ತೆಯರಿಗೆ ತ್ರೇತಾಗ್ನಿಗಳಂತೆ ತೇಜಸ್ವಿಗಳಾದ ಮೂವರುಪುತ್ರರು ಜನಿಸಿದರು. ಅವರಿಗೆ ವೇದೋಕ್ತವಾಗಿ ಜಾತಕರ್ಮಾದಿ ಸಂಸ್ಕಾರಗಳನ್ನು ಮಾಡಿ ಕ್ರಮವಾಗಿ ದಿವ್ಯಾಂಗ, ವಿಮಲಾಂಗ, ಧವಳಾಂಗರೆಂದು ನಾಮಕರಣ ಮಾಡಿದರು. ಈ ಮೂವರೂ ಅಗ್ನಿಯಂತೆ ತೇಜಸ್ವಿಗಳಾಗಿ, ಬಿದಿಗೆಯ ಚಂದ್ರನಂತೆ ವೃದ್ಧಿಹೊಂದುತ್ತ ಮಹಾ ಪರಾಕ್ರಮಶಾಲಿಗಳಾಗಿದ್ದರು. ದೇವಾಂಗ ದೇವದತ್ತೆಯರು ಅವರ ಬಾಲಲೀಲಾ ವಿನೋದ ಕ್ರೀಡಾವಿಲಾಸಗಳಿಂದ ಸಂತೋಷಪಡುತ್ತಾ ಜಯಂತನಿಂದ ಶಚೀ ದೇವೇಂದ್ರರೂ, ಮನ್ಮಥನಿಂದ ಲಕ್ಷ್ಮೀನಾರಾಯಣರೂ, ಷಣ್ಮುಖನಿಂದ ಪಾರ್ವತೀ ಪರಮೇಶ್ವರರೂ ಹರ್ಷ ಪಡುವಂತೆ ಆಮೋದ ಪಟ್ಟಣದಲ್ಲಿ ಆಮೋದದಿಂದ ಕಾಲ ಕಳೆಯುತ್ತಿದ್ದರು. ಅವರು ತಮ್ಮ ಮೂವರು ಪುತ್ರರಿಗೂ ಗರ್ಭಾಷ್ಟಮದಲ್ಲಿ ಉಪನಯನ ಸಂಸ್ಕಾರ (ಬ್ರಹ್ಮೋಪದೇಶ) ಗಳನ್ನು ವಿಧಿವತ್ತಾಗಿ ಮಾಡಿ ವಿದ್ಯಾವಂತ ರಾಗಲು, ಸಮರ್ಥರಾದ ಗುರುಗಳ ಗುರುಕುಲಾಶ್ರಮಕ್ಕೆ ಕಳುಹಿಸಿಕೊಟ್ಟರು. ಅಲ್ಲಿ ಆ ಮೂವರೂ ಸಮಸ್ತ ವಿದ್ಯಾಪಾರಂಗತರೂ, ಧನುರ್ವೇದವಿಶಾರದರೂ, ಸಮರ ಶಾಸ್ತ್ರಕೋವಿದರೂ, ಸಮಸ್ತಾಯುಧ ಮತ್ತು ಸಕಲ ಶಸ್ತ್ರಾಸ್ತ್ರಪ್ರಯೋಗ ಉಪ ಸಂಹಾರಗಳನ್ನು ಪೂರ್ಣಬಲ್ಲವರೂ ಧರ್ಮಪರಾಯಣರೂ ಆಗಿ ಗುರುಗಳನ್ನು ಮೆಚ್ಚಿಸಿ, ಸಂತೋಷಪಡಿಸಿ, ಗುರುದಕ್ಷಿಣೆಯನ್ನು ಸಲ್ಲಿಸಿ ಗೃಹಕ್ಕೆ ಹಿಂದಿರುಗಿದರು.

ಹೀಗೆ ಸಮಸ್ತ ವಿದ್ಯಾ ಪಾರಂಗತರಾಗಿ ಹಿಂದಿರುಗಿದ ತನ್ನ ಮೂವರು ಪುತ್ರರೂ ಪ್ರಾಪ್ತವಯಸ್ಕರಾಗಿರುವುದನ್ನು ಕಂಡ ದೇವಾಂಗ ದೇವದತ್ತೆಯರು ಆ ಮೂವರು ಮಕ್ಕಳಿಗೂ, ತೇಜಸ್ವಿನಿಯರೂ, ಉಜ್ವಲೆಯರೂ, ಸೂರ್ಯಪುತ್ರಿಯರೂ ಆದ ಸ್ವರ್ಣ ಪ್ರಭೆ, ಪದ್ಮಾಕ್ಷಿ, ಚಪಲಾಕ್ಷಿ ಎಂಬುವರನ್ನು ತಂದುಕೊಂಡು ಕ್ರಮವಾಗಿ ದಿವ್ಯಾಂಗ, ವಿಮಲಾಂಗ, ಧವಳಾಂಗರಿಗೆ ಲಗ್ನ ಮಾಡಿದರು. ದೇವದತ್ತೆ ದೇವಾಂಗರು ತಮ್ಮ ಮಕ್ಕಳು ಮತ್ತು ಸೊಸೆಯರಿಂದ ಕೂಡಿದವರಾಗಿ ಸುಖ ಸಂತೋಷಗಳಿಂದ ಕಾಲ ಕಳೆಯುತ್ತಿದ್ದರು. ಹೀಗಿರಲಾಗಿ ದೇವಾಂಗನು ತನ್ನ ಹಿರಿಯ ಮಗ ದಿವ್ಯಾಂಗನಿಗೆ ಯುವರಾಜ ಪಟ್ಟಗಟ್ಟಿ ತಾನು ಮಂತ್ರಿಗಳಿಂದ ಕೂಡಿದವನಾಗಿ ರಾಜ್ಯವಾಳುತ್ತಿದ್ದನು.

ದೇವಾಂಗನಿಗೆ, ಆದಿಶೇಷನ ಪುತ್ರಿ ಚಂದ್ರಲೇಖೆಯೆಂಬ ಪತ್ನಿಯಲ್ಲಿ ಸರ್ವಲಕ್ಷಣ ಸಂಪನ್ನನಾದ ಪುತ್ರನು ಜನಿಸಿದನು. ಅವನಿಗೆ ಸುಧರ್ಮನೆಂದು ನಾಮಕರಣ ಮಾಡಿದರು. ಅವನು ಶುಕ್ಲ ಪಕ್ಷದ ಚಂದ್ರನಂತೆ ದಿನೇ ದಿನೇ ವೃದ್ಧಿಹೊಂದುತ್ತ, ಧರ್ಮಶೀಲನೂ ಮಹಾ ಪರಾಕ್ರಮಿಯೂ ಆಗಿ ವಿಖ್ಯಾತನಾದನು. ಹೀಗಿರಲಾಗಿ ಕರೂಷದೇಶಾಧಿಪತಿಯೂ ಮಹಾ ಪರಾಕ್ರಮಿಯೂ ಆದ ಶೂರಸೇನಮಹಾರಾಜನು ಬಲಗರ್ವಿತನಾಗಿ ದೇವಾಂಗನ ರಾಜ್ಯದ ಮೇಲೆ ದಂಡೆತ್ತಿ ಬಂದು ರಾಷ್ಟ್ರವನ್ನು ಕ್ಷೋಭೆಗೊಳಿಸಿದನು. ದೇವಾಂಗನು ಈ ಅನಿಷ್ಟಕಾರಕ ಸುದ್ದಿಯನ್ನು ಕೇಳಿದೊಡನೆ ತನ್ನ ಸಮಸ್ತ ಸೇನಾ ಸಮೇತವಾಗಿ ಶೂರಸೇನ ರಾಜನ ಮೇಲೆ ಯುದ್ಧಕ್ಕೆ ಹೊರಟು, ರಣರಂಗದಲ್ಲಿ ತನ್ನ ನಿಜಬಲ ಪರಾಕ್ರಮಗಳಿಂದ ಅವನನ್ನು ಕೊಂದು ಅವನ ರಾಜ್ಯಕ್ಕೆ ತನ್ನ ಮಗನಾದ ಧರ್ಮಶೀಲನಾದ ಸುಧರ್ಮನನ್ನು ರಾಜನನ್ನಾಗಿ ನೇಮಿಸಿ ರಾಜಧಾನಿಯಾದ 'ಪುಂಡರೀಕ' ಪಟ್ಟಣದಲ್ಲಿ ಅವನಿಗೆ ರಾಜ್ಯ ಪಟ್ಟಾಭಿಷೇಕ ಮಾಡಿದನು. ಧರ್ಮಜ್ಞನಾಸಿರುದ ಸುಧರ್ಮನು ತನ್ನ ತಂದೆಯಂತೆ ಧರ್ಮದಿಂದ ರಾಜ್ಯವನ್ನಾಳುತ್ತಿದ್ದನು.

ಕರೂಷ ದೇಶಾಧಿಪತಿಯೂ, ಮಹಾತೇಜಸ್ವಿಯೂ ಆದ ದೇವಾಂಗ ಪುತ್ರನಾದ ಸುಧರ್ಮನಿಗೆ ಅವಂತಿ ರಾಜನು ರೂಪವತಿಯಾದ ತನ್ನ ಪುತ್ರಿ ಪುಷ್ಕಲಿಯನ್ನು ಮದುವೆ ಮಾಡಿಕೊಟ್ಟನು. ಸುಧರ್ಮನು ತನ್ನ ಪತ್ನಿ ಪುಷ್ಕಲಿಯೊಡಗೂಡಿ, ಆನಂದ ಯುಕ್ತನಾಗಿ ತನ್ನ ಕರೂಷದೇಶವನ್ನು ಆಳುತ್ತಿದ್ದನು. ದೇವಾಂಗ ರಾಜನೂ ಸಹ ಆಮೋದ ಪಟ್ಟಣದಲ್ಲಿ ತನ್ನ ಇತರ ಪುತ್ರರಿಂದ ಕೂಡಿಕೊಂಡು ಸಂತೋಷದಿಂದ ರಾಜ್ಯವಾಳುತ್ತಿದ್ದನು.

"ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿ ಬ್ರಹ್ಮನಾರದ ಸಂವಾದರೂಪ ಉತ್ತರ ಖಂಡದ ದೇವಾಂಗ ಚರಿತ್ರೆಯಲ್ಲಿ ದೇವಾಂಗರಾಜ್ಯಪರಿಪಾಲನವೆಂಬ ಹದಿಮೂರನೆಯ ಅಧ್ಯಾಯ ಮುಗಿದುದು."

ಹದಿನಾಲ್ಕನೆಯ ಅಧ್ಯಾಯ

ರಾಕ್ಷಸರ ಯುದ್ಧಸಿದ್ಧತೆ

ಸೂತನು ಹೇಳುತ್ತಾನೆ. ಎಲೈ ಋಷಿ ಪುಂಗವರೇ ವಸ್ತ್ರಹೀನರಾದ ರಾಕ್ಷಸರು, ದಿವ್ಯವಸ್ತ್ರಭೂಷಿತರಾದ ದೇವತೆಗಳು ಮತ್ತು ಗಂಧರ್ವರು ತಮ್ಮನ್ನು ಅಪಹಾಸ್ಯ ಮಾಡುವುದನ್ನು ಕಂಡು ತಮ್ಮ ರಾಜನಾದ ವಜ್ರದಂಷ್ಟ್ರನೆಂಬ ರಾಕ್ಷಸನಿಗೆ ತಮ್ಮ ಬಗ್ಗೆ ದೇವತೆಗಳೂ ಗಂಧರ್ವರೂ ಅವಿನಯವಾಗಿ ವರ್ತಿಸುತ್ತಿರುವುದನ್ನು ಅರುಹಿದರು.

ಆ ವಜ್ರದಂಷ್ಟ್ರನು ಅವರ ಮಾತನ್ನು ಕೇಳಿ ಪೂರ್ವಾಗ್ರಹ ಪೀಡಿತನಾಗಿ ದೇವತೆಗಳ ಶ್ರೇಯೋಭಿವೃದ್ಧಿಯನ್ನು ಸಹಿಸದೆ ಇಂದ್ರನ ಸಹಿತ ಸಮಸ್ತ ದೇವತೆಗಳನ್ನೂ ಸೋಲಿಸಿ, ತಾನೇ ನಿಷ್ಕಂಟಕನಾಗಿ, ತ್ರಿಲೋಕಾಧಿಪತಿಯಾಗಿ ಮೆರೆಯಬೇಕೆಂದು ಯೋಚಿಸಿ ಆ ದುರ್ಬುದ್ಧಿಯು ತನ್ನ ಸೋದರರಾದ ವ್ಯಾಘ್ರವಕ್ತ್ರ, ಸರ್ಪಜಿಹ್ವರನ್ನು ಕರೆದು ಎಲೈ ಸೋದರರೇ ದೇವತೆಗಳ ಶ್ರೇಯಸ್ಸನ್ನು ನೀವಿಂದು ಕೇಳಿದಿರಾ? ದೇವತೆಗಳು ದಿವ್ಯವಸ್ತ್ರಾಲಂಕೃತರಾಗಿ ಸೊಕ್ಕಿನಿಂದ ವಸ್ತ್ರಹೀನರಾದ ನಮ್ಮನ್ನು ನೋಡಿ ಬಹು ವಿಧವಾಗಿ ಹಾಸ್ಯ ಮಾಡುತ್ತಾ ವಿನೋದ ಪಡುತ್ತಿರುವರು.

ವಸ್ತ್ರಕರ್ತೃವಾದ ದೇವಾಂಗರಾಜನಾದರೋ ಆ ದೇವತೆಗಳನ್ನು ಹಿಂಬಾಲಿಸಿ ತಾನು ನೇಯ್ದ ದಿವ್ಯಾಂಬರಗಳನ್ನು ಸಮಸ್ತ ದೇವತೆಗಳಿಗೂ ಮನುಷ್ಯರಿಗೂ ಸರ್ವಲೋಕದವರಿಗೂ ಕೊಟ್ಟು ನಮಗೆ ಒಂದು ವಸ್ತ್ರವನ್ನಾದರೂ ಕೊಡಲಿಲ್ಲ. ಆ ದೇವಾಂಗನಿಗೆ ಎಷ್ಟು ಸೊಕ್ಕು? ನೋಡಿದಿರಾ! ಈಶ್ವರನಾದರೂ ತನ್ನ ಸಭೆಯಲ್ಲಿ ನಮಗೆ ಒಂದು ವಸ್ತ್ರವನ್ನಾದರೂ ಕೊಡಿಸಲಿಲ್ಲ. ಲೋಕದಲ್ಲಿ ನಮ್ಮ ಹೊರತು ಸಮಸ್ತ ಜನರೂ ವಸ್ತ್ರ ಭೂಷಿತರಾಗಿಯೇ ಇರುವರು. ವಸ್ತ್ರಾಲಂಕೃತರಾದ ದೇವತೆಗಳನ್ನು ನೋಡಿ, ನನ್ನ ಮನಸ್ಸು ಬಹಳ ಖೇದಗೊಂಡಿರುವುದು. ಪೌರುಷ ಹೀನರಂತೆ ನಾವು ಹಾಸ್ಯಾಸ್ಪದರಾದೆವು. ಆದುದರಿಂದ ಎಲೈ ಸೋದರರೇ, ಈಗ ನಾವು ಸುಮ್ಮನೆ ಕೂಡುವುದು ತರವಲ್ಲ. ಪರಾಕ್ರಮಯುಕ್ತರಾಗಿ ದೇವತೆಗಳ ಸಂಭ್ರಮವನ್ನು ಕೊನೆಗಾಣಿಸಿ ಇಂದ್ರನನ್ನು ಜಯಿಸಿ, ಅವನನ್ನು ಸ್ವರ್ಗದಿಂದ ಓಡಿಸಿ ವೈರಿರಹಿತರಾಗಿ ನಾವೇ ಮೂರು ಲೋಕಗಳಿಗೂ ಅಧಿಪತಿಗಳಾಗಬೇಕು. ಹೀಗೆ ಮಾಡಿದರೆ ಮಾತ್ರ ನಾವೇ ಮೂರು ಲೋಕಗಳಲ್ಲಿಯೂ ವಿಜೃಂಭಿಸುವೆವು ಎಂದು ಅಣ್ಣನಾದ ವಜ್ರದಂಷ್ಟ್ರನು ಹೇಳಿದನು.

ಅದಕ್ಕೆ ಅವರೀರ್ವರೂ ಅವನನ್ನು ಕುರಿತು ಎಲೈ ಬುದ್ಧಿವಂತನಾದ ಹಿರಿಯಣ್ಣನೇ, ದೇವತೆಗಳು ನಮ್ಮನ್ನು ನೋಡಿ ನಗುತ್ತಾರೆಂದು ನುಡಿದೆಯಲ್ಲವೆ? ಸತ್ಯವೇ ಅಹುದು. ಸಂದೇಹವೇನೂ ಇಲ್ಲ! ಎಲೈ ದೈತ್ಯವಲ್ಲಭನೇ ಒಂದು ಮಾತು. ಬಹು ಪರಾಕ್ರಮಿಯಾದ ದೇವೇಂದ್ರನನ್ನು ಗೆಲ್ಲುವುದು ಕಠಿಣವಲ್ಲವೆ? ಒಂದು ಸಮಯ ಗೆದ್ದರೆ ಇದನ್ನು ತಿಳಿದು ವಿಷ್ಣುವು ಯುದ್ಧಕ್ಕೆ ಬರದಿರುವನೆ? ಹೀಗೆ ಯುದ್ಧಕ್ಕೆ ಬಂದ ವಿಷ್ಣುವನ್ನು, ವೈರಿಗಳಿಗೆ ದುಸ್ಸಾಧ್ಯನೂ, ದುರ್ಜಯನೂ ಆದ ಆ ದೈತ್ಯಾರಿಯನ್ನು ರಣರಂಗದಲ್ಲಿ ನಮ್ಮಿಂದ ಜಯಿಸಲು ಸಾಧ್ಯವೆ? ಅವನು ಶಾರ್ಙ್ಗಧನ್ವನು, ಅಚ್ಯುತನು. ಈ ಮೂರು ಲೋಕಗಳಲ್ಲಿಯೂ ಆ ವಿಷ್ಣುವಿನ ಹೊರತು ನಮ್ಮೊಡನೆ ಯುದ್ಧಮಾಡಲು ಶಕ್ತರಾದ ವೀರರಾರಿರುವರು? ರಣರಂಗದಲ್ಲಿ ಆ ವಿಷ್ಣುವನ್ನು ತಡೆಯುವುದು ಮಾತ್ರ ನಮ್ಮಿಂದಾಗುವುದೇ? ಎಂದರು.

ಹೀಗೆಂದ ಅವರನ್ನು ನೋಡಿ ರಾಕ್ಷಸಾಧಿಪತಿಯಾದ ವಜ್ರದಂಷ್ಟ್ರನು ಪುನಃ ಆಲೋಚಿಸಿ ಎಲೈ ಸೋದರರೇ, ಹೀಗೇಕೆ ಅಂಜುವಿರಿ. ಇಂದ್ರನನ್ನು ಓಡಿಸಲು ಚಕ್ರ ಧಾರಿಯಾದ ವಿಷ್ಣುವು ಯುದ್ಧಕ್ಕೆ ಬರುವನು. ನಮ್ಮನ್ನು ನೋಡಿ ಹಾಸ್ಯಮಾಡುವ ದೇವತೆಗಳನ್ನೂ ದೇವೇಂದ್ರನನ್ನೂ ನಾವು ರಣರಂಗದಲ್ಲಿ ತೀಕ್ಷ್ಣಗಳಾದ ಬಾಣಗಳಿಂದ ಘಾಸಿಗೊಳಿಸಿ ದಶದಿಕ್ಕುಗಳಿಗೂ ಓಡಿಸೋಣ. ನಮ್ಮನ್ನು ಅವಮಾನಮಾಡಿದ ಆ ದುರಾತ್ಮರಿಗೆ ಹೀಗೆ ಶಾಸ್ತಿಮಾಡುವುದೇ ಸರಿ. "ಇಷ್ಟಾದರೆ ನನ್ನ ಮನೋರಥವು ನೆರವೇರುವುದು" ದೇವತೆಗಳನ್ನು ಕೊಲ್ಲಬೇಕೆಂಬುದೇ ನನ್ನ ಪ್ರಥಮ ಅಭಿಪ್ರಾಯ. ಈಗ ಆ ದೇವತೆಗಳನ್ನು ಪೀಡಿಸಿ ಸ್ವರ್ಗದಿಂದ ಓಡಿಸಿದರೆ ನನ್ನ ಮನೋರಥವು ಸಫಲ ನಾಗುವುದು. ಆ ಮೇಲೆ ಯುದ್ಧಕ್ಕೆ ಬಂದ ವಿಷ್ಣುವನ್ನಾಗಲೀ, ಜಿಷ್ಣುವನ್ನಾಗಲೀ ನೋಡಿಕೊಳ್ಳೋಣ. ಆ ಸಮಯಕ್ಕೆ ಸರಿಯಾದ ಆಲೋಚನೆಯನ್ನು ಮಾಡೋಣ. ನೀವು ಯುದ್ಧಕ್ಕೆ ಮೊದಲೇ ವಿಷ್ಣುವಿಗೆ ಏಕೆ ಭಯ ಪಡುವಿರಿ? ನಾವು ಕಠಿಣವಾದ ವ್ರತ ಹಿಡಿದು ನಾಶರಹಿತನಾದ ಶಿವನನ್ನು ಕುರಿತು ತಪಸ್ಸು ಮಾಡೋಣ. ಮಹಾದೇವನಾದ ಶಂಕರನನ್ನು ಮೆಚ್ಚಿಸಿ ವರವನ್ನು ಪಡೆದು ಇಂದ್ರಸಮೇತರಾದ ಸಮಸ್ತ ದೇವತೆಗಳನ್ನು ಗೆದ್ದರೆ ನಮಗಾದ ಅಪಮಾನಕ್ಕೆ ಪ್ರತೀಕಾರ ಕೈಗೊಂಡಂತಾಗು ವುದು. ಆ ಮೇಲೆ ಮುಂದಿನ ಕಾರ್ಯವನ್ನು ಆಲೋಚಿಸೋಣ. ಈಗ ನಾವು ಏನು ಮಾಡಬೇಕೆಂಬುದನ್ನು ಹೇಳಿರಿ ಎಂದನು. ಅಣ್ಣನಾದ ವಜ್ರದಂಷ್ಟ್ರನ ಈ ಮಾತನ್ನು ಕೇಳಿ ಶಿವನನ್ನು ಕುರಿತು ತಪಸ್ಸುಮಾಡಿ, ವರವನ್ನು ಪಡೆಯುವುದೇ ಸರಿ ಎಂದು ಆ ಮೂವರೂ ನಿಶ್ಚಯಿಸಿ ಭಗವಂತನಾದ ಶಂಕರನನ್ನು ಕುರಿತು ತಪಸ್ಸನ್ನಾಚರಿಸುವುದಕ್ಕಾಗಿ ಯೋಗ್ಯಸ್ಥಳವನ್ನು ಕುರಿತು ಹೊರಟರು."

ಹೀಗೆ ಹೊರಟ ಆ ಮೂವರು ಅಣ್ಣತಮ್ಮಂದಿರು ಬಹು ಭಯಂಕರವ್ರತ ನಿಯಮಗಳಿಂದ ಕೂಡಿದವರಾಗಿ ಬಹು ಕಠಿಣವಾದ ಘೋರ ತಪಸ್ಸಿನಿಂದ ತಮ್ಮ ಶರೀರಗಳನ್ನು ಕೃಶಗೊಳಿಸಿದರು. ಭಕ್ತಪರಾಧೀನನಾದ ಶಂಕರನು ಅವರ ಘೋರ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾಗಿ ಎಲೈ ರಾಕ್ಷಸೋತ್ತಮರೇ ನಿಮ್ಮ ಈ ಘೋರ ತಪಸ್ಸಿನಿಂದ ನಾನು ಸಂತುಷ್ಟನಾದೆ ನಿಮ್ಮಿಷ್ಟಾರ್ಥವೇನು? ಬೇಡಿರಿ, ನೆರವೇರಿಸುವೆನು ಎಂದನು. ಪ್ರತ್ಯಕ್ಷನಾದ ಶಂಭುವನ್ನು ಕಂಡ ದೈತ್ಯರು ಎಲೈ ದೇವದೇವೇಶನಾದ ಭಗವಂತನೇ, ನೀನು ನಮ್ಮ ತಪಸ್ಸಿನಿಂದ ಸಂತುಷ್ಟನಾಗಿರುವುದು ನಿಜವಾದರೆ ಸೂರ್ಯನ ಪ್ರಕಾಶವು ಯಾವಾಗಲೂ ಇಲ್ಲದಂತಾಗಲಿ. ಇದೇ ನಮ್ಮ ಇಷ್ಟಾರ್ಥ. ಇದನ್ನು ನೀನು ನೆರವೇರಿಸು ಎಂದು ದೈವದಿಂದ ವಂಚಿತರಾದ ಆ ದಾನವರು ಪ್ರಾರ್ಥಿಸಿದರು.

ಅದಕ್ಕೆ ಪರಮಾತ್ಮನು ಎಲೈ ದೈತ್ಯಶ್ರೇಷ್ಠರೇ, ಲೋಕನಾಶಕರವಾದ ವರವನ್ನು ನೀವೀಗ ಬೇಡಿದಿರಿ. ಸೂರ್ಯನು ತ್ರಿಮೂರ್ತಿಸ್ವರೂಪನೂ ಸರ್ವದೇವಾತ್ಮನೂ

ಜಗಚ್ಚಕ್ಷುವೂ, ಸರ್ವಕರ್ಮಸಾಕ್ಷಿಯೂ, ಜಗದ್ರಕ್ಷಕನೂ, ಸೃಷ್ಟಿ, ಸ್ಥಿತಿ, ಲಯಕರ್ತನೂ ಪುಣ್ಯವಂತರಿಗೆ ಪರಮಪ್ರಾಪ್ಯಸ್ಥಾನನೂ ಆಗಿರುವನು. ಸೂರ್ಯೋದಯವಾದರೇನೇ ಸಮಸ್ತ ಜನರೂ ತಮ್ಮ ತಮ್ಮ ನಿತ್ಯ ಕೆಲಸ ಕಾರ್ಯಗಳಲ್ಲಿ ತೊಡಗುವರು ಸಕಲ ಲೋಕಗಳೂ ಎಚ್ಚರಗೊಳ್ಳುವುವು. ಅವನು ಅಸ್ತಂಗತನಾದರೆ ಸಮಸ್ತ ಲೋಕಗಳೂ ನಿದ್ರಾವಶವಾಗುವುವು. ಹೀಗಿರುವಲ್ಲಿ ಜಗತ್ಪ್ರಕಾಶಕನಾದ ಸೂರ್ಯನು ಗತಪ್ರಭನಾದರೆ ಆತನ ಉದಯಾಸ್ತಗಳು ತಿಳಿಯದಂತಾಗಿ ಸಮಸ್ತರೂ ಗಾಢಾಂಧಕಾರದಲ್ಲಿ ಹೇಗೆ ತಾನೇ ನಿರ್ಭಯದಿಂದಿದ್ದು ಓಡಾಡುವರು? ನಿರ್ಮಲವಾದ ಸತ್ಕರ್ಮಗಳಿಗೆ ಯಾವ ಗತಿ ಯಾದೀತು? ಎಲೈ ನಿಶಾಚರರೇ, ಪೂರ್ವಾಪರವಿಚಾರವಿಲ್ಲದೆ ಈ ವರವನ್ನು ಯಾಚಿಸಿದಿರಿ. ನಾನು ನಿಮ್ಮ ಇಷ್ಟಾರ್ಥವನ್ನು ನೆರವೇರಿಸಿದರೆ ಸರ್ವ ನಾಶವೇ ಆಗುವುದು. ಆದುದರಿಂದ ಈ ವರವನ್ನು ಕೊಡಲಾರೆ. ಇದನ್ನುಳಿದು ಬೇರೆ ಯಾವು ದಾದರೂ ವರವನ್ನು ಯಾಚಿಸಿರಿ ಕೊಡಲು ಸಿದ್ಧನಿರುವೆನೆಂದು ನುಡಿದನು. ಭಗವಂತನ ಈ ನುಡಿಯನ್ನು ಕೇಳಿದ ಆ ರಾಕ್ಷಸರು ಖಿನ್ನರಾಗಿ ಶಿವನನ್ನು ಕುರಿತು ಎಲೈ ಭಗವಂತನೇ, ದೇವದೇವ ದೇವನಾದ ಶಂಕರನೇ ನೀನು ಭಕ್ತವತ್ಸಲನಾದುದರಿಂದ ಸೂರ್ಯನ ಪ್ರಭೆಯು ಒಂದುವರ್ಷಕಾಲವಾದರೂ ಪ್ರಕಾಶಮಾನವಾಗದಿರುವಂತೆ ವರ ಕರುಣಿಸೆಂದು ಪ್ರಾರ್ಥಿಸಿದರು. ಅದಕ್ಕೆ ಪರಮಾತ್ಮನು ಕ್ಷಣಕಾಲ ಯೋಚಿಸಿ ಹಾಗೆಯೇ ಆಗಲೆಂದು ವರವನ್ನಿತ್ತು ಅಂತರ್ಧಾನನಾದನು.

ಒಡನೆಯೇ ಬ್ರಹ್ಮಾಂಡದಲ್ಲಿ ಎಲ್ಲೆಲ್ಲೂ ಕಾಡಿಗೆಯಂತೆ ಕಪ್ಪಾದ ಗಾಢಾಂಧ ಕಾರವು ವ್ಯಾಪಿಸಲಾಗಿ ಸಮಸ್ತ ಪರ್ವತಗಳು ಕಾಡಿಗೆಯಿಂದ ಲೇಪನಮಾಡಲ್ಪಟ್ಟಂತೆ, ಚರಾಚರಾತ್ಮಕವಾದ ಸಮಸ್ತಜಗತ್ತಿನಲ್ಲಿ ಈ ಕತ್ತಲೆಯಿಂದಾಗಿ ಏನೂ ಕಾಣ ದಂತಾಯಿತು. ರಾಕ್ಷಸಾಧಿಪತಿಯಾದ ವಜ್ರದಂಷ್ಟ್ರನು ತನ್ನ ಸಹೋದರರೊಡನೆ ರಾಜಧಾನಿಯಾದ ವೀರಮಾಹೇಂದ್ರಪಟ್ಟಣಕ್ಕೆ ಬಂದು ಕೂಡಲೇ ದೂತರನ್ನು ಕರೆದು, ಎಲೈ ದೂತರೇ ನೀವು ಈಗಲೇ ನಾಲ್ಕು ದಿಕ್ಕುಗಳಿಗೂ ಹೋಗಿ ಎಲ್ಲೆಲ್ಲಿ ರಾಕ್ಷಸರಿರುವರೋ, ಅಲ್ಲೆಲ್ಲಾ, ಅವರೆಲ್ಲರಿಗೂ ನಾವು ತಪಸ್ಸನ್ನು ಮಾಡಿ ಈಶ್ವರನಿಂದ ಪಡೆದಿರುವ ವರದ ವಿಷಯವನ್ನು ತಿಳಿಸಿ ದೇವತೆಗಳೊಡನೆ ಯುದ್ಧ ಮಾಡುವುದಕ್ಕಾಗಿ ಬರಬೇಕೆಂದು ಆಹ್ವಾನಿಸಿ ಈಗಲೇ ಯುದ್ಧಕ್ಕೆ ಹೊರಡಬೇಕೆಂದು ಹುರಿದುಂಬಿಸಿ ಅವರೆಲ್ಲರನ್ನು ಈ ದಿನವೇ ಕರೆದುಕೊಂಡು ಬರಬೇಕೆಂದು ಆಜ್ಞಾಪಿಸಿದನು.

ವಜ್ರದಂಷ್ಟ್ರನಿಂದ ಆಜ್ಞಪ್ತರಾದ ಆ ದೂತರು ಅದರಂತೆ ಸಮಸ್ತ ದಿಕ್ಕುಗಳಿಗೂ ಹೋಗಿ ಅಲ್ಲಲ್ಲಿದ್ದ ರಾಕ್ಷಸರನ್ನು ನೋಡಿ ಅವರಿಗೆ ತಮ್ಮೊಡೆಯನ ಅಪ್ಪಣೆಯನ್ನು ತಿಳಿಸಿ ಅವರನ್ನು ಯುದ್ಧಕ್ಕೆ ಪ್ರೋತ್ಸಾಹಿಸಿ, ಹುರಿದುಂಬಿಸಿ ಯುದ್ಧಕ್ಕೆ ಸಿದ್ಧಗೊಳಿಸಿ ಅವರೊಂದಿಗೆ ಶೀಘ್ರವಾಗಿ ರಾಜಧಾನಿಗೆ ಬಂದರು. ಈ ರೀತಿ ಸಮಸ್ತ ರಾಕ್ಷಸರೂ ದೇವತೆಗಳ ಮೇಲೆ ಯುದ್ಧ ಮಾಡುವುದಕ್ಕೆ ಸಿದ್ಧರಾಗಿ ಒಂದೆಡೆ ಸೇರಿದರು.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿ ಬ್ರಹ್ಮನಾರದ ಸಂವಾದರೂಪ ಉತ್ತರ ಖಂಡದ ದೇವಾಂಗ ಚರಿತ್ರೆಯಲ್ಲಿ ರಾಕ್ಷಸರ ಯುದ್ಧಸಿದ್ಧತೆ ಎಂಟ ಹದಿನಾಲ್ಕನೆಯ ಅಧ್ಯಾಯ ಮುಗಿದುದು.

ಹದಿನೈದನೆಯ ಅಧ್ಯಾಯ

ದೇವ ದಾನವರ ಯುದ್ಧ

ಸೂತನೆನ್ನುತ್ತಾನೆ. ರಾಕ್ಷಸೇಂದ್ರನಾದ ವಜ್ರದಂಷ್ಟ್ರನು ಚತುರಂಗಬಲ ಸಮೇತ ನಾಗಿ ದೇವತೆಗಳ ಮೇಲೆ ಯುದ್ಧಮಾಡಲು ಕಂಕಣಬದ್ಧನಾಗಿ ತನ್ನ ರಾಜಧಾನಿಯಾದ ವೀರಮಾಹೇಂದ್ರಪಟ್ಟಣಕ್ಕೆ ಬಂದು ಸೇರಿದ ಪರಾಕ್ರಮಶಾಲಿಗಳೂ, ಯುದ್ಧೋ ತ್ಸಾಹಿಗಳೂ ಆದ ಸಮಸ್ತ ದಾನವರೊಡಗೂಡಿ ಅಟ್ಟಹಾಸದಿಂದ ಸ್ವರ್ಗವನ್ನು ಕುರಿತು ಹೊರಟನು. ಅವನೊಡನೆ ಅವನ ಸಹೋದರರಾದ ವ್ಯಾಘ್ರವಕ್ತ್ರ, ಸರ್ಪಜಿಹ್ವರು ಅನೇಕ ಸೇನಾಯುಕ್ತರಾಗಿ ಯುದ್ಧೋನ್ಮತ್ತರಾಗಿ ಪ್ರಯಾಣಮಾಡಿದರು. ಸೂರ್ಯ ಕೋಪ, ಅಗ್ನಿಕೋಪರೆಂಬ ವಜ್ರದಂಷ್ಟ್ರನ ಮಕ್ಕಳೂ ಸಕಲಬಲಸಮೇತರಾಗಿ ತಂದೆ ಯೊಡನೆ ಹೊರಟರು. ವಜ್ರದಂಷ್ಟ್ರನ ತಂಗಿಯಮಕ್ಕಳಾದ ಧೂಮ್ರನೇತ್ರ, ಖಡ್ಗ ಜಿಹ್ವರೆಂಬುವರು ಸಹ ತಮ್ಮ ಚತುರಂಗಬಲಸಮೇತರಾಗಿ, ಮಹಾವೀರರಾದ ರಾಕ್ಷಸ ರಿಂದ ಕೂಡಿಕೊಂಡು ವಜ್ರದಂಷ್ಟ್ರನಿಗೆ ಸಹಾಯಕರಾಗಿ ಅವನನ್ನು ಹಿಂಬಾಲಿಸಿದರು.

ಆ ರಾಕ್ಷಸಮಹಾಸೈನ್ಯವು ಯುದ್ಧಸೂಚಕ ಭೇರಿ, ಕಹಳೆ, ಕೊಂಬು ಮೊದಲಾದ ರಣವಾದ್ಯಗಳನ್ನು ಬಾರಿಸುತ್ತ ಸ್ವರ್ಗವನ್ನು ಜಯಿಸಲಿಚ್ಛೆಯಿಂದ ಮಹಾಬಲಸಂಪನ್ನ ರಾದ ರಾಕ್ಷಸರಿಂದ ಕೂಡಿ ಧನುಷ್ಟೇಂಕಾರ ಮಾಡುತ್ತ, ಭಯಂಕರಗಳಾದ ಸಿಂಹನಾದ ಗಳನ್ನು ಮಾಡುತ್ತ ಸ್ವರ್ಗದ ಸಮಸ್ತದ್ವಾರಗಳನ್ನೂ ಮುತ್ತಿದರು. ದೇವತೆಗಳು, ರಾಕ್ಷಸರು ಯುದ್ಧಸನ್ನದ್ಧರಾಗಿ ಬಂದಿರುವುದನ್ನು ತಿಳಿದು ಸಮಸ್ತಸೇನಾಸಮೇತರಾಗಿ ತಾವೂ ಯುದ್ಧಸನ್ನದ್ಧರಾಗಿ ಅತ್ಯಂತ ಕೋಪದಿಂದ ಆ ದೈತ್ಯರೊಡನೆ ಯುದ್ಧ ಪ್ರಾರಂಭಿಸಿ ರಾಕ್ಷಸ ಸೈನ್ಯದಲ್ಲಿ ಅನೇಕ ರಾಕ್ಷಸರನ್ನು ಕೊಂದರು. ಅನೇಕರ ಶಿರಸ್ಸುಗಳನ್ನು ಕಡಿದರು. ಅನೇಕ ರಥಗಳನ್ನು ಪುಡಿಪುಡಿಮಾಡಿ ಅಶ್ವಗಳನ್ನೂ, ಗಜಗಳನ್ನೂ, ಕಾಲಾಳು ಗಳನ್ನೂ ಗತಪ್ರಾಣವನ್ನಾಗಿ ಮಾಡಿ ನೆಲಕ್ಕೆ ಕೆಡಹಿದರು. ಮಹಾ ರಥಿಕರಾದ ರಾಕ್ಷಸರನ್ನು ಅವರವರ ಸಾರಥಿ, ರಥ, ಅಶ್ವ, ಆಯುಧಸಮೇತ, ತಮ್ಮ ಯಮದಂಡ ಸಮಾನಗಳಾದ ತೀಕ್ಷ್ಣ ಶರಗಳಿಂದ ಮೃತ್ಯುವಿಗೌತಣ ಮಾಡಿದರು. ಗಜಾರೋಹಿಗಳಾದ ದೇವತೆಗಳು ಗಜಾರೋಹಿ ರಾಕ್ಷಸರನ್ನೂ, ಅಶ್ವಾರೋಹಿಗಳು ಅಶ್ವಾರೋಹಿಗಳನ್ನೂ ಕಾಲಾಳುಗಳು ಕಾಲಾಳುಗಳನ್ನೂ ಅಗ್ನಿಸಮಾನಗಳಾದ ಬಾಣಸಮೂಹಗಳಿಂದ ಕ್ರಮ

ವಾಗಿ ಅವರವರ ಪ್ರತಿಸ್ಪರ್ಧಿಗಳ ಶಿರಗಳನ್ನು ತರಿದು ಆ ದೈತ್ಯಸೇನೆಯ ಬಹುಭಾಗವನ್ನು ನಾಶಮಾಡುತ್ತ ಬಂದರು.

ದೇವತೆಗಳಿಂದ ಈ ರೀತಿ ಪೀಡಿತರಾದ ಅಸುರಸೇನಾನಾಯಕರು ಅತ್ಯಂತ ಕಳವಳಗೊಂಡು ಭೀತಿಯಿಂದ ದೇವರಾಜಧಾನಿಯಾದ ಅಮರಾವತಿಯ ದ್ವಾರಗಳಿಂದ ಹಿಮ್ಮೆಟ್ಟಿದರು. ದೇವತೆಗಳು ಪರಾಜಿತರಾದ ದೈತ್ಯರ ಬೆನ್ನಟ್ಟಿ ಅವರ ರಥಗಳನ್ನು ಪುಡಿಪುಡಿ ಮಾಡಿ, ಅಶ್ವಗಳನ್ನೂ, ಆನೆಗಳನ್ನೂ, ಕಾಲ್ಬಲವನ್ನೂ ಅನೇಕವಿಧವಾಗಿ ಉಪದ್ರವಗೊಳಿಸಿದರು. ಮಹಾಶೂರರಾದ ದೇವತೆಗಳ ಪ್ರಳಯಾಗ್ನಿ ಸಮಾನಗಳಾದ ಬಾಣಗಳಿಂದ ದಮನಮಾಡಲ್ಪಟ್ಟ ಆ ಅಸುರಸೇನೆಯು ಪಲಾಯನಮಾಡುತ್ತಾ, ಆರ್ತ ನಾದ ಮಾಡುತ್ತಾ ಸಮುದ್ರ ಮಧ್ಯದಲ್ಲಿ ಒಡೆದ ಹಡಗಿನಂತೆ ಚೆಲ್ಲಾಪಿಲ್ಲಿಯಾಯಿತು. ಈ ರೀತಿ ಚೆಲ್ಲಾಪಿಲ್ಲಿಯಾಗಿ ಚದುರಿಹೋಗುತ್ತಿರುವ ತನ್ನ ಸೈನ್ಯವನ್ನು ನೋಡಿ ದನುಜೇಶ್ವರನಾದ ವಜ್ರದಂಷ್ಟ್ರನು ಕಂಡು ಅಳಿದುಳಿದ ಸಮಸ್ತ ದಾನವರನ್ನು ಒಂದೆಡೆ ಸೇರಿಸಿ ದೇವತೆಗಳ ಮೇಲೆ ಮತ್ತೆ ಯುದ್ಧಮಾಡಲು ಅವರನ್ನು ಹುರಿದುಂಬಿಸಿದನು. ಈ ರೀತಿ ಹುರಿದುಂಬಿಸಿ ಪ್ರೇರೇಪಿಸಲ್ಪಟ್ಟ ಅಳಿದುಳಿದ ಆ ದೈತ್ಯಸೇನೆಯು ಬಹಳವಾಗಿ ಘಾಸಿಗೊಂಡಿದ್ದರೂ ಲೆಕ್ಕಿಸದೆ ದೇವತೆಗಳ ಮೇಲೆ ಪುನಃ ಯುದ್ಧಕ್ಕೆ ಹೊರಟಿತು.

ರಾಕ್ಷಸಾಧಿಪತಿಯಾದ ವಜ್ರದಂಷ್ಟ್ರನು ತನ್ನ ಸೇನೆಯ ಅಪಜಯದಿಂದ ಬಹು ಕುಪಿತನಾಗಿ ಮಹಾಬಲಶಾಲಿಗಳಾದ ತನ್ನಿಬ್ಬರು ಸೋದರರಿಂದಲೂ ಇಬ್ಬರು ಮಕ್ಕಳಿಂದಲೂ ಇಬ್ಬರು ಅಳಿಯರಿಂದಲೂ ಕೂಡಿ ಸಮಸ್ತ ಸೇನಾಸಮೇತನಾಗಿ ದೇವತೆಗಳನ್ನು ಮುತ್ತಿ ಅವರೊಡನೆ ಘೋರವಾಗಿ ಯುದ್ಧಮಾಡಿದನು. ದೇವ ದಾನವಸೇನೆಗಳೆರಡೂ ಜಯಾಭಿಲಾಷೆಯಿಂದ ಪರಸ್ಪರ ಎದುರುಬದುರು ಯುದ್ಧಮಾಡತೊಡಗಿದವು. ರಥಗಳು ರಥಗಳೊಡನೆಯೂ, ಅಶ್ವಗಳು ಅಶ್ವಗಳೊಡನೆಯೂ, ಗಜಗಳು ಗಜಗಳೊಡನೆಯೂ, ಕಾಲಾಳುಗಳು ಕಾಲಾಳುಗಳೊಡನೆಯೂ ಅಲ್ಲದೆ, ಗಜಾರೋಹಿಗಳೊಡನೆ ರಥಿಕರೂ, ಅಶ್ವಾರೋಹಿಗಳು ರಥಿಕರೊಡನೆಯೂ, ರಥಿಕರು ಕಾಲಾಳುಗಳೊಡನೆಯೂ ಯುದ್ಧ ಮಾಡಿ, ಗಜಾರೋಹಿಗಳು ಅಶ್ವಾರೋಹಿಗಳನ್ನೂ, ಕಾಲಾಳುಗಳು ಗಜಾರೋಹಿಗಳನ್ನೂ, ಗಜಾರೋಹಿಗಳು ರಥಿಕರನ್ನೂ, ಕಾಲಾಳುಗಳು ಅಶ್ವಾರೋಹಿಗಳನ್ನೂ ಕೊಲ್ಲುತ್ತ ಉಭಯಪಕ್ಷಗಳ ರಥ, ಅಶ್ವ, ಗಜ, ಪದಾತಿ ಚತುರಂಗ ಸೇನೆಯು ಈ ರೀತಿ ತುಮುಲ ಯುದ್ಧವನ್ನು ಮಾಡುತ್ತ ಪಟ್ಟಾಯುಧ, ಮುಸಲ, ಶೂಲ, ಭಿಂಡಿವಾಲ, ಪರಶು, ಮುದ್ಗರ, ಯಷ್ಟಿ, ಪ್ರಾಸ, ಉಲ್ಕ, ಶಕ್ತಿ, ಗದಾ, ಪರಿಘ, ಕುಂತ, ಕ್ಷುರಪ್ರ ಇವೇ ಮೊದಲಾದ ಮಹಾಯುಧಗಳಿಂದ ಪರಸ್ಪರ ಹೊಡೆಯುತ್ತ, ಕಡಿಯುತ್ತ, ಗುದ್ದುತ್ತಾ, ಸೀಳುತ್ತಾ, ಕೆಡಹುತ್ತಾ ಸೆಣಸಾಡಿದವು.

ಒಬ್ಬನನ್ನು ಅನೇಕರೂ, ಅನೇಕರನ್ನು ಒಬ್ಬನೂ ಕೊಲ್ಲುತ್ತಾ ನೋಡುವವರಿಗೆ ಭಯ ರೋಮಾಂಚನವನ್ನುಂಟುಮಾಡುತ್ತಾ ಉಭಯ ಸೇನೆಗಳೂ ಘೋರ ಯುದ್ಧ

ದಲ್ಲಿ ತೊಡಗಿದುವು. ರಥದ ಚಕ್ರಧ್ವನಿಗಳೂ, ಆನೆಗಳ ಬೃಂಹಿತ ಧ್ವನಿಗಳೂ, ಕುದುರೆಗಳ ಹೇಷಾರವವೂ, ಭಟರ ಸಿಂಹನಾದ, ಭುಜಸ್ಫಾಲನ ಶಬ್ದಗಳೂ, ಧನುಷ್ಟೇಂಕಾರಗಳೂ, ಭೇರಿ, ಶಂಖಗಳ ನಿನಾದಗಳೂ, ಕಹಳೆ, ತೂರ್ಯ ಮೊದಲಾದ ರಣ ವಾದ್ಯಘೋಷಗಳೂ, ಮೂರು ಲೋಕಗಳನ್ನೂ ವ್ಯಾಪಿಸಿ ಸಮಸ್ತ ಲೋಕಗಳನ್ನೂ ಕಿವುಡುಮಾಡಿದುವು. ಈ ಯುದ್ಧದ ರಭಸಕ್ಕೆ ಸಪ್ತಸಮುದ್ರಗಳು ಉಕ್ಕಿ ಅಲ್ಲೋಲ ಕಲ್ಲೋಲಗಳಾದುವು. ಅಷ್ಟಕುಲಪರ್ವತಗಳು ನಡುಗಿದವು.

ಭಯಂಕರವಾದ ಈ ಗಾಢಾಂಧಕಾರದಲ್ಲಿ ದೈತ್ಯಸೇನೆಯಲ್ಲಿ ಕೆಲವರು ತಮ್ಮ ಆಯುಧಗಳ ಬೆಳಕಿನಿಂದಲೂ, ತಮ್ಮ ಕಿರೀಟರತ್ನಗಳ ಕಾಂತಿಯಿಂದಲೂ, ಕೆಲವರು ಪರಸ್ಪರ ಆಯುಧಘರ್ಷಣೆಯಿಂದುಂಟಾದ ಬೆಳಕಿನಿಂದಲೂ ವೈರಿಗಳನ್ನು ಸದೆಬಡಿದರು. ಈ ರೀತಿ ಸಮಸ್ತ ದೇವತೆಗಳು ರಾಕ್ಷಸರ ಉಪಟಳವನ್ನು ತಡೆಯಲಾರದೆ ಭಯಗೊಂಡು ಯುದ್ಧ ಪರಾಙ್ಮುಖರಾಗಿ ಹಿಮ್ಮೆಟ್ಟಿ ಕಳವಳದಿಂದ ಶೀಘ್ರವಾಗಿ ಅಮರಾವತಿಯ ಒಳಹೊಕ್ಕರು. ದೇವತೆಗಳನ್ನು ಈ ರೀತಿ ಹಿಮ್ಮೆಟ್ಟಿಸಿದ ಮಹಾ ಪರಾಕ್ರಮಿಗಳಾದ ರಾಕ್ಷಸರು ಬಳಲಿ ಅಂದಿಗೆ ಯುದ್ಧವು ಸಾಕೆಂದು ಸಂತೋಷದಿಂದ ತಮ್ಮ ರಾಜನಾದ ವಜ್ರದಂಷ್ಟ್ರನ ಸಮೇತರಾಗಿ ವೀರಮಾಹೇಂದ್ರಪಟ್ಟಣಕ್ಕೆ ಬಂದರು.

ರಾಕ್ಷಸರಿಂದ ಅನೇಕ ವಿಧವಾಗಿ ಪೀಡಿಸಲ್ಪಟ್ಟು ಹಿಮ್ಮೆಟ್ಟಿದ ಸಮಸ್ತ ದೇವತೆಗಳು ಖಿನ್ನರಾಗಿ ಇಂದ್ರನ ಬಳಿಗೆ ಬಂದು ಅವನೊಡನೆ ಸಮಾಲೋಚಿಸಿ ಅವನನ್ನು ಕೂಡಿ ಕೊಂಡು ಕೈಲಾಸಕ್ಕೆ ಹೊರಟು ರಜತಾಚಲ ಶಿಖರದಲ್ಲಿ ವಿರಾಜಮಾನನಾಗಿದ್ದ ಶಿವನನ್ನು ಮೊರೆಹೊಕ್ಕು ಶುಭಕರನೂ, ಪ್ರಸನ್ನವದನನೂ, ಭಗವಂತನೂ ಪಾರ್ವತೀಪತಿಯೂ ಆದ ಶಿವನನ್ನು ಕಂಡು ನಮಸ್ಕರಿಸಿ ಶರಣಾಗತರಾಗಿ ಆ ದೇವದೇವನನ್ನು ಕುರಿತು ಎಲೈ ದೇವನೇ ಪರಮಾತ್ಮನೇ ನಿನಗೆ ನಮಸ್ಕಾರ. ಎಲೈ ಜ್ಞಾನಗಮ್ಯನೇ, ಭಕ್ತವತ್ಸಲನೇ, ಸರ್ವವಂದ್ಯನೇ, ಅನಂತಮೂರ್ತಿಯೇ ನಿನಗೆ ನಮಸ್ಕಾರ ಎಂದು ಭಕ್ತಿಯಿಂದ ಸ್ತುತಿಸಿದರು. ಮಹಾದೇವನು ಈರೀತಿ ತನ್ನನ್ನು ಸ್ತುತಿಸಿದ ದೇವತೆಗಳನ್ನು ಕುರಿತು, ಎಲೈ ದೇವತೆಗಳೇ ನೀವು ಕ್ಷೇಮವೇ? ಎಲೈ ಶತಕ್ರತುವಾದ ಇಂದ್ರನೇ, ನೀನು ಕುಶಲವೇ? ನಿನ್ನ ವಜ್ರಾಯುಧದ ಶಕ್ತಿಯು ದೈತ್ಯರಲ್ಲಿ ಅಪ್ರತಿಹತವಾಗಿರುವುದಷ್ಟೆ? ಎಂದು ಭಗವಂತನಾದ ಈಶ್ವರನು ಅವರ ಕುಶಲವನ್ನು ಕೇಳಿದನು. ದೇವತೆಗಳು ಇದನ್ನು ಕೇಳಿ ದೇವದೇವನಾದ ಈಶ್ವರನನ್ನು ಕುರಿತು ಎಲೈ ದೇವದೇವ, ಪ್ರಭೋ ನಿನ್ನ ದಯೆಯಿಂದ ನಾವೆಲ್ಲರೂ ಕುಶಲ. ಆದರೆ ದುರಾತ್ಮನಾದ ವಜ್ರದಂಷ್ಟ್ರದೈತ್ಯನು ನಿನ್ನೆ ಅವನ ಸಮಸ್ತ ಸೇನೆಯಿಂದೊಡ ಗೂಡಿ ಸ್ವರ್ಗವನ್ನು ಮುತ್ತಿ ಬಹುವಿಧವಾಗಿ ನಮ್ಮನ್ನು ಪೀಡಿಸಿ ಅನೇಕ ರೀತಿ ಬಾಧಿಸಿದನು. ಎಲೈ ಕರುಣಾನಿಧಿಯೆ ನಾವು ನಿನ್ನನ್ನು ಮೊರೆಹೊಕ್ಕಿರುವೆವು. ನಮ್ಮನ್ನು ಸಲಹು. ಎಲೈ ಶಂಕರನೇ ಆ ದೈತ್ಯನೊಡನೆ ಯುದ್ಧಮಾಡಲು ನಾವು ಅಸಮರ್ಥರು ಎಲೈ ಪ್ರಭುವೇ ಆ ರಕ್ಕಸನು ನಾಶವಾಗುವ ಉಪಾಯವನ್ನು ಹೇಳು.

ಆತನ ಸೋದರರೂ ಮಹಾ ಪರಾಕ್ರಮಿಗಳೂ, ಅಜೇಯರೂ ಆದ ವ್ಯಾಘ್ರವಕ್ತ್ರ, ಸರ್ಪಜಿಹ್ವರು ರಣರಂಗದಲ್ಲಿ ನಮ್ಮನ್ನು ತಡೆಗಟ್ಟಿದರು. ಆ ವಜ್ರದಂಷ್ಟ್ರನ ಮಕ್ಕಳಾದ ಸೂರ್ಯಕೋಪ, ಅಗ್ನಿಕೋಪರು, ಮಹಾಶೂರರು, ಕಾಲಯಮನ ಸಮಾನರು. ಅವನ ತಂಗಿಯ ಮಕ್ಕಳಾದ ಧೂಮ್ರನೇತ್ರ, ಖಡ್ಗಜಿಹ್ವರೆಂಬುವರು ಮಹಾ ಬಲಿಷ್ಠರೂ ಸಮರ್ಥರೂ ಆಗಿದ್ದು ಯುದ್ಧದಲ್ಲಿ ಅವರನ್ನು ಜಯಿಸಲು ನಮ್ಮಿಂದಾಗಲಿಲ್ಲ. ಎಲೈ ಮಹಾದೇವನೇ ಅವರಿಂದ ನಮ್ಮನ್ನು ರಕ್ಷಿಸು. ಭಕ್ತವತ್ಸಲನೇ ಆ ದೈತ್ಯರನ್ನು ನಿರ್ಮೂಲಗೊಳಿಸಿ ನಮ್ಮನ್ನು ಕಾಪಾಡು. ಅನನ್ಯಗತಿಕರಾದ ನಾವು ನಿನಗೆ ಶರಣಾಗತರಾಗಿರುವೆವು ಎಂದು ಪ್ರಾರ್ಥಿಸಿದರು.

ಇವನ್ನು ಕೇಳಿದ ಮಹಾದೇವನಾದ ಶಿವನು ತಲೆದೂಗಿ ಕ್ಷಣಕಾಲ ಸುಮ್ಮನಿದ್ದು, ದೇವತೆಗಳನ್ನು ಈ ಕಷ್ಟದಿಂದ ಯಾರು ಪಾರುಮಾಡುವರೆಂದು ಯೋಚಿಸಿ, ಇದಕ್ಕೆ ದೇವಾಂಗನೇ ಸಮರ್ಥನೆಂದು ತಿಳಿದು ಅವನಿಗೆ ಹೇಳಿಕಳುಹಿಸಿ, ಬರಮಾಡಿಕೊಂಡನು. ಶಿವನು ತನ್ನ ಬಳಿಗೆ ಬಂದ ನೃಪೋತ್ತಮನಾದ ದೇವಾಂಗನನ್ನು ಕುರಿತು. ಎಲೈ ಮಹಾ ಪರಾಕ್ರಮಿಯಾದ ದೇವಾಂಗನೇ, ಈಗ ನಡೆಯಲಿರುವ ದೇವದಾನವರ ಯುದ್ಧದಲ್ಲಿ ಸಮಸ್ತ ದೇವತೆಗಳಿಂದ ಕೂಡಿದ ಇಂದ್ರನಿಗೆ ಸಹಾಯಮಾಡಲು ನೀನೇ ತಕ್ಕವನು. ನೀನು ಚತುರಂಗಬಲಸಮೇತನಾಗಿ ಪುತ್ರರೊಡಗೂಡಿ ಇಂದ್ರಾದಿ ದೇವತೆಗಳ ಸಮಸ್ತಸೇನೆಗಳೊಡನೆ ಕೂಡಿದವನಾಗಿ ತಡಮಾಡದೆ ದೈತ್ಯರನ್ನು ಯುದ್ಧದಲ್ಲಿ ನಾಶಮಾಡು ಎಂದು ಆಜ್ಞಾಪಿಸಿದನು. ದೇವಾಂಗನು ಅಪ್ಪಣೆ ಎಂದು ಹೇಳಿ ದೈತ್ಯರ ಮೇಲೆ ಯುದ್ಧ ಹೂಡಲು ಸಿದ್ಧನಾದನು. ಆಗ ಶಿವನು ಪುನಃ ಸಹಸ್ರಾಕ್ಷನಾದ ಇಂದ್ರನನ್ನು ಕುರಿತು ಎಲೈ ಶಕ್ರನೇ, ಈ ದೇವಾಂಗನೊಡನೆ ಕೂಡಿಕೊಂಡು ಆ ವಜ್ರದಂಷ್ಟ್ರನೇ ಮೊದಲಾದ ದೈತ್ಯರ ಮೇಲೆ ಯುದ್ಧೋದ್ಯುಕ್ತನಾದರೆ, ನೀನು ಖಂಡಿತವಾಗಿಯೂ ಜಯಶಾಲಿಯಾಗುವೆ. ದೈತ್ಯರು ನಿಜವಾಗಿಯೂ ಸೋಲುವರು. ಎಂದು ನುಡಿದನು.

ಇದನ್ನು ಕೇಳಿ ಇಂದ್ರನು ಹರ್ಷಚಿತ್ತನಾಗಿ ಶಿವನನ್ನು ಕುರಿತು ಎಲೈ ದೇವದೇವೇಶನೇ, ಗಿರೀಶನೇ, ನೀನು ಹೇಳಿದಂತೆಯೇ ಆಗಲಿ, ಆ ದೈತ್ಯರು ನಮ್ಮನ್ನು ಬಹು ಬಾಧಿಸುತ್ತಿರುವರು. ನಿನ್ನನುಗ್ರಹದಿಂದ ಅವರು ನಮ್ಮಿಂದ ಪರಾಜಿತರಾಗಲೇ ಬೇಕಾಗಿದೆ ಎಂದು ನುಡಿದು ಸಮಸ್ತ ದೇವತೆಗಳೊಡನೆ ಶಿವನಿಗೆ ನಮಸ್ಕರಿಸಿ ಶಿವನಪ್ಪಣೆ ಪಡೆದು ದೇವಾಂಗ ನೃಪತಿಯೊಡನೆ ಅಲ್ಲಿಂದ ಹೊರಟನು. ಆಗ ದೇವಾಂಗ ರಾಜನು ಇಂದ್ರನನ್ನು ನೋಡಿ ಎಲೈ ಶತಕ್ರತುವೇ, ನೀನು ಈಗ ದೇವತೆಗಳೊಡನೆ ಸ್ವರ್ಗಕ್ಕೆ ನಡೆ. ನಾನು ಚತುರಂಗಬಲ ಸಮೇತನಾಗಿ ನಿನ್ನ ಹಿಂದೆಯೇ ಬರುವೆನು ಎಂದು ಹೇಳಿದನು. ಇದನ್ನು ಕೇಳಿ ದೇವರಾಜನಾದ ಇಂದ್ರನು ಶೀಘ್ರವಾಗಿ ಬರಬೇಕೆಂದು ದೇವಾಂಗರಾಜನಿಗೆ ಹೇಳಿ ಸಮಸ್ತ ದೇವತೆಗಳೊಡನೆ ಅಮರಾವತಿಗೆ ಹೋದನು.

ಇತ್ತ, ಕೈಲಾಸದಿಂದ ಹೊರಟ ದೇವಾಂಗ ರಾಜನು ಆಮೋದ ಪಟ್ಟಣಕ್ಕೆ ಬಂದು ದೈತ್ಯರೊಡನೆ ಯುದ್ಧ ಸಂಭವಿಸಿರುವುದನ್ನು ತನ್ನ ಸಮಸ್ತ ಸೈನಿಕರಿಗೆ ಡಂಗುರ ಸಾರಿಸಿ ಒಂದು ಕೋಟಿ ರಥಗಳೂ, ಒಂದು ಕೋಟಿ ಆನೆಗಳೂ, ಒಂದು ಕೋಟಿ ಕಾಲಾಳುಗಳೂ, ಒಂದು ಕೋಟಿ ಕುದುರೆಗಳೂ ಕೂಡಿದ ಚತುರಂಗಬಲಯುಕ್ತನಾಗಿ ಭೇರಿ, ಕಹಳೆ ಮೊದಲಾದ ರಣವಾದ್ಯಗಳನ್ನು ಭೋರ್ಗರೆಸುತ್ತಾ, ತಾನೂ ತನ್ನ ಮಿತ್ರರೊಡಗೂಡಿ ಸ್ವರ್ಗಕ್ಕೆ ಬಂದು ಅಮರಾವತಿಯ ಬಳಿ ಬೀಡುಬಿಟ್ಟನು. ತನ್ನ ಸಹಾಯಕ್ಕಾಗಿ ಬಂದ ದೇವಾಂಗನ ಆಗಮನವನ್ನು ತನ್ನ ಭಟರ ಮೂಲಕ ಇಂದ್ರನು ತಿಳಿದು ಅವನನ್ನು ಸ್ವರ್ಗ ದ್ವಾರದಲ್ಲಿ ಸಮಸ್ತ ದೇವಮರ್ಯಾದೆಗಳೊಡನೆ ಎದುರುಗೊಂಡು ಅವನನ್ನೂ ಮತ್ತು ಅವನೊಡನಿದ್ದ ಸಮಸ್ತ ರಾಜರನ್ನೂ ಅವರವರಿಗೆ ತಕ್ಕಂತೆ ಆದರದಿಂದ ಸತ್ಕರಿಸಿ ಅಮರಾವತಿಗೆ ಕರೆದುಕೊಂಡು ಹೋದನು. ಆ ದಿನ ಯುದ್ಧಕ್ಕೆ ರಾಕ್ಷಸರು ಬರದಿರುವುದನ್ನು ದೇವೇಂದ್ರನು ತಿಳಿದು ಆ ರಾತ್ರಿಯನ್ನು ಸುಖವಾಗಿ ಕಳೆದನು.

ಪ್ರಾತಃಕಾಲದಲ್ಲಿ ಅಮರಾಧಿಪತಿಯು ಸಮಸ್ತ ದೇವತೆಗಳಿಗೆ, ತಮಗೆ ರಾಕ್ಷಸರೊಡನೆ ಯುದ್ಧ ಪ್ರಾಪ್ತವಾಗಿರುವ ಸಂಗತಿಯನ್ನು ಡಂಗುರದ ಮೂಲಕ ಸಾರಿಸಿದನು. ಯುದ್ಧಸನ್ನದ್ಧರಾಗಲು ರಣಕಹಳೆಗಳು ಮೊಳಗಿಸಲ್ಪಟ್ಟವು. ಸಮಸ್ತ ದೇವತೆಗಳು ಇದನ್ನು ಕೇಳಿ ಪ್ರಾತಃಕಾಲದ ನಿತ್ಯಕರ್ಮಗಳನ್ನು ಬೇಗ ಬೇಗನೆ ತೀರಿಸಿಕೊಂಡು ಇಂದ್ರನ ಬಳಿಗೆ ಬಂದು ಸೇರಿದರು. ದೇವಾಂಗನೂ ಸಹ ತನ್ನ ಸಮಸ್ತ ಸೇನಾಬಲದಿಂದ ಕೂಡಿಕೊಂಡು ಇಂದ್ರನಲ್ಲಿಗೆ ಯುದ್ಧ ಸನ್ನದ್ಧನಾಗಿ ಬಂದನು. ದೇವರಾಜನಾದ ಇಂದ್ರನು ಸಮಸ್ತರಿಗೂ ಅಂದು ಯುದ್ಧಸನ್ನದ್ಧರಾಗಿರಲು ತಿಳಿಸಿದನು. ವಜ್ರದಂಷ್ಟ್ರನೂ ಸಹ ತನ್ನ ಸಮಸ್ತಸೇನಾಬಲಸಮೇತನಾಗಿ ಯುದ್ಧಸನ್ನದ್ಧನಾಗಿ ಬರಲು ಉಭಯ ಪಕ್ಷದವರೂ ಯುದ್ಧ ಮಾಡಲುಪಕ್ರಮಿಸಿದರು. ದೇವದಾನವರು ಪರಸ್ಪರ ಒಬ್ಬರೊಡನೊಬ್ಬರು ಹೋರಾಡತೊಡಗಿದರು. ಮಹಾ ಶೂರರಾದ ದೇವತೆಗಳು ನಾನಾ ರೀತಿಯ ಆಯುಧಗಳಿಂದಲೂ ರಥ, ಅಶ್ವ, ಗಜ, ಪದಾತಿ ಚತುರಂಗಸೇನೆಗಳಿಂದ ಕೂಡಿ ದೈತ್ಯರನ್ನು ಬಹುವಾಗಿ ಘಾತಿಸಿದರು. ದೈತ್ಯರು ಇದರಿಂದ ಧೈರ್ಯಗುಂದಿ ಪಲಾಯನ ಮಾಡಿ ತಮ್ಮ ರಾಜನ ತಮ್ಮನಾದ ವ್ಯಾಘ್ರವಕ್ತ್ರನನ್ನು ಮೊರೆಹೊಕ್ಕು ರಕ್ಷಿಸಬೇಕೆಂದು ಪ್ರಾರ್ಥಿಸಿದರು.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿ ಬ್ರಹ್ಮನಾರದ ಸಂವಾದ ರೂಪ ಉತ್ತರ ಖಂಡದ ದೇವಾಂಗ ಚರಿತ್ರೆಯಲ್ಲಿ ದೇವ ದಾನವಸೇನಾಯುದ್ಧವೆಂಬ ಹದಿನೈದನೆಯ ಅಧ್ಯಾಯ ಮುಗಿದುದು.

ಹದಿನಾರನೆಯ ಅಧ್ಯಾಯ

ವ್ಯಾಘ್ರವಕ್ತ್ರ ವಧೆ

ಸೂತನು ಹೇಳುತ್ತಾನೆ. ಈ ರೀತಿ ದೇವಸೇನೆಯಿಂದ ಕೊಲ್ಲಲ್ಪಡುತ್ತಿರುವ ದಾನವ ಸೇನೆಯು, ದೇವಸೇನೆಯ ಉಪಟಳವನ್ನು ತಾಳಲಾರದೆ ದಿಕ್ಕುದಿಕ್ಕಿಗೆ ಚೆದುರಿ ಓಡುತ್ತಿರಲು ವ್ಯಾಘ್ರವಕ್ತ್ರನು ದೇವಲನ ಬಳಿಗೆ ಬಂದು ಮಹಾಬಲಶಾಲಿಯೂ, ಶತ್ರು ಸಂತಾಪಕನೂ ಆದ ಅವನನ್ನು ಮಧುರ ವಾಕ್ಯಗಳಿಂದ ಮಾತನಾಡಿಸಿ, ನಿರ್ಭೀತನಾಗಿ, ಮಂದಹಾಸ ದೊಡನೆ ಯುದ್ಧಕ್ಕೆ ಕರೆದು, ವೀರಶಿಖಾಮಣಿಯೇ ಮಹಾರಾಜಾ ದೇವಲನೇ, ಕಮಲ ನೇತ್ರನೇ ಅನೇಕ ಆಯುಧಧಾರಿಯೇ ವಜ್ರಾಯುಧದಂತೆ ಶತ್ರು ಸಂಹಾರಕನೇ, ಊಹೆಗೆ ನಿಲುಕದ ಬಲಪರಾಕ್ರಮಗಳುಳ್ಳವನೇ, ಕೈಯ ಮುಷ್ಟಿಗಳಲ್ಲಿ ಸುವ್ಯಕ್ತವಾಗಿ ತೋರುವ ಬೆರಳುಗಳು, ವಿಶಾಲವಾದ ಬಾಹುದ್ವಯಗಳು ಇವುಗಳಿಂದ ಶೋಭಿತನಾಗಿ, ಧನುಷ್ಠೇಂಕಾರ ಮಾಡುತ್ತ ತೀವ್ರ ವೇಗವುಳ್ಳ ಬಾಣವೃಷ್ಟಿಗಳಿಂದ ಶತ್ರುಗಳನ್ನು ಸಂಹರಿ ಸುತ್ತಿರುವ, ಮಹಾಮೇಘದಂತೊಪ್ಪುತ್ತಿರುವ, ನಿನ್ನ ಹೊರತು ಬೇರೆ ಯಾವ ವೀರನನ್ನೂ ಈ ಘೋರ ಯುದ್ಧದಲ್ಲಿ ನಾನು ಕಾಣೆನು. ಸಿಂಹವು ಮೃಗಸಮೂಹವನ್ನು ಸಂಹರಿಸುವಂತೆ, ಮಹಾವೀರನಾದ ನೀನು ನಿರ್ಭಯವಾಗಿ ಅನೇಕ ರಥ, ಕರಿ, ತುರಗ ಕಾಲ್ಬಲಗಳನ್ನು ನಾಶಮಾಡುತ್ತ ರಥಧ್ವನಿಯಿಂದ ಭೂಮ್ಯಾಕಾಶಗಳನ್ನು ಒಂದುಗೊಳಿ ಸುತ್ತಾ ವರ್ಷಾಂತ್ಯದಲ್ಲಿ ಭೂಮಿಯಲ್ಲಿ ಬೆಳೆದಿರುವ ಬೆಳೆಯನ್ನು ತನ್ನ ಕಿರಣಗಳಿಂದ ಬೆಳಗುವ ಸೂರ್ಯನಂತೆ ಪ್ರಕಾಶಿಸುತ್ತ, ಬತ್ತಳಿಕೆಯಲ್ಲಿ ಸರ್ಪವಿಷಕ್ಕೆ ಸಮಾನವಾದ ಬಾಣಗಳನ್ನುಳ್ಳವನಾಗಿ, ಶಂಕರನೊಡನೆ ಅಂಧಕನು ಯುದ್ಧಮಾಡಿದಂತೆ, ನನ್ನೊಡನೆ ಯುದ್ಧಮಾಡು ಎಂದನು.

ವ್ಯಾಘ್ರವಕ್ತ್ರನ ಈ ಮಾತನ್ನು ಕೇಳಿ ವೃಷಭಧ್ವಜ ಸಂಪಾದಕನಾದ, ದೇವಾಂಗ ಮಹಾರಾಜನು ಅವನನ್ನು ಕುರಿತು ಹಾಗೆಯೇ ಆಗಲೆಂದು ನುಡಿದು, ಮುಗುಳುನಗೆ ನಗುತ್ತಾ, ದೈತ್ಯ ಶಿರೋಮಣಿಯಾದ ಅವನನ್ನು ಖಡ್ಗದಿಂದ ಹೊಡೆದನು. ಇದರಿಂದ ಕ್ರುದ್ಧನಾದ ವ್ಯಾಘ್ರವಕ್ತ್ರನು ಅಗ್ನಿಸಮಾನಗಳಾದ, ಮರ್ಮಭೇದಿಗಳಾದ ಬಾಣಗಳಿಂದ ದೇವಾಂಗನ ಮರ್ಮಸ್ಥಾನವನ್ನು ಪ್ರಹರಿಸಿದನು. ಚುರುಕಾದ ಹಸ್ತಲಾಘವವುಳ್ಳವನೂ, ಮರ್ಮಜ್ಞನೂ ಆದ ದೇವಾಂಗನು ಅವನ ಬಾಣಗಳನ್ನು ವಿಫಲಗೊಳಿಸಿ, ಅವನನ್ನು ಪ್ರತಿಯಾಗಿ ತೊಂಬತ್ತು ಬಾಣಗಳಿಂದ ಹೊಡೆದನು. ಹಾಗೆಯೇ ವ್ಯಾಘ್ರವಕ್ತ್ರನು ದೇವಾಂಗನ ಮೇಲೆ ಸಾವಿರ ಬಾಣಗಳನ್ನು ಪ್ರಯೋಗಿಸಿದನು. ಇದರಿಂದ ದೇವಾಂಗನು ಸಹಸ್ರ ಕಿರಣಗಳುಳ್ಳ ಸೂರ್ಯನಂತೆ ಒಪ್ಪಿದನು. ಮತ್ತೆ ದೇವಾಂಗನು ಸಾವಿರ ಬಾಣಗಳಿಂದ ವ್ಯಾಘ್ರವಕ್ತ್ರನನ್ನು ಮುಚ್ಚಿ ಸಿಂಹನಾದ ಮಾಡಿದನು. ಆ ದೈತ್ಯನು

ದೇವಾಂಗನ ಬಾಣಗಳನ್ನು ಖಂಡಿಸಿ ದೇವಾಂಗನ ಹಣೆಗೆ ತೀಕ್ಷ್ಣವಾದ ಬಾಣವನ್ನು ಆಕ್ರೋಶದಿಂದ ಪ್ರಯೋಗಿಸಿದನು. ಆ ಬಾಣವು ದೇವಾಂಗನ ಹಣೆಯಲ್ಲಿ ನಾಟ, ಅವನು ಖಡ್ಗ ಮೃಗದಂತೆ ಒಪ್ಪುತ್ತಿದ್ದನು. ಇದರಿಂದ ವಿಹ್ವಲಗೊಂಡ ದೇವಾಂಗನು ಆ ರಾಕ್ಷಸನನ್ನು ಹಾಸ್ಯ ಮಾಡುತ್ತಾ ಆ ಶೂರ ದೈತ್ಯನ ಹಣೆಯನ್ನು ಮೂರು ಬಾಣಗಳಿಂದ ಪ್ರಹರಿಸಲು ವ್ಯಾಘ್ರವಕ್ತ್ರನು ಆ ಬಾಣಗಳಿಂದ ಯುಕ್ತನಾಗಿ ರಕ್ತಧಾರೆಯು ಪ್ರವಹಿಸುತ್ತಿರಲು, ಮಳೆಗಾಲದಲ್ಲಿ ವೃಷ್ಟಿಯಿಂದ ತೋಯ್ದ ತ್ರಿಶೃಂಗಪರ್ವತದಂತೆ ಒಪ್ಪಿದನು. ಇದರಿಂದ ಬಹುನೊಂದ ಆ ದೈತ್ಯನು ಸಾವಿರ ಬಾಣಗಳನ್ನು ದೇವಾಂಗನ ಮೇಲೆ ಪ್ರಯೋಗಿಸಿದರೂ ವಾಯುವಿನಿಂದ ಪರ್ವತವು ಕಂಪಿಸದಿರುದಂತೆ ದೇವಾಂಗನು ಅಚಲನಾಗಿದ್ದನು. ವ್ಯಾಘ್ರವಕ್ತ್ರನಾದರೂ ದೇವಾಂಗನು ತನ್ನ ಮೇಲೆ ಅಸಂಖ್ಯಾತ ಬಾಣಗಳನ್ನು ಪ್ರಯೋಗಿಸಿದರೂ ಜಲಪ್ರವಾಹವು ಪರ್ವತವನ್ನು ಭೇದಿಸದಿರುವಂತೆ ಕದಲದಿದ್ದನು.

ಮಹಾರಥಿಕರೂ, ರಥಚಾರಿಗಳೂ, ವೀರರೂ, ಆದ ದೇವಲ ವ್ಯಾಘ್ರವಕ್ತ್ರರು ಒಬ್ಬರನ್ನೊಬ್ಬರು ಶರಸಮೂಹಗಳಿಂದ ಮುಚ್ಚುತ್ತ ಲೋಕಕ್ಷಯಮಾಡಲು ಏಕಕಾಲ ವಲ್ಲಿ ಇಬ್ಬರು ಸೂರ್ಯರು ತಮ್ಮ ತಮ್ಮ ಕಿರಣಗಳಿಂದ ಪರಸ್ಪರ ಒಬ್ಬರನ್ನೊಬ್ಬರು ತಾಪ ಗೊಳಿಸುವಂತೆ, ಒಬ್ಬನು ಮಾಡಿದ ಪ್ರಯತ್ನಕ್ಕೆ ಮತ್ತೊಬ್ಬನು ಪ್ರತೀಕಾರ ಮಾಡುತ್ತಾ, ನಿರ್ಭಯರಾಗಿ ಶರಸಮೂಹಗಳಿಂದ ಸಮಾನ ಕೃತಿಗಳನ್ನು ಮಾಡುತ್ತಿದ್ದರು. ವೈರಿ ದುರ್ಭೇದ್ಯರೂ, ಧನುಷ್ಪಾಣಿಗಳೂ, ಭೀಕರರೂ ಆದ ಅವರೀರ್ವರೂ ಬಾಣಗಳೆಂಬ ಕೋರೆದಾಡೆಗಳಿಂದ ರಣರಂಗವೆಂಬ ಅರಣ್ಯದಲ್ಲಿ ಸಂಚರಿಸುತ್ತಿದ್ದರು. ಆಕಾಶದಲ್ಲಿ ಸೂರ್ಯಚಂದ್ರರು ಮೇಘಸಮೂಹಗಳಿಂದ ಆವೃತರಾದಂತೆ ಸಮರಾಂಗಣದಲ್ಲಿ ಅವರೀರ್ವರೂ ಬಾಣಗಳಿಂದ ಮುಚ್ಚಿದವರಾಗಿ ಕಾಣದಂತಾಗುತ್ತಿದ್ದರು. ಹಾಗೆಯೇ ಕ್ಷಣಾರ್ಧದಲ್ಲಿಯೇ ಅವರೀರ್ವರೂ ಮೇಘಸಮೂಹದಿಂದ ಬಿಡಲ್ಪಟ್ಟ ಸೂರ್ಯಚಂದ್ರ ರಂತೆ, ಆ ಬಾಣಗಳನ್ನೆಲ್ಲಾ ಭೇದಿಸಿ ಪ್ರಕಟರಾಗುತ್ತಿದ್ದರು. ಹೀಗಿರುವಲ್ಲಿ ವ್ಯಾಘ್ರ ವಕ್ತ್ರನು, ವೃಷ್ಟಿ ಧಾರೆಗಳು ಪರ್ವತವನ್ನು ಮುಚ್ಚುವಂತೆ ತನ್ನ ಉಗ್ರವಾದ ಬಾಣಗಳಿಂದ ದೇವಾಂಗನನ್ನು ಕಾಣದಂತೆ ಮಾಡುತ್ತ ಅವನನ್ನು ಸೋಲಿನಂಚಿಗೆ ತಳ್ಳಿದನು.

ಇದರಿಂದ ಕ್ರೋಧಗೊಂಡ ದೇವಾಂಗನು ಶತ್ರುವಿನ ಪರಾಕ್ರಮವನ್ನು ಸಹಿಸಲಾರದೆ ಅವನಿಗೆ ಪ್ರತೀಕಾರಮಾಡಲು ತನ್ನ ರಥವನ್ನು ಮಂಡಲಾಕಾರವಾಗಿ, ವಕ್ರಾತಿವಕ್ರಗಮನಗಳಿಂದ ನಡೆಸಿ ಅವನನ್ನು ಬಹುವಾಗಿ ನೋಯಿಸಿ ವಿಜೃಂಭಿಸಿದನು. ಉಭಯ ಪಕ್ಷಗಳವರೂ ಭಯಂಕರವಾದ ತುಮುಲ ಯುದ್ಧದಲ್ಲಿ ತೊಡಗಿದರು. ಮಂಡಲಾಕಾರವಾಗಿ ಗಜಗಳನ್ನು ಓಡಾಡಿಸುತ್ತ ಧನುಸ್ಸನ್ನು ಆಕರ್ಣಾಂತವಾಗಿ

ಎಳೆದು ಬಾಣಗಳನ್ನು ಪ್ರಯೋಗಿಸುತ್ತ ಮಹಾರಥಿಕರಾದ ಅವರೀರ್ವರೂ ಒಬ್ಬರ ನ್ನೊಬ್ಬರು ಸಂಹರಿಸಲು ಹವಣಿಸುತ್ತಿದ್ದರು. ಒಬ್ಬರನ್ನೊಬ್ಬರು ವಿರಥರನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದರು. ಅಸ್ತ್ರವಿದ್ಯಾಕೋವಿದನಾದ ಆ ದೈತ್ಯನು, ದೇವಾಂಗನ ಮೇಲೆ ಮಹಾಸ್ತ್ರಗಳನ್ನು ಪ್ರಯೋಗಿಸಿದನು. ದೇವಲನು ಅವುಗಳನ್ನೆಲ್ಲ ಪ್ರತಿ ಮಹಾಸ್ತ್ರಗಳಿಂದ ನಿವಾರಿಸಿದನು. ಮನುಷ್ಯರ ಪ್ರಾಣಹರಣಕ್ಕಾಗಿ ನಡೆಯುತ್ತಿರುವ ಗ್ರಹಯುದ್ಧವೋ ಎಂಬಂತೆ ಅವರಿಬ್ಬರಿಂದ ಪ್ರಯೋಗಿಸಲ್ಪಟ್ಟ ಬಾಣಗಳು ಸಮಸ್ತ ಸೈನ್ಯಗಳನ್ನು ಆವರಿಸಿ ಆಕಾಶವು ಬಾಣ ಸಮೂಹದಿಂದ ತುಂಬಿಹೋಯಿತು. ಪ್ರಜೆಗಳ ನಾಶಕ್ಕಾಗಿ ಉಲ್ಕಾಪಾತವಾದಂತೆ ಕಿಡಿಗಳಿಂದಲೂ, ಉರಿನಾಲಗೆಗಳಿಂದಲೂ, ಕೂಡಿದ ಬಾಣಗಳ ಹೊಡೆತಕ್ಕೆ ಉಂಟಾದ ಅಗ್ನಿಯು ಉಭಯ ಸೈನ್ಯವನ್ನೂ ಸುಡಹತ್ತಿತು.

ಈ ಯುದ್ಧವನ್ನು ನೋಡಲು ಆಕಾಶದಲ್ಲಿ ನೆರೆದಿದ್ದ ಸಮಸ್ತ ಸಿದ್ಧರೂ, ಮುನಿಗಳೂ ಪರಸ್ಪರ ತಮ್ಮ ತಮ್ಮೊಳಗೆ. ಮಾತನಾಡಿಕೊಳ್ಳುತ್ತ, ಎಷ್ಟೋ ಯುದ್ಧ ಗಳಾಗಿವೆ, ಆದರೆ ಅವು ಯಾವುವೂ, ಈ ಯುದ್ಧದ ಹದಿನಾರನೆಯ ಒಂದು ಭಾಗಕ್ಕೂ ಸಮನಲ್ಲ. ಇಂಥ ಯುದ್ಧವು ಹಿಂದೆ ನಡೆದಿಲ್ಲ ಮುಂದೆ ನಡೆಯದು. ಯುದ್ಧ ಪರಾಕ್ರಮಿ ಗಳಾದ ಇವರಿಬ್ಬರೂ ಎಂತಹ ಸಮರ ಚಾತುರ್ಯವುಳ್ಳವರಾಗಿರುವರು. ಇವರೀರ್ವರೂ ಎಷ್ಟು ಧೈರ್ಯಶಾಲಿಗಳು, ಇವರೀರ್ವರ ಬಲವು ಎಷ್ಟು ಹೆಚ್ಚಿನದು. ಇವರ ಚಾತುರ್ಯವೆಷ್ಟು. ಇವರ ಬಲಪರಾಕ್ರಮಗಳೆಷ್ಟು. ಯುದ್ಧನೈಪುಣ್ಯತೆಯೆಷ್ಟು, ಇವರಿಬ್ಬರೂ ಪ್ರಳಯಕಾಲದ ಯಮರೋ, ರುದ್ರರೋ, ಸೂರ್ಯರೋ ಎಂಬಂತೆ ತೋರುವರಲ್ಲಾ ! ಎಂದು ಶ್ಲಾಘಿಸುತ್ತಿದ್ದರು. ದೇವ ದಾನವರು ಯುದ್ಧದಲ್ಲಿ ಅವರೀರ್ವರ ಅಚಿಂತನೀಯವಾದ ಅತ್ಯದ್ಭುತವಾದ ಪರಾಕ್ರಮಕಾರ್ಯಗಳನ್ನು ನೋಡಿ ಸಿಂಹನಾದ ಮಾಡಿದರು.

ಶೂರರೂ, ಪರಾಕ್ರಮಿಗಳೂ, ಒಬ್ಬರಿಗೊಬ್ಬರು ಕೇಡು ಬಗೆಯುವವರೂ ಆದ ಅವರಿಬ್ಬರೂ, ಪರಸ್ಪರ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ದುರದುರನೇ ನೋಡುತ್ತ, ಚಲಿಸುತ್ತಿರುವ ತುಟಿಗಳುಳ್ಳವರಾಗಿ, ಕ್ರೋಧದಿಂದ ಹಲ್ಲುಗಳನ್ನು ಕಟಕಟನೇ ಕಡಿಯುತ್ತ, ಬಾಣವೃಷ್ಟಿಯಿಂದ ಒಬ್ಬರನ್ನೊಬ್ಬರು ಮುಚ್ಚುತ್ತಿದ್ದರು. ಪರಾಕ್ರಮಿಗಳಾದ ಅವರಿಬ್ಬರೂ ಪ್ರತಿದ್ವಂದ್ವಿಗಳ ಅಶ್ವಗಳನ್ನು ಬಾಧಿಸುತ್ತಿದ್ದರು. ಚುರುಕಾದ ಹಸ್ತಲಾಘವವುಳ್ಳವನೂ, ಮಹಾಶೂರನೂ ಆದ ದೇವಾಂಗರಾಜನು, ಆ ದೈತ್ಯನ ಉದ್ಧಟತನವನ್ನು ಸಹಿಸದೆ ಕ್ರೋಧದಿಂದ ಒಂದು ಬಾಣದಿಂದ ಆ ವ್ಯಾಘ್ರವಕ್ತ್ರನ ಸಾರಥಿಯನ್ನು ಕೊಂದು, ಎರಡು ಬಾಣಗಳಿಂದ ಅವನ ರಥಧ್ವಜವನ್ನು ಮುರಿದನು. ನಾಲ್ಕು ಬಾಣಗಳಿಂದ ಅವನ ರಥಾಶ್ವಗಳನ್ನೂ ಸಂಹರಿಸಿ, ಭೂಮಿಗೆ ಕೆಡಹಿದನು.

ಅರ್ಧಚಂದ್ರಾಕೃತಿಯಾದ ಬಾಣವೊಂದರಿಂದ, ಅವನ ಧನುಸ್ಸನ್ನು ಕತ್ತರಿಸಿದನು. ನಂತರ ಮುರಿದ ಧನುಸ್ಸುಳ್ಳ ಸುರದ್ವೇಷಿಯಾದ ಆ ವ್ಯಾಘ್ರವಕ್ತ್ರನನ್ನು ಅಗ್ನಿ ಸದೃಶಗಳಾದ ಮುನ್ನೂರು ಬಾಣಗಳಿಂದ ಚೆನ್ನಾಗಿ ಹೊಡೆದು ಹದನಾದ ಒಂದು ಭಲ್ಲೆಯನ್ನು ಕೈಗೆತ್ತಿಕೊಂಡು ತನ್ನ ಬಲದಿಂದೆಲ್ಲಾ ಅದನ್ನು ಪ್ರಯೋಗಿಸಿ ಅವನ ಘೋರ ಶಿರಸ್ಸನ್ನು ಶರೀರದಿಂದ ಬೇರ್ಪಡಿಸಿದನು. ರತ್ನಕುಂಡಲಗಳಿಂದ ಕೂಡಿ, ಕಿರೀಟಯುಕ್ತವಾದ ಆ ದೈತ್ಯನ ಶಿರಸ್ಸು ಆಕಾಶಮಧ್ಯದಿಂದ ಬೀಳುವ ಸೂರ್ಯ ಬಿಂಬದಂತೆ ಅದ್ಭುತವಾಗಿ ಗಿರಗಿರನೆ ತಿರುಗುತ್ತಾ ಭೂಮಿಗೆ ಬಿದ್ದಿತು. ಈ ರೀತಿ ಹತನಾದ ವ್ಯಾಘ್ರವಕ್ತ್ರನನ್ನು ನೋಡಿ ರಣರಂಗದಲ್ಲಿದ್ದ ಸಮಸ್ತ ದೈತ್ಯರೂ ಭೀತರಾಗಿ ಓಡಿಹೋಗಲಾರಂಭಿಸಿದರು. ದೇವತೆಗಳು ಅವರ ಬೆನ್ನಟ್ಟಿ ಹೋಗುತ್ತಾ ಮಹತ್ತರವಾದ ಸಿಂಹನಾದವನ್ನು ಮಾಡುತ್ತಿದ್ದರು. ದೇವರಾಜನಾದ ಇಂದ್ರನು ಮಹಾಪರಾಕ್ರಮಿಯಾದ ದೇವಾಂಗನನ್ನು ಗೌರವದಿಂದ ಸನ್ಮಾನಿಸಿದನು.

ಇಲ್ಲಿಗೆ ಬ್ರಹ್ಮಾಂಡಪುರಾಣದಲ್ಲಿ ಬ್ರಹ್ಮನಾರದ ಸಂವಾದರೂಪ ಉತ್ತರ ಖಂಡದ ದೇವಾಂಗಚರಿತ್ರೆಯಲ್ಲಿ ವ್ಯಾಘ್ರವಕ್ತ್ರವಧವೆಂಬ ಹದಿನಾರನೆಯ ಅಧ್ಯಾಯ ಮುಗಿದುದು.

ಹದಿನೇಳನೆಯ ಅಧ್ಯಾಯ

ನಂದೀಧ್ವಜ ಪ್ರಭಾವ

ಸೂತನು ಈರೀತಿ ಹೇಳುತ್ತಾನೆ. ಹೀಗೆ ಮಹಾಬಲಿಷ್ಠನಾದ, ರಾಕ್ಷಸೇಶ್ವರನಾದ ವ್ಯಾಘ್ರವಕ್ತ್ರನು ಮೃತನಾಗಲು ಅಳಿದುಳಿದ ರಾಕ್ಷಸರು ದೇವಾಂಗನಿಂದ ಮರ್ದಿತರಾಗಿ ಅತ್ಯಂತ ಭಯಗೊಂಡು ತಮ್ಮ ರಾಜನಾದ ವಜ್ರದಂಷ್ಟ್ರನ ಮೊರೆಹೊಕ್ಕರು. ಅಸುರೇಶ್ವರನಾದ ವಜ್ರದಂಷ್ಟ್ರನು ತನ್ನ ತಮ್ಮನನ್ನು ದೇವಾಂಗನು ಕೊಂದುದನ್ನು ಅವರಿಂದ ತಿಳಿದು, ಅವನಿಂದ ಓಡಿಸಲ್ಪಟ್ಟ ತನ್ನ ಸೈನ್ಯವನ್ನು ನೋಡಿ ಅತಿ ದುಃಖದಿಂದಲೂ, ಸಿಟ್ಟಿನಿಂದಲೂ ಕೂಡಿದವನಾಗಿ, ಸಗರದೇಶಾಧೀಶನಾದ ದೇವಾಂಗನ ಮೇಲೆ ಎರಗಿ ಬಿದ್ದನು. ದೇವಾಂಗನಾದರೂ ವಜ್ರದಂಷ್ಟ್ರನ ಈ ಕೃತ್ಯದಿಂದ ಚಕಿತನಾಗಿ ತಾನೂ ಅವನ ಮೇಲೆ ಬಿದ್ದನು. ಪರಸ್ಪರ ಜಯಾಭಿಲಾಷೆಯಿಂದ ಕೂಡಿದ ಅವರಿಬ್ಬರ ಘೋರಯುದ್ಧವು ಮಹೇಂದ್ರ ವೃತ್ರಾಸುರರ ಯುದ್ಧದಂತೆಯೂ, ಖರ ರಾಮರ ಯುದ್ಧದಂತೆಯೂ ಜರುಗಿತು. ವಜ್ರದಂಷ್ಟ್ರನು ಅನೇಕ ಪ್ರಕಾರವಾಗಿ ದೇವಾಂಗರಾಜನ ಮೇಲೆ ಬಾಣವೃಷ್ಟಿಯನ್ನು ಮಳೆಗಾಲದ ಮೇಘದಂತೆ ಸುರಿಸುತ್ತಾ ತನ್ನ

ಕರಕೌಶಲ್ಯದಿಂದ ಯುದ್ಧಮಾಡಿದನು. ಇದರಿಂದ ಧೀರನಾದ ದೇವಾಂಗನು ಪ್ರವಾಹದ ರಭಸಕ್ಕೆ ಪರ್ವತವು ಕದಲದಂತೆ ಕಂಗೆಡದೆ ಅಚಲನಾಗಿದ್ದನು. ಆ ದೈತ್ಯನಿಂದ ಬಿಡಲ್ಪಟ್ಟ ಬಾಣವೃಷ್ಟಿಯನ್ನು ದೇವಾಂಗನು ತನ್ನ ಹಸ್ತಲಾಘವದಿಂದ ನಿವಾರಿಸಿ, ಅವನನ್ನು ಹಾಸ್ಯಮಾಡುತ್ತಾ ಹರಿತವಾದ ಬಾಣಗಳಿಂದ ಹೊಡೆದನು.

ಇದರಿಂದ ಆ ದೈತ್ಯನು ಗಾಯಗೊಂಡು ರಕ್ತ ಸುರಿಸುತ್ತಾ ಮಳೆಗಾಲದಲ್ಲಿ ಕೆನ್ನೀರಿನಿಂದ ಕೂಡಿದ ಪರ್ವತದಂತೆ ಒಪ್ಪಿದನು. ದೇವಾಂಗನಿಂದ ಈರೀತಿ ಪೀಡಿಸಲ್ಪಟ್ಟ ಪರಾಕ್ರಮಶಾಲಿಯಾದ ವಜ್ರದಂಷ್ಟ್ರನು ಅತ್ಯಂತ ಕುಪಿತನಾಗಿ, ಸರ್ಪ ತುಲ್ಯಗಳಾದ ಅನೇಕ ಬಾಣಗಳಿಂದ ದೇವಾಂಗನನ್ನು ಪ್ರತಿಯಾಗಿ ಹೊಡೆದನು. ಎರಡು ಬಾಣಗಳಿಂದ ಅವನ ಸಾರಥಿಯನ್ನೂ ಒಂದು ಬಾಣದಿಂದ ರಥ ಧ್ವಜವನ್ನೂ ಹೊಡೆದು, ದೇವಾಂಗನ ಹಣೆಗೆ ಮೂರು ಬಾಣಗಳನ್ನು ಪ್ರಯೋಗಿಸಿ ಸಿಂಹನಾದ ಮಾಡಿದನು. ಹಣೆಯಲ್ಲಿ ನೆಟ್ಟ ಮೂರು ಬಾಣಗಳಿಂದ ರಕ್ತಸಿಕ್ತನಾದ ದೇವಾಂಗನು ಕೆನ್ನೀರಿನಿಂದ ಕೂಡಿದ ತ್ರಿಕೂಟಾಚಲದಂತೆ ಶೋಭಿಸಿದನು. ಇದರಿಂದ ನೊಂದ ದೇವಾಂಗನು, ಕುಪಿತನಾಗಿ ಧನಸ್ಸನ್ನು ಆಕರ್ಣಾಂತವಾಗಿ ಎಳೆದು, ಎಪ್ಪತ್ತು ಮೂರು ಬಾಣಗಳಿಂದ ಆ ದೈತ್ಯನನ್ನೂ, ಒಂದು ಬಾಣದಿಂದ ಅವನ ಧನುಸ್ಸನ್ನೂ, ಒಂದು ಬಾಣದಿಂದ ಅವನ ರಥಧ್ವಜವನ್ನೂ, ನಾಲ್ಕು ಬಾಣಗಳಿಂದ ರಥಾಶ್ವಗಳನ್ನೂ ಪ್ರಹರಿಸಿ, ಅರ್ಧಚಂದ್ರಾಯುಧದಿಂದ ಆದೈತ್ಯನ ಶಿರಸ್ಸಿನ ಮೇಲೆ ಹೊಡೆದನು. ನೂರಾರು ಬಾಣಗಳಿಂದ ಅವನ ರಥವನ್ನು ಪುಡಿ ಪುಡಿ ಮಾಡಿ ಅಗ್ನಿ ಸಮಾನವಾದ ಅನೇಕ ದಿವ್ಯ ಬಾಣಗಳನ್ನು ಅವನ ಮೇಲೆ ಬಿಟ್ಟನು. ಇದರಿಂದ ಮುರಿದ ಧನುಸ್ಸುಳ್ಳ ವನೂ, ನಷ್ಟರಥನೂ, ರಕ್ತಸಿಕ್ತನೂ, ದೇವಾಂಗನ ಬಾಣಗಳಿಂದ ಅತಿಯಾಗಿ ಹೊಡೆಯ ಲ್ಪಟ್ಟು ಗಾಯಗೊಂಡವನೂ ಆದ ಆ ದೈತ್ಯನು ಹೂಬಿಟ್ಟ ಮುತ್ತುಗದ ಮರದಂತೆ ಒಪ್ಪುತ್ತಿದ್ದು ಬಿರುಗಾಳಿಯಿಂದ ಅಪ್ಪಳಿಸಲ್ಪಟ್ಟ ವೃಕ್ಷದಂತೆ ನಡುಗಿದನು. ಈರೀತಿ ಘಾತಿಸಲ್ಪಟ್ಟ ಮಹಾಬಲಶಾಲಿಯಾದ ವಜ್ರದಂಷ್ಟ್ರನು ರೋಷಾವೇಶನಾಗಿ, ಗದಾಪಾಣಿ ಯಾಗಿ, ದಂಡಪಾಣಿಯಾದ ಯಮನಂತೆ ದೇವಾಂಗನ ಮೇಲೆ ಎರಗಿದನು.

ಗದಾಪಾಣಿಯಾಗಿ ತನ್ನ ಮೇಲೆ ಹರಿಹಾಯುತ್ತಿರುವ ಆ ದೈತ್ಯನನ್ನು ದೇವಾಂಗನು ಕ್ರೂರವಾದ ಬಾಣಗಳಿಂದ ಹೊಡೆದು ತಡೆಗಟ್ಟಿ, ವಜ್ರ ಸಮಾನವಾದ ತನ್ನ ಶರಗಳಿಂದ ಅವನ ಗದೆಯನ್ನು ತುಂಡು ತುಂಡು ಮಾಡಿ ಅವನನ್ನು ಬರಿಗೈಯಾಗಿ ಮಾಡಿದನು. ಈ ರೀತಿ ರಣಧೀರನಾದ ದೇವಾಂಗನು ಅವನ ಗದೆಯನ್ನು ನಾಶಮಾಡಿ ಕೊಬ್ಬಿದ ಸಿಂಹದಂತೆ ವೀರಗರ್ಜನೆ ಮಾಡಿದನು. ದೇವತೆಗಳು ಸಿಂಹನಾದ ಮಾಡಿದರು. ರಣವಾದ್ಯಗಳ ಘೋಷವು ನಭೋ ಮಂಡಲವನ್ನು ವ್ಯಾಪಿಸಿತು. ಆ ದೈತ್ಯನು ನಷ್ಟಗದನಾಗಿ ನಿರಾಯುಧ ನಾಗಲು ಅವನು ಸುತ್ತಲೂ ಅಷ್ಟದಿಕ್ಕುಗಳನ್ನೂ ನೋಡಿ ಹೇಮಕೂಟಪರ್ವತದ

ಒಂದು ಮಹತ್ತರವಾದ ಶೃಂಗವನ್ನು ತನ್ನ ಪರಾಕ್ರಮದಿಂದ ಕೈಯಿಂದಲೇ ಕಿತ್ತು, ಪರ್ವತಾಯುಧನಾಗಿ ದೇವಾಂಗನನ್ನು ನೋಡಿ, ಎಲೈ ರಾಜನೇ ಎಲ್ಲಿಗೆ ಹೋಗುವೆ? ಕ್ಷಣಕಾಲ ನಿಲ್ಲು. ಕೋಟಿ ಸಿಡಿಲಿಗೆ ಸಮಾನವಾದ ಅತ್ಯಧಿಕವಾದ ಭಯಂಕರವಾದ ಈ ಶೃಂಗದ ಎಸೆತದಿಂದ ಖಂಡಿತ ನಿನಗೆ ಕ್ಷೇಮವಾಗುವುದು. ಈ ಶೃಂಗದಿಂದ ನಿನ್ನನ್ನೂ, ನಿನ್ನ ರಥ, ಸಾರಥಿ, ಅನುಯಾಯಿಗಳೆಲ್ಲರನ್ನೂ ಅರೆದು ಪುಡಿ ಮಾಡುವೆನು. ಯಾವ ಇಂದ್ರನು ನಿನ್ನ ಸಹಾಯದ ಬಲದಿಂದ ನಮ್ಮನ್ನು ಕಷ್ಟಪಡಿಸುತ್ತ, ನಿರ್ಭಯನಾಗಿರುವನೋ? ಆ ಇಂದ್ರನೇ ಸಮಸ್ತ ದೇವತೆಗಳೊಡಗೂಡಿ ಪಲಾಯನ ಸೂಕ್ತ ಪಡಿಸಲಿ. ನೀನು ನನ್ನ ತಮ್ಮನಾದ ವ್ಯಾಘ್ರವಕ್ತ್ರನನ್ನು ಕೊಂದು ವಿಜಯಶಾಲಿಯಾಗಿ ಬಹುಗರ್ವಿತನಾಗಿರುವೆ. ನನ್ನ ಸೋದರನ ಮರಣದಿಂದ ದುಃಖ ಸಮುದ್ರದಲ್ಲಿ ಮುಳುಗಿರುವ ನಾನು ನಿನ್ನ ಗರ್ವವನ್ನು ಮುರಿದು ಈ ರಣರಂಗದಲ್ಲಿ ನಿನ್ನನ್ನು ಕೊಂದು ನಿನ್ನ ರಕ್ತದಿಂದ ಅವನಿಗೆ ತರ್ಪಣವನ್ನು ಕೊಟ್ಟು ಅವನ ಆತ್ಮಕ್ಕೆ ಶಾಂತಿಯನ್ನುಂಟುಮಾಡುವೆನು. ದೇವತೆಗಳನ್ನು ಬೆದರಿಸುತ್ತ ಭ್ರಾತೃಶೋಕ ರಹಿತನಾಗುವೆನು.

ನೀನು ನಮಗೇಕೆ ವಸ್ತ್ರಗಳನ್ನು ಕೊಡಲಿಲ್ಲ. ಈಗ ನಮ್ಮ ಕೈಯಲ್ಲಿ ಸಿಕ್ಕಿರುವೆ ಇನ್ನೆಲ್ಲಿ ಪಲಾಯನ ಮಾಡುವೆ. ನನ್ನಿಂದ ನಿನ್ನನ್ನು ರಕ್ಷಿಸುವವರು ಯಾರು? ನೀನು ಹೋಗುವುದಾದರೂ ಎಲ್ಲಿಗೆ? ಎಂದು ಅಬ್ಬರಿಸುತ್ತಾ ದೇವಾಂಗನ ಮೈಮೇಲೆ ಆ ಮಹತ್ತರವಾದ ಹೇಮಕೂಟದ ಶೃಂಗವನ್ನು ಎಸೆದನು. ಇದನ್ನು ನೋಡಿ ದೇವಸೈನ್ಯದಲ್ಲಿ ಹಾಹಾಕಾರವುಂಟಾಯಿತು. ಸಿದ್ಧರು ದೇವಾಂಗನಿಗೆ ಕ್ಷೇಮವಾಗಲೆಂದು ಹಾರೈಸಿದರು. ಬುದ್ಧಿವಂತನಾದ, ಮಹಾಪರಾಕ್ರಮಿಯಾದ ದೇವಾಂಗರಾಜನು ಅಂತರಿಕ್ಷದಲ್ಲಿ ತನಗೆದುರಾಗಿ ಶೀಘ್ರವಾಗಿ ಧಾವಿಸುತ್ತಿರುವ ಆ ಹೇಮಕೂಟಶಿಖರವನ್ನು ನೋಡಿ, ತನ್ನ ಬಾಣಗಳನ್ನು ವಜ್ರಾಸ್ತ್ರ ಮಂತ್ರದಿಂದ ಅಭಿಮಂತ್ರಿಸಿ, ಆ ವಜ್ರಾಸ್ತ್ರ ಬಾಣಗಳನ್ನು ಹೇಮಕೂಟ ಶಿಖರದ ಮೇಲೆ ಪ್ರಯೋಗಿಸಿ ಪುಡಿ ಪುಡಿ ಮಾಡಿ ನೆಲಕ್ಕೆ ಕೆಡಹಿದನು.

ದೇವಾಂಗನ ಈ ಅದ್ಭುತ ಕಾರ್ಯವನ್ನು ನೋಡಿ ಸಮಸ್ತ ದೇವತೆಗಳೂ ಪರಮಾಶ್ಚರ್ಯಯುಕ್ತರಾಗಿ ದೇವಾಂಗನನ್ನು ಅನೇಕ ರೀತಿಯಾಗಿ ಕೊಂಡಾಡಿದರು. ಈ ರೀತಿ ವಜ್ರಸಮಾನವಾದ ಬಾಣಗಳಿಂದ ಪರ್ವತಶೃಂಗವನ್ನು ನಿವಾರಿಸಿದ ದೇವಾಂಗನು ಆ ದಾನವನನ್ನು ಹಾಸ್ಯ ಮಾಡುತ್ತ ತನ್ನ ಬಾಣಗಳಿಂದ ಅವನ ಸರ್ವಾವಯವಗಳನ್ನೂ ಘಾಶಿಸಿದುದಲ್ಲದೆ ಅವನ ಅನುಯಾಯಿಗಳಾದ ದೈತ್ಯರನ್ನೂ ಸಹ ಬಾಣಗಳಿಂದ ಹೊಡೆದನು. ಅತಿಭಾರವಾದ ಧನುಸ್ಸನ್ನು ಲೀಲಾ ಜಾಲವಾಗಿ ಕೈಯಲ್ಲಿ ಧರಿಸಿ ಕಾಲಯಮಸಮಾನನಾದ ದೇವಾಂಗನು ಉರಿಗೊಳ್ಳಿಯಂತೆ ತನ್ನ ರಥವನ್ನು ಮಂಡಲಾಕಾರವಾಗಿ ನಡೆಸುತ್ತಾ, ಬಾಣಗಳಿಂದ ಆಕಾಶವನ್ನು ಮುಚ್ಚಿ,

ಬಂಗಾರದ ಹಿಡಿಗಳೂ ಬೆಳ್ಳಿಯ ರೆಕ್ಕೆಗಳೂ ಇರುವ ಬಾಣಗಳಿಂದ ಅನೇಕ ರಾಕ್ಷಸರ ತಲೆಗಳನ್ನು ತರಿದು, ಶಾರ್ಙ್ಗಧರನಾದ ವಿಷ್ಣುವು ಯುದ್ಧದಲ್ಲಿ ದೈತ್ಯರನ್ನು ಅಟ್ಟಿದಂತೆ ದಾನವರನ್ನೆಲ್ಲಾ ದಿಕ್ಕು ದಿಕ್ಕಿಗೆ ಚದುರಿಸಿದನು.

ಈ ರೀತಿ ದೇವಾಂಗನಿಂದ ಯುದ್ಧದಲ್ಲಿ ಪರಾಜಿತರಾದ ದಾನವರು ಭಯ ವಿಹ್ವಲರಾಗಿ ಪ್ರಾಣವನ್ನುಳಿಸಿಕೊಳ್ಳುವುದಕ್ಕಾಗಿ ದಶದಿಕ್ಕುಗಳಿಗೂ ಓಡಿ ಹೋದರು. ವಜ್ರದಂಷ್ಟ್ರನು ದೇವಾಂಗನನ್ನು ಯುದ್ಧದಲ್ಲಿ ಕೊಲ್ಲಲು ಶಕ್ತಿಯಿಲ್ಲದವನಾಗಿ ಮಾಯಾ ಯುದ್ಧವನ್ನು ಅವಲಂಬಿಸಿ ಮಹಾಮಾಯೆಯನ್ನು ಕಲ್ಪಿಸಿ ದೇವತೆಗಳ ಸೈನ್ಯವನ್ನು ಪೀಡಿಸತೊಡಗಿದನು.

ದೇವತೆಗಳ ಸೈನ್ಯದಲ್ಲಿ ತನ್ನ ಮಾಯೆಯಿಂದಾಗಿ, ಭಯಂಕರವಾದ ಶಿಲಾ ವೃಷ್ಟಿಯಾಗುವಂತೆ ಮಾಡಿದನು. ಆತನು ತನ್ನ ಮಾಯಾವಿದ್ಯೆಯ ಪ್ರಭಾವದಿಂದ ಆ ರಣಭೂಮಿಯಲ್ಲಿ ಎಲ್ಲೆಲ್ಲೂ ಅತ್ಯಂತ ಕಪ್ಪಾದ ಮಹಾಮೇಘಗಳನ್ನು ಸೃಷ್ಟಿಸಿ ಗಾಢಾಂಧಕಾರವನ್ನುಂಟು ಮಾಡಿದನು. ಪರ್ವತೋಪಮವಾದ ಆಲಿಕಲ್ಲುಗಳಿಂದಲೂ, ಘೋರ ಸಿಡಿಲುಗಳಿಂದಲೂ, ಉರಿಗೊಳ್ಳಿಗಳಿಂದಲೂ ದೇವತೆಗಳ ಸೈನ್ಯಗಳನ್ನು ಪೀಡಿಸಿದನು. ಭಯಂಕರವಾದ ಬಿರುಗಾಳಿಯು, ಸುರಸೈನ್ಯವನ್ನು ಕಂಪಾಯಮಾನ ಮಾಡುತ್ತಾ, ಆಲಿಕಲ್ಲುಗಳ, ಸಿಡಿಲುಗಳ ಹೊಡೆತದಿಂದ ಝರ್ಝರಗೊಳಿಸುತ್ತಾ ದೇವಸೈನ್ಯವನ್ನು ಬಹು ದುಃಖಕ್ಕೀಡುಮಾಡಿತು. ಎಲ್ಲೆಲ್ಲೂ ಗಾಢಾಂಧಕಾರವು ತಾನೇ ತಾನಾಗಿರಲು, ದೇವತೆಗಳು ಈ ಉಪಟಳವನ್ನು ತಾಳಲಾರದ, ಬಹು ಸಂಕಟದಿಂದ ಚೀರುತ್ತ, ಆರ್ತಧ್ವನಿ ಮಾಡುತ್ತ ತಳಮಳಿಸುತ್ತಿರುವುದನ್ನು, ವಜ್ರದಂಷ್ಟ್ರನು ನೋಡಿ ಉತ್ಸಾಹದಿಂದ ಉನ್ಮತ್ತನಾಗಿ ಸಿಂಹನಾದ ಮಾಡುತ್ತ ಮಾಯಾ ವಿದ್ಯೆಯ ಪ್ರಭಾವದಿಂದ, ಅದೃಶ್ಯನಾಗಿ ದೇವತೆಗಳನ್ನು ಪುನಃಪುನಃ ಉಪದ್ರವಗೊಳಿಸುತ್ತ ವಿಜೃಂಭಿಸುತ್ತಿದ್ದನು.

ದೇವಾಂಗನು ಆ ಮಾಯಾವಿಯಾದ ದಾನವನ ಅಟ್ಟಹಾಸವನ್ನು ಕಂಡು ಅವನ ಮಾಯೆಯಿಂದ ವಂಚಿತರಾದ ದೇವತೆಗಳನ್ನು ನೋಡಿ ಕನಿಕರದಿಂದ, ಅವರನ್ನು ಆ ಮಾಯೆಯಿಂದ ಬಿಡುಗಡೆ ಮಾಡಲು ನಿಶ್ಚಯಿಸಿ, ಅದೃಶ್ಯನಾಗಿರುವ ಆ ದುಷ್ಟ ದಾನವನನ್ನು ಸಂಹರಿಸಲಿಚ್ಛೆಯಿಂದ ತನಗೆ ಶಿವನು ಅನುಗ್ರಹಿಸಿದ ಸರ್ವಶತ್ರು ಸಂಹಾರಕವಾದ ವೃಷಭಧ್ವಜವನ್ನು ವಿಧ್ಯುಕ್ತವಾಗಿ ಪೂಜಿಸಿ ಅದನ್ನು ಕೊಡಹುತ್ತ ಅವನ ಮತ್ತು ಅವನ ಸೇನೆಯ ಮೇಲೆ ಪ್ರಯೋಗಿಸಿದನು. ಆ ಧ್ವಜವು ಬಹು ಬಿರುಸಿನಿಂದ ಅಸುರಸೇನೆಯನ್ನು ಹೊಕ್ಕು ವಜ್ರದಂಷ್ಟ್ರನ ಮಾಯೆಯನ್ನು ನಾಶಮಾಡಿ, ಪ್ರತಿಯಾಗಿ ದೈತ್ಯರನ್ನು ಹಿಂಸಿಸಿ ಪೀಡಿಸಹತ್ತಿತು. ಆ ವೃಷಭಧ್ವಜದಿಂದ ಕೋಟಿ ಕೋಟಿ ವೃಷಭಗಳು ಪ್ರಾದುರ್ಭವಿಸಿ ತಮ್ಮ ಗೊರಸುಗಳಿಂದಲೂ, ಕೊಂಬುಗಳಿಂದಲೂ, ಬಾಲಗಳಿಂದಲೂ, ದಾನವರನ್ನು ಕೊಲ್ಲುತ್ತಿದ್ದುವು. ಆ ಮಹಾಧ್ವಜದಿಂದ ದೊಡ್ಡ

ದೊಡ್ಡ ಪರ್ವತಗಳೂ, ಸರ್ಪಗಳೂ, ಭಯಂಕರ ಹುಲಿಗಳೂ, ಶರಭಗಳೂ, ಅತ್ಯುಗ್ರ ಗಳಾದ ಗಂಡಭೇರುಂಡಗಳೇ ಮೊದಲಾದ ಮಹಾ ಪ್ರಾಣಿಗಳೂ, ಉರಿಗೊಳ್ಳಿಗಳೂ, ಸಿಡಿಲಿನ ಹೊಡೆತಗಳೂ, ಭಯಂಕರ ಭೂತಸಮುದಾಯಗಳೂ ಪ್ರಕಟವಾಗಿ ಘೋರ ವಾದ ದಾನವ ಸೇನೆಯನ್ನು ಪ್ರವೇಶಿಸಿ, ತಮ್ಮ ಸಾಮರ್ಥ್ಯಾತಿಶಯದಿಂದ ಕೆಲವರನ್ನು ಬೆದರಿಸುತ್ತಾ, ಕೆಲವರನ್ನು ತಿನ್ನುತ್ತಾ, ಕೆಲವರನ್ನು ಸುಡುತ್ತಾ, ಕೆಲವರನ್ನು ಹಲ್ಲುಗಳಿಂದ ಕಚ್ಚುತ್ತಾ, ಕೆಲವರನ್ನು ತಾಪಗೊಳಿಸುತ್ತಾ, ಕೆಲವರನ್ನು ಕೊಂಬು ಗಳಿಂದ ತಿವಿಯುತ್ತಾ ಅನೇಕ ರೀತಿಯಲ್ಲಿ ಅಸುರ ಸೇನೆಯನ್ನು ನಾಶಮಾಡಿದುವು.

ಅಳಿದುಳಿದ ದೈತ್ಯರು ಬಹುವಾಗಿ ಕಂಗೆಟ್ಟು ತಮ್ಮ ರಾಜನಾದ ವಜ್ರದಂಷ್ಟ್ರನನ್ನು ಕೂಡಿಕೊಂಡು ಭಯಭೀತರಾಗಿ ಪಲಾಯನಮಾಡಿ ತಮ್ಮ ತಮ್ಮ ಸ್ವಸ್ಥಾನಗಳನ್ನು ಸೇರಿದರು. ಹತಪುತ್ರನೂ, ಹತಾಮಾತ್ಯನೂ, ಹತಾನುಜನೂ, ಆದ ವಜ್ರದಂಷ್ಟ್ರನು ಹತಾಶನಾಗಿ, ವೀರಮಾಹೇಂದ್ರಪುರನನ್ನು ಸೇರಿದನು. ಎಲ್ಲೈ ತಪಸ್ವಿಗಳೇ ದೇವಾಂಗನು ಇದನ್ನು ನೋಡಿ ಹರ್ಷಯುಕ್ತವಾಗಿ ತನ್ನ ಪುತ್ರರಿಂದಲೂ ಪರಿವಾರದಿಂದಲೂ ಸೇನೆ ಯಿಂದಲೂ, ದೇವತೆಗಳಿಂದಲೂ ಕೂಡಿದವನಾಗಿ, ಸ್ವರ್ಗದಲ್ಲಿ ಕೆಲವು ಕಾಲವಿದ್ದು, ಇಂದ್ರನಿಂದ ಉಪಚರಿಸಲ್ಪಟ್ಟು, ಸನ್ಮಾನಿತನಾಗಿ, ಅವನಿಂದ ಅಪ್ಪಣೆ ಪಡೆದು ತನ್ನ ಆಮೋದಪಟ್ಟಣವನ್ನು ಸೇರಿದನು.

ಇಲ್ಲಿಗೆ ಬ್ರಹ್ಮಾಂಡಪುರಾಣದಲ್ಲಿ ಬ್ರಹ್ಮನಾರದ ಸಂವಾದರೂಪ ಉತ್ತರ ಖಂಡದ ದೇವಾಂಗ ಚರಿತ್ರೆಯಲ್ಲಿ ನಂದೀಧ್ವಜ ಪ್ರಭಾವ, ರಾಕ್ಷಸ ಪರಾಭವವೆಂಬ ಹದಿನೇಳನೆಯ ಅಧ್ಯಾಯ ಮುಗಿದುದು.

ಹದಿನೆಂಟನೆಯ ಅಧ್ಯಾಯ

ದೇವಾಂಗನ ಅವತಾರ ಸಮಾಪ್ತಿ

ಅನಂತರ ಅಸುರೇಂದ್ರನಾದ ವಜ್ರದಂಷ್ಟ್ರನು ಭಯ ಶೋಕಾಕುಲನಾಗಿ, ಹೆಬ್ಬಾವಿನಂತೆ ಬುಸುಗುಟ್ಟುತ್ತ ಮೃತ್ಯುವಶರಾದ ಪುತ್ರರನ್ನೂ, ಸೋದರರನ್ನೂ, ಬಂಧುಗಳನ್ನೂ ನೆನೆಸಿಕೊಂಡು ಬಹು ವಿಧವಾಗಿ, ರೋದಿಸುತ್ತಿದ್ದನು. ತನಗಾದ ಅವಮಾನವನ್ನು ತಡೆಯಲಾರದೆ, ಅನೇಕ ರೀತಿ ವಿಲಪಿಸುತ್ತಾ ರೋಷಾವಿಷ್ಟನಾಗಿ ಚಿಂತಾಕುಲನಾಗಿ, ದೇವಾಂಗ ಮತ್ತು ದೇವತೆಗಳ ಮೇಲಿನ ಪ್ರತೀಕಾರೇಚ್ಛೆಯಿಂದ ಯೋಚಿಸುತ್ತಿದ್ದನು. ಹೀಗಿರಲು ಅವನಿಗೆ ತನ್ನ ಅಳಿಯನಾದ ವಿದ್ಯುತ್ಕೇಶನ ನೆನಪು ಥಟ್ಟನೆ ಬಂದು ಅವನ ಸಹಾಯವನ್ನು ಪಡೆಯಬೇಕೆಂದು ನಿಶ್ಚಯಿಸಿ, ತನ್ನ ಅಳಿಯನ

ಮಂದಿರಕ್ಕೆ ಒಬ್ಬನೇ ತಾನಾಗಿಯೇ ಪಾದಚಾರಿಯಾಗಿ ಹೋದನು. ತನ್ನ ಮನೆಗೆ ಅಯಾಚಿತನಾಗಿ ಬಂದ ತನ್ನ ಮಾವನಾದ ವಜ್ರದಂಷ್ಟ್ರನನ್ನು ನೋಡಿ ವಿದ್ಯುತ್ಕೇಶನು ಆಶ್ಚರ್ಯದಿಂದ ಥಿಗ್ಗನೆದ್ದು ಎದುರುಗೊಂಡು, ಯೋಗ್ಯವಾದ ಆಸನದಲ್ಲಿ ಕುಳ್ಳಿರಿಸಿದನು. ಆಸನಾರೂಢನಾದ ವಜ್ರದಂಷ್ಟ್ರನು ಬಾಡಿದ ಮುಖವುಳ್ಳವನಾಗಿ ಕ್ಷಣಕಾಲ ಸುಮ್ಮನಿದ್ದನು.

ನಂತರ ಆಲೋಚಿಸಿ ಅಳಿಯನಾದ ವಿದ್ಯುತ್ಕೇಶನನ್ನು ನೋಡಿ ಪ್ರಿಯಸಖಾ, ಅಸುರಶ್ರೇಷ್ಠಾ, ಪರಾಕ್ರಮಶಾಲಿಯಾದ ವಿದ್ಯುತ್ಕೇಶನೇ, ನಿನ್ನಲ್ಲಿ ನನ್ನ ಒಂದೇ ಒಂದು ಕಾರ್ಯವಿದೆ. ಅದನ್ನು ಮಾಡುವೆಯಾ? ಎನಲು, ಅದಕ್ಕೆ ವಿದ್ಯುತ್ಕೇಶನು ಸೋಜಿಗ ಗೊಂಡು, ವಿನಯದಿಂದ ಕೂಡಿದವನಾಗಿ ವಜ್ರದಂಷ್ಟ್ರನನ್ನು ಕುರಿತು, ಎಲೈ ಸ್ವಾಮಿಯೇ ಅಸುರಶ್ರೇಷ್ಠನೇ ಒಡೆಯನಾದ ನಿನ್ನ ಮನಸ್ಸಿಗೆ ಯಾವುದು ಪ್ರಿಯವೋ, ಸಂತೋಷವೋ ಅದನ್ನು ಮಾಡಲು ನಾನು ಸದಾಸಿದ್ಧನಿರುವೆನು, ಆಜ್ಞಾಪಿಸು ಎಂದನು. ಇದನ್ನು ಕೇಳಿ ಅಸುರೋತ್ತಮನಾದ ವಜ್ರದಂಷ್ಟ್ರನು ಭಲೇ ಭಲೇ ಎಂದು ಅವನನ್ನು ಪ್ರಶಂಸಿಸಿ, ಎಲೈ ಅಸುರೋತ್ತಮನೇ ನಾನೊಂದು ಮಾತನ್ನು ಹೇಳುತ್ತೇನೆ ಕೇಳು.

ಮಿತ್ರನೇ ಈವರಿವಿಗೂ ನಡೆದುಹೋದ ಸಂಗತಿಯೆಲ್ಲವೂ ನಿನಗೆ ಗೊತ್ತೇ ಇದೆ ಅದೆಲ್ಲವನ್ನೂ ದೇವಾಂಗನೇ ಮಾಡಿದನೆಂಬುದನ್ನೂ ಬಲ್ಲೆಯಷ್ಟೆ. ಅಸುರಶ್ರೇಷ್ಠನಾದ, ನನ್ನ ತಮ್ಮ ವ್ಯಾಘ್ರವಕ್ತ್ರನನ್ನೂ, ಮಹಾ ಬಲಶಾಲಿಯಾದ ಸರ್ಪಜಿಹ್ವನನ್ನೂ, ಮಹಾ ಪರಾಕ್ರಮಿಗಳಾದ ಸೂರ್ಯಕೋಪ, ಅಗ್ನಿಕೋಪ, ಧೂಮ್ರನೇತ್ರ, ಮಕರಾಕ್ಷ, ಖಡ್ಗ ಜಿಹ್ವರನ್ನೂ ಸಮರಾಂಗಣದಲ್ಲಿ ದೇವಾಂಗನು ಕೊಂದಿರುತ್ತಾನೆ. ಆತನ ಪುತ್ರರು ಬಹು ಪರಾಕ್ರಮದಿಂದ ಯುದ್ಧೋನ್ಮತ್ತನಾದ, ರಣಧೀರನಾದ ಯಜ್ಞಾಂತಕನನ್ನು ಕೊಂದರು. ನಮ್ಮ ಸೇನೆಯಲ್ಲಿದ್ದ ಮಹಾವೀರರನ್ನೂ, ನನ್ನ ಮಕ್ಕಳನ್ನೂ, ಸೋದರ ರನ್ನೂ ಕೊಂದುದನ್ನು ಸ್ಮರಿಸಿದರೆ ನನ್ನ ಮರ್ಮಸ್ಥಾನವನ್ನೇ ಕತ್ತರಿಸಿದಂತಾಗುವುದು. ನನ್ನನ್ನು ವಿರಥನನ್ನಾಗಿ ಮಾಡಿ ಅದು ಸಾಲದೆಂಬಂತೆ ರಣರಂಗದಲ್ಲಿ ದೇವತೆಗಳ ಎದುರಿಗೆ ಮನ ಬಂದಂತೆ ಘಾತಿಸಿ ಅವಮಾನಪಡಿಸಿದನು.

ಉಗ್ರತೇಜಸ್ವಿಯಾದ ದೇವಾಂಗನ ಅತ್ಯುಗ್ರವಾದ, ವಿನಾಶಕಾರಿಯಾದ ಆ ವೃಷಭ ಧ್ವಜವು ನನ್ನ ಮಾಯೆಯೆಲ್ಲವನ್ನು ನಿವಾರಿಸಿ ನನ್ನ ಸೈನ್ಯವನ್ನೆಲ್ಲಾ ಧೂಳೀಪಟಮಾಡಿ, ನಿರ್ಮೂಲ ಮಾಡಿತು. ಜಿಂಕೆಯು ಸಿಂಹವನ್ನು ಸ್ಮರಿಸಿದ ಮಾತ್ರದಿಂದಲೇ ಅಂಜು ವಂತೆ, ಆ ವೃಷಭ ಧ್ವಜದ ನೆನಪಾದ ಕೂಡಲೇ ಭಯದಿಂದ ನಾನು ಕರಗಿ ನೀರಾಗುವೆನು. ಇಂದ್ರನು ದೇವಾಂಗನ ಸಹಾಯದಿಂದ ಜಯಪಡೆದು ಸಂತುಷ್ಟನಾಗಿ, ಗರ್ವಿತರಾದ ದೇವತೆಗಳೊಡನೆ ಸ್ವರ್ಗಕ್ಕೆ ತೆರಳಿದನು. ಸಗರೇಶ್ವರನಾದ ದೇವಾಂಗನನ್ನು ಆಶ್ರಯಿಸಿ ಇಂದ್ರನು ಮಹಾಪರಾಕ್ರಮಿಗಳಾದ ನಮಗೂ ಸಹ ಅಜೇಯನೂ, ಅನುಪಮನೂ ಆದನು. ದೈವವನ್ನು ಮೀರಲು ಯಾರಿಂದ ತಾನೇ ಸಾಧ್ಯ! ಆ ದೇವಾಂಗನ

ಸಹಾಯದಿಂದ ಯುದ್ಧದಲ್ಲಿ ಇಂದ್ರನಿಗೆ ಜಯವೂ, ನಮಗೆ ಅಪಜಯವೂ ಉಂಟಾಯಿತು. ಅಯ್ಯೋ ಮಿತ್ರನೇ ಏನು ಮಾಡಲಿ? ಅವರೀರ್ವರ ನೆನಪಾದೊಡನೆ ನನಗೆ ಮತ್ತೆ ಮತ್ತೆ ದುಃಖವೂ ಆಕ್ರೋಶವೂ ಉಕ್ಕಿ ಬರುವುವು.

ದೈವವೇ ದೊಡ್ಡದಲ್ಲದೆ ಈ ಅನರ್ಥಕಾರಿಯಾದ ಪೌರುಷಕ್ಕೆ ಧಿಕ್ಕಾರ; ತ್ರಿಲೋಕ ವಿಜಯಿಯೂ, ಶೂರನೂ, ನನ್ನ ತಮ್ಮನೂ ಆದ ವಾಜ್ರಪಕ್ತ್ರನನ್ನು ರಣರಂಗದಲ್ಲಿ ದೇವಾಂಗನು ಕೊಂದನು. ಏನು ಮಾಡಲಿ? ಆದರೂ ಈ ಸಹಿಸಲಾರದ ಅವಮಾನಕ್ಕೆ ಒಂದು ಪ್ರತೀಕಾರವಿದೆ. ಅದು ನಿನ್ನಿಂದ ಮಾತ್ರವೇ ಸಾಧ್ಯ. ನಮ್ಮ ವ್ಯಸನಕ್ಕೆಲ್ಲ ಮೂಲಕಾರಣ ಆ ದೇವಾಂಗನೇ. ಮನುಜೋತ್ತಮನಾದ ಅವನೇ, ಅವನನ್ನು ಜಯಿಸಬೇಕಾದರೆ ಕಪಟೋಪಾಯದಿಂದಲೇ ಸಾಧ್ಯ. ಆ ವೃಷಭಧ್ವಜದ ಪ್ರಭಾವದಿಂದ ಅವನು ನಮಗೆ ಸುಲಭನಲ್ಲ. ಶಂಭುದತ್ತವಾದ ವೃಷಭಧ್ವಜದ ಪ್ರತಾಪವು ರಣ ರಂಗದಲ್ಲಿ ಅವರ್ಣನೀಯ. ಅದಿಲ್ಲದಿದ್ದರೆ ದೇವಲನು ನನಗೆ ಎಷ್ಟರವನು? ನೀನು ಏನಾದರೊಂದು ಉಪಾಯದಿಂದ ಆ ವೃಷಭಧ್ವಜವನ್ನು ಅಪಹರಿಸಿಕೊಂಡು ಬಾ. ನೀನು ಅದನ್ನು ಹಾಗೆ ಅಪಹರಿಸಿ ತಂದದ್ದೇ ಆದರೆ? ಆ ದೇವಾಂಗನು ನಮ್ಮ ವಶವಾದಂತೆಯೇ ತಿಳಿ. ಉಪಾಯದಿಂದಲೂ ಮಾಯಾವಿದ್ಯಾಬಲದಿಂದಲೂ, ದೇವಾಂಗನಲ್ಲಿರುವ ವೃಷಭಧ್ವಜವನ್ನು ಅಪಹರಿಸಿ ತರಲು ನೀನೇ ಸರಿಯಾದವನು. ನೀನು ಇಷ್ಟು ಮಾಡಿದರೆ ನನಗೆ ಮಹೋಪಕಾರ ಮಾಡಿದಂತಾಗುವುದು ಎಂದನು. ವಜ್ರದಂಷ್ಟ್ರನು ಈ ರೀತಿ ನುಡಿಯಲು ಅದಕ್ಕೆ ವಿದ್ಯುತ್ಕೇಶನು ಪ್ರಭುವೇ, ಎಷ್ಟರ ಕೆಲಸ. ಅಪ್ಪಣೆಯಂತಾಗಲಿ ಎಂದು ನುಡಿದು, ತನ್ನ ಮಾವನನ್ನು ಬೀಳ್ಕೊಟ್ಟು ವೃಷಭಧ್ವಜವನ್ನು ಅಪಹರಿಸಲಿಚ್ಛೆಯಿಂದ ದೇವಲನಿದ್ದ ಆಮೋದಪಟ್ಟಣಕ್ಕೆ ವೇಷಾಂತರದಿಂದ ಬಂದನು.

ಕೂಡಲೇ ಅವನು ದೇವಾಂಗನ ಆಸ್ಥಾನಕ್ಕೆ ಬಂದು ಅವನನ್ನು ಕುರಿತು ಪ್ರಭು, ದೇವಲನೇ, ನೃಪಶ್ರೇಷ್ಠನೇ, ದಯಾಳುವೇ, ಅಮಿತ ಪರಾಕ್ರಮಿಯೇ, ನಾನು ದೇವ ರಾಜನಾದ ಇಂದ್ರನ ದೂತನು. ಎಲೈ ನಗರೇಶ್ವರನೇ ನಿನಗೆ ನಮಸ್ಕಾರ. ಇಂದ್ರನ ಅಪ್ಪಣೆಮೇರೆಗೆ ನಿನ್ನ ಬಳಿ ಬಂದಿರುವೆನು. ಮಹಾ ಪರಾಕ್ರಮಿಯಾದ ವಜ್ರದಂಷ್ಟ್ರನು, ಅಪಾರವಾದ ದೈತ್ಯಸೇನೆಯೊಡನೆ ಮತ್ತೆ ನಿರ್ಭಯನಾಗಿ ನಮ್ಮ ಮೇಲೆ ಯುದ್ಧಕ್ಕೆ ಸನ್ನದ್ಧನಾಗಿ ಬಂದಿರುವನು. ಇತ್ತೀಚಿನ ಭಯಂಕರ ಯುದ್ಧದಲ್ಲಿ ಮಹಾಪರಾಕ್ರಮಿ ಗಳಾದ ರಾಕ್ಷಸರೊಡನೆ ಹೋರಾಡಿ ದಣಿದ ನಿನಗೂ ನಿನ್ನ ಸೇನೆಗೂ, ಶ್ರಮವಾಗ ಬಾರದೆಂದು ಈಗ ಇಂದ್ರನು ತಾನೇ ರಾಕ್ಷಸರ ಮೇಲೆ ಯುದ್ಧಮಾಡಲು ದೇವತೆಗಳ ಸೇನಾ ಸಮೇತನಾಗಿ ಹೋದನು. ಎಲೈ ಭೂಪತಿಯೇ ಇಂದ್ರನು ವಜ್ರದಂಷ್ಟ್ರನೊಡನೆ ಯುದ್ಧ ಮಾಡುತ್ತಿದ್ದು ನನ್ನನ್ನು ನಿನ್ನ ಬಳಿಗೆ ಕಳುಹಿಸಿರುವನು.

ಅಗ್ನಿಯು ವೃಕ್ಷಗಳನ್ನು ಸುಡುವಂತೆ ಶತ್ರು ಸಮೂಹವನ್ನು ರಣರಂಗದಲ್ಲಿ ಸುಟ್ಟು ಬೂದಿಮಾಡುವ ಆ ನಿನ್ನ ವೃಷಭಧ್ವಜವನ್ನು ತರಹೇಳಿರುವನು. ಎಲೈ ಅನಘನೇ, ಮಹಾರಾಜನೇ ಆ ವೃಷಭಧ್ವಜವನ್ನು ಈಗ ನನಗೆ ಕೊಡು. ತ್ವರೆ ಮಾಡು. ಯಾವ ವೃಷಭಧ್ವಜದಿಂದ, ದಾನವರು ಯುದ್ಧದಲ್ಲಿ ಹತರಾಗಿ ನಿರ್ವೀರ್ಯರಾದರೋ, ಅಂತಹ ವೃಷಭಧ್ವಜದಿಂದ ಅವರು ಮತ್ತೆ ನಿರ್ನಾಮವಾಗಲಿ. ಮಹಿಮಾನ್ವಿತವಾದ ಆ ವೃಷಭಧ್ವಜದ ಪ್ರಭಾವದಿಂದ ಕ್ರೂರರೂ, ಮಾಯಾವಿಗಳೂ ಆದ ಅಸಂಖ್ಯಾತ ದೈತ್ಯರು ನಿರ್ನಾಮರಾದರು. ಆದರೂ ಹತಶೇಷರಾದ, ದುಷ್ಟರಾದ ದೈತ್ಯರು ದುರ್ಬುದ್ಧಿಯಿಂದ ವಜ್ರದಂಷ್ಟ್ರನ ಮುಂದಾಳತ್ವದಲ್ಲಿ ಪುನಃ ನಮ್ಮೊಡನೆ ಯುದ್ಧಮಾಡಲು ಬಂದಿರುವರು. ಎಲೈ ನೃಪೋತ್ತಮನೇ ಈಗಿನ ದೇವದಾನವರ ಯುದ್ಧದಲ್ಲಿ ಸಮಸ್ತ ದಾನವರೂ, ಆ ವೃಷಭಧ್ವಜದಿಂದ ನಾಶವಾಗಲಿ. ವೈರಿನಾಶಕವಾದ ಆ ಧ್ವಜವನ್ನು ಬೇಗ ಕೊಡೆಂದು ಅತಿವಿನಯದಿಂದಲೂ, ದೈನ್ಯದಿಂದಲೂ ಕೇಳಿಕೊಂಡನು. ಕಪಟದೂತನಾಡಿದ ಈ ಮಾತುಗಳನ್ನು ಕೇಳಿ ದೇವಾಂಗನು ಸತ್ಯವೆಂದೇ ನಂಬಿ, ಇಂದ್ರನ ಹಿತಾಕಾಂಕ್ಷೆಯಿಂದ ಆ ವೃಷಭಧ್ವಜವನ್ನು ಆ ಕಪಟಿಗೆ ಕೊಟ್ಟನು.

ವಿದ್ಯುತ್ಕೇಶನು ಅದನ್ನು ತೆಗೆದುಕೊಂಡು ಸಂತೋಷದಿಂದ ಶೀಘ್ರವಾಗಿ ವೀರಮಾಹೇಂದ್ರಪಟ್ಟಣಕ್ಕೆ ಬಂದನು. ಎಲೈ ತಪಸ್ವಿಗಳೇ ಅಸುರೇಶ್ವರನಾದ ವಜ್ರದಂಷ್ಟ್ರನು ವೃಷಭಧ್ವಜವನ್ನು ತಂದ ವಿದ್ಯುತ್ಕೇಶನನ್ನು ನೋಡಿ, ಆನಂದದಿಂದ ಅವನನ್ನು ಆಲಿಂಗಿಸಿ, ಆದರದಿಂದ ಉಪಚರಿಸಿ, ಸವಿಮಾತುಗಳಿಂದ ಸಂತೋಷಗೊಳಿಸಿದನು. ಈ ವಿಚಾರವನ್ನು ಸಮರಾಸಕ್ತರಾದ ಸಮಸ್ತ ದೈತ್ಯರಿಗೂ ತಿಳಿಸಿ, ಚತುರಂಗ ಬಲಸಮೇತನಾಗಿ ಸ್ವರ್ಗದ್ವಾರಗಳನ್ನು ಮತ್ತೆ ಮುತ್ತಿ ಇಂದ್ರನನ್ನು ಯುದ್ಧಕ್ಕೆ ಆಮಂತ್ರಿಸಿದನು. ಆ ದೈತ್ಯನು ತಿರುಗಿ ಯುದ್ಧಕ್ಕೆ ಬಂದುದನ್ನು ತಿಳಿದು ಇಂದ್ರನು ಆಶ್ಚರ್ಯದಿಂದ ರೋಷಗೊಂಡು, ಕ್ರುದ್ಧನಾಗಿ ಸಮಸ್ತ ದೇವಸೇನಾಸಮೇತನಾಗಿ ಹೊರಟು ರಾಕ್ಷಸನೊಡನೆ ಯುದ್ಧ ಮಾಡುತ್ತ ದೇವಾಂಗನ ಸಹಾಯವನ್ನು ಬಯಸಿ ಆಮೋದಪಟ್ಟಣಕ್ಕೆ ತನ್ನ ದೂತನೊಬ್ಬನನ್ನು ವೃಷಭಧ್ವಜವನ್ನು ತರಲು ತ್ವರೆಯಾಗಿ ಕಳುಹಿಸಿದನು. ಆ ದೂತನು ಶೀಘ್ರವಾಗಿ ಆಮೋದ ಪಟ್ಟಣವನ್ನು ಸೇರಿ ದೇವಾಂಗನನ್ನು ಕಂಡು ಇಂದ್ರನ ಮೇಲೆ ವಜ್ರದಂಷ್ಟ್ರನು ಮತ್ತೆ ಯುದ್ಧಕ್ಕೆ ಬಂದಿರುವುದನ್ನು ತಿಳಿಸುತ್ತ, ಎಲೈ ದೇವಾಂಗ ನೃಪಶಾರ್ದೂಲನೇ, ದೈತ್ಯರೊಡನೆ ಯುದ್ಧವು ಇಂದ್ರನಿಗೆ ಮತ್ತೆ ಸಂಭವಿಸಿರುವುದರಿಂದ, ನಿನ್ನನ್ನು ಸ್ವರ್ಗಕ್ಕೆ ಶೀಘ್ರವಾಗಿ ಕರೆದುಕೊಂಡು ಬರಬೇಕೆಂದು ನನ್ನನ್ನು ಇಂದ್ರನು ನಿನ್ನಲ್ಲಿಗೆ ಕಳುಹಿಸಿರುವನೆಂದು, ತಿಳಿಸಿ ಅವನ ಸಂದೇಶವನ್ನು ಅರುಹಿ, ತಾವು ತಡಮಾಡದೆ ಈಗಲೇ ಹೊರಡಬೇಕೆಂದನು.

ಅದನ್ನು ಕೇಳಿ ದೇವಾಂಗನು ಆಶ್ಚರ್ಯಗೊಂಡು ತನ್ನೊಳಗೆ ತಾನೇ ಆಲೋಚಿಸುತ್ತಾ, ಇದೇನು ನಿನ್ನೆ ತಾನೇ ವೃಷಭಧ್ವಜವನ್ನು ತರಹೇಳಿ ಇಂದ್ರನು ತರಿಸಿಕೊಂಡು ಈದಿನ ಪುನಃ ವೃಷಭಧ್ವಜದೊಡನೇ ನಾನೇ ಶೀಘ್ರವಾಗಿ ಬರಬೇಕೆಂದು ಹೇಳಿಕಳುಹಿಸಿರುವನು. ಏನು ಕಾರಣ? ವೃಷಭಧ್ವಜದ ಪ್ರಭಾವವು ರಣರಂಗದಲ್ಲಿ ಕುಗ್ಗಿತೋ? ನನ್ನ ಧ್ವಜವು ಇಂದ್ರನ ಮನಸ್ಸಿಗೆ ಬರಲಿಲ್ಲವೋ? ಅಥವಾ ಬಲಿಷ್ಠರಾದ ದೈತ್ಯರು ದೇವತೆಗಳನ್ನು ಯುದ್ಧದಲ್ಲಿ ಕಪಟದಿಂದ ಜಯಿಸಿ ಧ್ವಜವನ್ನು ಅಪಹರಿಸಿದರೋ? ಎಂದು ಸಂದೇಹಪಡುತ್ತ ದೇವಾಂಗನು ತನ್ನ ಪುತ್ರರೊಡನೆ ಚತುರಂಗಬಲ ಸಮೇತನಾಗಿ ತಡಮಾಡದ ಇಂದ್ರನ ಸಹಾಯಕ್ಕೆ ಧಾವಿಸಿದನು.

ಶತ್ರುನಾಶಕವಾದ ಆ ವೃಷಭಧ್ವಜದ ಮಹಿಮೆಯನ್ನು ಮೊದಲೇ ಅರಿತಿದ್ದ ಆ ವಜ್ರದಂಷ್ಟ್ರನು ಅದನ್ನು ಭಕ್ತಿಯಿಂದ ವಿಧಿವತ್ತಾಗಿ ಪ್ರಾರ್ಥಿಸಿ, ಪೂಜಿಸಿ, ದೇವಲನು ಇಂದ್ರನ ಸಹಾಯಕ್ಕೆ ಬರುವ ಮೊದಲೇ ಅದನ್ನು ದೇವ ಸೈನ್ಯದ ಮೇಲೆ ಪ್ರಯೋಗಿಸಿದನು. ಹೀಗೆ ಪ್ರಯೋಗಿಸಲ್ಪಟ್ಟ ಆ ವೃಷಭಧ್ವಜವು ದೇವಸೇನೆಯೆಲ್ಲವನ್ನೂ ಕ್ಷೋಭೆಗೊಳಿಸಿ ಘಾತಿಸಿದ್ದರಿಂದ ದೇವಸೇನೆಯೆಲ್ಲವೂ ಭೀತಿಪಟ್ಟು ಇಂದ್ರ ಸಮೇತವಾಗಿ ಪಲಾಯನ ಮಾಡಿತು. ಹೀಗೆ ಇಂದ್ರಾದಿದೇವತೆಗಳು ಓಡಿಹೋದನಂತರ ದೇವಾಂಗನು ಚತುರಂಗಬಲ ಸಮೇತನಾಗಿ ಸ್ವರ್ಗಕ್ಕೆ ಬಂದು ರಣರಂಗವನ್ನು ಪ್ರವೇಶಿಸಿದನು. ಆಗ ವಜ್ರದಂಷ್ಟ್ರನು ವೃಷಭಧ್ವಜವನ್ನು ಉಪಸಂಹರಿಸಿಕೊಂಡು, ರಣರಂಗವನ್ನು ಬಿಡಲು ಸಿದ್ಧನಾಗುತ್ತಿದ್ದನು. ದೇವಾಂಗರಾಜನು ಇದನ್ನು ನೋಡಿ ಅವನ ಮೇಲೆ ಕೋಪಗೊಂಡು ಅವನನ್ನು ಬಾಣಗಳಿಂದ ಮುಚ್ಚಿದನು. ಸಮಸ್ತದಾನವ ಸೇನೆಯೂ ದೇವಾಂಗನನ್ನು ಸುತ್ತುಗಟ್ಟಿ ನಾನಾ ವಿಧವಾದ ಆಯುಧಗಳಿಂದ ಅವನನ್ನು ಎದುರಿಸಿತು. ವಜ್ರದಂಷ್ಟ್ರನು ಮತ್ತೆ ವೃಷಭಧ್ವಜವನ್ನು ಹಿಂದಿನಂತೆ ವಿಧಿವತ್ತಾಗಿ ಪೂಜಿಸಿ ದೇವಾಂಗನ ಸೇನೆಯ ಮೇಲೆ ಪ್ರಯೋಗಿಸಿದನು.


ಕೂಡಲೇ ಆ ಧ್ವಜವು ದೇವಾಂಗನ ಸೇನೆಯನ್ನು ನಾಶಮಾಡಲಾರಂಭಿಸಿತು. ಆ ವೃಷಭಧ್ವಜವು ದೇವಾಂಗನ ಸೇನೆಯೆಲ್ಲವನ್ನೂ ಭಯಗೊಳಿಸಿ ದಿಕ್ಕು ದಿಕ್ಕಿಗೆ ಚದುರಿಸಿತು. ಹೀಗೆ ವೃಷಭಧ್ವಜದಿಂದ ಪೀಡಿತರಾದ ದೇವಾಂಗನ ಸೈನಿಕರು ಬಹು ಭೀತರಾಗಿ ಕಾಲಯಮನಿಗೆ ಅಂಜುವಂತೆ ಅಂಜಿ, ಹಿಂದು ಮುಂದು ನೋಡದೆ ಚೆಲ್ಲಾಪಿಲ್ಲಿಯಾದರು. ಕಾಡ್ಗಿಚ್ಚಿಗೆ ಹೆದರಿದ ಮೃಗಗಳಂತೆ ಅಳಿದುಳಿದ ದೇವಾಂಗನ ಸೈನಿಕರು ಪ್ರಾಣಭಯದಿಂದ ಹಿಮ್ಮೆಟ್ಟಿದರು. ವಜ್ರದಂಷ್ಟ್ರನು ಇದನ್ನು ನೋಡಿ ಸರ್ವಪ್ರಯತ್ನದಿಂದ ದೇವಾಂಗನನ್ನು ಸುತ್ತುಗಟ್ಟಿ, ಅವನನ್ನು ಬೆದರಿಸುತ್ತಾ ಅವನ ಮೇಲೆ ಅನೇಕಾಯುಧಗಳನ್ನು ಪ್ರಯೋಗಿಸಿದನು. ಕೆಲವರು ದೇವಾಂಗನ ರಥದ ಮೇಲೇರಿದರು. ಕೆಲವರು ದೇವಾಂಗನ ಧನುರ್ಬಾಣ ಬತ್ತಳಿಕೆಗಳನ್ನು ಕಿತ್ತುಕೊಂಡರು. ಕೆಲವರು ದೇವಾಂಗನ ರಥ ಸಾರಥಿಯನ್ನು ಹಿಂಗಟ್ಟು ಮುಂಗಟ್ಟು

ಕಟ್ಟಿದರು. ಕೆಲವರು ರಥದ ನೊಗವನ್ನು ಮುರಿದರು. ಕೆಲವರು ಸಮಸ್ತಾಯುಧ ಗಳನ್ನೂ ಕಿತ್ತುಕೊಂಡು ರಥಾಶ್ವಗಳನ್ನು ಕೊಂದು ದೇವಾಂಗನನ್ನು ಸೆರೆಹಿಡಿದರು.

ಹೀಗೆ ಸೆರೆಹಿಡಿಯಲ್ಪಟ್ಟ ದೇವಾಂಗನು ತನ್ನನ್ನು ಬಿಡಿಸಿಕೊಳ್ಳಲಾರದಾದನು. ರಣರಂಗದಲ್ಲಿ ದೇವಾಂಗನು ತನ್ನ ಕಡೆಯವರಾರನ್ನೂ ಕಾಣಲಿಲ್ಲ. ಸೆರೆಹಿಡಿದ ದೇವಾಂಗನನ್ನು ವಜ್ರದಂಷ್ಟ್ರನು ತನ್ನ ರಥದ ಕಂಬಕ್ಕೆ ಬಿಗಿದು ವೃಷಭಧ್ವಜ ದೊಡನೆ ತನ್ನ ಸೇನಾಸಮೇತನಾಗಿ ಜಯಗರ್ವಿತನಾಗಿ ಸಂತೋಷಭರಿತನಾಗಿ ತನ್ನ ಪಟ್ಟಣಕ್ಕೆ ತೆರಳಿದನು. ದಿವ್ಯಾಂಗನು ತನ್ನ ತಂದೆಯಾದ ಮಹಾಪರಾಕ್ರಮಿಯಾದ ದೇವಾಂಗನ ಬಂಧನವನ್ನು ನೆನೆಯುತ್ತಾ ದುಃಖಸಾಗರದಲ್ಲಿ ಮುಳುಗಿದವನಾಗಿ, ಸೋದರರಿಂದಲೂ, ಅಳಿದುಳಿದ ಸೈನ್ಯದಿಂದಲೂ ಕೂಡಿಕೊಂಡು ಆಮೋದಪಟ್ಟಣಕ್ಕೆ ಹಿಂದಿರುಗಿ ಕೀರ್ತಿವಂತಳೂ ಪರಮಪೂಜ್ಯಳೂ ಆದ ತನ್ನ ತಾಯಿ ದೇವದತ್ತೆಗೆ ರಣರಂಗದಲ್ಲಿ ನಡೆದ ವಿಷಯಗಳನ್ನೆಲ್ಲಾ ತಿಳಿಸಿ ಆಕೆಯನ್ನು ಸಂತೈಸಿ, ಸಮಾಧಾನ ಗೊಳಿಸಿ ಮಂತ್ರಿಗಳಿಂದೊಡಗೂಡಿ ವ್ಯಸನದಿಂದ ಕೂಡಿದವನಾಗಿ ಸಮಸ್ತ ಪ್ರಜೆ ಗಳನ್ನೂ ಪರಿಪಾಲಿಸುತ್ತಿದ್ದನು.

ಜಯಗರ್ವಿತನಾದ ವಜ್ರದಂಷ್ಟ್ರನು ಸಮಸ್ತ ಸೇನೆಯಿಂದ ಕೂಡಿಕೊಂಡು ತನ್ನ ರಾಜಧಾನಿಯಾದ ವೀರಮಾಹೇಂದ್ರಪುರಕ್ಕೆ ಬಂಧಿತನಾದ ದೇವಾಂಗನೊಡನೆ ಹಿಂದಿರುಗಿ ಅಲ್ಲಿ ಅವನನ್ನು ಬಂಧನದಿಂದ ಬಿಡುಗಡೆ ಮಾಡಿ, ನಾನಾರೀತಿ ಸನ್ಮಾನಿಸಿ ತಾನೂ, ಕುಶಲರಾದ ತನ್ನ ಮಂತ್ರಿಗಳೂ ವಸ್ತ್ರನಿರ್ಮಾಪಕನಾದ ದೇವಾಂಗನನ್ನು ಮೃದುವಚನಗಳಿಂದ ಸಂತೈಸಿ, ಸಮಾಧಾನಮಾಡಿ ಅವನೊಡನೆ ಮೈತ್ರಿ ಬೆಳೆಸಿದರು. ಹೀಗಿರಲು ವಜ್ರದಂಷ್ಟ್ರನು ಅವನಿಗೆ ತನ್ನ ಪುತ್ರಿ ಸರ್ವ ಲಕ್ಷಣ ಸಂಪನ್ನೆಯಾದ ಪದ್ಮಿನಿಯನ್ನು ವಿವಾಹ ಮಾಡಿ ಕೊಡಲು ಉದ್ದೇಶಿಸಿ ಈ ವಿಚಾರವನ್ನು ದೇವಾಂಗನಿಗೆ ತಿಳಿಸಿದನು. ಮಹಾ ಪರಾಕ್ರಮಿಯಾದ ದೇವಾಂಗನು ಮೊದಲು ಇದಕ್ಕೆ ಒಪ್ಪಲಿಲ್ಲ. ನಂತರ ಅಗ್ನಿದೇವನ ಮಾತಿನ ಮೇರೆಗೆ ಆಕೆಯ ಪಾಣಿಗ್ರಹಣ ಮಾಡಿದನು. ದೇವಾಂಗನು ಅಗ್ನಿದೇವನ ಮಾತಿನ ಮೇರೆಗೆ ಆ ಪದ್ಮಿನಿಯನ್ನು ಪರಿಗ್ರಹಿಸಿದ್ದರಿಂದ ಆಕೆಯು ಲೋಕದಲ್ಲಿ ಅಗ್ನಿದತ್ತೆಯೆಂದು ಪ್ರಸಿದ್ಧಳಾದಳು. ಅವಳಲ್ಲಿ ದೇವಾಂಗನು ಮಹಾಬಲಶಾಲಿಗಳಾದ ಮೂರು ಮಂದಿ ಮಕ್ಕಳನ್ನು ಪಡೆದನು. ಆ ಮೂವರೂ ಶಾಲ, ಬಲ, ಹಲರೆಂದು ನಾಮಕರಣ ಮಾಡಲ್ಪಟ್ಟು, ದಿನೇ ದಿನೇ ಅಭಿವೃದ್ಧಿಯಾಗು ತ್ತಿದ್ದರು. ದೇವಾಂಗನು ಅವರಿಗೆ ನೇಯ್ಗೆಯ ಕೆಲಸವನ್ನು ಕಲಿಸಿದನು. ತನ್ನ ಈ ಮೂವರು ಮಕ್ಕಳಿಂದಲೇ ಸಮಸ್ತ ರಾಕ್ಷಸರಿಗೂ ವಸ್ತ್ರಗಳನ್ನು ಕೊಡಿಸಿದನು.

ಅನಂತರ ಶ್ರೀಯುತನಾದ ದೇವಾಂಗನು ತನ್ನ ಮಾವನಾದ ವಜ್ರದಂಷ್ಟ್ರ ದೈತ್ಯೇಂದ್ರನಿಂದ ತನ್ನ ವೃಷಭಧ್ವಜವನ್ನು ಮತ್ತೆ ಹೊಂದಿ, ಅವನ ಅಪ್ಪಣೆ ಪಡೆದು ತನ್ನ ಆಮೋದ ಪಟ್ಟಣಕ್ಕೆ ಬಂದು ಸುಖವಾಗಿ ರಾಜ್ಯವಾಳುತ್ತಿದ್ದನು.



ಹೀಗಿರಲು ಪಾರ್ವತೀಪತಿಯಾದ ಶಂಕರನನ್ನು ಸೇವಿಸಲಿಚ್ಛೆಯುಂಟಾಗಿ ಕೈಲಾಸಕ್ಕೆ ತೆರಳಿ ಶಿವನನ್ನು ಕಂಡನು. ಶಿವನು ದೇವಾಂಗನನ್ನು ನೋಡಿ ಸಿಟ್ಟೆಗೆದ್ದು ಎಲೈ ದುರ್ಬುದ್ಧಿಯೇ ನಾನು ನಿನಗನುಗ್ರಹಿಸಿದ ದಿವ್ಯವಾದ ವೃಷಭಧ್ವಜವನ್ನು ಆ ದಾನವನಿಗೆ ಕೊಟ್ಟು ವಿಚಾರ ಶೂನ್ಯನಾಗಿ, ಸಮಸ್ತ ದೇವತೆಗಳೂ, ಸಂಕಷ್ಟವನ್ನು ಅನುಭವಿಸಲು ಕಾರಣನಾದೆ. ಆದುದರಿಂದ ನೀನು ಮಹಿಮಾರಹಿತನಾಗಿ ಗಂಧರ್ವನಾಗಿ ಹುಟ್ಟಿ ಹೋಗು ಎಂದು ಶಪಿಸಿದನು ದೇವಾಂಗನು ಇದನ್ನು ಕೇಳಿ ವ್ಯಸನಾಕ್ರಾಂತನಾಗಿ ಆಮೋದ ಪಟ್ಟಣಕ್ಕೆ ಬಂದು ಈ ವೃತ್ತಾಂತವನ್ನೆಲ್ಲಾ ತನ್ನ ಪರಿಜನರಿಗೆ ಅರುಹಿದನು.

ನಂತರ ದೇವಾಂಗ ರಾಜನ ದೇಹವು ಲಿಂಗವಾಯಿತು. ಆ ಲಿಂಗವು ಆ ಪಟ್ಟಣದಲ್ಲಿ ರಾಮಲಿಂಗೇಶ್ವರನೆಂದು ಪ್ರಸಿದ್ಧವಾಗಿ ದಿವ್ಯಾಂಗನಿಂದ ಪೂಜಿಸಲ್ಪಡುತ್ತಿತ್ತು. ದಿವ್ಯಾಂಗನು ತನ್ನ ತಂದೆಯ ನಂತರ, ರಾಜ್ಯವಾಳುತ್ತಿದ್ದನು.

ಇಲ್ಲಿಗೆ ಬ್ರಹ್ಮಾಂಡ ಪುರಾಣದ ಬ್ರಹ್ಮ ನಾರದ ಸಂವಾದ ರೂಪ ಉತ್ತರಖಂಡದ ದೇವಾಂಗ ಚರಿತ್ರೆಯಲ್ಲಿ ದೇವಾಂಗನ ಅವತಾರ ಸಮಾಪ್ತಿ ಎಂಬಲ್ಲಿಗೆ ಹದಿನೆಂಟನೆಯ ಅಧ್ಯಾಯ ಮುಗಿದುದು.

ಹತ್ತೊಂಬತ್ತನೆಯ ಅಧ್ಯಾಯ

ವಿದ್ಯಾಧರ ಪ್ರಶಂಸೆ

ಸೂತನು ಹೇಳುತ್ತಾನೆ. ಮೇರು ಪರ್ವತದ ಉತ್ತರಕ್ಕೆ ಪಾಂಚಾಲವೆಂಬ ದೇಶವುಂಟು. ಆ ದೇಶಕ್ಕೆ ಮಹಾ ಪರಾಕ್ರಮಿಯೂ ದಯಾಳುವೂ, ಕೀರ್ತಿವಂತನೂ, ತೇಜಸ್ವಿಯೂ, ಸರ್ವಸಮ್ಮತನೂ, ಆದ ಸತ್ಯಸಂಧನೆಂಬುವನು ರಾಜನಾಗಿದ್ದನು. ಆವನಿಗೆ ಸರ್ವ ಲಕ್ಷಣ ಸಂಪನ್ನೆಯಾದ ಕೋಮಲಾಂಗಿಯಾದ ಲಾವಣ್ಯಸಮೂಹದ ರಾಶಿಯೋ ಎಂಬಂತಿರುವ ಇಂದುಮುಖಿಯೆಂಬ ಒಬ್ಬ ಮಗಳಿದ್ದಳು. ಒಂದು ದಿನ ಆ ಸುಂದರಿಯು ತನ್ನ ಸಖಿಯರಿಂದ ಕೂಡಿದವಳಾಗಿ ಕ್ರೀಡಾರ್ಥವಾಗಿ ಉದ್ಯಾನವನಕ್ಕೆ ಹೋದಳು. ಪ್ರಾಪ್ತ ವಯಸ್ಕಳೂ ಯುವತಿಯೂ ಆದ ಆ ರಾಜಪುತ್ರಿಯು ಆ ವನದಲ್ಲಿ ತನ್ನ ಸಖಿಯರೊಡಗೂಡಿ ಸುಗಂಧ ಪರಿಮಳಯುಕ್ತವಾದ ವಾಯುವನ್ನು ಸೇವಿಸುತ್ತ ಸಂಚರಿಸುತ್ತಿದ್ದಳು. ಆಗ ಅಲ್ಲಿಯೇ ವಿಹರಿಸುತ್ತಿದ್ದ ಸುರೂಪಿಯಾದ ವಿದ್ಯಾಧರನೊಬ್ಬನು ಆ ಸುಂದರಾಂಗಿಯನ್ನು ನೋಡಿ ಕಾಮ ವಿಕಾರಕ್ಕೊಳಗಾದನು. ಅವಳೊಡನೆ ಮಾತನಾಡಲು ಅವನು ಸಮಯವನ್ನು ನಿರೀಕ್ಷಿಸುತ್ತಾ ಆ ವನವನ್ನು ಬಿಟ್ಟು ಹೋಗಲಾರದೆ ಅಲ್ಲಿಯೇ ಇದ್ದು. ಅವಳ ಸಖಿಯರಿಗೆ ಗೊತ್ತಾಗದಂತೆ, ಅವಳ ಇಂಗಿತ

ವನ್ನರಿಯಲು ತನ್ನ ನಿಜಸ್ವರೂಪವನ್ನು ಅವಳಿಗೊಬ್ಬಳಿಗೇ ತೋರಿಸಿದನು. ರಾಜ ಪುತ್ರಿಯಾದ ಇಂದುಮುಖಿಯು ಆ ಸುಂದರನಾದ ವಿದ್ಯಾಧರನನ್ನು ನೋಡಿ ತಾನೂ ಕಾಮವಶಳಾಗಿ, ಇವನು ಮನ್ಮಥನೋ? ಜಯಂತನೋ? ನಳಕೂಬರನೋ? ಎಂದು ಯೋಚಿಸಿ ಅವನ ಇಂಗಿತವನ್ನು ತಿಳಿದು, ತನ್ನ ಸಖಿಯರನ್ನು ಕಪಟ ನೆಪ ಹೇಳಿ ದೂರಕ್ಕೆ ಕಳುಹಿಸಿ, ರಹಸ್ಯವಾದ ಸ್ಥಳಕ್ಕೆ ತಾನು ಅವನೊಂದಿಗೆ ಹೋಗಿ, ಎಲೈ ಪುರುಷಶ್ರೇಷ್ಠನೇ ನೀನು ಯಾರು ನಿನ್ನ ಹೆಸರೇನು? ನಿನ್ನ ಊರಾವುದು? ಈ ಎಲ್ಲ ಸಂಗತಿಯನ್ನು ಮುಚ್ಚಿಡದೆ ನಿಜವನ್ನು ಹೇಳೆಂದಳು.

ಅದಕ್ಕೆ ಆ ವಿದ್ಯಾಧರನು ತನ್ನ ಮನೋಭೀಷ್ಟ ನೆರವೇರಿತೆಂದು ಸಂತುಷ್ಟನಾಗಿ, ಎಲೈ ಸುಂದರಾಂಗಿ ನಾನು ಮಹಾತೇಜಸ್ವಿಯಾದ ಪದ್ಮಭುವನೆಂಬ ವಿದ್ಯಾಧರೇಶ್ವರನ ಪುತ್ರನು. ನನ್ನ ಹೆಸರು ಹೇಮವರ್ಣ. ಪದ್ಮದಳಾಕ್ಷಿಯೇ ನಿನ್ನನ್ನು ಕಂಡಾಗಿನಿಂದ ನನ್ನ ಮನಸ್ಸು ನಿನ್ನಲ್ಲಿಯೇ ನೆಟ್ಟಿರುವುದು. ನಿನ್ನ ವಿಲಾಸಯುಕ್ತಗಳಾದ, ಪ್ರೇಮ ರಸಾರ್ದ್ರಗಳಾದ, ರತಿಕಲಾಪಗಳಿಂದ ನನ್ನನ್ನು ಸಂತೋಷಪಡಿಸು ಎಂದನು. ಇದನ್ನು ಕೇಳಿ, ಮೊದಲೇ ಕಾಮಪೀಡಿತಳಾದ ಆ ರಾಜಪುತ್ರಿಯು ಅವನಲ್ಲಿ ಇನ್ನೂ ಅಧಿಕ ಮೋಹಗೊಂಡು ಅವನ ಮಾತುಗಳಿಗೆ ಒಪ್ಪಿ, ಈ ವಿಷಯವನ್ನು ಯಾರಿಗೂ ತಿಳಿಸದೆ ರಹಸ್ಯವಾಗಿಡುವಂತೆ ಅವನಿಂದ ಪ್ರಮಾಣ ಮಾಡಿಸಿಕೊಂಡು ತನ್ನ ಸಂಕೇತ ಸ್ಥಳವನ್ನು ತಿಳಿಸುತ್ತಾ ಎಲೈ ವಿದ್ಯಾಧರಶ್ರೇಷ್ಠನೇ, ಅದೋ ಅಲ್ಲಿ ಕಾಣುವ ಶೃಂಗಾರಪುರದ ಪಾಂಚಾಲ ದೇಶಕ್ಕೆ ರಾಜನಾದ ಸತ್ಯಸಂಧನೃಪತಿಗೆ ನಾನು ಪುತ್ರಿ. ಎದುರಿಗೆ ಗೋಚರಿಸುವುದೇ ರಾಜಭವನ. ಅದಕ್ಕೆ ಉತ್ತರ ದಿಕ್ಕಿನಲ್ಲಿ, ಅತ್ಯುನ್ನತವಾದ ಚಂದ್ರನಂತೆ ಹೊಳೆಯುವ ಭೋಗ ವಿಲಾಸಕ್ಕೆ ಅರ್ಹವಾದ, ಶುಭ ಕರವಾದ, ಮೇಲುಪ್ಪರಿಗೆಯಲ್ಲಿ ನನ್ನ ವಾಸ. ಅಲ್ಲಿ ತಾನು ನನ್ನ ಸಖಿಯರೊಡನೆ ಮಾತ್ರವೇ ಇದ್ದು ಅಲ್ಲಿಯೇ ಏಕಾಂಗಿಯಾಗಿ ವಾಸಿಸುತ್ತಿರುವೆನು. ಆ ನನ್ನ ಉಪ್ಪರಿಗೆಯು ಬಹು ಸುಂದರವಾಗಿದೆ. ಈ ದಿನ ಮಧ್ಯ ರಾತ್ರಿ ನೀನು ಅಲ್ಲಿಗೆ ಬಾ, ಎಂದು ಆತನಿಗೆ ಹೇಳಿ, ತನ್ನ ಸಖಿಯರೊಡನೆ ಕೂಡಿಕೊಂಡು ತನ್ನ ಪುರಕ್ಕೆ ತೆರಳಿದಳು.

ಅದರಂತೆ ಕೃತಸಂಕೇತನಾದ ಹೇಮವರ್ಣನು ಆ ರಾತ್ರಿ ಅಲ್ಲಿಗೆ ಒಂಟಿಯಾಗಿ ತೆರಳಿ ತನಗಾಗಿ ನಿರೀಕ್ಷಿಸುತ್ತಿದ್ದ ರಾಜಪುತ್ರಿಯನ್ನು ಸೇರಿ, ಅವಳೊಡನೆ ವಿಹರಿಸುತ್ತ ಸಂತೋಷದಿಂದ ಬಹುಕಾಲ ಅವಳ ಅರಮನೆಯಲ್ಲಿಯೇ ಸುಖವಾಗಿದ್ದನು. ಅನ್ಯರಿಗೆ ತಿಳಿಯದಂತೆ ಹೀಗೆ ಅವರೀರ್ವರೂ ಪರಸ್ಪರ ಪ್ರೇಮದಿಂದ ಕ್ರೀಡಿಸುತ್ತಿದ್ದರು. ಇದರಿಂದಾಗಿ ಹೇಮವರ್ಣ ವಿದ್ಯಾಧರನು ರಾಜಪುತ್ರಿ ಇಂದುಮುಖಿಯಲ್ಲಿ ತೇಜೋನಿಧಿ ಯಾದ ಓರ್ವ ಕುಮಾರನನ್ನು ಪಡೆದನು. ಸರ್ವಲಕ್ಷಣ ಸಂಪನ್ನನಾದ ಆ ಕುಮಾರನಿಗೆ ಅವರು ಕಮಲಾಕ್ಷನೆಂದು ನಾಮಕರಣ ಮಾಡಿದರು. ಆ ಕುಮಾರನು ಬಾಲ

ಸೂರ್ಯನಂತೆ ದಿನೇ ದಿನೇ ಅಭಿವೃದ್ಧಿಗೊಳ್ಳುತ್ತಿದ್ದನು. ಹೀಗೆ ಆ ಮಗುವು ಮೂರು ತಿಂಗಳ ಕಾಲ ತನ್ನ ತಾಯಿ ತಂದೆಗಳ ಲಾಲನೆ ಪೋಷಣೆಗಳಲ್ಲಿ ಆ ಉಪ್ಪರಿಗೆಯಲ್ಲಿ ಬೆಳೆದನು.

ನಂತರ ಒಂದು ದಿನ ಇಂದುಮುಖಿಯು ತನ್ನ ಪ್ರಿಯತಮನಾದ ಹೇಮವರ್ಣನನ್ನು ನೋಡಿ ಪ್ರಾಣವಲ್ಲಭನೇ, ಮಹಾಬಾಹುವೇ, ಮಹಾರಾಜನೇ ಈಗ ನಾನು ಹೇಳುವ ಯುಕ್ತಿಯುಕ್ತವಾದ ಮಾತುಗಳನ್ನು ಕೇಳು. ನಾವಿಬ್ಬರೂ ಈವರೆವಿಗೂ ಅನ್ಯೋನ್ಯವಾಗಿದ್ದು ನಮ್ಮ ಮನೋರಥಗಳನ್ನು ರಹಸ್ಯವಾಗಿ ತೀರಿಸಿಕೊಂಡೆವು. ಇನ್ನು ನೀನು ಇಲ್ಲಿರುವುದು ತರವಲ್ಲ. ನೀನು ಇಲ್ಲಿಯೇ ಇದ್ದರೆ ನಾವಿಬ್ಬರೂ ಮಹತ್ತರವಾದ ಅವಮಾನಕ್ಕೆ ಮತ್ತು ಕಷ್ಟಕ್ಕೆ ಗುರಿಯಾಗಬೇಕಾಗುವುದು. ಆದುದರಿಂದ ಪ್ರಾಣನಾಥಾ, ಪುತ್ರನಾದ ಈ ಕಮಲಾಕ್ಷನನ್ನು ನಿನ್ನೊಡನೆ ತೆಗೆದುಕೊಂಡು ಹೋಗು. ದೈವಯೋಗದಿಂದಾಗಿ ಇಷ್ಟು ದಿನ ನಮ್ಮಿಬ್ಬರ ಋಣಾನುಬಂಧವಿತ್ತು, ಇನ್ನುಮುಂದೆ ನೀನು ಇಲ್ಲಿರಬಾರದು. ಚಿಂತಿಸಬೇಡ, ಇದೋ ಕಮಲಾಕ್ಷನನ್ನು ತೆಗೆದುಕೋ. ನಿನಗೆ ಕಲ್ಯಾಣವಾಗಲಿ ಎಂದು ಹೇಳಿ ಕಮಲಾಕ್ಷನನ್ನು ಪ್ರೇಮದಿಂದ ಅಪ್ಪಿಕೊಂಡು ಮುದ್ದಾಡಿ ಅವನ ಕೈಗಿತ್ತಳು. ಹೇಮವರ್ಣ ವಿದ್ಯಾಧರನು ಬಹುವಾಗಿ ದುಃಖಿಸುತ್ತ ಮನಸ್ಸಿಲ್ಲದ ಮನಸ್ಸಿನಿಂದ ಹಾಗೆಯೇ ಆಗಲೆಂದೊಪ್ಪಿ ಆ ಶಿಶು ಕಮಲಾಕ್ಷನನ್ನು ತೆಗೆದುಕೊಂಡು ಸ್ವರ್ಗಕ್ಕೆ ತೆರಳಿದನು.

ಆ ಬಾಲಕನು ತನ್ನ ಬಾಲಲೀಲೆಗಳಿಂದ ತಂದೆಯನ್ನು ಸಂತೋಷಗೊಳಿಸುತ್ತಾ, ಪ್ರಾಪ್ತವಯಸ್ಕನಾಗಿ ತಾನು ಷಡ್ದರ್ಶನಕುಶಲನೂ, ಕಲಾವಂತನೂ, ಕಲಾಶಾಸ್ತ್ರವಿಚಕ್ಷಣನೂ, ಮೇಧಾವಿಯೂ, ಗಾನವಿದ್ಯೆ, ಮಂತ್ರವಿದ್ಯೆ, ಭರತನಾಟ್ಯ, ಧರ್ಮಶಾಸ್ತ್ರ, ನೀತಿಶಾಸ್ತ್ರ, ಇಂದ್ರಜಾಲ, ಮಹೇಂದ್ರಜಾಲ, ಪರಕಾಯಪ್ರವೇಶ, ವೈದ್ಯ, ಷಡಂಗಯುಕ್ತ ವೇದತ್ರಯ, ವೇದಾಂತ, ಇವೇ ಮೊದಲಾದ ಅರವತ್ತುನಾಲ್ಕು ವಿದ್ಯೆಗಳಲ್ಲೂ ಪ್ರವೀಣನಾದನು. ಹೀಗೆ ಸಕಲ ವಿದ್ಯಾಪಾರಂಗತನಾದ ಕಮಲಾಕ್ಷನು ವಿವಾಹವಯಸ್ಕನಾಗಲು ಅವನ ತಂದೆ ಹೇಮವರ್ಣನು ಕನ್ಯೆಯನ್ನರಸುತ್ತಾ ಒಬ್ಬ ವಿದ್ಯಾಧರನ ಪುತ್ರಿಯಾದ, ಸಕಲ ಲಕ್ಷಣ ಸಂಪನ್ನೆಯಾದ, ವಿದ್ಯಾವತಿಯೂ, ಗುಣವತಿಯೂ, ಸೌಂದರ್ಯವತಿಯೂ ಆದ ದೇವದತ್ತೆ ಎಂಬ ಕನ್ಯೆಯನ್ನು ತಂದು ಅವನಿಗೆ ವಿವಾಹ ಮಾಡಿದನು. ಕಮಲಾಕ್ಷನು ತನ್ನ ಪತ್ನಿಯೊಡನೆ ಸಕಲ ಭೋಗಗಳನ್ನು ಅನುಭವಿಸುತ್ತಾ ಸುಖವಾಗಿದ್ದನು. ಅವನು ಸಮಸ್ತ ಕಲಾವಿದರನ್ನು ಮಾನಿಸಿ, ಅವರೊಡನೆ ವಾದವಿವಾದ ಮಾಡುತ್ತಿದ್ದನು. ಹೀಗಿರಲು ಒಂದು ದಿನ ಪರಶಿವನನ್ನು ಸಮಸ್ತ ದೇವತೆಗಳು ಸೇವಿಸುತ್ತಿರಲು ಆ ಪರಮಾತ್ಮನ ಸನ್ನಿಧಿಯಲ್ಲಿ ಮಹಾ ಬುದ್ಧಿವಂತನಾದ ಸರ್ವಶಿರೋಮಣಿಯಾದ ಕಮಲಾಕ್ಷನು, ತನ್ನ ಸಮಸ್ತ ವಿದ್ಯೆಗಳನ್ನೂ ಪ್ರದರ್ಶಿಸಿದನು. ಅವನ ವಿದ್ಯಾ

ಪ್ರದರ್ಶನದಿಂದ ಅಲ್ಲಿ ಸೇರಿದ್ದ ಸಮಸ್ತ ಬ್ರಹ್ಮರ್ಷಿಗಳೂ, ದೇವರ್ಷಿಗಳೂ, ದೇವತೆಗಳೂ, ಪ್ರಮಥಗಣಗಳೂ, ಭೂತಗಣಗಳೂ ಆನಂದ ಹೊಂದಿದರು. ಆದರೆ ಭಗವಾನ್ ಶಂಕರನು ಸುಮ್ಮನಿದ್ದನು. ಕಮಲಾಕ್ಷನಾದರೋ ಪ್ರತಿದಿನ ಶೂಲಧಾರಿಯಾದ ಆ ಪರಮಾತ್ಮನ ಸನ್ನಿಧಿಯಲ್ಲಿ ತನ್ನ ವಿದ್ಯಾಪ್ರದರ್ಶನ ಮಾಡುತ್ತಿದ್ದನು.

ಹೀಗಿರುವಲ್ಲಿ ಪಾರ್ವತಿಯ ಭಕ್ತನಾದ ಇನ್ನೊಬ್ಬ ಕಲಾವಂತನಾದ ವಿವಿತ್ಸು ಎಂಬ ಗಂಧರ್ವನು ಇದನ್ನು ಸಹಿಸದೆ ತಾನು ಅವಮಾನಿತನಾದೆನೆಂದು ತಿಳಿದು ಈರ್ಷ್ಯೆಯಿಂದ ಜಗಜ್ಜನನಿಯಾದ ಪಾರ್ವತಿಯ ಬಳಿಗೆ ಬಂದು ಎಲೈ ಭಕ್ತವತ್ಸಲೇ, ಜಗದಂಬೇ, ದೇವೀ ನಿನಗೆ ನಮಸ್ಕಾರ. ಕಮಲಾಕ್ಷನ ವಿದ್ಯಾನೈಪುಣ್ಯತೆಯಿಂದಾಗಿ ನಾನು ಅಪಮಾನಿತನಾಗಿರುವೆನು. ಆದುದರಿಂದ ಎಲೈ ಭಕ್ತಪಾಲೆ, ನೀನು ಹೇಗಾದರೂ ಮಾಡಿ ಆ ಕಮಲಾಕ್ಷನನ್ನು ನಿವಾರಿಸು ಎಂದು ಪ್ರಾರ್ಥಿಸಿದನು. ದೇವಿಯು ಅವನ ಮೇಲಿನ ಕನಿಕರದಿಂದ ಹಾಗೆಯೇ ಆಗಲೆಂದೊಪ್ಪಿ ಅವನನ್ನು ಸಂತೋಷಪಡಿಸಿದಳು.

ಹೀಗೆಯೇ ಇರಲು ಒಂದು ದಿನ ಶಿವನ ಎದುರಿನಲ್ಲಿ ಸೇರಿದ್ದ ಸಮಸ್ತರನ್ನೂ ತನ್ನ ವಿದ್ಯಾಪಾಂಡಿತ್ಯದಿಂದ ಕಮಲಾಕ್ಷನು ಆನಂದಗೊಳಿಸಿದನು. ಆದರೆ ಭಗವಂತನಾದ ಶಂಕರನು ಆನಂದಗೊಳ್ಳಲಿಲ್ಲ. ದೇವಿಯು ಸಂತೋಷಗೊಳ್ಳದ ಪರಮಾತ್ಮನನ್ನು ನೋಡಿ ಎಲೈ ಸ್ವಾಮಿಯೇ, ಕಮಲಾಕ್ಷನ ವಿದ್ಯೆಯಿಂದ ತಮಗೇಕೆ ಸಂತೋಷವಾಗಲಿಲ್ಲ ? ಅವನ ವಿದ್ಯಾ ಪ್ರದರ್ಶನದಿಂದಾಗಿ ತಮಗೆ ಅಸಮಾಧಾನವಾಯಿತೇ? ಎಲೈ ಮಹೇಶನೇ ಕಮಲಾಕ್ಷನಂತೆ ಮತ್ತೊಬ್ಬ ವಿದ್ಯಾ ಪ್ರವೀಣನೇ ಇಲ್ಲದಿರುವಾಗ ತಾವೇಕೆ ಆನಂದಿತರಾಗಲಿಲ್ಲವೆಂದು ಕೇಳಿದಳು. ಪರಮಾತ್ಮನು ಆ ಮಾತಿಗೆ ಎಲೈ ದೇವಿಯೇ ಸಮಸ್ತ ವಿದ್ಯೆಗಳಲ್ಲಿ ಕಮಾಲಾಕ್ಷನಿಗೆ ಸಾಟಿಯಾದವರು ಯಾರೂ ಇಲ್ಲ; ಇದು ನಿಜ.

ಆದರೆ ಮಂಗಳೆಯೇ ಇವನು ಬಹುಕಾಲ ಜೀವಿಸಿರುವವನಲ್ಲವೆಂದು ನಾನು ಹರ್ಷಪಡಲಿಲ್ಲ. ಇವನು ಮುಂದೆ ದೇಹಬಿಟ್ಟು ಪುಷ್ಪದಂತನಾಗಿ ಭೂಮಿಯಲ್ಲಿ ಜನಿಸಿ ವಿಖ್ಯಾತನಾಗುವನು ಎಂದನು. ಭಕ್ತಪೋಷಣತತ್ಪರಳಾದ ಪಾರ್ವತಿಯು ಶಂಭುವಿನ ಈ ಮಾತುಗಳನ್ನು ಕೇಳಿ ಅವನ ಇಂಗಿತವನ್ನರಿತು, ಕಮಲಾಕ್ಷನನ್ನು ನೋಡಿ, ಮಹಾಭಾಗ ಕಮಲಾಕ್ಷಾ, ಸರ್ವವಿದ್ಯಾಧರೇಶ್ವರ ನೀನು ಪರಮಾತ್ಮನ ಅಪೇಕ್ಷೆಯಂತೆ ಭೂಲೋಕದಲ್ಲಿ ಪುಷ್ಪದಂತನಾಗಿಯೂ ನಿನ್ನ ಪತ್ನಿ ದೇವದತ್ತೆಯು ದೇವದತ್ತೆಯಾಗಿಯೇ ಆಗಿ, ನೀವಿಬ್ಬರೂ ಅವತರಿಸಿರಿ ಎಂದಳು. ಕಮಲಾಕ್ಷನು ಇದನ್ನು ಕೇಳಿ ಅತಿ ವಿಹ್ವಲನಾಗಿ ಶಿವನಿಗೆ ನಮಸ್ಕರಿಸಿ ತನ್ನ ಗೃಹಕ್ಕೆ ತೆರಳಿ ತನ್ನ ಪತ್ನಿಗೆ ಈ ವಿಷಯವನ್ನು ತಿಳಿಸಿದನು.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿ ನಾರದ ಸಂವಾದ ರೂಪ ಉತ್ತರ ಖಂಡದ ದೇವಾಂಗ ಚರಿತ್ರೆಯಲ್ಲಿ ವಿದ್ಯಾಧರ ಪ್ರಶಂಸೆಯೆಂಬ ಹತ್ತೊಂಬತ್ತನೆಯ ಅಧ್ಯಾಯ ಮುಗಿದುದು.

ಇಪ್ಪತ್ತನೆಯ ಅಧ್ಯಾಯ

ಪುಷ್ಪದಂತೋಪಾಖ್ಯಾನ, ಬೇತಾಳ ಶಾಪಪ್ರದಾನ

ಸೂತನೆನ್ನುತ್ತಾನೆ. ಪಾರ್ವತೀ ಪರಮೇಶ್ವರರಿಂದ ಆಜ್ಞಪ್ತನಾದ ಕಮಲಾಕ್ಷನು ಯುಗಂಧರ ದೇಶದಲ್ಲಿ ಹೇಮವತಿಯೆಂಬ ಪಟ್ಟಣದಲ್ಲಿ ಮಹಾಪರಾಕ್ರಮಶಾಲಿಯಾದ ಶೃತಕೀರ್ತಿಯೆಂಬ ರಾಜನಿಗೆ ಸೋಮವತಿಯೆಂಬ ರಾಣಿಯಲ್ಲಿ ಅವತರಿಸಿದನು. ತಂದೆ ತಾಯಿಗಳು ಅವನಿಗೆ ಜಾತಕರ್ಮಾದಿಗಳನ್ನು ಮಾಡಿ ಪುಷ್ಪದಂತನೆಂದು ನಾಮ ಕರಣ ಮಾಡಿದರು. ಅವನು ವಿದ್ಯಾವಯಸ್ಕನಾಗಲು ಅವನನ್ನು ಸಮರ್ಥರಾದ ಗುರುಗಳ ಗುರುಕುಲಕ್ಕೆ ಕಳುಹಿಸಲು, ಅಲ್ಲಿ ಅವನು ಸಮಸ್ತ ವಿದ್ಯಾಪಾರಂಗತನಾಗಿ ಗುರುಗಳೆಲ್ಲರ ಮೆಚ್ಚಿಗೆಗೆ ಪಾತ್ರನಾಗಿ ಸೂಕ್ತ ಗುರುದಕ್ಷಿಣೆ ಸಲ್ಲಿಸಿ ತನ್ನ ಮನೆಗೆ ಹಿಂದಿರುಗಿದನು. ಇತ್ತ ಸಿಂಧೂದೇಶಾಧಿಪತಿಯಾದ ವಿರೂಪಾಕ್ಷನೆಂಬ ರಾಜನ ರಾಣಿಯ ಗರ್ಭದಲ್ಲಿ ಆ ಕಮಲಾಕ್ಷನ ಪತ್ನಿಯಾದ ಕೀರ್ತಿವಂತಳಾದ ದೇವದತ್ತೆಯು ಜನಿಸಿದಳು. ಆಕೆಯು ಹುಟ್ಟಿದ ಕೂಡಲೆ ಈ ಮಗುವಿಗೆ ದೇವದತ್ತೆಯೆಂದು ಹೆಸರಿಡಬೇಕೆಂದು ಅಶರೀರವಾಣಿಯಾಯಿತು. ಆ ಮಗುವಿನ ತಾಯಿ ತಂದೆಗಳು ಆ ಶಿಶುವಿಗೆ ಅಶರೀರ ವಾಣಿಯಂತೆ ಆ ಶಿಶುವಿನ ಪೂರ್ವನಾಮವಾದ ದೇವದತ್ತೆಯೆಂದೇ ಹೆಸರಿಟ್ಟರು. ಪುಷ್ಪದಂತ ಮತ್ತು ದೇವದತ್ತೆಯರು ಕ್ರಮವಾಗಿ ಪ್ರಾಪ್ತವಯಸ್ಕರಾಗಲು, ಶೃತಕೀರ್ತಿ ರಾಜನು ತನ್ನ ಪುತ್ರ ಪುಷ್ಪದಂತನಿಗೆ, ವಿರೂಪಾಕ್ಷರಾಜನ ಪುತ್ರಿ ಯಶಸ್ವಿನಿಯಾದ ದೇವದತ್ತೆಯನ್ನು ಸಂತೋಷದಿಂದ ತಂದುಕೊಂಡು ವಿವಾಹ ನೆರವೇರಿಸಿ ಸ್ವಪುತ್ರನಾದ ಪುಷ್ಪದಂತನಿಗೆ ತನ್ನ ರಾಜ್ಯದ ಪಟ್ಟಕಟ್ಟಿ ಆತನನ್ನು ರಾಜನನ್ನಾಗಿ ನೇಮಿಸಿ ತಾನು ಜಿತೇಂದ್ರಿಯನಾಗಿ ತಪಸ್ಸನ್ನಾಚರಿಸಲು ಕಾಡಿಗೆ ಹೋದನು. ರಾಜನಾದ ಪುಷ್ಪ ದಂತನು ಸಿಂಹಾಸನವನ್ನೇರಿ ತಂದೆಯಂತೆ ಬಹು ಪರಾಕ್ರಮಿಯಾಗಿ ಧರ್ಮದಿಂದ ರಾಜ್ಯ ವನ್ನಾಳುತ್ತಿದ್ದನು.

ಅವನು ಪ್ರತಿನಿತ್ಯವೂ ತಪ್ಪದೆ ಹನ್ನೊಂದು ಸಾವಿರ ದಿವ್ಯ ಲಿಂಗಗಳನ್ನು ಪೂಜಿಸಿ ಜಲಾಹಾರದಿಂದಿದ್ದು ರುದ್ರಾಕ್ಷಿಗಳಿಂದ ಕೆತ್ತಲ್ಪಟ್ಟ ಕಿರೀಟ, ಹಾರ, ಕಂಕಣ, ಕೇಯೂರ ಧಾರಿಯಾಗಿ, ಭಸ್ಮೋದ್ಧೂಳಿತಾಂಗನಾಗಿ ಶಿವಧ್ಯಾನ, ಶಿವಪೂಜಾ ಧುರಂಧರನಾಗಿದ್ದನು. ಅವನು ಸದಾ ಶಿವಭಕ್ತಿಯುಳ್ಳವನಾಗಿ ಶಿವಕಥೆಗಳನ್ನೇ ಕೇಳುವವನಾಗಿ ಶಿವನಲ್ಲೇ ನೆಟ್ಟಮನಸ್ಸುಳ್ಳವನಾಗಿದ್ದನು. ಅವನು ಶಿವಪೂಜೆಗಾಗಿಯೇ ಒಂದು ಹೂದೋಟವನ್ನು ನಿರ್ಮಿಸಿ ಅದರಲ್ಲಿ ಮಾಲತಿ, ಮಲ್ಲಿಗೆ, ಅಶೋಕ, ಪಾಟಲಿ, ನಂದಿವರ್ಧನ, ಪುನ್ನಾಗ, ಸುವರ್ಣ, ಚಂಪಕ, ಶಿರೀಷ, ಪಾರಿಜಾತ, ಕಣಗಿಲೆ, ದಾಸವಾಳ, ದುಂಡುಮಲ್ಲಿಗೆ, ಶೇವಂತಿಗೆ, ನಾಗಕೇಸರ ಇವೇ ಮೊದಲಾದ ಪುಷ್ಪಗಳ ಗಿಡಮರಬಳ್ಳಿಗಳನ್ನು ಬೆಳೆಯಿಸಿ, ತಾನೇ ಅವುಗಳಿಗೆ ಕಷ್ಟಪಟ್ಟು ಮಡಿಗಳನ್ನು ರಚಿಸಿ, ನಿತ್ಯವೂ ನೀರು ಹಾಕುತ್ತಿದ್ದನು.

ಅವನು ಆ ಗಿಡಗಳಲ್ಲಿ ಅತ್ಯಂತ ಪ್ರೀತಿಯಿಂದ, ಮತ್ತು ಹೂಗಳನ್ನು ಪಡೆಯಬೇಕೆಂಬ ಮಹದಾಸೆಯಿಂದ ಅವುಗಳನ್ನು ಬೆಳೆಯಿಸಿ, ಅವುಗಳಲ್ಲಿ ಬಿಟ್ಟ ಪುಷ್ಪಗಳಿಂದಲೇ ಪರಮಾನಂದದಿಂದ ಬಹುಭಕ್ತಿಯಿಂದ, ಪ್ರಯತ್ನಪುರಸ್ಸರನಾಗಿ ನಿತ್ಯವೂ ಶಿವನನ್ನು ಅರ್ಚಿಸಿ, ಪೂಜಿಸಿ, ಆರಾಧಿಸುತ್ತಿದ್ದನು.

ಹೀಗಿರಲು ಆ ಪುಷ್ಪದಂತರಾಜನು ಒಂದು ಶಿವರಾತ್ರಿಯಲ್ಲಿ ಶಿವಾಲಯಕ್ಕೆ ಬಂದು ದೇವ ದೇವನಾದ ಮಹಾದೇವನನ್ನು ಪೂಜಿಸಿ, ಶಿವನನ್ನು ಮೂವತ್ತೆರಡು ಶ್ಲೋಕಗಳಿಂದ ಕೂಡಿದ ತಾನೇ ರಚಿಸಿದ ಶಿವಮಹಿಮ್ನಸ್ತವದಿಂದ ಸ್ತುತಿಸಿದನು. ಸ್ತೋತ್ರ ಪ್ರಿಯನಾದ ಪರಮಾತ್ಮನು ಆ ಸ್ತೋತ್ರದಿಂದ ಸಂತುಷ್ಟನಾಗಿ ದಿವ್ಯತೇಜೋಮಯವಾದ ಶರೀರದಿಂದ ಪ್ರತ್ಯಕ್ಷನಾಗಿ, ಆ ಪುಷ್ಪದಂತನಿಗೆ ನೀನು ಕೋರಿದ ವರಗಳನ್ನು ನೀಡುವೆನು ಬೇಡಿಕೋ ಎಂದನು. ಪುಷ್ಪದಂತನು ಪ್ರತ್ಯಕ್ಷನಾದ ಪರಮಾತ್ಮನನ್ನು ಕಂಡು ಶಿರಸಾಷ್ಟಾಂಗ ನಮಸ್ಕಾರ ಮಾಡಿ, ಲೋಕ ಶಂಕರನಾದ ಶಂಕರನನ್ನು ಕುರಿತು, ಭಗವನ್, ದಯಾನಿಧೆ, ಪಾರ್ವತೀಪತೇ ನೀನು ಸಂತೋಷಪಟ್ಟಿರುವುದೇ ಆದರೆ ಪ್ರತಿದಿನವೂ ತಪ್ಪದೆ ನನಗೂ, ನನ್ನ ಪತ್ನಿಗೂ ನಿನ್ನ ದರ್ಶನವಾಗಬೇಕು, ಮತ್ತು ನಾವು ನಿನ್ನನ್ನು ಆರಾಧಿಸಬೇಕು ಈ ಒಂದು ವರವನ್ನು ಕರುಣಿಸೆಂದು ಭಕ್ತಿಯಿಂದ ಪ್ರಾರ್ಥಿಸಿದನು. ಅದಕ್ಕೆ ಪರಮಾತ್ಮನು ಹಾಗೆಯೇ ಆಗಲೆಂದು ಹೇಳಿ ಪುಷ್ಪದಂತ ದೇವದತ್ತೆ ದಂಪತಿಗಳು ಕೈಲಾಸಕ್ಕೆ ಪ್ರತಿನಿತ್ಯವೂ ಬಂದು ದರ್ಶನಮಾಡಿ ತನ್ನನ್ನು ಆರಾಧಿಸುವಂತೆ ವರವನ್ನಿತ್ತು ಆ ಪುಷ್ಪದಂತ ರಾಜನನ್ನು ಸಂತೋಷಗೊಳಿಸಿ ಅಂತರ್ಧಾನನಾದನು.

ಶಂಭುವಿನ ಅನುಗ್ರಹದಿಂದ ಪುಷ್ಪದಂತನು ನಾನಾ ವಿಧವಾದ ಪುಷ್ಪಹಾರಗಳನ್ನೂ, ತಲೆಯಲ್ಲಿ ಧರಿಸುವ ತುರಾಯಿಗಳನ್ನೂ, ವಿಚಿತ್ರಗಳಾದ ಹೂವಿನ ದಿಂಡುಗಳನ್ನೂ, ಕೈಕಂಕಣಗಳನ್ನೂ ರಚಿಸಿ ಅವುಗಳನ್ನು ತೆಗೆದುಕೊಂಡು ನಿತ್ಯವೂ ತಪ್ಪದೆ ಪತ್ನೀಸಮೇತನಾಗಿ ಕೈಲಾಸಕ್ಕೆ ಹೋಗಿ ಪಾರ್ವತೀ ಪರಮೇಶ್ವರರಿಗೆ ಬಹು ಭಕ್ತಿಯಿಂದ ಅರ್ಪಿಸುತ್ತಾ ಪುಷ್ಪಬಾಣಾರಿಯಾದ ಆ ಪರಮಾತ್ಮನನ್ನು ಅನೇಕ ವಿಧವಾಗಿ ಸೇವಿಸುತ್ತಿದ್ದನು. ಹೀಗೆಯೇ ಆ ಪರಮಾತ್ಮನ ಸೇವೆಯು ತಪ್ಪದೆ ಅವರಿಬ್ಬರಿಂದಲೂ ಅಬಾಧಿತವಾಗಿ ನಿರಂತರವೂ ನಡೆಯುತ್ತಿತ್ತು. ಹೀಗಿರಲು ಒಂದು ಸಂಜೆ ಪುಷ್ಪದಂತನು ಪಾರ್ವತೀ ಪರಮೇಶ್ವರರಿಗೆ ಪುಷ್ಪಗಳನ್ನು ಅರ್ಪಿಸುವುದಕ್ಕಾಗಿ ತಾನೊಬ್ಬನೇ ಕೈಲಾಸಕ್ಕೆ ಹೋಗಿ ಪಾರ್ವತೀ ಪರಮೇಶ್ವರರ ದರ್ಶನಕ್ಕಾಗಿ ಸಮಯ ಕಾಯುತ್ತಿದ್ದನು ಹಾಗೆಯೇ ರಾತ್ರಿಯಾಗಲು, ಪಾರ್ವತೀ ಪರಮೇಶ್ವರರು ಏಕಾಂತದಲ್ಲಿರುವುದನ್ನು ತಿಳಿದು ಅವರಿಗೆ ಪುಷ್ಪಗಳನ್ನು ಅರ್ಪಿಸುವ ಸದಿಚ್ಛೆಯಿಂದ ಆ ಪುಷ್ಪದಂತನು ಬೆಳಗಿನಝಾವದವರೆವಿಗೂ ಪಾರ್ವತೀ ಪರಮೇಶ್ವರರ ನಿಲಯದ ದ್ವಾರದಲ್ಲಿಯೇ ಕಾಯುತ್ತಾ ನಿಂತನು.

ಸಮೀಪದಲ್ಲಿ ಯಾರೂ ಇಲ್ಲದುದನ್ನು ತಿಳಿದು ಗೌರಿಯು ಏಕಾಂತದಲ್ಲಿದ್ದ ಪರಮಾತ್ಮನನ್ನು ನೋಡಿ, ಮಹೇಶ್ವರಾ, ಸರ್ವಜ್ಞಾ, ಮಹಾಭಾಗಾ, ಸಕಲೇಶ್ವರಾ,

ಈ ಹಿಂದೆ ಯಾರಿಗೂ ಗೊತ್ತಿಲ್ಲದ, ಯಾರೂ ಕೇಳದಿರುವ ರಹಸ್ಯ ಕಥೆಯೊಂದನ್ನು ಈಗ ನನಗೆ ಹೇಳೆಂದಳು. ಅದನ್ನು ಕೇಳಿ ಮಹಾನೈಭವಶಾಲಿಯಾದ ಪರಮೇಶ್ವರನು ಹಾಗೆಯೇ ಆಗಲೆಂದು ಹೇಳಿ ರಹಸ್ಯವಾದ ಕಥೆಯೊಂದನ್ನು ಪಾರ್ವತಿಗೆ ಹೇಳುತ್ತಿದ್ದನು. ಆಗ ದ್ವಾರದಲ್ಲೇ ಪಾರ್ವತೀ ಪರಮೇಶ್ವರರ ಸೇವೆಗಾಗಿ ಸಮಯಕ್ಕಾಗಿ ಕಾದು ನಿಂತಿದ್ದ ಪುಷ್ಪದಂತ ರಾಜನು ಅದನ್ನು ಕಿವಿಗೊಟ್ಟು ಆಲಿಸಿದನು. ಬೆಳಗಾದ ಮೇಲೆ ಆತನು ಸಮಯವನ್ನು ನೋಡಿ ಪರಮಾತ್ಮನ ಸನ್ನಿಧಿಗೆ ಬಂದು ಪುಷ್ಪಗಳನ್ನರ್ಪಿಸಿ ತನ್ನ ಪಟ್ಟಣಕ್ಕೆ ಹಿಂದಿರುಗಿದನು.

ರಾಜೋತ್ತಮನಾದ ಪುಷ್ಪದಂತನು ತನ್ನ ಅರಮನೆಗೆ ಬರಲು ಅಲ್ಲಿನ ಕಥೆಯೇ ಬೇರೆಯಾಗಿತ್ತು. ಆತನ ಪಟ್ಟ ಮಹಿಷಿಯಾದ ದೇವದತ್ತೆಯು ಆ ರಾತ್ರಿಯೆಲ್ಲಾ ತನ್ನ ಪತಿಗಾಗಿ ಕಾದು ಬೇಸತ್ತು, ಆತನು ತನ್ನ ಪ್ರೇಯಸಿಯೊಬ್ಬಳ ಮನೆಗೆ ಹೋಗಿರಬೇಕೆಂದು ಊಹಿಸಿ ತಾನು ಮಲಗಿದಳು. ಪ್ರಾತಃಕಾಲದಲ್ಲಿ ತನ್ನ ಪತಿಯು ಅರಮನೆಗೆ ಬಂದುದನ್ನು ತಿಳಿದು ಮುಂದಾಲೋಚನೆಯಿಲ್ಲದೆ ಅವಳು ತನ್ನ ಪತಿ ಪುಷ್ಪದಂತನನ್ನು ನೀನು ಜಾರನೆಂದು ಹೀಯಾಳಿಸಿದಳು. ಈ ರೀತಿ ದೂಷಿಸುತ್ತಿರುವ ತನ್ನ ಪ್ರಿಯಪತ್ನಿ ದೇವದತ್ತೆಯನ್ನು ನೋಡಿ ಪುಷ್ಪದಂತನು ಖಿನ್ನನಾಗಿ ಎಲೈ ಸುಶ್ರೋಣಿ, ನಾನಂತಹವನೇ, ನೀನು ಇಂತಹ ಮಾತಾಡಬಹುದೇ ? ತಿಳಿಯದೆ ಸುಮ್ಮನೇ ಹೀಯಾಳಿಸಬೇಡ. ನಾನು ಹೇಳುವುದನ್ನು ಕೇಳು. ಪಾರ್ವತೀ ಪರಮೇಶ್ವರರಿಗೆ ನಾನು ಪುಷ್ಪಗಳನ್ನು ಅರ್ಪಿಸಹೋಗಲು, ಅವರು ಏಕಾಂತದಲ್ಲಿರುವುದನ್ನು ತಿಳಿದು ಅದು ತಕ್ಕ ಸಮಯವಲ್ಲವೆಂದು ಅಂತಃಪುರದ ಬಾಗಿಲಿನಲ್ಲೇ ಸಮಯ ಕಾಯುತ್ತಾ ನಿಂತೆನು. ಆಗ ಅಂಬಿಕೆಯು ಪರಮಾತ್ಮನಿಗೆ ಒಂದು ಗೂಢವಾದ ಕಥೆಯನ್ನು ಹೇಳೆಂದಳು.

ಆಗ ಮಹಾದೇವನು ಪಾರ್ವತಿಗೆ ಅತಿ ರಹಸ್ಯವಾದ ಕಥೆಯನ್ನು ಹೇಳುತ್ತಿದ್ದನು. ಎಲೈಕಾಂತೆಯೇ ಆ ಕಥೆಯನ್ನು ಕೇಳುತ್ತಿದ್ದಂತೆಯೇ ಬೆಳಗಿನ ಝಾವವಾಗಲು, ಆಗ ನಾನು ಪಾರ್ವತೀ ಪರಮೇಶ್ವರರ ಸಮಯ ತಿಳಿದು ಅವರಿಗೆ ಪುಷ್ಪಸೇವೆಯನ್ನರ್ಪಿಸಿ ಈಗ ಬಂದೆ, ಆದುದರಿಂದ ಇಷ್ಟು ತಡವಾಯಿತೆಂದು ಹೇಳಿ ಅವಳನ್ನು ಸಮಾಧಾನಪಡಿಸಿದನು. ತನ್ನ ಪತಿಯು ತನ್ನ ಸಂದೇಹವನ್ನು ನಿವಾರಿಸಲು, ಆ ದೇವದತ್ತೆಯು ಪುಷ್ಪದಂತನನ್ನು ನೋಡಿ ತನ್ನ ತಪ್ಪನ್ನು ಕ್ಷಮಿಸಬೇಕೆಂದು ಬಹುವಿಧವಾಗಿ ಪ್ರಾರ್ಥಿಸಿ. ಆ ಕಥೆಯನ್ನು ದಯವಿಟ್ಟು ನನಗೆ ಹೇಳೆಂದು ಪುಷ್ಪದಂತನನ್ನು ಬಹುವಾಗಿ ಬಲವಂತ ಮಾಡಿದಳು. ತಾನು ಕೇಳಿದ ಕಥೆಯು ಬಹು ರಹಸ್ಯವಾದುದಾದರೂ ದೇವದತ್ತೆಯಲ್ಲಿ ತನಗಿದ್ದ ಮೋಹದಿಂದ ಆ ಕಥೆಯನ್ನು ಪುಷ್ಪದಂತನು ಅವಳ ಬಲವಂತಕ್ಕೊಳಗಾಗಿ ಅವಳಿಗೆ ಹೇಳಿದನು.

ಎಂದಿನಂತೆ ಮತ್ತೆ ಪುಷ್ಪದಂತ ದೇವದತ್ತೆಯರಿಬ್ಬರೂ ಪಾರ್ವತೀ ಪರಮೇಶ್ವರರ ಸೇವೆಗಾಗಿ ಕೈಲಾಸಕ್ಕೆ ಹೋದರು. ಅಲ್ಲಿ ಪಾರ್ವತಿಯು ತನ್ನ ಸಖಿಯರಿಗೆ ಅವರ ಪೂರ್ವೇಚ್ಛೆ ಪೂರೈಸಲು ಆ ರಹಸ್ಯಮಯವಾದ ಕಥೆಯನ್ನು ಹೇಳುತ್ತಿದ್ದಳು. ಆಗ

ದೇವದತ್ತೆಯು ಆ ಕಥೆಯನ್ನು ಕೇಳಿ, ಅವರನ್ನು ಕುರಿತು, ಓಹೋ ಆ ಕಥೆಯನ್ನು ನಾನು ಮೊದಲೇ ಕೇಳಿದ್ದೇನೆ, ಹೇಳುತ್ತೇನೆ ಕೇಳಿರಿ ಎಂದಳು. ಪಾರ್ವತಿಯು ಅವಳ ಈ ಮಾತನ್ನು ಕೇಳಿ ಆಶ್ಚರ್ಯದಿಂದ ದೇವದತ್ತೆಯೇ ಹೇಳೆಂದಳು. ಆದಕ್ಕೆ ದೇವದತ್ತೆಯು ಆ ಹಿಂದಿನ ರಾತ್ರಿ ಪಾರ್ವತಿಗೆ ಪರಮೇಶ್ವರನು ಹೇಳಿದ್ದ ರಹಸ್ಯಕಥೆಯನ್ನು, ತನ್ನ ಪತಿಯು ರಹಸ್ಯವಾಗಿ ಆಲಿಸಿ ತನಗೆ ಹೇಳಿದ್ದ ಪ್ರಕಾರ ಅವರಿಗೆ ಅರುಹಿದಳು. ಆಗ ಪಾರ್ವತಿಯು ಅವಳು ಹೇಳಿದ ಕಥೆಯನ್ನು ಕೇಳಿ ಆಶ್ಚರ್ಯದಿಂದ ಕ್ರೋಧಗೊಂಡು ! ಪರಮಾತ್ಮನ ಸಮೀಪಕ್ಕೆ ಬಂದು ಶಂಕರನನ್ನು ಕುರಿತು ಭಲೇ ಶಂಕರ, ನೀನು ಸರ್ವಜ್ಞನಾಗಿ ಸುಳ್ಳಾಡಬಹುದೇ ? ನಿನ್ನೆ ರಾತ್ರಿ ನೀನು ನನಗೆ ಹೇಳಿದ ರಹಸ್ಯವಾದ ಕಥೆಯು ಯಾರಿಗೂ ಗೊತ್ತಿಲ್ಲವೆಂದು ಹೇಳಿದೆಯಷ್ಟೆ. ಆದರೆ ಆ ಕಥೆಯನ್ನು ಈ ದಿನ ಪುಷ್ಪದಂತನ ಪತ್ನಿಯಾದ ದೇವದತ್ತೆಯು ನನ್ನ ಸಮಕ್ಷಮದಲ್ಲಿ ಸಖಿಯರಿಗೆಲ್ಲ ಹೇಳಿದಳು. ಅದನ್ನು ಕೇಳಿ ನನಗೆ ಅಪಮಾನವಾಯಿತು. ಅಯ್ಯೋ ನಿನ್ನಂತಹ ಸ್ವಾಮಿಯೂ ಈ ರೀತಿ ಸಟೆನುಡಿಯಬಹುದೇ ಎಂದಳು.

ಪರಮಾತ್ಮನು ಇದನ್ನು ಕೇಳಿ ಆಶ್ಚರ್ಯದಿಂದಲೂ, ಕೋಪದಿಂದಲೂ ಕೂಡಿದವನಾಗಿ ಆ ದೇವದತ್ತೆಯನ್ನು ಕರೆಯಿಸಿ, ಎಲೈ ದೇವದತ್ತೆಯೇ ಈ ಕಥೆಯನ್ನು ನಿನಗೆ ಯಾರು ಹೇಳಿದರೆಂದು ಸಿಟ್ಟಿನಿಂದ ಕೇಳಿದನು. ಆದಕ್ಕೆ ದೇವದತ್ತೆಯು ಶಂಕರನನ್ನು ಕಂಡು ಗಡಗಡನೆ ನಡುಗುತ್ತಾ ಪ್ರಭೂ ನನ್ನ ಪತಿಯಾದ ಪುಷ್ಪದಂತ ಮಹಾರಾಜನು ಈ ಕಥೆಯನ್ನು ನನಗೆ ಹೇಳಿದನೆಂದಳು. ಅವಳ ಮಾತನ್ನು ಕೇಳಿ ಪರಮಾತ್ಮನು ಮತ್ತೂ ಕ್ರೋಧಗೊಂಡು ಸಮೀಪದಲ್ಲೇ ಇದ್ದ ಪುಷ್ಪದಂತನನ್ನು ನೋಡಿ ಎಲೈ ಪುಷ್ಪದಂತನೇ ಈ ಕಥೆಯನ್ನು ನಿನಗೆ ಯಾರು ಹೇಳಿದರು ? ನನಗೆ ತಿಳಿಸೆಂದನು. ಅದಕ್ಕೆ ಪುಷ್ಪದಂತ ರಾಜನು ಗಡಗಡನೆ ನಡುಗುತ್ತ ಅತ್ಯಂತ ಕಳವಳದಿಂದ ತಳಮಳಗೊಂಡು ಕ್ಷೀಣಸ್ವರದಿಂದ ಪ್ರಭೂ, ದೇವದೇವಾ, ಮಹಾದೇವಾ ನನ್ನಿಂದ ಮಹಾಪರಾಧವಾಯಿತು. ನಿನ್ನೆಯ ರಾತ್ರಿ ತಮಗೆ ಪುಷ್ಪಗಳನ್ನು ಅರ್ಪಿಸುವುದಕ್ಕೆಂದು ಬಂದವನು ತಾವು ಏಕಾಂತದಲ್ಲಿರುವುದನ್ನು ಕಂಡು ಅದು ಅಸಮಯವೆಂದು ತಿಳಿದು ಹೊರಗೆ ದ್ವಾರದಲ್ಲಿಯೇ ನಿಂತು ನೀವು ಹೇಳಿದ ಕಥೆಯನ್ನೆಲ್ಲಾ ಕೇಳಿದೆನು. ಅದನ್ನು ನಾನು ದೇವದತ್ತೆಯ ಬಲವಂತಕ್ಕೊಳಗಾಗಿ ಅವಳಿಗೆ ಹೇಳಿದೆನು. ಈ ವಿಷಯದಲ್ಲಿ ನಾನೇ ತಪ್ಪಿತಸ್ಥನು. ಎಲ್ಲಾ ಹೊಣೆಯೂ ನನ್ನದೇ. ನನ್ನ ಪತ್ನಿಯು ಈ ವಿಚಾರದಲ್ಲಿ ನಿರಪರಾಧಿಯು. ಅವಳು ದಂಡನೆಗೆ ಯೋಗ್ಯಳಲ್ಲ, ದಂಡಿಸುವುದಿದ್ದರೆ ನನ್ನನ್ನೇ ದಂಡಿಸತಕ್ಕದ್ದು ಎಂದು ನಡೆದ ಸಂಗತಿಯನ್ನೆಲ್ಲಾ ತಿಳಿಸಿ ಸುಮ್ಮನಾದನು.

ಪರಮಾತ್ಮನು ಅದನ್ನು ಕೇಳಿ ಅತ್ಯಂತ ಕ್ರೋಧಗೊಂಡು ಅವರಿಬ್ಬರನ್ನೂ ಶಪಿಸುತ್ತಾ, ಎಲೈ ಮೂಢಾ ಪುಷ್ಪದಂತ, ನಿನ್ನ ನೀಚ ಬುದ್ಧಿಗೆ ಧಿಕ್ಕಾರ, ದುರಾತ್ಮಾ,

ಕಾಮಾಂಧ ದಂಪತಿಗಳಾದ ನಮ್ಮಿಬ್ಬರ ರಹಸ್ಯವಾದ ಮಾತುಕತೆಗಳನ್ನು ನೀನು ಅವಿವೇಕ ದಿಂದ ಕದ್ದು ಕೇಳಿದೆಯಲ್ಲವೇ! ಚಿಂತೆಯಿಲ್ಲ. ಆದರೆ ನೀನು ಅತ್ಯಂತ ಮೋಹಾಂಧನಾಗಿ ಆ ಕಥೆಯನ್ನು ನಿನ್ನ ಪತ್ನಿಗೂ ಹೇಳಬಹುದೆ? ಎಲೈ ದುರ್ಮತಿಯೇ ನೀನು ಅತ್ಯಂತ ಘೋರ ರೂಪಿಯಾದ ಬೇತಾಳನಾಗು. ಪಾಪಿ, ಮದಾಂಧ, ನಿನ್ನಿಂದ ಕೇಳಿದ ರಹಸ್ಯ ವಾದ ಕಥೆಯನ್ನು ಎಲ್ಲಾ ಸಖಿಯರೆದುರಿಗೆ ಅಹಂಕಾರದಿಂದ ಹೇಳಿ ಪಾರ್ವತಿಯನ್ನು ಅಪಮಾನ ಮಾಡಿದ ಆ ನಿನ್ನ ದುಷ್ಟ ಪತ್ನಿ ದೇವದತ್ತೆಯು ಹೆಣ್ಣು ಚಿಗರೆಯಾಗಲಿ ಎಂದು ಘೋರ ಶಾಪವನ್ನಿತ್ತನು.

ಇದರಿಂದ ಭಯಾಕುಲನಾದ ಪುಷ್ಪದಂತನು ಪತ್ನಿ ದೇವದತ್ತೆ ಸಮೇತನಾಗಿ ಶೋಕಿಸುತ್ತ ದೇವ ದೇವ, ದಯಾಸಿಂಧು, ಭಕ್ತವತ್ಸಲ, ಅನುಗ್ರಹಿಸು ಅನುಗ್ರಹಿಸು, ಕೃಪೆಮಾಡಿ ನಮ್ಮನ್ನು ರಕ್ಷಿಸು, ಭಕ್ತಪರಾಧೀನಾ, ಕರುಣಾನಿಧಿ ದಯವಿಟ್ಟು ಈ ಶಾಪ ವಿಮೋಚನೆ ಮಾಡಬೇಕೆಂದು ಅಂಜಲೀ ಬದ್ಧನಾಗಿ ದೈನ್ಯದಿಂದ ಪ್ರಾರ್ಥಿಸಿದನು. ಭಕ್ತ ಪರಾಯಣನಾದ ಪರಮೇಶ್ವರನು ಅವನಲ್ಲಿ ಕರುಣೆಗೊಂಡು ಎಲೈ ಪುಷ್ಪದಂತಾ, ನಿನ್ನ ಪತ್ನಿಯು ಹಗಲಿನಲ್ಲಿ ಹೆಣ್ಣು ಚಿಗರೆಯಾಗಿ ರಾತ್ರಿಯಲ್ಲಿ ಯಕ್ಷಿಣಿ ಯಾಗುವಳು. ನೀವಿಬ್ಬರೂ ಒಬ್ಬರಿಗೊಬ್ಬರು ಯಾವಾಗ ಸಂಧಿಸುವಿರೋ ಆಗ ನಿಮ್ಮಿಬ್ಬರ ಶಾಪ ವಿಮೋಚನೆಯಾಗುವುದು. ಕಲಿಯುಗದಲ್ಲಿ ದಯಾಳುವೂ, ಸತ್ಯ ಸಂಧನೂ, ತೇಜಸ್ವಿಯೂ, ಮಹಾ ಪರಾಕ್ರಮಿಯೂ ಆದ ವಿಕ್ರಮಾದಿತ್ಯನೆಂಬ ರಾಜನು ಭೂಲೋಕದಲ್ಲಿ ಜನಿಸುವನು. ಅವನಿಂದ ನಿಮ್ಮಿಬ್ಬರಿಗೂ ನನ್ನ ಶಾಪದಿಂದ ವಿಮೋಚನೆಯಾಗುವುದು ಎಂದು ನುಡಿದು ಪರಮಾತ್ಮನು ಅಂತಃಪುರವನ್ನು ಪ್ರವೇಶಿಸಿದನು.

ಆಗ ಕ್ಷಣಾರ್ಧದಲ್ಲಿಯೇ ಪುಷ್ಪದಂತನು ಮನುಷ್ಯರೂಪವನ್ನು ಬಿಟ್ಟು ಮಹಾ ಭಯಂಕರ ರೂಪವನ್ನು ಧರಿಸಿ ಮುಸಲ, ಮುದ್ಗರ, ಭಿಂಡಿವಾಲ, ಪರಶ್ವಧ, ಪಟ್ಟಸ, ತೋರುತ, ಖಡ್ಗ, ಕುಂತ, ಸಿಂಜನೀಯುಕ್ತವಾದ ಲಿಗುಡ, ಧನುಸ್ಸು, ಬಾಣ, ಬತ್ತಳಿಕೆ, ಚುರಿಕಾ, ಚಂದ್ರಾಯುಧ ಮೊದಲಾದ ಆಯುಧಗಳ ಸಮೂಹವನ್ನು ಕೈಗಳಲ್ಲಿ ಧರಿಸಿ ಮಹಾಬಲವುಳ್ಳವನಾಗಿ ಅಥರ್ವಣ ವೇದೋಕ್ತಗಳಾದ ಮಂತ್ರ, ಯಂತ್ರ, ತಂತ್ರ, ಜಾರಣ, ಮಾರಣಾದಿಗಳಿಗೆ ತಾನೇ ಉಪದೇಶಕನಾಗಿ, ಸಮಸ್ತ ಕ್ಷತ್ರಿಯರಿಗೆ ಶಿಕ್ಷಕನಾಗಿ, ಅರವತ್ತುನಾಲ್ಕು ಕಲೆಗಳಲ್ಲಿ ಪ್ರವೀಣನಾಗಿ ಪರಿಪೂರ್ಣತೆ ಹೊಂದಿ ಸರ್ವ ಕಾರ್ಯಕುಶಲನಾಗಿ ಭೂತ, ಪ್ರೇತ, ಪಿಶಾಚ, ಶಾಕಿನೀ, ಢಾಕಿನೀ ಮೊದಲಾದ ಭೂತ ಸಮೂಹಗಳಿಗೆ ಒಡೆಯನಾದನು.

ನೋಡಲು ಭಯಂಕರಾಕಾರನಾಗಿ, ವಕ್ರವಾದ ಬಾಯಿ, ಸೊಟ್ಟನೆಯ ಪಾದ ಗಳು, ಕಿರಿದಾದ ಹಸ್ತಗಳು, ಕೃಶವಾದ ಹೊಟ್ಟೆ, ತೀಕ್ಷ್ಣವಾದ ಕೋರೆದಾಡೆಗಳು,

ಬಕಪಕ್ಷಿಯಂತೆ ಉದ್ದವಾದ ಕತ್ತು, ಮುಳ್ಳಿನಂತೆ ಒರಟಾದ ಗಡ್ಡಮಾಸಗಳು, ಚೂಪಾದ ಹಲ್ಲುಗಳು, ಅಗಲವಾದ ಮುಖ, ಘೋರ ರೂಪ, ಉದ್ದವಾದ ಮೂಗು, ದೀರ್ಘವಾದ ಕರ್ಣಗಳು, ಭೀತಿ ಹುಟ್ಟಿಸುವ ಕಣ್ಣುಗಳು, ಇವುಗಳಿಂದ ಯುಕ್ತನಾಗಿ ಸಮಸ್ತರಿಗೂ ಅಂಜಿಕೆಯನ್ನುಂಟು ಮಾಡುವವನಾಗಿ ಕಾಣುತ್ತಿದ್ದನು.

ಈ ಘೋರ ಲಕ್ಷಣಗಳಿಂದ ಕೂಡಿದವನಾಗಿ, ಜಟಾಧಾರಿಯಾಗಿ ಸರ್ವಕ್ಷತ್ರಿಯರಿಗೆ ಖಡ್ಗಯುದ್ಧ ಮತ್ತು ಧನುರ್ವೇದೋಪದೇಶಕನಾದ ಬೇತಾಳನಾಗಿ ಉಜ್ಜಯಿನಿ ಪಟ್ಟಣಕ್ಕೆ ಪೂರ್ವ ದಿಕ್ಕಿನಲ್ಲಿದ್ದ ಸಿಂಹಗಳು, ವ್ಯಾಘ್ರಗಳು, ಕಪಿಗಳು, ಕರಡಿಗಳು, ಕೃಷ್ಣಕಪಿಗಳು ತೋಳ ಸಮೂಹ, ನರಿಗಳ ಸಮೂಹ, ಗಜ ಸಮೂಹಗಳಿಂದ, ಪಕ್ಷಿ ಸಮೂಹಗಳಿಂದ ವಾಸಿಸಲ್ಪಟ್ಟ, ಅನೇಕ ಜಾತಿಯ ಮರಗಳಿಂದ ಆವೃತವಾಗಿದ್ದ, ಅನೇಕ ಕೊಳಗಳಿಂದ ಕೂಡಿದ್ದು, ಪರ್ವತೋಪಮಗಳಾದ ಅನೇಕ ಹೆಗ್ಗಲ್ಲುಗಳಿಂದ ಕೂಡಿ ಪ್ರವೇಶಿಸುವುದಕ್ಕೆ ಬಹು ದುರ್ಗಮವಾಗಿದ್ದ ಭಯಂಕರವಾದ ಘೋರಾರಣ್ಯವನ್ನು ಪ್ರವೇಶಿಸಿದನು. ಆ ಮಹಾ ಬಲಿಷ್ಠನಾದ ಬೇತಾಳನು ಆ ಅರಣ್ಯದಲ್ಲಿ, ನೂರುಗಾವುದ ಉದ್ದವಾಗಿಯೂ ಇನ್ನೂರುಗಾವುದ ಅಗಲವಾಗಿಯೂ ವಿಸ್ತಾರವಾಗಿದ್ದು ಸೂರ್ಯನ ಕಿರಣಗಳನ್ನು ಒಳಸೇರಗೊಡದೆ ಮಹಾ ಶಾಖೆಗಳಿಂದ ಕೂಡಿದ್ದ ಒಂದು ವಟವೃಕ್ಷವನ್ನು ಕಂಡು, ಅನೇಕ ಯತಿಗಳಿಂದ, ಭೂತ, ಪಿಶಾಚಗಣಗಳಿಂದ ಕೂಡಿಕೊಂಡು, ಆ ಮಹಾ ವೃಕ್ಷದ ಒಂದು ಮಹಾಶಾಖೆಯನ್ನು ಆಶ್ರಯಿಸಿ ವಾಸಿಸುತ್ತಿದ್ದನು.

ಶಾಪಗ್ರಸ್ತೆಯಾದ ಆತನ ಪತ್ನಿ ದೇವದತ್ತೆಯು ಹೆಣ್ಣು ಚಿಗರೆಯಾಗಿ ಅದೇ ಅರಣ್ಯದಲ್ಲಿ ಅನೇಕ ಚಿಗರೆಗಳಿಂದ ಕೂಡಿ ಅತ್ತಿತ್ತ ಓಡಾಡುತ್ತ ಸಮಸ್ತ ದಿಕ್ಕುಗಳಲ್ಲಿಯೂ ತನ್ನ ನೆರಳನ್ನು ನೋಡುತ್ತ ಚಂಚಲದಿಂದ ತಲೆಯನ್ನು ಮೇಲಕ್ಕೆತ್ತಿ ಹಗಲಿನಲ್ಲಿ ಅತ್ಯಂತ ಭಯಗೊಳ್ಳುತ್ತ ದರ್ಭೆಯ ತುದಿಗಳನ್ನು, ಎಳೆಗರಿಕೆಯನ್ನು ಮೇಯುತ್ತ ಬಿಸಿಲುಗುದುರೆಗಳನ್ನು ಕಂಡು ಜಲಭ್ರಾಂತಿಯಿಂದ ಓಡುತ್ತ ಚಿಗರೆಗಳ ಹಿಂಡಿನಲ್ಲಿ ವಾಸಿಸುತ್ತಿದ್ದಳು.

ರಾತ್ರಿಯಲ್ಲಿ ಯಕ್ಷಿಣಿಯಾಗಿ ನೃತ್ಯ, ಗೀತವಿಶಾರದಳಾಗಿ, ಷಡ್ಜಾದಿಸ್ವರಯುಕ್ತ ತಂತ್ರೀಲಯಕ್ಕೆ ಅನುಸರಿಸಿ ಕೇಳುವವರಿಗೆ ಶ್ರವಣಾನಂದವಾಗುವಂತೆ ಶಿವಸ್ತುತಿ ಯುಕ್ತವಾದ ಸಂಗೀತವನ್ನು ಹಾಡುತ್ತಾ ವಾಸಿಸುತ್ತಿದ್ದಳು.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿ ಬ್ರಹ್ಮನಾರದ ಸಂವಾದ ರೂಪ ಉತ್ತರ ಖಂಡದ ದೇವಾಂಗ ಚರಿತ್ರೆಯಲ್ಲಿ ಪುಷ್ಪದಂತೋಪಾಖ್ಯಾನದಲ್ಲಿ ಭೇತಾಳ ಶಾಪಪ್ರದಾನವೆಂಬ ಇಪ್ಪತ್ತನೆಯ ಅಧ್ಯಾಯ ಮುಗಿದುದು.

ಇಪ್ಪತ್ತೊಂದನೆಯ ಅಧ್ಯಾಯ

ಚಂದ್ರಶರ್ಮೋಪಾಖ್ಯಾನ

ಸೂತನೆನ್ನುತ್ತಾನೆ. ಭೂಲೋಕದಲ್ಲಿ ಭಯಂಕರವಾದ ಕಲಿಯುಗವು ವೃದ್ಧಿ ಹೊಂದುತ್ತಿರಲಾಗಿ, ವೇದನಾರಾಯಣಪುರವೆಂಬ ಪಟ್ಟಣದಲ್ಲಿ, ವಿಷ್ಣುಶರ್ಮನೆಂಬ ಬ್ರಾಹ್ಮಣನಿದ್ದನು. ಆವನಿಗೆ ಅತಿತೇಜಸ್ವಿಗಳಾದ ಯಜ್ಞನಾರಾಯಣ, ವೇದ ನಾರಾಯಣ, ವೀರನಾರಾಯಣ, ಮತ್ತು ಚಂದ್ರಶರ್ಮರೆಂಬ ನಾಲ್ವರು ಗಂಡುಮಕ್ಕಳಿದ್ದರು. ಅವರಲ್ಲಿ ಕಡೆಯವನ ಹೊರತು ಉಳಿದ ಮೂವರೂ ಸರ್ವಶಾಸ್ತ್ರವಿಶಾರದರೂ, ನೀತಿನಿಪುಣರೂ ವ್ಯವಹಾರ ಕೋವಿದರೂ, ಆಲೋಚನಾಪರರೂ, ಗುಣವಂತರೂ ಆಗಿದ್ದರು. ಈ ಮೂವರೂ, ತಮ್ಮ ತಮ್ಮ ಪಾಂಡಿತ್ಯಬಲದಿಂದ, ಪಂಡಿತ ಸಭೆಗಳಲ್ಲಿ ಬಹುಮಾನಿತರಾಗಿ, ವಿಖ್ಯಾತರಾಗಿದ್ದರು. ಆತಿಕಿರಿಯವನಾದ ಚಂದ್ರಶರ್ಮನು ಮಂದಮತಿಯಾದುದರಿಂದ ಅವನನ್ನು ತಮ್ಮ ಸೇವೆಗಾಗಿ ಅವರು ನೇಮಿಸಿಕೊಂಡಿದ್ದರು. ವಿದ್ಯಾವಿಹೀನನಾದ ಆ ಚಂದ್ರಶರ್ಮನು, ಅಣ್ಣಂದಿರ ಸೇವೆಯಲ್ಲಿ ನಿರತನಾಗಿ ಕೆಲವು ಕಾಲ ಕಳೆಯಲು, ಅವನಿಗೆ ಅಣ್ಣಂದಿರ ಸೇವೆಯಿಂದ ಬೇಸರವಾಗಿ ಚಿಂತಾಕ್ರಾಂತನಾಗಿ, ನಾನು ವಿದ್ಯಾವಿಹೀನನಾದುದರಿಂದ, ನನ್ನೊಡಹುಟ್ಟಿದವರು ನನ್ನನ್ನು ಈ ನೀಚವಾದ ಸೇವಾವೃತ್ತಿಯಲ್ಲಿ ನಿಯಮಿಸಿ ಕೊಂಡಿರುವರು. ನಾನು ಯಾವ ಉಪಾಯದಿಂದಲಾದರೂ, ಈ ನೀಚವಾದ ಸೇವಾವೃತ್ತಿಯಿಂದ ಬಿಡುಗಡೆಯಾಗಿ, ವಿದ್ಯಾವಂತನಾಗಬೇಕೆಂಬ ಯೋಚನೆಯು ದೈವವಶಾತ್ ಅವನಿಗೆ ಉಂಟಾಯಿತು. ಅವನು ಅದನ್ನು ಹೊರಕ್ಕೆ ತೋರಗೊಡದೆ ತನ್ನ ಅಣ್ಣಂದಿರಾರಿಗೂ ತಿಳಿಸದೆ ಒಂದು ದಿನ ಮಧ್ಯರಾತ್ರಿಯಲ್ಲಿ ಬ್ರಹ್ಮಚಾರಿಯಾದ ಆ ಚಂದ್ರಶರ್ಮನು ಮನೆಬಿಟ್ಟು ಹೊರಟನು. ಅವನು ಬೆಳಗಾಗು ವವರಿವಿಗೂ ದಾರಿ ನಡೆದು, ಸ್ವಲ್ಪ ವಿಶ್ರಮಿಸಿಕೊಂಡು, ಮುಂದಿನ ಸಂಜೆಯವರಿವಿಗೂ ಎಲ್ಲೂ ನಿಲ್ಲದೆ ನಡೆದು, ಒಂದು ಅಗ್ರಹಾರವನ್ನು ಸೇರಿದನು. ಆದರ ಸಮೀಪದಲ್ಲಿದ್ದ ನದಿಯನ್ನು ನೋಡಿ ಅವನು ಸಾಯಂಸಂಧ್ಯೆಯನ್ನು ಮಾಡುವುದಕ್ಕೋಸ್ಕರ ಆ ನದಿಯಲ್ಲೇ ಸ್ನಾನಮಾಡಿ ಸಂಧ್ಯೋಪಾಸನಾತತ್ಪರನಾಗಿ ವೇದಮಾತೆಯಾದ ಗಾಯತ್ರೀಯ ಪವಿತ್ರ ಮಂತ್ರವನ್ನು ಜಪಿಸುತ್ತ ಕುಳಿತಿದ್ದನು.

ಆ ನದಿ ತೀರದಲ್ಲಿದ್ದ ಗಗನಚುಂಬಿಶಾಖೆಗಳಿಂದೊಪ್ಪುತ್ತಿದ್ದ ಒಂದು ಆರಳಿಯ ಮರದಲ್ಲಿ ವಾಸಿಸುತ್ತಿದ್ದ ಬ್ರಹ್ಮರಾಕ್ಷಸನೊಬ್ಬನು, ಆ ಬ್ರಹ್ಮಚಾರಿಯನ್ನು ನೋಡಿ, ಬಹು ಸಂತೋಷದಿಂದ ಬ್ರಾಹ್ಮಣವೇಷ ತಾಳಿ, ಅವನ ಬಳಿಗೆ ಬಂದು ಅವನನ್ನು ಕುರಿತು ಅಯ್ಯಾ ವಟು ನೀನಾರು? ಎಲ್ಲಿಂದ ಬಂದೆ? ಎಲ್ಲಿಗೆ ಹೋಗುವೆ?

ಹೇಳೆಂದನು. ಅವಕ್ಕೆ ಚಂದ್ರಶರ್ಮನು ಕುತೂಹಲದಿಂದ ವಿಪ್ರವೇಷಧಾರಿಯಾದ ಆ ಬ್ರಹ್ಮರಾಕ್ಷಸನನ್ನು ನೋಡಿ ಆ ಅಗ್ರಹಾರದ ಒಬ್ಬ ಬ್ರಾಹ್ಮಣೋತ್ತಮನಿರಬೇಕೆಂದು ಭಾವಿಸಿ ಎಲೈ ವಿಪ್ರಶ್ರೇಷ್ಠಾ, ವೇದನಾರಾಯಣಪುರದಲ್ಲಿ ವಿಷ್ಣುಶರ್ಮನೆಂಬ ಬ್ರಾಹ್ಮಣೋತ್ತಮನೊಬ್ಬನಿರುವನು. ಅವನಿಗೆ ನಾಲ್ಕು ಮಂದಿ ಗಂಡು ಮಕ್ಕಳು. ಅವರಲ್ಲಿ ನಾನೇ ಕಡೆಯವನಾದ ಚಂದ್ರಶರ್ಮನು. ಎಲೈ ವಿದ್ವನ್ಮಣಿಯೇ, ನಾನು ವಿದ್ಯಾರ್ಥಿಯಾಗಿ ವಿದ್ಯೆಯನ್ನು ಅರಸಿಕೊಂಡು ಬಂದಿರುವೆನೆಂದನು.

ಅದಕ್ಕೆ ಬ್ರಹ್ಮರಾಕ್ಷಸನು ಸಂತೋಷಪಟ್ಟು ಕುಮಾರಾ, ನಾನು ನಿನಗೆ ವೇದ ವೇದಾಂಗಗಳೇ ಮೊದಲಾದ ಸಮಸ್ತ ವಿದ್ಯೆಗಳನ್ನೂ ಕಲಿಸುವೆನು. ಅವುಗಳನ್ನೆಲ್ಲಾ ಅಭ್ಯಾಸಮಾಡುವಿಯಾ ಎಂದನು. ಅದಕ್ಕೆ ಚಂದ್ರಶರ್ಮನು ಹರ್ಷದಿಂದ ಹಾಗೆಯೇ ಆಗಲೆಂದು ದೃಢಮನಸ್ಸಿನಿಂದ ನುಡಿದನು. ಬ್ರಹ್ಮರಾಕ್ಷಸನು ಅವನ ಸಂಕಲ್ಪಕ್ಕೆ ಸಂತೋಷಪಟ್ಟು, ಎಲೈ ಬಾಲಕಾ ಇಗೋ ನನ್ನ ನಿಜಸ್ವರೂಪವನ್ನು ತೋರಿಸುವೆನು ನೋಡು ಅಂಜಬೇಡ ಎಂದು ಧೈರ್ಯ ಹೇಳಿ, ತನ್ನ ಸ್ವರೂಪ ವನ್ನು ತೋರಿಸಿದನು. ಚಂದ್ರಶರ್ಮನು ಆ ಬ್ರಹ್ಮರಾಕ್ಷಸನ ಸ್ವರೂಪವನ್ನು ನೋಡಿ ಬಹು ಭಯಪಟ್ಟು ಗಟ್ಟಿಯಾಗಿ ಕಣ್ಣುಮುಚ್ಚಿಕೊಂಡನು. ಇದನ್ನು ತಿಳಿದು ಆ ಬ್ರಹ್ಮ ರಾಕ್ಷಸನು ಮತ್ತೆ ಬ್ರಾಹ್ಮಣವೇಷತಾಳಿ ಚಂದ್ರಶರ್ಮನಿಗಾದ ಭೀತಿಯನ್ನು ನಿವಾರಿಸಿ, ಅವನನ್ನು ತನ್ನ ವಾಸಸ್ಥಾನವಾದ ಆ ಅರಳಿಯಮರದ ಮೇಲಕ್ಕೆ ಕರೆದುಕೊಂಡು ಹೋದನು.

ಅಲ್ಲಿ ಅವನು ನಿದ್ರಾಹಾರಗಳನ್ನು ಬಿಟ್ಟು ಆ ಚಂದ್ರಶರ್ಮನಿಗೆ ಸಮಸ್ತ ವಿದ್ಯೆಗಳನ್ನೂ ಉಪದೇಶಿಸಿದನು. ಆ ಚಂದ್ರಶರ್ಮನೂ ಸಹ ನಿದ್ರಾಹಾರಗಳನ್ನು ತ್ಯಜಿಸಿ, ಬಹು ಶ್ರದ್ಧಾನಿಷ್ಠೆಗಳಿಂದ ಅವನು ಉಪದೇಶಿಸಿದ ಸಮಸ್ತ ವಿದ್ಯೆಗಳನ್ನು ಕಲಿತನು. ಹೀಗೆ ಆರುತಿಂಗಳು ಕಳೆಯಲು ಆ ಬ್ರಹ್ಮರಾಕ್ಷಸನು ಚಂದ್ರ ಶರ್ಮನನ್ನು ನೋಡಿ ಎಲೈ ಸುಂದರನಾದ ವಟುವೆ, ನಿನಗೆ ನಾನು ಕಲಿತಿರುವ ಎಲ್ಲಾ ವಿದ್ಯೆಗಳನ್ನೂ ಕಲಿಸಿದೆನು. ನನ್ನ ಶಾಪವಿಮೋಚನೆಯು ನಿಸ್ಸಂಶಯವಾಗಿ ಆಯಿತು. ನಾನು ಕಾಶಿಗೆ ಹೋಗುವೆನು. ಎಲೈ ಸೌಮ್ಯನೆ ನೀನು ನಿನ್ನ ಮನೆಗೆ ತೆರಳು. ನಿನಗೆ ಕಲ್ಯಾಣವಾಗುವುದು. ಇದರಲ್ಲೇನೂ ಸಂಶಯವಿಲ್ಲ. ನಿನಗೆ ಸದ್ಗುಣಿಗಳಾದ ನಾಲ್ವರು ಗಂಡುಮಕ್ಕಳು ಜನಿಸುವರು. ಅವರು ಸಾಮ್ರಾಜ್ಯವನ್ನು ಸ್ಥಾಪಿಸಿ ಭೂಮಿಯ ನ್ನಾಳುವರು ಎಂದು ಆಶೀರ್ವದಿಸಿ ಆ ಬ್ರಹ್ಮರಾಕ್ಷಸನು ಹೊರಡಲನುವಾದನು.

ಆಗ ಚಂದ್ರಶರ್ಮನು ತನ್ನ ವಿದ್ಯಾಗುರುವನ್ನು ಕುರಿತು, ಗುರುವರ, ಶ್ರೀಮಾನ್ ವೇದವೇದಾಂಗಪಾರಂಗತನೇ ನೀನು ನಿಸ್ಸಂದೇಹವಾಗಿ ಸರ್ವಶಾಸ್ತ್ರಾರ್ಥತತ್ವಜ್ಞ ನಾಗಿದ್ದು ನಿನಗೆ ಈ ಬ್ರಹ್ಮರಾಕ್ಷಸತ್ವವು ಹೇಗೆ ಪ್ರಾಪ್ತವಾಯಿತು. ಈ ದಿನ ಅದರ

ವಿಮೋಚನೆಯಾದರೂ ಎಂತಾಯಿತು. ಈ ವಿಷಯವನ್ನು ದಯವಿಟ್ಟು ನನಗೆ ತಿಳಿಸೆಂದನು. ಆ ಮಾತನ್ನು ಕೇಳಿ ಬ್ರಹ್ಮರಾಕ್ಷಸನು ಎಲೈ ಶಿಷ್ಯನೇ ನನಗೊದಗಿದ ಶಾಪವನ್ನೂ ಅದು ವಿಮೋಚನೆಯಾದ ಬಗೆಯನ್ನೂ ನಿನಗೆ ಹೇಳುವೆನು ಕೇಳು :

ಎಲೈ ತೇಜಸ್ವಿಯೇ ಪೂರ್ವದಲ್ಲಿ ಕೃಷ್ಣಾನದಿಯ ತೀರದಲ್ಲಿ ಸಮಸ್ತ ಪಂಡಿತರಿಂದ ಕೂಡಿದ, ಸರಸ್ವತೀಪುರವೆಂಬ ಒಂದು ಅಗ್ರಹಾರವಿತ್ತು. ಆ ಅಗ್ರಹಾರದಲ್ಲಿ, ವೇದ ಶಾಸ್ತ್ರ ವಿಶಾರದನಾದ ನಾನು ವಾಸವಾಗಿದ್ದೆನು. ಆಗ ಒಬ್ಬ ವಿದ್ಯಾರ್ಥಿಯು ನನ್ನ ಬಳಿಗೆ ಬಂದು, ನನಗೆ ನಮಸ್ಕರಿಸಿ, ಎಲೈ ವಿಪ್ರನ್ರಮಣಿಯೇ, ನಾನು ಯತ್ಕಿಂಚಿತ್ ಅಭ್ಯಾಸ ಮಾಡಿರುವೆನು. ನೀನು ನನಗೆ ಇನ್ನೂ ಹೆಚ್ಚಿನ ವಿದ್ಯಾದಾನಮಾಡಿ ನನ್ನನ್ನು ವಿದ್ಯಾವಂತನನ್ನಾಗಿ ಮಾಡೆಂದು ಕೇಳಿಕೊಂಡನು. ನಾನು ಅವನ ಈ ಮಾತನ್ನು ಕೇಳಿ ಅತ್ಯಂತ ಗರ್ವದಿಂದ ಈ ಲೋಕದಲ್ಲಿ ನಾನು ವೇದವೇ ಮೊದಲಾದ ವಿದ್ಯೆಗಳನ್ನು ಯಾರಿಗೂ ಕಲಿಸುವುದಿಲ್ಲ. ನೀನು ಇಲ್ಲಿಂದ ಬೇಗ ಹೋಗೆಂದು ನುಡಿದೆನು. ಅದಕ್ಕೆ ಆ ಬ್ರಾಹ್ಮಣಶ್ರೇಷ್ಠನು ಕೋಪಗೊಂಡು ನಾನು ಬೇರೆ ಗುರುವಿನಿಂದ ಸಕಲ ವಿದ್ಯೆಗಳನ್ನು ಸಂಪಾದಿಸುವೆನು. ಎಲೈ ಬ್ರಾಹ್ಮಣಾಧಮನೇ ನಿನ್ನ ವಿದ್ಯೆಯೆಲ್ಲಾ ನಿಷ್ಫಲವಾಗಲಿ. ನೀನು ಬ್ರಹ್ಮರಾಕ್ಷಸನಾಗೆಂದು ಶಾಪವನ್ನಿತ್ತನು. ಆಗ ನಾನು ಚಿಂತಾಕ್ರಾಂತನಾಗಿ, ಎಲೈ ಬ್ರಾಹ್ಮಣೋತ್ತಮಾ ಅನುಗ್ರಹಿಸು. ನನ್ನಲ್ಲಿ ಕೃಪೆಮಾಡು. ನನ್ನ ಶಾಪವಿಮೋಚನೆಯನ್ನು ದಯವಿಟ್ಟು ತಿಳಿಸೆಂದು ಪ್ರಾರ್ಥಿಸಿದೆನು. ಅದಕ್ಕೆ ಆ ಬ್ರಾಹ್ಮಣನು ಕರುಣೆಯಿಂದ ನನ್ನನ್ನು ಕುರಿತು, ಎಲೈ ವಿಪ್ರನೇ ಕೆಲವು ಕಾಲ ಕಳೆದ ಮೇಲೆ, ಚಂದ್ರಶರ್ಮನೆಂಬ ವಟುವು ಸಮಸ್ತ ವಿದ್ಯೆಗಳನ್ನು ಕಲಿಯುವುದ ಕ್ಕೋಸ್ಕರ ನಿನ್ನ ಬಳಿಗೆ ಬರುವನು. ನಿಮ್ಮಿಬ್ಬರಿಗೂ ಕೃಷ್ಣಾತೀರದಲ್ಲಿ ಸಮಾಗಮ ವಾಗುವುದು. ಅವನಿಗೆ ನೀನು ಕಲಿತಿರುವ ಸಮಸ್ತ ವಿದ್ಯೆಗಳನ್ನೂ ಕಲಿಸಿ ಗಂಗಾಸ್ನಾನ ಮಾಡಿದರೆ ನಿನಗೆ ಶಾಪ ವಿಮೋಚನೆಯಾಗುವುದೆಂದು ಹೇಳಿ, ಆ ವಿದ್ಯಾರ್ಥಿ ಬ್ರಾಹ್ಮಣನು ತನ್ನ ದೇಶಕ್ಕೆ ಹೋದನು.

ನಾನು ಕೂಡಲೇ ಬ್ರಹ್ಮರಾಕ್ಷಸನಾಗಿ ಈ ಅಶ್ವತ್ಥ ವೃಕ್ಷದ ಮೇಲಿದ್ದು ನಿನ್ನ ಮಾರ್ಗವನ್ನೇ ನಿರೀಕ್ಷಿಸುತ್ತಿದ್ದೆನು. ದೈವಯೋಗದಿಂದ ಈಗ ನೀನು ಬಂದೆ. ನಾನು ಶಿಷ್ಯನಾದ ನಿನಗೆ ಸಮಸ್ತ ವಿದ್ಯೆಗಳನ್ನೂ ಉಪದೇಶಿಸಿರುವೆನು. ಇನ್ನು ನಾನು ಗಂಗಾ ಸ್ನಾನಕ್ಕಾಗಿ ಕಾಶಿಗೆ ಹೊರಡುವೆನು. ನಿನಗೆ ಕಲ್ಯಾಣವಾಗಲಿ. ನೀನು ಸದಾ ಜಯಶಾ ಲಿಯೂ ಸುಖಿಯೂ ಆಗು ಎಂದು ನುಡಿದು ಆ ಬ್ರಹ್ಮರಾಕ್ಷಸನು ಆ ಅಶ್ವತ್ಥವೃಕ್ಷದಿಂದ ಆ ವಟುವನ್ನು ಭೂಮಿಗಿಳಿಸಿ ತಾನು ಶಾಪವಿಮುಕ್ತನಾಗಿ ತನ್ನ ಹಿಂದಿನ ಬ್ರಾಹ್ಮಣ ರೂಪವನ್ನು ಹೊಂದಿ, ಹೋಗಿ ಬರುತ್ತೇನೆಂದು ಹೇಳಿ ಪಾಪಹಾರಿಣಿಯಾದ ಗಂಗಾ ಸ್ನಾನಕ್ಕೆ ತೆರಳಿದನು.

ಇತ್ತ ಸರ್ವವಿದ್ಯಾಪಾರಂಗತನಾದ ಚಂದ್ರಶರ್ಮನು ಸಂತೋಷದಿಂದ ತನ್ನ ಪಟ್ಟಣಕ್ಕೆ ಹೊರಟು, ಮಾರ್ಗಮಧ್ಯದಲ್ಲಿ ಅನೇಕ ಪ್ರಾಕಾರ ಶೋಭಿತವಾದ ಉಜ್ಜಯನೀ ಪಟ್ಟಣಕ್ಕೆ ಬಂದನು. ಅಲ್ಲಿ ಒಬ್ಬ ವೇಶ್ಯೆಯ ಗೃಹವನ್ನು ನೋಡಿ, ನಿದ್ರಾಹಾರ ವರ್ಜಿತನಾಗಿದ್ದು ಅದರಿಂದ ಉಂಟಾದ ಆಯಾಸದಿಂದ ಕಾರ್ಯಾಕಾರ್ಯವನ್ನರಿಯದೆ, ಬ್ರಾಹ್ಮಣ ಗೃಹವೆಂದು ಭಾವಿಸಿ ಆ ವೇಶ್ಯಾಗೃಹದ ಮುಂದಿನ ಪಡಸಾಲೆಯಲ್ಲಿ ಸ್ವಲ್ಪ ಸ್ಥಳ ಮಾಡಿಕೊಂಡು, ತನ್ನ ಹೊದ್ದಿಕೆಯ ವಸ್ತ್ರವನ್ನೇ ನೆಲಕ್ಕೆ ಹಾಸಿ ಮಹಾಪ್ರಾಜ್ಞನಾದ ಆ ಚಂದ್ರಶರ್ಮನು ದೇಹದ ಪರಿವೆಯಿಲ್ಲದವನಾಗಿ ಮಲಗಿ ನಿದ್ರಿಸಿದನು. ಆ ಮನೆಯೊಡತಿಯ ಪುತ್ರಿ ಸೌಂದರ್ಯವತಿಯೆಂಬುವವಳು, ಅವನನ್ನು ನೋಡಿ ಮೋಹಗೊಂಡು, ಮಹಾತೇಜಸ್ವಿಯಾದ ಈ ತರುಣನೇ ನನ್ನ ಪತಿಯೆಂದು ಮನಸ್ಸಿನಲ್ಲಿ ನಿಶ್ಚಯಿಸಿ, ತನ್ನ ತಾಯಿಯನ್ನು ನೋಡಿ, ಎಲೈ ತಾಯಿಯೇ ಈ ಪಡಸಾಲೆಯಲ್ಲಿ ಮಲಗಿರುವ ಮನ್ಮಥಾಕಾರನಾದ ನನ್ನ ಮನಸ್ಸನ್ನಪಹರಿಸಿರುವ, ನಾನು ಪತಿಯಾಗಿ ವರಿಸಿರುವ ಈ ತರುಣನನ್ನು ನೋಡೆಂದು ನುಡಿದಳು.

ತನ್ನ ಮಗಳ ಈ ಮಾತನ್ನು ಕೇಳಿ ಆ ವೇಶ್ಯೆಯು ಅಲ್ಲಿಗೆ ಶೀಘ್ರವಾಗಿ ಬಂದು ಅಲಂಕಾರರಹಿತನಾಗಿ ಮಲಗಿದ್ದ ತರುಣ ಬ್ರಾಹ್ಮಣನನ್ನು ನೋಡಿ, ಇವನು ದರಿದ್ರನೆಂದು ತಿಳಿದು, ಸಿಟ್ಟಿನಿಂದ ಮಗಳನ್ನು ನೋಡಿ ಇವನು ನಿನಗೆ ತಕ್ಕವರನಲ್ಲ. ದರಿದ್ರನಾದ ಇವನು ನಿನಗೆ ಪತಿಯಾಗುವುದು ಬೇಡ. ಬೇರೊಬ್ಬ ಶ್ರೀಮಂತನನ್ನು ವರಿಸೆಂದು ನುಡಿದಳು. ತಾಯಿಯ ಈ ಮಾತನ್ನು, ಸೌಂದರ್ಯವತಿಯು ಕೇಳದೆ, ಇವನನ್ನೇ ನಾನು ವರಿಸುವೆನೆಂದು ಮತ್ತೆ ಮತ್ತೆ ನುಡಿದು ಹಟಹಿಡಿದಳು. ಆ ವೇಶ್ಯೆಯು ಮಗಳ ಮನೋಭಿಪ್ರಾಯವನ್ನು ತಿಳಿದು ಬೇರೆ ದಾರಿಕಾಣದೆ ಅದಕ್ಕೆ ಒಪ್ಪಿಕೊಂಡಳು. ಆದರೆ ಆ ಬ್ರಾಹ್ಮಣ ತರುಣನು, ಬಹಳ ಕಾಲದಿಂದಲೂ ನಿದ್ರಾಹಾರಗಳಿಲ್ಲದುದರಿಂದ ಸ್ವಲ್ಪವಾದರೂ ಕೈಕಾಲುಗಳನ್ನು ಅಲುಗಾಡಿಸದೆ ಮಲಗಿದ್ದನು.

ಈ ರೀತಿ ಗಾಢನಿದ್ರಾಪರವಶನಾಗಿ ಸ್ವಲ್ಪವೂ ಎಚ್ಚರವಿಲ್ಲದೆ ನಿದ್ರಿಸುವುದನ್ನು ಆ ವೇಶ್ಯೆಯು ಕಂಡು, ಶೀಘ್ರವಾಗಿ ಆ ದೇಶದ ರಾಜನ ಬಳಿಗೆ ಹೋಗಿ ಈ ಸಂಗತಿಯನ್ನು ತಿಳಿಸಿದಳು. ಧ್ವಜಕೀರ್ತಿಯೆಂಬ ಆ ರಾಜೋತ್ತಮನು, ವೇಶ್ಯೆಯ ಈ ಮಾತನ್ನು ಕೇಳಿ ಆಶ್ಚರ್ಯಯುಕ್ತನಾಗಿ, ನಾಡಿ ಪರೀಕ್ಷಕರಾದ ವೈದ್ಯರನ್ನು ಕರೆಯಿಸಿ, ಎಲೈ ವೈದ್ಯರೇ ನೀವು ತ್ವರೆಯಾಗಿ ಹೋಗಿ, ಈಕೆಯ ಮನೆಯಲ್ಲಿ ನಿದ್ರಿಸುತ್ತಿರುವ, ಆ ಬ್ರಾಹ್ಮಣನ ನಾಡಿಯನ್ನು ಚೆನ್ನಾಗಿ ಪರೀಕ್ಷಿಸಿ, ಆತನು ಆ ರೀತಿ ನಿದ್ರಿಸುತ್ತಿರುವುದರ ಕಾರಣವನ್ನು, ಶಾಸ್ತ್ರರೀತಿಯಿಂದ ನಿರ್ಧರಿಸಿ ಬೇಗ ಬಂದು ತಿಳಿಸಬೇಕೆಂದು ಆಜ್ಞಾಪಿಸಿದನು,

ಆ ವೈದ್ಯರು ರಾಜನ ಆಜ್ಞೆಯಂತೆ ಆ ವೇಶ್ಯೆಯ ಮನೆಗೆ ಹೋಗಿ, ದೇಹದ ಪರಿವೆಯಿಲ್ಲದೆ ಮಲಗಿ ನಿದ್ರಿಸುತ್ತಿರುವ ಆ ಬ್ರಾಹ್ಮಣನನ್ನು ನೋಡಿ ಅವನ ನಾಡಿಗಳನ್ನು ಚೆನ್ನಾಗಿ ಪರೀಕ್ಷಿಸಿ, ಹಿಂದಿರುಗಿ ರಾಜನ ಬಳಿಗೆ ಬಂದು, ಆ ಬ್ರಾಹ್ಮಣನು, ನಿದ್ರಾಹಾರ ವರ್ಜಿತನಾಗಿ ಯಾವುದೋ ಕಾರಣದಿಂದ ಬಹುಕಾಲ ಕಳೆದಿರುವುದರಿಂದ ಅವನು ಈರೀತಿ ನಿದ್ರಿಸುತ್ತಿರುವನು. ಆ ಕಾರಣ ಯಾವುದೋ ನಮಗೆ ತಿಳಿಯದು. ಆದರೆ ಅದಕ್ಕೆ ತಕ್ಕ ಚಿಕಿತ್ಸೆಯನ್ನು ಹೇಳುತ್ತೇವೆ ಕೇಳು. ಎಲೈ ರಾಜನೇ, ಅವನ ದೇಹಕ್ಕೆ ವೊಸರನ್ನುವನ್ನು ಲೇಪಿಸಿನರೆ, ಅವನು ಎಚ್ಚರಗೊಳ್ಳುವನೆಂದು, ಹೇಳಿ, ರಾಜನಪ್ಪಣೆ ಪಡೆದು ಹೊರಟು ಹೋದರು.

ಆ ಮೇಲೆ ರಾಜನು ಬ್ರಾಹ್ಮಣೋತ್ತಮರಿಂದ, ವೈದ್ಯರು ಹೇಳಿದ ಚಿಕಿತ್ಸೆಯನ್ನು ನಿದ್ರಿಸುತ್ತಿದ್ದ ಆ ಬ್ರಾಹ್ಮಣ ವಟುವಿಗೆ ಮಾಡಿಸಿದನು. ಈ ರೀತಿ ಬಹುಕಾಲ ಚಿಕಿತ್ಸೆ ಮಾಡಿದ ಮೇಲೆ, ಆ ಬ್ರಾಹ್ಮಣನು ನಿದ್ರೆಯಿಂದ ಎಚ್ಚೆತ್ತು ತನ್ನೊಳಗೆ ತಾನೇ ಯೋಚಿಸುತ್ತಾ, ನಾನು ಎಲ್ಲಿ ನಿದ್ರೆಮಾಡಿದೆನು? ಇದು ಯಾರಮನೆ? ಈ ಸುಂದರಾಂಗಿಯಾದ ಕನ್ಯೆಯು ಯಾರು? ಎಂದು ತನ್ನನ್ನು ತಾನೇ ಮತ್ತೆ ಮತ್ತೆ ಪ್ರಶ್ನಿಸಿಕೊಂಡು ಬಡಬಡಿಸುತ್ತ ತಾನು ಬಂದ ದಾರಿ ಹಿಡಿಯಲು ಪ್ರಯತ್ನಿಸಿದನು. ಆಗ ಆ ವೇಶ್ಯಾ ಪುತ್ರಿಯು ತನ್ನ ಕೈಯಿಂದ ಅವನುಟ್ಟಿದ್ದ ವಸ್ತ್ರದ ಸೆರಗನ್ನು ಹಿಡಿದು ನಿಲ್ಲಿಸಿ, ಎಲೈ ಮಹಾಮತಿಯೇ, ನನ್ನನ್ನು ಬಿಟ್ಟು ನೀನೆಲ್ಲಿ ಹೋಗುವೆ? ಎಲೈ ವಿಪ್ರನೆ ನಾನು ಬಹುಕಾಲ ಪರ್ಯಂತ ನಿನ್ನ ಶುಶ್ರೂಷೆಯಲ್ಲೇ ಇದ್ದು ನೀನು ಎಚ್ಚರಗೊಳ್ಳುವುದನ್ನೇ ಕಾಯುತ್ತಾ ನಿನ್ನ ಸೇವೆಯನ್ನು ಭಕ್ತಿಯಿಂದ ಮಾಡುತ್ತಾ ನೀನೇ ನನ್ನ ಪತಿಯೆಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿರುವೆನು. ಎಲೈ ಮಹಾಭಾಗನೇ, ನೀನು ನನ್ನ ಪಾಣಿಗ್ರಹಣ ಮಾಡದಿದ್ದರೆ ನೀನು ನೋಡುತ್ತಿರುವಂತೆಯೇ, ನಾನು ಪ್ರಾಣ ಬಿಡುವೆನು ಎಂದು ದೈನ್ಯದಿಂದ ಪ್ರಾರ್ಥಿಸಿದಳು.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿ ಬ್ರಹ್ಮನಾರದ ಸಂವಾದರೂಪ ಉತ್ತರ ಖಂಡದ ದೇವಾಂಗ ಚರಿತ್ರೆಯಲ್ಲಿ ಚಂದ್ರಶರ್ಮೋಪಾಖ್ಯಾನವೆಂಬ ಇಪ್ಪತ್ತೊಂದನೆಯ ಅಧ್ಯಾಯ ಮುಗಿದುದು.

ಇಪ್ಪತ್ತೆರಡನೆಯ ಅಧ್ಯಾಯ

ವಿಕ್ರಮಾದಿತ್ಯೋಪಾಖ್ಯಾನ

ಸೂತನೆನ್ನುತ್ತಾನೆ. ಈ ರೀತಿ ಹೇಳಿದ ಆ ವೇಶ್ಯಾಕನ್ಯೆಯ ಮಾತನ್ನು ಕೇಳಿ, ಚಂದ್ರಶರ್ಮನು ಎಲೈ ವರಾನನೆ, ಬ್ರಾಹ್ಮಣ ವಂಶೋದ್ಭವನಾದ ನಾನೆಲ್ಲಿ? ಶೂದ್ರ ವಂಶೋದ್ಭವಳಾದ ನೀನೆಲ್ಲಿ? ಎಲೈ ಮನೋಹರವಾದ ಹುಬ್ಬುಳ್ಳವಳೇ, ನನಗೆ ನಿನ್ನ ಪಾಣಿಗ್ರಹಣವು ಹೇಗಾಗುವುದು ಇದು ಶಾಸ್ತ್ರವಿರುದ್ಧ ಎಂದು ಎಷ್ಟು ಸಮಾಧಾನ ಪಡಿಸಲೆತ್ನಿಸಿದರೂ, ಆ ವೇಶ್ಯಾಕನ್ಯೆಯು ಅವನನ್ನು ಬಿಡಲಿಲ್ಲ. ಇವರ ಕಾದಾಟವನ್ನು ನೋಡಿ ಅಲ್ಲಿದ್ದ ಜನರು ರಾಜನಲ್ಲಿಗೆ ಹೋಗಿ ಈ ವೃತ್ತಾಂತದನ್ನು ಹೇಳಿದರು. ರಾಜನಾದ ಧ್ವಜಕೀರ್ತಿಯು ಅದನ್ನು ಕೇಳಿ ಕನಿಕರದಿಂದ, ಇಬ್ಬರನ್ನೂ ಕರೆಯಿಸಿ, ಎಷ್ಟು ಸಮಾಧಾನಹೇಳಿದರೂ ಅವರಿಬ್ಬರೂ ಕೇಳಲಿಲ್ಲ.

ಅನಂತರ ಪಂಡಿತರಾದ ಬ್ರಾಹ್ಮಣರನ್ನು ಕರೆಯಿಸಿ ಈ ವಿಚಾರವನ್ನು ತಿಳಿಸಿ ಇದಕ್ಕೆ ಸಮಾಧಾನವೇನೆಂದು ಕೇಳಿದನು. ರಾಜನ ಈ ಮಾತನ್ನು ಕೇಳಿ, ಆ ಬ್ರಾಹ್ಮಣರು ಸಕಲ ಶಾಸ್ತ್ರಗಳನ್ನೂ ನೋಡಿ, ಪರಿಶೀಲಿಸಿ, ಸ್ಮೃತಿಗಳಲ್ಲಿ ಹೇಳಿರುವಂತೆ ರಾಜಾ, ಬ್ರಾಹ್ಮಣನಾದವನಿಗೆ ಮೊದಲು ವಿಪ್ರಕನ್ಯಾ ವಿವಾಹವು ಯೋಗ್ಯ. ಆಮೇಲೆ ಕ್ಷತ್ರಿಯ ಕನ್ಯೆಯು, ನಂತರ ವೈಶ್ಯಕನ್ಯೆಯು ಅನಂತರ ಶೂದ್ರಕನ್ಯೆಯ ವಿವಾಹವು ಶಾಸ್ತ್ರ ಸಮ್ಮತವಾಗಿದೆ ಎಂದು ಹೇಳಿ ಅವರು ತಮ್ಮ ಮನೆಗಳಿಗೆ ಹೋದರು. ಈ ಮಾತುಗಳನ್ನು ಕೇಳಿ ರಾಜನಾದ ಧ್ವಜಕೀರ್ತಿಯು ಸಂತೋಷಪಟ್ಟನು. ಚಂದ್ರಶರ್ಮನೂ ಇದಕ್ಕೊಪ್ಪಿದನು.

ಸುಪ್ರೀತನಾದ ಧ್ವಜಕೀರ್ತಿಯು ಚೆನ್ನಾಗಿ ಯೋಚಿಸಿ, ವರ್ಚಸ್ವಿಯಾದ ಚಂದ್ರಶರ್ಮನಿಗೆ, ತನ್ನ ಪುರೋಹಿತನ ಮಗಳನ್ನು ಮೊದಲು ಮದುವೆ ಮಾಡಿಸಿದನು. ಆಮೇಲೆ ಕ್ರಮವಾಗಿ ತನ್ನ ಮಗಳನ್ನೂ, ನಂತರ ವೈಶ್ಯನೋರ್ವನ ಪುತ್ರಿಯನ್ನೂ, ಕಡೆಗೆ ಶೂದ್ರ ಪುತ್ರಿಯಾದ ಆ ವೇಶ್ಯಾ ಕನ್ಯೆಯನ್ನೂ ವಿಧಿಪೂರ್ವಕವಾಗಿ ಲಗ್ನ ಮಾಡಿಸಿ ತನ್ನ ಅಳಿಯನಾದ ಚಂದ್ರಶರ್ಮನಿಗೆ ಚತುರಂಗಬಲಸಮೇತವಾದ ತನ್ನ ಅರ್ಧ ರಾಜ್ಯವನ್ನು ಕೊಟ್ಟು ಆನಂದಪಟ್ಟನು. ಚಂದ್ರಶರ್ಮನಾದರೂ, ತನ್ನ ನಾಲ್ವರು ಪತ್ನಿಯರಿಂದ ಕೂಡಿಕೊಂಡು ಸುಖವಾಗಿ ಆ ಉಜ್ಜಯಿನಿ ಪಟ್ಟಣದಲ್ಲಿ ವಾಸ ಮಾಡುತ್ತಿದ್ದನು.

ಕೆಲವು ಕಾಲ ಕಳೆಯಲು ರಾಜನಾದ ಧ್ವಜಕೀರ್ತಿಯು ಕಾಲವಶನಾಗಿ ಸ್ವರ್ಗವಾಸಿಯಾದನು. ಅನಂತರ ಮಂತ್ರಿಗಳೇ ಮೊದಲಾದವರು, ರಾಜ್ಯವು ಅರಾಜಕ

ವಾಗಬಾರದೆಂದು ಪರಸ್ಪರ ಆಲೋಚಿಸಿ, ಧ್ವಜಕೀರ್ತಿರಾಜನ ಅಳಿಯನಾದ ಚಂದ್ರಶರ್ಮನನ್ನೇ ಆ ರಾಜ್ಯಕ್ಕೆ ರಾಜನನ್ನಾಗಿ ಮಾಡಿ ಪಟ್ಟಾಭಿಷೇಕ ಮಾಡಿದರು. ಆ ಚಂದ್ರಶರ್ಮನಿಗೆ ಅವನ ನಾಲ್ಕು ಮಂದಿ ಪತ್ನಿಯರಲ್ಲೂ ಒಟ್ಟೊಟ್ಟನಂತೆ ಕ್ರಮವಾಗಿ ನಾಲ್ಕು ಮಂದಿ ಗಂಡು ಮಕ್ಕಳು ಜನಿಸಿದರು. ಚಂದ್ರಶರ್ಮನು ಬ್ರಾಹ್ಮಣ ಸ್ತ್ರೀಯಲ್ಲಿ ಹುಟ್ಟಿದ ಮಗನಿಗೆ ವರರುಚಿಯೆಂದೂ, ಕ್ಷತ್ರಿಯಸ್ತ್ರೀಯಲ್ಲಿ ಹುಟ್ಟಿದ ಪುತ್ರನಿಗೆ ವಿಕ್ರಮಾದಿತ್ಯನೆಂದೂ, ವೈಶ್ಯಸ್ತ್ರೀಯಲ್ಲಿ ಹುಟ್ಟಿದವನಿಗೆ ಭಟ್ಟಿಯೆಂದೂ, ಶೂದ್ರಳಾದ ವೇಶ್ಯಾಸ್ತ್ರೀಯಲ್ಲಿ ಹುಟ್ಟಿದವನಿಗೆ ಭರ್ತೃಹರಿಯೆಂದೂ ನಾಮಕರಣ ಮಾಡಿದನು. ಚಂದ್ರಶರ್ಮನ ಈ ನಾಲ್ವರು ಪುತ್ರರೂ ಬುದ್ಧಿವಂತರೂ, ಸರ್ವ ವಿದ್ಯಾವಿಶಾರದರೂ, ನೀತಿ ಕೋವಿದರೂ ಆಗಿ ದಿನೇ ದಿನೇ ಪ್ರವರ್ಧಮಾನರಾಗಿ ಬೆಳೆಯುತ್ತಿದ್ದರು.

ಈ ನಾಲ್ವರಲ್ಲಿ ಧ್ವಜಕೀರ್ತಿರಾಜನ ಮಗಳ ಪುತ್ರನಾದ ವಿಕ್ರಮಾದಿತ್ಯನು, ಮಹಾ ಬಲಶಾಲಿಯಾಗಿ, ಸಾಹಸಕಾರ್ಯಪ್ರವೃತ್ತನಾಗಿ ದಾನಶೌಂಡನಾಗಿ ವಿರಾಜಿಸುತ್ತಿದ್ದನು. ಬ್ರಾಹ್ಮಣಸ್ತ್ರೀಯ ಮಗನಾದ ವರರುಚಿಯು ಸಮಸ್ತ ವೇದ ವೇದಾಂಗ ಪಾರಂಗತನಾಗಿ ವಿದ್ವಾಂಸ ಶ್ರೇಷ್ಠನಾಗಿ ಶೋಭಿಸುತ್ತಿದ್ದನು. ವೈಶ್ಯಸ್ತ್ರೀಯ ಮಗನಾದ ಭಟ್ಟಿಯು ಮಂತ್ರಾಲೋಚನೆಗಳಲ್ಲಿ ಪ್ರವೀಣನಾಗಿ ಸರ್ವರ ಪ್ರೀತಿಪಾತ್ರನಾಗಿದ್ದನು. ಶೂದ್ರಸ್ತ್ರೀಯ ಮಗನಾದ ಭರ್ತೃಹರಿಯು ವಿದ್ಯಾಪಾರಂಗತನಾ। ಎಲ್ಲರಿಗೂ ಮೆಚ್ಚಾಗಿದ್ದನು. ಹೀಗಿರಲು ಚಂದ್ರಶರ್ಮನು ವಿಕ್ರಮಾದಿತ್ಯನ ವಿನಯಶೀಲತೆ ಪರಾಕ್ರಮಾದಿಗಳನ್ನು ಮೆಚ್ಚಿಕೊಂಡು, ಕ್ಷತ್ರಿಯನಾದ ಹಾಗೂ, ರಾಜನಾದ ಧ್ವಜಕೀರ್ತಿಯ ಮಗಳಮಗನೇ ಆಗಿರುವ, ಅವನಿಗೇ ರಾಜ್ಯ ಪಟ್ಟಾಭಿಷೇಕ ಮಾಡುವುದು ಉಚಿತವೆಂದು ಚೆನ್ನಾಗಿ ಆಲೋಚಿಸಿ, ಇಡೀ ದೇಶಕ್ಕೆ ಅವನನ್ನೇ ಸಮಸ್ತ ಪ್ರಜೆಗಳ ಸಮ್ಮುಖದಲ್ಲಿ, ರಾಜನನ್ನಾಗಿ ಪಟ್ಟಾಭಿಷೇಕ ಮಾಡಿ ವೈಶ್ಯಸ್ತ್ರೀಯಲ್ಲಿ ಜನಿಸಿದ ಭಟ್ಟಿಯನ್ನು ಮಂತ್ರಿಯನ್ನಾಗಿ ನೇಮಿಸಿದನು.

ವಿಕ್ರಮಾದಿತ್ಯನು, ಉಜ್ಜಯಿನೀ ಪಟ್ಟಣದ ನಗರಾಧಿದೇವತೆಯಾದ ವರಪ್ರದಳಾದ ಮಹಾಕಾಳಿಕಾದೇವಿಯನ್ನು ಕುರಿತು ಬಹುಕಾಲದವರೆಗೆ ಅತ್ಯುಗ್ರವಾದ ತಪಸ್ಸನ್ನು ಮಾಡಿದನು. ಕಾಳಿಕಾದೇವಿಯು ಅವನ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷಳಾಗಿ ಎಲೈ ಮಹೀಪಾಲ ವಿಕ್ರಮಾದಿತ್ಯನೇ, ನೀನು ಸಾವಿರ ವರ್ಷ ಆಯುಸ್ಸುಳ್ಳವನಾಗಿ ಈ ಭೂಮಿಯನ್ನು ಸಾವಿರವರ್ಷ ಪರ್ಯಂತ ನಿಷ್ಕಂಟಕವಾಗಿ ಪರಿಪಾಲಿಸು. ಈ ಪ್ರಪಂಚದಲ್ಲಿ ನಿನಗೆ ಶಾಲಿವಾಹನನೊಬ್ಬನ ಹೊರತು ಮತ್ತಾರೂ ವೈರಿಗಳಿಲ್ಲವೆಂದು, ವರಗಳನ್ನು ಕೊಟ್ಟು ಅಂತರ್ಧಾನಳಾದಳು. ವಿಕ್ರಮಾದಿತ್ಯನು ತನ್ನ ಅರಮನೆಗೆ ಹಿಂದಿರುಗಿ ಬಂದು, ಕಾಳಿಕಾದೇವಿಯು ತನ್ನ ತಪಸ್ಸಿಗೆ ಸುಪ್ರೀತಳಾಗಿ ತನಗೆ ಸಹಸ್ರವರ್ಷ ಆಯುರ್ದಾನ ಮಾಡಿರುವುದನ್ನು, ತನ್ನ ಮಂತ್ರಿಯಾದ ಭಟ್ಟಿಗೆ ಹೇಳಿದನು.

ಅದಕ್ಕೆ ಸಂತೋಷಪಟ್ಟ ಭಟ್ಟಿಯು, ರಾಜನಾದ ವಿಕ್ರಮಾದಿತ್ಯನನ್ನು ನೋಡಿ ಎಲೈ ರಾಜನೇ ನಾನಾದರೂ ನಿನಗೆ ಆ ಪ್ರಕಾರವಾಗಿಯೇ ಇನ್ನೊಂದು ಸಾವಿರ ವರ್ಷ ಆಯುಸ್ಸನ್ನು ಹೆಚ್ಚಾಗಿ ಕೊಡುತ್ತೇನೆ. ತೆಗೆದುಕೋ ಎಂದು ಹೇಳಿದನು. ಈ ರೀತಿ ಹೇಳುತ್ತಿರುವ ಮಂತ್ರಿಯಾದ ಭಟ್ಟಿಯನ್ನು ರಾಜನು ಸ್ವಲ್ಪ ಸಿಟ್ಟಿನಿಂದ ನೋಡಿ, ಎಲೈ ಮಂತ್ರಿಯೇ, ನೀನು ಹುಚ್ಚನಲ್ಲವಷ್ಟೆ! ಅಂತಹ ವಚನವನ್ನು ಯಾವರೀತಿ ಕೊಡುವೆ? ಎಂದನು. ಅದಕ್ಕೆ ಭಟ್ಟಿಯು ಸಹಸ್ರಾಯುರ್ಭವ ಎಂದು ಹೇಳಿ, ಎಲೈ ರಾಜನೇ ನೀನು ಆರು ತಿಂಗಳ ಕಾಲ ಸಿಂಹಾಸನಾರೂಢನಾಗಿ ರಾಜ್ಯವಾಳುತ್ತಾ ಪಟ್ಟಣದಲ್ಲಿಯೇ ಇರು. ಅನಂತರ ಆರು ತಿಂಗಳ ಕಾಲ ಭೂಪರ್ಯಟನ ಮಾಡು. ನೀನು ತಪ್ಪದೇ ಈ ರೀತಿ ಮಾಡಿದರೆ, ನಿನಗೆ ದೇವಿಯು ಕೊಟ್ಟ ಸಹಸ್ರಾಯುಷ್ಯವಲ್ಲದೆ ನಾನು ನಿನಗೆ ವರವಾಗಿ ಕೊಡುವ ಮತ್ತೊಂದು ಸಹಸ್ರಾಯುಷ್ಯವು ನಿಜವಾಗಿ ಪ್ರಾಪ್ತವಾಗುವುದು ಎಂದು ನುಡಿದನು.

ಆಗ ರಾಜನು ಅವನ ಬುದ್ಧಿಚಾತುರ್ಯಕ್ಕೆ ಮೆಚ್ಚಿ ತಲೆದೂಗಿ ನೀನು ಯುಕ್ತಿವಂತನೂ, ಬುದ್ಧಿವಂತನೂ ಮಂತ್ರಿವರ್ಯನೂ ಆಗಿರುವುದರಿಂದ ಯುಕ್ತಿಯುಕ್ತವಾದ ಮಾತನ್ನೇ ಆಡಿರುವೆ. ಎಲೈ ಭಟ್ಟಿಯೇ ನೀನು ಹೇಳಿದಂತೆಯೇ, ಮಾಡುವೆನೆಂದು ನುಡಿದು ಮಂತ್ರಿಯಾದ ಭಟ್ಟಿಯನ್ನು ಅನೇಕ ವಿಧವಾಗಿ ಸನ್ಮಾನಿಸಿದನು. ಬಳಿಕ ರಾಜನು ತನ್ನ ಮಂತ್ರಿಯ ಮಂತ್ರಾಲೋಚನೆಯಂತೆ ರಾಜ್ಯವನ್ನು ಆಳುತ್ತಿದ್ದನು. ಆದಿತ್ಯನಂತೆ ತೇಜಸ್ವಿಯಾದ, ಸಾಹಸಶೀಲನಾದ ಧೈರ್ಯಶಾಲಿಯಾದ, ಜಿತೇಂದ್ರಿಯನಾದ, ಸಮಸ್ತ ರಾಜರನ್ನೂ ತನ್ನ ಪದಾಕ್ರಾಂತರನ್ನಾಗಿ ಮಾಡಿಕೊಂಡ, ಅರವತ್ತು ನಾಲ್ಕುಕಲೆಗಳಲ್ಲಿಯೂ ಕುಶಲನಾದ, ಶತ್ರು ಸಮೂಹವೆಂಬ ಅರಣ್ಯಕ್ಕೆ ದಾವಾನಲ ಪ್ರಾಯನಾದ ನಿರ್ಭಯನಾದ, ಧೃತಿಮಂತನಾದ, ಶೂರನಾದ, ವೀರ ಸಮೂಹದಿಂದ ಸೇವಿತನಾದ, ಸತ್ಯಸಂಧನಾದ, ಉಜ್ಜಯಿನೀ ಪಟ್ಟಣಕ್ಕೆ ಅಲಂಕಾರಪ್ರಾಯನಾದ ರಾಜರಾಜನೂ, ಚಕ್ರವರ್ತಿಯೂ ಆದ ವಿಕ್ರಮಾದಿತ್ಯನು ಧರ್ಮದಿಂದ ರಾಜ್ಯವನ್ನು ಆಳುತ್ತಿದ್ದನು.

ರಾಜಸಮೂಹದಿಂದಲೂ ಮಂತ್ರಿಗಳಿಂದಲೂ, ಮಿತ್ರರಿಂದಲೂ, ಕವೀಶ್ವರರಿಂದಲೂ, ವಂದಿಗಳಿಂದಲೂ, ವಿದ್ವಜ್ಜನರಿಂದಲೂ, ಗಾಯಕರಿಂದಲೂ, ಇಂದುಮುಖಿಯರಿಂದಲೂ, ವೀರಭಟರಿಂದಲೂ, ವಿಬುಧಶ್ರೇಷ್ಠರಿಂದಲೂ ಕೂಡಿ ಶ್ರೇಷ್ಠವಾದ ಮುತ್ತು ರತ್ನಗಳಕಾಂತಿಯಿಂದ ಶೋಭಿಸುತ್ತ, ಅಮರಾವತಿಯ ದೇವೇಂದ್ರನ ದೇವಸಭೆಯಂತೆ ಕಂಗೊಳಿಸುವ ತನ್ನ ಆಸ್ಥಾನದ ಸಭೆಯಲ್ಲಿ ಇಂದ್ರನಿಂದ ಕೊಡಲ್ಪಟ್ಟ, ಮಹಾಕಾಂತಿಯುಕ್ತವಾದ ಇತರ ರಾಜರಿಂದ ಪಡೆಯಲಸಾಧ್ಯವಾದ, ನವರತ್ನಖಚಿತವಾದ ದಿವ್ಯಸಿಂಹಾಸನಾರೂಢನಾಗಿ, ವಂದಿಮಾಗಧರಿಂದ ಸ್ತುತಿಸಲ್ಪಡುತ್ತ, ಸಾಮಂತ

ರಿಂದ ಕೊಡಲ್ಪಟ್ಟ ಕಪ್ಪಕಾಣಿಕೆಗಳನ್ನು ಸ್ವೀಕರಿಸುತ್ತ, ಅನೇಕ ಬಿರುದಾವಳಿಗಳಿಂದ ಹೊಗಳಿಸಿಕೊಳ್ಳುತ್ತಾ, ಸಮಸ್ತ ರಾಜಕಾರ್ಯಗಳನ್ನು ಮಂತ್ರಿಯಾದ ಭಟ್ಟಿಯೊಡನೆ ಆಲೋಚಿಸುತ್ತ, ಎಲ್ಲರನ್ನೂ ವಿಚಾರಿಸುತ್ತ ಓಲೈಸಿಕೊಳ್ಳುತ್ತಿದ್ದನು.

ಆ ಸಮಯದಲ್ಲಿ ಜಟಾಧಾರಿಯಾದ, ಸರ್ವಾಂಗ ಭಸ್ಮೋದ್ಧೂಳಿತನಾದ, ಸ್ಫಟಿಕ ಜಪಮಾಲೆಯನ್ನು ಕೈಯಲ್ಲಿ ಧರಿಸಿದವನಾದ, ಘಂಟೆಯಿಂದ ಕೂಡಿದ ಮಹಾ ದಂಡವುಳ್ಳವನಾದ, ವ್ಯಾಘ್ರ ಚರ್ಮವನ್ನು ಹೊದ್ದವನಾದ, ಹಸ್ತಿದಂತಪಾದುಕಾ ಯುಕ್ತನಾದ, ಸೊಂಟದಲ್ಲಿ ಕಿರುಗಜ್ಜೆಗಳನ್ನು ಕಟ್ಟಿದವನಾದ, ರುದ್ರಾಕ್ಷಿಮಾಲಾ ಧಾರಿಯಾದ, ಯೋಗಿವರನಾದ ಕಾಲಪುರುಷಸಂಬ ಒಬ್ಬ ಸಿದ್ಧಶ್ರೇಷ್ಠನು ವಿಕ್ರಮಾದಿತ್ಯನ ಸಭಾಸ್ಥಾನವನ್ನು ಪ್ರವೇಶಿಸಿದನು. ಅವನು ರಾಜನನ್ನು ನೋಡಿ ಪ್ರಭೂ ನೀನು ಭೂಪತಿಯೂ ಜಯಶಾಲಿಯೂ, ದೀರ್ಘಾಯುಷ್ಮಂತನೂ ಆಗೆಂದು ಆಶೀರ್ವದಿಸಿ ಬಹು ಸಂತೋಷದಿಂದ ಒಂದು ದಾಳಿಂಬೆಯ ಫಲವನ್ನು ಕೊಟ್ಟು ಹೋದನು. ಈ ರೀತಿ ಆ ಸಿದ್ಧನು ಪ್ರತಿದಿನವೂ ರಾಜನ ಸಭಾಸ್ಥಾನಕ್ಕೆ ಬಂದು ಸಿಂಹಾಸನಾರೂಢನಾದ ರಾಜನಿಗೆ ಒಂದೊಂದು ದಾಳಿಂಬೆಯ ಫಲವನ್ನು ಕೊಟ್ಟು ಹೋಗುತ್ತಿದ್ದನು. ವಿಕ್ರಮಾದಿತ್ಯನು ಸಂತೋಷದಿಂದ ಪ್ರತಿದಿನವೂ ಆ ಸಿದ್ಧನಿಂದ ಸ್ವೀಕರಿಸಿದ ಫಲಗಳನ್ನು ಭದ್ರವಾಗಿ ಜೋಪಾನಮಾಡೆಂದು ಹೇಳಿ ಕೋಶಾಧ್ಯಕ್ಷನ ಕೈಗೆ ಕೊಡುತ್ತಿದ್ದನು. ಅದರಂತೆ ಕೋಶಾಧ್ಯಕ್ಷನು ಆ ಫಲಗಳನ್ನು ಬಹು ಎಚ್ಚರದಿಂದ ಕಾಪಾಡುತ್ತಿದ್ದನು.

ಹೀಗೆಯೇ ಕೆಲವು ಕಾಲ ಕಳೆಯಿತು. ಎಂದಿನಂತೆ ಆ ಸಿದ್ಧನು ರಾಜಾಸ್ಥಾನಕ್ಕೆ ಬಂದು ಸಿಂಹಾಸನಾರೂಢನಾದ ರಾಜನಿಗೆ ಫಲವನ್ನು ಕೊಟ್ಟನು. ಆ ಸಮಯದಲ್ಲಿ ದೈವವಶಾತ್ ಒಂದು ಕಪಿಯು ಅಲ್ಲಿಗೆ ಬಂದಿತು. ಆಗ ರಾಜನು ಆ ಕಪಿಯನ್ನು ನೋಡಿ ಕುತೂಹಲದಿಂದ ಆ ಸಿದ್ಧನು ಕೊಟ್ಟ ಫಲವನ್ನು ಅದಕ್ಕೆ ಕೊಟ್ಟನು. ಆ ಕಪಿಯು ಆ ಫಲದನ್ನು ತೆಗೆದುಕೊಂಡು, ಅದರ ಸಿಪ್ಪೆಯನ್ನು ತನ್ನ ಹಲ್ಲುಗಳಿಂದ ಕಿತ್ತು ಸಿಗಿಯಿತು. ಆಗ ಆ ಫಲದಿಂದ ಅಮೂಲ್ಯವಾದ ಅಪಾರ ಮುತ್ತುರತ್ನಗಳು ಕೆಳಕ್ಕೆ ಉದುರಿದುವು, ಅದನ್ನು ನೋಡಿ ವಿಕ್ರಮಾದಿತ್ಯನು ಆಶ್ಚರ್ಯಪಟ್ಟು ಕೋಶಾಧ್ಯಕ್ಷನನ್ನು ಕರೆದು, ಎಲೈ ಕೋಶಾಧ್ಯಕ್ಷನೇ ನಾನು ನಿನ್ನ ವಶಕ್ಕೆ ಕೊಟ್ಟಿರುವ ಎಲ್ಲಾ ದಾಳಿಂಬೆಯ ಫಲಗಳೂ ಮಹತ್ತರವಾಗಿರುವಂತಿವೆ. ಅವುಗಳನ್ನೆಲ್ಲಾ ಈಗಲೇ ತೆಗೆದುಕೊಂಡುಬಾ ಎಂದು ಆಜ್ಞಾಪಿಸಿದನು. ರಾಜನಿಂದ ಆಜ್ಞಪ್ತನಾದ ಕೋಶಾಧ್ಯಕ್ಷನು ಆ ಫಲಗಳನ್ನೆಲ್ಲಾ ರಾಜನಿಗೆ ತಂದುಕೊಡಲು, ರಾಜನು ಅವುಗಳೆಲ್ಲವನ್ನೂ ಸೀಳಿಸಿದನು.

ಆ ಎಲ್ಲಾ ಫಲಗಳೂ ನಾನಾ ವಿಧವಾದ ಮುತ್ತುರತ್ನಗಳಿಂದ ತುಂಬಿರುವುದನ್ನು ನೋಡಿ, ರಾಜನು ಸಂತೋಷಾಶ್ಚರ್ಯಗಳಿಂದ ಆ ಸಿದ್ಧಪುರುಷನನ್ನು ನೋಡಿ ಎಲೈ

ಸಿದ್ಧಶ್ರೇಷ್ಠನೆ, ಈ ಫಲಗಳನ್ನು, ನೀನು ಯಾವವನದಿಂದ ಸಂಪಾದಿಸಿದೆ? (ತಂದಿರುವೆ). ನಂದನವನದಿಂದ ತಂದಿರುವೆಯೋ? ಚೈತ್ರರಥವನದಿಂದ ತಂದಿರುವೆಯೋ? ಹೇಳು. ಯಾವ ಕಾರಣಕ್ಕಾಗಿ ನನಗೆ ಕೊಟ್ಟೆ? ನಿನ್ನ ನಾಮಾಂಕಿತವೇನು? ನೀನೇನು ಮಾಡುತ್ತಿರುವೆ? ಕೋಟಿ ಸೂರ್ಯರಂತೆ ಪ್ರಕಾಶಿಸುತ್ತಿರುವ ದಿವ್ಯ ತೇಜಸ್ವಿಯೇ ನೀನಿರುವುದೆಲ್ಲಿ? ನನ್ನಿಂದ ನಿನಗೇನಾಗಬೇಕು? ಹೇಳು. ಕೂಡಲೇ ಅದನ್ನು ಮಾಡುವೆನೆಂದು ಅರುಹಿದನು.

ಆಗ ಸಿದ್ಧನು, ವಿಕ್ರಮಾದಿತ್ಯನನ್ನು ಕುರಿತು ಎಲೈ ರಾಜೋತ್ತಮನೇ, ದೇವಿಯ ಪ್ರಸಾದದಿಂದ ನಾನು ಆ ಫಲಗಳನ್ನು ಪಡೆದಿರುವೆನು. ನಾನೊಂದು ಮಹತ್ತರಕಾರ್ಯವನ್ನು ಉದ್ದೇಶಿಸಿ, ನಿನಗೆ ಆ ಫಲಗಳನ್ನು ಕೊಡುತ್ತಿರುವೆನು. ಕಾಲಪುರುಷನೆಂದು ನನ್ನ ಹೆಸರು. ನಾನಿರುವುದು ಸ್ಮಶಾನದಲ್ಲಿ. ಪರ್ವತವನಗಳಲ್ಲಿರುವ ಕಂದ, ಮೂಲ, ಫಲಗಳೇ ನನ್ನ ಆಹಾರ. ಮತ್ಸ್ಯೇಂದ್ರನೆಂಬ ಸಿದ್ಧಪುರುಷನ ಶಿಷ್ಯನೇ ನಾನು. ನಾನುದ್ದೇಶಿಸಿ ಬಂದಿರುವ ಕಾರ್ಯವು ಬಹಳ ರಹಸ್ಯವು. ಅದನ್ನು ಯಾರೂ ಅರಿಯಬಾರದು. ಆ ಕೆಲಸವು ನಿನ್ನಿಂದಲೇ ಆಗಬೇಕು. ನೀನೇ ಮಾಡಬೇಕು. ಇತರರು ರಹಸ್ಯವನ್ನರಿತರೆ ಕಾರ್ಯಭಂಗವಾಗುವುದು. ನೀನು ಧ್ವಜಕೀರ್ತಿರಾಜನ ಮೊಮ್ಮಗನಾಗಿದ್ದು ಚಂದ್ರಶರ್ಮನ ಮಗನಲ್ಲವೇ? ನಿನ್ನ ಸಮಾನನಾದ ರಾಜನು, ಈ ಭೂಮಂಡಲದಲ್ಲಿಯೇ ಇಲ್ಲ. ನಾನು ಅನೇಕ ರಾಜರನ್ನು ನೋಡಿರುವೆನು. ಆದರೆ ನಿನ್ನಂತೆ ಗುಣಶಾಲಿಗಳಾರನ್ನೂ ನಾನು ಕಾಣಲಿಲ್ಲ. ಇದರಲ್ಲಿ ಸಂದೇಹವಿಲ್ಲ. ನೀನು ಇಂದ್ರದತ್ತವಾದ ಮಹತ್ಪ್ರಕಾಶವಾದ ಮಣಿಕಾಂಚನ ರಂಜಿತವಾದ, ಸಿಂಹಾಸನಾರೋಹಣ ಮಾಡಿರುವೆ. ನೀನು ಸೂರ್ಯನಿಂದ ಕೊಡಲ್ಪಟ್ಟ ನವರತ್ನ ಖಚಿತವಾದ ಕುಂಡಲಗಳನ್ನು ಧರಿಸಿರುವೆ. ರಾಜೋತ್ತಮನೇ, ಸೂರ್ಯನಿಂದ ಮರ್ಯಾದಿಸಲ್ಪಟ್ಟ ನೀನು ಈ ಭೂಮಿಯನ್ನು ಧರ್ಮದಿಂದ ಪರಿಪಾಲಿಸುತ್ತಿರುವೆ. ನೀನು ಸಾಹಸಿ, ಶೂರ, ಸರ್ವವಿದ್ಯಾವಿಶಾರದ, ಧೈರ್ಯವಂತ, ನೀತಿವಂತ, ಸರ್ವಗುಣಸಂಪನ್ನ. ನಿನಗಾರೂ ಸಮಾನರಿಲ್ಲದವನಾಗಿರುವೆ. ಎಲೈ ಮಹೀಪಾಲನೇ, ನನ್ನ ಕಾರ್ಯವನ್ನು ಅರುಹುವೆನು ಕೇಳು.

ಇಂದಿಗೆ ಹದಿನೈದನೆಯ ದಿನ ನೀನು ಏಕಾಂಗಿಯಾಗಿ ನಾನು ವಾಸಮಾಡುತ್ತಿರುವ ಸ್ಮಶಾನಕ್ಕೆ ಮಧ್ಯರಾತ್ರಿಯಲ್ಲಿ ಬರುವುದು. ಆಗ ನನ್ನ ಕಾರ್ಯವನ್ನು ಹೇಳುವೆನು. ಆ ಕಾರ್ಯವನ್ನು ನೀನು ಶೀಘ್ರವಾಗಿ ನೆರವೇರಿಸಬೇಕು, ಎಂದು ಕಾಲಪುರುಷನು ನುಡಿದನು. ವಿಕ್ರಮಾದಿತ್ಯನು ಕೃಪಾನ್ವಿತನಾಗಿ ಹಾಗೆಯೇ ಆಗಲಿ ಎಂದನು. ಇದರಿಂದ ಸಂತುಷ್ಟನಾದ ಯೋಗಿಯು, ರಾಜನಿಂದ ಸನ್ಮಾನಿತನಾಗಿ ತನ್ನ ಸ್ಥಾನಕ್ಕೆ ಹೋದನು. ರಾಜನು ತನ್ನ ರಾಜಕಾರ್ಯಗಳನ್ನು ವಿಚಾರಿಸಿ ಅರಮನೆಯನ್ನು ಹೊಕ್ಕನು.

ಹದಿನಾಲ್ಕು ದಿನಗಳು ಕಳೆದು, ಹದಿನೈದನೆಯ ದಿನದಲ್ಲಿ ರಾಜನು ಮಂತ್ರಿಯಾದ ಭಟ್ಟಿಯಿಂದಲೂ, ನೀತಿವಿಶಾರದರಾದ ಸಭ್ಯರಿಂದಲೂ ಕೂಡಿಕೊಂಡು, ತನ್ನ ಆಸ್ಥಾನವನ್ನು ಪ್ರವೇಶಿಸಿ, ಎಂದಿನಂತೆ ಸಮಸ್ತ ರಾಜಕಾರ್ಯಗಳನ್ನು ವಿಚಾರಿಸಿ, ಆ ಮಹಾಮನಸ್ಕನು, ರಮ್ಯವಾದ ತನ್ನ ಅರಮನೆಗೆ ಹಿಂದಿರುಗಿದನು. ಸಂಜೆಯಾಗಲು ಸಂಜ್ಞಾ, ಛಾಯಾಪತಿಯಾದ, ಸರ್ವಜನ ನಮಸ್ಕೃತನಾದ, ಭಗವಾನ್ ಸೂರ್ಯದೇವನು ವರುಣನನ್ನು ಸೇವಿಸಲು ಅಸ್ತಾದ್ರಿಯನ್ನು ಹೊಂದಿದನೋ ಎಂಬಂತೆ ಅಸ್ತನಾದನು.

ಕಾಲವು ಯಾರನ್ನೂ ಬಿಟ್ಟಿದ್ದಲ್ಲವು. ಕಮಲಗಳೇ ನೇತ್ರವಾಗುಳ್ಳ ಪದ್ಮಲತೆಯು ತನ್ನ ಪತಿಯನ್ನು ಕಾಣದೆ ಮೋಹಯುಕ್ತಳಾಗಿ ವಿರಹತಾಪದಿಂದ ಮುಕುಳಿತ ಮುಖಿಯಾದಳು. ಸಮಸ್ತರ ನೇತ್ರಗಳಿಗೆ ಅಂಧಕಾರವನ್ನುಂಟುಮಾಡುವ ಕತ್ತಲೆಯು ಬೃಹದಾಕಾರವಾಗಿ ವ್ಯಾಪಿಸಿ ಜಾರರಿಗೆ, ಚೋರರಿಗೆ ಮಹದಾನಂದವನ್ನುಂಟುಮಾಡಿತು. ಕತ್ತಲೆಯು ಹೆಣ್ಣು ಚಕ್ರವಾಕ ಪಕ್ಷಿಗಳಿಗೆ ವಿರಹಾಗ್ನಿಯ ಧೂಮಸಮೂಹವೆಂಬಂತೆ, ಸಮಸ್ತ ಪ್ರಾಣಿಗಳ ಕಣ್ಣುಗಳಿಗೂ ಅವುಗಳ ನಿಷ್ಫಲತೆಯನ್ನುಂಟುಮಾಡುತ್ತಿತ್ತು ರಜನಿಯೆಂಬ ತರುಣಿಯು ನಕ್ಷತ್ರಗಳೆಂಬ ಮುಕ್ತಾಹಾರವುಳ್ಳವಳಾಗಿ ಕುಮುದವೆಂಬ ನೇತ್ರಗಳಿಂದ, ತನ್ನ ಪತಿಯನ್ನು ಕಾಣದ ಅತ್ತಿತ್ತ ಹುಡುಕುವಂತೆ ತೋರುತ್ತಿತ್ತು.

ಇಕ್ಷುಚಾಪನಾದ ಮನ್ಮಥನು ಪುಷ್ಪಬಾಣಗಳನ್ನು ಯುವಜನಸಮೂಹದ ಮೇಲೆ ಪ್ರಯೋಗಿಸುತ್ತ, ಮಂದಮಾರುತವೆಂಬ ರಥಾರೋಹಣಮಾಡಿ ಕಾಮುಕರೆಂಬ ಜಿಗರೆಗಳನ್ನು ತನ್ನ ಪಂಚಪುಷ್ಪಬಾಣಗಳಿಂದ ಪ್ರಹರಿಸುವುದಕ್ಕೆ ಆರಂಭಿಸಿದನು. ಈರೀತಿ ಕೂಡಿದ ಮಧ್ಯರಾತ್ರಿಯ ಕತ್ತಲೆಯಲ್ಲಿ ರಾಜೋತ್ತಮನಾದ ವಿಕ್ರಮಾದಿತ್ಯನು ಸಮಸ್ತರೂ ನಿದ್ರಿಸುತ್ತಿರಲು ತಾನೊಬ್ಬನು ಮಾತ್ರ ಎಚ್ಚರವಾಗಿದ್ದು ಸಿದ್ಧನಾಡಿದ ಮಾತನ್ನು ಜ್ಞಾಪಿಸಿಕೊಳ್ಳುತ್ತ ಸ್ಮಶಾನಕ್ಕೆ ಹೋಗಲುದ್ಯುಕ್ತನಾಗಿ ದಿವ್ಯಾಂಬರಧಾರಿಯಾಗಿ, ದಿವ್ಯಾಭರಣಭೂಷಿತನಾಗಿ ಕವಚಕುಂಡಲ, ಪುಷ್ಪಮಾಲಾಯುಕ್ತನಾಗಿ, ವೀರಗಚ್ಚೆಯುಟ್ಟವನಾಗಿ, ಧೈರ್ಯ, ಸಾಹಸಸಂಪನ್ನನಾಗಿ, ಪಾದುಕಾದ್ವಯ ವಿರಾಜಿತನಾಗಿ, ರಿಪುವೃಂದವನ್ನು ಸಂಹರಿಸುವ ಭಯಂಕರವಾದ ತನ್ನ ಖಡ್ಗವನ್ನು ತೆಗೆದುಕೊಂಡು, ತನ್ನ ತೇಜಸ್ಸಿನಿಂದ ಸಕಲ ದಿಕ್ಕುಗಳನ್ನು ಬೆಳಗುತ್ತಿರುವ ಆ ಖಡ್ಗವನ್ನು ಧರಿಸಿದವನಾಗಿ, ಯಾರಿಗೂ ತಿಳಿಯದಂತೆ ಭಯಂಕರವಾದ ಆ ಸ್ಮಶಾನವನ್ನು ಹೊಕ್ಕನು.

ರಾಜನು ಸ್ಮಶಾನವನ್ನು ಪ್ರವೇಶಿಸಲು ಅಲ್ಲಿದ್ದ ಭೂತ, ಪ್ರೇತ, ಪಿಶಾಚ, ಶಾಕಿನಿ, ಡಾಕಿನಿ ಮೊದಲಾದ ದುಷ್ಟಭೂತ ಸಮೂಹಗಳು ಹಿಂಡುಗಟ್ಟಿಕೊಂಡು ಒಟ್ಟಾಗಿ ಆ

ರಾಜನನ್ನು ಕೊಲ್ಲಬೇಕೆಂದು ಅವನ ಮೇಲೆ ಎರಗಿದುವು. ಪರಾಕ್ರಮಿಯಾದ ವಿಕ್ರಮಾದಿತ್ಯನು ಆ ಭೂತ, ಪ್ರೇತ, ಪಿಶಾಚಾದಿಗಳ ಮೇಲೆ ಆಕ್ರಮಣ ಮಾಡಿ ಕೆಲವುಗಳ ನಾಸಿಕಗಳನ್ನೂ, ಕೆಲವುಗಳ ಕತ್ತುಗಳನ್ನೂ, ಕೆಲವುಗಳ ಕಿವಿಗಳನ್ನೂ, ಕೆಲವುಗಳ ಹಸ್ತಗಳನ್ನೂ, ಕೆಲವುಗಳ ಪಾದಗಳನ್ನೂ, ಶತ್ರು ಸೈನ್ಯ ನಾಶಕವಾದ ತನ್ನ ತೀಕ್ಷ್ಣವಾದ ಅಲಗುಳ್ಳ ಖಡ್ಗದಿಂದ ಕತ್ತರಿಸಿ ತುಂಡರಿಸಿದನು. ಆ ಖಡ್ಗದ ಪ್ರಹಾರ ದಿಂದ, ಛಿನ್ನ ಭಿನ್ನಾಂಗಗಳಾದ ಭೂತ, ಪ್ರೇತ ಪಿಶಾಚಾದಿಗಳು ಆರ್ತನಾದ ಮಾಡುತ್ತಾ, ರಕ್ಷಿಸು ರಕ್ಷಿಸು ಎಂದು ಮೊರೆಯಿಡುತ್ತ ಗರ್ವಾಹಂಕಾರಗಳನ್ನು ಬಿಟ್ಟು ತಾವು ಬಂದ ದಾರಿಹಿಡಿದುವು.

ಆ ಭೂತ ಪ್ರೇತ ಪಿಶಾಚಾದಿಗಳನ್ನು ಭಿನ್ನ ಭಿನ್ನ ಅವಯವಗಳುಳ್ಳವನ್ನಾಗಿ ಮಾಡಿ ಅವುಗಳನ್ನೆಲ್ಲಾ ಹಿಮ್ಮೆಟ್ಟಿಸಿ, ಆ ಸಿದ್ಧಯೋಗಿಯನ್ನು ಅಲ್ಲಿ ಕಾಣದೆ, ಅವನನ್ನು ಗಟ್ಟಿಯಾಗಿ ಕರೆಯುತ್ತಾ ಕಾಲಪುರುಷನೇ, ಸಿದ್ಧಯೋಗಿಯೇ ಎಲ್ಲಿರುವೆ. ನಾನು ವಿಕ್ರಮಾದಿತ್ಯನು ಬಂದಿದ್ದೇನೆ ಎಂದು ಹೇಳುತ್ತಾ ಆ ಸ್ಮಶಾನದಲ್ಲಿ ಹುಡುಕುತ್ತಿದ್ದನು. ಆ ಸ್ಮಶಾನದಲ್ಲಿ ಅವನನ್ನು ಹುಡುಕುತ್ತಾ, ಕಾಣದಿರಲು ತಾನು ಮನಸ್ಸಿನಲ್ಲಿ, ನಾನು ಬೇರೆ ಇನ್ನೆಲ್ಲಿಗಾದರೂ ಬಂದಿರಬಹುದೇ ? ಅಥವಾ ದಾರಿತಪ್ಪಿರಬಹುದೇ ? ಆ ಸಿದ್ಧನು ಕಿವುಡ ನಿರಬಹುದೇ ? ಎಲ್ಲಾದರೂ ಹೋಗಿರಬಹುದೇ ? ಎಲ್ಲಾದರೂ ಮಲಗಿರಬಹುದೆ ? ಎಂದು ಯೋಚಿಸುತ್ತಾ ಮತ್ತೂ ಗಟ್ಟಿಯಾಗಿ ಕೂಗುತ್ತಾ ಎಲೈ ಸಿದ್ಧವರ್ಯನೇ ನೀನು ಹೇಳಿದ ಮಾತಿನ ಪ್ರಕಾರ ವಿಕ್ರಮಾದಿತ್ಯನಾದ ನಾನು ನಿನ್ನನ್ನು ಕಾಣಲು ನಿನಗೆ ನಾನು ಮಾತುಕೊಟ್ಟಿರುವ ಪ್ರಕಾರ ಬಂದಿರುವೆನು. ನಾನು ಆಡಿದ ಮಾತಿಗೆ ತಪ್ಪುವವನಲ್ಲ. ಈ ವಿಷಯದಲ್ಲಿ ಸಂದೇಹವೇ ಇಲ್ಲ. ನೀನೇಕೆ ಮಾತನಾಡದಿರುವೆ. ನೀನೆಲ್ಲಿಯಾದರೂ ಹೋಗಿರುವೆಯಾ ? ನೀನು ಮಾಯಾವಿ ಇರಬಹುದು. ಈಗ ನೀನು ನನಗೆ ಕಾಣಿಸದಿದ್ದರೆ ನೀನು ಸುಳ್ಳನೆಂದು ತಿಳಿದು ನಾನು ನನ್ನ ಅರಮನೆಗೆ ಹಿಂದಿರುಗು ವೆನು ಎಂದು ನುಡಿಯಲು ಆಗ ಆ ಯೋಗಿಯು ವಿಕ್ರಮಾದಿತ್ಯನಿಗೆ ಕಾಣಿಸಿಕೊಂಡನು.

ಇಲ್ಲಿಗೆ -ಬ್ರಹ್ಮಾಂಡ ಪುರಾಣದಲ್ಲಿ ಬ್ರಹ್ಮ ನಾರದ ಸಂವಾದ ರೂಪ ಉತ್ತರ ಖಂಡದ ದೇವಾಂಗ ಚರಿತ್ರೆಯಲ್ಲಿ ವಿಕ್ರಮಾದಿತ್ಯೋಪಾಖ್ಯಾನವೆಂಬ ಇಪ್ಪತ್ತೆರಡನೆಯ ಅಧ್ಯಾಯ ಮುಗಿದುದು.

ಇಪ್ಪತ್ತಮೂರನೆಯ ಅಧ್ಯಾಯ

ಬೇತಾಳ ಗ್ರಹಣ

ಸೂತನೆನ್ನುತ್ತಾನೆ. ಎಲೈ ತಾಪಸೋತ್ತಮರ ರಾಜನಾದ ವಿಕ್ರಮಾದಿತ್ಯನು ಈ ರೀತಿ ಆ ಸಿದ್ಧಪುರುಷನನ್ನು ಸಂಬೋಧಿಸಿ, ಕರೆದು ತಾನು ಹಿಂದಿರುಗುತ್ತೇನೆಂದು ಹೇಳಲು. ಆಗ ಸಿದ್ಧನು ಕೈಯಲ್ಲಿ ಬೆತ್ತವನ್ನು ಹಿಡಿದು ರಾಜನ ಹತ್ತಿರಕ್ಕೆ ಬಂದು ಅವನ ಬೆನ್ನನ್ನು ತನ್ನ ಕೈಯಿಂದ ಸೇವರಿಸಿ ಎಲೈ ರಾಜನೇ, ನಿನ್ನನ್ನು ಪರೀಕ್ಷೆ ಮಾಡಲು ನಾನು ಈವರಿವಿಗೂ ಮೌನವಾಗಿದ್ದೆನು. ನನ್ನ ಮೇಲೆ ಕೋಪಿಸಬೇಡ. ನೀನೇ ರಾಜರಾಜನು. ಸತ್ಯಸಂಧನು, ಅತಿಸಾಹಸಿ ಮಹಾಪರಾಕ್ರಮಿ, ನನ್ನ ಕಾರ್ಯವನ್ನು ನೆರವೇರಿಸಿಕೊಡುವುದರಲ್ಲಿ ನಿಶ್ಚಯವಾಗಿಯೂ ಸಮರ್ಥನಾಗಿರುವೆ. ರಾಜಾ ಈಗ ನನ್ನ ಕಾರ್ಯವನ್ನು ಹೇಳುತ್ತೇನೆ ಕೇಳು.

ಇಲ್ಲಿಗೆ ಒಂದು ಗಾವುದ ದೂರದಲ್ಲಿ, ಒಂದು ಮಹತ್ತರವಾದ ವಟವೃಕ್ಷವಿರುವುದು, ಅದು ತನ್ನ ವಿಸ್ತಾರವಾದ ಶಾಖೆಗಳಿಂದ ಆಕಾಶವನ್ನು ಮುದ್ದಿಡುತ್ತದೋ ಎಂಬಂತೆ ಇದ್ದು, ಆ ಮಹಾವೃಕ್ಷದಲ್ಲಿ ದೊಡ್ಡಶರೀರವುಳ್ಳವನೂ, ಮಹಾ ಪರಾಕ್ರಮಿಯೂ, ಭೂತ, ಪ್ರೇತ, ಪಿಶಾಚ, ಶಾಕಿನೀ, ಡಾಕಿನೀ, ಮೊದಲಾದವುಗಳಿಂದ ಕೋಟಿ ಕೋಟಿ ಸಂಖ್ಯೆಗಳಲ್ಲಿ ಕೂಡಿದವನಾಗಿ ನನ್ನ ತಪಸ್ಸಿಗೆ ವಿಘ್ನವನ್ನುಂಟುಮಾಡುತ್ತಿರುವ ಒಬ್ಬ ಭೇತಾಳ ರಾಜನಿರುವನು. ಅವನು ಮಹಾ ಮಾಯಾವಿಯಾಗಿ ಪರ್ವತಗಳನ್ನು ಭೇದಿಸುವ ಶಕ್ತಿಯುಳ್ಳವನಾಗಿ, ತೇಜಸ್ಸಿನಲ್ಲಿ ಶಂಕರನಿಗೆ ಸಮಾನನಾಗಿ ಜಟಾಧಾರಿಯಾಗಿ, ನಿರ್ಭಯನಾಗಿ ಶತ್ರು ಸಮೂಹಗಳನ್ನು ನಿರ್ನಾಮ ಮಾಡುವವನಾಗಿ ಇರುವ ಮಹಾಕಾಯನಾದ ಆ ಭೇತಾಳನು ನನ್ನ ಅನುಷ್ಠಾನಕ್ಕೆ ವಿಘ್ನವನ್ನುಂಟು ಮಾಡುತ್ತಿರುವನು. ಆದುದರಿಂದ ಮಹಾಪರಾಕ್ರಮಿಯಾದ ನೀನು ಅವನನ್ನು ಜಯಿಸಿ ನನ್ನ ಬಳಿಗೆ ಕರೆತರಬೇಕು. ಎಲೈ ವಿಕ್ರಮಾದಿತ್ಯನೇ ನಾನು ಆವರಿವಿಗೂ ಈ ಕಾಳಿಕಾಲಯದಲ್ಲಿರುವೆನು. ಎಲೈ ಅರಿಂದಮನೇ, ಆ ದುಷ್ಟ ಬೇತಾಳನನ್ನು ಕರೆತರಲು ಶೀಘ್ರವಾಗಿ ಹೋಗು ಎಂದನು.

ರಾಜನು ಆ ಸಿದ್ಧನ ಮಾತನ್ನು ಕೇಳಿ ಹಾಗೆಯೇ ಆಗಲಿ, ಎಂದು ಹೇಳಿ ಸಂತೋಷದಿಂದ ಖಡ್ಗಪಾಣಿಯಾಗಿ ಆ ವಟವೃಕ್ಷವಿರುವ ಸ್ಥಳಕ್ಕೆ ಬಂದನು, ವಿಂಧ್ಯಾದ್ರಿಗೆ ಸಮಾನವಾದ, ಆ ವಟವೃಕ್ಷವು ಭೂಮ್ಯಾಕಾಶಗಳಿಗೆ ವ್ಯಾಪಿಸಿದ್ದು, ಅತಿ ಭಯಂಕರವಾಗಿ ಭೂತ ಪ್ರೇತ ಪಿಶಾಚಾದಿಗಳಿಗೆ ವಾಸಸ್ಥಾನವಾಗಿ, ಪ್ರತಿದಿನವೂ ಬೆಳೆಯುವುದರಿಂದಾಗಿ, ಸಮಸ್ತ ದಿಕ್ಕುಗಳನ್ನೂ ಆವರಿಸಿರುವುದನ್ನು ಅವನು ಕಂಡು ಆಶ್ಚರ್ಯಭರಿತನಾದನು.

ಇಂತಹ ವೃಕ್ಷದಲ್ಲಿ, ಕೆಳಮುಖನಾಗಿ ಜೋತಾಡುವವನಾಗಿ, ನರಮಾಂಸ ಭಕ್ಷಕಗಳಾದ, ಭೂತ, ಪ್ರೇತ, ಪಿಶಾಚ, ಶಾಕಿನೀ, ಡಾಕಿನೀ ಸಮೂಹಗಳಿಗೆ ಆಶ್ರಯ ನಾಗಿ, ಅವುಗಳಿಂದ ಪರಿವೃತನಾಗಿ, ಕ್ರೂರವಾದ ಕೋರೆಹಲ್ಲುಗಳುಳ್ಳವನಾಗಿ, ಘೋರ ವಾದ ರೂಪವುಳ್ಳವನಾಗಿ, ಜಟಾಧಾರಿಯಾಗಿ ಇರುವ ಬೇತಾಳನನ್ನು ರಾಜನು ನೋಡಿ ಆಶ್ಚರ್ಯಚಕಿತನಾದನು. ಅಲ್ಲಿದ್ದ ಭೂತ ಪ್ರೇತ, ಪಿಶಾಚ, ಶಾಕಿನೀ, ಡಾಕಿನೀ ಗಳನ್ನು ನೋಡಿ ಧೈರ್ಯದಿಂದ ಎಲೈ ಭೂತ ಪ್ರೇತ ಪಿಶಾಚಾದಿಗಳಿರಾ ನಾನು ಲೋಕ ದಲ್ಲಿ ಶತ್ರುಭಯಂಕರನಾದ ವಿಕ್ರಮಾದಿತ್ಯನು. ಕಾಲಪುರುಷ ಸಿದ್ಧನ ಅಪ್ಪಣೆಯಂತೆ ನಿಮ್ಮ ಪ್ರಭುವಾದ ಬೇತಾಳನನ್ನು ಕರೆದುಕೊಂಡು ಹೋಗಲು ಬಂದಿರುವೆನು. ಎಲೈ ಪಿಶಾಚಾದಿಗಳೇ, ನೀವುಗಳೆಲ್ಲಾ ಈ ಕೂಡಲೇ ಈ ಸ್ಥಳಬಿಟ್ಟು ಹೊರಟುಹೋಗಿ ನಿಮ್ಮ ಪ್ರಾಣಗಳನ್ನು ಉಳಿಸಿಕೊಳ್ಳಿ. ನಾನು ಎಷ್ಟೋ ಸ್ಮಶಾನಗಳಲ್ಲಿ ನಿಮ್ಮಂತಹ ಮತ್ತು ನಿಮಗೂ ಹೆಚ್ಚಿನವರಾಗಿದ್ದ ಕ್ರೂರರಾದ ಭೂತ, ಪ್ರೇತ, ಪಿಶಾಚ, ಡಾಕಿನಿಗಳನ್ನು ತುಂಡರಿಸಿ ಚೆಲ್ಲಿದ್ದೇನೆ. ಈಗ ನಿಮ್ಮ ಸರದಿ ಬಂದಂತಿದೆ. ನೀವು ಪ್ರಾಣದಿಂದಿರ ಬೇಕಾಗಿದ್ದರೆ, ಈಗಿಂದೀಗಲೇ ಇಲ್ಲಿಂದ ದೂರ ತೊಲಗಿ ಎಂದು ನುಡಿದನು.

ಈ ರೀತಿ ನುಡಿದ ರಾಜನನ್ನು ನೋಡಿ ಆ ಪಿಶಾಚಾದಿಗಳು, ಎಲೈ ರಾಜನೇ ನೀನೆಷ್ಟು ಗರ್ವದಿಂದ ಮಾತನಾಡುತ್ತಿರುವೆ. ನೀನೋ ಹುಲು ಮನುಜ. ಅಲ್ಪ ಪರಾಕ್ರಮಿ. ನೀನು ಪ್ರಾಣದಿಂದ ಉಳಿಯಲಿಚ್ಛಿಸಿದರೆ ಇಲ್ಲಿಂದ ಶೀಘ್ರವಾಗಿ ತೊಲಗು. ಇಲ್ಲ ದಿದ್ದರೆ ನಿನ್ನನ್ನು ಕೊಂದು ಔತಣಮಾಡುವೆವು. ಎಲೈ ನೃಪಾಧಮಾ, ನೀನೇನು ರುದ್ರನೇ, ವಿಷ್ಣುವೇ, ಅಥವಾ ಬ್ರಹ್ಮನೇ? ಎಲೈ ದುರ್ಬುದ್ಧಿಯೇ ನಿನಗೆಷ್ಟು ದುರಹಂಕಾರ? ನಮ್ಮೆಲ್ಲರನ್ನೂ ಬೆದರಿಸುವೆಯಾ? ನೀನೆತ್ತ ಈ ಬೇತಾಳನೆತ್ತ! ಸಿಂಹವೆತ್ತ ನರಿಯೆತ್ತ? ಮಾರ್ಜಾಲವೆತ್ತ ವ್ಯಾಘ್ರವೆತ್ತ? ತಡಮಾಡದೆ ಇಲ್ಲಿಂದ ಪಲಾಯನಮಾಡು. ಇಲ್ಲದಿದ್ದರೆ ಈಗಲೇ ನಿನ್ನನ್ನು ಕೊಂದು ನಿನ್ನ ನೊರೆ ರಕ್ತದಿಂದ ದಾಹವಡಗಿಸಿಕೊಂಡು ಕುಣಿದಾಡುವೆವು. ನಿನ್ನ ಕೈಕಾಲುಗಳನ್ನೂ, ಎದೆ, ತೊಡೆಗಳನ್ನೂ ತುಂಡು ತುಂಡು ಮಾಡಿ ನಮ್ಮ ಹಸಿವನ್ನು ಇಂಗಿಸಿಕೊಳ್ಳುವೆವು. ಎನ್ನುತ್ತಾ ಆ ಭೂತಸಮೂಹಗಳೆಲ್ಲ ಆ ರಾಜನನ್ನು ಒಟ್ಟಾಗಿ ಮುತ್ತಿ ಘಾತಿಸಿ ರಕ್ತ ಸಿಕ್ತನನ್ನಾಗಿ ಮಾಡಿದವು. ಅವನ ಮೇಲೆ ಮಲಮೂತ್ರವನ್ನೂ, ಗಿಡ, ಮರಗಳನ್ನೂ, ಪರ್ವತ ಶಿಖರಗಳನ್ನೂ, ಕಲ್ಲು ಬಂಡೆಗಳನ್ನೂ ಎಸೆದುವು.

ಇದರಿಂದ ಕುಪಿತನಾದ ವಿಕ್ರಮಾದಿತ್ಯನು ಮೈಕೊಡವಿ ತನ್ನ ಭುಜಗಳನ್ನು ತಟ್ಟುತ್ತಾ ಕ್ಷುದ್ರ ಮೃಗಗಳ ಮೇಲೆ ಸಿಂಹವು ಹಾರಿ ಬೀಳುವಂತೆ, ಆ ಪಿಶಾಚಾದಿಗಳ ಮೇಲೆ ಧಾವಿಸಿ ಸಿಂಹನಾದ ಮಾಡುತ್ತಾ ಮತ್ತೆ ಮತ್ತೆ ಗರ್ಜಿಸುತ್ತಾ ತನ್ನ ಕರಕೌಶಲ ದಿಂದ ಪರಿಪರಿಯಾಗಿ ತಿರುಗಿಸುತ್ತಿದ್ದ ಖಡ್ಗದಿಂದ ಆ ಭೂತ ಪ್ರೇತ, ಪಿಶಾಚ,

ಶಾಕಿನೀ, ಡಾಕಿನೀಗಳನ್ನು ಮನಬಂದಂತೆ ಘಾತಿಸುತ್ತಿದ್ದನು. ಇದರಿಂದ ಆ ಭೂತಾದಿಗಳಲ್ಲಿ ಕೆಲವು ಕತ್ತರಿಸಲ್ಪಟ್ಟ ಮೂಗುಗಳುಳ್ಳವು, ಕೆಲವು ಕತ್ತರಿಸಲ್ಪಟ್ಟ ತೋಳುಗಳುಳ್ಳವು. ಕೆಲವು ಕತ್ತುಗಳಿಲ್ಲದವು, ಕೆಲವು ಕಣ್ಣುಗಳಿಲ್ಲದವು, ಕೆಲವು ಪಾದಗಳಿಲ್ಲದವು, ಕೆಲವು ಕೂದಲುಗಳಿಲ್ಲದವು, ಕೆಲವು ಕಿವಿಗಳಿಲ್ಲದವುಗಳಾಗಿಯೂ, ಆ ಸಮಸ್ತ ಭೂತ ಪ್ರೇತ ಪಿಶಾಚ, ಶಾಕಿನೀ, ಡಾಕಿನೀ ಸಮೂಹಗಳೆಲ್ಲಾ ವಿಕ್ರಮಾದಿತ್ಯನಿಂದ ಘಾತಿಸಲ್ಪಟ್ಟು ತಮ್ಮ ತಮ್ಮ ಸರ್ವಾವಯವಗಳೆಲ್ಲಾ ಪೀಡಿಸಲ್ಪಟ್ಟು ರಕ್ತಸಿಕ್ತವಾಗಿ ಆರ್ತರಾಗಿ ಕೆಲವು ಮೂರ್ಛೆಗೊಂಡವು. ಕೆಲವು ಭೂಮಿಯ ಮೇಲೆ ನಿಶ್ಚೇಷ್ಟಿತವಾಗಿ ಬಿದ್ದವು, ಇನ್ನು ಕೆಲವು ಗತಪ್ರಾಣಗಳಾದವು.

ಹೀಗೆ ವಿಕ್ರಮಾದಿತ್ಯನು ಸಿಂಹವು ಮೃಗ ಸಮೂಹವನ್ನು ಹೊಕ್ಕು ಅವುಗಳನ್ನು ನಾಶಗೊಳಿಸುವಂತೆ, ಆ ಭೂತಸಮೂಹಗಳನ್ನೆಲ್ಲಾ ನಾಶಗೊಳಿಸಿದನು. ಭಯಗೊಂಡ ಆಡಿನ ಹಿಂಡನ್ನು ಆನೆಯು ನಾಶಗೊಳಿಸುವಂತೆ ಪುರುಷ ಶ್ರೇಷ್ಠನಾದ, ವಿಕ್ರಮಾದಿತ್ಯ ರಾಜನು ಆ ಭೂತಸಮೂಹಗಳನ್ನೆಲ್ಲಾ ಮತ್ತೆಮತ್ತೆ ಕೊಂದು ನಾಶಮಾಡುತ್ತಾ, ಸಿಂಹನಾದಮಾಡುತ್ತಾ ಗರ್ಜಿಸುತ್ತಾ ರಾವಣನನ್ನು ಕೊಂದ ರಾಮನಂತೆ ಒಪ್ಪುತ್ತ ಆ ಭೂತಾದಿಗಳನ್ನು ಜಯಿಸಿ ಬೇತಾಳನಿದ್ದಲ್ಲಿಗೆ ಬಂದನು.

ರಾಜನು ಆ ಭೇತಾಳನನ್ನು ನೋಡಿ ಎಲೈ ಬೇತಾಳನೆ ನಿನ್ನ ಸಮಸ್ತ ಸೇನೆಗಳನ್ನು ನಾನು ಈ ನನ್ನ ಖಡ್ಗದಿಂದ ಸಿಂಹವು ಗಜಗಳನ್ನು ಕೊಲ್ಲುವಂತೆ ಕೊಂದು ನಾಶ ಮಾಡಿರುವೆನು. ಈಗ ನಿನ್ನನ್ನು ಕೊಂದು ಹೋಗುವುದಕ್ಕೋಸ್ಕರ ನಿನ್ನ ಬಳಿ ಬಂದಿರುವೆನು ನಿನ್ನನ್ನು ಹೆಡಮುರಿಗೆ ಕಟ್ಟಿ ತೆಗೆದುಕೊಂಡು ಹೋಗಿ, ಕಾಲಪುರುಷ ನೆಂಬ ಸಿದ್ಧನಿಗೆ ಒಪ್ಪಿಸುವೆನು. ಬೇಗ ಬಾ ತಡಮಾಡಬೇಡ ಎಂದು ಗರ್ವದಿಂದ ನುಡಿದನು.

ವಿಕ್ರಮಾದಿತ್ಯನ ಈ ಮಾತುಗಳನ್ನು ಕೇಳಿ ಭೂತಗಳೊಡೆಯನಾದ ಭೇತಾಳನು ತನ್ನ ಏಳುಮಂದಿ ಮಂತ್ರಿಗಳನ್ನೂ ಕರೆದು ಅವರೊಡನೆ ಸಮಾಲೋಚಿಸಿ, ಭೀತಿ ಯಿಂದ ಎಲೈ ಮಂತ್ರಿಗಳೇ ವಿಕ್ರಮಾದಿತ್ಯನೊಬ್ಬನೇ ತನ್ನ ಖಡ್ಗದಿಂದ ನನ್ನ ಸಮಸ್ತ ಸೈನ್ಯಗಳನ್ನೂ ಪರಿವಾರವನ್ನೂ ನಿರ್ನಾಮ ಮಾಡಿರುವನು. ಈಗ ನನ್ನನ್ನು ಬಂಧಿಸಿ ತಗೆದುಕೊಂಡು ಹೋಗಲು ಬಂದಿರುವನು. ನನ್ನ ಗತಿಯೇನು ? ಇವನೇನು ಕುಬೇರನೋ ? ಇಂದ್ರನೋ ? ಚತುರ್ಮುಖ ಬ್ರಹ್ಮನೋ ? ವಿಷ್ಣುವೋ ? ಕಾಲರುದ್ರನೊ ? ಯಾರಿವನು ? ನಾನರಿಯೆ ! ಏನು ಮಾಡಲಿ ? ಎಲ್ಲಿ ಹೋಗಲಿ ? ನನ್ನನ್ನು ರಕ್ಷಿಸುವವರಾರು ? ಎಂದು ದೈನ್ಯದಿಂದ ನುಡಿದನು. ಬೇತಾಳನ ಏಳುಮಂದಿ ಮಂತ್ರಿಗಳೂ ತಮ್ಮ ಪ್ರಭುವನ್ನು ನೋಡಿ ಹಲ್ಲುಗಳನ್ನು ಕಟಕಟನೆ ಕಡಿಯುತ್ತಾ, ಒಡೆಯಾ, ಈ ನರಾಧಮನಿಗೆ ನೀನೇಕೆ ಅಂಜುವೆ ? ಸ್ವಾಮಿ ನಾವಿಲ್ಲವೇ ! ನಾವೆಲ್ಲ,

ನಿನ್ನ ಆಜ್ಞಾಪಾಲಕರು ನೀನೇನು ಕಡಿಮೆಯೋ! ನೀನು ಸಾಮರ್ಥ್ಯದಲ್ಲಿ ವಿಷ್ಣುವಿಗೆ ಸಮನು, ಧೈರ್ಯದಲ್ಲಿ ಪರ್ವತಸಮಾನ. ಕೋಪದಲ್ಲಿ ರುದ್ರನಿಗೆ ಸಮ. ಕೊಲ್ಲು ವುದರಲ್ಲಿ ಯಮನನ್ನೂ ಮೀರಿಸುವೆ. ನಿನ್ನ ನಾಮೋಚ್ಚಾರಣಾ ಮಾತ್ರದಿಂದಲೇ ಈ ಮೂರು ಲೋಕಗಳೂ, ಗಡಗಡನೆ ನಡುಗುವುವು. ಎಲೈ ಭೂತಸಾರ್ವಭೌಮನೇ ಈ ಅಲ್ಪನರನನ್ನು ಕೊಲ್ಲಲು ನೀನೇಕೆ ಇಷ್ಟು ಯೋಚಿಸುವೆ? ಭೇತಾಳ ರಾಜನಾದ ನೀನೆತ್ತ! ಈ ನರಾಧಮನಾದ ರಾಜನೆತ್ತ! ಎಂದು ಸಮಸ್ತ ಭೇತಾಳಗಳೂ ಭೇತಾಳ ರಾಜನನ್ನು ಹೊಗಳುತ್ತ ನಮಗೆ ಅಪ್ಪಣೆಕೊಡು. ಇವನನ್ನು ಈ ಕ್ಷಣವೇ ನಾಮಾವಶೇಷ ಮಾಡುವೆವು ಎಂದರು.

ಆಗ ಭೇತಾಳ ರಾಜನು ಕುತೂಹಲದಿಂದ ತನ್ನ ಮಂತ್ರಿಗಳನ್ನು ಉದ್ದೇಶಿಸಿ, ಯುದ್ಧ ವಿಶಾರದರಾದ ಮಂತ್ರಿಗಳೇ ನಿಮ್ಮ ಮಾತಿನಿಂದ ನಾನು ಸಂತುಷ್ಟನಾದೆ. ನೀವಿರುವಾಗ ನನಗೇನು ಭಯ? ಇವನೆಷ್ಟರವನು! ನೀವು ಈ ಕ್ಷಣವೇ ಹೋಗಿ ಆ ರಾಜನನ್ನು ಕೊಂದು ವಿಜಯಶಾಲಿಗಳಾಗಿ ಬನ್ನಿ ಎಂದು ಆಜ್ಞಾಪಿಸಿದನು. ತಮ್ಮೊಡೆಯನಿಂದ ಆಜ್ಞಪ್ತರಾದ ಆ ಏಳು ಮಂದಿ ಭೇತಾಳಮಂತ್ರಿಗಳೂ, ವಿಕ್ರಮಾದಿ ತ್ಯನ ಬಳಿಗೆ ಬಂದು ಅತ್ಯಂತ ಗರ್ವದಿಂದ ನೃಪಾಧಮನೇ, ರುದ್ರಸಮಾನನಾದ, ಕಾಲಾಗ್ನಿಸಮಾನನಾದ, ಮಹಾಕಂಠವುಳ್ಳ ನಮ್ಮ ಪ್ರಭುವನ್ನು ಬಂಧಿಸಿ, ಕೊಂಡೊಯ್ಯುವೆಯಾ? ನಿನಗೆ ಆ ಶಕ್ತಿಯಿದೆಯೆ? ಎಲೈ ರಾಜನೇ ಪ್ರಾಕೃತಗಳಾದ ಅಲ್ಪ ಭೂತ, ಪ್ರೇತ, ಪಿಶಾಚಗಳನ್ನು ಕೊಂದ ಮಾತ್ರಕ್ಕೆ ಶೂರನಾದೆಯಾ? ಇದರಿಂದ ಗರ್ವಿತನಾಗಿರುವ ನೀನು ನಮ್ಮನ್ನು ಅವರಂತೆ ಭಾವಿಸುವೆಯಾ? ಹಾಗೆಂದೂ ತಿಳಿಯಬೇಡ. ನಾವು ನಮ್ಮ ಭುಜಬಲಪರಾಕ್ರಮದಿಂದ ಪರ್ವತಗಳನ್ನು ಕೀಳಬಲ್ಲೆವು. ಯುದ್ಧದಲ್ಲಿ ನಮ್ಮೆದುರಿಗೆ ನಿಲ್ಲಲು ನಿನಗೆ ಶಕ್ತಿಯೆಲ್ಲಿಂದ ಬಂದೀತು? ಎಂದು ಆ ಏಳು ಮಂದಿ ಭೇತಾಳಮಂತ್ರಿಗಳು ವೀರನಾದವನ್ನು ಮಾಡುತ್ತಾ, ವಿಕ್ರಮಾದಿತ್ಯನೊಡನೆ ಯುದ್ಧ ಮಾಡಲು ಸಿದ್ಧರಾದರು.

ವಿಕ್ರಮಾದಿತ್ಯನು ಆ ಮಹಾ ಬಲಶಾಲಿಗಳಾದ ಭೇತಾಳಮಂತ್ರಿಗಳನ್ನು ನೋಡುತ್ತಲೇ, ಹಸಿದ ಸಿಂಹವು ಕ್ಷುದ್ರಮೃಗಗಳ ಮೇಲೆ ಬೀಳಲು ತವಕಿಸುವಂತೆ ಯುದ್ಧಕ್ಕೆ ಸಿದ್ಧನಾಗಿ ಪದೇಪದೇ ಸಿಂಹನಾದ ಮಾಡುತ್ತ, ವಜ್ರಾಯುಧವು ಪರ್ವತ ಗಳನ್ನು ಪುಡಿ ಪುಡಿ ಮಾಡುವಂತೆ, ವೈರಿಸಮೂಹಕ್ಕೆ ಭಯವನ್ನುಂಟುಮಾಡುವ ಆ ರಾಜನು ಆ ಭೇತಾಳಮಂತ್ರಿಗಳೊಡನೆ ಯುದ್ಧ ಮಾಡಲುದ್ಯುಕ್ತನಾಗಿ ಅವರ ಮೇಲೆ ರಭಸದಿಂದ ಬಿದ್ದನು. ಹೀಗೆ ಆ ಭೇತಾಳಮಂತ್ರಿಗಳೊಡನೆ, ವಿಕ್ರಮಾದಿತ್ಯನು ನಡೆಸಿದ ತುಮುಲ ಯುದ್ಧವು ಭಯಂಕರವಾಗಿದ್ದು ರೋಮಾಂಚನವನ್ನುಂಟು ಮಾಡುತ್ತಿತ್ತು.

ಈ ಅಭೂತಪೂರ್ವವಾದ ಯುದ್ಧವನ್ನು ನೋಡಲು ಅಂತರಿಕ್ಷದಲ್ಲಿ ದೇವೇಂದ್ರನೇ ಮೊದಲಾದ ದೇವತೆಗಳೂ, ತುಂಬುರ ನಾರದರೂ, ಅಪ್ಸರೆಯರೂ, ಸೂರ್ಯನಂತೆ ಹೊಳೆಯುವ ವಿಮಾನಗಳಲ್ಲಿ ಬಂದು ವಿಕ್ರಮಾದಿತ್ಯನಿಗೆ ಜಯವನ್ನು ಹಾರೈಸುವವರಾಗಿ ನೆರೆದರು. ಈ ಬೇತಾಳಗಳೊಡನೆ ನಡೆಯುತ್ತಿರುವ, ತನ್ನ ಯುದ್ಧವನ್ನು ವೀಕ್ಷಿಸಲು ದೇವತೆಗಳು ಅಂತರಿಕ್ಷದಲ್ಲಿ ನೆರೆದಿರುವುದನ್ನು ವಿಕ್ರಮಾದಿತ್ಯನು ನೋಡಿ, ಪೂರ್ಣಚಂದ್ರನನ್ನು ನೋಡಿ ಉಕ್ಕೇರುವ ಸಮುದ್ರದಂತೆ, ಪರಾಕ್ರಮ, ಉತ್ಸಾಹ, ಆನಂದಗಳಿಂದ ಉಬ್ಬಿದನು. ಯುದ್ಧದಲ್ಲಿ ವಿಕ್ರಮಾದಿತ್ಯನ ಕೈ ಮೇಲಾಗುತ್ತಿರುವುದನ್ನು ಆ ಬೇತಾಳಗಳು ನೋಡಿ, ಚಂದ್ರನನ್ನು ರಾಹುವು ನುಂಗಲು ಬರುವಂತೆ ಅವು ಖಡ್ಗ, ಪರಶ್ವಥ, ತೋಮರ, ಮುಸಲ, ಲಗುಡ, ಭಿಂಡಿವಾಲ ಮೊದಲಾದ ಶತ್ರುನಾಶಕ ಆಯುಧಗಳಿಂದ ಯುಕ್ತರಾಗಿ, ಖಡ್ಗಪಾಣಿಯಾಗಿ ಏಕಾಂಗಿಯಾಗಿ ಯುದ್ಧ ಮಾಡುತ್ತ ಚಕ್ರದಂತೆ ಸುತ್ತುತ್ತಿರುವ ರಾಜನನ್ನು ಸುತ್ತಲೂ ಮುತ್ತಿ ಅವನನ್ನು ಕೊಲ್ಲಲುದ್ಯುಕ್ತಗಳಾದುವು.

ಈ ರೀತಿ ಆ ಬೇತಾಳಗಳಿಂದ ಸುತ್ತುವರಿದು ಘಾತಿಸಲ್ಪಟ್ಟ ವಿಕ್ರಮಾದಿತ್ಯನು, ಬಾಲತುಳಿಯಲ್ಪಟ್ಟ ಸರ್ಪದಂತೆ ಕೆರಳಿ ಕೋಪದಿಂದ ಕಣ್ಣುಗಳು ಕೆಂಪಾಗಲು, ಆ ಪರಾಕ್ರಮಿಯು ಪುನಃಪುನಃ ಸಿಂಹನಾದ ಮಾಡುತ್ತಾ ಶತ್ರುಗಳನ್ನು ನುಚ್ಚು ನೂರಾಗಿ ಮಾಡುತ್ತ ಯಕ್ಷ ರಾಕ್ಷಸ ಸಮೂಹಕ್ಕೆ ಮಹಾಭೀತಿಯನ್ನುಂಟುಮಾಡುವ ತನ್ನ ಹರಿತವಾದ ಖಡ್ಗದಿಂದ ಆ ಬೇತಾಳಗಳ ಮೂಗುಗಳನ್ನೂ, ಕೈ ಕಾಲುಗಳನ್ನೂ, ತುಂಡರಿಸಿ ಚೆಲ್ಲಿದನು. ಇಂದ್ರನ ವಜ್ರಾಯುಧಕ್ಕೆ, ಯಮನ ಕಾಲದಂಡಕ್ಕೆ, ಕುಬೇರನ ಚಂದ್ರಾಯುಧಕ್ಕೆ ಸಮಾನವಾದ ಕಿರುಗೆಜ್ಜೆಗಳ ಧ್ವನಿಯಿಂದ ಕೂಡಿದ ತನ್ನ ಚಂದ್ರಾಯುಧದಿಂದ ಆ ಏಳು ಜನ ಬೇತಾಳಮಂತ್ರಿಗಳ ಶಿರಸ್ಸುಗಳನ್ನು ಕೂಡಲೇ ಕತ್ತರಿಸಿದನು.

ಆಗ ಅಂತರಿಕ್ಷದಲ್ಲಿ ನೆರೆದಿದ್ದ ಸಿದ್ಧ ಚಾರಣಸಮೇತರಾದ ಸಮಸ್ತ ದೇವತೆಗಳೂ ಸಂತೋಷಗೊಂಡರು. ದೇವದುಂದುಭಿಗಳು ಮೊಳಗಿದವು. ಅಂತರಿಕ್ಷದಿಂದ ಪುಷ್ಪವೃಷ್ಟಿಯಾಯಿತು. ಗಂಧರ್ವರು ಗಾನ ಮಾಡಿದರು. ಅಪ್ಸರೆಯರು ನರ್ತಿಸಿದರು. ದೇವತೆಗಳು ರಾಜನೇ ಜಯಶೀಲನಾದೆಯೆಂದು ಜಯಕಾರ ಮಾಡಿದರು. ಕಲಹಪ್ರಿಯನಾದ ನಾರದನು ಆ ಅತ್ಯದ್ಭುತವಾದ ಯುದ್ಧವನ್ನು ನೋಡಿ ಆನಂದಸಾಗರದಲ್ಲಿ ತೇಲಾಡಿದನು. ಸಮಸ್ತ ದೇವತೆಗಳೂ ವಿಕ್ರಮಾದಿತ್ಯನ ಬಳಿ ಬಂದು ಎಲೈ ರಾಜೇಂದ್ರನೇ ನೀನು ಮಹಾಕಾರ್ಯವನ್ನು ಮಾಡಿರುವೆ. ನಾವು ಸಂತುಷ್ಟರಾಗಿದ್ದೇವೆ. ನೀನು ಬೇಡಿದ ವರಗಳನ್ನು ಕೊಡುತ್ತೇವೆ ಕೇಳಿಕೋ ಎಂದು ನುಡಿದರು. ರಾಜೋತ್ತಮನಾದ ವಿಕ್ರಮಾದಿತ್ಯನು ವರವನ್ನು ಕೊಡಲು ಮುಂದೆ ಬಂದ ದೇವತೆಗಳನ್ನು ನೋಡಿ ಕುತೂಹಲಾವಿಷ್ಟನಾಗಿ ಅತ್ಯಂತ ವಿನಯದಿಂದ ಎಲೈ ದೇವತೆಗಳೇ, ನೀವು

ನನ್ನಲ್ಲಿ ಸಂತುಷ್ಟರಾಗಿರುವುದು ನಿಜವಾಗಿದ್ದರೆ, ಈ ಭೇತಾಳನು ಸದಾ ನನ್ನ ವಶವಾಗಿರುವಂತೆ ಅನುಗ್ರಹಿಸಬೇಕು ಎಂದನು. ಸಮಸ್ತ ದೇವತೆಗಳೂ ತಥಾಸ್ತು ಎಂದು ಹೇಳಿ ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು.

ನಂತರ ವಿಕ್ರಮಾದಿತ್ಯನು ವಟವೃಕ್ಷದ ಹತ್ತಿರ ಬಂದು ಸಪ್ತಭೇತಾಳಗಳ ನಾಯಕನಾದ ಆ ಬೇತಾಳ ರಾಜನನ್ನು ಕುರಿತು, ಎಲೈ ಬೇತಾಳನೇ, ನೀನು ನನ್ನ ಮೇಲೆ ಯುದ್ಧಕ್ಕೆ ಕಳುಹಿಸಿದ ನಿನ್ನ ಏಳುಜನ ಮಂತ್ರಿಗಳನ್ನೂ ನಾನು ಯುದ್ಧದಲ್ಲಿ ಕೊಂದಿರುವೆನು. ಇನ್ನು ನೀನು ನನ್ನ ವಶನಾಗು. ನಿನಗೇಕೆ ಗರ್ವವೆಂದು ನುಡಿದು. ನೃಪಶಾರ್ದೂಲನಾದ ವಿಕ್ರಮಾದಿತ್ಯನು, ಖಡ್ಗ ಪಾಣಿಯಾಗಿ ವಟವೃಕ್ಷವನ್ನು ಹತ್ತಿ ಆ ಭೇತಾಳನನ್ನು ಜಟಿ ಹಿಡಿದು ಬಗ್ಗಿಸಿ, ಭಯಂಕರವಾದ ಪಾಶಗಳಿಂದ ಹೆಡಮುರಿಗೆ ಕಟ್ಟಿ, ಕೆಳಗಿಳಿಸಿ, ತಾನೂ ಕೆಳಕ್ಕಿಳಿದು, ಅವನನ್ನು ತನ್ನ ಬೆನ್ನಮೇಲೆ ಹಾಕಿಕೊಂಡು ಕಾಲಪುರುಷ ಸಿದ್ಧನಿದ್ದ ಸ್ಥಳಕ್ಕೆ ಹೊರಟು ಬರುತ್ತಿದ್ದನು. ಹೀಗೆ ಮಾರ್ಗ ಕ್ರಮಿಸುತ್ತಿರುವಲ್ಲಿ ಮಾರ್ಗ ಮಧ್ಯದಲ್ಲಿ ಬೇತಾಳನು ಅಂತರ್ಧಾನನಾದನು. ರಾಜನು ಇದನ್ನು ತಿಳಿದು, ಮತ್ತೆ ವಟವೃಕ್ಷದ ಬಳಿಗೆ ಬಂದು ಆ ಮಹಾ ವೃಕ್ಷವನ್ನು ಹತ್ತಿ ಬೇತಾಳನನ್ನು ಪಾಶಗಳಿಂದ ಬಂಧಿಸಿ, ಪುನಃ ತನ್ನ ಹೆಗಲ ಮೇಲೆ ಹಾಕಿಕೊಂಡು ಕೆಳಗಿಳಿದು ಸಿದ್ಧನಿದ್ದ ಸ್ಥಳಕ್ಕೆ ಹೊರಟನು. ಈ ರೀತಿ ಬಂಧಿಸಲ್ಪಟ್ಟು ಒಯ್ಯಲ್ಪಡುತ್ತಿದ್ದ, ಆ ಮಹಾ ಮಾಯಾವಿ ಬೇತಾಳನು, ಮತ್ತೆ ಮಾರ್ಗ ಮಧ್ಯದಲ್ಲಿ ಮಾಯವಾಗಿ ತನ್ನ ಪೂರ್ವ ಸ್ಥಳ ಸೇರಿದನು. ವಿಕ್ರಮಾದಿತ್ಯನು ಬೇತಾಳನು ಪುನಃ ಮಾಯವಾದುದನ್ನು ತಿಳಿದು ಮತ್ತೆ ವಟವೃಕ್ಷದ ಬಳಿಗೆ ಬಂದನು.

ಬಂದವನು ಆ ಭೇತಾಳನನ್ನು ಕುರಿತು ಕೋಪದಿಂದ ದುರ್ಬುದ್ಧಿಯಾದ ಭೇತಾಳನೇ ನೀನು ಮಹಾ ಮಾಯಾವಿ. ನಿನ್ನ ಮಾಯೆಯು ಗೊತ್ತಾಯಿತು ಇನ್ನು ನೀನೆಲ್ಲಿ ಹೋಗುವೆ. ನೀನು ಇಂದ್ರಲೋಕ ಹೊಕ್ಕರೂ, ಬ್ರಹ್ಮಲೋಕ ಸೇರಿದರೂ, ವಿಷ್ಣು ಲೋಕಕ್ಕೆ ನಡೆದರೂ, ಶಿವಲೋಕಕ್ಕೆ ಹೋದರೂ, ಪಾತಾಳವನ್ನು ಪ್ರವೇಶಿಸಿದರೂ, ದಿಶಿಗರ್ಭವನ್ನು ಹೊಕ್ಕರೂ, ನಿನ್ನನ್ನು ನಾನು ಬಿಡುವವನಲ್ಲ. ನೀನು ತಿರುತಿರುಗಿ ಬಂದು ಈ ಆಲದ ಮರವನ್ನೇ ಆಶ್ರಯಿಸುತ್ತಿರುವೆ. ಈ ಮರವನ್ನೇ ಬೇರುಸಹಿತ ಕಿತ್ತೊಗೆದು ನಾನು ನಿನ್ನನ್ನು ಒಯ್ಯುವೆನು. ಎಂದು ರೋಷದಿಂದ ಹೇಳಿದನು. ಹೀಗೆಂದ ಸಾಹಸಿಯೂ, ಧೀರನೂ ಆದ ರಾಜನನ್ನು ಕುರಿತು ಬೇತಾಳನು, ಮಹಾರಾಜಾ, ನಾನು ನಿನಗೆ ಇಪ್ಪತ್ತೈದು ಕಥೆಗಳನ್ನು ಹೇಳುವೆನು. ಅವುಗಳನ್ನು ನೀನು ಕೇಳಿ ಸರಿಯಾದ ಉತ್ತರಗಳನ್ನು ಹೇಳಿದರೆ, ಆಗ ನಾನು ನಿಜವಾಗಿಯೂ ನಿನ್ನ ವಶನಾಗುವೆನು ಎಂದು ಹೇಳಿ ಮರದ ತುದಿಯಲ್ಲಿ ಕುಳಿತನು. ಆ ಬೇತಾಳನು ವಿಕ್ರಮಾದಿತ್ಯನನ್ನು ಕುರಿತು ಎಲೈ ಮಹಾಪ್ರಾಜ್ಞನೇ ನೀನು ಕಥೆಗಳನ್ನು ಕೇಳಿ,



ಶ್ರೀ ದೇವಾಂಗನು ಬೇತಾಳವತಾರದಿಂದ ವಿಕ್ರಮಾದಿತ್ಯರಾಯನಿಗೆ ಪ್ರಸಂನನಾದುದು.

ಚಿತ್ರ: ದೇವಾಂಗ ಮತ ಪ್ರಕಾಶಿಕೆ ಕೃಪೆಯಿಂದ.

ಉತ್ತರ ತಿಳಿಯೂ, ಹೇಳದಿದ್ದರೆ ನಿನ್ನ ತಲೆ ಸಹಸ್ರ ಹೋಳಾಗುವುದು ಎಂದು ನುಡಿಯಲು ವಿಕ್ರಮಾದಿತ್ಯನು ನಿನ್ನ ಕಥೆಗೆ ನನಗೆ ತಿಳಿದಿರುವ ಉತ್ತರವನ್ನು ಖಂಡಿತ ಹೇಳುವೆನು. ಸಂದೇಹಿಸಬೇಡ ಎಂದು ಹೇಳಿ, ಅವನನ್ನು ಮತ್ತೆ ಬಂಧಿಸಿ ತನ್ನ ಹೆಗಲ ಮೇಲೆ ಹಾಕಿಕೊಂಡು ಮುಂದೆ ಹೊರಟನು.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿ ಬ್ರಹ್ಮನಾರದ ಸಂವಾದರೂಪ ಉತ್ತರಖಂಡದ ದೇವಾಂಗ ಚರಿತ್ರೆಯಲ್ಲಿ, ವಿಕ್ರಮಾದಿತ್ಯೋಪಾಖ್ಯಾನದಲ್ಲಿ ಭೇತಾಳ ಗ್ರಹಣವೆಂಬ ಇಪ್ಪತ್ತಮೂರನೆಯ ಅಧ್ಯಾಯ ಮುಗಿದುದು.

ಇಪ್ಪತ್ತನಾಲ್ಕನೆಯ ಅಧ್ಯಾಯ

ಭೇತಾಳ ಪಂಚವಿಂಶತಿ ಕಥಾಕಥನ

ಅನಂತರ ಭೇತಾಳನು ಅತಿ ವಿಸ್ಮಯಕರವಾದ, ಮೊದಲನೆಯ ಕಥೆಯನ್ನು ರಾಜನಿಗೆ ಹೇಳಲಾರಂಭಿಸಿದನು. ಎಲೈ ರಾಜನೇ ಕೃತಯುಗದಲ್ಲಿ ವಿಶಾಲವೆಂಬ ಹೆಸರಿನ ಪಟ್ಟಣವೊಂದಿತ್ತು. ಅದನ್ನು ಸತ್ಯಸಂಧನಾದ ವೀರಮಾಹೇಶ್ವರನೆಂಬ ರಾಜನು ಆಳುತ್ತಿದ್ದನು. ಆತನಿಗೆ ಬಹು ಕಾಲದ ಮೇಲೆ ಪದ್ಮಾವತಿಯೆಂಬ ಪುತ್ರಿಯು ಜನಿಸಿದಳು. ತಂದೆಯಾದ ವೀರಮಾಹೇಶ್ವರನು ಆ ಪುತ್ರಿಯನ್ನು ಪರಮಪ್ರೀತಿಯಿಂದ ಸಾಕುತ್ತಾ ಸರ್ವಶಾಸ್ತ್ರವಿಶಾರದೆಯನ್ನಾಗಿ ಮಾಡಿದನು. ವಿದ್ಯಾವತಿಯಾದ ಆಕೆಯನ್ನು ಯಾರಿಗೆ ವಿವಾಹ ಮಾಡಿಕೊಡಬೇಕೆಂದು ಯೋಚಿಸಿ, ತನ್ನ ಮಂತ್ರಿಯನ್ನು ಕರೆದು ಎಲೈ ಮಂತ್ರಿವರ್ಯನೇ ನನ್ನ ಪುತ್ರಿಯಾದ ಪದ್ಮಾವತಿಯು ಯೌವನವತಿಯಾಗಿರುವಳು. ನೀತಿಕೋವಿದನಾದ ಮಂತ್ರಿಯೇ ಈಕೆಗೆ ವಿವಾಹ ಮಾಡಬೇಕು. ನೀನು ಯೋಗ್ಯನಾದ ವರನನ್ನು ಹುಡುಕು ಎಂದನು. ಆಮೇಲೆ ತನ್ನ ಪುರೋಹಿತನಿಗೂ ಈ ರೀತಿ ಹೇಳಲು, ಅವರಿಬ್ಬರೂ ಹಾಗೆಯೇ ಆಗಲಿ ಎಂದು ವರಾನ್ವೇಷಣೆಯಲ್ಲಿ ತೊಡಗಿದರು. ರಾಜನೂ ಸ್ವತಃ ತಾನೂ ವರನಿಗಾಗಿ ಹುಡುಕಿಸುತ್ತಾ ಒಬ್ಬವರನನ್ನು ಕರೆಸಿದನು. ರಾಜನು ತಿಳಿಸಿದ್ದಂತೆ ಮಂತ್ರಿಯೂ, ಪುರೋಹಿತನೂ, ಕ್ರಮವಾಗಿ ಒಬ್ಬೊಬ್ಬ ವರನನ್ನು ಕರೆತಂದರು.

ಈ ರೀತಿ ರಾಜ, ಮಂತ್ರಿ, ಪುರೋಹಿತ ಈ ಮೂವರಿಂದ ಆರಿಸಲ್ಪಟ್ಟ ಮೂರು ಮಂದಿ ರಾಜಪುತ್ರರೂ ತಮ್ಮ ತಮ್ಮ ಚತುರಂಗ ಸೇನೆಗಳಿಂದ ಕೂಡಿಕೊಂಡು ಆ ರಾಜನ ಪಟ್ಟಣದ ಹೊರವಲಯದಲ್ಲಿ ಏಕಕಾಲದಲ್ಲಿ ಬಂದಿಳಿದರು. ವೀರಮಾಹೇಶ್ವರನು ಏಕಕಾಲ

ವಲ್ಲಿ ಮೂವರು ವರರು ಬಂದದ್ದನ್ನು ತಿಳಿದು, ತಾನು ಸತ್ಯಸಂಧನಾದುದರಿಂದ ತನ್ನ ಪುತ್ರಿಯನ್ನು ಯಾರಿಗೆ ಕೊಡಬೇಕೆಂದು ಚಿಂತಿಸುತ್ತಿದ್ದನು. ಹೀಗಿರುವಲ್ಲಿ ರಾಜನ ಪತ್ನಿಯು ತಾನು ತನ್ನ ಪುತ್ರಿಯನ್ನು ವಿವಾಹ ಮಾಡಿಕೊಡುವುದಾಗಿ ಹೇಳಿದ್ದ ತನ್ನ ಅಣ್ಣನ ಮಗನನ್ನು ಕರೆಕಳುಹಿಸಿದಳು. ಅವನೂ ಚತುರಂಗ ಸೇನಾ ಸಮೇತನಾಗಿ ಆ ಪಟ್ಟಣಕ್ಕೆ ಬಂದನು. ಕಾರ್ಯತತ್ಪರನಾದ ರಾಜನು ಸೋದರಳಿಯನ ಆಗಮನವನ್ನು ತಿಳಿದು ತನ್ನ ಹೆಂಡತಿಯನ್ನು ಹೀಯಾಳಿಸುತ್ತ ಎಲೈ ದುಷ್ಟೆ, ಈಗ ನಿನ್ನ ಅಣ್ಣನ ಮಗನೇಕೆ ಬಂದಿರುವನು ? ಈಗಾಗಲೇ ಮೂವರು ವರರು ಸೇನಾ ಸಮೇತರಾಗಿ ಬಂದು ಬೀಡು ಬಿಟ್ಟಿರುವರು. ಇದರಿಂದ ನಾನು ವ್ಯಾಕುಲನಾಗಿದ್ದೇನೆ ಇವನನ್ನು ಯಾಕೆ ಕರೆಸಿದೆ ? ಎಂದು ದೂಷಿಸಿದನು. ಇದನ್ನು ಕೇಳಿದ ಅವಿಧೇಯಳಾದ ಆ ರಾಣಿಯು ರಾಜನನ್ನು ಕುರಿತು ಎಲೈ ರಾಜನೇ ನೀನೇನಾದರೂ ನನ್ನ ಅಣ್ಣನ ಮಗನಿಗೆ ನಮ್ಮ ಪುತ್ರಿ ಪದ್ಮಾವತಿಯನ್ನು ವಿವಾಹ ಮಾಡಿಕೊಡದಿದ್ದರೆ ನಾನು ನಿನ್ನೆದುರಿಗೇ ವಿಷಕುಡಿದು ಪ್ರಾಣ ಬಿಡುವೆನು ಎಂದು ಹೇಳಿದಳು. ಇದನ್ನು ಕೇಳಿ ಭೂಪಾಲನು, ತಾನು ಅವಳನ್ನು ಅತಿಯಾಗಿ ಪ್ರೀತಿಸುತ್ತಿದ್ದು ಮೋಹಾಂಧನಾಗಿದ್ದುದರಿಂದ ಅವಳ ಮಾತನ್ನು ಮೀರಲಾರದೆ ಸಮ್ಮತಿಸಿದನು.

ಲೋಕದಲ್ಲಿ ಸಮಸ್ತ ಪುರುಷರೂ, ಮೋಹದಿಂದ ಸ್ತ್ರೀ ಪರವಶರಾಗಿ, ಸತ್ಯವನ್ನೂ, ಧರ್ಮವನ್ನೂ, ಮಕ್ಕಳನ್ನೂ, ಬಂಧುಬಾಂಧವರನ್ನೂ, ಆರ್ಯರನ್ನೂ, ಗುರುಗಳನ್ನೂ, ತ್ಯಜಿಸಿ ಸ್ತ್ರೀಯರ ಕೈಗೊಂಬೆಗಳಾಗಿ, ಅವರು ಹೇಳಿದ ಹಾಗೆ ಕೇಳುವರು. ಹಾಗೆಯೇ ರಾಜನಾದರೂ ಮೋಹಪರವಶನಾಗಿ ಮೂವರು ವರರನ್ನೂ ಬಿಟ್ಟು ತನ್ನ ಮಗಳನ್ನು ಸೋದರಳಿಯನಿಗೆ ವಿವಾಹ ಮಾಡುವೆನೆಂದು ಪ್ರಸಿದ್ಧಪಡಿಸಿದನು. ಇದನ್ನು ಕೇಳಿದ ಆ ಮೂವರು ವರರೂ, ರಾಜನ ಅಭಿಪ್ರಾಯವನ್ನು ತಿಳಿದು, ರೋಷದಿಂದ ಕೂಡಿದವರಾಗಿ. ತಮ್ಮ ತಮ್ಮ ಸೇನೆಗಳಿಂದ ಕೂಡಿಕೊಂಡು, ರಾಜನಿಗೂ ಅವನ ಅಳಿಯನಿಗೂ ಮೊದಲು ತಮ್ಮನ್ನು ಯುದ್ಧದಲ್ಲಿ ಜಯಿಸಬೇಕೆಂದೂ ಆ ಮೇಲೆ ರಾಜಪುತ್ರಿಯ ವಿವಾಹವಾಗಲೆಂದೂ, ಅಲ್ಲಿಯ ತನಕ ವಿವಾಹವು ನಿಲ್ಲಬೇಕೆಂದೂ ದೂತರ ಮೂಲಕ ಕೇಳಿ ಕಳುಹಿಸಿದರು.

ರಾಜನು ಆ ಅಭಿಪ್ರಾಯವನ್ನು ತಿಳಿದು, ತನ್ನ ಮಂತ್ರಿಗಳನ್ನು ಕರೆಸಿ ಆಲೋಚಿಸಿ, ಅವರ ಆಲೋಚನೆಯಂತೆ ನಡೆಯಲು ನಿಶ್ಚಯಿಸಿದನು. ಅವರನ್ನು ಕರೆಕಳುಹಿಸಿ ವಿಚಾರವನ್ನೆಲ್ಲಾ ಅವರಿಗೆ ತಿಳುಹಿಸಿದನು. ಆಗ ಮಂತ್ರಿಗಳು ಚೆನ್ನಾಗಿ ಆಲೋಚಿಸಿ ರಾಜನನ್ನು ಕುರಿತು, ಮಹಾಸ್ವಾಮಿ ನಿಮ್ಮ ಸುಂದರಿಯಾದ ಮಗಳನ್ನು ಯಾರಿಗೆ ಕೊಡಿಸಬೇಕೆಂದು ನಮಗೆ ಹೊಳೆಯುತ್ತಿಲ್ಲ. ಹೇಗೆ ಉತ್ತರ ಕೊಡೋಣ ? ಆ ಪರಾಕ್ರಮಶಾಲಿಗಳೊಡನೆ ಯುದ್ಧ ಮಾಡುವ ಸಾಮರ್ಥ್ಯವೂ ನಮಗಿಲ್ಲ. ಅಂದ

ಮೇಲೆ ಏನು ಮಾಡುವುದು. ಆದರೂ ಚಿಂತೆಯಿಲ್ಲ. ನೀವು ಸಿಟ್ಟಾಗದಿದ್ದರೆ ಒಂದು ಸರಳವಾದ ಉಪಾಯವನ್ನು ಹೇಳುತ್ತೇವೆ ಎಂದರು.

ರಾಜನು ಸಮಾಧಾನದಿಂದ ಎಲೈ ಮಂತ್ರಿಗಳೇ ಹಾಗೇಕೆ ಆಗಲಿ ಸಂಕೋಚ ಪಡಬೇಡಿ. ನೀವು ಯೋಚಿಸಿರುವ ಆ ಉಪಾಯವು ಯಾವುದು ? ಹೇಳಿ ಎಂದನು. ಮಂತ್ರಿಗಳು ರಾಜನನ್ನು ನೋಡಿ ಮಹಾರಾಜನೇ ಈ ಪಟ್ಟಣದ ಹೊರಭಾಗದಲ್ಲಿ ಒಂದು ಮಹತ್ತರವಾದ ಅಗ್ನಿಕುಂಡವನ್ನು ರಚಿಸಿ ಅದರ ಎದುರಿಗೆ ರಾಜಪುತ್ರಿಯನ್ನು ನಿಲ್ಲಿಸಿ, ಆ ನಾಲ್ಕುಮಂದಿ ವರರನ್ನೂ, ನಾಲ್ಕುದಿಕ್ಕುಗಳಲ್ಲಿ ಸಮಾನವಾದ ದೂರದಲ್ಲಿ ನಿಲ್ಲಿಸಿ, ಆ ವರರನ್ನು ಕುರಿತು ನಿಮ್ಮ ನಾಲ್ವರಲ್ಲಿ ಯಾರು ಶೀಘ್ರವಾಗಿ ಓಡಿ ಬಂದು ಮೊದಲು ನನ್ನ ಪುತ್ರಿಯ ಕೈಯ್ಯನ್ನು ಹಿಡಿಯುವನೋ ಅವನಿಗೆ ನನ್ನ ಮಗಳನ್ನು ಕೊಡುವೆನೆಂದು ಸಾರಿಸಿ ಎಂದರು. ರಾಜನು ಅವರ ಮಾತಿಗೊಪ್ಪಿದನು.

ಅದರಂತೆಯೇ ರಾಜನು ಊರ ಹೊರಗೆ, ಒಂದು ದೊಡ್ಡ ಅಗ್ನಿಕುಂಡವನ್ನು ತೋಡಿಸಿ ರಾಜಪುತ್ರಿಯ ವಿವಾಹವಿಷಯವನ್ನು ಪ್ರಸಿದ್ಧಪಡಿಸಿದನು. ಆ ಅಗ್ನಿಕುಂಡದ ಪುರೋಭಾಗದಲ್ಲಿ ವಸ್ತ್ರಾಲಂಕಾರಭೂಷಿತಳಾದ ತನ್ನ ಪುತ್ರಿಯನ್ನು ನಿಲ್ಲಿಸಿದನು. ನಾಲ್ಕು ದಿಕ್ಕುಗಳಲ್ಲೂ, ಸಮಾನ ಅಂತರದಲ್ಲಿ ಆ ನಾಲ್ಕು ಮಂದಿ ವರರನ್ನು ನಿಲ್ಲಿಸಿ, ಅವರಿಗೆ ಸಮಾನ ದೂರದಲ್ಲಿರುವ ತನ್ನ ಮಗಳ ಕೈಯ್ಯನ್ನು ಹಿಡಿದುಕೊಳ್ಳಿರೆಂದು ಆಜ್ಞಾಪಿಸಿದನು. ಈ ರೀತಿ ರಾಜನಿಂದ ಆಜ್ಞಾಪಿಸಲ್ಪಟ್ಟ ಆ ನಾಲ್ವರು ವರರೂ ನಾನು ಮುಂದು, ತಾನು ಮುಂದು ಎಂದು ಓಡಿಬಂದು ಒಂದೇ ಸಮಯದಲ್ಲಿ ಅವಳ ಕೈಹಿಡಿದರು. ಅವರು ನಾಲ್ವರೂ, ಆ ತರುಣಿಯು ನನಗೆ ಬೇಕು. ತನಗೆ ಬೇಕು ಎಂದು ಪರಸ್ಪರ ಕಚ್ಚಾಡುತ್ತಾ ಆಕೆಯನ್ನು ಎಳೆದಾಡುತ್ತಿದ್ದರು. ಹೀಗೆ ತನ್ನನ್ನು ಎಳೆದಾಡುತ್ತಿರಲು, ಅದನ್ನು ಸಹಿಸಲಾರದೆ ಪದ್ಮಾವತಿಯು ಪ್ರಜ್ವಲಿಸುತ್ತಿರುವ ಅಗ್ನಿಕುಂಡದಲ್ಲಿ ಬಿದ್ದಳು. ಹೀಗೆ ಅಗ್ನಿಕುಂಡದಲ್ಲಿ ಬಿದ್ದು ಆತ್ಮಾರ್ಪಣೆ ಮಾಡಿದ ಅವಳನ್ನು ನೋಡಿ ಆ ನಾಲ್ಕು ಮಂದಿ ರಾಜಪುತ್ರರೂ ಅತ್ಯಂತ ಶೋಕಿಸುವವರಾದರು.

ಅವರಲ್ಲೊಬ್ಬ ಸಾಹಸಿಯು, ಹಾ ಸುಂದರಿ ಸತ್ತೆಯಾ ಎಂದು ನುಡಿಯುತ್ತಾ ಪ್ರಜ್ವಲಿಸುತ್ತಿದ್ದ ಅಗ್ನಿಕುಂಡಕ್ಕೆ ಹಾರಿದನು. ಇನ್ನೊಬ್ಬನು, ಅವಳಲ್ಲಿ ಅತ್ಯಂತ ಮೋಹದಿಂದ ರಾಜ್ಯವನ್ನೇ ತೊರೆದು ತೀರ್ಥಯಾತ್ರೆ ಹೊರಟನು. ಮತ್ತೊಬ್ಬನು ನಿರಾಶನಾಗಿ ವಿರಾಗಿಯಾಗಿ ದೇಶಪರ್ಯಟನೆ ಮಾಡುತ್ತಾ ಭಿಕ್ಷಾಟನೆಯಿಂದ ಕಾಲ ಕಳೆಯುತ್ತ ದೇಶದೇಶಗಳನ್ನು ತಿರುಗುತ್ತಿದ್ದನು. ಮಗದೊಬ್ಬನು ಆ ಪಟ್ಟಣದಲ್ಲಿಯೇ ಇದ್ದು ಭಿಕ್ಷೆ ಬೇಡುತ್ತಾ, ಕಾಲಕಳೆಯುತ್ತಿದ್ದು ಅತ್ಯಂತ ಶೋಕಾಕುಲನಾಗಿ ಆ ಪದ್ಮಾ

ಪತಿಯು ಬಿದ್ದು ಸತ್ತ ಅಗ್ನಿಕುಂಡದ ಬಳಿ ಒಂದು ಮಂಟಪವನ್ನು ಕಟ್ಟಿಸಿ, ಆ ಮಂಟಪದ ಮಧ್ಯೆ ಒಂದು ಗೌರಿಯ ಮೂರ್ತಿಯನ್ನು ಪ್ರತಿಷ್ಠಿಸಿ, ಪೂಜಿಸುತ್ತಿದ್ದನು. ಅವನು ಅದರ ಪಕ್ಕದಲ್ಲೇ ಒಂದು ಹೂದೋಟ ನಿರ್ಮಿಸಿ, ಕೆಲವು ಕಾಲ ಕಳೆದು, ಬೇಸರದಿಂದ ದೇಶಪರ್ಯಟನೆ ಮಾಡುತ್ತಾ ಭಿಕ್ಷೆಯಿಂದ ಜೀವಿಸುತ್ತಾ ಮತ್ತೆ ರಾಜ ಕುಮಾರಿಯ ಸಮಾಧಿಯ ಬಳಿಯಲ್ಲಿಯೇ ವಿರಹಾಗ್ನಿಯಿಂದ ಬೆಂದು ವಿಶಾಲನಗರ ದಲ್ಲೇ ಭಿಕ್ಷೆಯಿಂದ ಜೀವಿಸುತ್ತಿದ್ದನು. ವಿರಾಗಿಯಾಗಿ ದೇಶಪರ್ಯಟನೆ ಮಾಡು ತ್ತಿದ್ದ ರಾಜಕುಮಾರನು ದೇಶಪರ್ಯಟನೆ ಮಾಡುತ್ತಾ ಭಿಕ್ಷೆಯಿಂದ ಜೀವಿಸುತ್ತಾ ಕಾಳಿಯೆಂಬ ಪಟ್ಟಣಕ್ಕೆ ಬಂದು ಅಲ್ಲಿ ವಾಸಿಸುತ್ತಿದ್ದನು.

ಒಂದು ದಿನ ಆ ಭಿಕ್ಷುಕನು ಭಿಕ್ಷೆಯು ದೊರೆಯದೆ, ಅತ್ಯಂತ ಹಸಿವಿನಿಂದ ಪೀಡಿತನಾಗಿ, ಒಬ್ಬ ಬಡ ಬ್ರಾಹ್ಮಣನ ಮನೆಗೆ ಬಂದು, ಆ ಬ್ರಾಹ್ಮಣನ ಪತ್ನಿಗೆ ಊಟಕ್ಕಿಡೆಂದು ಕೇಳಿದನು, ಆ ಸಾಧ್ವೀಮಣಿಯಾದ ಬ್ರಾಹ್ಮಣ ಸ್ತ್ರೀಯು ಅತ್ಯಾದರ ರಿಂದ ಅವನನ್ನು ಪೂಜಿಸಿ, ತನ್ನ ಮನೆಯಲ್ಲಿ ಏನೂ ಇಲ್ಲದುದರಿಂದ, ಅವನನ್ನು ಕುರಿತು ಎಲೈ ಬ್ರಾಹ್ಮಣನೇ, ನನ್ನ ಪತಿಯು ಯಾಚನೆಗಾಗಿ ಪೇಟೆಗೆ ಹೋಗಿರುವನು. ಅನಘನೇ ನಿನಗೆ ಭೋಜನಕ್ಕಿಡಲು ಮನೆಯಲ್ಲಿ ಏನೂ ಇಲ್ಲ. ನನ್ನ ಪತಿಯು ಬರುವ ವರಿವಿಗೆ ಇಲ್ಲೇ ಇದ್ದು, ಅವನು ಬಂದನಂತರ, ಭುಜಿಸಿ ಹೋಗು ಎಂದು ಹೇಳಿದಳು. ಅದಕ್ಕೆ ಹಸಿದ ಆಭಿಕ್ಷುಕನು ಆಕೆಯನ್ನು ಕುರಿತು, ಎಲೈ ವರಾನನೇ, ಆ ವರಿವಿಗೂ ನಾನು ಹಸಿವನ್ನು ತಡೆಯಲಾರೆನು. ನನಗೆ ಹಸಿವು ಬಹಳವಾಗಿದೆ. ಯಾಚಕನಾದ ನಿನ್ನ ಪತಿಯು ಮನೆಗೆ ಯಾವಾಗ ಬರುವನೋ ತಿಳಿಯದು. ಆದುದರಿಂದ ಎಲೈ ಪತಿವ್ರತೆಯೇ, ಏನೂ ಇಲ್ಲವೆಂದು ಹೇಳಿದರೆ ನಾನು ಮುಂದಿನ ದಾರಿ ಹಿಡಿಯುತ್ತೇನೆ. ಇಲ್ಲದಿದ್ದರೆ ಈಗಲೇ ನನಗೆ ಭೋಜನ ನೀಡೆಂದನು.

ಈ ಮಾತನ್ನು ಕೇಳಿ ಆ ಸಾಧ್ವೀಮಣಿಯು, ನೆರೆಮನೆಗೆ ಹೋಗಿ ಸಾಲವಾಗಿ ಅಕ್ಕಿಯನ್ನು ತಂದು, ಬೇಗ ಬೇಗ ಪಾಕಮಾಡ ತೊಡಗಿದಳು. ಹೀಗೆ ಅವಳು ಪಾಕ ಮಾಡುತ್ತಿರಲು ಅವಳ ಶಿಶುವು ಅಳುತ್ತ, ಆಕೆಯ ಕೆಲಸಕ್ಕೆ ಅಡ್ಡಿ ಮಾಡಲು, ಆಕೆಯು ಸಿಡುಕಿನಿಂದ ಆ ಶಿಶುವನ್ನು ಉರಿಯುವ ಒಲೆಗೆ ಎಸೆದಳು. ನಂತರ ಆಕೆಯು ಆ ಭಿಕ್ಷುಕನಿಗೆ ಊಟ ಮಾಡೆಂದು ಹೇಳಿ, ಎಲೆ ಹಾಕಿ ಉಣಬಡಿಸಿದಳು. ಭಿಕ್ಷುಕನು ಅವಳ ಈ ದುಷ್ಕರ್ಮವನ್ನು ನೋಡಿ ಎಲೈ ದುಷ್ಟೆ ಎಂತಹ ನೀಚ ಕಾರ್ಯ ಮಾಡಿದೆ? ಶಿವಾ ಶಿವಾ ಬಾಲಕನನ್ನು ಉರಿಯುವ ಒಲೆಗೆಸೆದು ಶಿಶುಹತ್ಯೆ ಮಾಡಿದೆಯಲ್ಲಾ. ನಿನ್ನ ಕೈಯಿಂದ ನಾನು ಹೇಗೆ ಊಟ ಮಾಡಲಿ? ನಿನ್ನಿಂದ ಬಡಿಸಲ್ಪಟ್ಟ ಅನ್ನವು ಊಟ ಮಾಡಲು ಯೋಗ್ಯವಲ್ಲ. ಮತ್ತೆ ಆ ಬಾಲಕನು ಬದುಕಿದರೆ ಮಾತ್ರ ನಾನು ಊಟ ಮಾಡುವೆನೆಂದು ನುಡಿದನು. ಅದಕ್ಕೆ ಆ ಸ್ತ್ರೀಯು ಊಟಮಾಡೆಂದು ಎಷ್ಟು ಪ್ರಾರ್ಥಿಸಿದರೂ ಆಭಿಕ್ಷುಕನು ಕಿವಿಗೊಡಲಿಲ್ಲ.

ಇಷ್ಟರಲ್ಲಿ ಯಾಚನೆಗೆ ಹೋಗಿದ್ದ ಆ ಬ್ರಾಹ್ಮಣ ಸ್ತ್ರೀಯ ಪತಿಯು ಮನೆಗೆ ಬಂದನು. ಆ ವಿಪ್ರನು, ತನ್ನ ಪತ್ನಿ ಮತ್ತು ಅತಿಥಿ ಇವರ ಮಧ್ಯೆ ನಡೆಯುತ್ತಿದ್ದ ವಾದವನ್ನು ಕೇಳಿ, ಪತ್ನಿಯ ಮೇಲೆ ಸಿಟ್ಟಾಗಿ ಬ್ರಾಹ್ಮಣನನ್ನು ಸಮಾಧಾನಪಡಿಸಿ, ಕೈಯಲ್ಲಿ ಜಲವನ್ನು ತೆಗೆದುಕೊಂಡು ಅಭಿಮಂತ್ರಿಸಿ ಒಲೆಯಲ್ಲಿ ಪ್ರೋಕ್ಷಿಸಲು, ಸತ್ತ ಬಾಲಕನು ಮಂತ್ರಜಲ ಪ್ರಭಾವದಿಂದ ಮೇಲಕ್ಕೆದ್ದು, ಮೊದಲಿನಂತೆ ಕಿರುಗೆಜ್ಜೆಗಳನ್ನು ಶಬ್ದಮಾಡುತ್ತಾ, ಮುಗುಳುನಗೆ ನಗುತ್ತಾ, ತಂದೆಯ ಬಳಿಗೆ ಬಂದನು. ಆ ಬ್ರಾಹ್ಮಣನ ಮಹಿಮೆಯನ್ನು ಕಂಡು ಭಿಕ್ಷುಕನು ಆಶ್ಚರ್ಯಗೊಂಡು ಭಗವನ್ ದಯಾನಿಧೇ ಈ ಮಂತ್ರವನ್ನು ದಯವಿಟ್ಟು ನನಗೆ ಉಪದೇಶಿಸು. ಇದರಿಂದ ನನ್ನ ಮನೋರಥವು ನೆರವೇರುವುದು ಎಂದನು. ಈ ರೀತಿ ಭಿಕ್ಷುಕನು ಬೇಡಲು, ಬ್ರಾಹ್ಮಣನು ಅದನ್ನು, ನಿನಗೆ ಉಪದೇಶಿಸುವುದಿಲ್ಲವೆಂದನು. ಇದನ್ನು ಕೇಳಿ ಭಿಕ್ಷುಕನು ಕೈಯಲ್ಲಿ ಆಪೋಶನಜಲವನ್ನು ತೆಗೆದುಕೊಂಡು ಈ ಮಂತ್ರವನ್ನು ನನಗೆ ಹೇಳಿ ಕೊಟ್ಟರೆ ಸರಿ. ಇಲ್ಲದಿದ್ದರೆ ನಾನು ಊಟ ಮಾಡುವುದೇ ಇಲ್ಲವೆಂದು ಮೇಲೇಳುವುದಕ್ಕೆ ಹೋದನು. ಆಗ ಬ್ರಾಹ್ಮಣನು ಅತಿಥಿ ಸತ್ಕಾರಕ್ಕೆ ಅಡ್ಡಿ ಬರುವುದೆಂದು ಯೋಚಿಸಿ ಭಿಕ್ಷುಕನಿಗೆ ಆ ಮಂತ್ರವನ್ನು ವಿಧಿವತ್ತಾಗಿ ಉಪದೇಶಿಸಿದನು.

ನಂತರ ಭಿಕ್ಷುಕನು ಸಂತೋಷಪಟ್ಟು ಊಟಮಾಡಿದನು. ಊಟವಾದ ಮೇಲೆ ಬ್ರಾಹ್ಮಣನು ಆ ಮಂತ್ರವನ್ನು ಪರೀಕ್ಷಿಸಬೇಕೆಂದು ಯೋಚಿಸಿ, ಮನೆಯಿಂದ ಹೊರಗೆ ಬಂದು ಸುತ್ತಲೂ ನೋಡಿ, ಸಮೀಪದಲ್ಲೇ ಸತ್ತುಬಿದ್ದಿದ್ದ ಒಂದು ಕತ್ತೆಯನ್ನು ನೋಡಿ, ಶುಚಿರ್ಭೂತನಾಗಿ ತನ್ನ ಕೈಯಲ್ಲಿ ಜಲವನ್ನು ತೆಗೆದುಕೊಂಡು ತನಗೆ ಉಪದೇಶಿಸಲ್ಪಟ್ಟಿದ್ದ ಮಂತ್ರದಿಂದ ಅಭಿಮಂತ್ರಿಸಿ ಆ ಸತ್ತಕತ್ತೆಯ ಮೇಲೆ ಪ್ರೋಕ್ಷಿಸಿದನು. ಹಾಗೆ ಪ್ರೋಕ್ಷಿಸಿದೊಡನೆಯೇ ಆ ಸತ್ತ ಕತ್ತೆಯು ಬದುಕಿ ಎದ್ದುನಿಂತು ಹೊರಟು ಹೋಯಿತು. ಇದರಿಂದ ಸಂತುಷ್ಟನಾದ ಆ ಭಿಕ್ಷುಕನು ವಿಶಾಲ ಪಟ್ಟಣಕ್ಕೆ ಬಂದನು. ಬಂದವನೇ ರಾಜಕುಮಾರಿಯು ಹಾರಿ ಪ್ರಾಣಬಿಟ್ಟ ಅಗ್ನಿಕುಂಡವನ್ನು ಅಗೆದು ತನಗೆ ಉಪದೇಶಿಸಲ್ಪಟ್ಟ ಮಂತ್ರದಿಂದ ಜಲವನ್ನು ಅಭಿಮಂತ್ರಿಸಿ ಪ್ರೋಕ್ಷಿಸಿದನು. ಆ ಮಂತ್ರ ಪ್ರಭಾವದಿಂದ ರಾಜಕುಮಾರಿ ಪದ್ಮಾವತಿಯು ಬದುಕಿ ಮೇಲೆದ್ದಳು. ಅವಳೊಡನೆ ಆ ಅಗ್ನಿಕುಂಡದಲ್ಲಿ ಬಿದ್ದು ಪ್ರಾಣ ಕಳೆದುಕೊಂಡಿದ್ದ, ಆ ರಾಜಕುಮಾರನೂ ಬದುಕಿದನು. ವೈರಾಗ್ಯಶೀಲನಾಗಿ ತೀರ್ಥಯಾತ್ರೆಗೆ ಹೋಗಿದ್ದ ರಾಜಕುಮಾರನು ತೀರ್ಥಗಳಲ್ಲಿ, ಸತ್ತ ರಾಜಕುಮಾರಿಗೆ ತರ್ಪಣ, ಪಿಂಡಪ್ರದಾನಾದಿಗಳನ್ನು, ಮಾಡಿ ದೈವಯೋಗದಿಂದ ಆ ಸಮಯಕ್ಕೆ ಸರಿಯಾಗಿ ವಿಶಾಲ ಪಟ್ಟಣಕ್ಕೆ ಬಂದನು. ಅವನು ಪದ್ಮಾವತಿಯು ಬದುಕಿದುದನ್ನು ತಿಳಿದು ಅವಳನ್ನು ತನ್ನ ಪತ್ನಿಯನ್ನಾಗಿ ಮಾಡಿಕೊಳ್ಳಲು ಆಸೆಪಟ್ಟು, ಅವಳು ತನ್ನ ಪತ್ನಿಯೆಂದೇ ಹೇಳತೊಡಗಿದನು. ಯಾರು ಪದ್ಮಾವತಿಯು ಸತ್ತ ಅಗ್ನಿಕುಂಡದ ಸುತ್ತಲೂ ಹೂದೋಟವನ್ನು ನಿರ್ಮಿಸಿ ವಾಸಿಸುತ್ತಿದ್ದನೋ, ಅವನೂ ಬದುಕಿದ ಪದ್ಮಾವತಿಯನ್ನು ಕಂಡು ಅವಳು ತನ್ನ ಪತ್ನಿಯೆಂದೇ ಹೇಳತೊಡಗಿದನು. ಇನ್ನುಳಿದ ಇಬ್ಬರೂ ಆಕೆಯು ತಮ್ಮ ಪತ್ನಿಯೆಂದೇ

ಹೇಳತೊಡಗಿದರು. ಈ ನಾಲ್ವರಲ್ಲಿ ಯಾರನ್ನು ರಾಜಪುತ್ರಿಯು ವರಿಸಬೇಕು? ಎಂಬ ಸಂಶಯ ನನಗುಂಟಾಗಿದೆ. ಎಲೈ ವಿಕ್ರಮಾದಿತ್ಯನೇ, ನನ್ನ ಈ ಸಂಶಯವನ್ನು ಪರಿಹರಿಸೆಂದನು.

ಅದಕ್ಕೆ ಬುದ್ಧಿವಂತನಾದ ರಾಜನು ಎಲೈ ಬೇತಾಳನೇ, ಯಾರು ಅವಳ ಸಲುವಾಗಿ ಸರ್ವತೀರ್ಥಗಳಲ್ಲಿ ತರ್ಪಣ ಪಿಂಡಪ್ರದಾನಾದಿ ಕ್ರಿಯೆಗಳನ್ನು ಮಾಡಿದನೋ, ಅವನು ಅವಳಿಗೆ ಪುತ್ರನಾಗಬೇಕು. ಅವನು ಅವಳನ್ನು ವರಿಸಲು ಯೋಗ್ಯನಲ್ಲ. ಯಾರು ಸತ್ತ ಆ ರಾಜಕುಮಾರಿಯನ್ನು ಮಂತ್ರಪ್ರಭಾವದಿಂದ ಬದುಕಿಸಿದನೋ ಅವನು ಅವಳಿಗೆ ತಂದೆಯಾಗಬೇಕು. ಆದುದರಿಂದ ಅವಳನ್ನು ವರಿಸಲು ಅವನೂ ತಕ್ಕವನಲ್ಲ. ಯಾರು ಅವಳೊಡನೆ ಅಗ್ನಿಕುಂಡದಲ್ಲಿ ಹುಟ್ಟಿದನೋ ಅವನು ಅವಳಿಗೆ ಸೋದರನಾದ. ಆದುದರಿಂದ ಅವಳನ್ನು ವರಿಸಲು ಆತನೂ ಅರ್ಹನಲ್ಲ. ಯಾರು ಸತ್ತಿದ್ದ ರಾಜಕುಮಾರಿಯಲ್ಲೇ ನೆಟ್ಟ ಮನಸ್ಸುಳ್ಳವನಾಗಿದ್ದು, ಅಗ್ನಿಕುಂಡದ ಪಕ್ಕದಲ್ಲೇ ವಾಸವಾಗಿದ್ದು, ಅವಳನ್ನೇ ಸ್ಮರಿಸುತ್ತ, ಅವಳ ಸಮಾಧಿಯನ್ನು ಪ್ರೇಮದಿಂದ ರಕ್ಷಿಸುತ್ತಿದ್ದನೋ, ಅವನೇ ಆ ರಾಜಪುತ್ರಿಯನ್ನು ವರಿಸಲು ಯೋಗ್ಯನು ಎಂದು ವಿಕ್ರಮಾದಿತ್ಯನು ಉತ್ತರವಿತ್ತನು.

ಇದನ್ನು ಕೇಳಿದ ಬೇತಾಳನು ತಲೆದೂಗುತ್ತ ಮತ್ತೆ ವಟವೃಕ್ಷಕ್ಕೆ ಪರಾರಿಯಾದನು. ಹೀಗೆ ಪರಾರಿಯಾದ ಬೇತಾಳನನ್ನು ನೋಡಿ, ವಿಕ್ರಮಾದಿತ್ಯನು ತಾನೂ ವಟವೃಕ್ಷಕ್ಕೆ ಬಂದು ಅವನನ್ನು ಮತ್ತೆ ಅವನ ಜಟೆಗಳಿಂದಲೇ ಹೆಡೆಮುರಿಕಟ್ಟಿ, ಸಾಹಸಿಯೂ, ಪರಾಕ್ರಮಿಯೂ, ಅಭಿಮಾನಶೀಲನೂ, ಆದ ಅವನು ಬೇತಾಳನನ್ನು ತನ್ನ ಹೆಗಲ ಮೇಲೆ ಹಾಕಿಕೊಂಡು ಸಿದ್ಧನಿದ್ದ ಸ್ಥಳಕ್ಕೆ ಹೊರಟನು. ಈ ರೀತಿ ತನ್ನನ್ನು ಬಿಡದೆ ಹೊತ್ತುಕೊಂಡು ಹೋಗುತ್ತಿರುವ ಆ ರಾಜನನ್ನು ನೋಡಿ, ಆ ಭೂತನಾಯಕನು ಹಿಂದಿನಂತೆಯೇ ಒಂದಾದ ಮೇಲೆ ಒಂದರಂತೆ ಸ್ವಾರಸ್ಯಗಳಾದ ಇಪ್ಪತ್ತುನಾಲ್ಕು ಕಥೆಗಳನ್ನು ಹೇಳಿ ಆತನಿಂದ ಸರಿಯಾದ ಉತ್ತರಗಳನ್ನು ಪಡೆದನು. ಸರ್ವಶಾಸ್ತ್ರ ವಿಶಾರದನೂ ಮೇಧಾವಿಯೂ, ಸದುತ್ತರಗಳನ್ನು ಕೊಟ್ಟವನೂ ಆದ, ವಿಕ್ರಮಾದಿತ್ಯ ನನ್ನು ಕುರಿತು ಬೇತಾಳನು ಎಲೈ ರಾಜನೇ, ನೀನು ಸರ್ವಜ್ಞನಾಗಿರುವೆ. ಸಾಕ್ಷಾತ್ ಬೃಹಸ್ಪತಿಯೇ ಸರಿ. ನಿನಗೆ ಸಮಾನರಾದವರು ಈ ಭೂಮಂಡಲದಲ್ಲೇ ಇಲ್ಲ. ಇನ್ನು ನಿನಗೆ ಕೊನೆಯದಾದ ಒಂದು ಕಥೆಯನ್ನು ಹೇಳುವೆನು ಕೇಳು. ಅದಕ್ಕೆ ನೀನು ಸರಿಯುತ್ತರವನ್ನು ಕೊಟ್ಟು ಕೃತಕೃತ್ಯನಾಗು ಎಂದು ಹೇಳಿ ತನ್ನ ಕಟ್ಟಕಡೆಯ ಕಥೆಯನ್ನು ಹೇಳಲುಪಕ್ರಮಿಸಿದನು.

ಎಲೈ ವಿಕ್ರಮಾದಿತ್ಯ ಮಹಾರಾಜನೇ ಪೂರ್ವಕಾಲದಲ್ಲಿ ವಂಗ ದೇಶದಲ್ಲಿ ಮಂಗಳ ಕರವಾದ ಚಕ್ರಪುರವಿತ್ತು. ಆ ಪುರದಲ್ಲಿ ಅತ್ಯಂತ ಸ್ಫುರದ್ರೂಪಿಯರಾದ ಸುಂದರೀ, ರೂಪವತಿ ಎಂಬ ಇಬ್ಬರು ವೇಶ್ಯೆಯರಾದ ತಾಯಿ ಮಗಳು ಇದ್ದರು. ಅವರು ತಮ್ಮ

ವೃತ್ತಿಯಾದ ವೇಶ್ಯಾ ಧರ್ಮದಲ್ಲಿ ನಿರತರಾಗಿ ವಾಸಿಸುತ್ತಿದ್ದರು. ಅಲ್ಲಿ ಅವರ ಉಪ ಜೀವನವು ಲಾಭಕರವಾಗಿ ಸಾಗಲಿಲ್ಲವಾದುದರಿಂದ, ಬಹು ಕಷ್ಟದಿಂದ ಜೀವನ ನಡೆಸುತ್ತ, ಕಡೆಗೆ ತಮ್ಮ ಜೀವನಸಾಗದೆ ಆ ಪಟ್ಟಣವನ್ನು ಬಿಟ್ಟು ಮತ್ತೊಂದು ಪಟ್ಟಣಕ್ಕೆ ಹೋದರು.

ಹೀಗಿರಲು ರಾಮಾಖ್ಯನೆಂಬ ರಾಜನೊಬ್ಬನು, ಯುದ್ಧದಲ್ಲಿ ಶತ್ರುಗಳಿಂದ ಪರಾಜಿತನಾಗಿ, ತನ್ನ ರಾಜ್ಯ ಮತ್ತು ಪತ್ನಿಯರನ್ನು ಕಳೆದುಕೊಂಡು, ಪುತ್ರನೊಡಗೂಡಿ ತಮ್ಮ ಪಟ್ಟಣವನ್ನು ಬಿಟ್ಟು, ಆ ವಾರಾಂಗನೆಯರು ಹೋದ ಮಾರ್ಗದಲ್ಲೇ ಹೋಗುತ್ತಿದ್ದರು. ಹೀಗೆ ದಾರಿ ಹಿಡಿದು ಹೋಗುತ್ತಿರಲು, ಅವರಿಬ್ಬರೂ ತಮಗೆ ಮೊದಲೇ ಆ ದಾರಿಯಲ್ಲಿ ಹೋದ ಆ ವೇಶ್ಯೆಯರ ಹೆಜ್ಜೆಯ ಗುರುತುಗಳನ್ನು ನೋಡಿ ಮಗನು ತಂದೆಯನ್ನು ಕುರಿತು, ಎಲೈ ಪಿತನೇ ಈ ದಾರಿಯಲ್ಲಿ ಇಬ್ಬರು ಸ್ತ್ರೀಯರು ತಾಯಿ ಮತ್ತು ಮಗಳು ಹೋಗಿರುವರು. ಅವರೀರ್ವರಲ್ಲಿ ಯಾರ ಹೆಜ್ಜೆಯು ದೊಡ್ಡದಾಗಿ ಮೂಡಿರುವುದೋ ಅವಳು ತಾಯಿಯೆಂದು ತೋರುವುದು. ಅವಳನ್ನು ನೀನು ಪರಿಗ್ರಹಿಸು. ಯಾರ ಹೆಜ್ಜೆಯು ಸಣ್ಣದಾಗಿ ಮೂಡಿರುವುದೋ ಅವಳು ಮಗಳೆಂದು ತೋರುವುದು. ಅವಳನ್ನು ನಾನು ಪರಿಗ್ರಹಿಸುವೆನು ಎಂದು ಹೇಳಲು ಅದಕ್ಕೆ ತಂದೆಯು ಹಾಗೆಯೇ ಆಗಲೆಂದು ಹೇಳಿ ದಾರಿಹಿಡಿದು ಮುಂದೆ ಸಾಗುತ್ತಿದ್ದರು.

ಆ ಇಬ್ಬರೂ ಹೀಗೆ ಸಾಗುತ್ತಿರಲು, ತಮಗಿಂತಲೂ ಮೊದಲು ಅದೇ ದಾರಿಯಲ್ಲಿ ಹೋಗುತ್ತಿದ್ದ ಆ ವೇಶ್ಯಾಸ್ತ್ರೀಯರಿಬ್ಬರೂ ದಾರಿಯಲ್ಲಿ ಅವರಿಗೆ ಸಿಕ್ಕಿದರು. ತಂದೆ ಮಕ್ಕಳಿಬ್ಬರೂ ಹಿಂದೆಯೇ ಮಾತನಾಡಿಕೊಂಡಿದ್ದಂತೆ ದೊಡ್ಡ ಹೆಜ್ಜೆಯುಳ್ಳ(ಪಾದಗಳುಳ್ಳ) ವೇಶ್ಯಾಪುತ್ರಿಯನ್ನು ತಾಯಿಯೆಂದು ಭಾವಿಸಿ, ತಂದೆಯು ಪರಿಗ್ರಹಿಸಿದನು. ಸಣ್ಣ ಹೆಜ್ಜೆ (ಪಾದಗಳುಳ್ಳ) ಯುಳ್ಳ ವೇಶ್ಯಾ ಮಾತೆಯನ್ನು ಮಗಳೆಂದು ಭಾವಿಸಿ ಪುತ್ರನು ಪರಿಗ್ರಹಿಸಿದನು. ಈ ತಂದೆ ಮಕ್ಕಳಿಬ್ಬರೂ ಆ ಮಗಳು ತಾಯಂದಿರಲ್ಲಿ ಅನೇಕ ಪುತ್ರರನ್ನು ಪಡೆದರು. ಎಲೈ ರಾಜಶ್ರೇಷ್ಠನೆ ಹೀಗೆ ಹುಟ್ಟಿದ ಮಕ್ಕಳು ಬಹು ಶಾಂತ ವೃತ್ತಿಯುಳ್ಳವರಾಗಿ ಬೆಳೆಯುತ್ತಿದ್ದರು. ಆ ಪುತ್ರರು ಆ ವೇಶ್ಯೆಯರನ್ನೂ, ಆ ರಾಜನನ್ನೂ ಅವನ ಪುತ್ರನನ್ನೂ ಹೇಗೆ ಸಂಬೋಧಿಸಿ ಕರೆಯಬೇಕು. ನೀನು ಮಹಾ ಬುದ್ಧಿವಂತನಾದುದರಿಂದ ಇದಕ್ಕೆ ಸದುತ್ತರನೀಡೆಂದು ಭೂತಾಧಿಪತಿಯಾದ ಬೇತಾಳನು ವಿಕ್ರಮಾದಿತ್ಯನನ್ನು ಕೇಳಿದನು. ಅವನು ಈ ಶಾಸ್ತ್ರ ವಿರುದ್ಧವಾದ ಸಂಬಂಧವನ್ನು ಯೋಚಿಸಿ ಏನೂ ತಿಳಿಯದೆ ಸಂದೇಹವುಳ್ಳವನಾಗಿ ಆ ಬೇತಾಳನನ್ನು ಹೊತ್ತು ಕೊಂಡು ಮೌನದಿಂದ ಮಾರ್ಗ ಕ್ರಮಿಸುತ್ತಿದ್ದನು.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿ ಬ್ರಹ್ಮನಾರದ ಸಂವಾದದ ಉತ್ತರ ಖಂಡದ ದೇವಾಂಗ ಚರಿತ್ರೆಯಲ್ಲಿ ವಿಕ್ರಮಾದಿತ್ಯೋಪಾಖ್ಯಾನದಲ್ಲಿ ಬೇತಾಳ ಪಂಚವಿಂಶತಿ ಕಥಾ ಕಥನವೆಂಬ ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿದುದು.

ಇಪ್ಪತ್ತೈದನೆಯ ಅಧ್ಯಾಯ

ಬೇತಾಳ ಶಾಪವಿಮೋಚನೆ

ಸೂತನೆನ್ನುತ್ತಾನೆ. ಈ ರೀತಿ ವಿಕ್ರಮಾದಿತ್ಯನು ಬೇತಾಳನನ್ನು ಹೆಗಲಮೇಲೆ ಹೇರಿಕೊಂಡು ಗಾಢಾಂಧಕಾರದಿಂದ ಕೂಡಿದ ಆ ಕಾನನದಲ್ಲಿ ದೂರ ದೂರ ಮಾರ್ಗ ಕ್ರಮಿಸುತ್ತಿರಲು ಆಗ ತಂತ್ರೀಲಯದಿಂದ ಕೂಡಿದ ಮಧುರವಾದ, ಕೇಳುವವರ ಕಿವಿಗೆ ಇಂಪಾದ, ಮನವನ್ನಾಕರ್ಷಿಸುವ ದಿವ್ಯವಾದ ಸುಶ್ರಾವ್ಯವಾದ ನಾದವೊಂದನ್ನು ಕೇಳಿದನು. ನಾದಕೋವಿದನಾದ ಆ ವಿಕ್ರಮಾದಿತ್ಯನು, ಆ ಘೋರಾರಣ್ಯದಲ್ಲಿ ತನಗೆ ಕೇಳಿಸಿದ ನಾದಮಾಧುರ್ಯದಿಂದ ಆಶ್ಚರ್ಯಪಟ್ಟು ಆಹಾ ಈ ಸಂಗೀತದ ಮಾಧುರ್ಯ ವೆಷ್ಟು? ಈ ನಡು ರಾತ್ರಿಯಲ್ಲಿ ಯಾವ ಪುರುಷನು ಅಥವಾ ಸ್ತ್ರೀಯು ಹಾಡುತ್ತಿರ ಬಹುದು! ತಿಳಿಯದಲ್ಲಾ ಎಂದು ಆಲೋಚಿಸುತ್ತ ನಾದಮಾಧುರ್ಯವನ್ನು ಸವಿಯುತ್ತ, ಸುತ್ತಲೂ ನೋಡುತ್ತ, ಹಾಡುತ್ತಿರುವವರಾರೆಂಬುದನ್ನು ಕಾಣಲು ಕುತೂಹಲದಿಂದ ಮುಂದೆ ಮುಂದೆ ಬೇಗಬೇಗ ಹೋಗುತ್ತಿರಲು, ಒಂದು ದೊಡ್ಡ ಆಗಲವಾದ ಶಿಲಾಸನದ ಮೇಲೆ ಕುಳಿತು ಮಂಜುಳ ವೀಣೆಯನ್ನು ಕೈಯಲ್ಲಿ ಹಿಡಿದು ವೀಣಾಪಾಣಿಯಾದ, ಸರಸ್ವತಿಯಂತೆ ಈಶ್ವರ ಸ್ತುತಿಯನ್ನು ಸುಸ್ವರದಿಂದ ಹಾಡುತ್ತಿರುವ ಹದಿನಾರುವರುಷ ಪ್ರಾಯದ ಒಬ್ಬ ಸ್ತ್ರೀಯನ್ನು ಕಂಡನು.

ರಾಜನು ಅವಳ ಹತ್ತಿರ ಬಂದು, ಅವಳನ್ನು ತನ್ನ ತುಂಬುಗಣ್ಣುಗಳಿಂದ ದಿಟ್ಟಿಸಿ ನೋಡಿ, ಅವಳ ಲಾವಣ್ಯಕ್ಕೆ ಮೋಹಿತನಾಗಿ ಮನಸೋತು ಅವಳನ್ನು ಯುಕ್ತಿಯುಕ್ತ ವಾದ ಮೃದುವಾದ ಮಾತುಗಳಿಂದ ಎಲೈ ವೀಣಾಗಾನವಿಶಾರದಳಾದ ಪದ್ಮಾಕ್ಷಿಯೇ, ನಾರೀಮಣಿಯೇ, ಮಾತಂಗಿಯಂತೆ ವೀಣಾವಾದನ, ಗಾನಪ್ರವೀಣೆಯಾದ ನೀನಾರು? ಸುಂದರಾಂಗಿಯಾದ ನೀನು ಸರಸ್ವತಿಯೇ? ಕಚ್ಛಪವೀಣಾಗಾನಲೋಲೆಯಾದ ಲಕ್ಷ್ಮಿಯೇ? ಮನೋಹರಗಳಾದ ಭುಜಗಳುಳ್ಳ ಕಂಬುಕಂಠಿಯೇ, ಮತ್ತಗಾಮಿನಿಯೇ, ರಂಭೋರುವೇ, ಬಿಂಬೋಷ್ಠೆಯೇ, ಕಮಲಮುಖಿಯೇ, ನೀನು ಶಚಿಯೋ, ನೃತ್ಯ ಗಾನವಿಶಾರದಳಾದ ದೇವಲೋಕದ ಅಪ್ಸರೆಯಾದ ಊರ್ವಶಿಯೋ, ನೀನಾರು? ಚಕೋರಾಕ್ಷಿಯೇ ನಿನ್ನ ಮುಖವು ಚಂದ್ರನನ್ನು ಧಿಕ್ಕರಿಸುವುದು. ದಂತಗಳು ದಾಡಿಮ ಬೀಜಗಳನ್ನು ತಿರಸ್ಕರಿಸುವುವು. ನಿನ್ನ ನಡುವು ಸಿಂಹದ ನಡುವಿನಂತೆ ಕೃಶವಾಗಿ ಮುಷ್ಟಿಯಹಿಡಿಯುಷ್ಟಿರುವುದು. ನಿನ್ನ ಗಾನವನ್ನು ಕೇಳಿ ಹೆಣ್ಣು ಚಿಗರೆಗಳು ಒಂದು ಹೆಜ್ಜೆಯನ್ನೂ ಸಹ ಮುಂದಕ್ಕೆ ಇಡುತ್ತಿಲ್ಲ. ಒಣಗಿದ ವೃಕ್ಷಗಳು ನಿನ್ನ ಗಾನಕ್ಕೆ ಅಲುಗಾಡಿ ಚಿಗುರುತ್ತಿರುವುವು. ನಿನ್ನ ಹೆಸರೇನು? ನಿನ್ನ ತಂದೆ ಯಾರು? ಮತ್ತಕಾಮಿನಿ. ನಿನ್ನ ಪತಿಯಾರು? ಸುಂದರಾಂಗೀ, ನನಗೆ ಉತ್ತರ ಕೊಡು.

ಎಲೈ ಮೀನಾಕ್ಷೀ ಯಾವಲೋಕದಿಂದ ನೀನು ಧರೆಗೆ ಇಳಿದು ಬಂದಿರುವೆ? ಲೋಕ ಕರ್ತನಾದ ಈಶ್ವರನು ನಿನ್ನನ್ನು ಸೃಷ್ಟಿಸಿ ಮುಂದೆ ನಿನ್ನಂಥವಳನ್ನು ಸೃಷ್ಟಿಸಲಾಗದೆ ಸೃಷ್ಟಿ ಮಾಡುವುದನ್ನೇ ಬಿಟ್ಟಿರಬೇಕು. ಸೌಂದರ್ಯನಿಧಿಯೂ, ಸರ್ವವಿದ್ಯಾವಿಶಾರದೆಯೂ ಆದ ಈ ನಿನ್ನ ಸೌಂದರ್ಯವನ್ನು ವರ್ಣಿಸಲು ಬ್ರಹ್ಮನಿಗೂ, ಶಿವನಿಗೂ, ವಿಷ್ಣುವಿಗೂ ಸಹ ಸಾಧ್ಯವಿಲ್ಲ. ನೀನಾರು ? ನಿಜಹೇಳು. ಎಂದು ರಾಜನು ಕೇಳಿದನು.

ರಾಜನ ಈ ಮಾತನ್ನು ಕೇಳಿ ಬುದ್ಧಿವಂತೆಯಾದ ಆ ಯಕ್ಷಿಣಿಯು ಪುರುಷ ಶ್ರೇಷ್ಠನೇ ನಾನು ಸಿಂಧೂ ದೇಶದ ರಾಜನ ಪುತ್ರಿ. ನನ್ನ ಹೆಸರು ದೇವದತ್ತೆ. ನಾನು ಮಹಾ ಪರಾಕ್ರಮಶಾಲಿಯಾದ ಪುಷ್ಪದಂತ ರಾಜನ ಪತ್ನಿ. ಶೃತಕೀರ್ತಿ ರಾಜನ ಸೊಸೆ. ನನ್ನ ಸ್ಥಳ ಹೇಮವತೀ ಪಟ್ಟಣ. ನನ್ನ ಪತಿ ಶಿವನ ಶಾಪದಿಂದ ಬೇತಾಳನಾಗಿರುವನು. ನಾನು ಅವನ ವಿಯೋಗವನ್ನು ಸಹಿಸಲಾರದೆ ಅವನನ್ನು ಹುಡುಕಿಕೊಂಡು ಈ ರೀತಿ ಅಲೆಯು ತ್ತಿರುವೆನು. ಮಹಾಭಾಗಾ, ನಾನು ಅವನನ್ನು ಸಮಾಗಮ ಮಾಡುವ ಕಾಲ ಎಂದು ಬರುವುದೋ ಎಂದು ಎದುರು ನೋಡುತ್ತಾ ಹಗಲಿನಲ್ಲಿ ಹೆಣ್ಣು ಚಿಗರೆಯಾಗಿ ರಾತ್ರಿಯಲ್ಲಿ ಈ ಯಕ್ಷಿಣೀ ರೂಪದಿಂದಿರುವೆನು. ನನ್ನ ಪತಿಯ ಮುಖಾವಲೋಕನವು ನನಗೆ ಎಂದಾಗುವುದೋ, ಆ ಪಿಶಾಚನಾದ ನನ್ನ ಪತಿಯು ಎಂದು ನನ್ನ ಮುಖವನ್ನು ನೋಡುವನೋ, ಅಂದು ನಮ್ಮಿಬ್ಬರಿಗೂ, ಈ ದುಷ್ಕರವಾದ ಶಾಪವಿಮೋಚನೆ ಯಾಗುವುದೆಂದು ಕರುಣಾಮಯಾದ ಪರಮಾತ್ಮನು ನಮಗೆ ಶಾಪಕೊಟ್ಟ ಕಾಲದಲ್ಲಿ ಅಪ್ಪಣೆಕೊಟ್ಟಿರುವನು.

ನಾನು, ನನ್ನ ಪತಿಯಿರುವ ಸ್ಥಳವನ್ನೂ, ನನ್ನ ಪತಿಯನ್ನೂ ಕಾಣಲು ಶಕ್ತ ಳಲ್ಲ. ಶಾಪಗ್ರಸ್ತನಾದ ನನ್ನ ಪತಿಯು ನನ್ನನ್ನು ತಿಳಿಯಲು ಶಕ್ತನಲ್ಲ. ಅದು ಪರಮಾತ್ಮನ ಶಾಪ ಮತ್ತು ಆಜ್ಞೆ. ನೃಪೋತ್ತಮನಾದ ವಿಕ್ರಮಾದಿತ್ಯನನ್ನು ನಾನು ಕಾಣುವುದು ಹೇಗೆ ? ಮಹಾ ಭುಜನಾದ ಅವನಿಂದ ನಮ್ಮಿಬ್ಬರ ಶಾಪವೂ ವಿಮೋಚನೆ ಯಾಗುವುದೆಂಬ ಪರಮಾತ್ಮನ ವಾಕ್ಯವು ಸುಳ್ಳಾಗುವುದೇ ? ಎಂದಿಗೂ ಸುಳ್ಳಾಗದು. ಆ ವಿಕ್ರಮಾದಿತ್ಯನಿಂದಲೇ ನಮ್ಮ ಶಾಪವಿಮೋಚನೆಯಾಗಿ ನಮ್ಮ ಉದ್ಧಾರವಾಗಬೇಕು. ಇದು ನನ್ನ ವಿಚಾರ. ಇನ್ನು ನಿನ್ನ ವಿಚಾರವನ್ನು ತಿಳಿಸು. ಪುರುಷಶ್ರೇಷ್ಠನೇ ನೀನಾರು ? ನಿನ್ನ ಹೆಸರೇನು ? ನೀನು ದೇವನೋ, ಸರ್ವಶಾಸ್ತ್ರ ವಿಶಾರದನಾದ ಬ್ರಾಹ್ಮಣನೋ, ಇಂದ್ರನೋ, ವಿಷ್ಣುವೋ, ಸರಸ್ವತೀಪತಿಯಾದ ಬ್ರಹ್ಮನೋ, ರಾಜ ಶಿಖಾಮಣಿಯಾದ ವಿಕ್ರಮಾದಿತ್ಯನೋ, ಯಾರೆಂದು ? ತಿಳಿಸು. ಮಹಾಬಲ ಶಾಲಿಯೇ ಈ ಮಧ್ಯರಾತ್ರಿಯಲ್ಲಿ ಏನು ಕಾರಣ ಇಲ್ಲಿಗೆ ಬಂದಿರುವೆ ಎಂದಳು.

ರಾಜನು ಅದನ್ನು ಕೇಳಿ ಹಸನ್ಮುಖನಾಗಿ ಎಲೈ ನಾರೀಮಣಿಯೇ ನಾನು ಉಜ್ಜಯಿನೀ ಪಟ್ಟಣಮೊಡೆಯನು. ನನ್ನ ಹೆಸರು ವಿಕ್ರಮಾದಿತ್ಯ. ಸುಂದರೀ

ನಾನು ಕಾಲಪುರುಷನೆಂಬ ಹೆಸರಿನ ಸಿದ್ಧನಿಂದ ಬೇತಾಳನನ್ನು ಕರೆತರಲು ಆಜ್ಞಪ್ತನಾಗಿ ಮಹೋನ್ನತವಾದ ಶಾಖೆಗಳುಳ್ಳ ಆ ವಟವೃಕ್ಷಕ್ಕೆ ಹೋಗಿ ಅಲ್ಲಿದ್ದ ಭೂತನಾಥನಾದ ಬೇತಾಳನನ್ನು ನೋಡಿ, ಸರಸಮನೋಹರಗಳಾದ ಕಥೆಗಳನ್ನು ಹೇಳುವುದರಲ್ಲಿ ನಿಸ್ಸೀಮನಾದ, ಆ ಮಹಾಮಾಯಾವಿಯಾದ ಬೇತಾಳನನ್ನು ಜಯಿಸಿ, ಅವನ ಕಥೆಗಳಿಗೆಲ್ಲ ಯುಕ್ತಿಯುಕ್ತಗಳಾದ ಸರಿಯಾದ ಉತ್ತರಗಳನ್ನು ಕೊಟ್ಟು, ಅಲ್ಲಿಂದ ಆ ಭೇತಾಳನೊಡಗೂಡಿ, ಕಾಲಪುರುಷಸಿದ್ಧನ ಬಳಿಗೆ ಹೊರಟಿರುವೆನೆಂದು ಹೇಳಿದನು.

ರಾಜನ ಈ ಮಾತನ್ನು ಕೇಳಿ, ನಾರೀಮಣಿಯಾದ ದೇವದತ್ತೆಯು ವಿಸ್ಮಿತಳಾಗಿ, ನಗುಮುಖದಿಂದ, ಎಲೈ ರಾಜಾ, ಭೂತ ಭೇತಾಳನಾಯಕನಾದ, ಆ ನನ್ನ ಪತಿಯು ಎಲ್ಲಿರುವನು. ನೀನು ಅವನನ್ನು ಕರೆದುತಂದಿರುವೆಯಾದರೆ ನನ್ನ ಮನಕ್ಕೆ ಆನಂದ ದಾಯಕನಾದ ಅವನನ್ನು ಬೇಗ ತೋರಿಸು. ಅವನ ಅಗಲುವಿಕೆಯನ್ನು ಇನ್ನು ನಾನು ಹೆಚ್ಚು ತಡೆಯಲಾರೆ ನಾನು ಅವನನ್ನು ನೋಡಲು ಬಹಳ ಕಾತುರಳಾಗಿದ್ದೇನೆ ಎಂದಳು.

ಆಗ ರಾಜನು ಜಡೆಗಳಿಂದ ಬಂಧಿಸಲ್ಪಟ್ಟಿದ್ದ ಮಹಾಮಾಯಾವಿಯಾದ, ತನ್ನ ವಿಶಾಲವಾದ ಬೆನ್ನಮೇಲಿದ್ದ ಆ ಭೇತಾಳನನ್ನು ಅವಳಿಗೆ ತೋರಿಸಿದನು. ಅಸಿತೇಕ್ಷಣೆ ಯಾದ ಆ ನಾರೀಮಣಿಯು ದಿವ್ಯವಿಮಾನದಲ್ಲಿ ಕುಳಿತ ದೇವತೆಯಂತೆ ಒಪ್ಪುತ್ತಿದ್ದ, ರಾಜನ ಬೆನ್ನಿನ ಮೇಲಿದ್ದ, ತನ್ನ ಪತಿಯನ್ನು ನೋಡಿದಳು. ಆ ಭೇತಾಳನೂ ಸುಂದರಾಂಗಿಯಾದ ಮನೋಹರವಾದ, ಮಂದಹಾಸ ಮುಖವುಳ್ಳ, ತನ್ನ ಪತ್ನಿ ದೇವದತ್ತೆಯನ್ನು ನೋಡಿ ಮಹಾದಾನಂದಪಟ್ಟನು. ಈ ರೀತಿ ಯಕ್ಷಿಣಿ, ಬೇತಾಳರ ಪರಸ್ಪರ ಅವಲೋಕನದಿಂದ ಅವರಿಬ್ಬರೂ ಶಾಪವಿಮೋಚಿತರಾಗಿ, ಆ ರೂಪಗಳನ್ನು ತ್ಯಜಿಸಿ ದಿವ್ಯ ದೇಹಗಳನ್ನು ಪಡೆದರು.

ಆ ವೇಳೆಗೆ ಕೈಲಾಸದಿಂದ ಒಂದು ದಿವ್ಯವಿಮಾನವು ಪ್ರಮಥಾದಿ ಭೂತಗಣಗಳು ಮತ್ತು ಇತರ ದೇವಗಣಯುಕ್ತವಾಗಿ ಅವರನ್ನು ಕರೆದೊಯ್ಯಲು ಅಲ್ಲಿಗೆ ಬಂದಿತು. ಅವರು ತಮ್ಮನ್ನು ಕರೆದುಕೊಂಡು ಹೋಗಲು ಆ ವಿಮಾನದಲ್ಲಿ ಬಂದ ದೇವಗಂಧರ್ವ ರಿಂದ ಸೇವಿತರಾಗಿ, ಇಬ್ಬರೂ ದಿವ್ಯಾಂಬರಧಾರಿಗಳಾಗಿ, ದಿವ್ಯ ಚಂದನವನ್ನು ಲೇಪಿಸಿಕೊಂಡು, ದಿವ್ಯಾಭರಣ, ದಿವ್ಯ ಪುಷ್ಪಮಾಲಾಲಂಕೃತರಾಗಿ, ಪ್ರಕಾಶಮಾನ ವಾದ ಆ ದಿವ್ಯವಿಮಾನಾರೋಹಣ ಮಾಡಿದರು. ತಮ್ಮ ದೇಹಕಾಂತಿಯಿಂದ ದಶದಿಕ್ಕುಗಳನ್ನೂ ಬೆಳಗುತ್ತ ಒಬ್ಬರ ಮುಖವನ್ನು ಒಬ್ಬರು ನೋಡುತ್ತ ತೃಪ್ತಿಗೊಳ್ಳದೆ ಪರಸ್ಪರ ಮಾತನಾಡುತ್ತಾ ಪೂರ್ವ ಸಂಗತಿಯನ್ನು ತಮ್ಮತಮ್ಮಲ್ಲೇ ಜ್ಞಾಪಕಮಾಡಿ ಕೊಳ್ಳುತ್ತ, ದೇವತೆಗಳಿಂದಲೂ, ವಿದ್ಯಾಧರರ ಸಮೂಹಗಳಿಂದಲೂ ಸ್ತುತಿಸಿಕೊಳ್ಳುತ್ತ, ಮಧುರಸ್ವರವುಳ್ಳ ವಿಶ್ವಾವಸು ಮೊದಲಾದ ಗಂಧರ್ವಗಾಯಕರು ತಮ್ಮ ಚರಿತ್ರೆ ಯನ್ನು ಗಾನಮಾಡುತ್ತಿರಲು ಆ ವಿಮಾನದಲ್ಲಿ ಒಪ್ಪುತ್ತಿದ್ದರು. ಆ ಸಮಯದಲ್ಲಿ

ಅಪ್ಸರೆಯರು ದಿವ್ಯಗಾನಮಾಡಿ ನರ್ತನ ಮಾಡುತ್ತಿರಲು, ದೇವದುಂದುಭಿಗಳು ಮೊಳಗಿದವು. ಅವರಿಬ್ಬರ ಮೇಲೆ ಪುಷ್ಪವೃಷ್ಟಿಯಾಯಿತು. ಶಾಪವಿಮೋಚಿತರಾದ ದೇವಾಂಗ ದೇವದತ್ತೆಯರನ್ನು ಕಂಡ ಸಮಸ್ತ ಪ್ರಮಥರೂ ಮಹಾನಂದಿತರಾಗಿ ಸಂತೋಷಪಟ್ಟರು.

ಆಗ ದೇವದತ್ತಾ ಸಮೇತನಾಗಿ ಸೂರ್ಯನಂತೆ ಹೊಳೆಯುತ್ತಿರುವ ವಿಮಾನಾರೂಢನಾದ ದೇವಾಂಗನನ್ನು ನೋಡಿ ವಿಕ್ರಮಾದಿತ್ಯನು, ಅತ್ಯಾಶ್ಚರ್ಯಪಟ್ಟು ಇದೇನಿರಬಹುದೆಂದು ಯೋಚಿಸುತ್ತಾ ಏನೂ ತಿಳಿಯದವನಾಗಿ ದಿಙ್ಮೂಢನಾಗಿ ಮೂಕನಂತೆ ಸ್ತಬ್ಧನಾಗಿ, ದಿಗ್ಭ್ರಾಂತನಾಗಿ ಸುತ್ತಮುತ್ತಲೂ ನೋಡುತ್ತಿದ್ದನು. ಆಗ ವಾಕ್ಚತುರನಾದ, ದೇವದತ್ತಾ ಸಮೇತನಾದ ದೇವಾಂಗನು, ಆ ರಾಜನನ್ನು ನೋಡಿ, ಎಲೈ ರಾಜೋತ್ತಮಾ ಮಹಾಬಲಪರಾಕ್ರಮಿಯೇ ವಿಕ್ರಮಾದಿತ್ಯನೇ, ಹೀಗೇಕೆ ವಿಸ್ಮೃತನಾಗಿರುವೆ? ನಮ್ಮಿಬ್ಬರನ್ನೂ ಈ ದುಸ್ತರವಾದ ಶಾಪಸಮುದ್ರದಿಂದ ನೌಕಾ ರೂಪನಾದ ನೀನು ಪಾರುಮಾಡಿದೆ. ನೀನು ಮಾಡಿದ ಮಹೋಪಕಾರಕ್ಕೆ ಪ್ರತ್ಯುಪಕಾರ ಮಾಡಲು ನಮಗೆ ಶಕ್ತಿಯಿಲ್ಲ. ಆದರೂ ನಿನ್ನ ಮನೋರಥವೇನು? ತಿಳಿಸು. ಎಲೈ ಮಹಾಭಾಗನೇ ನಿಶ್ಚಯವಾಗಿ ಅದನ್ನು ನೆರವೇರಿಸುವೆನು, ಹೇಳು ಎಂದು ಪತ್ನೀಸಮೇತನಾದ ದೇವಾಂಗನು ಪ್ರೇಮಾತಿಶಯದಿಂದ ನುಡಿದನು.

ಮೇಧಾವಿಯಾದ ವಿಕ್ರಮಾದಿತ್ಯನು ಪುನಃಪುನಃ ದೇವಾಂಗನಿಗೆ ನಮಸ್ಕರಿಸಿ, ಶಿವಭಕ್ತಾಗ್ರಣಿಯಾದ ದೇವಾಂಗನೇ, ನೀನು ನಿಜವಾಗಿ ನನ್ನಲ್ಲಿ ಸಂತುಷ್ಟನಾಗಿರುವೆಯಾದರೆ, ಎಲೈ ಬುದ್ಧಿಶಾಲಿಯೇ ದೇವಗಣವಂದಿತನಾದ ನಿನ್ನನ್ನು, ನಾನು ಯಾವಾಗ ಸ್ಮರಿಸುವೆನೋ ಆಗ ನೀನು ಈ ಬೇತಾಳ ರೂಪದಲ್ಲೇ ನನಗೆ ದರ್ಶನವಿತ್ತು. ನಾನು ಹೇಳುವ ಕಾರ್ಯವನ್ನು ನೀನು ನೆರವೇರಿಸಿಕೊಡಬೇಕು. ಇದೇ ನನ್ನ ಮನೋಭೀಷ್ಟವು ಎಂದು ಪ್ರಾರ್ಥಿಸಿದನು. ಅದಕ್ಕೆ ದೇವಾಂಗನು ಹಾಗೆಯೇ ಆಗಲಿ. ನಿನ್ನ ಮನೋಭೀಷ್ಟವು ನೆರವೇರುವುದು ಎಂದನು. ಇದನ್ನು ಕೇಳಿ ವಿಕ್ರಮಾದಿತ್ಯನು ಅತ್ಯಾನಂದಿತನಾಗಿ, ಹೋಗಿ ಬರುತ್ತೇನೆಂದು ದೇವಾಂಗನಿಗೆ ಹೇಳಿ ಪ್ರಯಾಣೋನ್ಮುಖನಾದನು. ಮತ್ತೆ ದೇವದತ್ತೆಯಿಂದ ಪ್ರೇರೇಪಿಸಲ್ಪಟ್ಟ ದೇವಾಂಗನು, ತ್ರಿಲೋಕ ಸುಂದರನಾದ ಆ ರಾಜನನ್ನು ಕುರಿತು ಎಲೈ ರಾಜೇಂದ್ರ ಕಾಲಪುರುಷಸಿದ್ಧನು ನಿನ್ನನ್ನು ಕಾಳಿಕಾದೇವಿಗೆ ಬಲಿಕೊಡಲುದ್ಯುಕ್ತನಾಗಿರುವನು. ಎಲೈ ಬುದ್ಧಿವಂತನೇ ನೀನು ಬಹು ಎಚ್ಚರವಾಗಿರು ಎಚ್ಚರವಾಗಿರು.

ಅವನು ನಿನಗೆ ಏನು ಹೇಳಿದರೂ ಅದಕ್ಕೆ ಪ್ರತಿಯಾಗಿ ನೀನು ಹೇಳು. ಆ ಸಿದ್ಧನು ನಿನಗೆ ಸ್ನಾನಮಾಡೆಂದು ಹೇಳಿದರೆ, ಅವನಿಗೆ, ಮಹಾತ್ಮಾ ಮೊದಲು ನೀನು ಸ್ನಾನ ಮಾಡೆಂದು ಹೇಳು. ದೇವಿಗೆ ನಮಸ್ಕರಿಸೆಂದು ಹೇಳಿದರೆ ಮೊದಲು ನೀನು ನಮಸ್ಕರಿ

ಸೆಂದು ಅವನಿಗೆ ಹೇಳು. ಆ ಕಾಲಪುರುಷನು ದೇವಿಗೆ ನಮಸ್ಕರಿಸಲು ತಲೆಬಗ್ಗಿಸಿದಾಗ ಎಲೈ ನೃಪೋತ್ತಮನೇ ನಿನ್ನ ಚಂದ್ರಹಾಸಖಡ್ಗದಿಂದ ಅವನ ಶಿರಸ್ಸನ್ನು ಬೇಗ ಕತ್ತರಿಸಿ ಕಾಳಿಕಾದೇವಿಗೆ ಬಲಿಯಾಗಿ ಅರ್ಪಿಸು. ಇದರಿಂದ ದೇವಿಯು ನಿನಗೆ ಪ್ರತ್ಯಕ್ಷಳಾಗುವಳು. ಆ ಶಂಕರೀದೇವಿಯು ಬೇತಾಳರೂಪಿಯಾದ ನನ್ನನ್ನು ಸದಾ ನಿನ್ನ ವಶವರ್ತಿಯನ್ನಾಗಿ ಮಾಡುವಳು. ಭಕ್ತಚಿಂತಾಮಣಿಯಾದ ಕಾಳಿಕೆಯು ನಿನಗೆ ಚಕ್ರವರ್ತಿ ಪದವಿಯನ್ನು ನಿಶ್ಚಯವಾಗಿ ದಯಪಾಲಿಸುವಳು. ಹೀಗೆಂದು ದೇವಾಂಗನು ಹೇಳಿ ದೇವದತ್ತಾ ಸಮೇತನಾಗಿ ಹೋಗಿಬರುತ್ತೇನೆಂದು ಹೇಳಿ ವಿಕ್ರಮಾದಿತ್ಯನನ್ನು ಬೀಳ್ಕೊಂಡು ತಾನು ಪತ್ನೀಸಮೇತನಾಗಿ ಕೈಲಾಸಕ್ಕೆ ತೆರಳಿದನು.

ಇತ್ತ ವಿಕ್ರಮಾದಿತ್ಯನು ಕಾಲಪುರುಷ ಸಿದ್ಧನಿರುವ ಸ್ಥಳಕ್ಕೆ ಶೀಘ್ರವಾಗಿ ಹೊರಟು ಬಂದನು. ಕಾಲಪುರುಷ ಸಿದ್ಧನು ವಿಕ್ರಮಾದಿತ್ಯನೊಬ್ಬನೇ ಬಂದುದನ್ನು ನೋಡಿ ಚಕಿತನಾಗಿ ಭೇತಾಳನೆಲ್ಲಿ. ಬೇತಾಳನೆಲ್ಲಿ ಎಂದು ಆತುರದಿಂದ ಕೇಳಿದನು. ಹೀಗೆ ಕೇಳುತ್ತಿರುವ ಸಿದ್ಧನನ್ನು ರಾಜನು ನೋಡಿ ಮಂದಸ್ಮಿತನಾಗಿ ಮಹಾತ್ಮನಾದ ಭೇತಾಳನ ವೃತ್ತಾಂತವನ್ನೆಲ್ಲ ಹೇಳಿದನು. ಇದನ್ನು ಕೇಳಿದ ಕಾಲಪುರುಷನು ಅಸಂತುಷ್ಟನಾಗಿ ಅವಸರವಸರವಾಗಿ ರಾಜನೊಡನೆ ಕಾಳಿಕಾದೇವಿಯ ಗುಡಿಗೆ ಬಂದನು. ಕಾಲಪುರುಷನು ಗುಡಿಯೊಳಗೆ ಬಂದವನೇ ಆ ವಿಕ್ರಮಾದಿತ್ಯನನ್ನು ದೇವಿಗೆ ಬಲಿಕೊಡಲು ನಿಶ್ಚಯಿಸಿ ಆ ದೇವಿಯು ವರದಿಂದ ತನ್ನ ಇಷ್ಟಾರ್ಥವನ್ನು ಪೂರೈಸಿಕೊಳ್ಳಲಿಚ್ಛಿಸಿ, ಆ ರಾಜೇಂದ್ರನನ್ನು ನೋಡಿ ಸ್ನಾನಮಾಡಿಬಾರೆಂದು ಹೇಳಿದನು. ವಿಕ್ರಮಾದಿತ್ಯನು ದೇವಾಂಗನು ಹೇಳಿದ್ದ ಮಾತನ್ನು ನೆನಪಿನಲ್ಲಿಟ್ಟುಕೊಂಡಿದ್ದು ಎಲೈ ಸಿದ್ಧೇಶನೇ, ಮೊದಲು ನೀನು ಸ್ನಾನ ಮಾಡೆಂದು ಹೇಳಿದನು. ಅದರಂತೆ ಕಾಲಪುರುಷನು ತಾನೇ ಮೊದಲು ಸ್ನಾನಮಾಡಿ ಶುದ್ಧನಾಗಿ ಅಹ್ನಿಕಗಳನ್ನು ತೀರಿಸಿಕೊಂಡು, ತೇಜಸ್ವಿಯಾಗಿ, ದೇದೀಪ್ಯಮಾನನಾಗಿದ್ದನು.

ನಂತರ ವಿಕ್ರಮಾದಿತ್ಯನು ಆತನ ಅಪ್ಪಣೆಯಂತೆ, ಸ್ನಾನ ಮಾಡಿ, ಶುದ್ಧನಾಗಿ ಆಹ್ನಿಕಗಳನ್ನು ತೀರಿಸಿಕೊಂಡು, ಕಾಂತಿಯಿಂದ ಪ್ರಕಾಶಿಸುತ್ತಿದ್ದನು. ಸಿದ್ಧನು ಹೇಳಿದ ಎಲ್ಲಾ ಕಾರ್ಯಗಳನ್ನೂ ಆ ವಿಕ್ರಮಾದಿತ್ಯನು ಆ ಸಿದ್ಧನನ್ನೇ ಮೊದಲು ಮಾಡೆಂದು ಹೇಳುತ್ತಿದ್ದನು. ಕೊನೆಯದಾಗಿ ಕಾಲಪುರುಷನು ಖಡ್ಗಪಾಣಿಯಾಗಿ, ರಾಜನಿಗೆ, ದೇವಿಗೆ ನಮಸ್ಕರಿಸೆಂದು ಹೇಳಿದನು. ಆಗ ವಿಕ್ರಮಾದಿತ್ಯನು, ಕಾಲ ಪುರುಷನಿಗೆ ದೇವಾ ನೀನೇ ಮೊದಲು ನಮಸ್ಕರಿಸೆಂದು ಹೇಳಿದನು. ಹಾಗೆಯೇ ಆಗಲೆಂದು ಆ ಕಾಲಪುರುಷನು ದೇವಿಗೆ ನಮಸ್ಕರಿಸಿ, ಸಾಷ್ಟಾಂಗ ಪ್ರಣಾಮ ಮಾಡಲು ಬಗ್ಗಿದಾಗ ಆ ವಿಕ್ರಮಾದಿತ್ಯನು ಕ್ಷಣಾರ್ಧದಲ್ಲಿ ಮಿಂಚಿನಂತೆ ತನ್ನ ಚಂದ್ರಹಾಸ ಖಡ್ಗವನ್ನು ತನ್ನ ಒರೆಯಿಂದ ಹಿರಿದು ಝುಳಪಿಸಿ ಆ ಕಾಳಿಕಾದೇವಿಗೆ, ಅವನ

ಶಿರಸ್ಸನ್ನು ಕಡಿದು ಬಲಿಯಾಗಿ ಅರ್ಪಿಸಿದನು. ಆಗ ಆಕಾಶದಿಂದ ಪುಷ್ಪವೃಷ್ಟಿಯಾಯಿತು. ದೇವದುಂದುಭಿಗಳು ಮೊಳಗಿದುವು. ಅಪ್ಸರೆಯರು ನರ್ತಿಸಿದರು. ಗಂಧರ್ವರು ಗಾನ ಮಾಡಿದರು. ಸಮಸ್ತ ದೇವತೆಗಳೂ ವಿಕ್ರಮಾದಿತ್ಯನಿಗೆ ಜಯಜಯಕಾರ ಮಾಡಿದರು.

ಭಕ್ತವತ್ಸಲೆಯಾದ ಕಾಳಿಕಾಂಬೆಯು ವಿಕ್ರಮಾದಿತ್ಯನಿಗೆ ಪ್ರತ್ಯಕ್ಷಳಾಗಿ, ರಾಜೋತ್ತಮಾ ನೀನು ಮಹಾಪರಾಕ್ರಮಶಾಲಿಯು. ನಿನಗೆ ಬೇಕಾದ ವರಗಳನ್ನು ಬೇಡಿಕೋ ಈಡೇರಿಸುವೆನು. ನಿನ್ನ ಮನೋಭೀಷ್ಟವೇನು ಕೋರು ಎಂದು ಅಭಯ ಕೊಟ್ಟಳು. ವಿಕ್ರಮಾದಿತ್ಯನು ಸಂತುಷ್ಟಮನಸ್ಕನಾಗಿ ದೇವಿಯನ್ನು ಕುರಿತು ಭಕ್ತಿಯಿಂದ ಭಕ್ತೇಷ್ಟಪ್ರದಾಯಿನಿಯಾದ ದೇವಿಯೇ ನಾನು ಯಾವಾಗ ದೇವಾಂಗನನ್ನು ಸ್ಮರಿಸುವೆನೋ ಆಗ ಅವನು ಬೇತಾಳನಾಗಿ ಪ್ರತ್ಯಕ್ಷನಾಗುವಂತೆ ಅನುಗ್ರಹಿಸು. ಭಕ್ತ ಪರಾಧೀನೆಯೇ ನನಗೆ ಚಕ್ರವರ್ತಿ ಪದವಿಯನ್ನು , ಕರುಣಿಸು. ದೇವಿಯೇ ನಿನಗೆ ನಮಸ್ಕಾರ ಎಂದು ಅಂಜಲೀಬದ್ಧನಾಗಿ ವರಗಳನ್ನು ಪ್ರಾರ್ಥಿಸಿದನು. ಭಕ್ತಕಾಮಧೇನುವಾದ ಆ ದೇವಿಯು ಆವನು ಬೇಡಿದ ವರಗಳನ್ನು ಸಂತೋಷದಿಂದ ದಯಪಾಲಿಸಿ ಅಂತರ್ಧಾನಳಾದಳು. ಹೀಗೆ ವಿಕ್ರಮಾದಿತ್ಯನು ದೇವಿಯಿಂದ ಅನುಗ್ರಹಿಸಲ್ಪಟ್ಟು ಅಪ್ಪಣೆ ಪಡೆದುಕೊಂಡು ಇಷ್ಟಾರ್ಥ ಫಲಪ್ರದನಾಗಿ, ತನ್ನ ಪಟ್ಟಣವಾದ ಉಜ್ಜಯಿನಿಗೆ ಬಂದನು.

ಪುರಜನರೆಲ್ಲರೂ ತಮ್ಮ ರಾಜನು ಕಾಳಿಕಾದೇವಿಯನ್ನು ಮೆಚ್ಚಿಸಿ, ವರ ಪಡೆದಿರುವುದನ್ನು ತಿಳಿದು ಸಂತೋಷಭರಿತರಾಗಿ, ರಾಜನನ್ನು ವೈಭವಪೂರ್ವಕವಾಗಿ ಸಮಸ್ತ ರಾಜಮರ್ಯಾದೆಗಳಿಂದ ಎದುರುಗೊಂಡರು. ಹೀಗೆ ಪುರಜನರಿಂದ ಅಭಿಮಾನಪೂರ್ವಕವಾಗಿ ಆದರಿಸಲ್ಪಟ್ಟ ವಿಕ್ರಮಾದಿತ್ಯನು ವಂದಿಮಾಗಧರಿಂದ ಸ್ತುತ್ಯನಾಗಿ, ಅರಮನೆಯನ್ನು ಪ್ರವೇಶಿಸಿ ರಾಜಸಭೆ ನಡೆಯಿಸಿ ಕುತೂಹಲದಿಂದ ಎಲ್ಲ ಸಂಗತಿಯನ್ನೂ ಪುರಜನರಿಗೆ ತಿಳುಹಿಸಿದನು. ಆ ವಿಕ್ರಮಾದಿತ್ಯನು ಇಂದ್ರದತ್ತವಾದ ಸಿಂಹಾಸನಾರೂಢನಾಗಿ ಸರ್ವರಾಜರಿಂದ ವಂದಿತನಾಗಿ ದೇವೇಂದ್ರನು, ಸ್ವರ್ಗವನ್ನು ಪಾಲಿಸುವಂತೆ ಭೂಮಿಯನ್ನು ಧರ್ಮದಿಂದ ಪಾಲಿಸುತ್ತಿದ್ದನು. ಈ ರೀತಿಯಾಗಿ ವಿಕ್ರಮಾದಿತ್ಯನು ಸತ್ಯಸಂಧನಾಗಿ, ಧರ್ಮದಿಂದ ರಾಜ್ಯವಾಳುತ್ತಿರಲು, ಸಮಸ್ತ ಪ್ರಜೆಗಳೂ ತಮ್ಮ ತಮ್ಮ ಧರ್ಮಗಳಲ್ಲಿ ನಿರತರಾಗಿ, ಸುಖ ಸಂತೋಷಗಳಿಂದ ಇದ್ದರು.

ಬೇತಾಳರೂಪಿಯಾದ ಮಹಾತ್ಮನಾದ ದೇವಾಂಗನ ಮತ್ತು ಅವನ ಪತ್ನಿಯಾದ ದೇವದತ್ತೆಯ ಶಾಪವಿಮೋಚನಾ ರೂಪವಾದ ಈ ಚರಿತ್ರೆಯನ್ನು ಯಾರು ಓದುವರೋ ಯಾರು ಭಕ್ತಿಯಿಂದ ಶ್ರವಣ ಮಾಡುವರೋ, ಅವರಿಗೆ ಭೂತ, ಬೇತಾಳಗಳಿಂದ

ಬಾಧೆಯಾಗುವುದಿಲ್ಲ. ಈ ಚರಿತ್ರೆಯನ್ನು ಯಾರು ಪಠಿಸುವರೋ ಅವರಿಗೆ ಅಣಿ ಮಾದ್ಯಷ್ಟ ಸಿದ್ಧಿಗಳು ನಿಶ್ಚಯವಾಗಿ ಸಿದ್ಧಿಸುವುವು. ಪಾಪನಾಶಕರವಾದೀ ಚರಿತ್ರೆಯನ್ನು, ಯಾರು ಓದುವರೋ, ಕೇಳುವರೋ, ಅವರನ್ನು ಪಾರ್ವತೀಪರಮೇಶ್ವರರು, ಸದಾಕಾಲ ರಕ್ಷಿಸುವರು. ಋಷೀಶ್ವರರೇ ಈ ಪ್ರಕಾರವಾದ ದೇವಾಂಗನ ದಿವ್ಯ ಚರಿತ್ರೆಯನ್ನು ಬ್ರಹ್ಮನು ನಾರದ ಮೊದಲಾದ ಋಷಿಗಳಿಗೆ ಹೇಳಿದನು.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿ ಬ್ರಹ್ಮನಾರದ ಸಂವಾದದ ಉತ್ತರ ಖಂಡದ ದೇವಾಂಗ ಚರಿತ್ರೆಯಲ್ಲಿ ಬೇತಾಳ ಶಾಪವಿಮೋಚನೆ ಎಂಬ ಇಪ್ಪತ್ತ್ಮೂರನೆಯ ಅಧ್ಯಾಯ ಮುಗಿದುದು.

ಇಪ್ಪತ್ತಾರನೆಯ ಅಧ್ಯಾಯ

ವರರುಚಿಯ ಅವತಾರ

ಬ್ರಹ್ಮನು ಹೇಳುತ್ತಾನೆ. ನಾನಾರತ್ನಯುಕ್ತ, ಪುಷ್ಪಭರಿತಗಳಾದ, ಮಂದಾರ, ಪಾರಿಜಾತ, ಸಂತಾನ, ಹರಿಚಂದನಗಳೆಂಬ ಫಲಪುಷ್ಪಭರಿತಗಳಾದ ಕಲ್ಪವೃಕ್ಷಗಳಿಂದಲೂ, ಮತ್ತು ನಾನಾವಿಧವಾದ ವೃಕ್ಷಗಳಿಂದಲೂ, ಶೋಭಿತವಾದ ಉದ್ಯಾನಗಳಿಂದ ಕೂಡಿದುದಾಗಿಯೂ, ನಾರದ, ಅಗಸ್ತ್ಯ, ವಾಲ್ಮೀಕಿ, ಪರಾಶರರೇ ಮೊದಲಾದ ಋಷಿಗಳಿಂದ ಸೇವಿಸಲ್ಪಟ್ಟು, ದೇವದುಂದುಭಿಧ್ವನಿಗಳಿಂದಲೂ ದಿವ್ಯ ಗಾನಗಳಿಂದಲೂ, ಅಪ್ಸರೆಯರ ನಾಟ್ಯಗಳಿಂದಲೂ, ದಿವ್ಯಸ್ತ್ರೀಯರಿಂದಲೂ, ದಿವ್ಯ ಮಂಗಳಸ್ತುತಿಗಳಿಂದಲೂ ಮನೋಹರವಾದ ಮಂಟಪಗಳಿಂದಲೂ, ತುಂಬಿದ್ದು ದಿವ್ಯವಾಗಿ ಶೋಭಿಸುತ್ತಿದ್ದ ಕೈಲಾಸ ಶಿಖರದಲ್ಲಿ ದಿವ್ಯ ಸಿಂಹಾಸನಾರೂಢನಾಗಿ, ಮಂಗಳಕರವಾದ ಶರೀರವುಳ್ಳನಾಗಿ, ಬ್ರಹ್ಮ, ವಿಷ್ಣು, ಮಹೇಂದ್ರಾದಿ ದೇವನಿಕರದಿಂದ ಹಗಲಿರುಳೂ ಸೇವಾ ಸಂಸ್ತೂಯಮಾನನಾಗಿ, ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕನಾಗಿ, ನಾಶರಹಿತನಾಗಿ, ಆದಿತ್ಯಾದಿ ನವಗ್ರಹಗಳಿಂದಲೂ, ಅಷ್ಟವಸುಗಳಿಂದಲೂ, ಸದಾ ಸೇವಿಸಲ್ಪಟ್ಟ ಪಾದಕಮಲಗಳುಳ್ಳವನಾಗಿ, ಸರ್ವಾಭರಣ ಭೂಷಿತನಾಗಿ, ಭಸ್ಮೋದ್ಧೂಳಿತ ಸರ್ವಾಂಗನಾಗಿ, ಶೂಲಧಾರಿಯಾಗಿ, ಚಂದ್ರಚೂಡನೂ, ಮಹಾಭಾಗನೂ, ತ್ರಿಪುರಸಂಹಾರಕನೂ, ತ್ರಿನೇತ್ರನೂ, ಮದನಾಂತಕನೂ, ಅಪ್ಸರೆಯರಿಂದ ಸೇವಿತನೂ, ಋಗ್ಯಜುಸ್ಸಾಮಾಥರ್ವಣ ಚತುರ್ವೇದ ಶರೀರಿಯೂ, ಕರುಣಾನಿಧಿಯೂ, ಕಾಲಕಾಲನೂ, ಮಹಾಬಲನೂ ಪಾರ್ವತೀ ಸಮೇತನೂ, ಭಕ್ತಾಭೀಷ್ಟಪ್ರದಾಯಕನೂ, ಜಟಗಂಗಾಧರನೂ, ದೇವದೇವೋ

ತ್ರಮನೂ, ಸರ್ವವ್ಯಾಪಕನೂ, ಸರ್ವವಿದ್ಯಾಧಿಪತಿಯೂ, ಅಣಿಮಾದ್ಯಷ್ಟಸಿದ್ಧಿ ಪ್ರದಾಯಕನೂ, ವೇದವೇದಾಂತವೇದ್ಯನೂ, ಆದ ಪರಮೇಶ್ವರನು ವಿರಾಜಮಾನ ನಾಗಿದ್ದನು.

ಆಗ ಆ ಶಿವನ ದರ್ಶನಕ್ಕಾಗಿ ಬಂದ ನಾರದನು ಶಿವಶಿವಾ ಎಂದು ಸ್ತುತಿಗಾನ ಮಾಡುತ್ತ ಪರಬ್ರಹ್ಮ ಸ್ವರೂಪಿಯಾದ ಶಿವನ ಸಮೀಪಕ್ಕೆ ಬಂದು, ಪುನಃ ಪುನಃ ನಮಸ್ಕ ರಿಸಿ, ಭಕ್ತಕಲ್ಯಾಣಕರನೂ, ಶಾಂತನೂ ಆದ ಶಿವನನ್ನು ಕುರಿತು ದೇವ ದೇವನೇ, ಭಕ್ತ ವತ್ಸಲನೇ, ಪಾರ್ವತೀನಾಥನೇ, ಸುಂದರಕಾಯನೇ ನಿನಗೆ ನಮಸ್ಕಾರ. ರಜತಾ ಚಲವಾಸಿಯೇ, ಕಲ್ಯಾಣ ಶರೀರಿಯೇ, ಸರ್ವಾಭೀಷ್ಟದಾಯಕನೇ ನಿನಗೆ ನಮಸ್ಕಾರ. ವಿಶ್ವೇಶ್ವರನೇ, ವಿರೂಪಾಕ್ಷನೇ ತ್ರಿಪುರಾಂತಕನೇ, ಶಿವನೇ ನಿನಗೆ ನಮಸ್ಕಾರ. ವೇದಾಂತ ವೇದ್ಯನೇ, ವಿಜ್ಞಾನಾನಂದ ಸ್ವರೂಪನೇ, ವೇದ ಸ್ವರೂಪನೇ, ರಕ್ಷರಕ್ಷನೇ ನಿನಗೆ ನಮಸ್ಕಾರ. ಅಗಸ್ತ್ಯನೇ ಮೊದಲಾದ ಮಹರ್ಷಿಗಳಿಂದ ವಂದಿಸಲ್ಪಟ್ಟ ಪಾದಕಮಲ ಗಳುಳ್ಳವನೇ, ಸಿದ್ಧಿದಾಯಕನೇ ನಿನಗೆ ನಮಸ್ಕಾರ. ಶಂಭೋ ಕೃಪಾಸಿಂಧೂ ನಿನಗೆ ನಮಸ್ಕಾರ. ಸಾಂಬಶಿವನೇ ನಿನಗೆ ನಮಸ್ಕಾರ. ದೇವಾ ನನಗೆ ಅಚಲವಾದ ಭಕ್ತಿ ಯನ್ನೂ ಅಂತ್ಯದಲ್ಲಿ ಮುಕ್ತಿಯನ್ನೂ ಕರುಣಿಸು. ಮೃತ್ಯುಂಜಯನೇ ನಿನಗೆ ನಮಸ್ಕಾರ ಎಂದು ದೇವನನ್ನು ಮತ್ತೆ ಮತ್ತೆ ಸ್ತುತಿಸಿದನು. ಆಗ ಮಹಾದೇವನು ಆ ನಾರದನಿಗೆ ಅವನ ಇಷ್ಟಾರ್ಥಗಳನ್ನು ದಯಪಾಲಿಸಿ. ವೇದಗಳಿಗೆ ಗೋಚರನಾದ ಪರಮಾತ್ಮನು ತನ್ನ ಭಕ್ತನಾದ ಅವನನ್ನು ನೋಡಿ, ಮಹಾಜ್ಞಾನಿಯಾದ ನಾರದನೇ ಭೂಲೋಕದಲ್ಲಿ ಏನಾದರೂ ವಿಶೇಷವಿದ್ದರೆ ಅದನ್ನು ಶೀಘ್ರವಾಗಿ ಹೇಳು ಅದನ್ನು ನಾನು ಕೇಳಬೇಕು ಎಂದನು.

ಅದಕ್ಕೆ ನಾರದನು ಅತ್ಯಂತ ವಿನಯದಿಂದ, ಲೋಕೇಶ್ವರನಾದ ಪರಮಾತ್ಮನನ್ನು ಕುರಿತು, ದೇವದೇವಾ ಈಗ ನನಗೆ ತಿಳಿದಿರುವಂತೆ ಭೂಲೋಕ ವೃತ್ತಾಂತವನ್ನು ನಿನಗೆ ಹೇಳುವೆನು, ಅವಧರಿಸು. ಆನಂದ ವಿಗ್ರಹನಾದ ಪರಮಾತ್ಮನೇ, ಕಲಿಯುಗವು ಹೆಚ್ಚುತ್ತಿರುವುದರಿಂದ ಭೂಲೋಕದಲ್ಲಿ ಅಪಶಬ್ದ ಸಮೂಹವು ಪರಿಪೂರ್ಣವಾಗಿ ವ್ಯಾಪಿಸಿರು ವುದು. ಪ್ರಭೋ ಅಲ್ಲಿ ವ್ಯಾಕರಣವನ್ನು ಬಲ್ಲವನಾಗಲೀ. ಅರ್ಥಸಹಿತ ವೇದ ವೇದಾಂಗ ಗಳನ್ನು ತಿಳಿದವನಾಗಲೀ ಇಲ್ಲವೇ ಇಲ್ಲ; ಸರ್ವ ಕರ್ಮಾರ್ಥಗಳನ್ನು ತಿಳಿಸುವ ಋಗ್ಯಜು ಸ್ಸಾಮ ವೇದಗಳ ಪದ, ಕ್ರಮ, ಘನ, ಜಟಾಪಾಠಗಳನ್ನು ಸರಿಯಾಗಿ ತಿಳಿದವರಿಲ್ಲ. ಸಮಸ್ತವೇದ ಗ್ರಂಥಗಳಲ್ಲಿಯೂ, ಶಾಸ್ತ್ರಗ್ರಂಥಗಳಲ್ಲಿಯೂ, ಆಗಮ ಪುರಾಣಗಳಲ್ಲಿಯೂ, ಶಬ್ದಶುದ್ಧಿಯಿಲ್ಲ. ಸಮಸ್ತ ವೇದಗಳ, ಮೀಮಾಂಸ, ತರ್ಕಶಾಸ್ತ್ರಗಳ, ಪೂರ್ವೇತಿಹಾಸಗಳ ರಹಸ್ಯವನ್ನು ಬಲ್ಲವರಿಲ್ಲ. ಕೇವಲ ಪುರಾಣಗಳ ಅರ್ಥವನ್ನು ಅಲ್ಪಸ್ವಲ್ಪ ಬಲ್ಲ ಬ್ರಾಹ್ಮಣರು ಮಾತ್ರ ಭೂಲೋಕದಲ್ಲಿರುವರು. ಲೋಕದಲ್ಲಿ ಭೋಜರಾಜನ

ಹೊರತು ಮತ್ತ್ಯಾರೂ ವಿದ್ವಾಂಸರಿಲ್ಲ. ಇದರಿಂದಾಗಿ ಅಲ್ಲಿ ಅವಿದ್ಯೆ, ಅಜ್ಞಾನಗಳೇ ವಿಜೃಂಭಿಸುತ್ತಿವೆ ಎಂದು ಹೇಳಿದನು. ಆಗ ಅಲ್ಲಿ ಕುಳಿತು ಈ ವಿಷಯವನ್ನು ಕೇಳುತ್ತಿದ್ದ ಸಮಸ್ತ ಋಷಿಗಳೂ ಹಾಹಾಕಾರ ಮಾಡಿದರು.

ಈ ಹಾಹಾಕಾರವನ್ನು ಕೇಳಿದ ಸರ್ವೇಶ್ವರನಾದ ಚಂದ್ರಶೇಖರನು ಕ್ಷಣಕಾಲ ತನ್ನಲ್ಲಿ ಚಿಂತಿಸಿ ಆ ಸಭೆಯಲ್ಲಿದ್ದ ತನ್ನ ಮಾನಸಪುತ್ರನಾದ ದೇವಾಂಗನ ಕಡೆ ನೋಡಿದನು. ಪರಮಾತ್ಮನು ತನ್ನ ಕಡೆ ನೋಡಿದುದನ್ನು ಕಂಡು ದೇವಾಂಗನು ಶಂಭುವಿನ ಸಮೀಪಕ್ಕೆ ಬಂದು ಅಂಜಲೀ ಬದ್ಧನಾಗಿ ನಿಂತನು. ಹೀಗೆ ಸಮೀಪಕ್ಕೆ ಬಂದು ನಿಂತ ಮಹಾಪ್ರಾಜ್ಞ ನಾದ ಅವನನ್ನು ಕುರಿತು ಕರುಣಾನಿಧಿಯಾದ ಪರಮಾತ್ಮನು ಪುತ್ರಶ್ರೇಷ್ಠಾ ದೇವಾಂಗನೇ ನೀನು ಸರ್ವಶಾಸ್ತ್ರ ವಿಶಾರದನು. ನನ್ನ ಫಾಲನೇತ್ರದಿಂದ ಜನಿಸಿದವನು. ನನ್ನಂತೆ ಮಹಾಜ್ಞಾನಿಯೂ ಆಗಿರುವೆ. ಇದಲ್ಲದೆ ಚತುಷ್ಷಷ್ಟಿ ಕಲೆಗಳನ್ನು ಪೂರ್ಣವಾಗಿ ಬಲ್ಲವನು. ನಿನ್ನ ಹೊರತು ಲೋಕದಲ್ಲಿ ಈ ರೀತಿ ಬಲ್ಲವರು ಯಾರೂ ಇಲ್ಲ. ಮಹಾ ಮತಿಯೇ, ನೀನು ನಾರದನಿಂದ ಹೇಳಲ್ಪಟ್ಟ ಸಕಲ ಸಂಗತಿಯನ್ನು ಕೇಳಿರುವೆಯಷ್ಟೆ.

ಆದುದರಿಂದ ಜ್ಞಾನವರ್ಜಿತವಾದ ಭೂಲೋಕಕ್ಕೆ ನೀನು ಹೋಗಿ, ಅಲ್ಲಿರುವ ಸಮಸ್ತ ಬ್ರಾಹ್ಮಣರನ್ನೂ ವಿದ್ಯಾವಂತರನ್ನಾಗಿಯೂ ವೇದಾಧ್ಯಯನ ಸಂಪನ್ನರ ನ್ನಾಗಿಯೂ, ಸರ್ವಶಾಸ್ತ್ರ, ಜ್ಞಾನಯುಕ್ತರನ್ನಾಗಿಯೂ ಮಾಡು. ಭೂಲೋಕದಲ್ಲಿ ಅಪಶಬ್ದಗಳಿಂದ ಕೂಡಿರುವ ಸಮಸ್ತ ಗ್ರಂಥಗಳನ್ನೂ ಪರಿಶೀಲಿಸಿ ಪರಿಶೋಧಿಸಿ ಪರಿಷ್ಕರಿಸಿ ಉಚಿತವಾದ ಶಬ್ದಗಳಿಂದ ಶುದ್ಧೀಕರಿಸಿ ಪೂರ್ಣಗಳನ್ನಾಗಿ ಮಾಡು. ಒಂಬತ್ತು ವ್ಯಾಕರಣಗಳನ್ನೂ ಷಡಂಗ ಸಹಿತ ವೇದಗಳನ್ನೂ, ನಾಲ್ಕು ಶಾಸ್ತ್ರಗಳನ್ನೂ, ಆರು ದರ್ಶನಗಳನ್ನೂ, ಹದಿನೆಂಟು ಪುರಾಣಗಳನ್ನೂ ನಿನ್ನ ಶಿಷ್ಯರಿಗೆಲ್ಲಾ ಉಪದೇಶ ಮಾಡಿ ಶುದ್ಧ ಪಾಠಗಳನ್ನು ಕಲಿಸು ಎಂದು ಆಜ್ಞಾಪಿಸಿದನು. ಆಗ ಪುರುಷೋತ್ತಮನಾದ ದೇವಾಂಗನು, ಭಕ್ತ ಕಲ್ಪತರುವಾದ ಪರಮಾತ್ಮನನ್ನು ನೋಡಿ, ಪರಮಾತ್ಮನೇ ನಾನು ಭೂಲೋಕದಲ್ಲಿ ಮನುಷ್ಯನಾಗಿ ಹುಟ್ಟಿದರೂ ನನಗೆ ನಿನ್ನಲ್ಲಿರುವ ಭಕ್ತಿಯು ಕಿಂಚಿತ್ತೂ ಕಡಿಮೆಯಾಗದಂತೆ ಅನುಗ್ರಹಿಸು! ಎಂದು ವಿನಯವಾಗಿ ಪ್ರಾರ್ಥಿಸಿದನು. ಪರಮಾತ್ಮನು ಹಾಗೆಯೇ ಆಗಲಿ. ನೀನು ಭೂಲೋಕಕ್ಕೆ ಹೋಗು ಎಂದನು.

ಹೀಗೆ ಶಿವನಿಂದ ಆಜ್ಞಪ್ತನಾದ ದೇವಾಂಗನು ಕೋಟಿ ಸೂರ್ಯಪ್ರಕಾಶಮಾನ ವಾದ ವಿಮಾನಾರೋಹಣ ಮಾಡಿ, ಅತಿ ಕುತೂಹಲದಿಂದ ಭೂಲೋಕಕ್ಕೆ ಬಂದನು. ವಿಮಾನದಿಂದ ಕೆಳಗಿಳಿದು, ಬ್ರಾಹ್ಮಣ ರೂಪವನ್ನು ಧರಿಸಿ, ಬ್ರಹ್ಮ ತೇಜೋವಿಶಿಷ್ಟನಾಗಿ, ದ್ವಿತೀಯ ಸೂರ್ಯನಂತೆ ಹೊಳೆಯುತ್ತಾ, ದಿವ್ಯಭೂಷಣಾಂ ಬರಗಳಿಂದಲಂಕೃತನಾಗಿ, ವಿಭೂತಿರೇಖಾವಿಲಸಿತಫಾಲನಾಗಿ, ವಜ್ರವೈಡೂರ್ಯ ಖಚಿತ ಕರ್ಣಕುಂಡಲಯುಕ್ತನಾಗಿ ಸುವರ್ಣದ ಉತ್ತರೀಯವನ್ನು ಧರಿಸಿದವನಾಗಿದ್ದನು. ಸರ್ವಾಂಗಸುಂದರನಾಗಿ ಯಜ್ಞೋಪವೀತಧಾರಿಯಾಗಿ, ಪವಿತ್ರಪಾಣಿಯಾಗಿ

ಸರ್ವಶ್ರೇಷ್ಠವಾದ ಪಂಚಾಕ್ಷರಿ ಮಂತ್ರವನ್ನು ಜಪಿಸುವವನಾಗಿ, ರುದ್ರಾಕ್ಷಮಾಲಾಲಂಕೃತನಾಗಿ ಶೋಭಿಸುತ್ತ, ಬ್ರಾಹ್ಮಣೋತ್ತಮನಾದ ದೇವಾಂಗನು ಧಾರಾನಗರಕ್ಕೆ ಬಂದನು.

ಆ ಧಾರಾನಗರವು ಹೇಮಪ್ರಾಕಾರಗಳುಳ್ಳ, ಸುವರ್ಣಗೋಪುರಗಳುಳ್ಳ ಸ್ಫಟಿಕದ ಸ್ತಂಭಗಳುಳ್ಳ ಸುವರ್ಣಗೃಹಗಳಿಂದ ಕೂಡಿತ್ತು. ಆ ನಗರವು ನವರತ್ನ ಖಚಿತಗಳಾದ ಚಂದ್ರಶಾಲೆಗಳಿಂದಲೂ, ಅತ್ಯುತ್ತಮಗಳಾದ ಕೋಟಿ ಸಂಖ್ಯಾಕಗಳಾದ ಅಶ್ವಶಾಲೆಗಳಿಂದಲೂ, ಗಜಶಾಲೆಗಳಿಂದಲೂ ಅಗಲವಾದ ದೊಡ್ಡ ದೊಡ್ಡ ಅಂಗಡಿ ಬೀದಿಗಳಿಂದಲೂ, ರಾಜಮಾರ್ಗಗಳಿಂದಲೂ ಒಪ್ಪುತ್ತಿತ್ತು. ರಥ ಚಕ್ರಗಳ ಶಬ್ದದಿಂದ ಜನರ ಕಿವಿಗಳು ಕಿವುಡಾಗುತ್ತಿದ್ದವು. ಅನೇಕ ಕಾಲ್ಪಲಗಳಿಂದಲೂ, ನೂರಾರು ತಾವರೆ ಕೊಳಗಳಿಂದಲೂ, ಇಕ್ಕೆಲಗಳಲ್ಲೂ ಹಲಸು, ಮಾವು, ಬೆಳವಲ ಮೊದಲಾದ ವೃಕ್ಷಗಳಿಂದ ಭರಿತವಾದ ವನೋಪವನಗಳಿಂದಲೂ, ವಿರಾಜಮಾನವಾಗಿ ಕಂಗೊಳಿಸುತ್ತಿತ್ತು. ಅರಳಿದ ತಾವರೆಗಳಿಂದ ಪರಿಮಳಿಸುತ್ತಿರುವ ಪದ್ಮಾಕರಗಳಿಂದಲೂ, ಮೊಲ್ಲೆ, ಮಲ್ಲಿಗೆ, ಮಾಲತಿ, ಜಾಜಿ ಮೊದಲಾದ ಪುಷ್ಪಗಳಿಂದಲಂಕೃತವಾದ ಅಂಗಡಿಗಳಿಂದಲೂ, ವಜ್ರವೈಡೂರ್ಯ, ಮಾಣಿಕ್ಯ, ಪುಷ್ಯರಾಗ ಮೊದಲಾದ ನವರತ್ನಗಳನ್ನು ಮಾರುವ ಅಸಂಖ್ಯಾಕಗಳಾದ ಅಂಗಡಿಗಳಿಂದಲೂ, ಸುರಸುಂದರಿಯರನ್ನು ನಾಚಿಸುವ ವೇಶ್ಯಾಸ್ತ್ರೀಯರಿಂದಲೂ, ನಾನಾ ಸುಗಂಧ ದ್ರವ್ಯಗಳಿಂದ ಹೊರಬರುವ ಪರಿಮಳದಿಂದಲೂ ಕೂಡಿದುದಾಗಿ ಮನೋಹರವಾಗಿ ಶೋಭಿಸುತ್ತಿತ್ತು.


ನೀರಿನಿಂದ ತುಂಬಿದ ಬಹಳ ಆಳವಾದ ಕಂದಕಗಳಿಂದ ಸುತ್ತಲೂ ಆವೃತವಾಗಿದ್ದು ನಕ್ಷತ್ರಮಾರ್ಗವನ್ನು ಅಡ್ಡಗಟ್ಟುವ ಗೋಪುರಗಳುಳ್ಳದುದಾಗಿ, ನಾನಾ ವಿಧವಾದ ವರ್ಣರಂಜಿತ ತೋರಣಗಳುಳ್ಳ ದಿವ್ಯದೇವಾಲಯಗಳಿಂದ ತುಂಬಿತ್ತು. ಆ ಧಾರಾನಗರವು ಶಿವಾಲಯ, ವೈಷ್ಣವಾಲಯ, ಚಂಡಿಕಾಲಯ, ಗಣೇಶಾಲಯ, ಷಣ್ಮುಖಾಲಯಗಳೇ ಮೊದಲಾದ ಅನೇಕ ದೇವಾಲಯಗಳಿಂದ ಕೂಡಿ ವಿಜೃಂಭಿಸುತ್ತಿತ್ತು. ಅದು ಹಂಸ, ಸಾರಸ, ಶುಕ, ಪಿಕ, ಶಾರಿಕಾ, ಕಪೋತ, ಪಾರಾವತ ಮೊದಲಾದ ನಾನಾ ವಿಧ ಪಕ್ಷಿ ಸಂಕುಲಗಳಿಂದಯುಕ್ತವಾದ ಉಪವನಗಳಿಂದ ಆವೃತವಾಗಿ ಅವುಗಳ ಕಲಕಲರವದಿಂದ ಕೂಡಿತ್ತು. ಆ ಪುರವು ಶಂಖಿನೀ, ಹಸ್ತಿನೀ ಜಾತಿಯ ಸ್ತ್ರೀಯರಿಂದ ಕೂಡಿದ ವೇಶ್ಯಾವಾಟಿಕೆಗಳಿಂದ ಮನರಂಜನೀಯವಾಗಿತ್ತು. ಆ ಪಟ್ಟಣವು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರ ಪ್ರತ್ಯೇಕ ಗೃಹ ವಿಭಾಗಗಳಿಂದ ಕೂಡಿ ಅತಿ ಮನೋಹರವಾಗಿದ್ದು ಸರ್ವ ಸೌಂದರ್ಯಯುಕ್ತವಾಗಿ, ಸರ್ವವಾದ್ಯ ಘೋಷಭರಿತವಾಗಿ ವೀಣಾಗಾನ ಪ್ರವೀಣರಾದ ವೇಶ್ಯಾ ಸ್ತ್ರೀಯರಿಂದಲೂ, ನೃತ್ಯ, ಗೀತ, ವಾದ್ಯತ್ರಯಗಳಲ್ಲಿ ಅತಿ ಚತುರರಾದ ನಟನಟಿ, ಗಾಯಕ, ಗಾಯಕಿಯರಿಂದಲೂ ತುಂಬಿತುಳುಕುತ್ತಿತ್ತು.

ಈ ರೀತಿ ಅತ್ಯಂತ ಶೋಭಾಯಮಾನವಾಗಿದ್ದ ಆ ಧಾರಾನಗರವನ್ನು ದೇವಾಂಗನು ಪ್ರವೇಶಿಸಿದನು.

ಅವನು ಅಲ್ಲಿಯ ರಾಜನಾದ ಭೋಜರಾಜನನ್ನು ಕಾಣಲು ಉದ್ದೇಶಿಸಿ ರಾಜಬೀದಿಗಳಲ್ಲಿ ಹೊರಟನು. ಆ ಪಟ್ಟಣದ ರಾಜಮಾರ್ಗಗಳಲ್ಲಿ ಹೋಗುವಾಗ ಇವನ ತೇಜಸ್ಸಿನಿಂದ ವಿಸ್ಮಿತರಾದ ಸಮಸ್ತ ಜನರಿಂದ ಅಲ್ಲಲ್ಲಿ ಮರ್ಯಾದೆಹೊಂದುತ್ತಾ ಭೋಜರಾಜನ ಸಭೆಯನ್ನು ಬೃಹಸ್ಪತಿಯು ದೇವ ಸಭೆಯನ್ನು ಪ್ರವೇಶಿಸುವಂತೆ ಒಳಹೊಕ್ಕನು. ರತ್ನಸಿಂಹಾಸನಾರೂಢನಾಗಿ, ಬಾಲಸೂರ್ಯನಂತೆ, ಹೊಳೆಯುವವನಾಗಿ, ಮನ್ಮಥನಿಗೆ ಸಮಾನವಾದ ರೂಪವುಳ್ಳವನಾಗಿ, ಸಮಸ್ತ ರಾಜಸಮೂಹದಿಂದ ಸೇವಿತನಾಗಿ, ವಂದಿಮಾಗಧರಿಂದ ತನ್ನ ಬಿರುದಾವಳಿಗಳನ್ನು ಹೊಗಳಿಸಿಕೊಳ್ಳುವವನಾಗಿ, ಸಂಸ್ತೂಯಮಾನನಾಗಿ, ಅಷ್ಟದಿಕ್ಪಾಲಕರ ಅಂಶಸಂಭೂತನಾಗಿ ಚಾಮರವನ್ನು ಹಾಕುವ ಸುಂದರಸ್ತ್ರೀಯರಿಂದ ಸೇವಿತನಾಗಿ, ಸಾಮದಾನಾದ್ಯುಪಾಯುಗಳನ್ನು ಬಲ್ಲ ನಾಲ್ಕು ಜನ ಮಂತ್ರಿಗಳಿಂದ ಮಂತ್ರಾಲೋಚನಾತತ್ಪರನಾಗಿದ್ದ ಆ ಭೋಜರಾಜನು, ಆಜಾನುಬಾಹುವಾಗಿಯೂ, ಮನ್ಮಥರೂಪಿಯಾಗಿಯೂ ಇರುವ ಮಹಾತೇಜಸ್ವಿಯಾದ ದೇವಾಂಗನು ತನ್ನ ಸಭೆಯನ್ನು ನಿರ್ಭಯವಾಗಿ ಪ್ರವೇಶಿಸಿದುದನ್ನು ಕಂಡು ಆಶ್ಚರ್ಯಚಕಿತನಾದನು.

ಅವನು ಕೂಡಲೇ ಆಸನದಿಂದ ಧಿಗ್ಗನೆದ್ದು ವಿನಯದಿಂದ ದೇವಾಂಗನನ್ನು ಎದುರುಗೊಂಡು, ಅವನಿಗೆ ನಮಸ್ಕರಿಸಿ ಹಸ್ತಲಾಘವಪಿತ್ತು, ದಿವ್ಯಾಸನದಲ್ಲಿ ಕುಳ್ಳಿರಿಸಿ, ಕುಶಲವನ್ನು ವಿಚಾರಿಸುತ್ತ, ಎಲೈ ವಿದ್ವದ್ವರೇಣ್ಯನೇ ನೀನು ಯಾರು ? ಎಲ್ಲಿಂದ ಬಂದೆ ? ನಿನ್ನ ನಾಮಧೇಯವೇನು ? ನಿನ್ನ ಜನನೀ ಜನಕರಾರು ? ಆ ಪುಣ್ಯ ಶಾಲಿಗಳ ಹೆಸರೇನು. ನೋಡಲಾಗಿ ನೀನು ನಿನ್ನ ತೇಜಸ್ಸಿನಿಂದ ಬ್ರಹ್ಮನಂತೆಯೇ ಕಾಣುವೆ. ಬ್ರಾಹ್ಮಣೋತ್ತಮನೇ ಮಹಾತೇಜಸ್ವಿಯಾದ ನೀನು ಬ್ರಹ್ಮನೋ, ಶಿವನೋ, ವಿಷ್ಣುವೋ ಪರಾತ್ಪರನಾದ, ಉಮಾಪತಿಯಾದ, ಸೃಷ್ಟಿಸ್ಥಿತಿಲಯಕಾರಕನಾದ ಮಹೇಶನೋ ಎಂಬಂತೆ ಕಾಣುವೆ. ಮಹಾಪ್ರಾಜ್ಞನೇ ನೀನು ಯಾರು ? ಶೀಘ್ರವಾಗಿ ಹೇಳು ಎಂದು ಭೋಜರಾಜನು ಬೆಸಗೊಂಡನು.

ಬುದ್ಧಿವಂತನಾದ ದೇವಾಂಗನು ಆ ಭೂಪಾಲನ ಮಾತುಗಳನ್ನು ಕೇಳಿ ಅವನನ್ನು ನೋಡಿ ಮಹಾರಾಜಾ, ನಿನಗೆ ಮಂಗಳವಾಗಲಿ ಎಂದು ಆಶೀರ್ವದಿಸಿ, ನೃಪಶ್ರೇಷ್ಠನೇ ನನ್ನನ್ನು ವರರುಚಿಯೆಂದು ಕರೆಯುವರು. ನಾನು ಕಾಶಿಯಿಂದ ಬಂದಿರುವೆನು, ನನ್ನ ತಾಯಿಯ ಹೆಸರು ಪಾರ್ವತಿ, ತಂದೆಯ ಹೆಸರು ಶಂಕರ. ನಾನು ಸರ್ವಶಾಸ್ತ್ರಗಳ ತತ್ವಗಳನ್ನೂ ಬಲ್ಲವನು. ವೇದ ವೇದಾಂಗ ಪಾರಂಗತನು. ಸರ್ವೇತಿಹಾಸಗಳನ್ನು ತಿಳಿದವನು. ಸರ್ವ ಮಂತ್ರಾರ್ಥಕುಶಲನು. ಅಷ್ಟಾದಶ ಪುರಾಣಗಳನ್ನು ಬಲ್ಲವನು. ಸರ್ವಾಗಮಗಳ ಜ್ಞಾನವುಳ್ಳವನು. ಎಲ್ಲಾ ಸ್ಮೃತಿಗಳ ಅರ್ಥಜ್ಞಾನ ಪರಿಣತನು. ಸರ್ವಭೂಸುರ



ಶ್ರೀ ದೇವಾಂಗನು ಸಪ್ತ ರುಷಿಗಳ ಗಣಕ್ಕೆ ಸಕಲ ವೇದಾಗಮಶಾಸ್ತ್ರಾರ್ಥವಬೋಧಿಶಿದಂ.

ಚಿತ್ರ: ದೇವಾಂಗ ಮತ ಪ್ರಕಾಶಿಕೆಯಿಂದ.

ವಂದ್ಯನು. ಕಾವ್ಯಾಲಂಕಾರ, ನಾಟ್ಯ, ನಾಟಕ ಶಾಸ್ತ್ರಗಳಲ್ಲಿ ಕೋವಿದನು. ಸಮಗ್ರ ವೇದಗಳ ಅರ್ಥವನ್ನೂ ಅವುಗಳ ಪದ, ಕ್ರಮ, ಘನ, ಜಟಾದಿ ಪಾಠಗಳನ್ನು ಪೂರ್ಣವಾಗಿ ತಿಳಿದವನು. ಬಹಳ ಹೇಳಿ ಪ್ರಯೋಜನವೇನು ? ಲೋಕದ ಸಮಸ್ತರೂ ನನ್ನನ್ನು ಸರ್ವಜ್ಞನೆಂದು ಅಂಗೀಕರಿಸಿರುವರು. ಎಂದು ಹೇಳಿದನು.

ಈ ರೀತಿ ಹೇಳಿದ ವರರುಚಿಯನ್ನು ಭೋಜಮಹಾರಾಜನು ಅರ್ಘ್ಯ ಪಾದ್ಯಾದಿ ಗಳನ್ನಿತ್ತು ಪೂಜಿಸಿ ಸಮಸ್ತ ಪರಿಕರ ಸಮೃದ್ಧವಾದ, ಅವನ ಘನತೆ ಸ್ಥಾನಮಾನಗಳಿಗೆ ತಕ್ಕ, ಧನಧಾನ್ಯಯುಕ್ತ ವಿಶಾಲವಾದ ಗೃಹವೊಂದನ್ನು ಅವನ ವಾಸಕ್ಕೆ ಇತ್ತನು. ನೂರು ಉತ್ತಮ ಗಜಗಳನ್ನೂ, ಸಾವಿರ ಕುದುರೆಗಳನ್ನೂ, ಕಟಕ, ಕೇಯೂರ, ಕುಂಡಲ, ಹಾರಾದ್ಯನೇಕಾಲಂಕಾರ ಭೂಷಣಗಳನ್ನೂ, ನಾನಾ ವಿಧಗಳಾದ ಆಭರಣಗಳನ್ನೂ ದಿವ್ಯಾಂಬರಗಳನ್ನೂ, ರತ್ನಹಾರಗಳನ್ನೂ ಅವನಿಗೆ ಉಡುಗೊರೆಯಾಗಿ ಕೊಟ್ಟನು. ಆ ವಿದ್ವಚ್ಚೂಡಾಮಣಿಯಾದ ವರರುಚಿಯನ್ನು ಈ ರೀತಿ ಸನ್ಮಾನಿಸಿ ಅವನನ್ನು ತನ್ನ ಆಸ್ಥಾನ ಸಭಾಪತಿಯನ್ನಾಗಿ ಮಾಡಿದನು. ಅಲ್ಲದೆ ಸರ್ವಜ್ಞನಾದ ಅವನನ್ನು ನೋಡಿ, ಭೋಜ ಮಹಾರಾಜನು ಆದರದಿಂದ ಎಲೈ ವಿದ್ವದ್ವರೇಣ್ಯನಾದ ವರರುಚಿಯೇ, ನೀನು ಇಲ್ಲಿರುವ ಸಮಸ್ತ ಬ್ರಾಹ್ಮಣರಿಗೆ ವೇದ, ಶಾಸ್ತ್ರ, ಆಗಮ, ಅಷ್ಟಾದಶಪುರಾಣಗಳು, ಮತ್ತು ವೇದಗಳ ಪದ, ಕ್ರಮ, ಘನ, ಜಟಾಪಾಠಗಳನ್ನೂ, ಒಂಬತ್ತು ವ್ಯಾಕರಣಗಳನ್ನೂ, ಅವುಗಳ ಕ್ರಮಬದ್ಧ ಉಚ್ಚಾರಣೆಯ ರೀತಿಯನ್ನೂ ಕಲಿಸು ಎಂದು ವಿಜ್ಞಾಪಿಸಿದನು. ಇದನ್ನು ಕೇಳಿ ಆ ವರರುಚಿಯು, ಸಂತೋಷದಿಂದ ಆಸ್ಥಾನದ ಸಮಸ್ತ ಬ್ರಾಹ್ಮಣರಿಗೆ ವೇದ ಗಳನ್ನೂ, ಶಾಸ್ತ್ರಗಳನ್ನೂ ನಾಟಕಾಲಂಕಾರ, ತರ್ಕ, ವೇದಾಂತಗಳನ್ನೂ ಕಲಿಸಿ ಅವರೆಲ್ಲರನ್ನೂ ಸಮಸ್ತ ವಿದ್ಯಾಪಾರಂಗತರನ್ನಾಗಿ ಮಾಡಿದನು. ಇದರಿಂದ ಭೋಜ ಮಹಾರಾಜನು ಬಹಳ ಸಂತುಷ್ಟನಾದನು. ಇದಲ್ಲದೆ ವರರುಚಿಯು, ಅನೇಕ ಗ್ರಂಥ ಗಳನ್ನು ರಚಿಸಿ ಸಮಸ್ತ ಬ್ರಾಹ್ಮಣಸಮೂಹದಲ್ಲಿ ತಾನೇ ಉತ್ತಮವೆನಿಸಿ ಕೊಂಡನು.

ಇತ್ತ ಉಜ್ಜಯಿನೀ ಪಟ್ಟಣದಲ್ಲಿ ಭಟ್ಟಾಚಾರ್ಯನೆಂಬ ಬ್ರಾಹ್ಮಣೋತ್ತಮ ನೊಬ್ಬನಿದ್ದನು. ಅವನಿಗೆ ಕಲಾವತಿಯೆಂಬ ಸುಂದರಿಯೂ, ಸಮಸ್ತ ವಿದ್ಯಾ ವಿಶಾರದೆಯೂ, ವೇದವೇದಾಂಗಪಾರಂಗತೆಯೂ, ಸಂಗೀತಶಾಸ್ತ್ರಕೋವಿದೆಯೂ, ನಾಟ್ಯ ಕಲಾಚತುರೆಯೂ, ಆದ ಮಗಳೊಬ್ಬಳಿದ್ದಳು. ಹಂಸಗಮನೆಯಾದ, ಪಂಕಜಾಕ್ಷಿಯಾದ, ಮಂದಸ್ಮಿತಳಾದ ಅವಳು, ಮನ್ಮಥನಂತೆ ಸುಂದರನಾದ ಯಾವ ಕವಿ ಶ್ರೇಷ್ಠನು ನನ್ನನ್ನು ವಿದ್ಯಾ ಪ್ರಸಂಗದಲ್ಲಿ ಗೆಲ್ಲುವನೋ ಅವನನ್ನೇ ನಾನು ನನ್ನ ಪತಿಯನ್ನಾಗಿ ವರಿಸುವೆನೆಂದು ಪ್ರತಿಜ್ಞೆ ಮಾಡಿದ್ದಳು. ಅವಳ ಈ ಪ್ರತಿಜ್ಞೆಯನ್ನು ಕೇಳಿ ನಾನಾ ದೇಶಗಳಿಂದ ವೇದ ವೇದಾಂಗತತ್ವಜ್ಞರೂ, ಶಾಸ್ತ್ರಕೋವಿದರೂ, ಆದ ಬ್ರಾಹ್ಮಣರನೇಕರು

ಅವಳನ್ನು ವಿದ್ಯೆಯಲ್ಲಿ ಜಯಿಸುತ್ತೇವೆಂದು ಅಹಂಕಾರಯುಕ್ತರಾಗಿ ಅವಳ ಬಳಿ ಬಂದು ಅವಳನ್ನು ವಿದ್ಯೆಯಲ್ಲಿ ಜಯಿಸಲಾರದೆ ಸೋತವರಾಗಿ ತಮ್ಮ ತಮ್ಮ ದೇಶಗಳಿಗೆ ಹಿಂದಿರುಗುತ್ತಿದ್ದರು.

ವರರುಚಿಯು ಈ ಸಂಗತಿಯನ್ನು ಕೇಳಿದವನಾಗಿ ಒಂದು ದಿನ ಭೋಜರಾಜನಿಗೆ ಈ ವಿಚಾರವನ್ನು ತಿಳಿಸಿ ಅವನಿಂದ ಅಪ್ಪಣೆ ಪಡೆದು ಅವಳನ್ನು ವಿದ್ಯೆಯಲ್ಲಿ ಜಯಿಸಲು, ಉಜ್ಜಯಿನಿಗೆ ಹೋದನು. ಆ ಉಜ್ಜಯಿನಿಯಲ್ಲಿ ವರರುಚಿಯು ನೇರವಾಗಿ ಭಟ್ಟಾಚಾರ್ಯನ ಗೃಹಕ್ಕೆ ತೆರಳಿ, ಅವನ ಸುಂದರಪುತ್ರಿಯಾದ, ಕಲಾವತಿಯನ್ನು ಕಂಡನು. ಅವಳು ಬಿಂಬೋಷ್ಠಿಯೂ ಮನೋಹರವಾದ ಮುಖವುಳ್ಳವಳೂ, ಸಾಕ್ಷಾತ್ ರತಿಯಂತೆ ತೇಜಸ್ವಿನಿಯೂ, ಪೂರ್ಣ ಚಂದ್ರವದನೆಯೂ, ತುಂಬುಯೌವನವಂತೆಯೂ ಕೋಕಿಲವಾಣಿಯೂ, ಕಂಬುಕಂಠಿಯೂ, ಷೋಡಶಕಲಾ ಪೂರ್ಣೆಯೂ, ಕಠಿಣವಾದ ಉಬ್ಬಿದಸ್ತನಗಳುಳ್ಳವಳೂ, ಸರ್ವಾಭರಣಭೂಷಿತೆಯೂ, ರಂಭೋರುವೂ, ಮನೋಹರವಾದ ಮೂಗುಳ್ಳವಳೂ, ಸಿಂಹದ ನಡುವಿನಂತೆ ಕೃಶವಾದ ನಡುವುಳ್ಳವಳೂ, ಮಹಾಭಾಗ್ಯವಂತೆಯೂ, ಮುಗುಳುನಗೆಯುಳ್ಳವಳೂ, ಮಂದಗಮನೆಯೂ, ಚಿಗುರಿನಂತಿರುವ ತುಟಿಗಳುಳ್ಳವಳೂ, ಉತ್ಪಲಾಕ್ಷಿಯೂ ಆಗಿದ್ದಳು.

ಆ ಕನ್ಯಾಮಣಿಯನ್ನು ವರರುಚಿಯು ನೋಡಿದವನಾಗಿ, ಅವಳನ್ನು ಕುರಿತು ಎಲೈ ಮಂಗಳಾಂಗಿಯೇ ನಿನ್ನನ್ನು ವಿದ್ಯೆಯಲ್ಲಿ ಸೋಲಿಸಿ ನಿನ್ನ ಪಾಣಿಗ್ರಹಣ ಮಾಡಲು ನಾನು ಬಂದಿರುವೆನು. ನಿನ್ನ ಅಭಿಪ್ರಾಯವೇನು ? ಎಂದನು. ಅದಕ್ಕೆ ವಾಕ್ಚತುರೆಯಾದ ಕಲಾವತಿಯು ಅತ್ಯಂತ ಗರ್ವದಿಂದಲೂ ಮಂದಹಾಸದಿಂದಲೂ ಕೂಡಿದವಳಾಗಿ, ವರರುಚಿಯನ್ನು ನೋಡಿ ವೃದ್ಧಾಗ್ರೇಸರನಾದ ವಿದ್ವಾಂಸನೇ, ನೀನು ಯಾವ ದೇಶದಿಂದ ಬಂದಿರುವೆ. ನಿನ್ನ ಹೆಸರೇನು. ನಿನಗೆ ಯಾವ ಶಾಸ್ತ್ರಗಳಲ್ಲಿ ಪಾಂಡಿತ್ಯವಿದೆ. ವೇದಗಳಲ್ಲೇ, ಶಾಸ್ತ್ರಗಳಲ್ಲೇ, ನಾಟಕಗಳಲ್ಲೇ, ಪುರಾಣಗಳಲ್ಲೇ, ಸ್ಮೃತಿಗಳಲ್ಲೇ, ವೇದಾಂಗಗಳಲ್ಲೇ ಎಂಬುದನ್ನು ತಿಳಿಸುವೆಯಾ ? ಎಂದು ಹಾಸ್ಯಮಾಡಿ ಕೇಳಿದಳು. ಅದಕ್ಕೆ ವರರುಚಿಯು ಗಂಭೀರವಾಗಿ ಅವಳನ್ನು ಕುರಿತು ಎಲೈ ನಾರೀಮಣಿಯೇ ವಿಶ್ವನಾಥ ವಿಶಾಲಾಕ್ಷಿಯರಿಗೆ ಸ್ಥಾನವಾಗಿ ಭಾಗೀರಥಿಯ ದಡದಲ್ಲಿರುವ ಕಾಶೀಪಟ್ಟಣವು ನನ್ನ ವಾಸಸ್ಥಳ. ನನ್ನ ಹೆಸರು ವರರುಚಿ, ಮಹಾಭಾಗ್ಯವತಿಯೇ, ನಾನು ಸರ್ವಜ್ಞನು. ನನ್ನ ನಾಲಗೆಯಲ್ಲಿ ಸದಾ ಸರಸ್ವತಿಯು ನರ್ತಿಸುತ್ತಿರುವಳು. ನಿನಗೆ ಯಾವ ಗ್ರಂಥಗಳಲ್ಲಿ ಪರಿಶ್ರಮವಿರುವುದೋ ಆ ಗ್ರಂಥಗಳ ಬಗೆಗೆ ನಮ್ಮಿಬ್ಬರಿಗೂ ವಾದ ನಡೆಯಲಿ. ವೃಥಾ ದುರಹಂಕಾರ ಬೇಡ ಎಂದು ನುಡಿದನು.

ಆಗ ಕಲಾವತಿಗೂ, ವರರುಚಿಗೂ, ಪರಸ್ಪರ ಜಯಾಪೇಕ್ಷೆಯಿಂದ ವಾದ ವಿವಾದಗಳು ನಡೆದುವು. ವೇದಗಳು, ತರ್ಕ, ವ್ಯಾಕರಣ, ಕಾವ್ಯ, ನಾಟಕ, ಅಲಂಕಾರ ಶಾಸ್ತ್ರ,

ಛಂದಶ್ಶಾಸ್ತ್ರ, ಶಿಕ್ಷೆ, ವೇದಾಂಗಗಳಲ್ಲಿ ಅವರಿಬ್ಬರಿಗೂ ಮಹತ್ತರವಾದ ಶಾಸ್ತ್ರವಾದವು ನಡೆಯುತ್ತಿತ್ತು. ವಿದ್ವಜ್ಜನರಿಗೆ ಮಹದಾನಂದವನ್ನುಂಟುಮಾಡುತ್ತಿರುವ, ಈ ಪ್ರಸಂಗವನ್ನು ನೋಡಲು, ಕೇಳಲು ಬಂದ ವಿದ್ವಾಂಸರೆಲ್ಲಾ ಬಹಳ ಸಂತೋಷ ಪಟ್ಟರು. ಪ್ರಾಜ್ಞನಾದ ವರರುಚಿಯು ಕಲಾವತಿಯನ್ನು ಜಯಿಸಲಿಚ್ಛೆಯಿಂದ ವೇದಾಂತ ಶಾಸ್ತ್ರದಲ್ಲಿ ಅವಳೊಡನೆ ಜಿಜ್ಞಾಸೆ ಮಾಡಿದನು. ಕಲಾವತಿಯು ವೇದಾಂತ ವನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದರೂ, ಅದರಲ್ಲಿ ವರರುಚಿಯನ್ನು ಗೆಲ್ಲಲಾಗದೆ ಸೋತಳು. ಹೀಗೆ ಸೋತ ಕಲಾವತಿಯನ್ನು ವರರುಚಿಯು ನೋಡಿ, ಸುಂದರೀ, ಕನ್ಯಾಮಣೀ, ನೀನು ವೇದಾಂತ ಶಾಸ್ತ್ರದಲ್ಲಿ ನನಗೆ ಸೋತಿರುವೆ. ಮೇಘದಂತೊಪ್ಪುವ ಕೇಶರಾಶಿಯುಳ್ಳವಳೇ, ನಿನ್ನ ಪ್ರತಿಜ್ಞೆಯಂತೆ ನನ್ನ ಪಾಣಿಗ್ರಹಣ ಮಾಡೆಂದು ಕೇಳಿದನು.

ಭಟ್ಟಾಚಾರ್ಯನ ಪುತ್ರಿಯಾದ ಕಲಾವತಿಯು, ಈ ಮಾತನ್ನು ಕೇಳಿ ಪರಿಹಾಸ ದಿಂದ ಅವನನ್ನು ಉದ್ದೇಶಿಸಿ ವರರುಚಿಯೇ, ನೀನು ಅತ್ಯಂತ ವೃದ್ಧನೂ, ಮುಪ್ಪಿನಿಂದ ಬಿಳುಪಾದ ಕೂದಲುಗಳುಳ್ಳವನೂ ದಂತಹೀನನೂ, ಉಗುರುಗಳಿಲ್ಲದ ಹಸ್ತಗಳುಳ್ಳವನೂ ಆಗಿರುವೆ. ಎಲೈ ದ್ವಿಜೋತ್ತಮನೇ, ಲೋಕದಲ್ಲಿ ಕಾಮಿನಿಯರಿಗೆ ಸುರತಸಮಯದಲ್ಲಿ ಅಧರೋಷ್ಠಗಳಲ್ಲಿ, ಸ್ತನಗಳಲ್ಲಿ ದಂತಕ್ಷತ, ನಖಕ್ಷತಗಳು, ಅವಶ್ಯವಾಗಿ ಆನಂದವನ್ನುಂಟು ಮಾಡುವುವು. ಹೀಗಿರಲಾಗಿ ನಾನು ನಿನ್ನನ್ನು ಮದುವೆಯಾದರೆ ನನ್ನ ಅಧರದಲ್ಲಿ, ಸ್ತನಗಳಲ್ಲಿ, ದಂತಕ್ಷತ, ನಖಕ್ಷತಗಳನ್ನು ಮಾಡುವವರಾರು? ವೃದ್ಧನಾದ ವರರುಚಿಯೇ, ಮುದುಕನಿಗೆ ಯೌವನವತಿಯು ವಿಷಕ್ಕೆ ಸಮಾನವೆಂದು ಹೇಳಿರುವ ನೀತಿ ವಾಕ್ಯಗಳನ್ನು ನೀನು ಕೇಳಿಲ್ಲವೆ? ಮುದುಕನಾದ ನಿನಗೆ ಸುರತದಲ್ಲಿ ಸಾಮರ್ಥ್ಯವೆಷ್ಟು? ಯೌವನವತಿಯಾದ ನನ್ನ ಸಾಮರ್ಥ್ಯವೆಷ್ಟು? ಸ್ತ್ರೀಯರಿಗೆ ಪುರುಷರಿಗಿಂತ ಆಹಾರವು ಎರಡರಷ್ಟೂ, ಬುದ್ಧಿಯು ನಾಲ್ಕರಷ್ಟೂ, ಸಾಹಸವು ಆರರಷ್ಟೂ, ಕಾಮವು ಎಂಟರಷ್ಟೂ ಹೆಚ್ಚು ಇರುವುದೆಂಬ ವಿದ್ವತ್ಸಮ್ಮತವಾದ ನೀತಿ ವಚನವನ್ನು ಸರ್ವಜ್ಞನೆಂದು ಹೇಳಿಕೊಳ್ಳುವ ನೀನು ಅರಿಯೆಯಾ? ಸುಂದರಾಂಗಿಯಾದ ರಂಭೆಯೆಲ್ಲಿ? ಧರ್ಮಶೂನ್ಯನಾದ ನಾರಕಿಯೆಲ್ಲಿ? ದಿವ್ಯ ರೂಪವತಿಯಾದ ಶಚೀದೇವಿಯೆಲ್ಲಿ? ಮನುಷ್ಯನಾದ ನಹುಷನೆಲ್ಲಿ? ತರುಣಿಯಾದ ನಾನೆಲ್ಲಿ? ವೃದ್ಧನಾದ ನೀನೆಲ್ಲಿ? ಹೀಗೆಂದು ಸುಂದರಿಯಾದ ಕಲಾವತಿಯಿಂದ ತಿರಸ್ಕರಿಸಲ್ಪಟ್ಟನು.

ಇದರಿಂದ ವರರುಚಿಯು, ಕೋಪಗೊಂಡು ಅವಳನ್ನು ಕುರಿತು ಮೂಢೆ ಅವಿವೇಕಿ, ಪಂಡಿತೆಯೆಂಬ ಗರ್ವದಿಂದ, ವಾಚ್ಯಾವಾಚ್ಯ ತಿಳಿಯದೆ ನಾಯಿಯಂತೆ ಬೊಗಳುವೆಯಾ? ಬ್ರಾಹ್ಮಣಕುಲದವಳೇ ನಿನ್ನನ್ನು ನಾನು ಮಾತನಾಡಿಸುವುದು ಸರಿಯಲ್ಲ.

ಹೆಣ್ಣು ನಾಯಿಯೆತ್ತ? ಪವಿತ್ರವಾದ ಹೋಮಶೇಷವೆತ್ತ? ರಾಕ್ಷಸಿಯೆತ್ತ? ಅಮೃತವೆತ್ತ? ಹೆಣ್ಣುಕತ್ತೆಯೆತ್ತ? ಸುಗಂಧದ್ರವ್ಯವೆತ್ತ? ಯಃಕಶ್ಚಿತ್ ಸ್ತ್ರೀಯಾದ ನೀನೆತ್ತ? ಪುರುಷೋತ್ತಮನಾದ ನಾನೆತ್ತ? ಆದರೂ ನಿನಗೆ ಹಿತವಾದ ಒಂದು ಮಾತನ್ನು ಹೇಳುವೆನು ಕೇಳು. ನಾನು ಹೇಳುವುದು ನಿನ್ನ ಮನಸ್ಸಿಗೆ ಸರಿಹೋರಿದರೆ ಅಂಗೀಕರಿಸು.

ನನಗೊಬ್ಬ ಮಗನಿರುವನು. ಅವನು ಪಂಡಿತಶ್ರೇಷ್ಠನು. ಸಿಂಹದಂತೆ ದೃಢವಾದ ಶರೀರವುಳ್ಳವನು, ತರುಣನು. ವಿದ್ಯೆಯಲ್ಲಿ ನನಗಿಂತ ಮಿಗಿಲಾದವನು. ಸಮಸ್ತ ರಾಜೋತ್ತಮರಿಂದ ಪೂಜಿತನು. ವಾದಿಗಳೆಂಬ ಆನೆಗಳಿಗೆ ಸಿಂಹಪ್ರಾಯನು. ಅವನು ನಿನ್ನ ಮನಸ್ಸಿಗೆ ಬಂದರೆ ಅವನನ್ನಾದರೂ ಪಾಣಿಗ್ರಹಣ ಮಾಡು ಎಂದು ನುಡಿದನು. ಪಂಡಿತೆಯಾದ ಆ ಕಲಾವತಿಯು ಆ ಮಾತಿಗೆ ಹಾಗೆಯೇ ಆಗಲೆಂದು ಒಪ್ಪಿದಳು. ಪ್ರಾಜ್ಞನಾದ ವರರುಚಿಯು ಕಲಾವತಿಯನ್ನೂ ಅವಳ ತಂದೆಯಾದ ಭಟ್ಟಾಚಾರ್ಯನನ್ನೂ ಒಪ್ಪಿಸಿ, ಅವರ ಮನೆಯಿಂದ ಹೊರಟನು.

ಕುಶಲನಾದ ವರರುಚಿಯು ತನ್ನ ಮನೆಗೆ ಬಂದು, ಕಲಾವತಿಯ ದುರುಕ್ತಿಗಳಿಂದುಂಟಾದ ಕೋಪದಿಂದ, ಅವಳಿಗೆ ಪ್ರತೀಕಾರ ಮಾಡಲು ಮನಸ್ಸಿನಲ್ಲಿಯೇ ಯೋಚಿಸುತ್ತ, ಯಾವ ಉಪಾಯದಿಂದಾದರೆ ನನ್ನ ಕೋಪ ಶಮನವಾಗುವುದೆಂದು ಚಿಂತಿಸುತ್ತಿದ್ದನು. ಆ ಕಲಾವತಿಗೆ ಕತ್ತೆ ಕಾಯುವವನೂ ಬುದ್ಧಿಹೀನನೂ ಆದ ಮೂರ್ಖಶಿಖಾಮಣಿಯೊಬ್ಬನನ್ನು ವರನನ್ನಾಗಿ ಮಾಡಿದರೆ, ನನ್ನ ಕೋಪ ಶಮನವಾಗಿ ಪ್ರತೀಕಾರವಾಗುವುದೆಂದು ಮನಸ್ಸಿನಲ್ಲಿ ನಿಶ್ಚಯಿಸಿದನು. ಕೃತನಿಶ್ಚಯನಾದ ವಿದ್ವಾಂಸನಾದ ಆ ವರರುಚಿಯು ಮತ್ತೆಲ್ಲಿಯೂ ಹೋಗದೆ ಸೇಡು ತೀರಿಸಿಕೊಳ್ಳುವುದಕ್ಕಾಗಿ, ಆ ಪಟ್ಟಣದಲ್ಲಿಯೇ ವಾಸಮಾಡುತ್ತಿದ್ದನು. ಹೀಗಿರುವಲ್ಲಿ ಒಂದು ದಿನ ಪ್ರಾತಃಕಾಲ ಅವನು ಸ್ನಾನ ಮಾಡುವುದಕ್ಕಾಗಿ ಆ ಉಜ್ಜಯಿನಿ ಪಟ್ಟಣದ ಹೊರಗಿದ್ದ ಒಂದು ಕೊಳಕ್ಕೆ ಬಂದನು. ಆ ಕೊಳವು ಹಂಸ ಕಾರಂಡಪಕ್ಷಿಗಳಿಂದಲೂ, ಕಲ್ಹಾರ ಕಮಲಗಳಿಂದಲೂ, ದೊಡ್ಡ ಮೀನುಗಳಿಂದಲೂ, ಆಮೆಗಳಿಂದಲೂ, ಸುಗಂಧ ಪರಿಮಳದಿಂದ ಕೂಡಿದ ಜಲದಿಂದಲೂ, ಸ್ನಾನಕ್ಕಾಗಿ ಬಂದ ಬ್ರಹ್ಮನಿಷ್ಠರಾದ ಬ್ರಾಹ್ಮಣರಿಂದಲೂ ಒಪ್ಪುತ್ತಿತ್ತು?

ಇಂತಹ ಕೊಳದಲ್ಲಿ ವರರುಚಿಯು ಸ್ನಾನಮಾಡಿ ಶುಚಿರ್ಭೂತನಾಗಿ ದಿವ್ಯ ಪೀತಾಂಬರವನ್ನುಟ್ಟು, ಪುಷ್ಪದರ್ಭಾಗ್ರಯುಕ್ತವಾದ ಅರ್ಘ್ಯವನ್ನು ಸೂರ್ಯನಿಗೆ ಕೊಟ್ಟು ವೇದಮಾತೆಯಾದ, ಇಷ್ಟಾರ್ಥದಾಯಿನಿಯಾದ, ಗಾಯತ್ರೀ ಮಂತ್ರವನ್ನು ಜಪಿಸಿ ಅಲ್ಲಿಂದೆದ್ದು ದಿಗ್ದೇವತೆಗಳಿಗೂ ಮಹಾತ್ಮರಾದ ಸಪ್ತರ್ಷಿಗಳಿಗೂ, ಸೂರ್ಯನಿಗೂ, ಸ್ತುತಿಪೂರ್ವಕವಾಗಿ ನಮಸ್ಕರಿಸಿ, ಮತ್ತೆ ಮಂತ್ರಪುರಸ್ಸರವಾಗಿ ಆಚಮನ

ಮಾಡಿ ಪ್ರಾತಃಸ್ಸಂಧ್ಯೋಪಾಸನೆ ಮಾಡಿದನು. ಸ್ನಾನ ಸಂಧ್ಯೆ ಮುಗಿಸಿ, ತನ್ನ ಮನೆಗೆ ಬರುತ್ತಿರುವಲ್ಲಿ, ಆ ಕೊಳದ ಸಮೀಪದಲ್ಲಿಯೇ ಕತ್ತೆ ಕುರಿಗಳನ್ನು ಕಾಯುತ್ತಿರುವ ನೋಟಕ್ಕೆ ಬ್ರಾಹ್ಮಣನಂತೆ ಕಾಣುವ ಒಬ್ಬ ತರುಣನನ್ನು ಕಂಡು ಅವನ ಸಮೀಪಕ್ಕೆ ಹೋಗಿ ಅತ್ಯಂತ ಪ್ರೀತಿಯಿಂದ ಅವನನ್ನು ಕುರಿತು, ಎಲೈ ತರುಣನೇ ಬ್ರಾಹ್ಮಣನಂತೆ ಕಾಣುವ ಕತ್ತೆ ಕುರಿಗಳನ್ನು ಕಾಯುತ್ತಿರುವ ನೀನಾರು ? ನಿನ್ನ ಹೆಸರೇನು ? ನಿನ್ನ ತಂದೆತಾಯಿಗಳ ಹೆಸರೇನು ? ನೀನಿರುವುದೆಲ್ಲಿ ? ನಿಜ ಸಂಗತಿಯನ್ನು ತಿಳಿಸು ಎಂದನು.

ಆಗ ಆ ತರುಣನು ಆ ವರರುಚಿಯನ್ನು ನೋಡಿ ಅತ್ಯಂತ ಕುತೂಹಲದಿಂದ, ಪ್ರಾಜ್ಞಶ್ರೇಷ್ಠನೇ, ನಾನು ವಿಪ್ರಶಿರೋಮಣಿಯಾದ ಮಾಧವಾಚಾರ್ಯನ ಮಗನು. ನನ್ನ ತಾಯಿಯ ಹೆಸರು ಲಕ್ಷ್ಮಿ. ಬ್ರಹ್ಮವಾದಿಯಾದ ನನ್ನ ತಂದೆಯು ನನಗೆ ಕಾಲಕ್ಕೆ ಸರಿಯಾಗಿ ಉಪನಯನ ಮಾಡಿದನು. ಕೆಲಕಾಲಾನಂತರ ನನ್ನ ತಾಯಿ ತಂದೆಗಳಿಬ್ಬರೂ ವಿಧಿವಶರಾದರು. ನನ್ನ ಹೆಸರು ಕವಿರತ್ನನೆಂದು. ದೈವಯೋಗದಿಂದ ಈಗ ನಾನು ಕತ್ತೆ ಕುರಿಗಳನ್ನು ಕಾಯುತ್ತಿರುವೆನು. ಭೂಸುರೋತ್ತಮನೇ ಹೊಟ್ಟೆಯಪಾಡಿಗಾಗಿ ಈ ಕೆಲಸವನ್ನು ಮಾಡುತ್ತಿರುವೆನು, ಎಂದು ಹೇಳಿದನು. ಅವನ ಮಾತನ್ನು ಕೇಳಿದ ವರರುಚಿಯು ಸ್ವಲ್ಪ ಆಲೋಚಿಸಿ, ಆ ಕವಿರತ್ನನನ್ನು ನೋಡಿ ಎಲೈ ಕವಿರತ್ನಾ, ಈ ಕತ್ತೆ ಕುರಿಗಳನ್ನು ಅವುಗಳ ಒಡೆಯನಿಗೆ ಒಪ್ಪಿಸಿ, ಆತನಪ್ಪಣೆ ಪಡೆದು ಬೇಗ ಬಾ. ವಿಪ್ರನೇ ನಿನ್ನಲ್ಲಿ ಒಂದು ಮಹತ್ತರವಾದ ಕಾರ್ಯವಿರುವುದು. ತ್ವರೆ ಮಾಡು ಎಂದನು. ಅದನ್ನು ಕೇಳಿ ಆ ಬ್ರಾಹ್ಮಣನು ಹಾಗೆಯೇ ಆಗಲೆಂದು ಹೇಳಿ ಅದರಂತೆಯೇ ಮಾಡಿ ವರರುಚಿಯಲ್ಲಿಗೆ ಬಂದನು.

ವರರುಚಿಯು ತಾನು ಹೇಳಿದಂತೆ ಮಾಡಿ ತನ್ನ ಮನೆಗೆ ಬಂದ ಕವಿರತ್ನನನ್ನು ಕಂಡು ಸಂತೋಷಪಟ್ಟು ಎಲೈ ಕವಿರತ್ನನೇ, ನಾನು ಹೇಳುವ ಮಾತನ್ನು ಮನಸ್ಸಿಟ್ಟು ಕೇಳು. ಈ ಉಜ್ಜಯಿನಿ ನಗರದಲ್ಲಿರುವ ಭಟ್ಟಾಚಾರ್ಯನಿಗೆ ಪಂಡಿತೆಯೂ, ಮಂಜುಭಾಷಿಣಿಯೂ ಆದ ಕಲಾವತಿಯೆಂಬ ಒಬ್ಬ ಮಗಳಿರುವಳು. ನೀನು ನನ್ನ ಮಾತನ್ನು ಕೇಳಿ ಅದರಂತೆ ನಡೆದರೆ ಸರಸ್ವತಿಯಂತಿರುವ ಆ ಕನ್ಯೆಯನ್ನು ನಿನಗೆ ಪತ್ನಿಯನ್ನಾಗಿ ಮಾಡುವೆನು. ಆದರೆ ಈ ಗುಟ್ಟನ್ನು ನೀನು ಯಾರ ಮುಂದೆಯೂ ಖಂಡಿತ ಹೇಳಬಾರದು. ಒಂದು ವೇಳೆ ಹೇಳಿದ್ದೇ ಆದರೆ ಕಾರ್ಯವು ಕೆಡುವುದು ಎಂದನು. ಅವನು ಹಾಗೆಯೇ ಆಗಲಿ ಎಂದು ಅದಕ್ಕೊಪ್ಪಿದನು.

ಅವನು ಒಪ್ಪಿದುದನ್ನು ಕಂಡು ವರರುಚಿಯು ತುಂಬಾ ಹರ್ಷಿತನಾಗಿ ಎಲೈ ಕವಿರತ್ನನೇ, ಆ ಕಲಾವತಿಯು ನಿನ್ನನ್ನು ಏನು ಕೇಳಿದರೂ ನೀನು ಮೌನದಿಂದಿದ್ದು ನಿನ್ನ ಕೈ ಬೆರಳುಗಳ ಸನ್ನೆಯಿಂದಲೇ ಉತ್ತರಕೊಡು. ಆಕೆಯು ನಿನ್ನನ್ನು ಎಲೈ ವಿದ್ವಾಂಸನೇ ನೀನು ಎಷ್ಟು ವಿದ್ಯೆಯನ್ನು ಕಲಿತಿರುವೆಯೆಂದರೆ ಅದಕ್ಕೆ ನೀನು ನಿನ್ನ ಕೈಯ ನಾಲ್ಕು ಬೆರಳುಗಳನ್ನು ತೋರಿಸು. ಪುನಃ ಅವಳು ನೀನು ಮತ್ತಾವ ವಿದ್ಯೆಗಳನ್ನು

ಕಲಿತಿರುವೆಯೆಂದು ಕೇಳುವಳು. ಅದಕ್ಕೆ ನೀನು ನಿನ್ನ ಕೈಗಳ ಆರು ಬೆರಳುಗಳನ್ನು ತೋರಿಸು. ಮತ್ತೆ ಅವಳು ಇನ್ನಾವ ವಿದ್ಯೆಗಳನ್ನು ಕಲಿತಿರುವೆಯೆಂದರೆ ನಾಲ್ಕು ಬೆರಳು ಗಳನ್ನು ತೋರಿಸು. ಈ ಜಗತ್ತಿನ ಸೃಷ್ಟಿಸ್ಥಿತಿ ಲಯಗಳನ್ನು ಯಾರ್‍ಯಾರು ಮಾಡುವ ರೆಂದರೆ ಒಂದು ಬೆರಳನ್ನು ತೋರಿಸು ಎಂದನು. ಅದಕ್ಕೆ ಅವನು ಹಾಗೆಯೇ ಮಾಡುವೆನೆಂದು ಒಡಂಬಟ್ಟನು.

ಬಳಿಕ ವರರುಚಿಯು ಆ ಕವಿರತ್ನನಿಗೆ, ತನ್ನ ಮನೆಯಲ್ಲೇ ಮುತ್ತೈದೆಯರಿಂದ ಮಂಗಳಸ್ನಾನ ಮಾಡಿಸಿ, ಕಟಕಕೇಯೂರಗಳಿಂದಲೂ, ರತ್ನ ಖಚಿತ ಆಭರಣ ಗಳಿಂದಲೂ ಭೂಷಿತನನ್ನಾಗಿ ಮಾಡಿ ಸುವರ್ಣದ ಪಲ್ಲಕ್ಕಿಯಲ್ಲಿ ಅವನನ್ನು ಕುಳ್ಳಿರಿಸಿ ದನು. ಹಿಂದೆ ಕಲಾವತಿಗೆ ಸೋತಿದ್ದ ಬ್ರಾಹ್ಮಣ ವಿದ್ವಾಂಸರಿಂದ, ಆ ಪಲ್ಲಕ್ಕಿಯನ್ನು ಹೊರಿಸಿಕೊಂಡು, ಮಂಗಳವಾದ್ಯಗಳೊಡನೆ ಆ ಉಜ್ಜಯಿನಿಯ ರಾಜಬೀದಿಗಳಲ್ಲಿ ಮೆರವಣಿಗೆ ಮಾಡಿಕೊಂಡು ಬರುತ್ತಿದ್ದನು. ಅದನ್ನು ನೋಡಿದ ಜನರೆಲ್ಲರೂ ಈ ಪಲ್ಲಕ್ಕಿಯಲ್ಲಿ ಕುಳಿತಿರುವ ಮಹನೀಯನು ಮಹಾವಿದ್ವಾಂಸನಿರಬೇಕೆಂದು ಮಾತ ನಾಡಿಕೊಳ್ಳುತ್ತಿದ್ದರು. ಈ ರೀತಿ ಸೋತ ಬ್ರಾಹ್ಮಣವಿದ್ವಾಂಸರಿಂದ ಹೊರಲ್ಪಟ್ಟ ಏನೂ ತಿಳಿಯದ ಆ ಮೂಢ ಬ್ರಾಹ್ಮಣ ಕುಮಾರನನ್ನು ವರರುಚಿಯು ಕಲಾವತಿಯ ಮನೆಗೆ ಈ ರೀತಿ ಸಂಭ್ರಮದಿಂದ ಕರೆತಂದನು. ಹೀಗೆ ತನ್ನ ಮನೆಗೆ ಬಂದ ತರುಣನೂ, ಸೂರ್ಯಸಮಪ್ರಕಾಶನೂ, ಸರ್ವಾಭರಣಭೂಷಿತನೂ, ದಿವ್ಯಾಂಬರಧರನೂ, ದಿವ್ಯಗಂಧಮಾಲಾಶೋಭಿತನೂ ಆದ ಆ ಮೊದ್ದು ಬ್ರಾಹ್ಮಣ ಕುಮಾರನನ್ನು ನೋಡಿ ಕಲಾವತಿಯು ಆಶ್ಚರ್ಯದಿಂದ ಪಕ್ಕದಲ್ಲಿದ್ದ ವರರುಚಿಯನ್ನು ನೋಡಿ ಇವನಾರೆಂದು ಕೇಳಿದಳು.

ಅದಕ್ಕೆ ಯುಕ್ತಿಚತುರನಾದ ವರರುಚಿಯು, ಕಲಾವತಿಯನ್ನು ಕುರಿತು ಮಹಾಭಾಗ್ಯಳೇ, ಸಿಂಹದಂತೆ ದೃಢವಾದ ಶರೀರವುಳ್ಳ ಈ ತರುಣನು ನನ್ನ ಮಗನು. ಇವನು ಸಮಸ್ತ ಶಾಸ್ತ್ರಗಳು, ವೇದ ವೇದಾಂಗಗಳೆಲ್ಲದರಲ್ಲೂ ಪಾರಂಗತನಾಗಿದ್ದಾನೆ. ಹೆಚ್ಚು ಹೇಳುವುದೇನು? ಇವನೇ ಸರ್ವಜ್ಞ. ಸಾಕ್ಷಾತ್ ಸರಸ್ವತಿಯ ಅಪರಾವ ತಾರವೇ ಇವನು. ಇವನ ಹೆಸರು ಕವಿರತ್ನ. ಸಮಸ್ತ ರಾಜಪೂಜಿತನು. ಇವನು ಪ್ರಾಕೃತರಾದ ವಿದ್ವಾಂಸರೊಡನೆ ವಾದಮಾಡುವವನಲ್ಲ. ಅವರು ಕೇಳಿದ ಪ್ರಶ್ನೆಗಳಿಗೆ ಆದರದಿಂದ ಬರೀ ಕೈಬೆರಳುಗಳ ಸನ್ನೆಯಿಂದಲೇ ಉತ್ತರಕೊಡುವನು. ಇವನು ಮೌನವ್ರತನು. ನೀನು ಇವನ ಕೈಹಿಡಿಯುವುದಕ್ಕೆ ಒಪ್ಪಿದರೆ, ಇವನೊಡನೆ ನಿನ್ನ ವಿವಾಹವಾಗಲಿ ಎಂದನು.

ಇದನ್ನು ಕೇಳಿದ ಚತುರೆಯಾದ ಕಲಾವತಿಯು, ವರರುಚಿಯನ್ನು ನೋಡಿ, ನಿನ್ನ ಮಗನು ಅಂತಹ ಸರ್ವಜ್ಞನೇ ಆಗಿದ್ದರೆ ನಾನು ಕೇಳುವ ಪ್ರಶ್ನೆಗಳಿಗೆ ಈ ಸಭೆ ಯಲ್ಲಿ ಸಮಾಧಾನಕರವಾದ ಉತ್ತರ ಕೊಡಲಿ ಎಂದು ಹೇಳಿದಳು. ವರರುಚಿಯು

ಅದಕ್ಕೊಪ್ಪಿದನು. ಆಗ ಆ ಕನ್ಯಾಮಣಿಯು ಅಲ್ಲಿ ನೆರೆದಿದ್ದ ಪಂಡಿತರೆಲ್ಲರೂ ಕೇಳು ವಂತೆ ಸುಂದರನಾದ ಆ ಬ್ರಾಹ್ಮಣ ಯುವಕನನ್ನು ಉದ್ದೇಶಿಸಿ ಎಲೈ ವಿದ್ವಾಂಸನೇ ನೀನು ಎಷ್ಟು ವಿದ್ಯೆಯನ್ನು ಕಲಿತಿರುವೆಯೆಂದು ಕೇಳಿದಳು. ಅದಕ್ಕೆ ಅವನು ಹಿಂದೆ ವರರುಚಿಯು ತನಗೆ ಹೇಳಿಕೊಟ್ಟಿದ್ದಂತೆ ತನ್ನ ಕೈಯ ನಾಲ್ಕುಬೆರಳುಗಳನ್ನು ತೋರಿಸಿ ದನು. ಪುನಃ ಅವಳು ವಿಪ್ರೇಂದ್ರಾ ನೀನು ಮತ್ತಾವ ವಿದ್ಯೆಗಳನ್ನು ಕಲಿತಿರುವೆ ಎಂದಳು. ಅವನು ಆರುಬೆರಳುಗಳನ್ನು ತೋರಿಸಿದನು. ಮತ್ತೆ ಆಕೆಯು ಎಲೈ ದ್ವಿಜೋತ್ತಮಾ ಬೇರಿನ್ನಾವ ವಿದ್ಯೆಗಳನ್ನು ಕಲಿತಿರುವೆ ಎಂದಳು. ಅದಕ್ಕವನು ನಾಲ್ಕುಬೆರಳು ಗಳನ್ನು ತೋರಿಸಿದನು. ತಿರುಗಿ ಅವಳು ಈ ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣರಾರೆಂದು ಕೇಳಿದಳು. ಅವನು ಒಂದುಬೆರಳನ್ನು ತೋರಿಸಿದನು. ಆಗ ಕಲಾವತಿಯು ವರರುಚಿಯನ್ನು ನೋಡಿ ಈ ಕೈಬೆರಳುಗಳ ಸನ್ನೆಯ ಅಭಿಪ್ರಾಯ ವೇನೆಂದು ಕೇಳಿದಳು.

ಅದಕ್ಕೆ ವರರುಚಿಯು ಕಲಾವತಿಯನ್ನು ಕುರಿತು ಕಲಾವತಿಯೇ ಈ ವಿದ್ವನ್ಮ ಣಿಯು ಗುರುಸಾನ್ನಿಧ್ಯದಲ್ಲಿ ನಾಲ್ಕುವೇದಗಳನ್ನು ಅಭ್ಯಾಸಮಾಡಿ ಕಲಿತಿರುವನು. ಅದಕ್ಕಾಗಿ ನಿನ್ನ ಮೊದಲ ಪ್ರಶ್ನೆಗೆ ನಾಲ್ಕುಬೆರಳುಗಳನ್ನು ತೋರಿಸಿದನು. ಗುರು ಸಾನ್ನಿಧ್ಯದಲ್ಲಿ ನಿಗಮಾಂಗಗಳಾದ ವ್ಯಾಕರಣಾದಿ ಷಡಂಗಗಳನ್ನು ಕಲಿತಿರುವುದರಿಂದ ನಿನ್ನ ಎರಡನೆಯ ಪ್ರಶ್ನೆಗೆ ಆರುಬೆರಳುಗಳನ್ನು ತೋರಿಸಿದನು. ಅದೇ ಗುರುಸನ್ನಿಧಿಯಲ್ಲೇ ಪುರಾಣ, ಧರ್ಮಶಾಸ್ತ್ರ, ಮೀಮಾಂಸ, ನ್ಯಾಯ ಈ ನಾಲ್ಕುಶಾಸ್ತ್ರಗಳನ್ನು ಕಲಿತಿರು ವುದರಿಂದ ನಿನ್ನ ಮೂರನೆಯ ಪ್ರಶ್ನೆಗೆ ನಾಲ್ಕು ಬೆರಳುಗಳನ್ನು ತೋರಿಸಿದನು. ಈ ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಪರಬ್ರಹ್ಮನೋರ್ವನೇ ಕಾರಣನಾದುದರಿಂದ, ನಿನ್ನ ನಾಲ್ಕನೇ ಪ್ರಶ್ನೆಗೆ ಒಂದೇಬೆರಳನ್ನು ತೋರಿಸಿದನು ಎಂದನು.

ಈ ರೀತಿ ವರರುಚಿಯು ಹೇಳಿದ ಸಮಾಧಾನವನ್ನು ಕಲಾವತಿಯು ಕೇಳಿ ಮನಸ್ಸಿನಲ್ಲಿ ಯೋಚಿಸಿ ಬಹಳ ಸಂತೋಷಪಟ್ಟು ಅವನಿಗೆ ಗೋಡೆಯಲ್ಲಿ ಬರೆದಿದ್ದ ಹತ್ತುಮುಖಗಳಿದ್ದ, ಇಪ್ಪತ್ತುಭುಜಗಳುಳ್ಳ ಚಿತ್ರವನ್ನು ತೋರಿಸಿ, ಇವನಾರು ಹೇಳೆಂದು ಆ ಕಮಲಾಕ್ಷಿಯಾದ ಕಲಾವತಿಯು ಆ ಕುಂಠ ಕವಿರತ್ನನನ್ನು ಕೇಳಿದಳು. ಅದಕ್ಕೆ ಆ ಮೂರ್ಖನು ಹಿಂದೆ ವರರುಚಿಯು ತನಗೆ ಹೇಳಿಕೊಟ್ಟಿದ್ದ ಮಾತುಗಳನ್ನು ಮರೆತು, ಗಾಬರಿಯಿಂದ ಇವನು ರಾಭಣನೆಂದು ಉತ್ತರ ಕೊಟ್ಟನು. ಇದನ್ನು ಕೇಳಿ ಮಹಾ ಬುದ್ಧಿಶಾಲಿನಿಯಾದ ಆ ಕಲಾವತಿಯು ಆ ಮೂರ್ಖನನ್ನು ನೋಡಿ ಸರ್ವಜ್ಞನೇ ಮಹಾ ಬುದ್ಧಿವಂತನೇ, ವೇದಶಾಸ್ತ್ರ ಪಾರಂಗತನೇ ನೀನು ಇವನನ್ನು ರಾಭಣನೆಂದು ಹೇಗೆ ಹೇಳಿದೆಯೆಂದು ಕೇಳಿದಳು.

ಆಗ ವರರುಚಿಯು ಇನ್ನು ಕೆಲಸ ಕೆಡುವುದೆಂದು ತಾನು ಮಧ್ಯದಲ್ಲಿಯೇ ಬಾಯಿ ಹಾಕಿ ಗಂಭೀರವಾಣಿಯಿಂದ, ಆ ವಿದ್ವಾಂಸರ ಸಭೆಯಲ್ಲಿ ಕಲಾವತಿಯನ್ನು ಕುರಿತು ಎಲೈ ಕಂಜದಳಾಕ್ಷಿ ಕುಂಭಕರ್ಣನ ನಾಮದಲ್ಲಿ ಭಕಾರವಿದೆ. ವಿಭೀಷಣನ ನಾಮದಲ್ಲಿ ಣಕಾರವಿದೆ. ಆದುದರಿಂದ ರಾಕ್ಷಸಕುಲಶ್ರೇಷ್ಠನಾದ ಆ ರಾವಣನು ರಾಭಣನೇ ಹೊರತು ರಾವಣನಲ್ಲ ಎಂಬ ಅಭಿಪ್ರಾಯದಿಂದಲೇ ಈ ವಿದ್ವದ್ವಂದ್ಯ ಮಂಡಿತವಾದೀ ಸಭೆಯಲ್ಲಿ ಈ ಕವಿರತ್ನನು ನಿನಗೆ ಉತ್ತರಕೊಟ್ಟಿರುವನು. ಈ ಬುದ್ಧಿಶಾಲಿಯು ಸರ್ವಶಾಸ್ತ್ರಸಂಪನ್ನ, ಅಲ್ಲದೆ ಶಾಸ್ತ್ರಗಳನ್ನು ಹೊಸದಾಗಿ ರಚಿಸಲೂ ಸಮರ್ಥನು ಎಂದು ಯುಕ್ತಿಯುಕ್ತವಾಗಿ ಮಾತನಾಡಿದನು. ಅವನ್ನು ಕೇಳಿ ಕಲಾವತಿಯು ಸಂಶಯವನ್ನು ಬಿಟ್ಟು ಆನಂದಪಟ್ಟಳು. ವರರುಚಿಯು ಭಟ್ಟಾಚಾರ್ಯನನ್ನು ನೋಡಿ ಇನ್ನು ನಿನ್ನ ಮಗಳನ್ನು ಕವಿರತ್ನನಿಗೆ ವಿವಾಹ ಮಾಡಿಕೊಡು ಎಂದನು. ಮಹಾ ವಿದ್ವಾಂಸನಾದ ಭಟ್ಟಾಚಾರ್ಯನು ವರರುಚಿಯ ಮಾತಿಗೊಪ್ಪಿ ಹಾಗೆಯೇ ಆಗಲಿ ಎಂದು ವಚನವಿತ್ತನು. ಅಲ್ಲದೆ ಆ ದಿನವೇ ಶುಭನಕ್ಷತ್ರ, ಶುಭಲಗ್ನದಿಂದ ಕೂಡಿದೆಯೆಂದು ನಿಶ್ಚಯಿಸಿ ಆ ರಾತ್ರಿಯೇ ಕವಿರತ್ನ, ಕಲಾವತಿಯರಿಗೆ ವಿವಾಹ ಮಾಡಲು ನಿರ್ಧರಿಸಿದನು.

ಆ ಸಮಯದಲ್ಲಿ ವೇದವಿದರಾದ ಬ್ರಾಹ್ಮಣರು, ವೇದಮಂತ್ರಗಳನ್ನು ಘೋಷಿಸಿದರು. ಭಟ್ಟಾಚಾರ್ಯನ ಮನೆಯಲ್ಲಿ ನೃತ್ಯ, ಗೀತ, ವಾದ್ಯಗಳು ಸಂಭ್ರಮಿಸಿದುವು. ನೂತನ ವಧೂವರರಾದ ಕಲಾವತಿ, ಕವಿರತ್ನರು ಮಂಗಳಸ್ನಾನಮಾಡಿ ಸರ್ವಾಭರಣಭೂಷಿತರಾಗಿ ದಿವ್ಯಾಂಬರಧಾರಿಗಳಾಗಿ ಲಗ್ನಮಂಟಪಕ್ಕೆ ಬಂದು ರತ್ನ ಖಚಿತವಾದ ರಮಣೀಯವಾದ ಹಸೆಯ ಮೇಲೆ ಕುಳಿತರು. ಪುರೋಹಿತನು ಅವರ ಮುಂದೆ ಅಗ್ನಿಯನ್ನು ಪ್ರತಿಷ್ಠಾಪಿಸಿ, ವಿಧಿವತ್ತಾಗಿ ವಿವಾಹಾಂಗಭೂತವಾದ ಹೋಮ ಮಾಡಿದನು. ಬುದ್ಧಿವಂತನಾದ ವರರುಚಿಯು ದ್ವಿಜೋತ್ತಮನಾದ ಭಟ್ಟಾಚಾರ್ಯನಿಗೆ ಕನ್ಯಾದಾನ ಮಾಡೆಂದು ಆ ಸಭೆಯಲ್ಲಿ ಹೇಳಿದನು. ಭಟ್ಟಾಚಾರ್ಯನು ಪತ್ನೀಸಮೇತನಾಗಿ, ದಿವ್ಯಾಸನದಲ್ಲಿ ಕುಳಿತು ಮಧುರನುಡಿಗಳಿಂದ ವರನನ್ನು ಕುರಿತು ಮಹಾಪ್ರಾಜ್ಞನಾದ ಕವಿರತ್ನನೇ ಈ ಜಾಣೆಯಾದ ನನ್ನ ಪುತ್ರಿಯನ್ನು ನಿನಗೆ ವಿವಾಹ ಮಾಡಿಕೊಡುವೆನು, ಈಕೆಯ ಪಾಣಿಯನ್ನು (ಕೈಯನ್ನು) ಗ್ರಹಿಸು ಹೀಗೆಂದು ನುಡಿದು ಭಟ್ಟಾಚಾರ್ಯನು ಭಾರ್ಯಾಸಮೇತನಾಗಿ ಮಂತ್ರಪುರಸ್ಸರವಾಗಿ ಉದಕವನ್ನು ಕವಿರತ್ನನ ಹಸ್ತದಲ್ಲಿ ಸಮಸ್ತ ವಿದ್ವಾಂಸರ ಸಮ್ಮುಖದಲ್ಲಿ ಧಾರಾಪೂರ್ವಕವಾಗಿ ಬಿಟ್ಟನು. ಕವಿರತ್ನನು ಕಲಾವತಿಯ ಪಾಣಿಗ್ರಹಣ ಮಾಡಿ ಸಂತುಷ್ಟನಾದನು. ಆ ಹೊತ್ತಿನಲ್ಲಿ ಮಂಗಳವಾದ್ಯಗಳು ಭೂನ್ಯಾಕಾಶಗಳನ್ನು ವ್ಯಾಪಿಸುವಂತೆ ಭೋರ್ಗರೆದುವು. ನೆರೆದಿದ್ದ ಮಹಾತ್ಮರಾದ ಬ್ರಾಹ್ಮಣೋತ್ತಮರು ನೂತನ ವಧೂವರರನ್ನು ವೇದಮಂತ್ರಪುರಸ್ಸರವಾಗಿ ಆಶೀರ್ವದಿಸಿದರು. ಪ್ರಾಜ್ಞನಾದ ಭಟ್ಟಾಚಾರ್ಯನು

ವಿದ್ವಾಂಸರಾದ ಬ್ರಾಹ್ಮಣರಿಗೆ ಭೂರಿದಕ್ಷಿಣೆಯನ್ನಿತ್ತು ದಿವ್ಯವಸ್ತ್ರಗಳನ್ನೂ ಅನಂತರತ್ನಗಳನ್ನೂ ದಾನಮಾಡಿದನು. ಈ ರೀತಿ ಕವಿರತ್ನ ಕಲಾವತಿಯರ ವಿವಾಹವು ಅತಿ ವಿಜೃಂಭಣೆಯಿಂದ ನಡೆಯುತ್ತಿರಲು, ಸುಂದರಿಯರಾದ ಸುವಾಸಿನಿಯರು ಮಂಗಳಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿದರು. ಉಜ್ಜಯಿನಿ ಪಟ್ಟಣದ ಸಮಸ್ತ ಮಹಾಜನರೂ ಕವಿರತ್ನ ಕಲಾವತಿಯರ ವೈಭವದ ವಿವಾಹವನ್ನು ನೋಡಿ ಆನಂದಿಸಿದರು.

ಆ ರಾತ್ರಿಯೇ ಕವಿರತ್ನನ ಮಾವನಾದ ಭಟ್ಟಾಚಾರ್ಯನು ತನ್ನ ಮನೆಯಲ್ಲಿ ಶುಭನಕ್ಷತ್ರ, ಶುಭಲಗ್ನದಿಂದ ಕೂಡಿದ ಮುಹೂರ್ತದಲ್ಲಿ, ತನ್ನ ಅಳಿಯನಿಂದ ವಿದ್ವಾಂಸರಿಗೆ ಫಲದಾನ ಮಾಡಿಸಿ ವಿಧಿವತ್ತಾಗಿ ಗರ್ಭಾದಾನ ಕರ್ಮವನ್ನು ನೆರವೇರಿಸಿದನು. ಅಂದಿನ ರಾತ್ರಿ ಕವಿರತ್ನನು ಅತಿ ಸಂತೋಷಯುಕ್ತನಾಗಿ ತನ್ನ ಪತ್ನಿಯೊಡನೆ ಕ್ರೀಡಾಗೃಹದಲ್ಲಿ ಮಲಗಿರಲು ಕಲಾವತಿಯು ಗಾಢ ನಿದ್ರೆಯಲ್ಲಿದ್ದ ತನ್ನ ಪತಿಯನ್ನು ನೋಡಿ ಅವನೊಡನೆ ಕ್ರೀಡಿಸಲು ಅವನನ್ನು ಮೆಲ್ಲಮೆಲ್ಲನೆ ಎಚ್ಚರಿಸಲು ಪ್ರಯತ್ನಿಸಿದಳು. ಎಷ್ಟು ಎಚ್ಚರಪಡಿಸಿದರೂ ಕವಿರತ್ನನು ಎಚ್ಚರಗೊಳ್ಳಲಿಲ್ಲ. ಇದನ್ನು ಕಂಡು ಆವಳು ತನ್ನ ವೀಣೆಯನ್ನು ತೆಗೆದುಕೊಂಡು, ಷಡ್ಜಾದಿಸ್ವರಯುಕ್ತನಾಗಿ ನುಡಿಸುತ್ತಾ ಗಾನ ಮಾಡಿದಳು. ಇಷ್ಟಾದರೂ ತನ್ನ ಪತಿಯು ಎಚ್ಚರಗೊಳ್ಳದುದನ್ನು ಕಲಾವತಿಯು ಕಂಡು ಚಂದನ ಗಂಧೋದಕಗಳನ್ನು ಅವನ ಎದೆಯ ಮೇಲೆ ಎರಚಿದಳು. ಆಗಲೂ ಅವನಿಗೆ ಎಚ್ಚರವಾಗದಿರಲು, ತನ್ನ ಕೈಲಿದ್ದ ಸ್ಥಾಲಿಯಲ್ಲಿದ್ದ ಸುಗಂಧಯುಕ್ತವಾದ ಪನ್ನೀರನ್ನು ಅವನ ಮುಖದ ಮೇಲೂ, ಎದೆಯ ಮೇಲೂ ರಭಸವಾಗಿ ಎರಚಿದಳು. ಆ ಸುಗಂಧ ಜಲವು ತನ್ನ ಮೇಲೆ ರಭಸವಾಗಿ ಬಿದ್ದುದರಿಂದ ಆದ ಧ್ವನಿಯನ್ನು ಕೇಳಿದ ಕವಿರತ್ನನು ನಿದ್ದೆಯಲ್ಲಿದ್ದಂತೆಯೇ ಅಯ್ಯೋ ಕತ್ತೆ ಕುರಿಗಳು ಕೂಗುವುವಲ್ಲಾ! ನನ್ನ ಮುಖದ ಮೇಲೆ ಮೂತ್ರವಿಸರ್ಜನೆ ಮಾಡಿ, ಎದೆಯ ಮೇಲೆ ಹಿಕ್ಕೆ ಹಾಕಿರುವುವಲ್ಲಾ ಎಂದು ತನಗೆ ತಾನೇ ಹೇಳಿಕೊಂಡನು. ಅದನ್ನು ಕೇಳಿದ ಕಲಾವತಿಯು ಆಶ್ಚರ್ಯದಿಂದ ಸಂಶಯಗ್ರಸ್ತಳಾದಳು. ಅವಳು ತನ್ನ ಪತಿಯನ್ನು ಸಖಿಯರಿಂದ ಎಚ್ಚರಗೊಳಿಸಿ ಅವನನ್ನು ನೋಡಿ ಎಲಾ ನೀನಾರು? ಬ್ರಾಹ್ಮಣನಹುದೋ ಅಲ್ಲವೋ? ನಿಜಹೇಳು. ನೀನು ವರರುಚಿಯ ಪುತ್ರನಂತೂ ಅಲ್ಲ, ನೀನು ವಿದ್ವಾಂಸನಲ್ಲವೆಂಬುದು ನಿನ್ನ ಮಾತಿನಿಂದಲೇ ಗೊತ್ತಾಗುವುದು. ನೀನು ಕತ್ತೆ ಕುರಿಗಳನ್ನು ಕಾಯುವವನೇ ಇರಬೇಕು. ಪತಿಯೇ ಸತ್ಯ ಸಂಗತಿಯನ್ನು ಹೇಳೆಂದು ಕಲಾವತಿಯು ಕೇಳಿದಳು.

ಅದಕ್ಕೆ ಸರಳಬುದ್ಧಿಯವನಾದ ಕವಿರತ್ನನು ತನ್ನ ಪತ್ನಿಯಾದ ಕಲಾವತಿಯನ್ನು ನೋಡಿ, ತನ್ನ ಎಲ್ಲಾ ಸಂಗತಿಯನ್ನು ಚಾಚೂ ತಪ್ಪದೆ ಅವಳಿಗೆ ಹೇಳಿದನು. ಇದನ್ನು ಕೇಳಿ ನಾರೀಮಣಿಯಾದ ಕಲಾವತಿಯು ಇದೆಲ್ಲವೂ ವರರುಚಿಯ ತಂತ್ರವೆಂದು ತಿಳಿದು ಚಿಂತಿಸುತ್ತಾ ಯಾರಾದರೂ ಕೆರೆಯ ನೀರೆಲ್ಲಾ ಹರಿದುಹೋದ

ಮೇಲೆ ಕಟ್ಟಿ ಹಾಕುವರೇ? ಲೋಕದಲ್ಲಿ ಹಣೆಯಬರಹವನ್ನು ಮಾರಿದವರಾರು. ಆದರೂ ಇದನ್ನು ಸರಿಪಡಿಸುವೆನೆಂದು ಮನಸ್ಸಿನಲ್ಲಿ ನಿಶ್ಚಯಿಸಿ, ಆ ಮೂಢನಾದ ತನ್ನ ಗಂಡನನ್ನು ಕುರಿತು, ಸಂದರ್ಭಕ್ಕನುಗುಣವಾಗಿ ಈರೀತಿ ಹೇಳಿದಳು.

ಎಲೈ ಪತಿಯೇ ಈಗ ಈ ಉಜ್ಜಯಿನೀ ಪಟ್ಟಣದ ರಕ್ಷಕಳಾದ (ಗ್ರಾಮದೇವತೆಯಾದ) ಕಾಳಿಕಾದೇವಿಯು ನಗರವೀಕ್ಷಣೆಗಾಗಿ ಹೊರಗೆ ಹೋಗಿರುವಳು. ತನ್ನ ಪರಿವಾರವಾದ ಶಕ್ತಿ ಸೇನಾಸಮೇತಳಾಗಿ, ಉತ್ಸುಕತೆಯಿಂದ ನಗರವೆಲ್ಲವನ್ನೂ ಸಂದರ್ಶಿಸಿ, ತನ್ನ ಪರಿವಾರದೊಡನೆ ಆಲಯಕ್ಕೆ ಬರುವಳು. ಆ ದೇವಿಯು ಮಂದಿರಕ್ಕೆ ಹಿಂದಿರುಗುವುದರೊಳಗಾಗಿ ನೀನು ಶೀಘ್ರವಾಗಿ ಆಕೆಯ ಆಲಯವನ್ನು ಸೇರಿ ಗರ್ಭ ಗುಡಿಯ ಕದವನ್ನು ಮುಚ್ಚಿ ಒಳಗಿನಿಂದ ಭದ್ರವಾಗಿ ಅಗಳಿಯನ್ನು ಹಾಕಿ ಸುಖವಾಗಿ ಕುಳಿತುಬಿಡು. ಕಾಳಿಕಾದೇವಿಯು ಗುಡಿಗೆ ಬಂದು, ಅವಸರದಿಂದ ನಿನ್ನನ್ನು ಕುರಿತು ಕದವನ್ನು ತೆಗೆ ಅಗುಳಿಯನ್ನು ಓರೆ ಮಾಡು ಎಂದು ಹೇಳಿದಾಗ ನೀನು ಆ ದೇವಿಗೆ ಬಾರಿ ಬಾರಿಗೂ ನಮಸ್ಕರಿಸಿ ಭಕ್ತಕಲ್ಯಾಣದಾಯಿನಿಯಾದ ಜಗಜ್ಜನನಿಯಾದ ಕಾಳಿಕಾ ದೇವಿಯೇ, ನನಗೆ ಸಮಸ್ತ ವಿದ್ಯೆಗಳನ್ನೂ ಅನುಗ್ರಹಿಸು ಕದವನ್ನು ತೆಗೆಯುವೆನು ಎಂದು ಹೇಳಿ ಆಕೆಯನ್ನು ಭಕ್ತಿಯಿಂದ ಪ್ರಾರ್ಥಿಸು ಎಂದು ಮೂಢನಾದ ತನ್ನ ಪತಿಗೆ ಹೇಳಿಕೊಟ್ಟು ಕಾಳಿಕಾಲಯಕ್ಕೆ ಬೇಗ ಹೋಗೆಂದು ಹೇಳಿ ಅವನನ್ನು ತನ್ನ ಸಖಿಯರೊಡನೆ ಕಳುಹಿಸಿಕೊಟ್ಟಳು. ಮೂಢನಾದ ಕವಿರತ್ನನು ತನ್ನ ಪತ್ನಿಯ ಸಖಿಯರಿಂದ ತೋರಿಸಲ್ಪಟ್ಟ ದಾರಿಯಲ್ಲಿ ಕೂಡಲೇ ಆ ಕಾಳಿಕಾಲಯಕ್ಕೆ ಬಂದು, ತನ್ನ ಪತ್ನಿಯು ಹೇಳಿದಂತೆ ಗರ್ಭಗುಡಿಯ ಕದಹಾಕಿಕೊಂಡು ಒಳಗೆ ಭಕ್ತ ಕಾಮಧೇನುವಾದ ಕಾಳಿಕಾದೇವಿಯನ್ನು ಭಕ್ತಿಯಿಂದ ಧ್ಯಾನಿಸುತ್ತ ಕುಳಿತನು.

ಸ್ವಲ್ಪ ಹೊತ್ತಿನ ಮೇಲೆ ಕಾಳಿಕಾದೇವಿಯು, ತನ್ನಾಲಯಕ್ಕೆ ಬಂದು, ಗರ್ಭ ಗುಡಿಯ ಬಾಗಿಲು ಭದ್ರವಾಗಿ ಮುಚ್ಚಿರುವುದನ್ನು ಕಂಡು, ಒಳಗಿರುವವರು ಯಾರು ಅಗಳಿಯನ್ನು ಓರೆಮಾಡಿ ಕದವನ್ನು ತೆರೆ ಎಂದು ನುಡಿದಳು. ಆಗ ಮೂಢನಾದ ಆ ಕವಿರತ್ನನು ತನಗೆ ಕಲಾವತಿಯು ಹೇಳಿಕೊಟ್ಟಿದ್ದಂತೆ ಯೋಗಿನೀಗಣಸೇವಿತಳಾದ ದೇವಿಯನ್ನು ಕುರಿತು ಮೂರ್ಖತನವನ್ನು ನಾಶಮಾಡುವ ಶಂಕರಿಯೇ, ನನಗೆ ಸಮಸ್ತ ವಿದ್ಯೆಗಳನ್ನೂ ಅನುಗ್ರಹಿಸು. ಕಮಲಾಸನೆಯೇ ಅಗಳಿಯನ್ನು, ಕವಾಟವನ್ನೂ ತೆಗೆಯುವೆನು. ಆದರೆ ನೀನು ನನಗೆ ಸಮಸ್ತ ವಿದ್ಯೆಗಳನ್ನೂ ಅವಶ್ಯಕವಾಗಿ ಅನುಗ್ರಹಿಸಬೇಕೆಂದು ಮತ್ತೆ ಮತ್ತೆ ಭಕ್ತಿಯಿಂದ ಪ್ರಾರ್ಥಿಸಿದನು. ಒಳಗಿದ್ದ ಅವನ ಈ ಮಾತನ್ನು ಕೇಳಿ ಬಾಲಪರಮೇಶ್ವರಿ, ಮುದ್ರಿಣಿ, ವರಾರೋಹಿ ಎಂಬ ತ್ರಿಶಕ್ತಿಯರು ಅತ್ಯಂತ ಕೋಪಯುಕ್ತರಾಗಿ, ಮಹೇಶ್ವರಿಯಾದ ಕಾಳಿಕಾದೇವಿಯನ್ನು ನೋಡಿ ದೇವಿಯೇ, ಆದಿತ್ಯರೂಪಿಣಿಯೇ ನಮಗೆ ಅಪ್ಪಣೆಯನ್ನು ದಯಪಾಲಿಸು. ಈ ದುಷ್ಟ ಬ್ರಾಹ್ಮಣನನ್ನು ಕೊಂದು ಹಾಕುವೆವು ಎಂದರು.

ಅವರ ಮಾತನ್ನು ಕೇಳಿ, ಕಾಳಿಕೆಯು ದೇವಿಯರೇ, ಈತನು ಪೂರ್ವಜನ್ಮದಲ್ಲಿ ನನ್ನ ಭಕ್ತನಾಗಿದ್ದು ನನ್ನ ಮಂತ್ರವನ್ನು ಜಪಿಸುತ್ತಾ ನನ್ನ ಪೂಜೆಯನ್ನೇ ಮಾಡಿರುವನು. ಆದುದರಿಂದ ಈತನ ಮನೋಭೀಷ್ಟವನ್ನು ನಾನು ಪೂರ್ಣ ಮಾಡುವೆನೆಂದು ನುಡಿದು ಅತ್ಯಂತ ಪ್ರೇಮದಿಂದ ಆ ಬ್ರಾಹ್ಮಣನನ್ನು ನೋಡಿ ಎಲೈ ಬ್ರಾಹ್ಮಣಾ ಬಾಗಿಲು ತೆರೆ. ನಿನ್ನಿಷ್ಟಾರ್ಥವನ್ನು ಸಲ್ಲಿಸುವೆನೆಂದು ಹೇಳಿದಳು. ಅನಂತರ ಅವನು ಬಾಗಿಲು ತೆರೆಯಲು ದೇವಿಯು ಕವಿರತ್ನ ನಿನ್ನ ನಾಲಗೆಯನ್ನು ತೆರೆ ಎಂದಳು. ಅದರಂತೆ ಅವನು ತನ್ನ ನಾಲಗೆಯನ್ನು ಚಾಚಲು ಕಲ್ಯಾಣದಾಯಿನಿಯಾದ ಕಾಳಿಕಾ ದೇವಿಯು ತನ್ನ ಭಕ್ತನ ನಾಲಗೆಯ ಮೇಲೆ ತನ್ನ ಶೂಲದಿಂದ ವಿದ್ಯಾ ಬೀಜಾಕ್ಷರಗಳನ್ನು ಬರೆದಳು.

ದೇವಿಯು ಅವನ ನಾಲಗೆಯ ಮೇಲೆ ವಿದ್ಯಾ ಬೀಜಾಕ್ಷರಗಳನ್ನು ಬರೆದಕೂಡಲೇ ಅವನು ಸರ್ವಜ್ಞನಾದನು. ಆಗ ಕವಿರತ್ನನು ಭಕ್ತಿಪರವಶನಾಗಿ ಪರಮೇಶ್ವರಿಯನ್ನು ಈರೀತಿ ಸ್ತುತಿಸಿದನು. ಮಾತಂಗತನಯೇ, ನಿನಗೆ ಜಯವಾಗಲಿ, ಕಸ್ತೂರಿಯಂತೆ ಮೈಬಣ್ಣವುಳ್ಳವಳೇ ನಿನಗೆ ಜಯವಾಗಲಿ. ಸಂಗೀತರಸಿಕಳೇ ನಿನಗೆ ಜಯವಾಗಲಿ, ಲೀಲಾಶುಕಪ್ರಿಯಳೇ ನಿನಗೆ ಜಯವಾಗಲಿ. ಎಂದು ಅನೇಕ ವಿಧವಾಗಿ ಸರ್ವೇಷ್ಟಾರ್ಥ ಪ್ರದಾಯಿನಿಯಾದ ಕಾಳಿಕಾದೇವಿಯನ್ನು ಸ್ತೋತ್ರಮಾಡಿ ಕೈ ಮುಗಿದು ನಿಂತನು. ಕಾಳಿಕಾದೇವಿಯು ಅವನ ಸ್ತೋತ್ರಗಳಿಂದ ಸಂತುಷ್ಟಳಾಗಿ ನೀನು ನಿಜವಾಗಿಯೂ ಕವಿರತ್ನನಾಗಿ ಇನ್ನು ಮುಂದೆ ಕಾಳಿದಾಸನೆಂಬ ಹೆಸರಿನಿಂದ ಪ್ರಸಿದ್ಧಿಯನ್ನು ಹೊಂದುವೆ. ನಿನ್ನ ತಂದೆಯು ಸಂತೋಷದಿಂದ ನಿನಗೆ ಶೈಶವದಲ್ಲಿಟ್ಟ ಕವಿರತ್ನನೆಂಬ ಹೆಸರು ಈಗ ಸಾರ್ಥಕವಾಯಿತು. ಇದರಲ್ಲಿ ಸಂಶಯವೇ ಇಲ್ಲ. ಕವಿಶ್ರೇಷ್ಠ ಕಾಳಿದಾಸನೇ ನೀನು ಲೋಕದಲ್ಲಿ ಏನೇನು ಇಚ್ಛಿಸುವೆಯೋ ಅದೆಲ್ಲಾ ನನ್ನ ಅನುಗ್ರಹದಿಂದ ಸಿದ್ಧಿಸುವುದು. ನೀನು ಸಕಲ ವಿದ್ವಾಂಸರಿಂದಲೂ ಪೂಜಿಸಲ್ಪಟ್ಟು ನಮಸ್ಕರಿಸಲ್ಪಡುವೆ. ಎಂದು ಅವನಿಗೆ ವರಪ್ರದಾನ ಮಾಡಿ ತನ್ನ ಸಮಸ್ತ ಪರಿವಾರದೊಡನೆ ದಿವ್ಯವಾದ ತನ್ನ ಆಲಯವನ್ನು ಸೇರಿ ಅಂತರ್ಧಾನಳಾದಳು. ಹೀಗೆ ದೇವಿಯಿಂದ ಅನುಗ್ರಹಿಸಲ್ಪಟ್ಟ ಕಾಳಿದಾಸನು ಕಾಳಿಕಾದೇವಿಯ ಗುಡಿಯನ್ನು ಬಿಟ್ಟು ಶೀಘ್ರವಾಗಿ ತನ್ನಪತ್ನಿಯ ಮನೆಗೆ ಬಂದನು.

ಬಂದವನೇ ಅವಳಿಗೆ ಈ ಎಲ್ಲಾ ವೃತ್ತಾಂತವನ್ನೂ ಆಮೂಲಾಗ್ರವಾಗಿ ತಿಳಿಸಿ ಕಾಳಿಕಾದೇವಿಯು ಅನುಗ್ರಹಿಸಿದ ವರವನ್ನು ತಿಳಿಸಿದನು. ಇದನ್ನೆಲ್ಲಾ ಕೇಳಿ ಕಲಾವತಿಯು ದೇವಿಯ ವರಪ್ರದಾನದಿಂದ ಸರ್ವಜ್ಞನಾಗಿ ಹಿಂದಿರುಗಿದ, ತನ್ನ ಪತಿಯನ್ನು ನೋಡಿ ಸಂತೋಷಪಟ್ಟು ಮತ್ತೆ ಮತ್ತೆ ಗಾಢವಾಗಿ ಆಲಂಗಿಸಿ ಮುದ್ದಾಡಿದಳು. ಕವಿಶ್ರೇಷ್ಠನಾದ ಕಾಳಿದಾಸನು ಕಲಾವತಿಯೊಡನೆ ದೇವೇಂದ್ರನು ಶಚಿಯೊಡನೆ ಕ್ರೀಡಿಸುವಂತೆ

ಬಹುಕಾಲ ಕ್ರೀಡಿಸಿದನು. ಕೆಲಕಾಲ ಕಳೆಯಲು ಕಲಾವತಿಯು ಗರ್ಭವತಿಯಾಗಿ, ಸೂರ್ಯನಂತೆ ತೇಜಸ್ವಿಯಾದ ಸಮಸ್ತ ವಿಧಗಳಲ್ಲೂ ತನ್ನ ಪತಿಗೆ ಸಮಾನನಾದ ಒಂದು ಗಂಡು ಶಿಶುವಿಗೆ ಜನ್ಮವಿತ್ತಳು. ಇದನ್ನು ಕಂಡು ಕಾಳಿದಾಸನು ಬಹಳ ಸಂತೋಷ ದಿಂದ ಪುರೋಹಿತನನ್ನು ಕರೆಯಿಸಿ ಜಾತಕರ್ಮಾದಿಗಳನ್ನು ಮಾಡಿಸಿ ಆ ಪುತ್ರನಿಗೆ ಕವೀಂದ್ರನೆಂದು ನಾಮಕರಣ ಮಾಡಿಸಿ ಬ್ರಾಹ್ಮಣರಿಗೆ ಭೂರಿ ದಕ್ಷಿಣೆ ಕೊಟ್ಟು ಸಂತೋಷಗೊಳಿಸಿದನು.

ಕಾಳಿದಾಸನು ತನ್ನ ಮಗನಾದ ಕವೀಂದ್ರನಿಗೆ ಸೂಕ್ತ ವಯಸ್ಸಿನಲ್ಲಿ ಉಪನಯನ ಮಾಡಿ ವೇದಾಭ್ಯಾಸ ಮಾಡಲು ಗುರುಕುಲಕ್ಕೆ ಕಳುಹಿಸಿದನು. ಅಲ್ಲಿ ಅವನು ಶ್ರದ್ಧೆಯಿಂದ ವಿದ್ಯಾಭ್ಯಾಸ ಮಾಡಿ ಸಕಲ ವಿದ್ಯಾಪಾರಂಗತನಾಗಿ ಹಿಂದಿರುಗಿ ಕಾಳಿಕಾದೇವಿಯನ್ನು ವೇದೋಕ್ತವಿಧಿಯಿಂದ ಪೂಜಿಸಿ ಭಕ್ತಾಭೀಷ್ಟಪ್ರದಾಯಿನಿಯಾದ ದೇವಿಗೆ ಬಾರಿಬಾರಿಗೂ ನಮಸ್ಕರಿಸಿ ದಯಾಂಬುಧಿಯಾದ ದೇವಿಯನ್ನು ವೇದಸೂಕ್ತಗಳಿಂದ ಕೊಂಡಾಡಿದನು. ಇದರಿಂದ ಪ್ರಸನ್ನಳಾದ ಕಾಳಿಕಾದೇವಿಯು ಆ ಕಾಳಿದಾಸನ ಪುತ್ರನಾದ ಕವೀಂದ್ರನಿಗೆ ಸಮಸ್ತ ವಿದ್ಯೆಗಳನ್ನೂ ಚತುಷ್ಷಷ್ಟಿಕಲಾಪ್ರಾವೀಣ್ಯತೆಯನ್ನೂ ಅನುಗ್ರಹಿಸಿದಳು. ನಂತರ ಕವೀಂದ್ರನು ತನ್ನ ಮನೆಗೆ ಬಂದು ತಾಯಿಗೂ ತಂದೆಗೂ . ಕಾಳಿಕಾದೇವಿಯು ತನಗೆ ವರಪ್ರದಾನ ಮಾಡಿದ ಸಂಗತಿಯನ್ನು ಅತ್ಯಂತ ಸಂತೋಷದಿಂದ ತಿಳುಹಿಸಿದನು. ಇದನ್ನು ಕೇಳಿ ಕಲಾವತಿ, ಕಾಳಿದಾಸರಿಬ್ಬರೂ ಬಹಳ ಸಂತೋಷಪಟ್ಟರು.

ಹೀಗಿರಲು ಒಂದು ದಿನ ಕಾಳಿದಾಸನಿಗೂ ಆತನ ಪತ್ನಿ ಕಲಾವತಿಗೂ ತಮ್ಮ ಮಗನೆದುರಿನಲ್ಲಿಯೇ ಶಾಸ್ತ್ರ ಪ್ರಸಂಗದಲ್ಲಿ ಮಹತ್ತರವಾದ ವಾಗ್ವಾದವುಂಟಾಯಿತು. ಆಗ ಕಾಳಿದಾಸನು ತನ್ನಪತ್ನಿಯನ್ನು ಅವಳು ಯಾವಶಾಸ್ತ್ರವನ್ನೂ ತಿಳಿಯದವ ಳೆಂದನು. ಹಾಗೆಯೇ ಕಲಾವತಿಯೂ, ತನ್ನಪತಿಯಾದ ಕಾಳಿದಾಸನನ್ನು ಅವನು ಯಾವಶಾಸ್ತ್ರವನ್ನೂ ಅರಿಯದವನೆಂದಳು. ಇದರಿಂದ ಬಹಳ ಸಿಟ್ಟಾದ ಕಾಳಿದಾಸನು ಕಲಾವತಿಯನ್ನು ನೋಡಿ ಇನ್ನುಮೇಲೆ ನೀನೇ ನನ್ನಗುರು. ನನಗೆ ತಾಯಿ ಸಮಾನಳು ಎಂದು ಹೇಳಿದವನೇ ಅವಳಿಗೆ ನಮಸ್ಕರಿಸಿ ಮನೆಬಿಟ್ಟು ಹೊರಟು ಹೋದನು. ತನಗೆ ನಮಸ್ಕರಿಸಿ ಹೋಗುತ್ತಿರುವ ತನ್ನಪತಿಯಾದ ಕಾಳಿದಾಸನನ್ನು ಕಲಾವತಿಯು ನೋಡಿ ಕುಪಿತಳಾಗಿ ನೀನು ಮಾಡಬಾರದ ಕಾರ್ಯವನ್ನು ಮಾಡಿದೆ ಯಾದುದರಿಂದ ನಿನಗೆ ಸ್ತ್ರೀಯಿಂದಲೇ ಮರಣವಾಗಲೆಂದು ಶಪಿಸಿದಳು.

ಕಾಳಿದಾಸನು ಮನೆಬಿಟ್ಟವನು ಸಮಸ್ತ ವಿದ್ಯಾವಂತರಿಂದ ನಮಸ್ಕೃತನಾಗಿ ಆ ಉಜ್ಜಯಿನಿನಗರದಲ್ಲಿ ಒಬ್ಬ ವೇಶ್ಯೆಯಲ್ಲಿ ಅನುರಕ್ತನಾಗಿ ಅವಳಮನೆಯಲ್ಲಿಯೇ ವಾಸ ಮಾಡುತ್ತಿದ್ದನು. ಮಹಾವಿದ್ವಾಂಸನಾದ ವರರುಚಿಯಾದರೂ ಉಜ್ಜಯಿನಿನಗರ ವನ್ನು ಬಿಟ್ಟು ಮತ್ತೆ ಧಾರಾನಗರಕ್ಕೆ ಬಂದು ಭೋಜರಾಜನ ಆಸ್ಥಾನದಲ್ಲಿದ್ದು

ಅವನಿಂದ ನಿತ್ಯವೂ ಧನಧಾನ್ಯ ರತ್ನಗಳಿಂದ ಪೂಜಿತನಾಗಿ ಮರ್ಯಾದೆಯನ್ನು ಹೊಂದುತ್ತಿದ್ದನು. ಇದನ್ನು ನೋಡಿ ಆಸ್ಥಾನದ ಇತರ ವಿದ್ವಾಂಸರು ಸಹಿಸಲಾರದೆ ಹೊಟ್ಟೆಕಿಚ್ಚಿನಿಂದ ಕೂಡಿದವನಾಗಿ ಎಲ್ಲರೂ ಒಂದೆಡೆ ಸಭೆಸೇರಿ, ದುರಾಲೋಚನೆ ಯಲ್ಲಿ ಮಗ್ನರಾದರು. ಅವರು ಈ ಮಹಾವಿದ್ವಾಂಸನಾದ ವರರುಚಿಯಿಂದಾಗಿ ನಮ್ಮೆಲ್ಲರನ್ನೂ ಬಿಟ್ಟು ಭೋಜರಾಜನು ಅಪಾರವಾದ ಧನಕನಕರತ್ನಾದಿಗಳಿಂದ ಅವನನ್ನೇ ಮರ್ಯಾದಿಸುತ್ತಿರುವನು. ಆದುದರಿಂದ ವರರುಚಿಗೂ, ಭೋಜಮಹಾ ರಾಜನಿಗೂ ಹೇಗಾದರೂ ಮಾಡಿ ವಿರೋಧ ಹುಟ್ಟುವಂತೆ ಮಾಡಬೇಕು. ಹೀಗಾದರೆ ನಮಗಾದ ಅಪಮಾನ, ದುಃಖಗಳು, ನೀಗುವುವೆಂದು ಯುಕ್ತಿಯಿಂದ ಆಲೋಚಿಸಿ ಕ್ರೋಧಯುಕ್ತರಾದ ಸಮಸ್ತ ಪಂಡಿತರೂ, ವರರುಚಿಯ ಮೇಲೆ ಸೇಡು ತೀರಿಸಿಕೊಳ್ಳು ವುದಕ್ಕಾಗಿ ಒಂದುದಿನ ಯಾರೂ ಇಲ್ಲದಸ್ಥಳಕ್ಕೆ ಬಂದು ಅಲ್ಲಿ ಒಬ್ಬ ಶೂದ್ರನನ್ನು ಕಂಡರು.

ಅವರು ಅವನನ್ನು ತಮ್ಮಬಳಿಗೆ ಕರೆದು ಅವನಿಗೆ ಅನೇಕದ್ರವ್ಯಗಳನ್ನು ಕೊಟ್ಟು ಸನ್ಮಾನಿಸಿ ಅವನನ್ನು ಕುರಿತು ಎಲೈ ಶೂದ್ರನೇ ನಿನ್ನಿಂದ ನಮಗೊಂದು ಕಾರ್ಯವಾಗ ಬೇಕಾಗಿದೆ. ಅದೇನೆಂದರೆ ಈ ಧಾರಾನಗರದಲ್ಲಿ ಭೋಜಮಹಾರಾಜನಿಂದ ಮರ್ಯಾದೆ ಹೊಂದುತ್ತಿರುವ ವರರುಚಿಯೆಂಬ ಪಂಡಿತನಿರುವುದು ನಿನಗೂ ಗೊತ್ತಿದೆಯಷ್ಟೆ? ನೀನು ರಾಜನ ಬಳಿಗೆ ಹೋಗಿ ವರರುಚಿಯು ನನ್ನ ಅಣ್ಣನಾಗಬೇಕೆಂದು ಹೇಳು. ಇಷ್ಟೇ ಸಾಕು. ನೀನು ಇದನ್ನು ಮಾಡಿದೆಯಾದರೆ ಈಗ ನಿನಗೆ ಕೊಟ್ಟಿರುವುದಕ್ಕಿಂತಲೂ ಹೆಚ್ಚು ಧನವನ್ನು ಕೊಡುತ್ತೇವೆಂದು ಹೇಳಿ ಆ ಶೂದ್ರನನ್ನು ಕಳುಹಿಸಿಕೊಟ್ಟರು.

ಆಸೆಬುರುಕನಾದ ಆ ಶೂದ್ರನು ಇದಕ್ಕೊಪ್ಪಿ ಆ ದಿನ ರಾತ್ರಿಯನ್ನು ಅಲ್ಲಿಯೇ ಕಳೆದು ಮಾರನೆಯದಿನ ಸೂರ್ಯೋದಯವಾದ ಮೇಲೆ ಭೋಜರಾಜನ ಸಭೆಗೆ ಬಂದು ವಿದ್ವಾಂಸರಿಂದಲೂ, ಸಾಮಂತರಿಂದಲೂ ಓಲೈಸಿಕೊಳ್ಳುತ್ತಿದ್ದ ಭೋಜರಾಜನಿಗೆ ನಮಸ್ಕರಿಸಿ, ಸಮಸ್ತವಿದ್ವಾಂಸರೂ ಕೇಳುವಂತೆ ಈ ರೀತಿ ವಿಜ್ಞಾಪಿಸಿದನು. ಎಲೈ ಮಹಾಪ್ರಾಜ್ಞನಾದ ಭೋಜಭೂಪಾಲನೇ ನನ್ನದೊಂದು ವ್ಯಾಜ್ಯವಿರುವುದು. ನೀನು ರಾಜನಾಗಿರುವುದರಿಂದ ಅದನ್ನು ಪರಿಷ್ಕರಿಸಿ ಕೊಡಬೇಕೆಂದು ಹೇಳಿದನು. ಇದನ್ನು ಕೇಳಿ ಭೋಜಭೂಪಾಲನು, ಹಾಗೆಯೇ ಆಗಲಿ ಹೇಳೆಂದನು.

ರಾಜನಪ್ಪಣೆಯಾದುದರಿಂದ ಆ ಶೂದ್ರನು ನಿರ್ಭಯನಾಗಿ ಎಲೈ ರಾಜನೇ ಈ ವಿದ್ವಚ್ಛಿಖಾಮಣಿಯಾದ ವರರುಚಿಯು ನನ್ನ ಅಣ್ಣನು. ಅವನೂ ನಾನೂ ಬೇರೆ ಯಾಗಿರುವುದೂ ನಿಜ. ಆದರೆ ಇವನು ನನ್ನ ಪಾಲಿನ ಕೆಲವು ಹಣವನ್ನು ಅಪಹರಿಸಿ ಕೊಂಡು ಓಡಿ ಬಂದಿರುವನು. ನಾನು ಎಷ್ಟು ಹುಡುಕಿದರೂ ಸಿಗಲಿಲ್ಲ. ನಿನ್ನ ಸಭೆಯಲ್ಲಿರುವನೆಂದು ತಿಳಿದು ಈಗ ನಿನ್ನಬಳಿಗೆ ಬಂದಿರುವೆನು. ನನ್ನದ್ರವ್ಯವನ್ನು ನನಗೆ ರಾಜನಾದ ನೀನು ಕೊಡಿಸೆಂದು ಹೇಳಿ ಕಿಂಚಿತ್ತೂ ಭಯವಿಲ್ಲದವನಾಗಿ

ವರರುಚಿಯ ವಸ್ತ್ರವನ್ನು ಹಿಡಿದೆಳೆಯುತ್ತಾ, ಅಗ್ರಜಾ ನೀನು ಅಪಹರಿಸಿರುವ ನನ್ನ ಪಾಲಿನ ದ್ರವ್ಯವನ್ನು ಕೊಡು. ನೀನು ಕೊಡದಿದ್ದರೆ ನಾನು ಬಿಡುವವನಲ್ಲ. ಎಂದು ವರರುಚಿಯನ್ನು ಪೀಡಿಸತೊಡಗಿದನು.

ಇದನ್ನು ನೋಡಿ ಅಲ್ಲಿದ್ದ ವಿದ್ವಾಂಸರೆಲ್ಲರೂ ಬಹಳ ಸಂತೋಷಪಟ್ಟರು. ರಾಜನು ಆ ಶೂದ್ರನನ್ನು ನೋಡಿ ಎಲೈ ಶೂದ್ರನೇ ಈ ನಿನ್ನ ನ್ಯಾಯವು ದೊಡ್ಡದಾಗಿರುವಂತೆ ತೋರುತ್ತದೆ. ಇದನ್ನು ಐದು ದಿನಗಳು ಕಳೆದ ಮೇಲೆ ವಿಚಾರಿಸಿ ತೀರ್ಮಾನಿಸೋಣವೆಂದು ನುಡಿದು ಅವನನ್ನು ಕಳುಹಿಸಿದನು. ನಂತರ ಸಭೆಯಲ್ಲಿದ್ದ ಸಮಸ್ತ ಪಂಡಿತರನ್ನು ನೋಡಿ ಎಲೈ ಪಂಡಿತರೇ ನಾನಾಡುವ ಈ ಮಾತನ್ನು ಕೇಳಿರಿ. ಈ ರೀತಿಯ ವ್ಯಾಜ್ಯವನ್ನು ಈ ಮೊದಲು ನಾನು ಎಲ್ಲಿಯೂ ಕೇಳಿರಲಿಲ್ಲ. ಕೇಳುತ್ತಿರುವುದು ಇದೇ ಮೊದಲು. ಈ ಮಹತ್ತರ ವ್ಯಾಜ್ಯದ ನಿರ್ಣಯವನ್ನು ಐದು ದಿನಗಳ ನಂತರ ನಾನು ಹೇಗೆ ತೀರ್ಮಾನಮಾಡುವುದು ! ಇದು ದೊಡ್ಡ ವ್ಯಾಜ್ಯವಾಗಿರುವುದರಿಂದ ಇದನ್ನು ನೀವು ಆಲೋಚಿಸಿ ತೀರ್ಮಾನಿಸಿ ಎಂದು ನುಡಿದನು.

ರಾಜನ ಈ ಮಾತನ್ನು ಕೇಳಿ ಸಭೆಯಲ್ಲಿದ್ದ ವಿದ್ವಾಂಸರು ತಮ್ಮ ಕಾಪಟ್ಯವನ್ನು ಹೊರಕ್ಕೆ ತೋರಗೊಡದೆ ಮನಸ್ಸಿನಲ್ಲಿಟ್ಟುಕೊಂಡು, ರಾಜನನ್ನು ಕುರಿತು ರಾಜೇಂದ್ರನಾದ ಭೋಜಮಹಾರಾಜನೇ, ನಾವು ಯಾರೂ ಈ ವರರುಚಿಯು ಯಾರೆಂದು ತಿಳಿಯೆವು. ಇವನ ಸಂತತಿಯಾವುದೋ ? ಇವನ ಜನನೀ ಜನಕರಾರೋ ? ನಮಗೆ ಗೋಚರವಿಲ್ಲ. ಇವನು ಶೂದ್ರನಾಗಿರುವುದೇ ನಿಜವಾಗಿದ್ದರೆ ಖಂಡಿತವಾಗಿಯೂ ಈತನನ್ನು ಬಹಿಷ್ಕರಿಸಿ ಈತನಿಂದ ನಾವೆಲ್ಲರೂ ಅಪಾರವಾದ ದಕ್ಷಿಣೆಯನ್ನು ಪ್ರಾಯಶ್ಚಿತ್ತ ರೂಪವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಶೂದ್ರನಾದವನಿಗೆ ಯಾವ ಬ್ರಾಹ್ಮಣನು ತಾನೇ ನಮಸ್ಕರಿಸುವನು ! ನಾವು ಇವನನ್ನು ಗುರುವೆಂದು ಭಾವಿಸಿ ನಮಸ್ಕರಿಸಿದ್ದು ತಪ್ಪಾಯಿತು ಎಂದರು. ಪಂಡಿತರ ಈ ಮಾತನ್ನು ಕೇಳಿ ಭೋಜರಾಜನು ಬಹುವಾಗಿ ಚಿಂತಿಸಿ ಪಂಡಿತರೆಲ್ಲರನ್ನೂ ಅವರವರ ಮನೆಗಳಿಗೆ ಕಳುಹಿಸಿಕೊಟ್ಟನು. ನಂತರ ಭೋಜಭೂಪಾಲನು ಅಲ್ಲಿದ್ದ ಮಹಾಪ್ರಾಜ್ಞನೂ ವಿದ್ವದ್ರತ್ನನೂ ವಾಕ್ಚತುರನೂ ಆದ ವರರುಚಿಯನ್ನು ನೋಡಿ ಎಲೈ ವರರುಚಿಯೇ ಮನೆಗೆ ಹೋಗು. ಐದು ದಿನಗಳು ಕಳೆದ ಮೇಲೆ ಸಭೆಗೆ ಬರಬೇಕೆಂದು ಹೇಳಿ ಮಹಾಭುಜನೂ ವಂದಿಮಾಗಧಸೇವಿತನೂ ಆದ ಭೋಜರಾಜನು ಸಭೆಯಿಂದ ಹೊರಟು ತನ್ನ ಅರಮನೆಯನ್ನು ಸೇರಿದನು.

ಜಾಣನಾದ ವರರುಚಿಯು ಚಿಂತಾವ್ಯಾಕುಲ ಮನಸ್ಕನಾಗಿ ಯೋಚಿಸಿ ಈ ಎಲ್ಲ ಕೃತ್ರಿಮವೂ ಈ ಬ್ರಾಹ್ಮಣವಿದ್ವಾಂಸರದೆಂದು ನಿಶ್ಚಯಿಸಿ ಮಧ್ಯರಾತ್ರಿಯಲ್ಲಿ ಎದ್ದು ತನ್ನ ಮನೆಯಿಂದ ಹೊರಟು ತನಗೊದಗಿದ ಲೋಕಾಪವಾದವನ್ನು ಕಳೆದುಕೊಳ್ಳಲು

ಗಂಗಾಸ್ನಾನ ಮಾಡಲಿಚ್ಛಿಸಿ ಸರ್ವಪಾಪನಾಶಕವೂ, ಪುಣ್ಯಪ್ರದವೂ, ಬ್ರಹ್ಮೇಂದ್ರಾದಿ ದೇವತಾ ನಮಸ್ಕೃತವೂ ಆದ, ಕಾಶೀಪಟ್ಟಣವನ್ನು ಸೇರಿ ಮಣಿಕರ್ಣಿಕಾತೀರ್ಥಕ್ಕೆ ಬಂದು ಶಾಸ್ತ್ರವಿಧಿ ಪ್ರಕಾರವಾಗಿ ಸಂಕಲ್ಪಮಾಡಿ ಭಕ್ತಿಪೂರ್ವಕವಾಗಿ ಗಂಗೆಯಲ್ಲಿ ಸ್ನಾನ ಮಾಡಿ ಅಘಮರ್ಷಣಮಂತ್ರವನ್ನು ಜಪಿಸಿ, ತನ್ನ ನಿತ್ಯಕರ್ಮ ತೀರಿಸಿಕೊಂಡು, ವಿಶ್ವನಾಥನನ್ನೂ, ವಿಶಾಲಾಕ್ಷಿಯನ್ನೂ, ದುಂಡಿವಿನಾಯಕನನ್ನೂ, ಇನ್ನುಳಿದ ಸಮಸ್ತ ದೇವತೆಗಳನ್ನೂ ಸ್ತುತಿಸಿ, ನಮಸ್ಕರಿಸಿ ವಿಧಿವತ್ತಾಗಿ ಉಪವಾಸ ಮಾಡಿ ಯಥಾವಿಧಿ ಶಾಸ್ತ್ರಕರ್ಮಗಳನ್ನು ತೀರಿಸಿದನು.

ಅಲ್ಲಿಂದ ಗಯಗೆ ಹೋಗಿ ಪಿತೃಗಳಿಗೆ ಪಿಂಡಪ್ರದಾನಮಾಡಿ, ತ್ರಿವೇಣಿಯಲ್ಲಿ ಮಿಂದು ಮತ್ತೆ ಕಾಶಿಗೆ ಬಂದು ಪುನಃ ಮಣಿಕರ್ಣಿಕಾತೀರ್ಥಕ್ಕೆ ಬಂದು ಸ್ನಾನ ಮಾಡಿ, ಪರಮೇಶ್ವರಿಯಾದ ಗಂಗಾದೇವಿಯನ್ನು ಕುರಿತು, ಭಾಗೀರಥಿಯೇ, ಸಗರ ಪುತ್ರರಿಗೆ ಸ್ವರ್ಗ ಕೊಟ್ಟವಳೇ, ಜಹ್ನುಪುತ್ರಿಯೇ, ಮಹಾದೇವನ ಜಟಾಜೂಟದಲ್ಲಿ ನರ್ತಿಸುವವಳೇ ಮಾತೆಯೇ "ನಿನ್ನ ದರ್ಶನದಿಂದಲೇ ಮುಕ್ತಿಯಾಗುವಲ್ಲಿ, ಇನ್ನು ಸ್ನಾನ ದಿಂದ ಯಾವ ಫಲ ದೊರೆಯುವುದೋ ನಾನರಿಯೆ"ಎಂದು ನುಡಿದ ವ್ಯಾಸೋಕ್ತಿಯು ಸತ್ಯ ವಾದರೆ ಕಮಲಾಕ್ಷಿಯೇ ಈ ಮಹಾಪವಾದಕ್ಕೊಳಗಾಗಿರುವ ನನ್ನನ್ನು ಪಾರುಮಾಡು. ಸಮರ್ಥ್ಯಮೆಯೇ, ವಿಷ್ಣುಪಾದೋದ್ಭವಳೇ, ಬ್ರಹ್ಮೇಂದ್ರಾದಿ ಪೂಜಿತೆಯೇ, ದೇವಿಯೇ ಉದ್ಧರಿಸೆಂದು ಸ್ತುತಿಸಲಾಗಿ ಗಂಗಾದೇವಿಯು ಅವನ ಸ್ತುತಿಗೆ ಮೆಚ್ಚಿ ಪ್ರತ್ಯಕ್ಷಳಾಗಿ ಪಂಡಿತನಾದ ವರರುಚಿಗೆ ತನ್ನ ಹಸ್ತಾಭರಣವಾದ ಕಂಕಣವನ್ನು ಕೊಟ್ಟು ಸರ್ವಜ್ಞೆ ಯಾದ ಆಕೆಯು ವರರುಚಿಯನ್ನು ಕುರಿತು, ವಿದ್ವಾಂಸನಾದ ವರರುಚಿಯೇ, ನಿನಗೆ ಪಾಪವೇ ಇಲ್ಲ. ಬ್ರಾಹ್ಮಣೋತ್ತಮನೇ ವಿದ್ವಾಂಸರಿಂದ ಕಲ್ಪಿಸಲ್ಪಟ್ಟ ಅಪವಾದವು ನಿನಗೆಲ್ಲಿಯದು ? ನೀನು ಶೀಘ್ರವಾಗಿ ಭೋಜರಾಜನ ಬಳಿಗೆ ಹೋಗಿ ಈ ಕಂಕಣ ವನ್ನು ತೋರಿಸಿ ಎಲೈ ಭೋಜರಾಜನೇ ಆ ಶೂದ್ರನು ನಿಜವಾಗಿಯೂ ನನ್ನ ಅನುಜ ನಾದರೆ ಅವನ ಪಾಲಿಗೆ ಬಂದಿರುವ ಇಂತಹ ಇನ್ನೊಂದು ಕಂಕಣವನ್ನು ತರಬೇಕು. ಆ ಶೂದ್ರನು ಇದರ ಜೋಡಿಯ ಕಂಕಣವನ್ನು ತಂದರೆ ಆಗ ಅವನು ನನ್ನ ಸಹೋದರನೇ ಸರಿ ಎಂಬುದಾಗಿ ಹೇಳೆಂದು ವರರುಚಿಗೆ ತಿಳಿಸಿ ಅವನನ್ನು ಧಾರಾನಗರಕ್ಕೆ ಹೋಗುವಂತೆ ಹೇಳಿ ಅಂತರ್ಧಾನಳಾದಳು.

ಬ್ರಾಹ್ಮಣೋತ್ತಮನಾದ ವರರುಚಿಯು ಧಾರಾನಗರಕ್ಕೆ ಹಿಂದಿರುಗಿ ಭೋಜ ರಾಜನ ಬಳಿಗೆ ಬಂದು ತನಗೆ ಗಂಗಾದೇವಿಯು ಹೇಳಿಕೊಟ್ಟಿದ್ದಂತೆ ಯಥಾರ್ಥವಾಗಿ ನುಡಿದನು. ಅದನ್ನು ಕೇಳಿ ಭೋಜರಾಜನು ಕೂಡಲೇ ಸಭೆ ಸೇರಿಸಿ ಶೀಘ್ರವಾಗಿ ಆ ಶೂದ್ರನನ್ನು ಬರಮಾಡಿ ಅತಿ ನಿಷ್ಠುರದಿಂದ ಅವನನ್ನು ಕುರಿತು ಎಲೈ ಶೂದ್ರನೇ, ನೀನು ನಿಜವಾಗಿ ವರರುಚಿಯ ಸಹೋದರನೇ ಆಗಿದ್ದಲ್ಲಿ, ನಿನ್ನ ಪಾಲಿಗೆ ಬಂದಿರುವ ಇಂತಹ ಇನ್ನೊಂದು ಹಸ್ತಕಂಕಣವನ್ನು ತಂದು ನನಗೆ ತೋರಿಸು. ಇಗೋ ವರರುಚಿಯ ಪಾಲಿನ ಕಂಕಣವಿದು. ನನ್ನಲ್ಲಿ ಕೊಟ್ಟಿರುವನು. ನೀನು ಅವನ ಅನುಜನಾದರೆ, ಇಂತಹ

ಇನ್ನೊಂದು ಕಂಕಣವು ನಿನ್ನಲ್ಲಿರಬೇಕಲ್ಲವೇ ? ಒಂದು ವೇಳೆ ನೀನು ಇಂತಹ ಇನ್ನೊಂದು ಕಂಕಣವನ್ನು ತೋರಿಸದೇ ಹೋದರೆ ನಿನ್ನ ಶಿರಚ್ಛೇದ ಮಾಡಿಸುವೆನೆಂದು ಹೇಳಿದನು. ಭೋಜರಾಜನ ಈ ಮಾತನ್ನು ಕೇಳಿ ಆ ಶೂದ್ರನು ಭಯದಿಂದ ನಡುಗುತ್ತಾ ಪ್ರಭೋ ನಿನ್ನ ಸಭೆಯ ಈ ಪಂಡಿತರು ನನಗೆ ಬಹಳ ದ್ರವ್ಯವನ್ನು ಕೊಟ್ಟು, ಈರೀತಿ ಹೇಳೆಂದು ಹೇಳಿಕೊಟ್ಟಿದ್ದರು. ಆದುದರಿಂದಲೇ ನಾನು ಆಶಾಪರವಶನಾಗಿ ತುಂಬಿದ ಸಭೆಯಲ್ಲಿ ಪರಮಪೂಜ್ಯನೂ, ವಿದ್ವಜ್ಜನ ಸೇವಿತನಾದವನೂ ಆದ ವರರುಚಿಯನ್ನು ಕುರಿತು ಆಡಬಾರದ ಮಾತನ್ನಾಡಿದೆನು. ರಾಜಾ ಈ ಮಾತು ಸತ್ಯ. ಅಜ್ಞಾನದಿಂದ ಮಾಡಿದ ನನ್ನ ಈ ಅಪರಾಧವನ್ನು ಕೃಪೆಯಿಟ್ಟು ಕ್ಷಮಿಸು. ಮಹೀಪಾಲನೇ ಶೂದ್ರನಾದ ನನ್ನನ್ನು ರಕ್ಷಿಸೆಂದು ಪಾದದಲ್ಲಿ ಬಿದ್ದು ಬಹುವಿಧವಾಗಿ ಪ್ರಾರ್ಥಿಸಿ ಶರಣು ಬೇಡಿದನು.

ರಾಜನು ಶೂದ್ರನನ್ನು ಕೊರಡುಗಳಿಂದ (ಕಶೆಗಳಿಂದ) ಹೊಡಿಸಿ, ಶಾಸ್ತ್ರರೀತಿ ಬಹುವಾಗಿ ಆಲೋಚಿಸಿ ಆ ದುಷ್ಟನನ್ನು ಭಯಂಕರವಾದ ಕಾರಾಗೃಹದಲ್ಲಿಡಿಸಿದನು. ಭೋಜರಾಜನು ಭಯವಿಹ್ವಲರೂ ಪಾಪಿಗಳೂ ಆದ ತನ್ನ ಸಭಾಸದರಾದ ಆ ವಿದ್ವಾಂಸರನ್ನು ನೋಡಿ ಕೋಪಗೊಂಡು ಅನೇಕ ರೀತಿ ನಿಂದಿಸಿ ತಾನು ಸಿಂಹಾಸನ ದಿಂದ ಮೇಲೆದ್ದು ಪ್ರಾಜ್ಞನಾದ ವರರುಚಿಯನ್ನು ಪ್ರೇಮದಿಂದ ಬಿಗಿದಪ್ಪಿ ಭಕ್ತಿಪುರಸ್ಸರ ವಾಗಿ ನಮಿಸಿ ಬಹುವಿಧವಾಗಿ ಹೊಗಳಿ ಕೈಮುಗಿದು ಅವನ ಕ್ಷಮಾಪಣೆ ಕೇಳಿ ಕೊಂಡನು. ಅವನು ವರರುಚಿಯನ್ನು ಕುರಿತು ಎಲೈ ವಿದ್ವದ್ವರೇಣ್ಯನೇ ವೇದಶಾಸ್ತ್ರ ಪಾರಂಗತನಾದ ವರರುಚಿಯೇ, ಲೋಕದಲ್ಲಿ ನೀನೊಬ್ಬನೇ ಶಬ್ದಶಾಸ್ತ್ರಗಳನ್ನು ಬಲ್ಲ ವನು. ನಿನ್ನ ಹೊರತು ಬೇರೆ ಯಾರೂ ಇಲ್ಲ. ಅಪಶಬ್ದಗಳಿಂದ ಕೂಡಿದ ಸಮಸ್ತ ಗ್ರಂಥಗಳನ್ನೂ ತಿದ್ದಿ ಶುದ್ಧಶಬ್ದಗಳೆಂಬ ರತ್ನಸಮೂಹದಿಂದ ಶೋಭೆಗೊಳಿಸಿದೆ. ಸಮಸ್ತ ಮೂಢಬ್ರಾಹ್ಮಣರನ್ನೂ, ನೀನು ವಿದ್ವಾಂಸರನ್ನಾಗಿ ಮಾಡಿದೆ. ಈ ಲೋಕ ದಲ್ಲಿ ನಿನಗೆ ಸಮಾನರಾದ ಅಥವಾ ನಿನಗಿಂತ ಅಧಿಕರಾದ ಪಂಡಿತರು ಯಾರೂ ಇಲ್ಲವೇ ಇಲ್ಲ. ಇದು ನಿಸ್ಸಂಶಯ. ಮಹಾತ್ಮನಾದ ನಿನ್ನಿಂದಲೇ ನಾನು ವೇದಶಾಸ್ತ್ರಗಳನ್ನು ಚೆನ್ನಾಗಿ ಕಲಿತೆನು. ನೀನೇ ನನ್ನಗುರು. ನನ್ನಗುರುವರ್ಯನಾದ ವರರುಚಿಯೇ ನನಗೆ ವೇದಾಂತ ಶಾಸ್ತ್ರವನ್ನುಪದೇಶಿಸು ಎಂದು ಭೋಜರಾಜನು ಪ್ರಾರ್ಥಿಸಿದನು.

ಅವನ ಪ್ರಾರ್ಥನೆಯನ್ನು ಮನ್ನಿಸಿ ವಿದ್ವದ್ವರೇಣ್ಯನಾದ ವರರುಚಿಯು ಭೋಜ ಭೂಪಾಲನಿಗೆ ರಹಸ್ಯಮಯವಾದ ಸಮಸ್ತ ಉಪನಿಷತ್ತುಗಳ ಸಾರವನ್ನೂ ಅರ್ಥಸಹಿತ ಉಪದೇಶಿಸುತ್ತಾ, ಭೋಜಮಹೀಪಾಲನೇ ಜಾಗ್ರತ, ಸ್ವಪ್ನ, ಸುಷುಪ್ತಿ ಈ ಮೂರು ಅವಸ್ಥೆಗಳಲ್ಲಿ ಯಾವ ಚಿಜ್ಜ್ಯೋತಿಯು ಪ್ರಕಾಶಿಸುವುದೋ, ಸೃಷ್ಟಿಕರ್ತನಾದ ಬ್ರಹ್ಮನು ಮೊದಲುಗೊಂಡು ಸಮಸ್ತ ರಜರಜಗಳಲ್ಲೂ, ಕಣಕಣಗಳಲ್ಲೂ, ಅಣುರೇಣು ತೃಣ

ಕಾಷ್ಠಗಳಲ್ಲೂ, ಸಮಸ್ತ ಜೀವಜಂತುಗಳಲ್ಲೂ, ಜಡ, ಚೈತನ್ಯಗಳಲ್ಲೂ ಯಾವತೇಜಸ್ಸು ಅವ್ಯಾಹತವಾಗಿ ವ್ಯಾಪಿಸಿರುವುದೋ, ಯಾವುದು ಅಣುವಿಗೆ ಅಣುವಾಗಿಯೂ, ಮಹತ್ತಿಗೆ ಮಹತ್ತಾಗಿಯೂ, ಇರುವುದೋ ಅದೇ ಪರಬ್ರಹ್ಮವೆಂದು ತಿಳಿ. ಸಮಸ್ತ ಜಗತ್ತಿಗೆ ಯಾವುದು ಸಾಕ್ಷೀಭೂತವಾಗಿದೆಯೋ ಯೋಗಿವರ್ಯರು ತತ್ವಮಸ್ಯಾದಿ ಮಹಾವಾಕ್ಯಾರ್ಥಗಳಿಂದ ಯಾವುದನ್ನು ಹುಡುಕುತ್ತಿರುವರೋ, ಯಾವುದು ಸಕಲ ಜಗತ್ತುಗಳ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣವೋ ಯಾವುದರ ಬೆಳಕಿನಿಂದ ಸೂರ್ಯನು ಆಕಾಶದಲ್ಲಿ ಬೆಳಗುವನೋ, ಬೆಳಗುವ ಸಾಮರ್ಥ್ಯ ಪಡೆದನೋ ಇಂದ್ರಾದಿಗಳು ಯಾರ ಅಪ್ಪಣೆಯಿಂದ ತಮ್ಮ ತಮ್ಮ ಕೆಲಸಕಾರ್ಯಗಳಲ್ಲಿ ನಿರತರಾಗಿರುವರೋ, ಆ ಆಜ್ಞಾ ಕರ್ತೃವೇ ಪರಬ್ರಹ್ಮವು. ವಿಷ್ಣು, ಬ್ರಹ್ಮ, ಶಿವರು ಯಾರನ್ನು ಸದಾ ಎಡಬಿಡದೆ ಧ್ಯಾನಿಸುವರೋ ಅದೇ ಪರಬ್ರಹ್ಮವು ಎಂದು ಉಪದೇಶಿಸಿದನು.

ಈ ರೀತಿ ವರರುಚಿಯು, ಆ ಭೋಜಮಹಾರಾಜನಿಗೆ ಪದೇಪದೇ ಉಪದೇಶಿಸುತ್ತಾ, ಅದನ್ನು ಹಗಲಿರುಳು ಎಡಬಿಡದೆ ಧ್ಯಾನಿಸುವಂತೆ ತಿಳಿಸಿ ಅವನ ಸಂಶಯಗಳೆಲ್ಲವನ್ನೂ ಪರಿಹರಿಸಿದನು. ನಂತರ ವರರುಚಿಯು ಮಂದಹಾಸದಿಂದ ಎಲೈ ಭೋಜಭೂಪಾಲನೇ ನಿನ್ನ ಸಭೆಯಲ್ಲಿನ ಸಮಸ್ತ ಪಂಡಿತರೂ ನಿಶ್ಚಯವಾಗಿ ಕೃತಘ್ನರು ಅವರ ಮೇಲೆ ಸಿಟ್ಟಾಗಬೇಡ. ನಾನು ಇವರಿಗೆ ಮಾಡಿದ ಉಪಕಾರಗಳು ನೀರಿನಲ್ಲಿ ಹೋಮಮಾಡಿದಂತೆ ನಿರರ್ಥಕವಾದುವು. ರಾಜಾ, ಭೂಲೋಕದಲ್ಲಿ ನಾಯಿ, ಸಿಂಹ, ಗಜ, ಇವುಗಳಲ್ಲಿ ಪರಸ್ಪರ ದ್ವೇಷವು ಹೇಗೆ ಸ್ವಾಭಾವಿಕವೋ, ಹಾಗೆಯೇ ಈ ಬ್ರಾಹ್ಮಣರ ದ್ವೇಷವೂ ಸ್ವಾಭಾವಿಕವೇ. ಈ ವಿಷಯದಲ್ಲಿ ನಿನಗೆ ಒಂದು ಪೂರ್ವ ಕಥೆಯನ್ನು ಹೇಳುವೆನು ಕೇಳು.

ರಾಜಾ ಪೂರ್ವದಲ್ಲಿ ಜಮದಗ್ನಿಯ ಪುತ್ರನಾದ ಮಹಾಪ್ರತಾಪಿಯಾದ ಭಾರ್ಗವ ರಾಮನು ತನ್ನ ತಂದೆಯನ್ನು ಕೊಂದ ಕ್ಷತ್ರಿಯರ ಮೇಲಿನ ಸೇಡಿನಿಂದ ತನ್ನ ಆಯುಧವಾದ ಕೊಡಲಿಯಿಂದ ಭೂಮಿಯನ್ನು ಕ್ಷತ್ರಿಯರಹಿತವನ್ನಾಗಿ ಮಾಡಿ ಪರಶುರಾಮನೆಂದು ಪ್ರಖ್ಯಾತನಾದನು. ಅವನು ಅವರ ರಕ್ತದಿಂದ ತನ್ನ ಪಿತೃಗಳಿಗೆ ತರ್ಪಣ ಕೊಟ್ಟು ಇನ್ನೂ ದುಗುಡದಿಂದಿದ್ದನು. ಆಗ ಅವನು ತನ್ನ ಪಿತೃಗಳಿಂದ ಸಂತೈಸಲ್ಪಟ್ಟು ಸಮಾಧಾನ ಹೊಂದಿ, ಅವರಪ್ಪಣೆಯಂತೆ ಸಮಸ್ತ ಭೂಮಿಯನ್ನೂ ಕಶ್ಯಪನೆಂಬ ಬ್ರಾಹ್ಮಣನಿಗೆ ದಾನ ಮಾಡಿದನು. ದಾನಪಡೆದ ಕಶ್ಯಪನು, ಪರಶುರಾಮನನ್ನು ಕುರಿತು. ಎಲೈ ಪರಶುರಾಮಾ, ನೀನು ಕ್ಷತ್ರಿಯರನ್ನೆಲ್ಲಾ ಕೊಂದು, ಸಮಸ್ತ ಭೂಲೋಕವನ್ನೂ ನನಗೆ ದಾನವಾಗಿ ಕೊಟ್ಟಿರುವೆ. ಈಗ ಭೂಮಿಯೆಲ್ಲಾ ನನ್ನದಾಯಿತು. ನಿನಗೆ ಇದರ ಮೇಲೆ ಸ್ವಲ್ಪವೂ ಅಧಿಕಾರವಿಲ್ಲ. ಬೇಕಾದರೆ ನಿನ್ನ ತಪಸ್ಸಿಗೆ ಮಾತ್ರ ಆಶ್ರಮಕ್ಕಾಗಿ ಸ್ವಲ್ಪ ಸ್ಥಳವನ್ನು ತೆಗೆದುಕೋ. ಇಲ್ಲದಿದ್ದರೆ ನೀನು

ನಿನ್ನ ಮುಂದಿನ ದಾರಿ ನೋಡಿಕೋ; ನೀನು ತಪಸ್ಸುಮಾಡುವುದಾದರೆ ಇಲ್ಲಿರು. ಇಲ್ಲವಾದರೆ ಈಗಿಂದೀಗಲೇ ತಡಮಾಡದೆ ಇಲ್ಲಿಂದ ಹೊರಡು ಎಂದನು.

ಕಶ್ಯಪನ ಉದ್ಧಟತನದ ಮಾತನ್ನು ಕೇಳಿ ಮಹಾತೇಜಸ್ವಿಯಾದ ಪರಶುರಾಮನು ಅತ್ಯಂತ ಕೋಪಗೊಂಡು ಅಲ್ಲಿದ್ದ ಬ್ರಾಹ್ಮಣರನ್ನು ಕುರಿತು ಎಲೈ ಬ್ರಾಹ್ಮಣರೇ ನೀವು ಉಪಕಾರಸ್ಮರಣೆಯಿಲ್ಲದೆ ಕೃತಘ್ನರಾದುದರಿಂದ ನಿಮಗೆ ಈ ಭೂಮಿಯ ಆಧಿಪತ್ಯವು ಎಂದೂ ಉಂಟಾಗದಿರಲಿ. ನೀವು ಅಸೂಯಾಪರರಾಗಿ ಎಂದೂ ಐಕ್ಯಮತ್ಯದಿಂದಿರದೆ ಪರಸ್ಪರ ಜಗಳವಾಡುತ್ತಿರಿ ಎಂದು ಶಪಿಸಿದನು. ತಾನು ಸಮುದ್ರ ರಾಜನನ್ನು ತನ್ನ ತಪಸ್ಸಿಗಾಗಿ ಸ್ಥಳಕೊಡುವಂತೆ ಪ್ರಾರ್ಥಿಸಿದನು. ಆಗ ಸಮುದ್ರರಾಜನು ಅವನಲ್ಲಿಗೆ ಬಂದು ನಿನಗೆಷ್ಟು ಭೂಮಿ ಬೇಕೆಂದು ಕೇಳಿದನು. ಅದಕ್ಕೆ ಪರಶುರಾಮನು ನನ್ನ ಈ ಕೊಡಲಿಯನ್ನು (ಪರಶುವನ್ನು) ಎಷ್ಟು ದೂರಕ್ಕೆ ಎಸೆಯುವೆನೋ ಅಷ್ಟು ವಿಸ್ತಾರವಾದ ಪ್ರದೇಶವನ್ನು ನನಗೆ ಕೊಡು ಎಂದನು. ಸಮುದ್ರರಾಜನು ಅದಕ್ಕೆ ಒಪ್ಪಿ, ಅವನು ಎಷ್ಟು ದೂರ ಕೊಡಲಿ ಎಸೆದನೋ ಅಷ್ಟು ವಿಸ್ತಾರವಾದ ಪ್ರದೇಶವನ್ನು ತಪಸ್ಸಾಚರಿಸುವುದಕ್ಕೋಸ್ಕರ ಪರಶುರಾಮನಿಗೆ ಕೊಟ್ಟನು. ಆ ಭೂಭಾಗಕ್ಕೆ ಭಾರ್ಗವರಾಮನು ಕೇರಳದೇಶವೆಂದು ಹೆಸರಿಟ್ಟು ಅಲ್ಲಿ ತಪಸ್ಸಿನಲ್ಲಿ ಮಗ್ನನಾದನು.

ಕೇರಳವು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರಿಂದ ಕೂಡಿದ್ದು ಅಪ್ಸರೆಯರಂತೆ ಸುಂದರಿಯರಾದ ಸ್ತ್ರೀಯರಿಂದ ನಿಬಿಡವಾಗಿರುವುದು. ಅಲ್ಲಿ ಜಗತ್ಪತಿಯಾದ ಪದ್ಮನಾಭನು ಶೇಷಶಾಯಿಯಾಗಿ ಭಕ್ತರಿಗೆ ಬೇಡಿದಿಷ್ಟಾರ್ಥಗಳನ್ನು ಈಯುವವನಾಗಿ ಸದಾ ಬ್ರಹ್ಮನಿಂದ ನಮಸ್ಕೃತವಾದ ಪಾದಕಮಲಗಳುಳ್ಳವನಾಗಿ ವಾಸಮಾಡುತ್ತಿರುವನು. ಹೀಗೆ ಪರಶುರಾಮನಿಂದ ಶಪಿಸಲ್ಪಟ್ಟ ಮತ್ತು ಗುಟ್ಟಾಗಿ ಪಾಪವನ್ನಾಚರಿಸುವ ಈ ಬ್ರಾಹ್ಮಣರನ್ನು ಶಿಕ್ಷಿಸಲು ಯಮನಿದ್ದೇ ಇರುವನು. ಆದುದರಿಂದ ಸಮಸ್ತ ರಾಜಪೂಜಿತನಾದ ಭೋಜಮಹಾರಾಜನೇ, ಈ ಕುಮಾರ್ಗಿಗಳಾದ ಬ್ರಾಹ್ಮಣರಲ್ಲಿ ಸಿಟ್ಟಾಗಬೇಡ. ಅವರನ್ನು ಶಿಕ್ಷಿಸದೇ ಕ್ಷಮಿಸೆಂದು ಹೇಳಿ ಸಂತೈಸಿ ಸಮಾಧಾನಪಡಿಸಿದನು.

ವರರುಚಿಯು ಹೀಗೆ ಭೋಜಮಹಾರಾಜನನ್ನು ಸಮಾಧಾನಪಡಿಸಿ ತನ್ನ ವೃತ್ತಾಂತವನ್ನು ಹೇಳತೊಡಗಿದನು. ಎಲೈ ರಾಜನೇ ನಾನು ನಿನಗೊಂದು ರಹಸ್ಯವಾದ ಸಂಗತಿಯನ್ನು ಹೇಳುವೆನು ಕೇಳು. ಪೂರ್ವದಲ್ಲಿ ಕೈಲಾಸನಾಥನಾದ ಶಂಕರನು ಭೂಲೋಕದಲ್ಲಿ ವೇದಧರ್ಮವು ಕೆಟ್ಟು ಖಿಲವಾಗಿ ಬ್ರಾಹ್ಮಣರು ವೇದಗಳನ್ನು ತಪ್ಪಾಗಿ ಪಠಿಸುತ್ತಾ ಶುದ್ಧವಾದ ಶಬ್ದಜ್ಞಾನವಿಲ್ಲದೆ ಇರುವುದನ್ನು ನಾರದನಿಂದ ಕೇಳಿ ತಿಳಿದು ಅದನ್ನು ಸರಿಪಡಿಸಲು ಭೂಲೋಕದಲ್ಲಿ ಅವತರಿಸುವಂತೆ ನನಗೆ ಆಜ್ಞೆ ಮಾಡಿದನು. ಮಹಾದೇವನ ಮಾನಸಪುತ್ರನಾದ ದೇವಾಂಗನೆಂಬ ನಾನು ಈ ಲೋಕಕ್ಕೆ ಬಂದು ಆ ದೇವದೇವನ ಅಪ್ಪಣೆಯಂತೆ ಅವನು ಆಜ್ಞಾಪಿಸಿದ ಸಮಸ್ತ

ಕಾರ್ಯಗಳನ್ನೂ ನೆರವೇರಿಸಿರುವೆನು. ಇನ್ನು ಇಲ್ಲಿ ನನಗೇನೂ ಕೆಲಸವಿಲ್ಲ. ನಾನು ಕೈಲಾಸಕ್ಕೆ ಹೋಗುವೆನು. ಎಂದು ಹೇಳಿ ಭೋಜಮಹಾರಾಜನನ್ನು ಸುಖೀಭವ, ಜಯವಿಜಯೀಭವ ಎಂದು ಅಂತಃಕರಣಪೂರ್ವಕವಾಗಿ ಆಶೀರ್ವದಿಸಿದನು. ಆ ಮಹಾರಾಜನಿಗೆ ಮಂಗಳ ದಿವ್ಯಾಂಬರಗಳನ್ನೂ ಪೂಜ್ಯ ಯಜ್ಞೋಪವೀತಗಳನ್ನೂ ಕೊಟ್ಟು ತಾನು ಕೈಲಾಸ ಹೊಂದುವುದಕ್ಕಾಗಿ ಬ್ರಹ್ಮ ವಿಷ್ಣುಗಳಿಂದ ವಂದಿತನಾದ ತನ್ನ ತಂದೆಯಾದ ಸಾಂಬನನ್ನು ಧ್ಯಾನಿಸುತ್ತಾ ಅರಮನೆಯನ್ನು ಬಿಟ್ಟು ಹೊರಕ್ಕೆ ಬಂದನು. ಅವನ ಧ್ಯಾನ ಮಾತ್ರದಿಂದಲೇ ಸರ್ವಾಂತರ್ಯಾಮಿಯಾದ ಪರಮಾತ್ಮನು ದೇವಾಂಗನ ಇಚ್ಛೆಯನ್ನರಿತು ಅವನನ್ನು ಕೈಲಾಸಕ್ಕೆ ಕರೆತರಲು ಸೂರ್ಯನಂತೆ ಹೊಳೆಯುವ ವಿಮಾನವನ್ನು ಕಳುಹಿಸಿಕೊಟ್ಟನು.

ಆ ವಿಮಾನವು ಘಂಟಾನಾದದಿಂದ ಯುಕ್ತವಾಗಿದ್ದು ಶಿವಭಕ್ತರಿಂದಲೂ ಅಪ್ಸರೆಯರಿಂದಲೂ ನೃತ್ಯಗಾನ ಮಾಡುವ ಗಂಧರ್ವರಿಂದಲೂ ಭರಿತವಾಗಿದ್ದು ವಜ್ರ ವೈಡೂರ್ಯ ಮಾಣಿಕ್ಯ ಮರಕತ ಪುಷ್ಯರಾಗಾದಿ ನವರತ್ನಗಳಿಂದ ಅಲಂಕೃತವಾಗಿ ಶೋಭಿಸುತ್ತಿತ್ತು. ಅದು ಮಲ್ಲಿಗೆ ಜಾಜಿ ಮೊದಲಾದ ಪುಷ್ಪಗಳ ಪರಿಮಳದಿಂದಲೂ ಸುಗಂಧದ ಧೂಪದಿಂದಲೂ ಆವೃತವಾಗಿದ್ದು ಸರ್ವಫಲ ಭಕ್ಷ್ಯಗಳಿಂದ ತುಂಬಿ ರಾರಾಜಿಸುತ್ತಿತ್ತು. ಹೀಗೆ ರಾರಾಜಿಸುತ್ತಿದ್ದ ಆ ವಿಮಾನವು ಭೋಜರಾಜನ ಧಾರಾ ನಗರಕ್ಕೆ ಬಂದು ತನ್ನ ಕಾಂತಿಯಿಂದ ದಶದಿಕ್ಕುಗಳನ್ನೂ ಬೆಳಗುತ್ತ ದೇವಾಂಗನ ಸಮೀಪದಲ್ಲಿ ನಿಂತಿತು.

ಆಗ ನಗರವಾಸಿಗಳಾದ ಸಮಸ್ತ ಜನರೂ ಭೋಜರಾಜನೂ ಆ ದಿವ್ಯ ವಿಮಾನ ವನ್ನು ನೋಡಿ ಸಂತೋಷಪಟ್ಟರು. ಬಹುಸಂಭ್ರಮ ಸಡಗರಗಳಿಂದ ಮಹಾ ರಾಜನು ಪೂಜ್ಯನಾದ ತನ್ನಗುರುವಾದ ವರರುಚಿಯನ್ನು ವಸ್ತ್ರ ಮಾಲಾಭರಣ ಗಳಿಂದ ಅಲಂಕರಿಸಿ ವಿಧಿವತ್ತಾಗಿ ಅವನಿಗೆ ಗುರುಪೂಜೆ ಮಾಡಿ ಭಕ್ತಿಯಿಂದ ಕೈಮುಗಿದು ನಿಂತನು. ವರರುಚಿಯು ಭಕ್ತಿಯಿಂದ ಅಂಜಲೀಬದ್ಧನಾಗಿ ಪತ್ನೀ ಸಮೇತನಾಗಿ ನಿಂತಿರುವ ಭೋಜಮಹಾರಾಜನನ್ನು ಪ್ರೀತಿಪುರಸ್ಸರವಾಗಿ ಆಲಂಗಿಸಿ ದಂಪತಿಗಳಿಬ್ಬರನ್ನೂ ಆಶೀರ್ವದಿಸಿ ಹೋಗಿಬರುತ್ತೇನೆಂದು ಹೇಳಿ ಹಸನ್ಮುಖನಾಗಿ ಆ ದಿವ್ಯ ವಿಮಾನವನ್ನು ಆರೋಹಣ ಮಾಡಿದನು.

ಆಗ ದೇವತೆಗಳು ಪುಷ್ಪವೃಷ್ಟಿ ಮಾಡಿದರು. ಗಂಧರ್ವರು ಗಾನ ಮಾಡಿದರು. ಅಪ್ಸರೆಯರು ನರ್ತಿಸಿದರು. ದೇವದುಂದುಭಿಗಳು ಮೊಳಗಿದುವು. ಅಲ್ಲಿದ್ದ ಸಮಸ್ತ ಪ್ರಜೆಗಳೂ ವಿಮಾನಾರೂಢನಾದ ದೇವಾಂಗನಿಗೆ ನಮಸ್ಕರಿಸಿದರು. ಈ ರೀತಿ ವಿಮಾನಾರೂಢನೂ ಸುಂದರಾಕಾರನೂ ಆದ ದೇವಾಂಗನು ಸಮಸ್ತ ಋಷಿಗಳಿಂದ ಕೊಂಡಾಡಲ್ಪಟ್ಟವನಾಗಿ ತನ್ನ ದೇಹಕಾಂತಿಯಿಂದ ದಶದಿಕ್ಕುಗಳನ್ನೂ ಬೆಳಗುತ್ತ ಸಿದ್ಧ

ಚಾರಣ ಗಂಧರ್ವರಿಂದ ವಂದಿಸಲ್ಪಟ್ಟ ಅಡಿದಾವರೆಗಳುಳ್ಳವನಾಗಿ ಕೈಲಾಸಕ್ಕೆ ಬಿಜಯಂಗೈದನು.

ಆಗ ಅಂಬಾಸಮೇತನಾದ ಪರಮಾತ್ಮನು ತನ್ನ ಪುತ್ರನಾದ ದೇವಾಂಗನು ಹಿಂತಿರುಗಿ ಬಂದುದನ್ನು ನೋಡಿ ಬಹಳ ಸಂಭ್ರಮದಿಂದ ಅವನನ್ನು ಕುರಿತು ಮಗನೇ ಕ್ಷೇಮ ವಾಗಿ ಬಂದೆಯಾ ? ಬಾ ಎಂದು ತನ್ನ ಬಳಿಗೆ ಕರೆದನು. ದೇವಾಂಗನು ಬಂದವನೇ ಪಾರ್ವತೀಪರಮೇಶ್ವರರಿಗೆ ಭಕ್ತಿಯಿಂದ ನಮಸ್ಕರಿಸಿ ವಿನಯಪೂರ್ವಕವಾಗಿ ಶಂಭೋ ಮಹಾದೇವ ನಿನ್ನ ಅಪ್ಪಣೆಯನ್ನು ನಾನು ಶಿರಸಾವಹಿಸಿ ನೆರವೇರಿಸಿರುವೆನು. ದಯಾನಿಧೇ ನಿನ್ನ ಪುತ್ರನೂ ಭಕ್ತನೂ ಆದ ನನ್ನನ್ನು ಕಾಪಾಡು ಕಾಪಾಡು ಎಂದು ನುಡಿಯುತ್ತಿರುವ ದೇವಾಂಗನನ್ನು ಭಗವಂತನೂ ಶ್ರೀಮಂತನೂ ಅಂಬಾ ಸಮೇತನೂ ಸರ್ವವ್ಯಾಪಿಯೂ ಸನಾತನನೂ ಆದ ಪರಮಾತ್ಮನು ನೋಡಿ ಸಂತೋಷಗೊಂಡನು.

ಈ ರೀತಿ ವರರುಚಿಯು ಶಿವನಿಲಯವಾದ ಕೈಲಾಸವನ್ನು ಹೊಂದಲು ಇತ್ತ ಕವಿಶ್ರೇಷ್ಠನಾದ ಕಾಳಿದಾಸನು ಭೋಜರಾಜನ ಸಭೆಗೆ ಬಂದು ಆ ಭೋಜರಾಜನಿಂದ ಬಹುವಾಗಿ ಮರ್ಯಾದಿಸಲ್ಪಟ್ಟವನಾಗಿ ಸಮಸ್ತ ಕವಿಗಳಿಂದ ವಂದಿತನಾಗಿ ವಾಸಿ ಸುತ್ತಿದ್ದನು. ಮಹಾದ್ಭುತವಾದ ವರರುಚಿಯ ಅವತಾರವನ್ನು ಮಹಾ ಪ್ರಾಜ್ಞರಾದ ಯಾವ ದ್ವಿಜೋತ್ತಮ ಪಠಿಸುವರೋ ಕೇಳುವರೋ ಅವರೆಲ್ಲರೂ ಪುತ್ರಪೌತ್ರ ರಿಂದ ಪುಷ್ಕಳವಾದ ಧನಧಾನ್ಯಗಳಿಂದ ಕೂಡಿದವರಾಗಿ ಈ ಲೋಕದಲ್ಲಿ ಅಧಿಕ ಸುಖವನ್ನು ಹೊಂದಿ :ಅಂತ್ಯದಲ್ಲಿ ಇಂದ್ರಾದಿದೇವತೆಗಳಿಂದ ಪೂಜಿತರಾಗಿ ಸಂತೋಷ ಯುಕ್ತರಾಗಿ ಪರಮಾತ್ಮನ ವಾಸಸ್ಥಳವಾದ ಕೈಲಾಸವನ್ನು ಹೊಂದುವರು.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿ ಬ್ರಹ್ಮನಾರದ ಸಂವಾದ ರೂಪ ಉತ್ತರ ಖಂಡದ ದೇವಾಂಗ ಚರಿತ್ರೆಯಲ್ಲಿ ವರರುಚಿಯ ಅವತಾರವೆಂಬ ಇಪ್ಪತ್ತಾರನೆಯ ಅಧ್ಯಾಯವು ಮುಗಿದುದು.

ಇಪ್ಪತ್ತೇಳನೆಯ ಅಧ್ಯಾಯ

ದೇವಶಾಲಿಯ ಅವತಾರ

ಆಮೋದ ಪಟ್ಟಣಕ್ಕೆ ಒಡೆಯನಾದ ಮಹಾತೇಜಸ್ವಿಯಾದ ದಿವ್ಯಾಂಗನಿಗೆ ನಂದಿ ಎಂಬ ಮಗನು ಜನಿಸಿದನು. ಅವನಿಗೆ ನೀಲಕಂಠನೆಂಬುವನು ಹುಟ್ಟಿದನು. ನೀಲ ಕಂಠನಿಗೆ ಸತ್ಯಪರಾಕ್ರಮಿಯಾದ ಶಂಭುದೇವನೂ, ಶಂಭುದೇವನಿಗೆ ಹೇಮಾಂಗನೂ ಹೇಮಾಂಗನಿಗೆ ಚಂದ್ರಾಂಗನೂ, ಚಂದ್ರಾಂಗನಿಗೆ ಭದ್ರಬಾಹುವೂ ಅವನಿಗೆ ವೀರ ಭದ್ರನೂ, ವೀರಭದ್ರನಿಗೆ ವಿಂದಸಂಜ್ಞಕನೂ ಅವನಿಗೆ ಶೂಲಪಾಣಿಯೂ, ಶೂಲ ಪಾಣಿಗೆ ಜಯಸೇನನೂ, ಅವನಿಗೆ ಚಿತ್ರಸೇನನೂ, ಚಿತ್ರಸೇನನಿಗೆ ಸುವಿಕ್ರಮನೂ, ಅವನಿಗೆ ಗಂಗಾಧರನೂ ಜನಿಸಿದರು. ಗಂಗಾಧರನನ್ನು ವಿದ್ಯಾವಿಲಾಸನೆಂದೂ ಕರೆಯುತ್ತಿದ್ದರು. ಅವನಿಗೆ ಪತಿಭಕ್ತಿಪರಾಯಣೆಯಾದ ವಿದ್ಯಾವಾಣಿಯೆಂಬ ಪತ್ನಿಯಿದ್ದಳು. ಅವರಿಗೆ ಮಕ್ಕಳಿಲ್ಲವಾದುದರಿಂದ ಚಿಂತಾಕ್ರಾಂತರಾಗಿ ಏಕಾಂತದಲ್ಲಿ ಅವರಿಬ್ಬರೂ ಒಬ್ಬರಿಗೊಬ್ಬರು ಪುತ್ರಹೀನರಾದವರಿಗೆ ಎಷ್ಟು ಧನಧಾನ್ಯಗಳಿದ್ದರೂ ಅವುಗಳಿಂದೇನು ಪ್ರಯೋಜನ ? ಪುತ್ರನಿಲ್ಲದವರಿಗೆ ಗತಿಯಿಲ್ಲವೆಂದು ಶ್ರುತಿಯು ಸಾರುತ್ತಿರುವುದು. ಎಂದು ಮಾತನಾಡಿಕೊಳ್ಳುತ್ತಿದ್ದರು. ಆಗ ನಿಮಗೆ ಪುತ್ರ ಸಂತಾನವಾಗುವುದೆಂದು ಆಕಾಶವಾಣಿಯಾಯಿತು.

ಇದನ್ನು ಕೇಳಿ ವಿದ್ಯಾವಿಲಾಸನು ಹರ್ಷಗೊಂಡು ತನ್ನ ಪತ್ನಿಯನ್ನು ಕುರಿತು ಕಮಲಲೋಚನೆ ವಿದ್ಯಾವಾಣಿಯೇ ಇನ್ನು ನೀನು ಹೆದರಬೇಡ ನಮಗೆ ಐಶ್ವರ್ಯವಂತನಾದ ಪುತ್ರನು ಜನಿಸುವನು. ಆಕಾಶವಾಣಿಯು ಸುಳ್ಳಾಗುವುದೇ ? ಎಂದು ತನ್ನ ಪತ್ನಿಯನ್ನು ಸಮಾಧಾನಪಡಿಸಿದನು. ಅನಂತರ ತಾನು ತನ್ನ ಪತ್ನಿಗೆ ತೀರ್ಥಯಾತ್ರೆಮಾಡಿಕೊಂಡು ಬರುತ್ತೇನೆಂದು ಹೇಳಿ ವಿದ್ವನ್ಮಣಿಯಾದ ಆ ವಿದ್ಯಾವಿಲಾಸನು ತೀರ್ಥಯಾತ್ರೆ ಮಾಡುವುದಕ್ಕಾಗಿ ಅನೇಕ ದ್ರವ್ಯವನ್ನು ಒಂಟೆಗಳಮೇಲೆ ಹೇರಿಸಿಕೊಂಡು ದಾಸದಾಸೀ ಪರಿಜನಯುಕ್ತನಾಗಿ ಸರ್ವಾಭೀಷ್ಟಪ್ರದವಾದ ಕಾಶೀ ಕ್ಷೇತ್ರಕ್ಕೆ ಬಂದನು.

ಅಲ್ಲಿ ತನ್ನ ಪುರೋಹಿತನೊಡನೆ ಮಣಿಕರ್ಣಿಕೆಯಲ್ಲಿ ವಿಧಿವತ್ತಾಗಿ ಸ್ನಾನ ಮಾಡಿ ಪುರೋಹಿತನಿಗೂ ವಿದ್ವಾಂಸರಾದ ಬ್ರಾಹ್ಮಣರಿಗೂ ತೀರ್ಥನಿವಾಸಿಗಳಿಗೂ ವಿವಿಧ ವಸ್ತ್ರಗಳನ್ನು ದಾನವಾಗಿ ಕೊಟ್ಟು ವಿಶ್ವನಾಥನನ್ನೂ ವಿಶಾಲಾಕ್ಷಿಯನ್ನೂ ಇನ್ನುಳಿದ ದೇವತೆಗಳನ್ನೂ ಭಕ್ತಿಯಿಂದ ಪೂಜಿಸಿ ನಮಿಸಿ ಸ್ತುತಿಸಿದನು. ಅಲ್ಲಿಂದ ಗಯಾಕ್ಷೇತ್ರಕ್ಕೆ ಬಂದು ವಿಧಿವತ್ತಾಗಿ ಶ್ರಾದ್ಧಮಾಡಿ ಅಲ್ಲಿದ್ದ ವಟವೃಕ್ಷದ ಬುಡದಲ್ಲಿ ಪಿತೃದೇವತೆಗಳಿಗೆ ಪಿಂಡಪ್ರದಾನ ಮಾಡಿ ಅಲ್ಲಿಂದ ಸರ್ವದೇವವಂದಿತವಾದ ಬದರಿಕಾ

ಶ್ರಮಕ್ಕೆ ಬಂದು ಅಭೀಷ್ಟದಾಯಕನಾದ ಮಹೇಂದ್ರಾದಿಗಳಿಂದ ವಂದಿತನಾದ ದೇವೇಶನಾದ ನಾರಾಯಣನನ್ನು ಸ್ತುತಿಸಿ ನಮಿಸಿ ಅಲ್ಲಿಂದ ದಿವ್ಯವಾದ ಪಶುಪತಿ ಕ್ಷೇತ್ರಕ್ಕೆ ಬಂದನು. ಅಲ್ಲಿ ದುಹಾದೇವನಾದ ಪಶುಪತೀಶ್ವರನನ್ನು ಭಕ್ತಿಯಿಂದ ವಿಧಿವತ್ತಾಗಿ ಪೂಜಿಸಿ ಜ್ವಾಲಾಮುಖಿಗೆ ಬಂದನು. ಅಲ್ಲಿ ಜ್ವಾಲಾಮಯನಾದ ದೇವನನ್ನು ಶಾಸ್ತ್ರಪ್ರಕಾರವಾಗಿ ಅರ್ಚಿಸಿ ಅಲ್ಲಿಂದ ಸರ್ವಮಂಗಳಕರವಾದ ಶ್ರೀಶೈಲಕ್ಕೆ ಬಂದನು.

ಅಲ್ಲಿ ಭ್ರಮರಾಂಬಾ ಸಮೇತನಾದ ಸರ್ವಾಭೀಷ್ಟ ಪ್ರದಾಯಕನಾದ ಸಿದ್ಧ ಚಾರಣ ಸೇವಿತನಾದ ವಿಷ್ಣು ಬ್ರಹ್ಮ ಮಹೇಂದ್ರಾದಿ ದೇವತೆಗಳಿಂದ ಪೂಜಿತನಾದ ವೀಣಾಪಾಣಿಗಳಾದ ನಾರದಾದಿ ಮುನೀಶ್ವರರಿಂದಲೂ ಗಂಧರ್ವರಿಂದಲೂ ಸ್ತುತಿ ಮಾಡಿಸಿಕೊಳ್ಳುವವನಾದ ಅಪ್ಸರಸ್ತ್ರೀಯರ ನರ್ತನದಿಂದ ಸೇವೆ ಮಾಡಿಸಿಕೊಂಡು ಪುನಃಪುನಃ ವರಗಳನ್ನು ನೀಡೆಂದು ಪ್ರಾರ್ಥಿಸಲ್ಪಡುವ ಭಕ್ತರಿಂದ ಸೇವಿತನಾದ ಸಮಸ್ತ ಜಗತ್ತುಗಳ ಸೃಷ್ಟಿಸ್ಥಿತಿ ಲಯಗಳಿಗೆ ಕಾರಣನಾದ ಮಲ್ಲಿಕಾರ್ಜುನನನ್ನು ಕಂಡು ವಿದ್ಯಾ ವಿಲಾಸನು ಭಕ್ತಿಪೂರ್ವಕವಾಗಿ ಪೂಜಿಸಿ ಸ್ತುತಿಸಿ ಅಲ್ಲಿಂದ ವೆಂಕಟಾಚಲಕ್ಕೆ ಬಂದನು. ಅಲ್ಲಿ ಆದ್ಯಂತರಹಿತನಾದ ಲಕ್ಷ್ಮೀಸಮೇತನಾದ ಇಂದ್ರಾದಿಗಳಿಂದ ಪೂಜಿತನಾದ ಶ್ರೀನಿವಾಸನನ್ನು ಭಕ್ತಿಯಿಂದ ವಿಧಿವತ್ತಾಗಿ ಪೂಜಿಸಿ ಸ್ತುತಿಸಿ ನಮಿಸಿ ಸಂತೋಷ ಗೊಂಡನು. ಅಲ್ಲಿಂದ ದೇವಗಂಧರ್ವ ಸೇವಿತವಾದ ಕಾಂಚೀಕ್ಷೇತ್ರಕ್ಕೆ ಬಂದು, ಅಲ್ಲಿ ಏಕಾಮ್ರೇಶ್ವರನನ್ನೂ ಕಾಮಾಕ್ಷೀದೇವಿಯನ್ನೂ ಭಕ್ತಿಯಿಂದ ಯಥಾವಿಧಿಯಾಗಿ ಪೂಜಿಸಿ ಸ್ತುತಿಸಿ ಶ್ರೀದೇವೀಸಮೇತನಾದ ವರದರಾಜಸ್ವಾಮಿಯನ್ನು ಬಹು ಭಕ್ತಿ ಯಿಂದ ವಿಧಿವತ್ತಾಗಿ ಪೂಜಿಸಿ ಸ್ತುತಿಸಿದನು. ಅಲ್ಲಿಂದ ಸರ್ವದೇವನಮಸ್ಕೃತವಾದ ಚಿದಂಬರಕ್ಷೇತ್ರಕ್ಕೆ ಬಂದು ಗಿರಿಜಾಪತಿಯಾದ ಆಕಾಶರೂಪಿಯಾದ ಭಕ್ತರ ದುಃಖ ವನ್ನು ದೂರಮಾಡುವ ನಟರಾಜಸ್ವಾಮಿಯನ್ನು ಭಕ್ತಿಯಿಂದ ಪೂಜಿಸಿದನು.

ಅಲ್ಲಿಂದ ಮೋಕ್ಷದಾಯಕವಾದ ಅರುಣಾಚಲಕ್ಕೆ ಬಂದು ವಿದ್ವಾಂಸನಾದ ವಿದ್ಯಾವಿಲಾಸನು ಅಲ್ಲಿ ಮಹೇಶ್ವರನನ್ನು ದರ್ಶಿಸಿ ವಿಧಿವತ್ತಾಗಿ ಪೂಜಿಸಿದನು. ಅನಂತರ ವೈದ್ಯನಾಥಕ್ಷೇತ್ರಕ್ಕೂ ಮಯೂರಕ್ಷೇತ್ರಕ್ಕೂ ಕ್ಷೇತ್ರೋತ್ತಮವಾದ ಕುಂಭ ಕೋಣಕ್ಕೂ ಹೋಗಿ ಅಲ್ಲಲ್ಲಿದ್ದ ಆಯಾ ದೇವತೆಗಳನ್ನು ವಿಧಿವತ್ತಾಗಿ ಪೂಜಿಸಿ ಮನೋಹರವಾದ ಶ್ರೀರಂಗಕ್ಷೇತ್ರಕ್ಕೆ ಬಂದು ಲೋಕಪಾವನೆಯಾದ ಕಾವೇರಿಯಲ್ಲಿ ಮಿಂದು ವೇದಶೃಂಗವಾಗುಳ್ಳ ಅತ್ಯದ್ಭುತವಾದ ಓಂಕಾರರೂಪವಾದ ವಿಮಾನವನ್ನು ಕಂಡು ನಮಸ್ಕರಿಸಿ ವಿಧಿವತ್ತಾಗಿ ಪೂಜಿಸಿ ಶ್ರೇಷ್ಠನೂ ವಾಸುದೇವನೂ ನಿರ್ಮ ಲನೂ ಲಕ್ಷ್ಮೀ ಭೂ ನೀಳಾದೇವಿಯರಿಂದ ಪರಿವೃತನೂ ಆದ ಶ್ರೀರಂಗನಾಥನನ್ನು ಬಹು ಭಕ್ತಿಯಿಂದ ಪೂಜಿಸಿ ಬಹುವಿಧವಾದ ಸ್ತೋತ್ರಗಳಿಂದ ಸ್ತುತಿಸಿ ಕಾವೇರಿ ನದಿ ಯನ್ನು ಪೂಜಿಸಿ ಪಾಂಡ್ಯ ದೇಶಕ್ಕೆ ಬಂದನು.

ಅಲ್ಲಿರುವ ದಿವ್ಯ ಮಂಟಪಶೋಭಿತವೂ ದಿವ್ಯಗೋಪುರಯುಕ್ತವೂ ಸಪ್ತಪ್ರಾಕಾರ ವೇಷ್ಟಿತವೂ ಆದ ಮಧುರಾಪಟ್ಟಣಕ್ಕೆ ಬಂದು ಶರಣಾಗತರ ದುಃಖವನ್ನು ದೂರ ಮಾಡುವವನಾದ ಮೀನಾಕ್ಷಿ ರಮಣನಾದ ಕದಂಬವನನಾಯಕನಾದ ಸುಂದರೇಶ್ವರ ನನ್ನು ಶಾಸ್ತ್ರವಿಧಿನಿಯಮಗಳ ಪ್ರಕಾರವಾಗಿ ಭಕ್ತಿಯಿಂದ ಪೂಜಿಸಿ ವಿದ್ಯಾವಿಲಾಸನು ಪರಮಾತ್ಮನನ್ನು ಕುರಿತು ಮಂಗಳಕರನಾದ ಅಂಬಾಸಮೇತನಾದ ಪಾಪಪರಿಹಾರಕ ನಾದ ವೇದಾಂತವೇದ್ಯನಾದ ದೇವೋತ್ತಮನಾದ ಪರಮಾತ್ಮನೇ ನಿನಗೆ ನಮಸ್ಕಾರ. ಭಗವಂತನೇ ತ್ರಿಲೋಕಪಾಲಕನೇ ಭಕ್ತವತ್ಸಲನೇ ನಿನಗೆ ನಮಸ್ಕಾರ. ಮೀನಾಕ್ಷಿ ವಲ್ಲಭನೇ ಶಿವನೇ ಮೃತ್ಯುಂಜಯನೇ ರುದ್ರನೇ ಕಾಲಕಾಲನೇ ಸದಾ ನಿನಗೆ ನಮಸ್ಕಾರ. ವಿಶ್ವೇಶ್ವರನೇ ವಿರೂಪಾಕ್ಷನೇ ಸರ್ವಜ್ಞನೇ ಪರಮೇಶ್ವರನೇ ಸುಂದರೇಶನೇ ಮಹಾಭಾಗನೇ ಭಕ್ತಪಾಲಕನೇ ನಿನಗೆ ನಮಸ್ಕಾರ. ನೀಲಕಂಠನೇ ದಯಾಸಿಂಧುವೇ ಪ್ರಭುವೇ ಭಕ್ತನಾದ ನನ್ನನ್ನು ರಕ್ಷಿಸೆಂದು ಸ್ತುತಿಸಿದನು.

ಅಲ್ಲಿಂದ ರಾಮೇಶ್ವರ ಕ್ಷೇತ್ರಕ್ಕೆ ಬಂದು ಅಲ್ಲಿ ಧನುಷ್ಕೋಟಿಯಲ್ಲಿ ಸ್ನಾನ ಮಾಡಿ ರಾಮಲಿಂಗೇಶನಾದ ಮಹೇಶ್ವರನನ್ನು ವಿಧಿವತ್ತಾಗಿ ಪೂಜಿಸಿ ಪರ್ವತ ವರ್ಧಿನಿಯೂ ಅಭೀಷ್ಟಪ್ರದಾಯಕಳೂ ಸರ್ವಲೋಕಜನನಿಯೂ ಶಂಭುವಿನ ಅರ್ಧಾಂಗಿಯೂ ಆದ ಪಾರ್ವತಿಯನ್ನು ಪೂಜಿಸಿದನು. ಅಲ್ಲಿಂದ ಅನಂತಪುರಕ್ಕೆ ಬಂದು ಭೂ ನೀಳಾಸಮೇತನೂ ಶೇಷಶಾಯಿಯೂ ಪದ್ಮನಾಭನೂ ಚತು ರ್ಭುಜನೂ ಸುನಾಭಿಕಮಲೋದ್ಭವನಾದ ಬ್ರಹ್ಮನಿಂದ ಅರ್ಚಿತನೂ ಆದ ನಾರಾಯಣ ನನ್ನು ಕಂಡು ವಿಧಿವತ್ತಾಗಿ ಭಕ್ತಿಯಿಂದ ಪೂಜಿಸಿ ಕೊಂಡಾಡಿದನು. ಅಲ್ಲಿಂದ ಮಂಗಳಕ್ಕೆ ನೆಲೆಯಾದ ಐಶ್ವರ್ಯಯುಕ್ತವಾದ ತನ್ನ ಆಮೋದಪಟ್ಟಣಕ್ಕೆ ವಿದ್ಯಾ ವಿಲಾಸನು ಹಿಂದಿರುಗಿ ಧನಧಾನ್ಯಯುಕ್ತವಾದ ದುಃಖನಿವಾರಕವಾದ ತನ್ನ ಗೃಹ ವನ್ನು ಸೇರಿದನು.

ಕಮಲದಂತೆ ವಿಶಾಲವಾದ ನೇತ್ರವುಳ್ಳವಳೂ ಮಂದಹಾಸಿನಿಯೂ ಆದ ವಿದ್ಯಾವಾಣಿಯು ತನ್ನ ಪತಿಯು ಮನೆಗೆ ಬಂದುದನ್ನು ಕಂಡು ಪ್ರೇಮಾದರಗಳಿಂದ ಅವನನ್ನು ಎದುರುಗೊಂಡು ಅವನಿಗೆ ಅರ್ಘ್ಯಪಾದ್ಯಗಳನ್ನಿತ್ತು ಭಕ್ತಿಯಿಂದಾತನಿಗೆ ಅಡ್ಡ ಬಿದ್ದು ನಮಸ್ಕರಿಸಿದಳು. ಮತ್ತ ಕಾಶಿನಿಯಾದ ವಿದ್ಯಾವಾಣಿಯು ಪತಿಯ ಕುಶಲವನ್ನು ವಿಚಾರಿಸುತ್ತಾ ಪ್ರಿಯನೇ ಪ್ರಭುವೇ ಕ್ಷೇಮವೇ ನಿನಗೆ ಸುಸ್ವಾಗತ. ನೀನು ಯಾವಯಾವ ಕ್ಷೇತ್ರಗಳನ್ನು ಸಂದರ್ಶಿಸಿದೆ. ಯಾವಯಾವ ತೀರ್ಥಗಳನ್ನು ಸೇವಿ ಸಿದೆ. ಅವುಗಳ ಫಲವೇನು ಪ್ರಿಯನೇ ಕರುಣಾಕರನೇ ನನಗೆ ಆದರದಿಂದ ಹೇಳೆಂದು ಪ್ರೇಮಾತಿಶಯದಿಂದ ಕೇಳಿದಳು.

ಅದಕ್ಕೆ ವಿದ್ಯಾವಿಲಾಸನು ಪ್ರಿಯಪತ್ನಿಯಾದ ವಿದ್ಯಾವಾಣಿಯನ್ನು ಕುರಿತು ಮೃದುಮಧುರವಾಗಿ ಎಲೈ ಪತಿವ್ರತೆಯೇ ಮಹಾಭಾಗೆಯೇ ಸಾವಧಾನ ಮನಸ್ಸಿನಿಂದ

ಕೇಳು. ಈ ಭೂತಲದಲ್ಲಿ ನಾನು ಯಾವಯಾವ ಕ್ಷೇತ್ರಗಳನ್ನು ಸಂದರ್ಶಿಸಿರುವೆನೋ! ಯಾವಯಾವ ತೀರ್ಥಗಳನ್ನು ಸೇವಿಸಿರುವೆನೋ! ಅವುಗಳನ್ನು ನಿನಗೆ ಹೇಳುವೆನು. ಎಲೈ ಪುಣ್ಯವಂತೆಯೇ ನಾನು ಗಂಗಾ ಮೊದಲಾದ ಪುಣ್ಯ ನದಿಗಳಲ್ಲಿ ಸ್ನಾನಮಾಡಿ ಕಾಶಿ ಮೊದಲಾದ ಶೈವಕ್ಷೇತ್ರಗಳನ್ನೂ ಶ್ರೀರಂಗವೇ ಮೊದಲಾದ ಸಮಸ್ತ ವೈಷ್ಣವ ಕ್ಷೇತ್ರಗಳನ್ನೂ ಇನ್ನುಳಿದ ಸಮಸ್ತ ಕ್ಷೇತ್ರಗಳನ್ನೂ ಕ್ರಮವಾಗಿ ಸಂದರ್ಶಿಸಿದೆನು ಎಂದನು. ಹೀಗೆಂದು ನುಡಿಯುತ್ತಿರುವ ತನ್ನ ಪತಿಯನ್ನು ಪತಿವ್ರತಾ ಶಿರೋಮಣಿಯಾದ ವಿದ್ಯಾವಾಣಿಯು ನೋಡಿ ಆನಂದಪುಳುಕಿತಳಾಗಿ ಪ್ರೇಮದಿಂದ ಮತ್ತೆಮತ್ತೆ ಅವನನ್ನು ಬಿಗಿದಪ್ಪಿ ಎಲೈ ಪತಿಯೇ ಕಪಿಲೇಶನೆಂಬ ಮಹಾದೇವನು ಭಕ್ತಸಂತಾನ ದಾಯಕನಾದುದರಿಂದ ಪ್ರತಿದಿನವೂ ಅವನನ್ನು ಪೂಜಿಸೋಣ ಎಂದು ಹೇಳಿದಳು. ತನ್ನ ಪತ್ನಿಯ ಈ ಮಾತನ್ನು ಕೇಳಿ ಬ್ರಾಹ್ಮಣೋತ್ತಮನಾದ ವಿದ್ಯಾವಿಲಾಸನು ಹಾಗೆಯೇ ಆಗಲೆಂದು ಹೇಳಿ ಅದೇ ರೀತಿ ಕಪಿಲೇಶನನ್ನು ಪತ್ನೀಸಮೇತನಾಗಿ ಪೂಜಿಸುತ್ತಿದ್ದನು. ಹೀಗೆಯೇ ಕಾಲಕಳೆಯುತ್ತಿರಲು ಋತುಸ್ನಾನಮಾಡಿದ ತನ್ನ ಪತ್ನಿ ವಿದ್ಯಾವಾಣಿಯನ್ನು ನೋಡಿ ವಿದ್ಯಾವಿಲಾಸನು ಬಹು ಸಂತೋಷದಿಂದ ಆಕೆಯೊಡಗೂಡಿ ಸುಖವಾಗಿದ್ದನು.

ಹೀಗೆ ಆಕೆಯಲ್ಲಿ ಸುಖಪಡುತ್ತಾ ಸದಾ ಕಪಿಲೇಶನನ್ನು ಹೃದಯದಲ್ಲಿ ಧ್ಯಾನಿಸುತ್ತಾ ಇದ್ದನು. ಹೀಗಿರಲು ಆ ಕಪಿಲೇಶನ ಪ್ರಸಾದದಿಂದ ಆ ವಿದ್ಯಾವಾಣಿಯು ಗರ್ಭಧರಿಸಿ ತನ್ನ ಪತಿಗೆ ಸಂತೋಷವನ್ನುಂಟುಮಾಡಿದಳು. ಕ್ರಮಕ್ರಮವಾಗಿ ಗರ್ಭಬೆಳೆಯುತ್ತ ನವಮಾಸ ತುಂಬಲು ಹತ್ತನೆಯ ತಿಂಗಳಲ್ಲಿ ಸೂರ್ಯನಂತೆ ತೇಜಸ್ವಿಯೂ ತನ್ನಪತಿಯಂತೆ ಸಕಲಗುಣಸಂಪನ್ನನೂ ಆದ ಗಂಡು ಶಿಶುವನ್ನು ಅವಳು ಹಡೆದಳು. ವಿದ್ಯಾವಿಲಾಸನು ಈ ಸುದ್ದಿಯನ್ನು ಕೇಳಿ ಸಂತೋಷದಿಂದ ಸ್ನಾನಮಾಡಿ ಬುದ್ಧಿಶಾಲಿಯಾದ ಶಂಭುದೇವನೆಂಬ ತನ್ನ ಪುರೋಹಿತನನ್ನು ಮುಂದಿಟ್ಟುಕೊಂಡು ಪುತ್ರ ಜನ್ಮೋತ್ಸವದ ದಿನ ಬ್ರಾಹ್ಮಣರಿಗೆ ಅನೇಕ ವಿಧಗಳಾದ ಧನ ಧಾನ್ಯ ರತ್ನಾದಿಗಳನ್ನು ದಾನಮಾಡಿ, ತನ್ನ ಬಂಧುಬಳಗದವರಿಗೂ ಪ್ರೇಮದಿಂದ ಅಮೂಲ್ಯಗಳಾದ ಧನಧಾನ್ಯ ವಸ್ತ್ರಾದಿಗಳನ್ನಿತ್ತು ಸಂತೋಷಪಡಿಸಿದನು.

ಅನಂತರ ಹನ್ನೊಂದನೆಯ ದಿನ ತಾನು ಪತ್ನಿ ಸಮೇತನಾಗಿ ಮಂಗಳ ಸ್ನಾನಮಾಡಿ ಬ್ರಾಹ್ಮಣರನ್ನು ಆಮಂತ್ರಿಸಿ ಪುಣ್ಯಾಹವಾಚನವನ್ನು ಮಾಡಿಸಿ, ಪತ್ನೀಯುಕ್ತನಾಗಿ ವೇದೋಕ್ತವಾಗಿ ಆ ಶಿಶುವಿಗೆ ದೇವಶಾಲಿಯೆಂದು ನಾಮಕರಣಮಾಡಿ ಬ್ರಾಹ್ಮಣರಿಗೆ ಧನಕನಕ ರತ್ನಾದಿಗಳನ್ನು ದಾನಮಾಡಿ ಬಂಧುಬಳಗದವರನ್ನೂ ಜೋಗುಳ ಹಾಡಿದ ಮುತ್ತೈದೆಯರನ್ನೂ ಉಡುಗೊರೆಗಳಿಂದಲೂ ತಾಂಬೂಲ ಫಲಗಳಿಂದಲೂ ಮರ್ಯಾದೆ ಮಾಡಿದನು.

ಈ ರೀತಿ ದೇವಶಾಲಿಯೆಂಬ ಆ ಶಿಶುವು ದಿನೇದಿನೇ ಶುಕ್ಲಪಕ್ಷದ ಬಿದಿಗೆಯ ಚಂದ್ರನಂತೆ ವೃದ್ಧಿಗೊಳ್ಳುತ್ತಾ, ತನ್ನ ಬಾಲಲೀಲೆಗಳಿಂದ ತಾಯಿ ತಂದೆಗಳನ್ನು ಸಂತೋಷಪಡಿಸುತ್ತಿದ್ದನು. ಈ ರೀತಿ ಬೆಳೆಯುತ್ತಿರುವ ಮಗನಾದ ದೇವಶಾಲಿಗೆ ವಿದ್ಯಾವಿಲಾಸನು ಎಂಟನೆಯ ವರ್ಷದಲ್ಲಿ ವೇದೋಕ್ತವಿಧಾನದಿಂದ ಉಪನಯನವನ್ನು ಮಾಡಿ, ಅವನಿಗೆ ವೇದಮಾತೆಯಾದ ಗಾಯತ್ರೀಮಂತ್ರವನ್ನು ತಂದೆಯಾದ ತಾನೇ ಉಪದೇಶಿಸಿ ಯಜ್ಞೋಪವೀತಧಾರಣೆಮಾಡಿಸಿ ಶಿವದೀಕ್ಷೆಯನ್ನು ಕೊಟ್ಟು ಪಂಚಾಕ್ಷರೀಮಂತ್ರವನ್ನು ಅತ್ಯಂತ ಪ್ರೀತಿಯಿಂದ ವಿಧಿಪೂರ್ವಕವಾಗಿ ಉಪದೇಶ ಮಾಡಿದನು. ಪ್ರಭಾವಶಾಲಿಯಾದ ವಿದ್ಯಾವಿಲಾಸನು ಮಗನ ಕಲ್ಯಾಣಕ್ಕೂ ಪುರೋಭಿವೃದ್ಧಿಗೂ ನಾನಾ ವಿಧಗಳಾದ ಗೋದಾನ ಭೂದಾನ ಕನ್ಯಾದಾನ ಗಜದಾನ ಅಶ್ವದಾನ ಮೊದಲಾದ ಮಹಾದಾನಗಳನ್ನು ಪಂಡಿತರಾದ ಬ್ರಾಹ್ಮಣರಿಗೂ. ಬಂಧುವರ್ಗಕ್ಕೂ. ನಾನಾ ದೇಶಗಳಿಂದ ಬಂದಿದ್ದ ಮಹಾತ್ಮರಿಗೂ ಮಾಡಿದನು.

ಈ ರೀತಿ ಮಗನಿಗೆ ವಿಜೃಂಭಣೆಯಿಂದ ಉಪನಯನವನ್ನು ಮಾಡಿ, ಶಿವದೀಕ್ಷೆಯನ್ನು ಕೊಟ್ಟು ಪಂಚಾಕ್ಷರೀ ಮಂತ್ರೋಪದೇಶವನ್ನು ಮಾಡಿದ ದಯಾವಂತನಾದ ವಿದ್ಯಾವಿಲಾಸನು ತಾನು ಕೃತಕೃತ್ಯನಾದೆನೆಂದು ಭಾವಿಸಿ ಪತ್ನಿಯೊಡನೆ ಸುಖವಾಗಿದ್ದನು. ಹೀಗೆ ಉಪವೀತನಾದ ಬುದ್ಧಿವಂತನಾದ ದೇವಶಾಲಿಯು ವಿದ್ಯಾಭ್ಯಾಸಕ್ಕಾಗಿ ಗುರುಕುಲವನ್ನು ಸೇರಿದನು. ಅಲ್ಲಿ ಬಹುಕಾಲ ಗುರುಮುಖದಿಂದ ಷಡಂಗ ಸಹಿತ ಚತುರ್ವೇದಗಳನ್ನೂ ಮೀಮಾಂಸಾ ನ್ಯಾಯಶಾಸ್ತ್ರಗಳನ್ನೂ ಧರ್ಮಶಾಸ್ತ್ರಗಳನ್ನೂ ಅಷ್ಟಾದಶ ಪುರಾಣಗಳನ್ನೂ ಉಪನಿಷತ್ತುಗಳನ್ನೂ ಇತರ ಸಮಸ್ತ ವಿದ್ಯೆಗಳನ್ನೂ ಸಾಂಗವಾಗಿ ಕಲಿತನು. ಈ ರೀತಿ ಸಮಸ್ತ ವಿದ್ಯಾಪಾರಂಗತನಾದ ದೇವಶಾಲಿಯು ಗುರುದಕ್ಷಿಣೆ ಸಲ್ಲಿಸಿ ಗುರುವಿನಪ್ಪಣೆ ಪಡೆದು ಗುರುಕುಲವನ್ನು ಬಿಟ್ಟವನಾಗಿ ವಿರಕ್ತಿಯಿಂದ ನಾನಾ ದೇಶಗಳಲ್ಲಿ ಸಂಚರಿಸುತ್ತಿದ್ದನು.

ಅವನು ಶಿವಸಂಬಂಧಗಳಾದ ಪುರಾಣಗಳನ್ನೂ ಶಿವಾಗಮಗಳನ್ನೂ ಲೋಕೋಪಕಾರಕ್ಕಾಗಿ ರಚಿಸಿದನು. ವನಗಳಲ್ಲಿಯೂ ಪರ್ವತ ಗುಹೆಗಳಲ್ಲಿಯೂ ವಾಸ ಮಾಡುತ್ತಾ, ಕ್ರಮವಾಗಿ ಕಂದ ಮೂಲ ಫಲ ವಾಯುಗಳನ್ನು ಸೇವಿಸುತ್ತಿದ್ದನು. ಅವನು ಜಿತೇಂದ್ರಿಯನಾಗಿ ಅಷ್ಟಾಂಗ ಸಹಿತ ಯೋಗಾಭ್ಯಾಸ ಮಾಡುತ್ತಾ, ಶಿವಧ್ಯಾನ ಪರಾಯಣನಾಗಿ ಋಷಿಮುನಿಗಳಿಂದ ಮರ್ಯಾದೆ ಹೊಂದುತ್ತಾ ಒಂದು ಅರಣ್ಯವನ್ನು ಸೇರಿ ಅಲ್ಲಿ ಆಶ್ರಮವನ್ನು ನಿರ್ಮಿಸಿಕೊಂಡು ತಪಸ್ಸನ್ನು ಮಾಡುತ್ತಿದ್ದನು. ಹೀಗೆ ನಿರ್ವೈರಿಯಾಗಿ ಮಹಾತ್ಮನಾಗಿ ತಪಸ್ಸನ್ನಾಚರಿಸುತ್ತಿದ್ದ ಆ ದೇವಶಾಲಿಯ ತಪೋಮಹಿಮೆಯ ಕೀರ್ತಿಯು ಜಗತ್ತಿನಲ್ಲೆಲ್ಲಾ ವ್ಯಾಪಿಸಿತು.

ಇಂತಿರಲು ಕೃಷ್ಣಾಜಿನವನ್ನು ಧರಿಸಿದ ಸುವರ್ಣ ಯಜ್ಞೋಪವೀತ ಕೌಪೀನ ಧಾರಿಯಾಗಿ ಪಾದುಕೆಗಳನ್ನು ಮೆಟ್ಟಿಕೊಂಡಿರುವ, ದೇವಶಾಲಿಯು ಈ ಪ್ರಪಂಚದಲ್ಲಿ ಶಿವಭಕ್ತಿಯನ್ನು ಶೈವಮತವನ್ನು ಪುನಃ ಸ್ಥಾಪಿಸಬೇಕೆಂದು ಯೋಚಿಸಿ ಪಂಚಾಕ್ಷರೀ ಮಂತ್ರವನ್ನು ಜಪಿಸುತ್ತಾ ಕೈಯಲ್ಲಿ ಶಾಸ್ತ್ರ ಗ್ರಂಥಗಳನ್ನು ಹಿಡಿದವನಾಗಿ ಭಸ್ಮೋದ್ಧೂಳಿತ ಸರ್ವಾಂಗನಾಗಿ ರುದ್ರಾಕ್ಷಿಮಾಲಾಭೂಷಿತನಾಗಿ ಥಳಥಳಿಸುವ ರತ್ನಕುಂಡಲಗಳಿಂದೊಪ್ಪುವ ಕರ್ಣದ್ವಯನಾಗಿ ದರ್ಶನ ಮಾತ್ರದಿಂದಲೇ ಸಮಸ್ತ ಸ್ಥಾವರ ಜಂಗಮ ಪ್ರಾಣಿಗಳೂ ಭಯಭಕ್ತಿಗಳಿಂದ ಹಿಂದಕ್ಕೆ ಸರಿಯುವಂತೆ ಮಾಡುವ ಮಹಾ ತೇಜಸ್ಸಿನಿಂದ ಕೂಡಿದವನಾಗಿ ಮಹಾಶೂರನಾದ ವೀರವಲ್ಲಭರಾಜನ ರಾಜಧಾನಿಯಾದ ಕಲ್ಯಾಣ ಪಟ್ಟಣಕ್ಕೆ ಆಗಮಿಸಿದನು.

ಆ ಪಟ್ಟಣವು ಜೈನರಿಂದ ಭರಿತವಾಗಿದ್ದು ಅಲ್ಲಿಯ ರಾಜನೂ ಜೈನನೆಂದು ಅವನು ತಿಳಿದು ಮನಸ್ಸಿನಲ್ಲಿ ಭೂಲೋಕದಲ್ಲಿ ವೃದ್ಧಿಗೊಂಡಿರುವ ಈ ಜೈನ ಮತವನ್ನು ಹೇಗೆ ತಗ್ಗಿಸಬೇಕೆಂದು ಯೋಚಿಸುತ್ತಾ ಉದಾರಿಯಾದ ದೇವಶಾಲಿಯು ಜೈನರಾದ ಪುರ ಜನರಿಗೆ ಸರ್ವಸೌಖ್ಯಪ್ರದವೂ ಸರ್ವಸಂಪತ್ಪ್ರದವೂ ಆದ ಶಿವಕಥೆಗಳನ್ನೂ ಶಿವತತ್ವಗಳನ್ನೂ ಭೋಧಿಸಲಾರಂಭಿಸಿದನು. ದೇವಶಾಲಿಯಿಂದ ಶೈವಧರ್ಮ ಬೋಧಿಸಲ್ಪಟ್ಟ ಜೈನರು ಅವನಿಂದ ಆಕರ್ಷಿತರಾಗಿ ಸ್ವಮತವನ್ನು ಬಿಟ್ಟು ಶಿವದೀಕ್ಷಾಪರಾಯಣರಾಗಿ ಅವನನ್ನೇ ತಮ್ಮ ಸದ್ಗುರುವೆಂದು ಭಾವಿಸಿ ಅವನ ಕೃಪಾಕಟಾಕ್ಷದಿಂದ ಪವಿತ್ರರಾಗಿ ಅವನಿಂದ ಉಪದೇಶಿಸಲ್ಪಟ್ಟ ಮಂತ್ರರಾಜಪಂಚಾಕ್ಷರೀಮಂತ್ರವನ್ನು ಜಪಿಸುತ್ತ ಶಿವಪೂಜಾತತ್ಪರರಾಗಿ ವಾಸಿಸುತ್ತಿದ್ದರು.

ಸಮಸ್ತಜನರೂ ಆ ದೇವಶಾಲಿಯನ್ನು ಸಾಕ್ಷಾತ್ ಶಂಕರನ ಅವತಾರವೆಂದು ತಿಳಿದು ಅವನಲ್ಲಿ ಪೂಜ್ಯ ಭಾವನೆಯಿಂದಿದ್ದು ಗೌರವಿಸುತ್ತಿದ್ದರು. ಹೀಗಿರಲು ದೇವಶಾಲಿಯ ಕೀರ್ತಿಯನ್ನು ಕೇಳಿ ಜಗದ್ದೇವನೆಂಬ ರಾಜಪುತ್ರನು ತಪಸ್ವಿಗಳಿಂದ ಸೇವಿತನಾದ ದೇವಶಾಲಿಯ ಬಳಿಗೆ ಬಂದು ಭಕ್ತಿಯಿಂದ ನಮಸ್ಕರಿಸಿ ದೇವಶಾಲಿಯನ್ನು ಕುರಿತು ಎಲೈ ಪೂಜ್ಯನೇ ನೀನು ಸರ್ವಲೋಕಕ್ಕೂ ಒಡೆಯನೂ ಪರಮಗುರುವೂ ಆಗಿರುವೆ. ನನಗೆ ಮಂತ್ರರಾಜವಾದ ಪಂಚಾಕ್ಷರೀಮಂತ್ರವನ್ನು ಉಪದೇಶಿಸೆಂದು ಪ್ರೀತಿಪೂರ್ವಕವಾಗಿ ಪ್ರಾರ್ಥಿಸಿದನು. ಆಗ ಮಹಾಜ್ಞಾನಿಯಾದ ದೇವಶಾಲಿಯು ಅವನಿಗೆ ಶಿವದೀಕ್ಷೆಯನ್ನು ಕೊಟ್ಟು ಇಷ್ಟಾರ್ಥಪ್ರದವಾದ ಪಂಚಾಕ್ಷರೀಮಂತ್ರವನ್ನು ಉಪದೇಶಿಸಿದನು. ಆ ರಾಜಪುತ್ರನು ಗುರುವಿನಿಂದ ಉಪದೇಶಿಸಲ್ಪಟ್ಟ ಪಂಚಾಕ್ಷರೀ ಮಂತ್ರವನ್ನು ಜಪಿಸುತ್ತ ಶಿವಧ್ಯಾನ ತತ್ಪರನಾಗಿ ಜಿತೇಂದ್ರಿಯನಾಗಿದ್ದು ಜೈನರ ಸಂಗವನ್ನು ಬಿಟ್ಟು ಶಿವಭಕ್ತರಲ್ಲಿ ಸೇರಿ ಸದಾ ಶಿವಪೂಜಾಸಕ್ತನಾಗಿರುತ್ತಿದ್ದನು.

ರಾಜಪುತ್ರನ ಈ ಚರ್ಯೆಯನ್ನು ನೋಡಿ ಮಂತ್ರಿಗಳು ರಾಜನಿಗೆ ಅವನು ಮಗನ ವಿಚಾರವನ್ನು ತಿಳಿಸುತ್ತಾ ಎಲೈ ರಾಜನೇ ಬುದ್ಧಿಶಾಲಿಯಾದ ನಿಮ್ಮ

ಮಗನಾದ ಜಗದ್ದೇವನು ನಮ್ಮ ಮತವನ್ನು ತ್ಯಜಿಸಿ ಶೈವ ಮತವನ್ನು ಆಶ್ರಯಿಸಿ ದೇವಶಾಲಿಯೆಂಬೊಬ್ಬನಿಂದ ಉಪದೇಶ ಪಡೆದು ಪಂಚಾಕ್ಷರೀಮಂತ್ರವನ್ನು ಜಪಿಸುತ್ತ ಶಿವಪೂಜಾ ಪರಾಯಣನಾಗಿ ಶಿವಧ್ಯಾನ ನಿರತನಾಗಿ ಶಿವಭಕ್ತರನ್ನು ಕೂಡಿಕೊಂಡವನಾಗಿ ಶಿವಕಥಾಮೃತವನ್ನು ಕೇಳುತ್ತ ಶಿವಭಕ್ತನಾಗಿರುವನೆಂದು ನುಡಿದರು. ರಾಜನು ಮಂತ್ರಿಗಳಿಂದ ತನ್ನ ಮಗನ ಈ ಸುದ್ದಿಯನ್ನು ಕೇಳಿ ದೇವಶಾಲಿಯನ್ನು ಪಟ್ಟಣದಿಂದ ಹೊರಕ್ಕೆ ಹೊರಡಿಸಿದನು.

ನಂತರ ಮಂತ್ರಿಗಳ ಮೂಲಕ ತನ್ನ ಮಗನನ್ನು ರಾಜಸಭೆಗೆ ಬರಮಾಡಿಕೊಂಡು ಅವನನ್ನು ನೋಡಿ ಅತ್ಯಂತ ದುಃಖದಿಂದ ಜಾಣನಾದ ಪುತ್ರನೇ ನನ್ನ ಮಾತನ್ನು ಕೇಳು. ನಮ್ಮ ಜೈನಮತಕ್ಕಿಂತಲೂ ಉತ್ಕೃಷ್ಟವಾದ ಮತವು ಲೋಕದಲ್ಲೇ ಬೇರೊಂದಿಲ್ಲ. ಹೀಗಿರುವಾಗ ನೀನು ಸ್ವಮತವನ್ನು ತ್ಯಜಿಸಿ ಪರಮತಾವಲಂಬಿಯಾಗುವುದುಂಟೆ? ಯಾರು ಸದಾ ಪಿಶಾಚಗಳೊಡನೆ ಆಡುವನೋ ಯಾರಿಗೆ ಸ್ಮಶಾನವೇ ಮನೆಯೋ ಯಾರಿಗೆ ಬ್ರಹ್ಮನ ತಲೆಬುರುಡೆಯೇ ಭಿಕ್ಷಾ ಪಾತ್ರೆಯೋ ಅಂತಹ ರುದ್ರನನ್ನು ಯಾರು ತಾನೆ ಭಜಿಸುವರು? ನೀನು ಮತ್ತೆ ಜೈನಮತವನ್ನು ಅವಲಂಬಿಸೆಂದು ಹೇಳಿ ಆ ವೀರಮಲ್ಲಭರಾಜನು ತನ್ನ ಮಗನನ್ನು ಸಮಾಧಾನಪಡಿಸಿ ಮನೆಗೆ ಕಳುಹಿಸಿ ಜೈನ ಗುರುವಿನಿಂದ ಜೈನಮತವನ್ನು ಅವನಿಗೆ ಮತ್ತೆ ಬೋಧಿಸಿದನು. ಇಷ್ಟಾದರೂ ಜಗದ್ದೇವನು ಶೈವ ಮತವನ್ನೂ ಶಿವಪೂಜೆಯನ್ನೂ ಪಂಚಾಕ್ಷರೀ ಮಂತ್ರ ಜಪವನ್ನೂ ಬಿಡಲಿಲ್ಲ.

ಕ್ರುದ್ಧನಾದ ರಾಜನಿಂದ ಆ ಪಟ್ಟಣದಿಂದ ಹೊರದೂಡಲ್ಪಟ್ಟ ದೇವಶಾಲಿಯು ಸಮೀಪದಲ್ಲಿದ್ದ ವನವನ್ನು ಪ್ರವೇಶಿಸಿದನು. ಆ ವನವು ತಟಾಕಾದಿಗಳಿಂದಲೂ ಸಾಲ ಹಿಂತಾಲ ಕದಳಿ ಹಲಸು ಬೇಲ ನೇರಳೆ ಬೇವು ಮೊದಲಾದ ಫಲಭರಿತಗಳಾದ ವೃಕ್ಷಗಳಿಂದಲೂ, ಮಲ್ಲಿಗೆ ಪುನ್ನಾಗ ಪುಷ್ಪಗಳ ಸುವಾಸನೆಯಿಂದಲೂ ಲತಾಗೃಹಗಳಿಂದಲೂ ಹಂಸ ಸಾರಸ ಮೊದಲಾದ ಪಕ್ಷಿ ಸಮೂಹಗಳಿಂದಲೂ ಕೂಡಿ ಮನೋಹರವಾಗಿತ್ತು. ದೇವಶಾಲಿಯು ಆ ವನವನ್ನು ಹೊಕ್ಕು ಅಲ್ಲಿಯ ಒಂದು ಕೊಳದಲ್ಲಿ ಸ್ನಾನಮಾಡಿ ದಿವ್ಯಾಂಬರಧಾರಿಯಾಗಿ ಶುಚಿರ್ಭೂತನಾಗಿ ಭಸ್ಮೋದ್ಧೂಳಿತ ಸರ್ವಾಂಗನಾಗಿ ರುದ್ರಾಕ್ಷಾಭರಣಭೂಷಿತನಾಗಿ ವಿಧ್ಯುಕ್ತವಾಗಿ ಸಂಧ್ಯೋಪಾಸನೆ ಮಾಡಿ ರಾಜಯೋಗವನ್ನಾಶ್ರಯಿಸಿ ಪಂಚಾಕ್ಷರೀಮಂತ್ರವನ್ನು ಜಪಿಸುತ್ತ ಹೃದಯದಲ್ಲಿ ಜ್ಯೋತಿರ್ಮಯವಾದ ಧರ್ಮಾದಿ ಚತುರ್ವಿಧ ಪುರುಷಾರ್ಥದಾಯಕನಾದ ಸರ್ವಾಭೀಷ್ಟದಾಯಕನಾದ ಸಾಂಬನನ್ನು ಸದಾ ನೆನೆಯುತ್ತಿದ್ದನು.

ತನ್ನ ಸಹಸ್ರಾರಕಮಲದ ಬ್ರಹ್ಮಸ್ಥಾನದಲ್ಲಿದ್ದ ಚಿದ್ರೂಪನೂ ಪರಮೇಶ್ವರನೂ ಸರ್ವವಿದ್ಯಾನಾಥನೂ ಜಗತ್ತುಗಳೊಡೆಯನೂ ಸರ್ವವ್ಯಾಪಕನೂ ಪರಾತ್ಪರನೂ

ಬ್ರಹ್ಮ ವಿಷ್ಣು ಮಹೇಂದ್ರಾದಿಗಳಿಂದ ಪೂಜಿತನೂ ಅಜನೂ ಮಹತ್ತಿಗೆ ಮಹತ್ತಾದವನೂ ಏಕನೂ ಅವ್ಯಕ್ತನೂ ಅಚ್ಯುತನೂ ಅನಂತರೂಪನೂ ಸೃಷ್ಟಿಸ್ಥಿತಿಲಯಗಳಿಗೆ ಕಾರಣನೂ ಇಂದ್ರಿಯಗಳಿಗೆ ಅಗೋಚರನೂ ಪ್ರಕಾಶಮಾನನೂ ಆದಿಮಧ್ಯಾಂತರಹಿತನೂ ವೇದಗಳಿಗೆ ಅಗೋಚರನೂ ಆದ ಪರಮಾತ್ಮನನ್ನು ಧ್ಯಾನಿಸುತ್ತಿದ್ದನು. ದೇವಶಾಲಿಯು ಶಂಕರನನ್ನು ಏಕಮನಸ್ಕನಾಗಿ ಹೀಗೆ ಧ್ಯಾನಿಸುತ್ತಿರಲು ಆತನ ತಪೋಜ್ವಾಲೆಯು ಚರಾಚರಾತ್ಮಕವಾದ ಜಗತ್ತೆಲ್ಲವನ್ನೂ ವ್ಯಾಪಿಸಿತು.

ಇತ್ತ ಕಲ್ಯಾಣಪಟ್ಟಣದಲ್ಲಿದ್ದ ಜಗದ್ದೇವನು ತನ್ನ ಗುರುವಾದ ದೇವಶಾಲಿಯನ್ನು ಕಾಣಬೇಕೆಂಬ ಹಂಬಲದಿಂದ ಅವನನ್ನು ನೋಡುವುದಕ್ಕೆ ಹೋಗಲು ಸಿದ್ಧನಾಗುತ್ತಿದ್ದನು. ಇದನ್ನು ಕಂಡ ಅವನ ಮಿತ್ರರು ಎಲ್ಲ ಸಂಗತಿಯನ್ನೂ ರಾಜನಿಗೆ ತಿಳಿಸಿದರು. ರಾಜನು ತನ್ನ ಮಗನ ಸಿದ್ಧತೆಯನ್ನು ತಿಳಿದು ಭಯಭೀತನಾಗಿ ಮಗನನ್ನು ಸಭೆಗೆ ಕರೆಯಿಸಿ ಕೋಪದಿಂದ ದುರಾತ್ಮಾ ದುಷ್ಟಾ ನೀನು ಶೈವಮತವನ್ನು ತ್ಯಜಿಸದಿದ್ದರೆ ನಿನ್ನನ್ನೂ ನಿನ್ನ ಆ ಶೈವ ಗುರುವನ್ನೂ ಖಂಡಿತ ಕೊಲ್ಲುವೆನೆಂದು ಹೇಳಿ ಬೆದರಿಸಿದನು.

ಹೀಗೆಂದ ತಂದೆಯನ್ನು ಬುದ್ಧಿವಂತನಾದ ಜಗದ್ದೇವನು ಶಿವಭಕ್ತಿಸಮನ್ವಿತವಾದ ಮಧುರ ವಾಕ್ಯಗಳಿಂದ ಎಲೈ ಜನಕನೇ ಈ ಭೂಲೋಕದಲ್ಲಿ ಜೈನಮತವು ಬಹು ಶಾಸ್ತ್ರಗಳಿಂದ ನಿಷೇಧಿಸಲ್ಪಟ್ಟು ಶೃತಿ ಸ್ಮೃತಿಗಳಿಗೆ ವಿರೋಧವಾಗಿದ್ದು ಅತ್ಯಂತ ನಿಕೃಷ್ಟವಾದುದು ಎಂದು ತಿಳಿದು ಬರುತ್ತದೆ. ಆದರೆ ಶೈವ ಮತವು ಶೃತಿಸ್ಮೃತಿ ಸಮ್ಮತವು ಸರ್ವಾಗಮ ಪುರಾಣಗಳಿಂದ ಮಾನ್ಯವೂ ಆಗಿದ್ದು ಸತ್ಪುರುಷರಿಗೆ ಶ್ರೇಷ್ಠವಾಗಿರುವುದು. ಈ ಭುವನತ್ರಯದಲ್ಲಿ ಶಿವನಿಗಿಂತ ಶ್ರೇಷ್ಠವಾದ ದೈವವಿಲ್ಲವೆಂದು ತಿಳಿ. ರಾಜೇಂದ್ರನೇ ನಿನಗೆ ಅತ್ಯಂತ ಸತ್ಯವಾದ ಮಾತನ್ನು ಹೇಳುತ್ತೇನೆ ಕೇಳು. ಶಿವನೇ ಪರಬ್ರಹ್ಮವು. ಶಿವನೇ ಪರಗತಿಯು ಶಿವನೇ ಪರಂಜ್ಯೋತಿಯು. ಈ ಜಗತ್ತೆಲ್ಲವೂ ಶಿವಮಯವೇ. ಯೋಗಿಯು ತನಗೆ ಮುಕ್ತಿಯು ಬೇಕಾಗಿದ್ದರೆ ಪರತರವಾದ ಮುಕ್ತಿಪ್ರದವಾದ ಶಿವಪಂಚಾಕ್ಷರೀಮಂತ್ರವನ್ನು ಪಠಿಸತಕ್ಕದ್ದು. ಬ್ರಹ್ಮ ವಿಷ್ಣು ಮೊದಲಾದ ದೇವತೆಗಳಿಂದಲೂ ಮೋಕ್ಷಾಪೇಕ್ಷಿಗಳಾದ ಸನಕಾದಿ ಮುನೀಂದ್ರರಿಂದಲೂ ಶಿವನೇ ಸದಾ ಪೂಜಿಸಲ್ಪಡುತ್ತಿರುವನು. ಎಲೈ ರಾಜೇಂದ್ರನೇ ನೀನಾದರೂ ಶಿವಪೂಜಾ ಧುರಂಧರನಾಗಿ ಪಂಚಾಕ್ಷರೀ ಮಂತ್ರಜಪದಲ್ಲಿ ನಿರತನಾಗು ಎಂದು ಹೇಳಿದನು. ಇದನ್ನು ಕೇಳಿ ರಾಜನು ಅತ್ಯಂತ ಕೋಪದಿಂದ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ತನ್ನ ದೂತರನ್ನು ಕರೆದು ಎಲೈ ದೂತರೇ ಈ ನನ್ನ ಮಗನನ್ನು ಹೆಡಮುರಿಗೆ ಕಟ್ಟಿ ಕಾರಾಗೃಹಕ್ಕೆ ಹಾಕಿರೆಂದು ಆಜ್ಞಾಪಿಸಿ ತನ್ನ ಗೃಹವನ್ನು ಹೊಕ್ಕನು.

ಸೆರೆಯಲ್ಲಿಡಲ್ಪಟ್ಟ ಜಗದ್ದೇವನು ದುಃಖದಿಂದ ಕೂಡಿದವನಾಗಿ ತನ್ನ ಬಿಡುಗಡೆಗಾಗಿ ಗುರುವಾದ ದೇವಶಾಲಿಯನ್ನು ಧ್ಯಾನಿಸಿದನು. ಮಹಾತಪಸ್ವಿಯಾದ ದೇವಶಾಲಿಯು ತನ್ನ ದಿವ್ಯದೃಷ್ಟಿಯಿಂದ ತನ್ನ ಶಿಷ್ಯನ ದುರವಸ್ಥೆಯನ್ನೂ ದುಃಖಗಳನ್ನೂ ಅವನು ಬಿಡುಗಡೆಗಾಗಿ ತನ್ನನ್ನು ಧ್ಯಾನಿಸುವುದನ್ನೂ ತಿಳಿದು ಅತ್ಯಂತ ಕ್ರೋಧದಿಂದ ಆತನ ತಂದೆ ದುರ್ಮಾರ್ಗಿಯಾದ ವೀರವಲ್ಲಭರಾಜನನ್ನು ಶಿಕ್ಷಿಸುವುದಕ್ಕೋಸ್ಕರ ಅರಣ್ಯದಲ್ಲಿದ್ದ ಪ್ರಾಣಿ ಸಮೂಹಗಳನ್ನು ಶಿವಮಂತ್ರ ಪ್ರಭಾವದಿಂದ ಚತುರಂಗ ಬಲವನ್ನಾಗಿ ಮಾರ್ಪಡಿಸುವುದಾಗಿ ನಿಶ್ಚಯಿಸಿದನು. ಅದರಂತೆ ಅವನು ಶಿವಮಂತ್ರ ಪ್ರಭಾವದಿಂದ ಅಲ್ಲಿದ್ದ ಸಿಂಹ ಶಾರ್ದೂಲಗಳನ್ನು ಭಟರನ್ನಾಗಿಯೂ ಚಕ್ರವಾಕ ಪಕ್ಷಿಗಳನ್ನು ವಾಯುವೇಗ ಮನೋವೇಗವುಳ್ಳ ರಥಗಳನ್ನಾಗಿಯೂ ಮುಳ್ಳಿನ ಗಿಡಗಳನ್ನು ಆಯುಧಗಳನ್ನಾಗಿಯೂ ಅರಳಿಯ ಮರಗಳನ್ನು ಬಾಣಗಳನ್ನಾಗಿಯೂ ಬಿದಿರುಗಳನ್ನು ಬಿಲ್ಲುಗಳನ್ನಾಗಿಯೂ ಸೆಣಬಿನ ಗಿಡಗಳನ್ನು ಬಿಲ್ಲುಗಳಿಗೆ ಕಟ್ಟುವ ಹೆದೆಗಳನ್ನಾಗಿಯೂ ಬಳ್ಳಿಯ ಪೊದೆಗಳನ್ನು ಬತ್ತಳಿಕೆಗಳನ್ನಾಗಿಯೂ ಬ್ರಹ್ಮವೃಕ್ಷಗಳನ್ನು ಬ್ರಹ್ಮಾಸ್ತ್ರಗಳನ್ನಾಗಿಯೂ ಮಾರ್ಪಡಿಸಿದನು. ಆಯುಧಪೂರ್ಣವೂ ಚಾಪ ಬಾಣಾಸ್ತ್ರಗಳಿಂದ ಸುಸಜ್ಜಿತವಾದುದೂ ಆದ ಆ ಚತುರಂಗ ಸೈನ್ಯವನ್ನು ನೋಡಿ ಅವನು ಆನಂದಪಟ್ಟನು.

ಆ ಸಮಸ್ತ ಸೈನ್ಯಗಳೂ ದೇವಶಾಲಿಯ ಬಳಿಗೆ ಬಂದು ವಿನಮ್ರವಾಗಿ ಕೈಮುಗಿದು ಪ್ರಭೂ ಯಾವ ಕಾರಣಕ್ಕಾಗಿ ನಮ್ಮನ್ನು ಸೃಷ್ಟಿಸಿದೆ. ನಾವು ಮಾಡಬೇಕಾದ ಕೆಲಸವಾವುದು. ಮಹಾಪ್ರಾಜ್ಞನೇ ಶೀಘ್ರವಾಗಿ ಅಪ್ಪಣೆಕೊಡು. ಶಿರಸಾವಹಿಸಿ ನಡೆಸುವೆವು ಎಂದು ಹೇಳಿದವು. ಈ ಮಾತನ್ನು ಕೇಳಿ ತೇಜಸ್ವಿಯಾದ ದೇವಶಾಲಿಯು ಮೇಘದಂತೆ ಗಂಭೀರವಾದ ವಾಣಿಯಿಂದ ಆ ಸೈನಿಕರನ್ನು ಕುರಿತು ಎಲೈ ಸೈನಿಕರೇ ಮಹಾಬಲಿಷ್ಟರಾದ ನೀವು ಶೀಘ್ರವಾಗಿ ಕಲ್ಯಾಣಪಟ್ಟಣಕ್ಕೆ ಹೋಗಿ ಸರ್ವಸೇನಾಸಮೇತನಾದ ವೀರವಲ್ಲಭಮಹಾರಾಜನನ್ನು ಕೊಂದು ಕಾರಾಗೃಹದಲ್ಲಿರುವ ರಾಜಪುತ್ರನೂ ನನ್ನ ಶಿಷ್ಯನೂ ಆದ ಜಗದ್ದೇವನನ್ನು ಬಂಧನದಿಂದ ಬಿಡಿಸಿ ಎಂದು ಹೇಳಿದನು. ಅದರಂತೆಯೇ ಆ ಸಮಸ್ತ ಸೈನ್ಯಗಳೂ ದೇವಶಾಲಿಯ ಅಪ್ಪಣೆಯನ್ನು ಶಿರಸಾವಹಿಸಿ ಶಸ್ತ್ರಾಸ್ತ್ರಪಾಣಿಗಳಾಗಿ ಆ ವನದಿಂದ ಹೊರಟು ಶತ್ರುಗಳಿಗೆ ಭಯವುಂಟಾಗುವಂತೆ ಸಿಂಹನಾದಗಳನ್ನು ಮಾಡುತ್ತ ಯಮದೂತರು ಅಂಜುವಂತೆ ಧನುಷ್ಟೇಂಕಾರ ಮಾಡುತ್ತ ನಾನಾಭರಣಯುಕ್ತರೂ ಯುದ್ಧವಿಶಾರದರೂ ಮಹಾಶೂರರೂ ಆದ ಆ ಸೈನಿಕರು ಕಲ್ಯಾಣಪಟ್ಟಣವನ್ನು ಸುತ್ತಲೂ ಮುತ್ತಿದರು.

ಅನಿರೀಕ್ಷಿತವಾಗಿ ಕಲ್ಯಾಣಪಟ್ಟಣವನ್ನು ಸುತ್ತಲೂ ಎಂಟು ದಿಕ್ಕುಗಳಿಂದಲೂ ಮುತ್ತಿರುವುದನ್ನು ನೋಡಿದ ಕೋಟೆಯ ಮೇಲಿನ ಕಾವಲುಭಟರು ರಾಜನ ಬಳಿಗೆ ಬಂದು

ಭಯದಿಂದ ನಮಸ್ಕಾರಮಾಡಿ ಬದ್ಧಾಂಜಲಿಯಾಗಿ ರಾಜನನ್ನು ಕುರಿತು ರಾಜೇಂದ್ರನಾದ ವೀರವಲ್ಲಭಮಹಾರಾಜನೇ ಈ ದಿನ ನಮ್ಮ ರಾಜಧಾನಿಯನ್ನು ಯಾವುದೋ ಶತ್ರು ಸೈನ್ಯವು ಅನಿರೀಕ್ಷಿತವಾಗಿ ಮುತ್ತಿರುವುದು. ಅದು ಸಮುದ್ರದಂತೆ ಅಗಾಧವಾಗಿದ್ದು ಭಯುವನ್ನುಂಟುಮಾಡುತ್ತಿರುವುದು. ಅದು ಸರ್ವಾಯುಧಯುಕ್ತವೂ ಸಕಲ ಬಿಲ್ಲು ಬಾಣಾಸ್ತ್ರಗಳಿಂದಲೂ ಸಜ್ಜಿತವಾಗಿದ್ದು ಕುದುರೆಗಳ ಹೇಷಾರವಗಳಿಂದಲೂ ಗಜಗಳ ಬೃಂಹಿತ ಧ್ವನಿಗಳಿಂದಲೂ ಸಿಂಹನಾದಗಳಿಂದಲೂ ಕೂಡಿದ್ದು ದಶದಿಕ್ಕುಗಳನ್ನೂ ಕಿವುಡು ಮಾಡುತ್ತಿದೆ. ಈ ಸೈನ್ಯವು ಎಲ್ಲಿಂದ ಬಂದಿದೆಯೋ ಯಾವ ಭೂಪಾಲನು ಕಳುಹಿಸಿರುವನೋ ನಮಗೆ ತಿಳಿಯದು ಎಂದರು.

ದೂತರ ಈ ಮಾತನ್ನು ಕೇಳಿ ವೀರವಲ್ಲಭನು ಅತ್ಯಂತ ಕೋಪದಿಂದ ಕಟಕಟನೆ ಹಲ್ಲುಗಳನ್ನು ಕಡಿಯುತ್ತಾ ಅಲ್ಲಿದ್ದ ಮಂತ್ರಿಗಳೆಲ್ಲರನ್ನೂ ಕುರಿತು ಎಲೈ ಮಂತ್ರಿಗಳೇ ಅತ್ಯಂತ ಭಯಭ್ರಾಂತರಾದ ನಮ್ಮೀ ಭಟರು ಈಗ ಬಂದು ಹೇಳಿದ ಸಮಾಚಾರವನ್ನು ನೀವೆಲ್ಲರೂ ಕೇಳಿರುವಿರಷ್ಟೆ. ಅನಿರೀಕ್ಷಿತವಾಗಿ ಬಂದಿರುವ ಈ ಸೈನ್ಯವನ್ನು ಸೋಲಿಸುವುದಕ್ಕೆ ನಮ್ಮ ಸಮಸ್ತ ಸೈನ್ಯವನ್ನೂ ಸಿದ್ಧಗೊಳಿಸಿರೆಂದು ಆಜ್ಞೆಮಾಡಿದನು. ರಾಜನ ಈ ಮಾತನ್ನು ಕೇಳಿದ ಮಂತ್ರಿಗಳು ಅವಸರವಸರವಾಗಿ ರಥಾಶ್ವಗಜಗಳಿಂದ ಕೂಡಿದ ಸಮಸ್ತಾಯುಧಗಳಿಂದ ಸಜ್ಜುಗೊಂಡ ಶತ್ರುಗಳಿಗೆ ಭಯಂಕರವಾಗಿ ಅವರಿಗೆ ದುಸ್ಸಾಧ್ಯವಾದ ಸಮುದ್ರಕ್ಕೆ ಸಮಾನವಾದ ಅಜೇಯವಾದ ತಮ್ಮ ಸಮಸ್ತ ಸೇನೆಗಳನ್ನೂ ಬರಮಾಡಿಕೊಂಡು ಯುದ್ಧೋದ್ಯುಕ್ತವೂ ಮಹಾ ಬಲಿಷ್ಠವೂ ಆದ ಸೇನಾ ಸಿದ್ಧತೆಯನ್ನು ರಾಜನಿಗೆ ವಿಜ್ಞಾಪಿಸಿದರು.

ಆ ಕಲ್ಯಾಣ ನಗರಾಧೀಶನಾದ ವೀರವಲ್ಲಭರಾಜನು ತನ್ನ ಮಂತ್ರಿಗಳಿಂದೊಡಗೂಡಿ ಯುದ್ಧಾಭಿಲಾಷಿಯಾದ ಸಮಸ್ತ ಸೇನಾ ಸಮೇತನಾಗಿ ಸಮಸ್ತ ಶಸ್ತ್ರಾಸ್ತ್ರಗಳಿಂದ ತುಂಬಿದ ರಾಜ್ಯಲಾಂಛನದ ಧ್ವಜ ಪತಾಕೆಗಳು ಹಾರಾಡುವ ಉತ್ತಮಾಶ್ವಗಳು ಹೂಡಲ್ಪಟ್ಟ ರಥಾರೋಹಣ ಮಾಡಿ ಯುದ್ಧಕವಚವನ್ನು ತೊಟ್ಟು ಧನುರ್ಬಾಣ ಬತ್ತಳಿಕೆಗಳನ್ನು ಧರಿಸಿ ಶತ್ರುಸೈನ್ಯವನ್ನು ನಾಶಮಾಡುವುದಕ್ಕೆ ತನ್ನ ಪಟ್ಟಣದಿಂದ ಹೊರಹೊರಟನು. ರಾಜನು ಹೊರಟಕೂಡಲೇ ಭಟರು ಶಂಖಗಳನ್ನು ಊದಿ ಭೇರಿಗಳನ್ನು ಬಾರಿಸಿದರು. ಸಿಂಹನಾದ ಮಾಡಿ ಶತ್ರುಗಳಿಗೆ ಭಯವನ್ನುಂಟುಮಾಡುವ ಧನುಷ್ಟಂಕಾರಗಳನ್ನು ಮಾಡಿದರು. ಈ ರೀತಿಯಾಗಿ ಸಕಲಸಿದ್ಧತೆಗಳಿಂದ ಕೂಡಿದ ಮಹಾತೇಜಸ್ವಿಯಾದ ಧೀರನಾದ ವೀರವಲ್ಲಭರಾಜನು ತನ್ನ ಸಮಸ್ತ ಸೇನಾ ಸಮೇತನಾಗಿ ಯುದ್ಧ ಮಾಡಲು ಬಂದಿರುವುದನ್ನು ನೋಡಿ ರಿಪುಸಂಘವನ್ನು ನಾಶಮಾಡುವ ದೇವತೆಗಳಂತೆ ಮಹಾ ವೀರನಾದ ದೇವಶಾಲಿಯ ಮಹಾಸೈನ್ಯವು ಯುದ್ಧಕ್ಕೆ ಉದ್ಯುಕ್ತವಾಯಿತು.

ಯುದ್ಧೋದ್ಯುಕ್ತವಾದ ಉಭಯ ಸೇನೆಗಳ ಯುದ್ಧವನ್ನು ನೋಡಲು ಕುತೂಹಲದಿಂದ ದೇವತೆಗಳು ತಮ್ಮ ಕಾಂತಿಯುಕ್ತವಾದ ಸುಂದರಗಳಾದ ದಿವ್ಯ ವಿಮಾನಗಳನ್ನೇರಿಕೊಂಡು ಆಕಾಶದಲ್ಲಿ ನೆರೆದರು. ತಪೋಧನರಾದ ನಾರದ ಮೊದಲಾದ ಋಷಿಗಳೂ ಗಂಧರ್ವರೂ ಸಿದ್ಧರೂ ಚಾರಣರೂ ಅಷ್ಟದಿಕ್ಪಾಲಕರೂ ಕುಬೇರ ವರುಣ ವಾಯು ಈಶಾನ ಅಗ್ನಿ ಯಮ ನಿಋತಿಗಳೂ ಇಂದ್ರನ ನೇತೃತ್ವದಲ್ಲಿ ವೈಜಯಂತಿಯೆಂಬ ಮೇಲುಪ್ಪರಿಗೆಯ ವಿಮಾನದಲ್ಲಿ ಆಗಮಿಸಿ ಅಲ್ಲಿ ಸೇರಿದರು. ಸಮಸ್ತರಿಗೂ ಕಳವಳವನ್ನುಂಟುಮಾಡುವ ಯಮನ ರಾಜಧಾನಿಯನ್ನು ತುಂಬುವ ಉಭಯ ಸೈನ್ಯಗಳಿಗೂ ಭಯಂಕರವಾದ ಯುದ್ಧವು ಪ್ರಾರಂಭವಾಯಿತು. ಎರಡು ಕಡೆಯ ಸೈನಿಕರೂ ಮುಸಲ ಮುದ್ಗರ ಭಿಂಡಿವಾಲ ಪರಶ್ವಥ ಶಕ್ತಿ ಗದೆ ತೋಮರ ಶತಘ್ನಿ ಮೊದಲಾದ ಆಯುಧಗಳಿಂದಲೂ ಕ್ರೋಧದಿಂದ ಪ್ರಯೋಗಿಸಲ್ಪಟ್ಟ ಬಾಣಗಳಿಂದಲೂ ಪರಸ್ಪರ ಸೆಣಸಾಡಿದರು. ರಥಿಕನು ರಥಿಕನನ್ನೂ ಅಶ್ವಾರೂಢನು ಅಶ್ವಾರೂಢನನ್ನೂ ಕಾಲಾಳು ಕಾಲಾಳನ್ನೂ ಗಜಾರೋಹಿಯು ಗಜಾರೋಹಿಯನ್ನೂ, ಎದುರಿಸುತ್ತಾ ಪರಸ್ಪರ ಜಯಾಪೇಕ್ಷೆಯಿಂದಲೂ ವೀರ ಸ್ವರ್ಗಾರೋಹಣಾಕಾಂಕ್ಷಿಗಳಾಗಿ ಘೋರ ಯುದ್ಧಮಾಡಿದರು. ಒಬ್ಬರಿಗೊಬ್ಬರು ಸಿಂಹಗಳಂತೆ ಗರ್ಜಿಸುತ್ತಾ ವೀರನಾದಗಳನ್ನು ಮಾಡುತ್ತ ಸೈನಿಕರು ತಮ್ಮ ತಮ್ಮೊಳಗೆ ನನಗೆ ನೀನೆಷ್ಟರವನು ? ನನಗೆ ನೀನೆಷ್ಟರವನು ? ಎಂದು ಕುಹಕ ನುಡಿಗಳಿಂದ ಪರಸ್ಪರ ಮೂದಲಿಸುತ್ತಾ ತಮ್ಮ ಹಿಂದಿನ ಜಯಗಳನ್ನು ನೆನೆಸಿಕೊಳ್ಳುತ್ತ ನೋಡುವವರಿಗೆ ರೋಮಾಂಚನವಾಗುವಂತೆ ಯುದ್ಧ ಮಾಡುತ್ತಿರುವುದನ್ನು ಇಂದ್ರಾದಿ ದೇವತೆಗಳು ಕಂಡು ಆಶ್ಚರ್ಯಪಟ್ಟು ಎರಡು ಪಕ್ಷದ ಸೈನಿಕರನ್ನೂ ಹೊಗಳುತ್ತಿದ್ದರು.

ಹೀಗೆ ಯುದ್ಧವು ಪರಸ್ಪರ ಜಯಾಪೇಕ್ಷೆಯಿಂದ ಘೋರವಾಗಿ ಸಾಗುತ್ತಿರಲು ಹುಣ್ಣಿಮೆಯಲ್ಲಿ ಸಮುದ್ರವು ಉಕ್ಕುವಂತೆ ದೇವಶಾಲಿಯ ಮಹಾ ಸೈನ್ಯವು ಶಿವಮಂತ್ರ ಪ್ರಭಾವದಿಂದ ಶಕ್ತಿಯಲ್ಲಿ ಮಿಗಿಲಾಯಿತು. ವೀರವಲ್ಲಭರಾಜನ ಸೈನ್ಯವು ಕೃಷ್ಣಪಕ್ಷದ ಚಂದ್ರನಂತೆ ಬಲಪೌರುಷಗಳಲ್ಲಿ ಕ್ಷೀಣವಾಗುತ್ತಿದ್ದಿತು. ಮೇಲುಗೈ ಪಡೆದಿದ್ದ ದೇವಶಾಲಿಯ ಸೈನಿಕರು ಉತ್ತೇಜಿತರಾಗಿ ಶತ್ರು ಸೈನ್ಯವನ್ನು ತಮ್ಮ ಮನಬಂದಂತೆ ನಾನಾ ಆಯುಧಗಳಿಂದ ಪ್ರಹರಿಸುತ್ತಿರಲು ಶತ್ರು ಪಕ್ಷದಲ್ಲಿ ಕೆಲವರು ಮೂರ್ಛೆಗೊಂಡರು ಕೆಲವರು ಗತಪ್ರಾಣರಾದರು. ಕೆಲವರು ಅಂಗಾಂಗಗಳನ್ನು ಕಳೆದುಕೊಂಡರು. ಕೆಲವರು ಅಂಜಿ ತಮಗೆ ತಿಳಿಯದಂತೆ ತಾವೇ ಮೂತ್ರ ವಿಸರ್ಜನೆ ಮಾಡಿಕೊಂಡರು. ಕೆಲವರು ಕೈಲಾಗದೆ ಪಲಾಯನ ಮಾಡಿದರು. ಉಳಿದವರು ರಣಭೂಮಿಯಲ್ಲಿ ತಮ್ಮ ಆಯುಧಗಳನ್ನು ಬಿಸುಟು ವೀರವಲ್ಲಭರಾಜನ ಮೊರೆ ಹೊಕ್ಕರು. ಈ ರೀತಿ ಶತ್ರುಗಳಿಂದ ಕಂಗೆಟ್ಟು ಜೀವದಾಸೆಯಿಂದ ತನ್ನ ಬಳಿಗೆ ಓಡಿ ಬಂದ ತನ್ನ ಸೈನಿಕರನ್ನು ವೀರವಲ್ಲಭರಾಜನು ನೋಡಿ ಕೋಪವು ಉಕ್ಕಿ

ಬರಲು ಅವನು ಕೂಡಲೇ ಅಶ್ವಾರೂಢನಾಗಿ ರಣರಂಗಕ್ಕೆ ಬಂದು ತನ್ನ ಕಣ್ಣುಗಳಿಂದಲೇ ಸಮಸ್ತ ಶತ್ರು ಸೈನ್ಯಗಳನ್ನು ದಹಿಸುವನೋ ಎಂಬಂತೆ ದುರುಗುಟ್ಟಿ ನೋಡುತ್ತಾ ಧನುಸ್ಸನ್ನು ಕೈಗೆತ್ತಿಕೊಂಡು ಬಗ್ಗಿಸಿ ಹೆದೆಗಟ್ಟಿ ಸಿಂಹನಾದ ಮಾಡುತ್ತಾ ಶತ್ರು ಸೈನ್ಯಗಳನ್ನು ನಾಶಮಾಡಲು ನೂರು ಸಹಸ್ರ ಹತ್ತುಸಹಸ್ರ ಲಕ್ಷ ಹತ್ತುಲಕ್ಷದಂತೆ ಬಾಣಗಳನ್ನು ತನ್ನ ಹಸ್ತಲಾಘವದಿಂದ ಪ್ರಯೋಗಿಸುತ್ತಾ ರಣಭೂಮಿಯಲ್ಲೆಲ್ಲಾ ಓಡಾಡುತ್ತಾ ಶತ್ರು ಸೈನಿಕರನ್ನು ಕಾಲಯಮನಂತೆ ನಾಶಮಾಡುತ್ತಿದ್ದನು.

ಹೀಗೆ ವೀರವಲ್ಲಭರಾಜನಿಂದ ಘಾತಿಸಲ್ಪಟ್ಟ ದೇವಶಾಲಿಯ ಸೈನಿಕರಲ್ಲಿ ಕೆಲವರು ಮೂರ್ಛೆಗೊಂಡರು. ಕೆಲವರು ಗತಪ್ರಾಣರಾದರು. ಕೆಲವರು ತಮ್ಮ ಅವಯವಗಳನ್ನು ಕಳೆದುಕೊಂಡರು ಕೆಲವರು ಆರ್ತನಾದ ಮಾಡಿದರು. ಹೀಗೆ ಘೋರವಾಗಿ ಯುದ್ಧ ನಡೆಯುತ್ತಿರಲು ದೇವಶಾಲಿಯ ಸೈನಿಕರು ವೀರವಲ್ಲಭನ ಪರಾಕ್ರಮವನ್ನು ಕಂಡು ತಾವೆಲ್ಲಾ ಒಂದುಗೂಡಿ ಸೇಡು ತೀರಿಸಿಕೊಳ್ಳಲು ಪ್ರತಿಯಾಗಿ ನಾನಾ ಆಯುಧಗಳನ್ನೂ ಬಾಣಗಳನ್ನೂ ಪ್ರಯೋಗಿಸಿ ವೀರವಲ್ಲಭನ ಸೈನ್ಯವನ್ನು ನಾಶಮಾಡುತ್ತಾ ಬಂದರು.

ಮಹಾತೇಜಸ್ವಿಯಾದ ವೀರವಲ್ಲಭರಾಜನು ಇದನ್ನು ನೋಡಿ ಕಣ್ಣುಗಳನ್ನು ಕೆಂಡದಂತೆ ಕೆಂಪಗೆ ಮಾಡಿಕೊಂಡು ಅತ್ಯುತ್ತಮವಾದ ಆಗ್ನೇಯಾಸ್ತ್ರವನ್ನು ದೇವಶಾಲಿಯ ಸೈನ್ಯದ ಮೇಲೆ ಪ್ರಯೋಗಿಸಿದನು. ಆಗ್ನೇಯಾಸ್ತ್ರದಿಂದ ದಹಿಸಲ್ಪಡುತ್ತಿರುವ ತನ್ನ ಸೈನಿಕರನ್ನು ನೋಡಿ ದೇವಶಾಲಿಯ ಸೇನಾಪತಿಯಾದ ಅಸ್ತ್ರವಿದ್ಯಾ ವಿಶಾರದನಾದ ಶಂಕರನೆಂಬುವನು ಅದಕ್ಕೆ ಪ್ರತಿಯಾಗಿ ವಾರುಣಾಸ್ತ್ರವನ್ನು ಪ್ರಯೋಗಿಸಿದನು. ಆ ವಾರುಣಾಸ್ತ್ರದ ಪ್ರಯೋಗದಿಂದ ಆಗ್ನೇಯಾಸ್ತ್ರದ ಪ್ರಭಾವವು ಶಾಂತವಾಯಿತು. ದೇವಶಾಲಿಯ ಸೇನಾಪತಿಯು ವೀರವಲ್ಲಭನ ದಿವ್ಯಾಸ್ತ್ರವನ್ನು ತನ್ನ ಪ್ರತ್ಯಾಸ್ತ್ರ ಪ್ರಯೋಗದಿಂದ ಶಮನಗೊಳಿಸಿದನು. ವೀರವಲ್ಲಭ ರಾಜನು ಯಮಾಸ್ತ್ರವನ್ನು ಪ್ರಯೋಗಿಸಲು ದೇವಶಾಲಿಯ ಸೇನಾಪತಿಯು ರುದ್ರಾಸ್ತ್ರವನ್ನು ಪ್ರಯೋಗಿಸಿ ಅದನ್ನು ನಿವಾರಿಸಿದನು. ವೀರವಲ್ಲಭರಾಜನು ನಾರಾಯಣಾಸ್ತ್ರವನ್ನು ಪ್ರಯೋಗಿಸಲು ಸೇನಾಪತಿ ಶಂಕರನು ಮಹೇಶ್ವರಾಸ್ತ್ರದಿಂದ ಅದನ್ನು ನಿಸ್ತೇಜಗೊಳಿಸಿದನು.

ಶಂಕರನು ವೀರವಲ್ಲಭನನ್ನು ಕೊಲ್ಲಲು ನಿಶ್ಚಯಿಸಿ ಕೋಪದಿಂದ ಕಣ್ಣು ಕೆಂಪಗೆ ಮಾಡಿಕೊಂಡು ಸರ್ವಲೋಕ ಭಯಂಕರವಾದ ಬ್ರಹ್ಮಾಸ್ತ್ರವನ್ನು ವೀರವಲ್ಲಭರಾಜನ ಮೇಲೆ ಪ್ರಯೋಗಿಸಿದನು. ಆ ಅಸ್ತ್ರವು ಉರಿಯನ್ನು ಕಾರುತ್ತಾ ಸರ್ವಲೋಕಗಳನ್ನು ಭಯಗೊಳಿಸುತ್ತಾ ಕಿರೀಟ ಕರ್ಣಕುಂಡಲಗಳಿಂದ ಶೋಭಿಸುತ್ತಿದ್ದ ವೀರವಲ್ಲಭ ರಾಜನ ಶಿರಸ್ಸನ್ನು ನೆಲಕ್ಕೆ ಕೆಡವಿತು. ದೇವಶಾಲಿಯ ಸೈನಿಕರು ವಿಜಯೋತ್ಸಾಹದಿಂದ ಜಯಭೇರಿ ಬಾರಿಸಿದರು. ಶಂಖಗಳನ್ನು ಊದಿದರು. ಅಪಾರ ಸಂತೋಷಭರಿತರಾಗಿ

ಕುಣಿದಾಡಿದರು. ದೇವದುಂದುಭಿಗಳು ಮೊಳಗಿದುವು. ಆಕಾಶದಿಂದ ಪುಷ್ಪವೃಷ್ಟಿಯಾಯಿತು. ಅಪ್ಸರೆಯರು ನಾಟ್ಯವಾಡಿದರು. ಗಂಧರ್ವರು ಗಾನಮಾಡಿದರು. ದೇವಶಾಲಿಯು ಸೇನಾಪತಿಯೇ ಮೊದಲಾದ ಸೈನಿಕರು ದುಃಖಭರಿತ ಜನರಿಂದ ಕೂಡಿದ ಕಲ್ಯಾಣ ಪಟ್ಟಣವನ್ನು ಪ್ರವೇಶಿಸಿ ನಗರದ ಜನರಿಗೆ ಅಭಯಕೊಟ್ಟು ಕಾರಾಗೃಹದಲ್ಲಿದ್ದ ವೀರವಲ್ಲಭ ರಾಜನ ಮಗನಾದ ಜಗದ್ದೇವನನ್ನು ಬಂಧಮುಕ್ತನನ್ನಾಗಿ ಮಾಡಿ ಸರ್ವಾಲಂಕಾರ ಯುಕ್ತನಾದ ಆನೆಯ ಮೇಲೆ ಕುಳ್ಳಿರಿಸಿ ದೇವಶಾಲಿಯ ಬಳಿಗೆ ಕರೆತಂದರು.

ಜಗದ್ದೇವನು ತನ್ನ ಗುರುವಾದ ದೇವಶಾಲಿಯನ್ನು ದೂರದಿಂದಲೇ ನೋಡಿ ಆನೆಯಿಂದಿಳಿದು ಪಾದಚಾರಿಯಾಗಿ ಬಂದು ತನ್ನ ಗುರುವಿಗೆ ನಮಸ್ಕರಿಸಿದನು. ಅವನನ್ನು ಶ್ರುತಿಸ್ಮೃತಿ ಆಗಮೋದಿತಗಳಾದ ಸ್ತೋತ್ರಗಳಿಂದ ಈ ರೀತಿ ಸ್ತುತಿಸಿದನು. ಪರಮಾತ್ಮನ ಫಾಲನೇತ್ರದಿಂದ ಜನಿಸಿದವನೇ ಶರಣಾಗತ ರಕ್ಷಕನೇ ದೇವಶಾಲಿಯೇ ನಿನಗೆ ನಮಸ್ಕಾರ ವಿದ್ಯಾವಿಲಾಸನ ತನಯನೇ ಭಕ್ತಾಭೀಷ್ಟಪ್ರದಾಯಕನೇ ಸದ್ಗುರುವೇ ನನ್ನನ್ನು ಸಂಸಾರಸಾಗರದಿಂದ ಪಾರುಮಾಡಿ ರಕ್ಷಿಸು. ಶ್ರುತಿಸ್ಮೃತಿ ವಿರೋಧವಾದ ಈ ಜೈನ ಮತವನ್ನು ನಿಸ್ತೇಜಗೊಳಿಸಿ ಶೈವ ಮತವನ್ನು ಉದ್ಧರಿಸು. ಸರ್ವಜ್ಞನೇ ನನಗೆ ನಿನ್ನಿಂದ ಉಪದೇಶಿಸಲ್ಪಟ್ಟ ಶಿವಪಂಚಾಕ್ಷರೀ ಮಂತ್ರದಿಂದ ನಾನು ಪಾಪರಹಿತನಾದೆನು. ದಯಾನಿಧಿಯೇ ನಿನ್ನ ನಾಮಸ್ಮರಣ ಮಾತ್ರದಿಂದಲೇ ಕಾರಾಗೃಹದಿಂದ ಬಿಡಿಸಲ್ಪಟ್ಟು ಬಂಧಮುಕ್ತನಾದೆನು ಎಂದು ಅಂಜಲೀಬದ್ಧನಾಗಿ ಸ್ತುತಿಸಿ ನಮಿಸಿದನು.

ದೇವಶಾಲಿಯು ಹೀಗೆ ತನ್ನನ್ನು ಸ್ತುತಿಸುತ್ತಿರುವ ಜಗದ್ದೇವನನ್ನು ನೋಡಿ ಅವನ ಬೆನ್ನನ್ನು ನೇವರಿಸುತ್ತಾ ಶಿಷ್ಯಾಗ್ರೇಸರನಾದ ಬುದ್ಧಿವಂತನಾದ ಜಗದ್ದೇವನೇ ನಾನು ಹೇಳುವ ಮಾತನ್ನು ಮನಸ್ಸಿಟ್ಟು ಕೇಳು. ಈ ಮೂರು ಲೋಕಗಳಲ್ಲಿಯೂ ಶಿವನಿಗಿಂತಲೂ ಅಧಿಕವಾದ ದೈವವೇ ಇಲ್ಲವು. ಶೈವ ಮತವಿರೋಧಿಗಳಾದ ಜೈನರೆಲ್ಲರನ್ನು, ನಾನು ಶಪಿಸುವೆನೆಂದು ನುಡಿದು ಜಲವನ್ನು ಅಭಿಮಂತ್ರಿಸಲು ಕೈಗೆ ತೆಗೆದುಕೊಂಡನು. ಆಗ ಕೈಲಾಸ ಪತಿಯಾದ ಶಂಕರನು ಇದನ್ನು ತಿಳಿದು ಅವನನ್ನು ಸಮಾಧಾನಪಡಿಸಲು ಭಕ್ತಾಗ್ರಣಿಯಾದ ನಂದಿಯನ್ನು ಕಳುಹಿಸಿದನು. ಭಕ್ತಾಗ್ರಗಣ್ಯನಾದ ಭಸ್ಮೋದ್ಧೂಳಿತ ಸರ್ವಾಂಗನಾದ ರುದ್ರಾಕ್ಷಾಲಂಕೃತನಾದ ನಂದೀಶ್ವರನು ಶಿವನ ಪ್ರೇರಣೆಯಂತೆ ದೇವಶಾಲಿಯ ಬಳಿಗೆ ಬಂದು ಅವನನ್ನು ಕುರಿತು ದೇವಶಾಲಿಯೇ ಇದೇನು ಮಾಡುವೆ? ಆತುರಪಡಬೇಡ ಸಾವಧಾನದಿಂದಿರು. ಜೈನರನ್ನು ಶಪಿಸಬೇಡ. ಇವರೆಲ್ಲರೂ ಮುಂದೆ ಶೈವಮತವನ್ನೇ ಅವಲಂಬಿಸುವರು. ಇದು ಶಿವನ ಅಪ್ಪಣೆ. ಯಾರೂ ಮೀರಬಾರದು. ಇದನ್ನು ನಿನಗೆ ತಿಳಿಸಲು ಶಿವನಿಂದ ಆಜ್ಞಪ್ತನಾಗಿ ನಾನು ಕೈಲಾಸದಿಂದ ಬಂದಿರುವೆನು. ಎಲೈ ಮಹಾಮುನಿಯಾದ ದೇವಶಾಲಿಯೇ ನೀನು ಶಿವನಿಂದ ಆಜ್ಞಾಪಿಸಲ್ಪಟ್ಟ ಸಮಸ್ತ ಕಾರ್ಯಗಳನ್ನೂ ನೆರವೇರಿಸಿರುವೆ. ಇನ್ನು ನೀನು

ಪಾರ್ವತೀ ಪರಮೇಶ್ವರರನ್ನು ಕಾಣಲು ಕೈಲಾಸಕ್ಕೆ ಬಾ ಎಂದು ನಂದೀಶ್ವರನು ನುಡಿದನು. ಮಹಾತಪಸ್ವಿಯಾದ ದೇವಶಾಲಿಯು ಇದನ್ನು ಕೇಳಿ ಕೈಲಾಸಕ್ಕೆ ತೆರಳಲು ಸಿದ್ಧನಾಗಿ ತನ್ನ ಶಿಷ್ಯನಾದ ಜಗದ್ದೇವನನ್ನು ಕಲ್ಯಾಣ ಪಟ್ಟಣಕ್ಕೆ ರಾಜನನ್ನಾಗಿ ಮಾಡಿ ಅವನನ್ನು ಆಶೀರ್ವದಿಸಿ ತಾನು ದೇವಾಂಗನಾದನು.


ಆಗ ದೇವದುಂದುಭಿಗಳು ಮೊಳಗಿದವು. ದೇವತೆಗಳು ಹೂಮಳೆಗರೆದರು. ಅಪ್ಸರೆಯರು ನರ್ತಿಸಿದರು. ಗಂಧರ್ವರು ಗಾನಮಾಡಿದರು. ಆ ಸಮಯದಲ್ಲಿ ಪರಮಾತ್ಮನು ತೇಜಸ್ವಿಗಳಾದ ಶಿವಭಕ್ತರಾದ ಪ್ರಮಥಗಣಗಳಿಂದ ಭರಿತವಾದ ಘಂಟೆಯ ಮಹಾನಾದದಿಂದ ಕೂಡಿದ ನೃತ್ಯಗೀತವಾದ್ಯ ಸಮೇತವಾದ ಇಚ್ಛಾಗಮನವುಳ್ಳ ರತ್ನಗಳಿಂದಲಂಕೃತವಾದ ದಿವ್ಯವಿಮಾನವನ್ನು ಕಳುಹಿಸಿದನು. ಈ ವಿಮಾನವನ್ನು ದೇವಾಂಗನು ನೋಡಿ ತನ್ನ ಶಿಷ್ಯನಾದ ಜಗದ್ದೇವನಿಗೆ ಸದಾ ಶಿವನಾಮ ಸ್ಮರಣೆ ಮಾಡುವಂತೆ ತಿಳಿಸಿ ಹೋಗಿ ಬರುವೆನೆಂದು ಪ್ರೇಮಪೂರ್ವಕವಾಗಿ ಹೇಳಿ ನಂದೀಶ್ವರನೊಡನೆ ವಿಮಾನವನ್ನು ಆರೋಹಣ ಮಾಡಿ ಕುಳಿತುಕೊಳ್ಳಲು ಆ ವಿಮಾನವು ಕ್ಷಣಾರ್ಧದಲ್ಲಿಯೇ ಕೈಲಾಸದಲ್ಲಿದ್ದ ಪರಮಾತ್ಮನ ಬಳಿಗೆ ಬಂದಿತು. ಶಿವ ಮಾನಸಪುತ್ರನಾದ ದೇವಾಂಗನು ಆ ವಿಮಾನದಿಂದಿಳಿದು ಅಂಬಾಸಮೇತನಾದ ಪರಮಾತ್ಮನಿಗೆ ನಮಸ್ಕರಿಸಿ ಮತ್ತೆಮತ್ತೆ ಸ್ತುತಿಸಿದನು. ಈ ರೀತಿ ತನ್ನನ್ನು ಸ್ತುತಿಸಿದ ತನ್ನ ಪುತ್ರನಾದ ದೇವಾಂಗನನ್ನು ಪರಮಾತ್ಮನು ಪ್ರೇಮದಿಂದ ನೋಡಿ ಹತ್ತಿರ ಕರೆದು ಅವನ ತಲೆಯನ್ನು ನೇವರಿಸಿ ಅವನನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಶಿರಸ್ಸನ್ನು ಆಘ್ರಾಣಿಸಿ ಸಂತೋಷಪಟ್ಟನು.

ಇಲ್ಲಿಗೆ ಬ್ರಹ್ಮಾಂಡ ಪುರಾಣದಲ್ಲಿ ಬ್ರಹ್ಮನಾರದ ಸಂವಾದ ರೂಪ ಉತ್ತರಖಂಡದ ದೇವಾಂಗ ಚರಿತ್ರೆಯಲ್ಲಿ ದೇವಶಾಲಿಯ ಅವತಾರ ಪೂರ್ತಿ ಎಂಬ ಇಪ್ಪತ್ತೇಳನೆಯ ಅಧ್ಯಾಯ ಮುಗಿದುದು.

ಇಪ್ಪತ್ತೆಂಟನೆಯ ಅಧ್ಯಾಯ

ದೇವದಾಸಾವತಾರ

ಸೂತನೆನ್ನುತ್ತಾನೆ. ಎಲೈ ತಪಸ್ವಿಗಳೇ ಒಂದು ದಿನ ವಯೋವೃದ್ಧನೂ ತಾಪಸೋತ್ತಮನೂ ಆದ ನಾರದನು ಮಹಾದೇವನ ಸೇವೆಗಾಗಿ ಕೈಲಾಸಕ್ಕೆ ಬಂದನು. ಬಂದವನೇ ಪರಮಾತ್ಮನಿಗೆ ನಮಸ್ಕರಿಸಿ ಅವನನ್ನು ಬಹುವಿಧವಾಗಿ ಸ್ತುತಿಸಿ



ಶ್ರೀ ದೇವಾಂಗನು ಕಲ್ಯಾಣ ಪಟ್ಟಣದಲ್ಲನೇಕ ಬೌದ್ಧರಿಗೆ ಶಿವದೀಕ್ಷೆಯಂಗೈದು
ಜಗದ್ದೇವನಿಗೆ ರಾಜ್ಯಪಟ್ಟಾಭಿಷೇಕ ಮಾಡಿದ ದೇವಶಾಲಿಯವತಾರ.

ಚಿತ್ರ: ದೇವಾಂಗ ಮತ ಪ್ರಕಾಶಿಕೆ ಕೃಪೆಯಿಂದ.

ಅಂಜಲೀಬದ್ಧನಾಗಿ ನಿಂತ ನಾರದನನ್ನು ನೋಡಿ ಪರಮಾತ್ಮನು ನಾರದಾ ಲೋಕದಲ್ಲಿ ನನ್ನ ಸಂಬಂಧವಾದ ಆಚಾರವು ಸರಿಯಾಗಿ ನಡೆಯುತ್ತಿದೆಯೇ ಎಂದು ಕೇಳಲು ಅದಕ್ಕೆ ತಪೋನಿಧಿಯಾದ ನಾರದನು ಭಗವನ್, ದೇವದೇವೇಶ ಚಂದ್ರಮೌಳಿ, ಮಹೇಶ್ವರ ನಾನು ಎಲ್ಲಾ ಲೋಕಗಳಲ್ಲಿಯೂ ಸಂಚರಿಸಿರುವೆನು. ನಿನ್ನ ಸಂಬಂಧವಾದ ಆಚಾರ ಗಳನ್ನು ಎಲ್ಲಿಯೂ ಕಾಣಲಿಲ್ಲ. ಶಿವಭಕ್ತರು ಅಪರೂಪ ಎಂದನು. ಇದನ್ನು ಕೇಳಿದ ಪರಮಾತ್ಮನು ದೇವಾಂಗನನ್ನು ನೋಡಿ ಎಲೈ ದೇವಾಂಗನೇ ನೀನು ಭೂಲೋಕದಲ್ಲಿ ಶಿವಭಕ್ತನಾಗಿ ಹುಟ್ಟಿ ಸರ್ವಸಂಪತ್ಪ್ರದಾಯಕವಾದ ಶೈವಮತವನ್ನು ಭೂಲೋಕದಲ್ಲಿ ಪ್ರಚಾರಮಾಡಿ ಭೂಮಿಯನ್ನು ಶಿವಮಯವನ್ನಾಗಿ ಮಾಡು ಎಂದು ದೇವಾಂಗನಿಗೆ ಆಜ್ಞೆಮಾಡಿದನು.

ಇದನ್ನು ಕೇಳಿ ದೇವಾಂಗನು ಮೇಲೆದ್ದು ಕೈಮುಗಿದು ಪ್ರಭೂ ಅಪ್ಪಣೆ. . ಶಿರಸಾ ವಹಿಸಿ ಹಾಗೆಯೇ ಮಾಡುವೆನೆಂದು ಹೇಳಿದನು. ಭೂಲೋಕದಲ್ಲಿ ಅವತರಿಸುವುದ ಕ್ಕೋಸ್ಕರ ಸಿದ್ಧನಾದ ತನ್ನ ಮಾನಸಪುತ್ರ ದೇವಾಂಗನನ್ನು ಜಗಜ್ಜನನಿಯಾದ ಪಾರ್ವತಿಯು ನೋಡಿ ಮಂದಹಾಸದಿಂದ ದೇವಾಂಗನೇ ಹಿಂದೆ ಚೌಡೇಶ್ವರಿಯು ನಿನ್ನ ಶತ್ರುಗಳೆಲ್ಲರನ್ನೂ ನಾಶಮಾಡಿ ನಿನಗೆ ಸಕಲೈಶ್ವರ್ಯಗಳನ್ನು ಅನುಗ್ರಹಿಸಿರುವಳಷ್ಟೆ! ಆ ಚೌಡೇಶ್ವರಿಯು ನಿನ್ನ ವಂಶಜರಿಗೆಲ್ಲಾ ಇಷ್ಟದೇವತೆಯಾಗಿ ಸರ್ವ ದುಃಖಗಳನ್ನೂ ನಿವಾರಿಸುವಳು. ನೀನು ಆ ದೇವಿಯನ್ನು ಸದಾ ಹಗಲಿರುಳೂ ಪೂಜಿಸು. ಪೂರ್ವದಲ್ಲಿ ರಾವಣನ ವೈರಿಯಾದ ಶ್ರೀರಾಮನು ರಾಮೇಶ್ವರ ಕ್ಷೇತ್ರದಲ್ಲಿ ರಾಮಲಿಂಗೇಶನಾದ ಶಂಭುವನ್ನು ಪೂಜಿಸಿದನಷ್ಟೆ. ಆ ರಾಮಲಿಂಗನು ಧರ್ಮಾರ್ಥ ಕಾಮಮೋಕ್ಷಪ್ರದನಾಗಿ ಬ್ರಹ್ಮಾದಿಗಳಿಂದ ಪೂಜಿತನಾಗಿರುವುದರಿಂದ ನೀನೂ ನಿನ್ನ ವಂಶದವರೂ ಅತ್ಯಾದರದಿಂದ ಆ ರಾಮಲಿಂಗೇಶ್ವರನನ್ನು ಪೂಜಿಸಿ ದೇವದೇವೇಶನಾದ ರಾಮಲಿಂಗನ ಮತ್ತು ಚೌಡೇಶ್ವರಿಯ ಪೂಜೆ ಮಾಡುವುದರಿಂದ ನೀನೂ ನಿನ್ನ ವಂಶ ಜರೂ ಸಮಸ್ತೇಷ್ಟಾರ್ಥಗಳನ್ನೂ ಪಡೆಯುವಿರೆಂದು ಹೇಳಿ ಪರಮಾತ್ಮಫಾಲೋದ್ಭವ ನಾದ ತನ್ನ ಪುತ್ರನಾದ ದೇವಾಂಗನನ್ನು ಆಶೀರ್ವದಿಸಿ ಕಳುಹಿಸಿಕೊಟ್ಟಳು.

ಹೀಗೆ ಪಾರ್ವತೀಪರಮೇಶ್ವರರಿಂದ ಆಜ್ಞಪ್ತನಾಗಿ ಭೂಲೋಕಕ್ಕೆ ಕಳುಹಿಸಲ್ಪಟ್ಟ ದೇವಾಂಗನು ಆಮೋದಪುರಕ್ಕೆ ರಾಜನಾದ ಗಂಗಾಧರನ ಮಗನಾದ ವೀರರುದ್ರನಿಗೆ ಮಗನಾಗಿ ಹುಟ್ಟಿದನು. ಹುಟ್ಟಿದ ಹನ್ನೊಂದನೇ ದಿನದಲ್ಲಿ ಆ ವೀರರುದ್ರಮಹಾ ರಾಜನು ತನ್ನ ಪುತ್ರನಿಗೆ ವೇದೋಕ್ತವಾಗಿ ಜಾತಕರ್ಮಾದಿಗಳನ್ನು ಮಾಡಲು ಉಜ್ಜುಗಿಸಿದನು. ಆಗ ಗೌರೀಪತಿಯಾದ ಪರಮಾತ್ಮನು ಷಣ್ಮುಖನಿಂದ ಕೂಡಿಕೊಂಡು ವೃದ್ಧಬ್ರಾಹ್ಮಣನ ರೂಪದಿಂದ ವೀರರುದ್ರಮಹಾರಾಜನ ಅರಮನೆಗೆ ಬಂದನು. ವೃದ್ಧ ಬ್ರಾಹ್ಮಣನ ರೂಪದಲ್ಲಿ ಬಂದ ದೇವದೇವನಾದ ಪರಮಾತ್ಮನನ್ನು ನೋಡಿ ಪ್ರಾಜ್ಞ

ನಾದ ವೀರರುದ್ರಮಹಾರಾಜನು ಅತ್ಯಾನಂದಯುಕ್ತನಾಗಿ ಅವನನ್ನು ಭಕ್ತಿ ಆದರಗಳಿಂದ ಬರಮಾಡಿಕೊಂಡು ರಮಣೀಯವಾದ ಸುವರ್ಣಪೀಠದಲ್ಲಿ ಕುಳ್ಳಿರಿಸಿ ಷೋಡಶೋಪಚಾರಗಳಿಂದ ವಿಧಿವತ್ತಾಗಿ ಪೂಜಿಸಿದನು. ಬ್ರಾಹ್ಮಣರೂಪಿಯಾದ ಪರಮಾತ್ಮನು ಇದರಿಂದ ಸುಪ್ರೀತನಾಗಿ ವೀರರುದ್ರಮಹಾರಾಜನ ಮಗುವಿಗೆ ವೇದೋಕ್ತವಾಗಿ ಶಿವದೀಕ್ಷೆಯನ್ನು ವಿಧಿವತ್ತಾಗಿ ಕೊಟ್ಟು ಆ ಶಿಶುವಿಗೆ ದೇವದಾಸನೆಂದು ನಾಮಕರಣವನ್ನು ಮಾಡಿದನು. ಆಗ ದೇವದುಂದುಭಿಗಳು ಮೊಳಗಿದವು. ಆಕಾಶದಿಂದ ಹೂಮಳೆಯಾಯಿತು ಈ ರೀತಿ ಮಗುವಿಗೆ ನಾಮಕರಣ ಮಾಡಿದ ಬ್ರಾಹ್ಮಣರೂಪಿ ಪರಮಾತ್ಮನು ಸಮಸ್ತರೂ ನೋಡುತ್ತಿರುವಂತೆಯೇ ಷಣ್ಮುಖನೊಡನೆ ಅಂತರ್ಧಾನನಾದನು.

ಹೀಗೆ ಬ್ರಾಹ್ಮಣನು ಕಣ್ಣಿಗೆ ಕಾಣದಾದುದನ್ನು ನೋಡಿ ಬ್ರಾಹ್ಮಣಸಮೂಹದಲ್ಲಿ ಎಲ್ಲರೂ ಪುತ್ರಸಮೇತನಾದ ಬ್ರಾಹ್ಮಣನು ಎಲ್ಲಿ ಹೋದನೆಂದು ತಮ್ಮ ತಮ್ಮಲ್ಲೇ ಗುಜುಗುಜು ಮಾತನಾಡಿಕೊಳ್ಳುತ್ತಾ ಕಡೆಗೆ ದೊಡ್ಡ ಕೋಲಾಹಲವೇ ಉಂಟಾಯಿತು. ಆಗ ಸಮಸ್ತರಿಗೂ ಆನಂದವಾಗುವಂತೆ ಆಕಾಶವಾಣಿಯು ಎಲೈ ವೀರರುದ್ರಮಹಾರಾಜನೇ ನಿನ್ನ ಪುತ್ರನಿಗೆ ಶಂಕರನಾದ ಸಾಕ್ಷಾತ್ ರಾಮಲಿಂಗೇಶನೇ ಬಂದು ಶಿವದೀಕ್ಷೆಯನ್ನು ಕೊಟ್ಟು ನಾಮಕರಣಮಾಡಿ ಅಂತರ್ಧಾನನಾದನು. ನಿನ್ನ ಮಗನು ವಿದ್ವಾಂಸನೂ ರಾಮಲಿಂಗೇಶನಲ್ಲಿ ಭಕ್ತಿಯುಳ್ಳವನೂ ಚೌಡೇಶ್ವರೀದೇವಿಯ ಪೂಜಾತತ್ಪರನೂ ಆಗಿ ಈ ಲೋಕದಲ್ಲಿ ಶೈವಮತವನ್ನು ಉದ್ಧರಿಸುವನೆಂದು ನುಡಿಯಿತು. ಇದನ್ನು ಕೇಳಿ ಸಮಸ್ತರೂ ಸಂತೋಷಪಟ್ಟರು.

ಸಂಭ್ರಮಯುಕ್ತನಾದ ವೀರರುದ್ರಮಹಾರಾಜನು ತನ್ನ ಪುತ್ರನ ನಾಮಕರಣ ಮಹೋತ್ಸವದಲ್ಲಿ ಆ ಶಿಶುವಿನ ಶ್ರೇಯೋಭಿವೃದ್ಧಿಗಾಗಿ ಅನೇಕ ವಿಧಗಳಾದ ಭೂದಾನ ವಸ್ತ್ರದಾನ ಗಜದಾನ ಅಶ್ವದಾನ ಗೃಹದಾನ ತಿಲದಾನ ಕುಂಭದಾನ ಮಾಷದಾನ ವೃಷಭದಾನ ಮಾಷಾಪೂಪದಾನ ಪನಸಫಲದಾನ ಘೃತದಾನ ಕ್ಷೀರದಾನ ಗುಡದಾನ ಶರ್ಕರದಾನ ಕದಳೀಫಲದಾನ ರತ್ನದಾನ ಆಮ್ರಫಲದಾನ ಛತ್ರದಾನ ಸುವರ್ಣದಾನ ಪಾದುಕಾದಾನ ಇವೇಮೊದಲಾದ ಅನೇಕ ದಾನಗಳನ್ನು ವೀರರುದ್ರನೃಪತಿಯು ಬ್ರಾಹ್ಮಣರಿಗೆ ಪ್ರೀತಿಪೂರ್ವಕವಾಗಿ ಸಮರ್ಪಿಸಿದನು. ಬಾಲಸೂರ್ಯನಂತೆ ತೇಜಸ್ವಿಯಾದ ಬಾಲಕ ದೇವದಾಸನು ಶುಕ್ಲಪಕ್ಷದ ಬಿದಿಗೆಯ ಚಂದ್ರನಂತೆ ದಿನೇದಿನೇ ಪ್ರವರ್ಧಮಾನನಾಗಿ ಬೆಳೆಯುತ್ತ ತನ್ನ ತಾಯಿ ತಂದೆಗಳನ್ನು ತನ್ನ ತುಂಟತನದಿಂದಲೂ ಬಾಲಲೀಲೆಗಳಿಂದಲೂ ತೊದಲು ಮಾತುಗಳಿಂದಲೂ ಬಹುವಾಗಿ ಸಂತೋಷಪಡಿಸುತ್ತಿದ್ದನು.

ಅತ್ತ ಕೈಲಾಸದಲ್ಲಿ ರತ್ನ ಸಿಂಹಾಸನಾರೂಢನಾಗಿದ್ದ ಪರಮಾತ್ಮನು ಒಂದು ದಿನ ಮಂದಹಾಸಯುಕ್ತಳಾದ ದೇವಾಂಗನಪತ್ನಿ ದೇವದತ್ತೆಯನ್ನು ನೋಡಿ ಪುತ್ರಿ

ದೇವದತ್ತೆ ನೀನು ಬಂಗಾಳದೇಶದ ರಾಜನ ಪತ್ನಿಯಾದ ಸುಲಕ್ಷಣೆಯಲ್ಲಿ ಜನ್ಮತಾಳಿ ಭೂಲೋಕದಲ್ಲಿ ನಿನಗಾಗಿ ಕಾಯುತ್ತಿರುವ ದೇವದಾಸನನ್ನು (ದೇವಾಂಗನನ್ನು) ಸಂತೋಷಪಡಿಸೆಂದು ಹೇಳಿದನು. ದೇವದತ್ತೆಯು ಪರಮಾತ್ಮನ ಆಜ್ಞೆಯನ್ನು ಶಿರೋಧಾರ್ಯವೆಂದು ಭಾವಿಸಿ ಅಪ್ಪಣೆಯೆಂದು ನುಡಿದು ಬಂಗಾಳದೇಶದ ಮಹಾ ರಾಜನ ಪತ್ನಿಯ ಗರ್ಭವನ್ನು ಪ್ರವೇಶಿಸಿದಳು. ಬಂಗಾಳದೇಶದ ಮಹಾ ರಾಜನ ಪತ್ನಿಯು ಗರ್ಭವತಿಯಾಗಿ ಆಕೆಯ ಗರ್ಭವು ದಿನೇದಿನೇ ವೃದ್ಧಿಯಾಗಿ ಸಮಸ್ತ ಲಕ್ಷಣಗಳಿಂದ ಯುಕ್ತವಾಗಿ ನವಮಾಸ ತುಂಬಲು ಹತ್ತನೆಯ ತಿಂಗಳಿನಲ್ಲಿ ಸರ್ವಲಕ್ಷಣ ವಂತೆಯಾದ ಮನೋಹರವಾದ ರೂಪುವುಳ್ಳವಳಾಗಿ ದೇವದತ್ತೆಯು ಆ ರಾಜಪತ್ನಿಯ ಗರ್ಭದಿಂದ ಜನಿಸಿದಳು.

ಬಂಗಾಳದೇಶದ ಮಹಾರಾಜನಾದ ಚಂದ್ರಶೇಖರನು ಈ ಶುಭವಾರ್ತೆಯನ್ನು ಕೇಳಿ ತನಗೆ ಪುತ್ರಿರತ್ನವು ಜನಿಸಿದುದಕ್ಕಾಗಿ ಸಂತೋಷಪಟ್ಟು ಸಮಸ್ತ ಬಂಧುಗಳಿಂದ ಕೂಡಿಕೊಂಡು ತನ್ನ ಪುತ್ರಿಗೆ ಶಾಸ್ತ್ರೋಕ್ತವಾಗಿ ಜಾತಕರ್ಮವನ್ನು ಮಾಡಿಸಿ ವಿದ್ವಾಂಸ ರಾದ ಬ್ರಾಹ್ಮಣರಿಗೆ ಭೂರಿದಕ್ಷಿಣೆಯನ್ನು ಕೊಟ್ಟನು. ಆಗ ಅಶರೀರವಾಣಿಯು ಬಂಗಾಳ ಮಹಾರಾಜನನ್ನು ಕುರಿತು ಮಹಾರಾಜಾ ನಿಮ್ಮ ಮಗಳಿಗೆ ದೇವದತ್ತೆಯೆಂದು ನಾಮಕರಣ ಮಾಡಿ ವೀರರುದ್ರಮಹಾರಾಜನ ಮಗನಾದ ದೇವದಾಸನಿಗೆ ಈಕೆಯನ್ನು ಪ್ರೀತಿಪೂರ್ವಕವಾಗಿ ವಿವಾಹ ಮಾಡಿಕೊಡಿರೆಂದು ಹೇಳಿತು. ಅದನ್ನು ಕೇಳಿ ರಾಜನು ಹಾಗೆಯೇ ಮಾಡುವೆನೆಂದು ನಿಶ್ಚಯಿಸಿ ಬಹಳ ಸಂತೋಷಪಟ್ಟನು. ಅವನು ತನ್ನ ಪುತ್ರಿ ದೇವದತ್ತೆಯ ಬಾಲಲೀಲೆಗಳಿಂದ ತನ್ನಪತ್ನಿಯೊಡಗೂಡಿ ಸಂತೋಷಪಡುತ್ತಾ ಸುಖ ವಾಗಿದ್ದನು. ಹೀಗೆ ತನ್ನ ಅರಮನೆಯಲ್ಲಿ ಸಮಸ್ತ ರಾಜಪರಿವಾರದೊಡನೆ ಬೆಳೆಯುತ್ತಿದ್ದ ತನ್ನ ಪುತ್ರಿ ದೇವದತ್ತೆಯನ್ನು ನೋಡಿ ವಿದ್ಯಾಭ್ಯಾಸಕ್ಕೆ ತಕ್ಕ ವಯಸ್ಸಾದು ದನ್ನು ಗಮನಿಸಿ ಸಮಸ್ತ ವಿದ್ಯಾಪಾರಂಗತನಾದ ವಿದ್ವಾಂಸನೊಬ್ಬನನ್ನು ಆಕೆಗೆ ವಿದ್ಯಾ ಗುರುವಾಗಿ ನೇಮಿಸಿ ಆಕೆಯನ್ನು ಸಮಸ್ತ ವಿದ್ಯಾಪಾರಂಗತೆಯನ್ನಾಗಿ ಮಾಡಿದನು.

ಇತ್ತ ವೀರರುದ್ರಮಹಾರಾಜನ ಮಗನಾದ ದೇವದಾಸನು ಐದುವರುಷದ ಬಾಲಕ ನಾಗಿ ಸಮಸ್ತರನ್ನೂ ತನ್ನ ಮಕ್ಕಳಾಟದಿಂದ ಸಂತೋಷಪಡಿಸುತ್ತಿದ್ದನು. ಅವನಿಗೆ ಏಳು ವರ್ಷಗಳಾಗಲು ತಂದೆಯಾದ ವೀರರುದ್ರಮಹಾರಾಜನು ತೇಜಸ್ವಿಯಾದ ಅವನಿಗೆ ವೇದೋಕ್ತವಾಗಿ ಉಪನಯನವನ್ನು ಮಾಡಿ ಆ ತನ್ನ ಮಗನನ್ನು ಎಡತೊಡೆಯ ಮೇಲೆ ಕೂಡಿಸಿಕೊಂಡು ಆ ದೇವದಾಸನ ಬಲಗಿವಿಯಲ್ಲಿ ಪರಮರಹಸ್ಯವಾದ ಗಾಯತ್ರೀಮಂತ್ರವನ್ನು ಉಚ್ಚರಿಸಿ ತಾನೇ ಅವನಿಗೆ ಬ್ರಹ್ಮೋಪದೇಶ ಮಾಡಿದನು. ಸ್ವಯಂ ಸಮಸ್ತವಿದ್ಯಾಪಾರಂಗತನಾದ ವೀರರುದ್ರಮಹಾರಾಜನೇ ತನ್ನ ಮಗ ದೇವದಾಸ ನಿಗೆ ತಾನು ಕಲಿತಿದ್ದ ಸಮಸ್ತವಿದ್ಯೆಗಳನ್ನೂ ಕಲಿಸಿದನು. ಹೀಗೆ ಸಮಸ್ತ ವಿದ್ಯಾ

ಪಾರಂಗತನೂ ಸರ್ವಜ್ಞನೂ ಮಹಾತ್ಮನೂ ಆದ ದೇವದಾಸನು ತನ್ನ ತಂದೆಯನ್ನು ಸಮಸ್ತ ವಿದ್ಯೆಗಳಲ್ಲೂ ಮೀರಿಸಿ ವಿವಾಹ ವಯಸ್ಕನೂ ಆದನು.

ಬಂಗಾಳದೇಶದ ಮಹಾರಾಜನಾದ ಚಂದ್ರಶೇಖರನು ತನ್ನ ಮಗಳಾದ ದೇವದತ್ತೆಯು ವಿವಾಹವಯಸ್ಕಳಾದುದನ್ನು ಕಂಡು ತನ್ನ ಪತ್ನಿಯೊಡನೆ ಆಲೋಚಿಸಿ ಅಶರೀರವಾಣಿಯನ್ನು ನೆನೆದು ಅವಳನ್ನು ವೀರರುದ್ರ ಮಹಾರಾಜನ ಮಗನಾದ ದೇವದಾಸನಿಗೆ ವಿವಾಹ ಮಾಡಿಕೊಡುವುದಾಗಿ ನಿಶ್ಚಯಿಸಿ ತನ್ನ ಪುತ್ರಿ ದೇವದತ್ತೆಯ ಮತ್ತು ಅವನ ಪುತ್ರ ದೇವದಾಸ ಇವರ ವಿವಾಹಕ್ಕೆ ಅವನು ಒಪ್ಪಿ ಪರಿವಾರ ಚತುರಂಗಬಲ ಸಮೇತನಾಗಿ ಹೊರಟುಬರಬೇಕೆಂದು ವೀರರುದ್ರ ಮಹಾರಾಜನಿಗೆ ಓಲೆಯನ್ನು ಬರೆಯಿಸಿ ತನ್ನ ದೂತರ ಮೂಲಕ ಅವನಿಗೆ ಕಳುಹಿಸಿದನು. ಇದನ್ನು ನೋಡಿ ವೀರರುದ್ರ ಮಹಾರಾಜನು ಬಹಳ ಸಂತೋಷಪಟ್ಟು ತನ್ನ ಪತ್ನೀಪುತ್ರರಿಗೂ ಪರಿವಾರದವರಿಗೂ ಈ ವಿಷಯವನ್ನು ತಿಳುಹಿಸಿದನು. ಅವರ ಸಮ್ಮತಿ ಪಡೆದು ತನ್ನ ಒಪ್ಪಿಗೆಯಿತ್ತುದಲ್ಲದೆ ತಾನು ಪರಿವಾರ ಸಮೇತ ಹೊರಟು ಬರುತ್ತಿರುವುದಾಗಿ ಮರು ಓಲೆಯನ್ನು ಬರೆಯಿಸಿ ಆ ದೂತರ ಕೈಯಲ್ಲೇ ಕಳುಹಿಸಿದನು. ನಂತರ ತಾನು ಪತ್ನಿ ಪುತ್ರ ಬಂಧುಬಳಗ ಚತುರಂಗಬಲ ಮತ್ತು ಪುರೋಹಿತರುಗಳ ಸಮೇತನಾಗಿ ಹೊರಟು ಅತ್ಯಂತ ಸಂಭ್ರಮ ಸಡಗರಗಳಿಂದ ಬಂಗಾಳದೇಶವನ್ನು ಸೇರಿದನು.

ವೀರರುದ್ರ ಮಹಾರಾಜನು ತನ್ನ ಪತ್ನೀ ಪುತ್ರ ಸಮಸ್ತಪರಿವಾರಸಮೇತನಾಗಿ ಬರುತ್ತಿರುವುದನ್ನು ಬಂಗಾಳದೇಶದ ಮಹಾರಾಜನಾದ ಚಂದ್ರಶೇಖರನು ತನ್ನ ದೂತರಿಂದ ತಿಳಿದು ನೃಪೋತ್ತಮನಾದ ವೀರರುದ್ರನನ್ನು ತನ್ನ ದೇಶದ ಗಡಿಯಲ್ಲಿ ಸಂತೋಷದಿಂದ ಎದುರುಗೊಂಡು ಅವನನ್ನು ಆಲಂಗಿಸಿ ಅವರೆಲ್ಲರ ಕ್ಷೇಮ ಸಮಾಚಾರಗಳನ್ನೂ ವಿಚಾರಿಸಿ ಅವರ ಬಿಡಾರಕ್ಕೆ ಸೂಕ್ತ ವ್ಯವಸ್ಥೆ ಮಾಡಿಸಿದನು. ಚಂದ್ರಶೇಖರ ಮಹಾರಾಜನು ತನ್ನ ಪ್ರೇಮದ ಪುತ್ರಿಯ ವಿವಾಹದ ಸಲುವಾಗಿ ತನ್ನ ಪಟ್ಟಣವನ್ನೂ ಅರಮನೆಯನ್ನೂ ಅಲಂಕರಿಸಲು ಸೇವಕರಿಗೆ ಆಜ್ಞಾಪಿಸಿದನು. ಮಹಾರಾಜನಿಂದ ಆಜ್ಞಪ್ತರಾದ ಸೇವಕರು ಬಹಳ ತ್ವರೆಯಾಗಿ ಆ ಪಟ್ಟಣವನ್ನೂ ಅರಮನೆಯನ್ನೂ ಅಲಂಕರಿಸಿದರು. ಅಲಂಕರಿಸಲ್ಪಟ್ಟ ಆ ನಗರವು ರಾಜಭವನವೂ ಕಾಂತಿಯಿಂದ ಕೂಡಿ ಶೋಭಿಸುತ್ತಿತ್ತು. ಈ ರೀತಿ ವಜ್ರ ವೈಡೂರ್ಯ ಖಚಿತಗಳಾದ ಸುವರ್ಣಸ್ತಂಭಗಳಿಂದಲೂ ನಾನಾವಿಧ ಚಿತ್ರಗಳಿಂದಲೂ ನಾನಾ ಲಂಕಾರಯುಕ್ತಗಳಾದ ಫಲಭರಿತವಾದ ಕದಳೀಸ್ತಂಭಗಳಿಂದಲೂ ತೋರಣಗಳಿಂದಲೂ ವೇದಿಕೆಗಳಿಂದಲೂ ಅಲ್ಲಲ್ಲಿ ಸ್ಥಾಪಿಸಿದ ಅರವಟ್ಟಿಗೆಗಳಿಂದಲೂ ಶೋಭಿತವಾಗಿದ್ದು ಇಂದ್ರನ ಅಮರಾವತಿಯನ್ನೂ ಕುಬೇರನ ಅಳಕಾವತಿಯನ್ನೂ ಮೀರಿಸುವಂತಿದ್ದ ತನ್ನ ಪುರವನ್ನೂ ಅರಮನೆಯನ್ನೂ ನೋಡಿ ಬಹು ಸಂತೋಷಪಟ್ಟು ಮಹೀಪಾಲನಾದ ಚಂದ್ರಶೇಖರನು ಮಂಗಳವಾದ್ಯಗಳೊಡನೆ ಜನನೀ ಜನಕರಿಂದೊಡಗೂಡಿದ ದೇವದಾಸನನ್ನು ತನ್ನ ಅರಮನೆಗೆ ಕರೆದುಕೊಂಡು ಬಂದನು.

ಮಾತಾಪಿತೃಗಳಿಂದಲೂ ಚತುರಂಗಬಲದಿಂದಲೂ ನೃತ್ಯ ಗೀತ ವಾದ್ಯಗಳಿಂದಲೂ ಕೂಡಿದವನಾಗಿ ದೇವದಾಸನು ಬಂಗಾಳದೇಶದ ಮಹಾರಾಜನ ಮಂಗಳಕರವಾದ ಅರಮನೆಯನ್ನು ಪುರೋಹಿತರಿಂದ ಕೂಡಿಕೊಂಡು ಪ್ರವೇಶಿಸಿದನು. ವಿದ್ವಾಂಸನಾದ ಪುರೋಹಿತನು ಲಗ್ನಮಂಟಪಕ್ಕೆ ಬಂದು ವಧೂವರರನ್ನು ಲಗ್ನದ ಹಸೆಯ ಪೀಠದ ಮೇಲೆ ಕುಳ್ಳಿರಿಸಿ ನಾಲ್ಕು ಮಂದಿ ಋತ್ವಿಜರಿಂದ ಕೂಡಿದವನಾಗಿ ಅಗ್ನಿಯನ್ನು ಪ್ರತಿಷ್ಠಿಸಿ ವಿಧಿಪೂರ್ವಕವಾಗಿ ವೇದಮಂತ್ರಗಳಿಂದ ಹೋಮ ಮಾಡಿದನು. ಬಂಗಾಳ ದೇಶದ ಮಹಾರಾಜನು ಸರ್ವಾಲಂಕಾರಯುಕ್ತಳಾದ ತನ್ನ ಪುತ್ರಿ ದೇವದತ್ತೆಯನ್ನು ದೇವದಾಸನಿಗೆ ವೇದೋಕ್ತಮಂತ್ರಗಳಿಂದ ವಿಧಿವತ್ತಾಗಿ ಧಾರಾಪೂರ್ವಕವಾಗಿ ಕನ್ಯಾದಾನ ಮಾಡಿದನು. ಆಗ ಭೇರಿ ಕಹಳೆ ಮೊದಲಾದ ವಾದ್ಯಗಳ ಧ್ವನಿಯಿಂದಲೂ ನೃತ್ಯ ಗೀತಾದಿಗಳ ಸುಶ್ರಾವ್ಯವಾದ ಮಂಗಳಧ್ವನಿಗಳಿಂದಲೂ ಲಗ್ನಮಂಟಪವು ವ್ಯಾಪಿಸಲ್ಪಟ್ಟು ಭೂಮ್ಯಾಕಾಶಗಳನ್ನು ಆವರಿಸಿತು. ಆ ಸಮಯದಲ್ಲಿ ಆಕಾಶದಲ್ಲಿ ದೇವ ದುಂದುಭಿಗಳು ಮೊಳಗಿದುವು. ಪುಷ್ಪವೃಷ್ಟಿಯಾಯಿತು. ಅಪ್ಸರೆಯರು ನಾಟ್ಯ ವಾಡಿದರು. ಗಂಧರ್ವರು ಗಾನ ಮಾಡಿದರು. ವಂದಿಮಾಗಧರು ಉಭಯ ಮಹಾರಾಜರ ಬಿರುದಾವಳಿಗಳನ್ನು ಗಗನ ಮುಟ್ಟುವಂತೆ ಬಿತ್ತರಿಸಿದರು. ಪುರಸ್ತ್ರೀಯರು ಗೌರೀ ಕಲ್ಯಾಣವೇ ಮೊದಲಾದ ಮಂಗಳ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿದರು.

ಬಂಗಾಳದೇಶದ ಮಹಾರಾಜನು ತನ್ನ ಮಗಳಿಗೆ ಧನಕನಕ ವಸ್ತುವಾಹನ ದಾಸ ದಾಸೀ ಜನರನ್ನೂ ನೂರು ಗ್ರಾಮಗಳನ್ನೂ, ಅಳಿಯನಾದ ದೇವದಾಸನಿಗೆ ಮುತ್ತಿನಹಾರಗಳನ್ನೂ ರತ್ನದ ಸರಗಳನ್ನೂ ಕಿರೀಟ ಭುಜಕೀರ್ತಿಗಳನ್ನೂ ಬಂಗಾರದ ಯಜ್ಞೋಪವೀತವನ್ನೂ ಉಡುದಾರವನ್ನೂ ರತ್ನದ ಉಂಗುರಗಳನ್ನೂ ಅಮೂಲ್ಯವಾದ ವಸ್ತ್ರಗಳನ್ನೂ ಬಹುಪ್ರೇಮದಿಂದ ಬಳುವಳಿಯಾಗಿ ಕೊಟ್ಟನು. ಪತ್ನಿ ಸಮೇತನಾಗಿ ವೀರರುದ್ರಮಹಾರಾಜನು ವಿವಾಹಕ್ಕೆ ಆಗಮಿಸಿದ್ದ ತನ್ನ ಬಂಧುಬಳಗದವರನ್ನೂ ಅವನ ಪುರೋಹಿತರನ್ನೂ ಸೈನಿಕರನ್ನೂ ಬಹು ವಿಧವಾಗಿ ಮರ್ಯಾದಿಸಿ ಗೌರವಿಸಿ ಅವರೆಲ್ಲರನ್ನೂ ಮುಂದಾಗಿಯೇ ಆಮೋದಪಟ್ಟಣಕ್ಕೆ ಕಳುಹಿಸಿಕೊಟ್ಟನು. ಕೆಲವು ದಿನ ಕಳೆದ ಮೇಲೆ ವೀರರುದ್ರ ಮಹಾರಾಜನು ಪತ್ನೀಪುತ್ರ ಸಮೇತನಾಗಿ ಚತುರಂಗಬಲಗಳಿಂದ ಕೂಡಿದವನಾಗಿ ಉತ್ತಮಾಶ್ವಗಳನ್ನು ಹೂಡಿದ ರಥಾರೋಹಣ ಮಾಡಿ ಅತ್ಯಂತ ಸಂಭ್ರಮದಿಂದ ತನ್ನ ನಗರಕ್ಕೆ ಹೊರಟನು. ಈ ವಿಷಯವನ್ನು ತಿಳಿದ ಆಮೋದಪಟ್ಟಣದ ಪುರಜನರು ಸಂತೋಷ ಸಂಭ್ರಮಗಳಿಂದ ಪಟ್ಟಣವನ್ನು ವಿಧವಿಧವಾಗಿ ಶೃಂಗರಿಸಿ ಪುರದ್ವಾರದಲ್ಲಿಯೇ ನೂತನ ವಧೂವರರಾದ ದೇವದಾಸ ದೇವದತ್ತೆಯರನ್ನೂ ಮಹಾರಾಜನಾದ ವೀರರುದ್ರನನ್ನೂ ಸಡಗರದಿಂದ ಸಕಲ ರಾಜಮರ್ಯಾದೆಗಳೊಡನೆ ಎದುರುಗೊಂಡು ತಮ್ಮ ರಾಜಭಕ್ತಿಯನ್ನು ಪ್ರಕಟಿಸುತ್ತಾ ಅರಮನೆಗೆ ಕರೆದುಕೊಂಡು ಹೋದರು.

ವೀರರುದ್ರ ಮಹಾರಾಜನ ಮಗನಾದ ದೇವದಾಸನು ಪತ್ನಿಯಾದ ದೇವದತ್ತೆ ಯೊಡನೆ ರತಿಯೊಡನೆ ಮನ್ಮಥನೊಪ್ಪುವಂತೆ ಒಪ್ಪುತ್ತಾ ಅವಳೊಡನೆ ಸುಖವಾಗಿದ್ದನು. ಶಿವಪೂಜಾ ಪರಾಯಣನೂ ಶಿವಪುರಾಣಶ್ರವಣದಲ್ಲಿ ಉತ್ಸಾಹವುಳ್ಳವನೂ ಶಿವಧ್ಯಾನ ತತ್ಪರನೂ ಶಿವಭಕ್ತರಿಗೆ ನಿತ್ಯಾನ್ನದಾನ ಮಾಡುವವನೂ ಆದ ದೇವದಾಸನು ಶಿವಗೋಷ್ಠಿಯಲ್ಲಿಯೇ ಇರುವವನಾಗಿದ್ದು ಸಮಸ್ತರಿಗೂ ಶಿವದೀಕ್ಷೆಯನ್ನು ಕೊಡಬೇಕೆಂದು ನಿಶ್ಚಯಿಸಿ ನಿರೀಶ್ವರವಾದಿಗಳೆಲ್ಲರ ಮತಗಳನ್ನು ಖಂಡಿಸಿ ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರಾದಿ ಸಮಸ್ತರಿಗೂ ಯಾವ ಭೇದವೂ ಇಲ್ಲದೆ ಅನೇಕ ಪ್ರಕಾರವಾಗಿ ಶಿವಸಂಬಂಧವಾದ ವ್ರತಗಳನ್ನು ಬೋಧಿಸಿ ಎಲ್ಲರನ್ನೂ ಶೈವರನ್ನಾಗಿ ಮಾಡಿ ಮಾಹೇಶ್ವರ ವ್ರತವನ್ನು ಪ್ರಕಾಶಗೊಳಿಸಿದನು. ಹೀಗಾಗಿ ಲೋಕದಲ್ಲಿ ಎಲ್ಲೆಲ್ಲೂ ಶಿವಭಕ್ತಿಪರಾಯಣರೂ ಭಸ್ಮ ರುದ್ರಾಕ್ಷಮಾಲಾಧಾರಿಗಳೂ ಆದ ಅಸಂಖ್ಯ ಶೈವರು ಶೋಭಿಸುತ್ತಿದ್ದರು.

ಈ ರೀತಿ ಶಿವಭಕ್ತಿ ಪರಾಯಣನಾಗಿದ್ದ ದೇವದಾಸನಿಗೆ ಪರಮಾತ್ಮನ ಅನುಗ್ರಹದಿಂದ ಏಕೋರಾಮನೆಂಬ ಮಗನು ಜನಿಸಿದನು. ಆ ಬಾಲಕನು ಮುಂದೆ ಲೋಕದಲ್ಲಿ ವಿರೂಪಾಕ್ಷನೆಂಬ ಹೆಸರಿನಿಂದ ಲೋಕವಿಖ್ಯಾತನಾದನು. ಆ ಬಾಲಕನು ತನ್ನ ಬಾಲಲೀಲೆಯಿಂದ ತಾಯಿತಂದೆಗಳಾದ ದೇವದತ್ತೆ ದೇವದಾಸರನ್ನು ಸಂತೋಷ ಗೊಳಿಸಿ ಅವರ ಲಾಲನೆಪಾಲನೆಗಳಿಂದ ದಿನೇ ದಿನೇ ಪ್ರವರ್ಧಮಾನನಾಗುತ್ತಿದ್ದನು. ಆ ದೇವದಾಸನಾದರೂ ಪ್ರತಿ ದಿವಸ ಶೈವಮತವನ್ನು ಪ್ರಕಾಶಗೊಳಿಸುತ್ತಾ ರಾಮಲಿಂಗೇಶನ ಪೂಜೆಯಲ್ಲಿ ಆಸಕ್ತವಾದ ಮನಸ್ಸುಳ್ಳವನಾಗಿ ಶೈವಧರ್ಮವನ್ನು ದೇಶದಲ್ಲೆಲ್ಲಾ ಪ್ರಚಾರ ಮಾಡುತ್ತಾ ಬೌದ್ಧರ ಪ್ರಬಲ ಕೇಂದ್ರವಾಗಿದ್ದು ಬೌದ್ಧರಾಜ ನಾದ ದೇಸಿಂಗವಲ್ಲಭನಿಂದ ಆಳಲ್ಪಡುತ್ತಿದ್ದ ಪಟ್ಟಣಕ್ಕೆ ಬಂದು ಅಲ್ಲಿ ಶೈವಮತ ಪ್ರಚಾರ ಮಾಡುತ್ತಾ ಪತ್ನಿ ಪುತ್ರರೊಡನೆ ವಾಸಿಸುತ್ತಾ ಶಿವಭಕ್ತಿಯುತನಾಗಿ ಕಾಲಯಾಪನೆ ಮಾಡುತ್ತಿದ್ದನು.

ಆಗ ಹೆಚ್ಚು ಪ್ರಬಲರಾಗಿದ್ದ ಬೌದ್ಧಮತೀಯರು ದೇವದಾಸನ ಈ ಶೈವಮತ ಪ್ರಚಾರವನ್ನು ನೋಡಿ ಕ್ರೋಧಗೊಂಡವರಾಗಿ ಅವರೆಲ್ಲರೂ ಒಂದೆಡೆ ಸೇರಿ ಶೈವಮತ ಪ್ರಾಬಲ್ಯವನ್ನು ತಡೆಯಲು ತಮ್ಮತಮ್ಮಲ್ಲೇ ಆಲೋಚಿಸಿ ಆ ದೇವದಾಸನಲ್ಲಿ ತಪ್ಪು ಹುಡುಕುವುದರಲ್ಲೇ ಮಗ್ನರಾಗಿದ್ದರು. ಹೀಗಿರಲು ಒಂದು ದಿವಸ ದೇವದಾಸನು ನಿತ್ಯದಂತೆ ಅಲ್ಲಿದ್ದ ರಾಮಲಿಂಗೇಶನನ್ನು ವಿಧಿವತ್ತಾಗಿ ಪೂಜಿಸಿ ತನ್ನ ಗೃಹಕ್ಕೆ ಬರುತ್ತಿದ್ದನು. ಬೌದ್ಧರು ಆ ಸಮಯವನ್ನು ನೋಡಿ ಅವನನ್ನು ಮಾರ್ಗದಲ್ಲಿ ಅಡ್ಡಗಟ್ಟಿ ಎಲೈ ದೇವದಾಸನೇ ಶಿವನೆಂದರೆ ಯಾರು? ಶೈವಮತವೇ ಲೋಕದಲ್ಲಿ ಶ್ರೇಷ್ಠವೆಂದು ನೀನು ಅದನ್ನು ಪ್ರತಿಪಾದಿಸುತ್ತಿರುವೆ? ಯಾರ ಮಂತ್ರಪೂಜೆ ದೀಕ್ಷೆಗಳನ್ನು ನೀನು ಮಾನ್ಯ ಮಾಡಿರುವೆಯೋ ಆ ಶಿವನೆಲ್ಲಿರುವನು? ಎಂದು ವಾದ ಮಾಡಿದರು.

ದೇವದಾಸನು ಆ ಬೌದ್ಧರ ಮಾತನ್ನು ಕೇಳಿ ಎಲೈ ಬೌದ್ಧರೆ ಆ ಶಿವನು ಸರ್ವಾಂತರ್ಗತನೂ ನಿತ್ಯನೂ ಸರ್ವವ್ಯಾಪಕನೂ ಆತ್ಮಸ್ವರೂಪಿಯೂ ಪರಾತ್ಪರನೂ ಆಗಿರುವನು ಎಂದು ನುಡಿದನು. ದೇವದಾಸನ ಈ ಮಾತನ್ನು ಕೇಳಿ ಆ ಬೌದ್ಧರೆಲ್ಲರೂ ಅವನನ್ನು ಪರಿಹಾಸ ಮಾಡುತ್ತಾ ಎಲೈ ದೇವದಾಸನೇ ನಿನ್ನ ಮಾತಿನಂತೆ ಆ ಶಿವನು ಸರ್ವಾಂತರ್ಯಾಮಿಯೂ ಪರಾತ್ಪರನೂ ಪರಮಾತ್ಮನೂ ಆಗಿದ್ದರೆ ಅವನು ಈ ಇರುವೆಯ ಅಂತರಂಗದಲ್ಲಿದ್ದು ಈ ಮಾತನ್ನು ಹೇಳಬೇಕೆಂದು ಹೇಳಿ ಅಲ್ಲಿ ಹೋಗುತ್ತಿದ್ದ ಒಂದು ಇರುವೆಯನ್ನು ದೇವದಾಸನಿಗೆ ತೋರಿಸಿದರು. ದೇವದಾಸನು ಆ ಬೌದ್ಧರ ಮಾತನ್ನು ಕೇಳಿ ಹಾಗೆಯೇ ಆಗಲೆಂದು ಹೇಳಿ ಅಲ್ಲಿ ಹೋಗುತ್ತಿರುವ ಇರುವೆಯನ್ನು ಕಂಡು ತನ್ನ ಮನಸ್ಸಿನಲ್ಲಿ ಭಕ್ತ ಸುಖಕರನಾದ ಶಿವನನ್ನು ಕುರಿತು ಹೇ ಶಿವ ಹೇ ಶಂಭೋ ದಯಾಸಿಂಧೋ ನೀನು ಸರ್ವಾಂತರ್ಯಾಮಿಯೇ ಆಗಿರುವೆಯಾದರೆ ಈ ಬೌದ್ಧರು ಹೇಳಿದಂತೆ ಈ ಇರುವೆಯ ಅಂತರಂಗದಲ್ಲಿದ್ದು ನುಡಿಯಬೇಕೆಂದು ಭಕ್ತಾಭೀಷ್ಟ ಪ್ರದನಾದ ಭಗವಂತನಾದ ಪರಮಾತ್ಮನನ್ನು ಅನನ್ಯ ಭಕ್ತಿಯಿಂದ ಪ್ರಾರ್ಥಿಸಿದನು.

ಆಗ ಪರಮಾತ್ಮನು ಸರ್ವಾಂತರ್ಯಾಮಿಯಾದುದರಿಂದ ಆ ಪಿಪೀಲಿಕದ ಹೃದಯಾಂತರ್ಗತನಾಗಿ ಅತ್ಯದ್ಭುತವಾಗಿ ಎಲೈ ಮಾನವರೇ ನಾನಾಡುವ ಮಾತನ್ನು ನೀವೆಲ್ಲರೂ ಭಕ್ತಿಯಿಂದ ಕೇಳಿರಿ. ನಾನೇ ಸಾಕ್ಷಾತ್ ಶಿವನು. ನಾನೇ ಸರ್ವಾಂತ ರ್ಯಾಮಿಯು. ನಾನೇ ಪರಮಾತ್ಮನು. ನಾನೇ ಪರಾತ್ಪರನು. ನಾನೇ ಜಗತ್ಕ ರ್ತೃವೂ ವಿಶ್ವರೂಪಿಯೂ ಆಗಿರುವೆನು ಎಂದು ನುಡಿಯಿತು. ಭಗವಂತನ ಈ ವಾಕ್ಯವನ್ನು ಕೇಳಿ ಬೌದ್ಧರೆಲ್ಲರೂ ದೇವದಾಸನನ್ನು ನೋಡಿ ಎಲೈ ಮಹಾ ಬುದ್ಧಿಶಾಲಿ ಯಾದ ಮಹಾತ್ಮನಾದ ದೇವದಾಸನೇ ನಾವಾಡುವ ಈ ಮಾತನ್ನು ಕೇಳು. ನಿನ್ನ ಮಂತ್ರಪ್ರಭಾವದಿಂದ ಈ ಇರುವೆಯು ಹೀಗೆ ನುಡಿಯಿತು. ಆದರೆ ರಾಮಲಿಂಗೇಶನೇ ನುಡಿದರೆ ನಾವೆಲ್ಲರೂ ಶಿವಭಕ್ತರಾಗಿ ನಿನ್ನ ಶಿಷ್ಯರಾಗುವೆವು ಎಂದರು. ಬೌದ್ಧರ ಆ ಮಾತನ್ನು ಕೇಳಿ ಅವರೊಡನೆ ದೇವದಾಸನು ರಾಮಲಿಂಗೇಶನ ಬಳಿಗೆ ಬಂದನು.

ಅವನು ಶಿವನನ್ನು ಕುರಿತು ದೃಢವಾದ ಭಕ್ತಿಯಿಂದ ರಾಮಲಿಂಗೇಶನೇ ಚಿದ್ರೂಪನೇ ವೇದವೇದಾಂತ ಸಂಸ್ತುತನೇ ಈ ಬೌದ್ಧರಿಗೆ ಈಗ ನಿನ್ನ ಸರ್ವವ್ಯಾಪ ಕತ್ವವನ್ನು ತೋರಿಸು. ನೀನು ಇರುವೆಯ ಅಂತರಂಗದಲ್ಲಿ ವ್ಯಾಪಿಸಿ ಯಾವ ರೀತಿ ಮಾತಾಡಿದೆಯೋ ಆ ರೀತಿಯಾಗಿಯೇ ಈಗ ನುಡಿ. ಸದಾಶಿವನೇ ನಿನಗೆ ನಮಸ್ಕಾರ ಎಂದು ದೇವದಾಸನು ಪ್ರಾರ್ಥಿಸಲು ರಾಮಲಿಂಗೇಶನು ಮಧುರವಾಗಿಯೂ ಸ್ಪಷ್ಟವಾಗಿಯೂ ಎಲೈ ಬೌದ್ಧರೇ ನೀವು ನನ್ನಲ್ಲಿ ಭಕ್ತಿಯುಳ್ಳವರಾಗಿ ನಾನಾಡುವ ಈ ಮಾತನ್ನು ಕೇಳಿ. ನಾನೇ ಸಾಕ್ಷಾತ್ ಶಿವನು. ಸರ್ವಾಂತರ್ಯಾಮಿಯು. ಪರಾತ್ಪರನು ಸರ್ವವ್ಯಾಪಿಯು ಮೋಕ್ಷದಾಯಕನು ಜ್ಞಾನವಿಜ್ಞಾನ ಶರೀರಿಯು ಪರಮಾತ್ಮನು ಜಗತ್ಕರ್ತನು ವಿಶ್ವವ್ಯಾಪಿಯು ಎಂದು ನುಡಿದನು. ಈ ಮಾತನ್ನು ಬೌದ್ಧರೆಲ್ಲರೂ ಕೇಳಿ ದೇವದಾಸನಿಗೆ ಆ

ಕೂಡಲೇ ಶರಣಾಗತರಾಗಿ ಶಿಷ್ಯರಾದರು. ಆಗ ದೇವದಾಸನು ಆ ಬೌದ್ಧರೆಲ್ಲರಿಗೂ ಶಿವಪಂಚಾಕ್ಷರೀ ಮಂತ್ರೋಪದೇಶ ಮಾಡಿ ಶಿವದೀಕ್ಷೆಯನ್ನು ಕೊಟ್ಟನು. ಈ ವಿಷಯವನ್ನು ಕರ್ಣಾಕರ್ಣಿಕೆಯಾಗಿ ಕೇಳಿದ ಆ ಪಟ್ಟಣದ ರಾಣಿಯಾದ ದೇಸಿಂಗ ರಾಜನ ಪತ್ನಿಯಾದ ಸಂಗಮಾಂಬೆಯು ತಾನೂ ಶೈವಳಾಗಬೇಕೆಂಬ ಹಂಬಲದಿಂದ ದೇವದಾಸನಿಂದ ಶಿವಪಂಚಾಕ್ಷರೀ ಮಂತ್ರೋಪದೇಶ ಪಡೆದು ಶಿವದೀಕ್ಷಾ ಬದ್ಧಳಾಗಿ ಶೈವಮತವನ್ನು ಅವಲಂಬಿಸಿದಳು. ಹೀಗೆ ದೇವದಾಸನು ಶಿವಭಕ್ತಿತತ್ಪರನಾಗಿ ಸದಾ ನಿತ್ಯಾನ್ನದಾನ ಮಾಡುತ್ತಾ ವಾಸಿಸುತ್ತಿದ್ದನು. ಹೀಗೆ ಕೆಲವು ಕಾಲ ಕಳೆಯಲು ಒಂದು ದಿನ ಒಂದುಕೋಟಿ ಬ್ರಾಹ್ಮಣರು ದೇವದಾಸನ ಬಳಿಗೆ ಬಂದು ನಮಗೆ ಈ ದಿನ ಘೃತ ಭಕ್ಷ್ಯಾದಿಗಳಿಂದ ಕೂಡಿದ ಭಿಕ್ಷೆಯನ್ನು ನೀಡೆಂದು ಕೇಳಿದರು.

ಇದನ್ನು ಕೇಳಿ ದೇವದಾಸನು ಸಂತೋಷಪಟ್ಟು ಸ್ನಾನಾದಿ ನಿತ್ಯಕರ್ಮಗಳನ್ನು ತೀರಿಸಿಕೊಂಡು ಬರುವಂತೆ ಅವರಿಗೆ ಹೇಳಿಕಳುಹಿಸಿದನು. ನಂತರ ಅವನು ಖಿನ್ನನಾಗಿ ಇಷ್ಟು ಮಂದಿಗಾಗುವಷ್ಟು ಸಾಮಗ್ರಿಗಳು ಮನೆಯಲ್ಲಿಲ್ಲ ಏನುಮಾಡುವುದೆಂದು ಯೋಚಿಸಿ ಆ ನಗರದ ವೈಶ್ಯ ಶ್ರೇಷ್ಠನಾದ ಗಂಗಾಧರನ ಮನೆಗೆ ಹೋಗಿ ಅವನನ್ನು ಕಂಡು ಎಲೈ ವೈಶ್ಯಶ್ರೇಷ್ಠನೇ ಈ ದಿನ ನನ್ನ ಮನೆಗೆ ಭಿಕ್ಷೆಗಾಗಿ ಕೋಟಿ ಬ್ರಾಹ್ಮಣರು ಬಂದಿರುವರು. ನನ್ನ ಮನೆಯಲ್ಲಿ ಅವರಿಗಾಗುವಷ್ಟು ಸಾಮಗ್ರಿಗಳಿಲ್ಲ. ಆದ ಕಾರಣ ನೀನು ನನಗೆ ಬೇಕಾಗುವಷ್ಟು ಅಕ್ಕಿ ಮೊದಲಾದ ಸಮಸ್ತ ಸಾಮಗ್ರಿಗಳನ್ನು ದಯವಿಟ್ಟು ಕೊಡೆಂದು ಪ್ರಾರ್ಥಿಸಿದನು. ಇದನ್ನು ಕೇಳಿ ಆ ವೈಶ್ಯನು ಸಿಟ್ಟನಿಂದ ಓಹೋ ದೇವದಾಸನೇ ನೀನು ಬಹಳ ಕಾಲದಿಂದಲೂ ನಿನ್ನ ಸಂಸಾರಕ್ಕೆ ಬೇಕಾಗುವ ಸಮಸ್ತವನ್ನೂ ನನ್ನಲ್ಲೇ ಬಳಸುತ್ತ ಬಂದಿರುವೆಯಷ್ಟೆ. ಆ ಹಣವನ್ನು ಈವರಿವಿಗೂ ನೀನು ಪೂರ್ತಿಯಾಗಿ ಪಾವತಿಮಾಡಿಲ್ಲ. ಆದುದರಿಂದ ದೇವದಾಸನೇ ಬಂದ ದಾರಿ ಹಿಡಿ. ನನ್ನ ಮನೆಯಲ್ಲಿ ಅಷ್ಟು ಮಂದಿಗಾಗುವಷ್ಟು ಅಕ್ಕಿ ಮೊದಲಾದ ಸಾಮಗ್ರಿಗಳು ಇಲ್ಲ ಎಂದು ನುಡಿದನು. ಈ ಮಾತನ್ನು ಕೇಳಿ ದೇವದಾಸನು ಚಿಂತಾಕ್ರಾಂತನಾಗಿ ತನ್ನ ಪತ್ನಿಯ ಬಳಿಗೆ ಬಂದು ದೇವದತ್ತೆ: ಈಗೇನು ಮಾಡಲಿ ? ಎಲ್ಲಿಗೆ ಹೋಗಲಿ ? ಬ್ರಾಹ್ಮಣರಂತೂ ಹಸಿದಿರುವರು. ಅಕ್ಕಿ ಮೊದಲಾದ ಸಾಮಗ್ರಿಗಳು ಇಲ್ಲವೆಂದು ವೈಶ್ಯನು ಹೇಳಿಬಿಟ್ಟನು ಎಂದನು.

ತನ್ನ ಪತಿ ದೇವದಾಸನ ಈ ಮಾತನ್ನು ಕೇಳಿ ದೇವದತ್ತೆಯು ಅವನನ್ನು ಕುರಿತು ಎಲೈ ಪತಿಯೇ ನಮಗೆ ಏಕೋರಾಮನೆಂಬ ಮಗನಿರುವನಷ್ಟೆ. ಅವನ ಹಸ್ತದಲ್ಲಿ ಶಂಖ ಚಕ್ರ ಪದ್ಮಾದಿರೇಖೆಗಳಿರುವುವು.ಅವನು ಅದೃಷ್ಟವಂತನೂ ಹೌದು. ಬೇಡಿದಿಷ್ಟಾರ್ಥ ಸಿದ್ಧಿಗಾಗಿ ಅವನು ಊರಹೊರಗಿರುವ ಹುತ್ತದಲ್ಲಿ ಕೈ ಇಡಲಿ. ಭಗವಂತನಾದ ಶಂಕರನು ಕಂಕಣವನ್ನು ನಿಶ್ಚಯವಾಗಿಯೂ ದಯಪಾಲಿಸುವನು. ಮುಂದೆ

ಭಗವದಿಚ್ಛೆ ಎಂದು ಹೇಳಿದಳು. ಹೆಂಡತಿಯ ಈ ಮಾತನ್ನು ಕೇಳಿ ದೇವದಾಸನು ಪುತ್ರನಾದ ಏಕೋರಾಮನನ್ನು ಪ್ರೀತಿಯಿಂದ ಕರೆದು, ಬುದ್ಧಿವಂತನಾದ ಏಕೋರಾಮನೇ ಈಗ ನಮ್ಮ ಮನೆಗೆ ಕೋಟಿಬ್ರಾಹ್ಮಣರು ಅಯಾಚಿತವಾಗಿ ನಮ್ಮ ಆತಿಥ್ಯವನ್ನು ಅಪೇಕ್ಷಿಸಿ ಬಂದಿರುವರು. ಮನೆಯಲ್ಲಿ ಅವರ ಆತಿಥ್ಯಕ್ಕಾಗುವಷ್ಟು ಸಾಮಗ್ರಿಗಳಿಲ್ಲ. ವೈಶ್ಯನಲ್ಲಿ ನಾವು ಸಾಲಮಾಡಿದ್ದು ಅದು ಇನ್ನೂ ತೀರಿಲ್ಲವಾದುದರಿಂದ ಅವನು ನಮಗೆ ಸಾಮಗ್ರಿಗಳನ್ನು ಕೊಡಲು ನಿರಾಕರಿಸಿದನು. ಆದುದರಿಂದ ಈಗ ನೀನು ಊರ ಹೊರಗೆ ಹೋಗಿ ನಿಮ್ಮ ತಾಯಿಯು ಹೇಳಿದಂತೆ ಈ ಊರಹೊರಗಿರುವ ಹುತ್ತದಲ್ಲಿ ನಿನ್ನ ಹಸ್ತವನ್ನಿಡು. ಪರಮೇಶ್ವರನು ನಿನಗೆ ನಿಶ್ಚಯವಾಗಿ ಕಂಕಣವನ್ನು ಅನುಗ್ರಹಿಸುವನು ಅದರಿಂದ ನಾವು ಅತಿಥಿಸತ್ಕಾರವನ್ನು ನಡೆಸೋಣ ಎಂದು ಹೇಳಿದನು. ತಂದೆಯು ಈ ಮಾತನ್ನು ಕೇಳಿ ಏಕೋರಾಮನು ಹಾಗೆಯೇ ಆಗಲೆಂದು ಹೇಳಿ ಊರ ಹೊರಗೆ ಹೋಗಿ ಅಲ್ಲಿದ್ದ ಹುತ್ತದಲ್ಲಿ ಭಕ್ತಿಯಿಂದ ಕೈಯಿಟ್ಟನು. ಆಗ ಸರ್ಪಕಂಕಣನಾದ ಭಗವಂತನು ಅಮೂಲ್ಯವೂ ಅನುಪಮವೂ ಆದ ಕಂಕಣವನ್ನು ಅವನಿಗೆ ಅನುಗ್ರಹಿಸಿದನು. ಅದನ್ನು ತೆಗೆದುಕೊಂಡು ಏಕೋರಾಮನು ತನ್ನ ತಂದೆಯಾದ ದೇವದಾಸನಿಗೆ ಕೊಟ್ಟನು. ದೇವದಾಸನು ಅದನ್ನು ತೆಗೆದುಕೊಂಡು ಹೋಗಿ ವೈಶ್ಯನಾದ ಗಂಗಾಧರನ ಕೈಗೆ ಕೊಟ್ಟು ಅವನಿಂದ ತಾನು ಅತಿಥಿ ಸತ್ಕಾರಕ್ಕೆ ಬೇಕಾದ ಸಮಸ್ತ ಸಾಮಗ್ರಿಗಳನ್ನೂ ತೆಗೆದುಕೊಂಡು ಬಂಡಿಗಳ ಮೇಲೆ ಹೇರಿಕೊಂಡು ತನ್ನ ಮನೆಗೆ ಬಂದನು.

ದೇವದಾಸನ ಪತ್ನಿ ದೇವದತ್ತೆಯು ಅಕ್ಕಿಯೇ ಮೊದಲಾದ ಸಮಸ್ತ ಸಾಮಗ್ರಿಗಳನ್ನು ತನ್ನ ಪತಿಯು ಮನೆಗೆ ತಂದುದನ್ನು ಕಂಡು ಸಂತೋಷದಿಂದ ಬ್ರಾಹ್ಮಣರ ಆತಿಥ್ಯಕ್ಕೋಸ್ಕರ ಆ ಸಾಮಗ್ರಿಗಳೆಲ್ಲವನ್ನೂ ನೆರೆಹೊರೆಯವರ ಸಹಾಯದಿಂದ ಸ್ವಚ್ಛಗೊಳಿಸಿ ಅವುಗಳಿಂದ ಅನೇಕ ವಿಧವಾದ ಭಕ್ಷ್ಯಭೋಜ್ಯಗಳನ್ನು ಪಾಕಮಾಡಿ ಸಿದ್ಧಪಡಿಸಿದಳು. ದೇವದಾಸನು ಸ್ನಾನ, ನಿತ್ಯವಿಧಿಗಳನ್ನು ತೀರಿಸಿಕೊಂಡು ಬಂದ ಕೋಟಿಮಂದಿ ಬ್ರಾಹ್ಮಣರನ್ನೂ ಅನೇಕ ವಿಧ ಭಕ್ಷ್ಯಭೋಜ್ಯಗಳಿಂದ ಕೂಡಿದ ಭೋಜನದಿಂದ ತೃಪ್ತಿಪಡಿಸಿದನು. ಸಮಸ್ತ ಬ್ರಾಹ್ಮಣರೂ ದೇವದಾಸ ದೇವದತ್ತೆಯರ ಆತಿಥ್ಯದಿಂದ ಸಂತೃಪ್ತರಾಗಿ ನೀವು ಸಮಸ್ತಮಂಗಳಗಳನ್ನು ಪಡೆಯಿರಿ ಎಂದು ಅವರಿಬ್ಬರಿಗೂ ಆಶೀರ್ವಾದ ಮಾಡಿಹೋದರು. ಗಂಗಾಧರನೆಂಬ ವೈಶ್ಯನಾದರೋ ದೇವದಾಸನ ಅಮೂಲ್ಯವಾದ ಕಂಕಣವನ್ನು ಹೇಗೆ ಅಪಹರಿಸಬೇಕೆಂದು ದುರಾಲೋಚನೆಯನ್ನು ತನ್ನ ಮನಸ್ಸಿನಲ್ಲಿ ಮಾಡುತ್ತಿರಲು, ಆ ಕಂಕಣವು ಸರ್ಪರೂಪವನ್ನು ತಾಳಿ ಅವನ ಗೃಹದಲ್ಲಿ ಭಯಂಕರವಾಗಿ ಬುಸುಗುಟ್ಟುತ್ತಾ ಹರಿದಾಡುತ್ತಿತ್ತು. ಇದನ್ನು ನೋಡಿ ಬಹುಭೀತನಾದ ಆ ವೈಶ್ಯನು ದೇವದಾಸನ ಮನೆಗೆ ಬೇಗ ಓಡಿಹೋಗಿ ದೇವದಾಸನನ್ನು ನೋಡಿ ದೇವದಾಸನೇ ನೀನು ಕೊಟ್ಟಿರುವ ಕಂಕಣವು ನನ್ನ ಮನೆಯಲ್ಲಿ ಭಯಂಕರಸರ್ಪವಾಗಿ ಘೋರವಾಗಿ ಬುಸುಗುಟ್ಟುತ್ತಾ ಹರಿದಾಡುತ್ತಿರುವುದು. ಆದುದರಿಂದ ನೀನು ನನ್ನ ಮನೆಗೆ ಶೀಘ್ರವಾಗಿ ಬಂದು ನನ್ನ ಭಯವನ್ನು ನಿವಾರಿಸಿ ಆ ಕಂಕಣವನ್ನು ತೆಗೆದುಕೊಂಡು ಹೋಗು.

ನಿನಗೆ ಹಣ ಕೂಡಿದಂತೆ ನನ್ನ ಸಾಲವನ್ನು ತೀರಿಸುವೆಯಂತೆ. ನನ್ನನ್ನು ಕಾಪಾಡು ಎಂದು ಆ ವೈಶ್ಯನು ಅಂಗಲಾಚಿ ಬೇಡಿಕೊಂಡು ದೇವದಾಸನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಅವನನ್ನು ಉಪಚರಿಸಿದನು. ದೇವದಾಸನು ಆ ವೈಶ್ಯನ ಮನೆಯನ್ನು ಹೊಕ್ಕ ಕೂಡಲೇ ಮನೆಯಲ್ಲಿ ಹರಿದಾಡುತ್ತಿದ್ದ ಸರ್ಪವು ತನ್ನ ಹಿಂದಿನ ಕಂಕಣರೂಪ ವನ್ನು ತಾಳಿತು. ವೈಶ್ಯನು ಇದನ್ನು ನೋಡಿ ಆಶ್ಚರ್ಯಚಕಿತನಾಗಿ ಭಯ ಭಕ್ತಿ ಗಳಿಂದ ಆ ಕಂಕಣವನ್ನು ಪೂಜಿಸಿ ದೇವದಾಸನಿಗೆ ಅರ್ಪಿಸಿದನು.

ಹೀಗೆ ಆ ಕಂಕಣದ ಮಹಿಮೆಯಿಂದ ನಿತ್ಯದಾಸೋಹದಲ್ಲಿ ಕಾಲಕಳೆಯುತ್ತಾ ದೇವದಾಸನು ತನ್ನ ಕರಕೌಶಲ್ಯವನ್ನು ತೋರಿಸಬೇಕೆಂದು ಯೋಚಿಸಿ ಅಮೂಲ್ಯವಾದ ಚಿತ್ರವಿಚಿತ್ರಗಳಿಂದ ಕೂಡಿದ ಅನುಪಮವಾದ ಒಂದು ದಿವ್ಯ ವಸ್ತ್ರವನ್ನು ನೇಯ್ದು ಅದನ್ನು ಮಾರಲು ಆ ಪಟ್ಟಣದ ರಾಜನಾದ ದೇಸಿಂಗರಾಜನಿಗೆ ಅದನ್ನು ತಂದು ತೋರಿಸಿದನು. ಆ ವಸ್ತ್ರವು ३೬೦ ಮೊಳ ಉದ್ದವಾಗಿಯೂ ೧೨ ಮೊಳ ಅಗಲ ವಾಗಿಯೂ ಇದ್ದು ಅತ್ಯಂತ ರಮಣೀಯವಾಗಿ ನಯನ ಮನೋಹರವಾಗಿದ್ದು ಸಮಸ್ತರನ್ನೂ ಬೆರಗುಗೊಳಿಸುತ್ತಿತ್ತು. ರಾಜನಾದ ದೇಸಿಂಗನು ಆ ವಸ್ತ್ರವನ್ನು ನೋಡಿ ಆಶ್ಚರ್ಯಪಟ್ಟು ದೇವದಾಸನ ಕರಕೌಶಲ್ಯಕ್ಕೆ ತಲೆದೂಗುತ್ತಾ ತನ್ನ ರಾಜಧಾನಿಯ ಸಮಸ್ತ ವೈಶ್ಯರನ್ನು ಕರೆಯಿಸಿ ಆ ವಸ್ತ್ರವನ್ನು ಅವರಿಗೆ ತೋರಿಸಿ ಅದಕ್ಕೆ ಬೆಲೆಯನ್ನು ಕಟ್ಟಿರೆಂದು ಅವರಿಗೆ ಹೇಳಿದನು. ವ್ಯಾಪಾರಿಗಳಾದ ಆ ವೈಶ್ಯರೆಲ್ಲರೂ ಆ ವಸ್ತ್ರವನ್ನು ನೋಡಿ ಸೋಜಿಗಪಟ್ಟು ಬೆಲೆಯನ್ನು ನಿರ್ಣಯಿಸ ಲಾರದೆ ಇದರ ಬೆಲೆ ಕಟ್ಟಲು ನಮ್ಮಿಂದ ಸಾಧ್ಯವಿಲ್ಲ. ಇದು ಸಾಕ್ಷಾತ್ ಪರಮೇಶ್ವರನಿಗೆ ಸಲ್ಲತಕ್ಕದ್ದು ಎಂದರು.

ಆದರೂ ಒಬ್ಬ ವೈಶ್ಯನು ಧೈರ್ಯದಿಂದ ಮುಂದೆ ಬಂದು ಈ ವಸ್ತ್ರಕ್ಕೆ ಮೂರು ಲೋಕಗಳೇ ಬೆಲೆಯಾಗುವುದೆಂಬ ಅಭಿಪ್ರಾಯದಿಂದ ತನ್ನ ಚಾತುರ್ಯ ವನ್ನು ತೋರಿಸಲು ತನ್ನ ಮೂರು ಬೆರಳುಗಳನ್ನು ತೋರಿಸಿದನು. ಹೀಗೆ ಆ ವೈಶ್ಯನು ತನ್ನ ಮೂರು ಬೆರಳುಗಳನ್ನು ತೋರಿಸಲು ಆಗ ವಿಷ್ಣುವಿನ ಸುದರ್ಶನ ಚಕ್ರವು ಶೀಘ್ರವಾಗಿ ಬಂದು ಕಾಲಾಗ್ನಿಯಂತೆ ಪ್ರಜ್ವಲಿಸುತ್ತ ಆ ವೈಶ್ಯನ ಮೂರು ಬೆರಳುಗಳನ್ನೂ ಕತ್ತರಿಸಿತು. ಹೀಗೆ ಆ ವೈಶ್ಯನು ತನ್ನ ಮೂರುಬೆರಳುಗಳನ್ನೂ ಕಳೆದುಕೊಳ್ಳಲು ಮಿಕ್ಕ ವ್ಯಾಪಾರಿಗಳೆಲ್ಲರೂ ನಾವು ಈವರಿವಿಗೆ ಇಂತಹ `ದಿವ್ಯಾಂಬರ ವನ್ನು ನೋಡಿದುದೇ ಇಲ್ಲ. ಇದು ಸಾಕ್ಷಾತ್ ಪರಶಿವನೇ ಧರಿಸಲು ಯೋಗ್ಯವು. ಭೂಲೋಕದಲ್ಲಿನ ಮಾನವರಾರೂ ಇದನ್ನು ಧರಿಸಲು ಯೋಗ್ಯರಲ್ಲ. ಇದು ಬಹು ಅನರ್ಘ್ಯವಾದದು. ಇದಕ್ಕೆ ಸಮನಾದ ವಸ್ತ್ರವು ಮೂರು ಲೋಕಗಳಲ್ಲಿಯೂ ಇಲ್ಲವೆಂದು ರಾಜನಿಗೆ ಹೇಳಿ ಸುಮ್ಮನಾದರು. ರಾಜನು ದಿಙ್ಮೂಢನಾಗಿ ಏನು ಮಾಡಲೂ ತೋರದೆ ಮೌನವಾಗಿದ್ದನು.

ಇದನ್ನು ನೋಡಿ ಮಹಾಶಿವಯೋಗಿಯಾದ ದೇವದಾಸನು ಅತಿ ಮನೋಹರವಾದ ಆ ವಸ್ತ್ರವನ್ನು ಶಿವನಿಗೆ ಅರ್ಪಿಸಲಿಚ್ಛಿಸಿ ಅದನ್ನು ಸುಪ್ರಸಿದ್ಧ ಶೈವಕ್ಷೇತ್ರವಾದ ಶ್ರೀಶೈಲದ ಅಧಿಷ್ಠಾತೃದೈವವಾದ ಶ್ರೀ ಮಲ್ಲಿಕಾರ್ಜುನಸ್ವಾಮಿಗೆ ಅರ್ಪಿಸಬೇಕೆಂದು ತನ್ನ ಮನಸ್ಸಿನಲ್ಲಿ ನಿಶ್ಚಯಿಸಿ ಆ ದಿವ್ಯವಸ್ತ್ರವನ್ನು ತೆಗೆದುಕೊಂಡು ಶ್ರೀಶೈಲ ಕ್ಷೇತ್ರಕ್ಕೆ ಹೊರಟು ಬಂದನು. ಶ್ರೀಶೈಲಕ್ಕೆ ಬಂದವನೇ ಸ್ನಾನಮಾಡಿ ಶುಚಿರ್ಭೂತನಾಗಿ ಅತಿ ಮನೋಹರವೂ ಸ್ನಿಗ್ಧವೂ ವಿಶಾಲವೂ ಅತ್ಯಮೂಲ್ಯವೂ ಆದ ಆ ವಸ್ತ್ರವನ್ನು ಮಹಾಧ್ವಜಯುಕ್ತನಾದ ಶ್ರೀಶೈಲ ಮಲ್ಲಿಕಾರ್ಜುನಸ್ವಾಮಿಗೆ ಅತಿಭಕ್ತಿಯಿಂದ ಸಮರ್ಪಿಸಿ ಸ್ತುತಿಸುತ್ತಾ ಕೈಮುಗಿದು ನಿಂತನು. ಹೀಗೆ ದೇವದಾಸನಿಂದ ತನಗೆ ಸಮರ್ಪಿಸಲ್ಪಟ್ಟ ತಾನೊಬ್ಬನೇ ಧರಿಸಲು ಯೋಗ್ಯವಾದ ಆ ವಸ್ತ್ರಸಮರ್ಪಣೆಯಿಂದ ಸಂತುಷ್ಟನಾದ ಮಲ್ಲಿಕಾರ್ಜುನನು ತನಗೆ ಅತ್ಯಮೂಲ್ಯವಾದ ವಸ್ತ್ರವನ್ನು ಸಮರ್ಪಿಸಿ ತನ್ನನ್ನು ಸ್ತುತಿಸುತ್ತಾ ಕೈಮುಗಿದು ವಿನಮ್ರವಾಗಿ ನಿಂತಿರುವ ದೇವದಾಸನನ್ನು ನೋಡಿ ಪ್ರೀತಿಯಿಂದ ಅಪಾರವಾದ ಸಂಪತ್ತನ್ನು ಅನುಗ್ರಹಿಸಿ ಎಲೈ ದೇವದಾಸನೇ ಇನ್ನು ಮೇಲೆ ನೀನು ನನ್ನ ಭಕ್ತರಿಗೆ ಯಥೇಚ್ಛವಾಗಿ ಅನ್ನದಾನ ಮಾಡು. ಲೋಕದಲ್ಲಿ ಸರ್ವೋತ್ತಮವಾದ ಶೈವಮತವನ್ನು ಸ್ಥಾಪಿಸು. ಆ ಮೇಲೆ ಕೈಲಾಸಕ್ಕೆ ಹಿಂದಿರುಗು ಎಂದು ನುಡಿದು ಭಗವಂತನಾದ ಮಲ್ಲಿಕಾರ್ಜುನನು ಅಂತರ್ಧಾನನಾದನು.

ಹೀಗೆ ಮಲ್ಲಿಕಾರ್ಜುನನಿಂದ ಅನುಗ್ರಹೀತನಾದ ದೇವದಾಸನು ಶೀಘ್ರವಾಗಿ ಮನೆಯನ್ನು ಸೇರಿ ವೈಶ್ಯನಿಗೆ ಕೊಡಬೇಕಾಗಿದ್ದ ಸಾಲವೆಲ್ಲವನ್ನೂ ಸಲ್ಲಿಸಿ ಋಣಮುಕ್ತನಾದನು. ತಾನು ಪ್ರತಿನಿತ್ಯವೂ ಶಿವಭಕ್ತರಿಗೆ ಅನ್ನದಾನ ಮಾಡುತ್ತ ಮಹಾಯೋಗವುಳ್ಳವನಾಗಿ ಶೈವರಿಗೆ ವಸ್ತ್ರಗಳನ್ನೂ ಯಜ್ಞೋಪವೀತಗಳನ್ನೂ ದಾನಮಾಡುತ್ತಿದ್ದನು. ಲೋಕದಲ್ಲಿ ಅತ್ಯುತ್ತಮವಾದ ಶೈವಮತವನ್ನು ಸ್ಥಾಪಿಸಿ ಶಿವಪಂಚಾಕ್ಷರೀ ಮಂತ್ರವನ್ನುಪದೇಶಿಸುತ್ತ ಶಿವದೀಕ್ಷೆಯನ್ನು ಕೊಡುತ್ತಾ ಶಿವಪೂಜಾಧುರಂಧರನಾಗಿ ಲೋಕವನ್ನೆಲ್ಲಾ ಶೈವಮಯವನ್ನಾಗಿ ಮಾಡುತ್ತಿದ್ದನು. ಇದನ್ನು ಕಂಡು ಆ ನಗರದ ಬೌದ್ಧರಾಜನಾದ ದೇಸಿಂಗನ ಗುರುವಾದ ಬೌದ್ಧ ಸಂನ್ಯಾಸಿಯು ದೇಸಿಂಗರಾಜನ ಅರಮನೆಗೆ ಬಂದನು. ಅನಿರೀಕ್ಷಿತವಾಗಿ ತನ್ನ ಗುರುವು ತನ್ನಲ್ಲಿಗೆ ಬಂದುದನ್ನು ಕಂಡು ರಾಜನು ಅವನನ್ನು ಆದರದಿಂದ ಬರಮಾಡಿಕೊಂಡು ಅರ್ಘ್ಯಪಾದ್ಯಗಳನ್ನಿತ್ತು ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಕುಶಲವನ್ನು ವಿಚಾರಿಸಿದನು. ಗುರುವು ರಾಜನನ್ನು ಆಶೀರ್ವದಿಸಿ ಪ್ರತಿಕುಶಲವನ್ನು ವಿಚಾರಿಸಿದನು.

ರಾಜನು ತನ್ನ ಕುಶಲವನ್ನು ಗುರುವಿಗೆ ತಿಳಿಸಿ ಪ್ರಾಜ್ಞನಾದ ರಾಜಗುರುವನ್ನು ಕುರಿತು ಅತ್ಯಂತ ಮಧುರ ವಚನಗಳಿಂದ ಗುರುವೇ ನಾನು ಬೌದ್ಧನಿದ್ದು ನನ್ನ ಪತ್ನಿಯೂ ಬೌದ್ಧಳಾಗಿದ್ದು ದೇವದಾಸನ ಉಪದೇಶದಿಂದಾಗಿ ಶೈವಳಾಗಿರುವಳು. ನೀನು

ಆಕೆಯ ಬಳಿಗೆ ಹೋಗಿ ಆಕೆಗೆ ಬೌದ್ಧಧರ್ಮವನ್ನು ಉಪದೇಶಿಸು ಎಂದನು. ರಾಜನ ಈ ಮಾತನ್ನು ಕೇಳಿ ಆ ಬೌದ್ಧ ಗುರುವು ಹಾಗೆಯೇ ಆಗಲೆಂದು ಹೇಳಿ ರಾಣಿಯ ಬಳಿಗೆ ಹೋಗಿ ಆಕೆಗೆ ಬೌದ್ಧಧರ್ಮವನ್ನು ಉಪದೇಶಿಸಿದನು. ರಾಜನ ಪತ್ನಿಯಾದ ಸಂಗ ಮಾಂಬೆಯು ಬೌದ್ಧಗುರುವಿನಿಂದುಪದೇಶಿಸಲ್ಪಟ್ಟ ಬೌದ್ಧಧರ್ಮವನ್ನು ಕೇಳಿ ಮುಗುಳು ನಗೆ ನಕ್ಕು ಪರಿಹಾಸದಿಂದ ಅವನನ್ನು ಕುರಿತು ಎಲೈ ಬೌದ್ಧಗುರುವೇ ಮಹಾತ್ಮನಾದ ನನ್ನಗುರುವಾದ ದೇವದಾಸನು ರಾಮಲಿಂಗೇಶನ ಸನ್ನಿಧಿಯಲ್ಲಿ ಬೌದ್ಧರೆಲ್ಲರನ್ನೂ ಈ ಮೊದಲೇ ಜಯಿಸಿ ಅವರೆಲ್ಲರನ್ನೂ ಶೈವರನ್ನಾಗಿ ಮಾಡಿದ ವಾರ್ತೆ ನಿನ್ನ ಕಿವಿಮುಟ್ಟಿ ಲ್ಲವೇ ? ಆ ಸಮಯದಲ್ಲಿ ಸಾಕ್ಷಾತ್ ರಾಮಲಿಂಗೇಶನೇ ಮಧುರವಾಗಿ ಸಮಸ್ತ ಬೌದ್ಧರೂ ಕೇಳುವಂತೆ ಎಲೈ ಬೌದ್ಧರೇ ನಾನೇ ಶಿವನು ಸರ್ವಾಂತರ್ಯಾಮಿಯು ಪರಮಾತ್ಮನು ಮುಕ್ತಿದಾಯಕನು ಜ್ಞಾನಸ್ವರೂಪಿಯು ಎಂದು ನುಡಿದ ಮಹಾ ಆಶ್ಚರ್ಯಕರವಾದ ಸುದ್ದಿಯು ನಿನ್ನ ಕಿವಿಗೆ ಬಿದ್ದಿಲ್ಲವೇ ? ಎಂದು ನುಡಿದಳು. ರಾಜಪತ್ನಿಯ ಈ ಮಾತನ್ನು ಕೇಳಿ ಬೌದ್ಧಸಂನ್ಯಾಸಿಯು ಖಿನ್ನನಾಗಿ ರಾಜನ ಬಳಿಗೆ ಬಂದು ಎಲ್ಲ ಸಂಗತಿಯನ್ನೂ ಸಾಂಗವಾಗಿ ಅವನಿಗೆ ತಿಳಿಸಿದನು. ಇದನ್ನು ಕೇಳಿ ರಾಜನಾದ ದೇಸಿಂಗವಲ್ಲಭನು ರಹಸ್ಯವಾಗಿ ತನ್ನ ಗುರುವಿನೊಡನೆ ಆಲೋಚಿಸಿ ಒಂದು ಕೊಡದಲ್ಲಿ ಒಂದು ಘಟ ಸರ್ಪವನ್ನು ಹಾಕಿಸಿ ಅದಕ್ಕೆ ರಾಜಮುದ್ರೆ ಮಾಡಿಸಿ, ತನ್ನಪತ್ನಿಯನ್ನು ಕರೆದು ಮಧುರ ವಾಣಿಯಿಂದ ಅವಳನ್ನು ಕುರಿತು ಪ್ರಿಯೇ ಸರ್ವಜ್ಞತ್ವದ ವಿಷಯದಲ್ಲಿ ನಿನ್ನಗುರುವನ್ನೂ ನನ್ನಗುರುವನ್ನೂ ಪರೀಕ್ಷಿಸುವೆನು. ಈ ಪರೀಕ್ಷೆಯಲ್ಲಿ ನಿನ್ನಗುರುವು ಜಯಿಸಿದರೆ ನನ್ನಗುರುವು ನಿಜವಾಗಿ ಶೈವನಾಗುವನು. ನನ್ನಗುರುವು ಜಯಿಸಿದರೆ ನಿನ್ನಗುರುವು ಬೌದ್ಧನಾಗಬೇಕು ಎಂದು ಹೇಳಿದನು. ಲೋಕಸಮ್ಮತವಾದ ರಾಜನ ಈ ಪಂಥದ ಮಾತುಗಳನ್ನು ಕೇಳಿ ರಾಣಿಯು ಹಾಗೆಯೇ ಆಗಲೆಂದು ಒಪ್ಪಿದಳು.

ಅನಂತರ ರಾಜನು ಮಹಾಮಹಿಮಾಶಾಲಿಯಾದ ದೇವದಾಸನಿಗೆ ಹೇಳಿ ಕಳುಹಿಸಿ ಆದರದಿಂದ ಅವನನ್ನು ಬರಮಾಡಿಕೊಂಡು ವಿಧಿವತ್ತಾಗಿ ಮರ್ಯಾದಿಸಿ ಭಕ್ತಿಪೂರ್ವಕ ವಾಗಿ ಅವನನ್ನು ಕುರಿತು ಎಲೈ ದೇವದಾಸನೇ ಮಹಾವಿದ್ವಾಂಸನಾದ ಈ ಬೌದ್ಧಸಂನ್ಯಾ ಸಿಯು ನನ್ನಗುರುವು. ಮಹಾ ಪ್ರಾಜ್ಞನಾದ ನೀನಾದರೋ ಶೈವರೆಲ್ಲರ ಹಾಗೂ ನನ್ನ ಪತ್ನಿಯ ಗುರುವೂ ಆಗಿರುವೆ. ಸರ್ವಜ್ಞತ್ವದ ವಿಷಯದಲ್ಲಿ ನಿಮ್ಮಿಬ್ಬರನ್ನೂ ನಾನು ಪರೀಕ್ಷಿಸುವೆನು. ಈ ಪರೀಕ್ಷೆಯಲ್ಲಿ ನೀನು ನನ್ನಗುರುವನ್ನು ಜಯಿಸಿದರೆ ನನ್ನಗುರುವು ನಿಜವಾಗಿಯೂ ಶೈವನಾಗುವನು. ನನ್ನಗುರುವು ನಿನ್ನನ್ನು ಜಯಿಸಿದರೆ ನೀನು ಬೌದ್ಧನಾಗಬೇಕು ಎಂದು ನುಡಿದನು. ರಾಜನ ಈ ಮಾತಿಗೆ ಪರಸ್ಪರ ಜಯಾಪೇಕ್ಷೆ ಯಿಂದ ದೇವದಾಸನೂ ಬೌದ್ಧಸಂನ್ಯಾಸಿಯೂ ಒಪ್ಪಿದರು.

ಇದರಿಂದ ಸಂತೋಷಗೊಂಡ ರಾಜನು ತನ್ನ ಬೌದ್ಧಗುರುವಿನಲ್ಲಿ ಮೊದಲೇ ಆಲೋಚಿಸಿದ್ದ ಒಂದು ಕೊಡದಲ್ಲಿ ಘಟಸರ್ಪವನ್ನು ಹಾಕಿಸಿ ಅದರ ಬಾಯಿಯನ್ನು

ಮುಚ್ಚಿಸಿ ರಾಜಮುದ್ರೆ ಮಾಡಿಸಿದ್ದ ಕೊಡವನ್ನು ರಾಜಸಭೆಗೆ ತರಿಸಿ ಭೋ ದೇವದಾಸ, ಭೋ ಬೌದ್ಧಗುರುವೇ ನೀವಿಬ್ಬರೂ ನನಗೆ ಸಮಪೂಜ್ಯರು. ನೀವು ಸರ್ವಜ್ಞರೆಂಬ ಅಭಿಮಾನವುಳ್ಳವರಾಗಿರುವಿರಿ. ಈ ಕೊಡದಲ್ಲಿ ಏನಿರುವುದೆಂದು ಹೇಳಿರಿ ಎಂದನು. ರಾಜನ ಈ ಮಾತನ್ನು ಕೇಳಿ ಬೌದ್ಧ ಗುರುವು ಸ್ವಲ್ಪವೂ ಯೋಚಿಸದೆ ಕೊಡದಲ್ಲಿ ಘಟಸರ್ಪವಿರುವುದೆಂದು ಹೇಳಿದನು. ಮಹಾತ್ಮನಾದ ದೇವದಾಸನಾದರೋ ಬೌದ್ಧ ಗುರುವಾಡಿದ ಮಾತನ್ನು ತಿರಸ್ಕರಿಸಿ ರಾಜನೇ, ಈ ಕೊಡದಲ್ಲಿ ಸರ್ವಾಂತರ್ಯಾಮಿಯಾದ ನಾಗಾಭರಣ ಭೂಷಿತವಾದ ಸರ್ವವ್ಯಾಪಿಯಾದ ವಿಶ್ವರೂಪಿಯಾದ ಸರ್ವರಿಗೂ ಮುಕ್ತಿದಾಯಕವಾದ ಶಿವಲಿಂಗವಿರುವುದೆಂದು ಕಿಂಚಿತ್ತೂ ಅಳುಕಿಲ್ಲದೆ ನುಡಿದನು. ದೇವದಾಸನ ಈ ಮಾತನ್ನು ಕೇಳಿ ರಾಜನು ಅತ್ಯಂತ ಕುತೂಹಲದಿಂದ ಆ ಕೊಡದ ಮುಚ್ಚಳವನ್ನು ಒಡೆಯಿಸಲಾಗಿ ಅದರ ಮಧ್ಯದಲ್ಲಿ ನಾಗಾಭರಣಭೂಷಿತವಾದ ಶಿವಲಿಂಗವಿರುವುದನ್ನು ನೋಡಿ ಅತ್ಯಂತ ಆಶ್ಚರ್ಯಯುಕ್ತನಾದನು. ಅವನು ಶಿಷ್ಯವರ್ಗಸಮೇತನಾದ ಬೌದ್ಧಗುರುವನ್ನು ನೋಡಿ ಅತ್ಯಂತ ಭಯದಿಂದ ದೈನ್ಯನಾಗಿ ತಲೆತಗ್ಗಿಸಿ ಬೌದ್ಧಗುರುವನ್ನು ಕುರಿತು ಎಲೈ ಬೌದ್ಧಗುರುವೇ ಈಗ ನಿನೇನು ಹೇಳುವೆ? ನೀನು ದೇವದಾಸನಿಗೆ ಸೋತಿರುವೆ. ನಿಮ್ಮ ಪಂಥದಂತೆ ಅವನಿಂದ ನೀನು ಶಿವದೀಕ್ಷೆಯನ್ನೂ ಶಿವಪಂಚಾಕ್ಷರೀ ಮಂತ್ರೋಪದೇಶವನ್ನೂ ಪಡೆ ಎಂದು ಆಜ್ಞಾಪಿಸಿದನು.

ಇದನ್ನು ಕೇಳಿ ಬೌದ್ಧ ಗುರುವು ಖಿನ್ನನಾಗಿ ಭಯಗೊಂಡು ದೇವದಾಸನಿಗೆ ಭಕ್ತಿಯಿಂದ ನಮಸ್ಕರಿಸಿ ದೇವದಾಸನೇ ನೀನು ಸರ್ವಜ್ಞನೂ ಲೋಕಪೂಜಿತನೂ ಆಗಿರುವೆ. ನೀನು ನನಗೆ ಶಿವದೀಕ್ಷೆಯನ್ನು ಕೊಟ್ಟು ಶಿವಪಂಚಾಕ್ಷರೀ ಮಂತ್ರೋಪದೇಶವನ್ನು ಮಾಡುವುದಲ್ಲದೆ ನನ್ನ ಶಿಷ್ಯರೆಲ್ಲರಿಗೂ, ಮಹಾಭಾಗನಾದ ಈ ರಾಜನಿಗೂ ವೇದಾಗಮೋಕ್ತ ವಿಧಾನದಿಂದ ಮುಕ್ತಿಪ್ರದಾಯಕವಾದ ಶಿವದೀಕ್ಷೆಯನ್ನು ಕೊಟ್ಟು ಶಿವಪಂಚಾಕ್ಷರೀಮಂತ್ರೋಪದೇಶವನ್ನು ಮಾಡಿ ನಮ್ಮೆಲ್ಲರನ್ನೂ ಉದ್ಧರಿಸಿ ಕಾಪಾಡು ಎಂದು ಪ್ರಾರ್ಥಿಸಿದನು. ಆಗ ಶಿವಭಕ್ತಿ ಶಿವಪೂಜಾಧುರಂಧರನಾದ ದೇವದಾಸನು ಸಮಸ್ತ ಬೌದ್ಧರಿಗೂ ಶಿವದೀಕ್ಷೆಯನ್ನು ಇತ್ತು ಶಿವಪಂಚಾಕ್ಷರೀಮಂತ್ರೋಪದೇಶವನ್ನು ಮಾಡಿ ಶಿವಪೂಜೆಯನ್ನು ವಿಧಿವತ್ತಾಗಿ ಬೋಧಿಸಿ ಅವರೆಲ್ಲರನ್ನೂ ಶೈವರನ್ನಾಗಿ ಮಾಡಿ ಸದ್ಯೋಜಾತನಾದ ಮಹಾದೇವನಾದ ಆ ಕೊಡದ ಮಧ್ಯದಲ್ಲಿರುವ ಶಿವಲಿಂಗವನ್ನು ಆಮೋದ ಪಟ್ಟಣಕ್ಕೆ ತಂದು ಯಥಾವಿಧಿಯಾಗಿ ಸ್ಥಾಪಿಸಿ ತನ್ನ ಶಿಷ್ಯವರ್ಗದವರೊಡಗೂಡಿ ಮಹಾಪ್ರಾಜ್ಞನಾದ ದೇವದಾಸನು ವೇದೋಕ್ತಮಂತ್ರಗಳಿಂದ ಆ ಶಿವಲಿಂಗವನ್ನು ಸದಾ ಪೂಜಿಸುತ್ತಾ ಕಾಲಕಳೆಯುತ್ತಿದ್ದನು.

ಹೀಗೆ ಕೆಲಕಾಲ ಕಳೆಯಲು ದೇವದಾಸನು ಶೈವಮತ ಪ್ರಚಾರಮಾಡುತ್ತಾ ಕಲ್ಯಾಣಪಟ್ಟಣಕ್ಕೆ ಬಂದನು. ಬಂದವನೇ ಅಲ್ಲಿನ ರಾಜನಾದ ಜಗದೇವನನ್ನು

ಕಂಡನು. ಜಗದೇವನು ಅನಿರೀಕ್ಷಿತವಾಗಿ ಮಹಾಶಿವಯೋಗಿಯಾದ ದೇವದಾಸನು ತನ್ನಲ್ಲಿಗೆ ಅಯಾಚಿತನಾಗಿ ಬಂದುದನ್ನು ಕಂಡು ಆಶ್ಚರ್ಯಗೊಂಡು ಉತ್ತಮವಾದ ಆಸನವನ್ನು ಕೊಟ್ಟು ಕುಳ್ಳಿರಿಸಿ ವಿಧಿವತ್ತಾಗಿ ಪೂಜಿಸಿದನು. ಹೀಗೆ ಪೂಜಿತನಾದ ಮಹಾತ್ಮನಾದ ದೇವದಾಸನು ಶೈವರಲ್ಲದ ಸಮಸ್ತ ಪುರಜನರಿಗೂ ಯಥಾ ವಿಧಿಯಾಗಿ ಶಿವದೀಕ್ಷೆಯನ್ನಿತ್ತು ಧರ್ಮಾರ್ಥಕಾಮಮೋಕ್ಷ ಪ್ರದಾಯಕವಾದ ಶಿವ ಪಂಚಾಕ್ಷರೀ ಮಂತ್ರೋಪದೇಶವನ್ನುಮಾಡಿ ಶಿವಪೂಜಾ ವಿಧಿಯನ್ನು ವಿಧಿವತ್ತಾಗಿ ಅವರೆಲ್ಲರಿಗೂ ಉಪದೇಶಿಸಿದನು.

ಹೀಗೆ ಮಾಡಿ ದೇವದಾಸನು ಆಮೋದಪಟ್ಟಣಕ್ಕೆ ಹಿಂದಿರುಗಿ ಬಂದು ತನ್ನ ಪತ್ನಿಯಿಂದ ಪೂಜಿತನಾಗಿ ಸಮಸ್ತ ಬಂಧುಗಳಿಂದ ಕೂಡಿಕೊಂಡು ತನ್ನ ಪುತ್ರನಾದ ಬಾಲಕನಾದ ಏಕೋರಾಮನಿಗೆ ಉಪನಯನವನ್ನು ವೇದೋಕ್ತವಾಗಿ ಮಾಡಿ ತಾನೇ ಅವನಿಗೆ ಗಾಯತ್ರೀಮಂತ್ರಪುರಸ್ಸರವಾಗಿ ಯಜ್ಞೋಪವೀತಧಾರಣೆಮಾಡಿಸಿ ನೆರೆದಿದ್ದ ವರೆಲ್ಲರಿಗೂ ಅನ್ನದಾನವನ್ನೂ ಭೂರಿದಕ್ಷಿಣೆಯನ್ನೂ ವಸ್ತ್ರ ಯಜ್ಞೋಪವೀತಗಳನ್ನೂ ನಾನಾವಿಧವರ್ಣರಂಜಿತವಾದ ಪೀತಾಂಬರಗಳನ್ನೂ ಉಡುಗೊರೆಯಾಗಿ ತನ್ನ ಕೈಯಾರ ನೀಡಿದನು. ತನ್ನ ಮಗನಾದ ಬುದ್ಧಿವಂತನಾದ ಏಕೋರಾಮನು ವೇದವೇದಾಂಗ ಸಮಸ್ತಶಾಸ್ತ್ರ ಪುರಾಣೇತಿಹಾಸಪಾರಂಗತನಾಗಿ ವಿವಾಹವಯಸ್ಕನಾಗಲು ಆ ಏಕೋ ರಾಮನಿಗೆ ವಿವಾಹವನ್ನು ಮಾಡಿದನು.

ಹೀಗಿರಲು ಕೈಲಾಸಪತಿಯಾದ ಉಮಾಪತಿಯಾದ ಶಿವನು ದೇವದಾಸನ ಮಂಗಳಕರವಾದ ಗೃಹಕ್ಕೆ ತಾನೇ ಸಾಕ್ಷಾತ್ತಾಗಿ ಬಂದನು. ಶಿವನು ತನ್ನ ಮನೆಗೆ ಅನಿರೀಕ್ಷಿತವಾಗಿ ತಾನೇ ಆಗಮಿಸಿದುದನ್ನು ಕಂಡು ದೇವದಾಸನು ಪತ್ನೀಸಮೇತನಾಗಿ ಶುಚಿರ್ಭೂತನಾಗಿ ಯಥಾವಿಧಿಯಾಗಿ ಪರಮೇಶ್ವರನನ್ನು ಅತ್ಯಂತ ಭಕ್ತಿಯಿಂದ ಪೂಜಿ ಸಿದನು. ಈ ರೀತಿ ದೇವದಾಸನಿಂದ ಪೂಜಿತನಾದ ತನ್ನ ಭಕ್ತರ ದುಃಖವನ್ನು ದೂರ ಮಾಡುವ ಆದ್ಯಂತ ರಹಿತನಾದ ಶಿವನು ದೇವದಾಸನನ್ನು ಕುರಿತು ಮೃದುಮಧುರವಾಗಿ ಎಲೈ ದೇವದಾಸನೇ ನೀನು ಜಗತ್ತೆಲ್ಲವನ್ನೂ ಶೈವಮತವನ್ನಾಗಿ ಮಾಡಿದೆ. ಇನ್ನು ನೀನು ಸಮಸ್ತ ಜನರಿಂದ ಪೂಜಿತನಾಗುವ ಗುರುಸ್ಥಾನದಲ್ಲಿ ನಿನ್ನ ಮಗನಾದ ಮಹಾ ಭಾಗ್ಯವಂತನಾದ ಏಕೋರಾಮನಿಗೆ ಅಭಿಷೇಕ ಮಾಡು. ಏಕೋರಾಮನಿಗೆ ರುದ್ರನೆಂಬ ಮಗನಾಗುವನು. ಅವನಿಗೆ ಸಂಪದ್ಯುಕ್ತನಾದ ಕಾಲಸೇನನೆಂಬ ಮಗನು ಹುಟ್ಟುವನು. ರುದ್ರನಿಗೂ ಕಾಲಸೇನನಿಗೂ ಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ಕನ್ಯೆಯರು ಪತ್ನಿಯ ರಾಗುವರು ಎಂದು ನುಡಿದು ಶಿವನು ಅಂತರ್ಧಾನನಾದನು.

ಶಿವನ ಈ ವಾಕ್ಯವನ್ನು ಕೇಳಿ ದೇವದಾಸನು ಬಹಳ ಸಂತೋಷಪಟ್ಟವನಾಗಿ ಸಮಸ್ತ ಗುಣ ಸಮನ್ವಿತನಾದ ತನ್ನ ಪುತ್ರ ಏಕೋರಾಮನನ್ನು ಸಮಸ್ತ ಶೈವ



ದೇವಾಂಗನು ಬೌದ್ಧರನೇಕರಿಗೆ ಶಿವ ದೀಕ್ಷೆಯಂಗ್ಯದು ದೇವಾಂಗ ವಂಶಜನಾದ ಏಕೋರಾಮಾರ್ಯರಿಗೆ
ರಾಜ್ಯಪಟ್ಟಾಭಿಷೇಕ ಮಾಡಿದ ದೇವರ ದಾಸಮ್ಮಯ್ಯವತಾರ ಸಮಾಪ್ತಿ.

ಚಿತ್ರ: ದೇವಾಂಗಮಠ ಪ್ರಕಾಶಿಕೆ ಕೃಪೆಯಿಂದ

ಮಠದ ಗುರುಪೀಠದಲ್ಲಿ ಪಟ್ಟಾಭಿಷೇಕ ಮಾಡಿದನು. ಶಿವನಿಂದ ಆಜ್ಞಾಪಿಸಲ್ಪಟ್ಟ ಸಕಲ ಕಾರ್ಯವನ್ನೂ ದೇವದಾಸನು ನೆರವೇರಿಸಿ ಪತ್ನೀಸಮೇತನಾಗಿ ಶಿವನನ್ನು ಸದಾ ಹೃದಯದಲ್ಲಿ ಧ್ಯಾನಿಸುತ್ತಾ ಶಿವಸಾಯುಜ್ಯವನ್ನು ಹೊಂದಿದನು. ಈ ದೇವದಾಸ ಮಹಾತ್ಮೆಯನ್ನು ಯಾರು ಪಠಿಸುವರೋ ಕೇಳುವರೋ ಅವರ ಗೃಹದಲ್ಲಿ ಲಕ್ಷ್ಮಿಯು ಸದಾ ವಾಸಿಸುವಳು.

ಇಲ್ಲಿಗೆ ಬ್ರಹ್ಮಾಂಡಪುರಾಣದ ಬ್ರಹ್ಮನಾರದ ಸಂವಾದ ರೂಪ ಉತ್ತರಖಂಡದ ದೇವಾಂಗಚರಿತ್ರೆಯಲ್ಲಿ ದೇವದಾಸಾವತಾರ ಕಥಾ ಪರಿಪೂರ್ತಿ ಎಂಬಲ್ಲಿಗೆ ಇಪ್ಪತ್ತೆಂಟನೆಯ ಅಧ್ಯಾಯವು ಮುಗಿದುದು.

ಇಪ್ಪತ್ತೊಂಬತ್ತನೆಯ ಅಧ್ಯಾಯ

ದೇವಾಂಗವಂಶಕಥನ

ಅನಂತರ ಆಮೋದ ಪಟ್ಟಣಕ್ಕೆ ಒಡೆಯನಾದ ದೇವದಾಸನ ಮಗನಾದ ಏಕೋರಾಮನಿಗೆ ಶಿವನು ಹೇಳಿದಂತೆ ಪರಾಕ್ರಮಶಾಲಿಯಾದ ರುದ್ರನೆಂಬ ಮಗನು ಜನಿಸಿದನು. ಮಹಾಬಾಹುವಾದ ಏಕೋರಾಮನು ತನ್ನ ಪುತ್ರನಾದ ರುದ್ರನನ್ನು ಅತ್ಯಂತ ಪ್ರೀತಿಯಿಂದ ಗುರುಪೀಠದಲ್ಲಿ ಕುಳ್ಳಿರಿಸಿ ಅಭಿಷೇಕ ಮಾಡಿ ಸ್ವರ್ಗವಾಸಿಯಾದನು ಮಹಾಪರಾಕ್ರಮಿಯಾದ ರುದ್ರನು ಶಿಷ್ಯವೃಂದವನ್ನು ಪರಿಪಾಲಿಸುತ್ತ ರಮಣೀಯಗಳಾದ ಅನೇಕ ವಸ್ತ್ರಗಳನ್ನು ನಿರ್ಮಿಸಿ ಅವುಗಳನ್ನು ಈ ಭೂಲೋಕದ ಸಮಸ್ತಜನರಿಗೂ ವಿತರಣೆ ಮಾಡುತ್ತಿದ್ದನು. ಆಮೋದಪಟ್ಟಣಕ್ಕೆ ಒಡೆಯನಾದ ರುದ್ರನು, ಈಶ್ವರನು ಹೇಳಿದ್ದಂತೆ ಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ಕನ್ಯೆಯನ್ನು ಯಥಾವಿಧಿಯಾಗಿ ವಿವಾಹವಾಗಿ ಸರ್ವಲಕ್ಷಣಸಂಪನ್ನನಾದ ಕಾಲ ಸೇನನೆಂಬ ತೇಜಸ್ವಿಯಾದ ಪುತ್ರನನ್ನು ಪಡೆದನು. ಆ ಪುತ್ರನು ತನ್ನ ಬಾಲ ಲೀಲೆಗಳಿಂದ ತಾಯಿ ತಂದೆಗಳನ್ನು ಬಂಧುವರ್ಗದವರನ್ನೂ ಸಂತೋಷಪಡಿಸುತ್ತ, ಸಮಸ್ತವಿದ್ಯಾಪಾರಂಗತನಾಗಿ ವಿವಾಹವಯಸ್ಕನಾಗಲು ಅವನಿಗೆ ರುದ್ರನು ತ್ರಿಲಿಂಗದೇಶಕ್ಕೆ ಅಧಿಪತಿಯಾದ ಶೈವನಾದ, ಸತ್ಯವಾದಿಯಾದ, ಸೋಮನಾಥ ರಾಜನ ಪುತ್ರಿಯಾದ ದುರ್ಗಳೆಯನ್ನು ವಿವಾಹ ಮಾಡಿದನು.

ಕೆಲವು ಕಾಲ ಕಳೆಯಲು ರುದ್ರನು ತನ್ನ ಮಗ ಕಾಲಸೇನನಿಗೆ ಆಮೋದ ಪಟ್ಟಣದ ಒಡೆತನವನ್ನು ವಹಿಸಿಕೊಟ್ಟು ತಾನು ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿ ಪತ್ನೀಸಮೇತನಾಗಿ ತಪಸ್ಸಿಗಾಗಿ ಕಾಡಿಗೆ ಹೋದನು. ಆ ಕಾಲಸೇನನು ಆಮೋದ ಪಟ್ಟಣವನ್ನು ಪಾಲಿಸುತ್ತ, ಅನೇಕ ವಸ್ತ್ರಗಳನ್ನು ನೇಯ್ದು ಸಮಸ್ತರಿಗೂ ಕೊಡುತ್ತಿದ್ದನು. ಕಾಲಸೇನನು ಧರ್ಮದಿಂದ ಪೃಥ್ವಿಯನ್ನು ಪಾಲಿಸುತ್ತ ದಿವ್ಯಾಂಬರಗಳನ್ನು ನೇಯುತ್ತ ಸತ್ಯಧರ್ಮನಿಷ್ಠೆಯಿಂದಿದ್ದನು. ಪರಮತೇಜಸ್ವಿಯಾದ ಕಾಲಸೇನನಿಗೆ ಸಂತಾನಪ್ರಾಪ್ತಿಯಾಗಲಿಲ್ಲವಾದುದರಿಂದ ಅತ್ಯಂತ ಚಿಂತಾಕ್ರಾಂತನಾಗಿ ಪುತ್ರಕಾಮಿಯಾದ ಅವನು ಸಾವಿರಮಂದಿ ಬ್ರಹ್ಮಕನ್ಯೆಯರನ್ನು ಮದುವೆಯಾದನು. ಅವರಲ್ಲಿ ಯಾರಿಗೂ ಸಂತಾನಪ್ರಾಪ್ತಿಯಾಗಲಿಲ್ಲ. ಮಕ್ಕಳಿಲ್ಲದ ಚಿಂತೆಯಿಂದ ಕೂಡಿದ ಕಾಲಸೇನನು ದುಃಖಾಕುಲನಾಗಿ ಬಹು ಭಕ್ತಿಯಿಂದ ಶಿವನನ್ನು ಅರ್ಚಿಸುತ್ತಾ ಶಿವಭಕ್ತಿ ಶಿವಧ್ಯಾನಪರಾಯಣನಾಗಿ ನಿಶ್ಚಲ ಮನಸ್ಸಿನಿಂದ ನಿಯಮಿತ ಆಹಾರವುಳ್ಳವನಾಗಿ ಪರಮಾತ್ಮನನ್ನು ಪೂಜಿಸಿದನು. ಮಹಾದೇವನಾದ ಶಿವನು ಅವನ ದೃಢಭಕ್ತಿಗೂ ಪೂಜೆಗೂ ಮೆಚ್ಚಿ ಅವನಿಗೆ ಹತ್ತುಸಾವಿರ ಮಕ್ಕಳಾಗುವಂತೆ ಅನುಗ್ರಹಿಸಿದನು.

ಪರಮಾತ್ಮನ ಅನುಗ್ರಹದಿಂದ ಆ ಕಾಲಸೇನನು ಹತ್ತುಸಾವಿರ ಮಕ್ಕಳನ್ನು ಪಡೆದು ಸಂತೋಷದಿಂದ ಕೂಡಿದವನಾಗಿ ಧರ್ಮದಿಂದ ರಾಜ್ಯವಾಳುತ್ತಾ ಇದ್ದನು. ಕಾಲಸೇನನ ಸಹಸ್ರಾರು ಪುತ್ರರಲ್ಲಿ ಕೆಲವರ ಹೆಸರುಗಳನ್ನು ಕ್ರಮವಾಗಿ ಹೇಳುತ್ತೇನೆ. ಎಲೈ ಋಷಿಗಳಿರಾ ಕೇಳಿರಿ. ಮೊದಲನೆಯವನು ಶೂರಸೇನನು. ಎರಡನೆಯವನು ಭದ್ರಸೇನನು. ಅನಂತರ ಕ್ರಮವಾಗಿ ಸತ್ಯಸೇನ–ಚಿತ್ರಸೇನ–ಸುಷೇಣ–ಯಜ್ಞಸೇನ-ಸೇನಾಬಿಂದು–ಯಜ್ಞಬಿಂದು–ತೃಣಬಿಂದು–ಜಟಾಧರ–ಜಯವರ್ಮ–ಜಯಶೀಲ–ಜಯಬಂಧು ಜಿತೇಂದ್ರಿಯ –ಸತ್ಯವ್ರತ–ಸತ್ಯವಾದಿ–ಸುಂದರಾಂಗ–ತ್ರಿಲೋಚನ–ಸಾಂಬ–ಸಾರಸ್ವತ–ಚೈತ್ರ-ಸರ್ವಜ್ಞ-ಸರ್ವಭಾವಕ–ಸಂವಿಧಾನ–ಸಂಪ್ರಹಾರ–ಸಮಗ್ರ–ಸತ್ಯಭಾಷಣ–ಸರಸ-ಸಾಹಸಿ-ಸಹಸ್ರಾರ್ಕ-ಸುಮುಖ-ಸುರಾನಂದ-ಸುಲಭ-ಸುಂದರ-ಸುಂದರೀಪ್ರಿಯ-ಶತಾನಂದ-ಶಂಭುದೇವ–ಶಂಕರ–ಮತ್ತು ಶಿವದರ್ಶನ ಇವರೇ ಮೊದಲಾದವರು. ಕಾಲಸೇನನು ಆ ಪುತ್ರರಿಗೆ ಋಷಿವರ್ಯರಿಂದ ವೇದೋಕ್ತವಾಗಿ ಉಪನಯನವನ್ನು ಮಾಡಿಸಿ ಗುರುಕುಲಗಳಲ್ಲಿ ವಿದ್ಯಾಭ್ಯಾಸವನ್ನು ಸಾಂಗವಾಗಿಮಾಡಿಸಿ ಸುಂದರಿಯರಾದ ಬ್ರಾಹ್ಮಣಕನ್ಯೆಯರನ್ನು ವಿವಾಹ ಮಾಡಿದನು. ಈ ಪ್ರಕಾರ ಕಾಲಸೇನನು ತನ್ನ ಮಕ್ಕಳಿಗೆ ಯಾವ ಕಾಲದಲ್ಲಿ ಯಾರಿಂದ ಸಂಸ್ಕಾರ ಮಾಡಿಸಿದನೋ ಆ ಮನ್ವಾದಿ ಋಷಿಗಳೇ ಆ ಪುತ್ರರಿಗೆ ಕುಲಕೂಟಸ್ಥರಾದರು. ಆ ಪುತ್ರರು ಮನ್ವಾದಿ ಋಷಿಗೋತ್ರಭೇದದಿಂದ ತಮ್ಮ ತಮ್ಮಲ್ಲಿ ದೇಹಸಂಬಂಧವನ್ನು ಬೆಳೆಸಲು ಅರ್ಹರಾದರು.

ಅನಂತರ ಮಹಾಬಾಹುವಾದ ಕಾಲಸೇನನು ತನ್ನ ಜ್ಯೇಷ್ಠ ಪುತ್ರನಾದ ಶೂರ ಸೇನನನ್ನು ಅತ್ಯಾದರದಿಂದ ಗುರುಪೀಠಕ್ಕೆ ನೇಮಿಸಿದನು. ತೇಜಸ್ವಿಯಾದ ಪರಾಕ್ರಮಿ ಯಾದ ಶೂರಸೇನನು ಗುರುಪೀಠವನ್ನು ಪಾಲಿಸುತ್ತ ಸಹೋದರರೆಲ್ಲರಿಂದ ಕೂಡಿಕೊಂಡು ವಸ್ತ್ರಗಳನ್ನು ನೇಯ್ದು ಸಮಸ್ತ ಜನರಿಗೂ ಕೊಟ್ಟನು. ಕಾಲಸೇನನು ಪುತ್ರರೆಲ್ಲರಿಂದ ಕೂಡಿಕೊಂಡು ಆಮೋದ ಪಟ್ಟಣವನ್ನು ಧರ್ಮದಿಂದ ಪಾಲಿಸುತ್ತ ವಸ್ತ್ರ ಗಳನ್ನು ನೇಯ್ದು ಎಲ್ಲರಿಗೂ ಕೊಡುತ್ತ ಸುಖದಿಂದ ಇದ್ದನು. ಹೀಗಿರಲು ಪರಿಠಾಣವೆಂಬ ಪುರವನ್ನು ಶಾಲೀವಾಹನನ ಮಗನಾದ ಮಹಾಬಲಶಾಲಿಯಾದ ಶಕ್ತಿಯೆಂಬುವನು ಪಾಲಿಸುತ್ತಿದ್ದನು. ಆ ಪಟ್ಟಣದಲ್ಲಿ ವೇದಪಾರಂಗತನಾದ ಸೋಮಶರ್ಮನೆಂಬ ಮಕ್ಕಳಿಲ್ಲದ ಬ್ರಾಹ್ಮಣನೊಬ್ಬನಿದ್ದನು. ತನಗೆ ಮಕ್ಕಳಿಲ್ಲದುದರಿಂದ ಅವನು ಪುತ್ರಾರ್ಥಿ ಯಾಗಿ ಪ್ರಸಿದ್ಧ ಪುಣ್ಯಕ್ಷೇತ್ರವಾದ ಕುಲಸಿದ್ಧವಟಕ್ಷೇತ್ರಕ್ಕೆ ಬಂದನು. ಅಲ್ಲಿ ಎಲ್ಲ ರಿಂದಲೂ ಪೂಜಿಸಲ್ಪಟ್ಟ ಸಮಸ್ತರಿಗೂ ಬೇಡಿದ ವರಗಳನ್ನು ಕೊಡುವ ಚಂದ್ರ ಮೌಳೀಶ್ವರನ ದೇವಾಲಯವೊಂದಿತ್ತು. ಆ ಕ್ಷೇತ್ರದಲ್ಲಿ ಆ ಸೋಮಶರ್ಮನು ಪುತ್ರಾ ಪೇಕ್ಷೆಯಿಂದ ನಿತ್ಯವೂ ಆ ಚಂದ್ರಮೌಳೀಶ್ವರನನ್ನು ಪೂಜಿಸುತ್ತ ಭಿಕ್ಷಾಟನೆಯಿಂದ ಜೀವಿಸುತ್ತಾ ಚಂದ್ರಮೌಳೀಶ್ವರನ ಆಲಯದಲ್ಲೇ ವಾಸಿಸುತ್ತಿದ್ದನು.

ಹೀಗಿರುವಲ್ಲಿ ಧನಪಾಲನೆಂಬ ವೈಶ್ಯನೊಬ್ಬನು ಪುತ್ರಾಪೇಕ್ಷೆಯಿಂದ ಆ ಕುಲ ಸಿದ್ಧವಟ ಕ್ಷೇತ್ರಕ್ಕೆ ಬಂದು ಚಂದ್ರಮೌಳೀಶ್ವರನನ್ನು ಅನೇಕ ರತ್ನಗಳಿಂದ ಪೂಜಿಸುತ್ತಾ ರಾತ್ರಿಯಾಗಲು ಆ ಆಲಯದಲ್ಲಿಯೇ ಮಲಗಿದ್ದನು. ಆ ಪೂಜೆಯಿಂದ ಚಂದ್ರ ಮೌಳೀಶ್ವರನು ಪ್ರಸನ್ನಗೊಂಡು ಆ ವೈಶ್ಯನನ್ನು ಕುರಿತು "ಎಲೈ ಧನಪಾಲನೇ ನಿನಗೆ ಮಗನನ್ನು ಕೊಟ್ಟೆನು" ಎಂದು ಆ ರಾತ್ರಿ ಅವನಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡು ನುಡಿದನು. ಇದರಿಂದಾಗಿ ಎಚ್ಚರಗೊಂಡ ಆ ವೈಶ್ಯನು ಸಂತುಷ್ಟನಾಗಿ ಶಿವಸ್ತುತಿ ಮಾಡುತ್ತ, ಆ ಶಿವಾಲಯದಲ್ಲಿ ಕುಣಿದಾಡುತ್ತಿದ್ದನು. ಆಗ ಅಲ್ಲಿ ಮಲಗಿದ್ದ ಸೋಮ ಶರ್ಮನು ಇವನ ಗದ್ದಲದಿಂದ ಎಚ್ಚೆತ್ತು ಆನಂದಭರಿತನಾಗಿ ಕುಣಿದಾಡುತ್ತಿರುವ ಆ ವೈಶ್ಯನನ್ನು ನೋಡಿ ಭಕ್ತಶಿಖಾಮಣಿಯೇ ಹೀಗೇಕೆ ಕುಣಿದಾಡುವೆ? ನೀನು ಸಂತುಷ್ಟನಾದಂತೆ ಕಾಣುವೆ. ನಿನ್ನ ಸಂತೋಷಕ್ಕೆ ಕಾರಣವೇನು? ಎಂದು ಕೇಳಿದನು. ಅದಕ್ಕೆ ವೈಶ್ಯನು ಎಲೈ ಬ್ರಾಹ್ಮಣೋತ್ತಮನೇ ನಾನು ಚಂದ್ರ ಮೌಳೀಶ್ವರನನ್ನು ಅನೇಕ ರತ್ನಗಳಿಂದ ಪೂಜಿಸಿದೆ. ಅದಕ್ಕೆ ಸಂತುಷ್ಟನಾದ ಕರುಣಾನಿಧಿಯಾದ ಪರಮಾತ್ಮನು ನನಗೆ ಪುತ್ರವರವನ್ನು ದಯಪಾಲಿಸಿದನು. ಮಕ್ಕಳಿಲ್ಲದ ನನಗೆ ಪುತ್ರವಂತನಾಗುವ ವರಪ್ರಾಪ್ತವಾದುದರಿಂದ ನಾನು ಇಷ್ಟು ಸಂತೋಷವಾಗಿರುವೆನೆಂದು ಹೇಳಿ, ಶಿವನಿಗೆ ಮತ್ತೆಮತ್ತೆ ನಮಸ್ಕರಿಸಿ, ಆ ವೈಶ್ಯನು ಅಲ್ಲಿಂದ ಹೊರಟುಹೋದನು.

ಆ ಸೋಮಶರ್ಮನು ಪರಮಾತ್ಮನು ವೈಶ್ಯನಿಗೆ ಪುತ್ರವರವನ್ನು ಕರುಣಿಸಿದುದನ್ನು ಕೇಳಿ ಹೊಟ್ಟೆಕಿಚ್ಚುಳ್ಳವನಾಗಿ ವ್ಯಸನಗೊಂಡು ಪರಮಾತ್ಮನನ್ನು ಕುರಿತು ಸಿಟ್ಟಿನಿಂದ ಹಾ! ಚಂದ್ರಮೌಳೀಶ್ವರಾ ನೀನೆಷ್ಟು ಪಕ್ಷಪಾತಮಾಡಿದೆ? ನನಗೇಕೆ ಪುತ್ರವರವನ್ನು ಕರುಣಿಸಲಿಲ್ಲ? ಆ ವೈಶ್ಯನಿಗೇಕೆ ಪುತ್ರವರವನ್ನು ಕೊಟ್ಟೆ? ನಾನು ಅವನಿಗಿಂತಲೂ ಮೊದಲೇ ನಿನ್ನಲ್ಲಿ ಬಂದು ನಿನ್ನನುಗ್ರಹವನ್ನು ಪಡೆಯಲು ಸೇವಿಸುತ್ತಿರುವೆನು. ಮೊದಲು ಬಂದ ನನ್ನನ್ನು ಬಿಟ್ಟು ಆಮೇಲೆ ಬಂದ ಅವನಿಗೆ ಹೇಗೆ ಪುತ್ರ ವರವನ್ನು ಕೊಟ್ಟೆ? ನೀನು ನಿರ್ದಯನೂ, ನಿಷ್ಕರುಣಿಯೂ ಆಗಿರುವೆ. ಆದುದ ರಿಂದಲೇ ನೀನು ಹೀಗೆ ಮಾಡಿದೆ. ನಾನೆಷ್ಟೋ ಬಾರಿ ಮಾಡಿದ ಪುಷ್ಪಪೂಜೆ ಯಿಂದ ನಿನಗೆ ಆನಂದವಾಗಲಿಲ್ಲವೇ? ಆ ವೈಶ್ಯನು ಒಂದು ಸಾರಿ ಮಾಡಿದ ಕಲ್ಲುಗಳ ಪೂಜೆಯಿಂದ ನಿನಗೆ ಸಂತೋಷವಾಯಿತಲ್ಲವೇ? ನಿನಗೆ ಶಿಲಾಪೂಜೆಯು ಇಷ್ಟವಾಗಿರುವುದರಿಂದಲೇ ಆ ವೈಶ್ಯನ ಶಿಲಾಪೂಜೆಗೆ ಸಂತುಷ್ಟನಾಗಿರುವೆ. ಶಿವನೇ ನಿನ್ನಪೂಜೆಗೋಸ್ಕರ ಪುಷ್ಪಗಳನ್ನು ಆಯ್ದು ಆಯ್ದು ನನ್ನ ಕೈ ಜಡ್ಡುಕಟ್ಟಿರುವುದು. ಪತ್ರಗಳನ್ನು ಹೊತ್ತುಹೊತ್ತು ತಲೆಗೂದಲುಗಳೆಲ್ಲಾ ಉದುರಿ ಹೋದುವು. ನಾನು ಅತ್ಯಂತ ಕಷ್ಟದಿಂದ ಈರೀತಿ ಮಾಡಿದ ಪುಷ್ಪಪೂಜೆಯಿಂದ ಸಂತುಷ್ಟನಾಗದೆ ಆ ವೈಶ್ಯನ ಪಾಷಾಣಪೂಜೆಯಿಂದ ತೃಪ್ತಿಪಟ್ಟಿರುವೆ. ಸಣ್ಣಸಣ್ಣ ಕಲ್ಲುಗಳ ಪೂಜೆಯಿಂದ ತೃಪ್ತಿಗೊಂಡವನಿಗೆ ಇನ್ನುಮೇಲೆ ನಾನಾದರೂ ದೊಡ್ಡದೊಡ್ಡ ಕಲ್ಲು ಗಳಿಂದ ಪೂಜಿಸಿದರೆ ಹೆಚ್ಚುತೃಪ್ತಿಯಾಗಬಹುದು? ಎಂದು ನುಡಿದು ಆ ದುರ್ಮತಿಯಾದ ವಿಪ್ರನು ಒಂದು ದೊಡ್ಡಶಿಲೆಯನ್ನು ತಂದು ಈಗ ನೀನು ಸಂತುಷ್ಟನಾಗೆಂದು ಹೇಳಿ ಅದನ್ನು ಆ ಲಿಂಗದ ಮಸ್ತಕದ ಮೇಲೆ ಎತ್ತಿಹಾಕಿದನು.

ಆ ಮಹತ್ತರವಾದ ಶಿಲೆಯು ಎಸೆತದಿಂದ ಆ ಲಿಂಗವು ಸೀಳಿಹೋಯಿತು. ಚಂದ್ರಮೌಳಿಯಾದ ಪರಮಾತ್ಮನು ಆ ಬ್ರಾಹ್ಮಣನ ಅಕೃತ್ಯಕ್ಕೆ ಸಿಟ್ಟುಗೊಂಡು ಅವನನ್ನು ಕುರಿತು ಅಶರೀರಿಯಾಗಿ ಎಲೈ ದುರಾತ್ಮಾ ನೀನು ಮಾಡಿದ ಈ ದುಸ್ಸಾಹಸವು ನಿನ್ನ ಹಾನಿಗೆ ಕಾರಣವಾಗಿರುವುದು. ಚಪಲಾತ್ಮಾ ಪಾಪಿಯಾದ ನಿನಗೆ ನಾನು ಹೇಗೆ ಅನುಗ್ರಹಿಸಲಿ? ನಿನ್ನ ಕೋಪವು ನಿನ್ನನ್ನೇ ಸುಡುವುದು. ನೀನು ಮಾಡಿದ ಈ ಪೂಜೆಯಿಂದ ನಿಷ್ಫಲನಾದ ಪುತ್ರನನ್ನು ಕೊಡುವೆನು. ನಿನ್ನ ದುರ್ವರ್ತನೆಯಿಂದ ನನ್ನ ಮಸ್ತಕವು ಹೇಗೆ ಸೀಳಿತೋ ಹಾಗೆಯೇ ನಿನಗೆ ಮಗನು ಹುಟ್ಟಿದ ಕೂಡಲೇ ನಿನ್ನ ಶಿರಸ್ಸು ಸಹಸ್ರಹೋಳಾಗುವುದು. ನೀನು ಈ ರೀತಿ ಮಾಡಿದ ಪಾಪಕರ್ಮದಿಂದ ನಿನ್ನ ಮಗನು ಜಾತಿಭ್ರಷ್ಟನಾಗುವನು ಎಂದು ಚಂದ್ರಮೌಳೀಶ್ವರನು ನುಡಿದು ಸುಮ್ಮನಾದನು.

ಇದನ್ನು ಕೇಳಿ ಸೋಮಶರ್ಮನು ಚಿಂತಾಹರ್ಷಗಳಿಂದ ಕೂಡಿದವನಾಗಿ ಪರಿಠಾಣನಗರಕ್ಕೆ ಬಂದು ತನ್ನ ಪತ್ನಿಗೆ ಎಲ್ಲಾ ಸಂಗತಿಯನ್ನು ಸಾಂಗವಾಗಿ ತಿಳಿಸಿದನು. ಈ ಸಂಗತಿಯನ್ನು ಕೇಳಿ ಚಿಂತಾಕುಲೆಯಾದ ಆ ಸೋಮಶರ್ಮನ ಶೀಲಸಂಪನ್ನೆಯಾದ ಸುಶೀಲೆಯೆಂಬ ಪತ್ನಿಯು ಸ್ವಲ್ಪಕಾಲ ಕಳೆದಮೇಲೆ ಗರ್ಭವನ್ನು ಧರಿಸಿ ಪುತ್ರನನ್ನು ಹಡೆದಳು. ಮಗನು ಹುಟ್ಟಿದ ಕೂಡಲೇ ಘೋರವಾದ ಶಿವಶಾಪದಿಂದ ಸೋಮಶರ್ಮನ ತಲೆಯು ಸಹಸ್ರಹೋಳಾಗಿ ಸಿಡಿದು ಅವನು ಸತ್ತನು. ಪತಿವ್ರತೆಯಾದ ಸುಶೀಲೆಯು ಅವನೊಡನೆ ಸಹಗಮಿಸಿ ಅಗ್ನಿಪ್ರವೇಶಮಾಡಿ ಸತ್ತಳು.

ತಾಯಿ ತಂದೆಗಳಿಲ್ಲದ ಬಾಲಕನನ್ನು ಅವನ ಸೋದರಮಾವನಾದ ಯಜ್ಞಶರ್ಮನೆಂಬುವನು ತನ್ನ ಪತ್ನಿಯ ವಶಕ್ಕೆ ಕೊಟ್ಟು ಅವನಿಗೆ ದ್ರುಮಳನೆಂದು ನಾಮಕರಣಮಾಡಿ ಪೋಷಿಸಿದನು. ಸೋದರಮಾವನಿಂದ ಪೋಷಿಸಲ್ಪಟ್ಟ ಆ ದ್ರುಮಳನು ದಿನೇದಿನೇ ಪ್ರವರ್ಧಮಾನನಾಗಿ ಬೆಳೆಯುತ್ತಿದ್ದನು. ಅವನ ಸೋದರಮಾವನು ಅವನಿಗೆ ಉಪನಯನವನ್ನೂ ವೇದಾಧ್ಯಯನವನ್ನೂ ಮಾಡಿಸಿದನು. ಆದರೆ ಬ್ರಾಹ್ಮಣ ಧರ್ಮದಲ್ಲಿ ನಿರಾಸಕ್ತನಾದ ಆ ದ್ರುಮಳನು ತನ್ನ ಸೋದರಮಾವನ ಅಪ್ಪಣೆಯಂತೆ ಯಜ್ಞಕಾಷ್ಠಗಳನ್ನು ತರುವುದಕ್ಕೆ ಒಬ್ಬನೇ ಕಾಡಿಗೆ ಹೋಗುತ್ತಿದ್ದು, ಶಿವಶಾಪದಿಂದ ವಂಚಿತನಾದ ಅವನು ಬ್ರಾಹ್ಮಣಧರ್ಮಕ್ಕೆ ವಿರುದ್ಧವಾದ ಕರ್ಮಗಳಲ್ಲಿಯೇ ಆಸಕ್ತನಾಗಿ ಪಶುಹಿಂಸಕನಾಗಿ ಆ ಕಾಡಿನಲ್ಲಿ ಒಬ್ಬನೇ ಧನುರ್ವಿದ್ಯಾಭ್ಯಾಸಮಾಡುತ್ತಾ ಸ್ವಸಾಮರ್ಥ್ಯದಿಂದ ಅದರಲ್ಲಿ ಪ್ರವೀಣನಾದನು.

ಹೀಗಿರಲಾಗಿ ಎಂದಿನಂತೆ ಅವನು ಒಂದು ದಿನ ಅರಣ್ಯಕ್ಕೆ ಹೋದಾಗ ಅಲ್ಲಿ ಒಂದು ಸಿಂಹವು ಒಂದು ಹೆಣ್ಣುನಾಯಿಯೊಡನೆ ರತಿಕ್ರೀಡೆಯಾಡುತ್ತಿರುವುದನ್ನು ಕಂಡು ಆಶ್ಚರ್ಯದಿಂದ ಅದನ್ನೇ ನೋಡುತ್ತ ನಿಂತನು. ಆ ಹೆಣ್ಣು ನಾಯಿಯು ಗ್ರಾಮದ ನಾಯಿಯಾದುದರಿಂದ ಅದು ಅನಂತರ ಪರಿಠಾಣಪುರವನ್ನು ಸೇರಿ ರಾಜಾಲಯವನ್ನು ಹೊಕ್ಕಿತು. ದ್ರುಮಳನು ಆ ಹೆಣ್ಣುನಾಯಿಯನ್ನು ಹಿಂಬಾಲಿಸಿ ಅದು ರಾಜನ ಅರಮನೆಯನ್ನು ಸೇರಿದುದನ್ನು ಕಂಡು ತನ್ನ ಮನೆಗೆ ಹೋದನು. ಕೆಲವು ಕಾಲದ ಮೇಲೆ ಆ ಹೆಣ್ಣುನಾಯಿಯು ಸಿಂಹದ ಬಣ್ಣವುಳ್ಳ ಎರಡು ಮರಿಗಳಿಗೆ ಜನ್ಮವಿತ್ತಿತು. ಆ ಮರಿಗಳು ಆ ಊರಿನಲ್ಲಿ ಎಂಜಲನ್ನವನ್ನು ತಿನ್ನುತ್ತ ಬೆಳೆಯುತ್ತಿದ್ದುವು.

ಆ ಪಟ್ಟಣದ ರಾಜನಾದ ಶಕ್ತಿರಾಜನು ನಿತ್ಯವೂ ತನ್ನ ಉಪವನಕ್ಕೆ ಹೋಗಿ ಅಲ್ಲಿ ಗುರಿಹೊಡೆಯುವುದನ್ನು ಅಭ್ಯಾಸಮಾಡುತ್ತಾ ಅನೇಕ ಬಾಣಗಳನ್ನು ಅಲ್ಲಿನ ವೃಕ್ಷಗಳಿಗೆ ಗುರಿಯಿಟ್ಟು ಹೊಡೆಯುತ್ತಿದ್ದನು. ಬಲಶಾಲಿಯಾದ ಆ ರಾಜನು ಒಂದು ಸಾರಿ ಪುರಜನರೆಲ್ಲರ ಮುಂದೆ ಒಂದು ತಾಳೆಯ ಮರಕ್ಕೆ ಗುರಿಯಿಟ್ಟು ಒಂದೇ ಬಾಣದಿಂದ ಅದರ ಕಾಂಡವನ್ನು ಕಡಿದು ಕೆಡವಿದನು. ಪುರಜನರು ರಾಜನ ಈ ಅದ್ಭುತ

ಪರಾಕ್ರಮಕಾರ್ಯವನ್ನು ನೋಡಿ ಸಂತೋಷಪಟ್ಟು ಅವನನ್ನು ಅನೇಕ ವಿಧವಾಗಿ ಹೊಗಳಿದರು. ಇದನ್ನು ನೋಡುತ್ತಾ ಅಲ್ಲೇ ಇದ್ದ ಧನುರ್ವಿದ್ಯಾವಿಶಾರದನಾದ ಆ ದ್ರುಮಳನು ರಾಜನಿಗಾದ ಪ್ರಶಂಸೆಯನ್ನು ನೋಡಿ ಸಹಿಸಲಾರದೆ ಶಕ್ತಿರಾಜನನ್ನು ಸೋಲಿಸುವೆನೆಂದು ಮನಸ್ಸಿನಲ್ಲಿ ನಿಶ್ಚಯಿಸಿ, ಅವನನ್ನು ನೋಡಿ ಎಲೈ ಶಕ್ತಿರಾಜನೇ ನೀನು ಈ ತಾಲವೃಕ್ಷದ ಬುಡವನ್ನು ಒಂದೇಬಾಣದಿಂದ ಕೆಡವಿದರೆ ಧೀರನೇ ಸರಿ. ಈ ವೃಕ್ಷದ ಕಾಂಡವನ್ನು ಕೆಡವಿದ ಮಾತ್ರಕ್ಕೇ ನೀನು ಪ್ರಸಂಶೆಗೆ ಅರ್ಹನಾಗಲಾರೆ ಎಂದು ಕುಹಕವಾಡಿದನು.

ದ್ರುಮಳನ ಆ ಮಾತನ್ನು ಕೇಳಿ ರಾಜನು ಕೋಪದಿಂದ ಧನುರ್ಬಾಣಗಳನ್ನು ತೆಗೆದುಕೊಂಡು ಅವನನ್ನು ನೋಡಿ ಅವನಿಗೆದುರಾಗಿ ಬಂದು ಅವನನ್ನು ಅಡ್ಡಗಟ್ಟಿ ಎಲೈ ಬ್ರಾಹ್ಮಣಾ, ನೀನು ಸುಮ್ಮನೆ ಬೊಗಳಿ ಹೋಗುವೆಯೆಂದು ತಿಳಿದಿರುವೆಯಾ ? ನಾನು ನಿನ್ನನ್ನು ಮುಂದಕ್ಕೆ ಹೋಗಗೊಡುವುದಿಲ್ಲ ನಿಲ್ಲು. ನೀನು ಶೂರನಷ್ಟೆ ? ಇಗೋ ಈ ಧ ನು ರ್ ಬಾ ಣ ಗ ಳ ನ್ನು ತೆಗೆದುಕೋ. ಎಲ್ಲಿ ನಿನ್ನ ಪರಾಕ್ರಮವನ್ನು ತೋರಿಸು ? ಈ ತಾಲವೃಕ್ಷದ ಬುಡವನ್ನು ಒಂದೇ ಬಾಣದಿಂದ ಭೇದಿಸು ನೋಡೋಣವೆಂದು ಹೇಳಿದನು ದ್ರುಮಳನು ರಾಜನ ಮಾತನ್ನು ಕೇಳಿ ಆ ಧನುಸ್ಸನ್ನು ಕೈಗೆತ್ತಿಕೊಂಡು ಲೀಲಾಜಾಲವಾಗಿ ಹೆದೆಯೇರಿಸಿ ಠೇಂಕಾರಮಾಡಿ ಬಾಣವನ್ನು ಆಕರ್ಣಾಂತವಾಗಿ ಎಳೆದು ಸ್ಥಿರನಾಗಿ ನಿಂತು ಸಮಸ್ತರೂ ನೋಡುತ್ತಿರು ವಂತೆಯೇ ಒಂದೇ ಬಾಣವನ್ನು ಮಿಂಚಿನವೇಗದಿಂದ ಪ್ರಯೋಗಿಸಿ ಆ ತಾಲವೃಕ್ಷದ ಬುಡವನ್ನು ಭೇದಿಸಿ ಕೆಡವಿದನು. ಇದನ್ನು ನೋಡಿ ಆಶ್ಚರ್ಯಯುಕ್ತನಾದ ಶಕ್ತಿರಾಜನು ಅತ್ಯಂತ ಸಂತೋಷದಿಂದ ದ್ರುಮಳನನ್ನು ಅಪ್ಪಿಕೊಂಡು ಅವನನ್ನು ಕುರಿತು ಎಲೈ ಬ್ರಾಹ್ಮಣಾ ನಿನ್ನ ಪರಾಕ್ರಮಕ್ಕೆ ನಾನು ಮೆಚ್ಚಿದೆ. ನಿನಗೇನು ಬೇಕು ? ಬೇಡು ಕೊಡುವೆನೆಂದು ಹೇಳಿದನು. ಆ ಮಾತಿಗೆ ದ್ರುಮಳನು ತನ್ನಲ್ಲಿ ರಾಜನು ಪ್ರಸನ್ನನಾಗಿರುವುದನ್ನು ಕಂಡು ಹರ್ಷಗೊಂಡು ಸಿಂಹದಿಂದ ಜನಿಸಿದ ಆ ಹೆಣ್ಣು ನಾಯಿಯ ಎರಡು ಮರಿಗಳನ್ನು ಬೇಡಿದನು. ರಾಜನು ಅತ್ಯಂತ ಸಂತೋಷದಿಂದ ಸಿಂಹಕ್ಕೆ ಹುಟ್ಟಿದ ಆ ಎರಡು ನಾಯಿಮರಿಗಳನ್ನೂ, ಅವನ ಜೀವನಕ್ಕಾಗಿ ಕೆಲವು ಗ್ರಾಮಗಳನ್ನೂ, ಅನೇಕಾಭರಣಗಳನ್ನೂ ಕೊಟ್ಟನಲ್ಲದೆ ಅವನು ತನಗೆ ಗೆಳೆಯನಾಗಿರ ಬೇಕೆಂದು ಹೇಳಿ ತನ್ನಲ್ಲಿಗೆ ಅವನು ಬಂದು ಹೋಗುತ್ತಿರಬೇಕೆಂದು ತಿಳಿಸಿ ಅವನನ್ನು ಸಂತೋಷಗೊಳಿಸಿದನು.

ದ್ರುಮಳ ಶಕ್ತಿರಾಜರೀರ್ವರೂ ಪರಮಸ್ನೇಹಿತರಾಗಿ ಒಂದೇ ಶರೀರದಂತೆ ಆಪ್ತರಾಗಿದ್ದು ಕಾಲ ಕಳೆಯುತ್ತಿದ್ದರು. ಆ ಪರಾಕ್ರಮಶಾಲಿಗಳು ಒಬ್ಬರನ್ನೊಬ್ಬರು ಅಗಲದೆ ಇರುತ್ತಿದ್ದರು. ದ್ರುಮಳನು ಆ ನಾಯಿಮರಿಗಳನ್ನು ತನ್ನ ಮನೆಯಲ್ಲಿ

ಪೋಷಿಸುತ್ತಿದ್ದನು. ತಾನೇನು ತಿನ್ನುತ್ತಿದ್ದನೋ ಆ ನಾಯಿಮರಿಗಳಿಗೂ ಅದನ್ನೇ ತಿನ್ನಿಸುತ್ತಾ ಅವುಗಳನ್ನು ಅಗಲಿರಲಾರದೆ ತಾನು ಮಲಗುವಾಗ ತನ್ನ ಪಕ್ಕದಲ್ಲೇ ಅವುಗಳಿಗೆ ಹಾಸಿಗೆಯನ್ನು ಹಾಸಿ ಮಲಗಿಸಿಕೊಳ್ಳುತ್ತಾ ಅವುಗಳಿಗೆ ರೇಷ್ಮೆಯ ಹೊದ್ದಿಕೆಗಳನ್ನು ಹೊದ್ದಿಸಿ ಅತ್ಯಂತ ಪ್ರೀತಿಯಿಂದ ಸಾಕುತ್ತಿದ್ದನು. ದ್ರುಮಿಳನ ಸೋದರಮಾವನಾದ ಮಹಾತಪಸ್ವಿಯಾದ ಯಜ್ಞಶರ್ಮನು ಇದನ್ನು ಕಂಡು ಆಚಾರ ಹೀನನಾದ ಸೋದರಳಿಯನನ್ನು ನೋಡಿ ಕೋಪದಿಂದ ಅವನನ್ನು ಕುರಿತು ಎಲೈ ದ್ರುಮಿಳನೇ ನೀನು ಶೂದ್ರಾಚಾರಗಳಲ್ಲಿ ನಿರತನಾಗಿರುವುದರಿಂದ ನೀನು ಶೂದ್ರನಾಗು ಎಂದು ಶಪಿಸಿ, ಇನ್ನು ಮೇಲೆ ನೀನು ನನ್ನ ಮನೆಯಲ್ಲಿರಬೇಡ ಹೊರಗೆಹೋಗು ಎಂದು ಅವನನ್ನು ಮನೆಯಿಂದ ಹೊರಗೆ ಅಟ್ಟಿದನು. ಯಜ್ಞಶರ್ಮನು ದ್ರುಮಿಳನನ್ನು ಈರೀತಿ ಶಪಿಸಿ ಅಟ್ಟಲು ಆ ದ್ರುಮಿಳನು ತನ್ನ ಬ್ರಾಹ್ಮಣತ್ವವನ್ನು ಕಳೆದುಕೊಂಡವನಾಗಿ ಶೂದ್ರರ ಆಚಾರದಲ್ಲಿ ಮಗ್ನನಾಗಿ ತಾನು ಶೂದ್ರನೇ ಆಗಿ ಶೂದ್ರಕನೆಂಬ ಹೆಸರಿನಿಂದಲೇ ಪ್ರಸಿದ್ಧನಾದನು.

ಮಹಾ ಪರಾಕ್ರಮಶಾಲಿಯಾದ ಶೂದ್ರಕನು ಶಕ್ತಿರಾಜನೊಡನೆ ಹೆಚ್ಚು ಮೈತ್ರಿ ಬೆಳೆಸಿ ಅವನೊಡನೆಯೇ ಇರುತ್ತಿದ್ದನು. ಹೀಗಿರುತ್ತಿರಲು ಆ ಶಕ್ತಿರಾಜನ ಆಶ್ರಿತನಾದ ನೇಪಾಳದೇಶದ ರಾಜನಾದ ಸುಧಾರಕನೆಂಬ ಬೌದ್ಧನು ಶಕ್ತಿರಾಜನ ಸೇವೆಗಾಗಿ ಪರಿತಾಣಪುರಕ್ಕೆ ಬಂದನು. ಬೌದ್ಧನಾದ ಆ ನೇಪಾಳರಾಜನು ಶೂದ್ರಕನನ್ನು ನೋಡಿ ಅವನ ಪರಾಕ್ರಮಕ್ಕೆ ಮೆಚ್ಚಿ ಅವನ ಮೈತ್ರಿಯನ್ನು ಬೆಳೆಸಿ ಅವನ ಮನೆಗೆ ಹೋಗಿ ಬರುತ್ತಾ ತಾನು ಅವನಿಂದ ಸತ್ಕೃತನಾಗಿ ಪ್ರತಿಯಾಗಿ ಅವನನ್ನೂ ಸತ್ಕರಿಸುತ್ತಾ ಸಂತೋಷದಿಂದ ಅವನೊಡನೆ ಕಾಲಕಳೆಯುತ್ತಿದ್ದನು. ಹೀಗಿರಲು ಆ ನೇಪಾಳ ರಾಜನು ಒಂದುದಿನ ಶೂದ್ರಕನನ್ನು ರಹಸ್ಯವಾಗಿ ಕರೆದು ಮಹಾಪರಾಕ್ರಮಿಯಾದ ಶೂದ್ರಕನೇ ನೀನು ಶಕ್ತಿರಾಜನಿಗೆ ಪ್ರಿಯಮಿತ್ರನಲ್ಲವೆ ? ಇನ್ನು ಆರು ತಿಂಗಳುಗಳು ಕಳೆದ ಮೇಲೆ ನಿನಗೂ, ಈ ಶಕ್ತಿ ರಾಜನಿಗೂ ವಿರೋಧವುಂಟಾಗುವುದು. ಆಗ ನೀನು ನನ್ನ ರಾಜಧಾನಿಯಾದ ವೈಜಯಂತೀಪುರಕ್ಕೆ ಹೊರಟು ಬಾ ಎಂದು ಭವಿಷ್ಯವನ್ನು ನುಡಿದು ನಾನು ಆಡಿದ ಈ ಮಾತು ಎಂದೂ ಸುಳ್ಳಾಗದು. ಈ ವಿಷಯವು ರಹಸ್ಯ ವಾಗಿರಲಿ. ನಿನಗೂ ಶಕ್ತಿರಾಜನಿಗೂ ವಿರೋಧವುಂಟಾದಾಗ ನೀನು ಮಾತ್ರ ಬೇರೆಲ್ಲಿಗೂ ಹೋಗದೇ ನನ್ನಲ್ಲಿಗೇ ಬರಬೇಕು ಎಂದು ಹೇಳಲು ಶೂದ್ರಕನು ಅವನ ಮಾತಿಗೆ ಹಾಗೆಯೇ ಆಗಲಿ ಎಂದು ಒಪ್ಪಿದನು.

ಆ ಮೇಲೆ ನೇಪಾಳರಾಜನು ಶಕ್ತಿರಾಜನ ಅಪ್ಪಣೆಪಡೆದು ತನ್ನ ದೇಶಕ್ಕೆ ತೆರಳಿದನು. ಕೆಲವು ಕಾಲ ಕಳೆಯಲು ಶಕ್ತಿರಾಜನು ಶೂದ್ರಕನೊಡನೆ ತನ್ನ ಸಮಸ್ತ ಚತುರಂಗಬಲದೊಡನೆ ಬೇಟೆಯಾಡಲು ಅರಣ್ಯಕ್ಕೆ ಹೋದನು. ಅರಣ್ಯದಲ್ಲಿ ರಾಜನೂ,

ಶೂದ್ರಕನೂ ಸಂಚರಿಸುತ್ತಾ ಒಬ್ಬರನ್ನೊಬ್ಬರು ಅಗಲಿ ಕ್ರೂರಮೃಗಗಳನ್ನು ಬೆನ್ನಟ್ಟಿ ಬೇಟೆಯಾಡುತ್ತಾ, ಅವುಗಳನ್ನು ಕೊಲ್ಲುತ್ತಾ ಸ್ವಲ್ಪ ಹೊತ್ತಿನ ಮೇಲೆ ಇಬ್ಬರೂ ಒಂದೆಡೆ ಪುನಃ ಸೇರಿದರು. ಆಗ ಮೃಗರಾಜನಾದ ಒಂದು ಕ್ರೂರಸಿಂಹವು ಗರ್ಜಿಸುತ್ತಾ ತಮ್ಮ ಮೇಲೆ ಬೀಳಲು ಬರುವುದನ್ನು ಕಂಡು ಶೂದ್ರಕನು ತನ್ನ ಖಡ್ಗದಿಂದ ಅದನ್ನು ಕೊಂದು ಶಕ್ತಿರಾಜನಿಗೆ ಪ್ರೀತಿಪೂರ್ವಕವಾಗಿ ತನ್ನ ರಾಜಭಕ್ತಿಯ ಕುರುಹಾಗಿ ಅದನ್ನು ಕಾಣಿಕೆಯಾಗಿತ್ತನು. ಆ ಸಿಂಹವನ್ನು ಕಾಣಿಕೆಯಾಗಿ ಪಡೆದ ಶಕ್ತಿರಾಜನು ಆ ಭಯಂಕರವಾದ ಸಿಂಹವನ್ನು ತಾನೇ ಕೊಂದಿರುವುದಾಗಿ ತನ್ನ ಪಟ್ಟಣದಲ್ಲಿ ಸ್ತುತಿಪಾಠಕರಿಂದಲೂ ರಾಜದೂತರಿಂದಲೂ ಪ್ರಕಟಗೊಳಿಸಿ ಜಾಹೀರುಗೊಳಿಸಿದನು. ಪಟ್ಟಣದ ಜನರೆಲ್ಲರೂ ತಮ್ಮರಾಜನ ಪರಾಕ್ರಮವನ್ನು ಕೇಳಿ ತಮ್ಮಪಟ್ಟಣವನ್ನು ಶೃಂಗರಿಸಿ ರಾಜನನ್ನು ಸಂಭ್ರಮದಿಂದ ಎದುರುಗೊಳ್ಳಲು ಹೊರಟರು.

ರಾಜನ ಪಟ್ಟಮಹಿಷಿಯಾದ ಕೇಶೀನೀ ರಾಣಿಯು ಈ ವಾರ್ತೆಯನ್ನು ಕೇಳಿ ಸಂತೋಷಗೊಂಡು ತನ್ನ ಪತಿಗೆ ಹೂಮಾಲೆಯನ್ನು ಅರ್ಪಿಸಲು ಕಾತುರಳಾಗಿದ್ದು ಅದನ್ನು ಎಂದಿನಂತೆ ಕಟ್ಟಿಕೊಂಡು ಬರುತ್ತಿದ್ದ ಹೂಗಾರ್ತಿಯು ಅಂದು ಕಾಲಕ್ಕೆ ಸರಿಯಾಗಿ ಬರದಿದ್ದುದರಿಂದ ತಾನು ಸರ್ವಾಲಂಕೃತಳಾಗಿ ಅವಳ ಮಾರ್ಗವನ್ನು ನಿರೀಕ್ಷಿಸುತ್ತಾ ಕಾಯುತ್ತಿದ್ದಳು. ಸ್ವಲ್ಪಕಾಲ ಕಳೆಯಲು ಹೂಗಾರ್ತಿಯು ಅನೇಕ ಹೂಹಾರಗಳನ್ನು ತಂದುಕೊಟ್ಟಳು. ತಡವಾಗಿ ಬಂದ ಅವಳನ್ನು ನೋಡಿ ಅವಳಿಗಾಗಿ ನಿರೀಕ್ಷಿಸುತ್ತಿದ್ದ ರಾಣಿಯು ಅವಳನ್ನು ನೋಡಿ ಕೋಪಗೊಂಡು ಎಲೈ ದುಷ್ಟೆ ನನ್ನನ್ನು ಏಕಿಷ್ಟು ಕಾಯಿಸಿದೆ? ಇಷ್ಟು ಹೊತ್ತೂ ನೀನೆಲ್ಲಿದ್ದೆ? ಕ್ರೂರ ಸಿಂಹವನ್ನು ಕೊಂದ ಮಹಾರಾಜರನ್ನು ಎದುರುಗೊಳ್ಳಲು ನಾನು ಹೋಗಲಿರುವುದು ನಿನಗೆ ಗೊತ್ತಿಲ್ಲವೆ? ಎಂದು ಗದರಿಸಿದಳು. ಅದಕ್ಕೆ ಆ ಹೂಗಾರ್ತಿಯು ರಾಣಿಯನ್ನು ನೋಡಿ ಉಪಹಾಸಪೂರ್ವಕವಾಗಿ ಮಹಾರಾಣಿಯವರೇ ಸಾಕು ಸುಮ್ಮನಿರಿ. ನಾನು ಈ ಎಲ್ಲ ಸಂಗತಿಯನ್ನೂ ಬಲ್ಲೆನು. ಕೇಶಿನೀಮಹಾ ರಾಣಿಯವರೇ ನಿಮ್ಮ ಪತಿಮಹಾರಾಜರು ಸಿಂಹವನ್ನು ಕೊಂದದ್ದು ನಿಜವಾದರೆ ನೀವು ಹೆಮ್ಮೆಪಡುವುದು ಸರಿ. ಸುಮ್ಮನೆ ಈ ಬಡದಾಸಿಯ ಮೇಲೆ ಏಕೆ ಕೋಪ ಗೊಳ್ಳುವಿರಿ. ಕಾಡಿನಲ್ಲಿ ಸಿಂಹವನ್ನು ಕೊಂದವನು ಶೂದ್ರಕನು. ಆ ಶೂದ್ರಕನು ಆ ಭಯಂಕರ ಸಿಂಹವನ್ನು ಕೊಂದು ನಿಮ್ಮ ಪತಿಮಹಾರಾಜರಿಗೆ ಕಾಣಿಕೆಯಾಗಿ ಅರ್ಪಿಸಿದನು. ಇದನ್ನು ಕಂಡ, ಪುಷ್ಪಗಳನ್ನು ತರಲು ಕಾಡಿಗೆ ಹೋಗಿದ್ದ ನನ್ನ ಗಂಡನು ಅತ್ಯಾದರದಿಂದ ನನಗೆ ಹೇಳಿದನು. ಅದನ್ನು ನಾನು ಕೇಳುತ್ತಿದ್ದ ಕಾರಣ

ಮಹಾರಾಣಿಯವರೇ ನಾನಿಲ್ಲಿಗೆ ಬರಲು ಇಷ್ಟು ವಿಳಂಬವಾಯಿತು. ದಯವಿಟ್ಟು ಕ್ಷಮಿಸ ಬೇಕು ಎಂದು ಹೇಳಿ ತಾನು ವಿಳಂಬವಾಗಿ ಬರಲು ಕಾರಣ ತಿಳಿಸಿ ಆ ಹೂಗಾರ್ತಿಯು ಅಪ್ಪಣೆ ಪಡೆದು ತನ್ನ ಮನೆಗೆ ಹೋದಳು.

ಕೇಶಿನೀರಾಣಿಯು ಈ ಸಂಗತಿಯನ್ನು ಕೇಳಿ ನಿರಾಶಳಾಗಿ ತಾನು ಸ್ನಾನದ ನೆಪದಲ್ಲಿ ರಾಜನನ್ನು ಎದುರುಗೊಳ್ಳಲು ಹೋಗದೆ ಅಂತಃಪುರದಲ್ಲಿಯೇ ಇದ್ದಳು. ಶಕ್ತಿರಾಜನು ಕೊಂದ ಸಿಂಹದ ಸಮೇತ ತನ್ನ ಪಟ್ಟಣವನ್ನು ಬಹು ಠೀವಿಯಿಂದ ಪ್ರವೇಶಿಸಿ ತಾನು ಅರಮನೆಯನ್ನು ಹೊಕ್ಕರೂ ತನ್ನ ರಾಣಿಯು ತನ್ನನ್ನು ಎದುರು ಗೊಳ್ಳಲು ಬರದಿರಲು ಅದಕ್ಕೆ ಕಾರಣವೇನೆಂದು ತನ್ನ ಮನಸ್ಸಿನಲ್ಲೇ ಆಲೋಚಿಸುತ್ತಾ ಅರಮನೆಯನ್ನು ಹೊಕ್ಕವನೇ ಅಂತಃಪುರವನ್ನು ಸೇರಿ ತನ್ನ ಪತ್ನಿಯನ್ನು ನೋಡಿ ನೀನೇಕೆ ನನ್ನನ್ನು ಎದುರುಗೊಳ್ಳಲು ಬರಲಿಲ್ಲವೆಂದು ಕೇಳಿದನು. ಅದಕ್ಕೆ ಅವಳು ಸಿಂಹವನ್ನು ಕೊಂದವನು ತಾನೇ ಎಂದು ನಗರದಲ್ಲಿ ತನ್ನ ಪರಾಕ್ರಮವನ್ನು ಬಹುವಾಗಿ ಹೊಗಳಿಸಿಕೊಂಡ ತನ್ನ ಪತಿಯನ್ನು ನೋಡಿ ತನಗೆ ಗೊತ್ತಾದ ನಿಜ ಸಂಗತಿಯೆಲ್ಲವನ್ನೂ ತಿಳಿಸಿ ಅವನನ್ನು ಮೂದಲಿಸಿದಳು.

ಶಕ್ತಿರಾಜನು ಇದನ್ನು ಕೇಳಿ ವಿಷಣ್ಣವದನನಾಗಿ ಲಜ್ಜೆಗೊಂಡು ಶೂದ್ರಕನನ್ನು ಕರೆಯಿಸಿ ಅತ್ಯಂತ ಕೋಪಯುಕ್ತನಾಗಿ ಯಾವುದನ್ನೂ ವಿಚಾರಿಸದೆ ಅವನನ್ನು ಕುರಿತು ಎಲೈ ಶೂದ್ರಕನೇ, ನಿನ್ನನ್ನು ನಾನು ಆಪ್ತಮಿತ್ರನೆಂದು ಭಾವಿಸಿದ್ದೆ ಅದು ಸುಳ್ಳಾಯಿತು. ಎಲೈ ಪಾಪಿಯೇ ನಿನಗೂ ನನ್ನಪತ್ನಿಗೂ ನಿಶ್ಚಯವಾಗಿಯೂ ರಹಸ್ಯವಾಗಿ ಅನೈತಿಕ ಸಂಬಂಧವಿರಬೇಕು. ಅವಳಿಗೆ ಸಿಂಹವನ್ನು ಕೊಂದವರಾರೆಂದು ಮೊದಲೇ ನೀನು ಹೇಳಿಕಳುಹಿಸಿರಬೇಕು. ಇಲ್ಲದಿದ್ದರೆ ಅವಳಿಗೆ ಈ ಸಂಗತಿಯು ಹೇಗೆ ಗೊತ್ತಾಗು ತ್ತಿತ್ತು? ನೀನು ನನ್ನಪತ್ನಿಗೆ ಈ ಎಲ್ಲಾ ಸಂಗತಿಯನ್ನು ತಿಳುಹಿಸಿ ಎಲ್ಲರೆದುರು ನಾನು ನಾಚಿಕೆಪಡುವಂತೆ ಮಾಡಿರುವೆ. ಇದರಿಂದ ನಿನಗೂ ನನ್ನಪತ್ನಿಗೂ ಅಂತರಂಗದಲ್ಲಿ ರಹಸ್ಯ ಪ್ರೇಮವಿದೆಯೆಂದು ಗೊತ್ತಾಗುವುದು. ನೀನು ನನಗೆ ಮಿತ್ರನಾದುದರಿಂದ ನಿನ್ನನ್ನು ಕೊಲ್ಲಿಸಲಾರೆ ಕ್ಷಮಿಸಿದ್ದೇನೆ. ನೀನು ಈ ಕೂಡಲೇ ನನ್ನ ಪಟ್ಟಣವನ್ನು ಬಿಟ್ಟು ಹೊರಟುಹೋಗೆಂದು ಹೇಳಿ ಯುಕ್ತಾಯುಕ್ತ ವಿವೇಚನೆಯಿಲ್ಲದೆ ಶಕ್ತಿರಾಜನು ತನ್ನ ಸೇವಕರನ್ನು ಕರೆದು ಆ ಶೂದ್ರಕನನ್ನು ಊರಿಂದ ಹೊರಗೆ ಹಾಕುವಂತೆ ಆಜ್ಞೆಮಾಡಿದನು. ರಾಜಾಜ್ಞೆಯಂತೆ ಭಟರು ಅವನನ್ನು ಪುರದಿಂದ ಹೊರಡಿಸಿದರು.

ಈರೀತಿ ಪಟ್ಟಣದಿಂದ ಹೊರಹಾಕಲ್ಪಟ್ಟ ನಿರ್ದೋಷಿಯಾದ ಶೂದ್ರಕನು ವ್ಯಸನಗೊಂಡು ಅತ್ಯಂತ ಮಾತ್ಸರ್ಯವುಳ್ಳವನಾಗಿ ಈ ಹಿಂದೆ ನೇಪಾಳರಾಜನು ತನಗೆ ಹೇಳಿದ್ದ ಭವಿಷ್ಯವನ್ನು ಸ್ಮರಿಸಿಕೊಂಡು, ಶಕ್ತಿರಾಜನ ಮೇಲೆ ಸೇಡು ತೀರಿಸಿಕೊಳ್ಳಲು ನೇಪಾಳರಾಜನ ವೈಜಯಂತೀಪುರಕ್ಕೆ ಬಂದು ಅಲ್ಲಿಯ ರಾಜನಿಗೆ ತಾನು ಬಂದಿರುವ ಸುದ್ಧಿಯನ್ನು ಹೇಳಿಕಳುಹಿಸಿದನು. ಇದನ್ನು ಕೇಳಿ ನೇಪಾಳ

ರಾಜನಾದ ಸುಧಾರಕನು ಸಂತೋಷದಿಂದ ಮಹಾ ಪರಾಕ್ರಮಿಯಾದ ಆ ಶೂದ್ರಕನನ್ನು ತನ್ನ ಅರಮನೆಗೆ ಬರಮಾಡಿಕೊಂಡು ದ್ವಾರದಲ್ಲಿ ಅವನನ್ನು ತಾನೇ ಎದುರುಗೊಂಡು ಅನೇಕೋಪಚಾರಗಳಿಂದ ಸತ್ಕರಿಸಿ ಪ್ರೀತಿಪೂರ್ವಕವಾಗಿ ಅವನನ್ನು ತನ್ನ ಸೇವೆಯಲ್ಲಿಯೇ ಇಟ್ಟುಕೊಂಡನು. ಶೂದ್ರಕನು ಶಕ್ತಿರಾಜನು ತನಗೆ ಮಾಡಿದ ಅಪಮಾನದಿಂದ ಅವನ ಮೇಲಿದ್ದ ತನ್ನ ಮಾತ್ಸರ್ಯವನ್ನು ನೆನೆಯುತ್ತಾ ರಹಸ್ಯವಾಗಿ ಸುಧಾರಕನೊಡನೆ ಆಲೋಚನೆಮಾಡಿ ಶಕ್ತಿರಾಜನ ಮೇಲೆ ಯುದ್ಧಮಾಡಲು ಆ ರಾಜನನ್ನು ಪ್ರೇರೇಪಿಸಿ ಒಪ್ಪಿಸಿದನು.

ರಾಜನು ತನ್ನ ಮಾತಿಗೆ ಒಪ್ಪಿದ ಕೂಡಲೇ ಶೂದ್ರಕನು ನೇಪಾಳರಾಜನ ಸೇನೆಗಳನ್ನೆಲ್ಲಾ ಯುದ್ಧಕ್ಕೆ ಸಜ್ಜುಗೊಳಿಸಿ ಯುದ್ಧಸನ್ನದ್ಧನಾಗಿ ನೇಪಾಳರಾಜನೊಡನೆ ಚತುರಂಗಬಲಸಮೇತನಾಗಿ ಹೊರಟು ಶಕ್ತಿರಾಜನ ಪಟ್ಟಣಕ್ಕೆ ಮುತ್ತಿಗೆ ಹಾಕಿದನು. ಶೂದ್ರಕನ ಈ ಪ್ರತೀಕಾರಕ್ರಮವನ್ನು ಕಂಡು ಶಕ್ತಿರಾಜನು ಪರಾಕ್ರಮಿಯಾದ ಶೂದ್ರಕನ ಮೇಲೆ ಯುದ್ಧಮಾಡಲು ತನ್ನ ಕೈಲಾಗದುದರಿಂದ ಬುದ್ಧಿವಂತರಾದ ತನ್ನ ಮಂತ್ರಿಗಳೊಡನೆ ಆಲೋಚಿಸಿ ತನಗೆ ಸಹಾಯಮಾಡುವುದಕ್ಕಾಗಿ ಕಾಲಸೇನ ಮಹಾರಾಜನಿಗೆ ವಿಷಯವನ್ನೆಲ್ಲಾ ವಿವರವಾಗಿ ಓಲೆಯಲ್ಲಿ ಬರೆಯಿಸಿ ಅವನು ಕೂಡಲೆ ತನ್ನ ಸಹಾಯಕ್ಕೆ ಬರಲು ಬರೆಯಿಸಿದ ಆ ಓಲೆಯನ್ನು ತನ್ನ ದೂತರ ಮೂಲಕ ಅವನಿಗೆ ಕಳುಹಿಸಿದನು. ಶಕ್ತಿರಾಜನಿಂದ ಸಹಾಯಕ್ಕಾಗಿ ಪ್ರಾರ್ಥಿಸಲ್ಪಟ್ಟ ಕಾಲಸೇನನು ಅವನಿಗೆ ಆಪತ್ಕಾಲದಲ್ಲಿ ಸಹಾಯಮಾಡುವುದಕ್ಕಾಗಿ ಒಪ್ಪಿ ಇದನ್ನು ಶಕ್ತಿರಾಜನಿಗೆ ಮರು ಓಲೆಯ ಮೂಲಕ ತಿಳುಹಿಸಿ ಕೂಡಲೇ ತಾನು ತನ್ನ ಚತುರಂಗಬಲ ಸಮೇತನಾಗಿ ಶೂದ್ರಕನ ಮೇಲೆ ಯುದ್ಧಾಕಾಂಕ್ಷಿಯಾಗಿ ಪರಿತಾಣಪುರದ ಹೊರ ವಲಯಕ್ಕೆ ಬಂದು ಬೀಡುಬಿಟ್ಟನು.

ಮಹಾ ಬಲಶಾಲಿಯಾದ ಕಾಲಸೇನ ರಾಜನ ಆಗಮನವನ್ನು ತಿಳಿದು ಶೂದ್ರಕನು ಅವನೊಡನೆ ಯುದ್ಧಮಾಡಲು ಹಿಂದೆಗೆದು ನೇಪಾಳರಾಜನಾದ ಸುಧಾರಕನನ್ನು ಸಂಧಿಸಿ; ಪರಸ್ಪರ ಸಮಾಲೋಚಿಸುತ್ತಾ, ಮಹಾಪರಾಕ್ರಮಿಗಳಾದ ತನ್ನ ಮಕ್ಕಳೊಡನೆ ಕೂಡಿಕೊಂಡು ತನ್ನ ಚತುರಂಗಬಲ ಸಮೇತನಾಗಿ ಶಕ್ತಿರಾಜನಿಗೆ ಸಹಾಯಮಾಡಲು ಬಂದಿರುವ ಕಾಲಸೇನನು ಮತ್ತು ಅವನ ಸಮಸ್ತಬಲದೊಡಗೂಡಿದ ಶಕ್ತಿರಾಜನ ಚತುರಂಗಬಲವನ್ನು ಹೇಗೆ ಜಯಿಸುವುದೆಂದು ಅವರಿಬ್ಬರೂ ಪರಸ್ಪರ ವಿಚಾರವಿನಿಮಯ ಮಾಡುತ್ತಿದ್ದರು. ಆ ಸಮಯಕ್ಕೆ ಸರಿಯಾಗಿ ದೈವಯೋಗದಿಂದಲೋ ಎಂಬಂತೆ ಎಲೈಸುಧಾರಕ ಶೂದ್ರಕರೇ ನೀವು ಕಾಲಸೇನನಿಗೆ ಅಂಜಬೇಡಿರಿ. ಸಹ್ಯಾದ್ರಿಯಲ್ಲಿ ಮಂತ್ರತಂತ್ರಗಳನ್ನು ಬಲ್ಲವನೂ ಮಾಯಾವಿಯೂ ಮಹಾ ಬಲಿಷ್ಠನೂ ಆದ ಪಂಚ

ಪುಟನೆಂಬ ಒಬ್ಬ ಬೌದ್ಧನಿರುವನು. ಅವನು ಕಾಲಸೇನನೊಡನೆ ಹೋರಾಡಲು ಸಮರ್ಥನಾಗಿರುವನು. ಅವನನ್ನು ಕರೆತಂದು ಶಕ್ತಿರಾಜನ ಮೇಲೆ ಯುದ್ಧಮಾಡಿದರೆ ನಿಮಗೆ ಜಯವು ಖಂಡಿತ ದೊರೆಯುವುದೆಂದು ಅಶರೀರವಾಣಿಯಾಯಿತು.

ಈ ಅಶರೀರವಾಣಿಯನ್ನು ಕೇಳಿ ಶೂದ್ರಕನು ಸಂತೋಷದಿಂದ ಶೀಘ್ರವಾಗಿ ಸಹ್ಯಾದ್ರಿಗೆ ಹೋಗಿ ಆ ಪಂಚಪುಟನನ್ನು ಕಂಡು ಅವನಿಗೆ ವಿನಯದಿಂದ ನಮಸ್ಕರಿಸಿ ವಿಷಯವನ್ನೆಲ್ಲಾ ತಿಳಿಸಿ ಅವನು ತನ್ನೊಡನೆ ಬಂದು ಬೌದ್ಧನೇ ಆದ ನೇಪಾಳರಾಜನಿಗೆ ಸಹಾಯ ಮಾಡಬೇಕೆಂದು ಅನೇಕ ವಿಧವಾಗಿ ಪ್ರಾರ್ಥಿಸಿ ಅವನನ್ನೊಪ್ಪಿಸಿ ಅವನೊಡನೆ ಶಕ್ತಿರಾಜನ ರಾಜಧಾನಿಯಾದ ಪರಿಠಾಣಪುರಕ್ಕೆ ಬಂದನು. ಮಾಯಾವಿಯಾದ ಆ ಪಂಚಪುಟನು ಕತ್ತಲಾಗುವವರಿವಿಗೂ ಸುಮ್ಮನಿದ್ದು, ಹಿಂದೆ ಕಾಲಸೇನನಿಗೆ ಶಿವನು ಅನುಗ್ರಹಿಸಿದ್ದ ಸಮಸ್ತಾಯುಧಗಳನ್ನೂ ಅಪಹರಿಸಿಕೊಂಡು ಬಂದು ಶೂದ್ರಕನನ್ನೂ, ಸುಧಾರಕನನ್ನೂ ಸೇರಿದನು. ಇದರಿಂದ ಶೂದ್ರಕ ಸುಧಾರಕನೇ ಮೊದಲಾದವರೆಲ್ಲ ಸಂತೋಷಪಟ್ಟು ಪಂಚಪುಟನನ್ನು ಬಹಳವಾಗಿ ಹೊಗಳಿ ಅಭಿನಂದಿಸಿ ಅವನಿಗೆ ಅನೇಕ ವಿಧವಾಗಿ ಮರ್ಯಾದೆಮಾಡಿ ಸತ್ಕರಿಸಿದರು. ಬಲಹೀನನಾದ ಶಕ್ತಿರಾಜ ಶೂದ್ರಕರಿಗೂ, ಕಾಲಸೇನ ಪಂಚಪುಟರಿಗೂ ಮತ್ತು ರೂಪಸೇನ ಸುಧಾರಕರಿಗೂ ಪರಸ್ಪರ ಯುದ್ಧ ನಡೆದು ಶಕ್ತಿರಾಜ ಶೂದ್ರಕರು ಪರಸ್ಪರ ಆಯುಧಗಳಿಂದ ಹೊಡೆದಾಡಿದರು. ಕೊಬ್ಬಿದ ಸಿಂಹಗಳಂತೆ ಆ ಮಹಾಬಲಶಾಲಿಗಳು ಯುದ್ಧಮಾಡುತ್ತಿದ್ದರು.

ಆ ರಾಜರುಗಳು ಹೀಗೆ ಭಯಂಕರವಾಗಿ ಪರಸ್ಪರ ಜಯಾಕಾಂಕ್ಷಿಗಳಾಗಿ ಸಮರಾಂಗಣದಲ್ಲಿ ಹೊಡೆದಾಡುತ್ತಿರಲು, ಈ ಯುದ್ಧದಲ್ಲಿ ಕೆಲವರು ಸತ್ತರು. ಕೆಲವರು ಓಡಿಹೋದರು. ಅನೇಕ ರಥಿಕರು ಅಶ್ವಗಳೊಡನೆ ಕೊಲ್ಲಲ್ಪಟ್ಟರು. ದಿವ್ಯಾಯುಧಗಳನ್ನೆಲ್ಲಾ ಕಳೆದುಕೊಂಡ ಕಾಲಸೇನನೊಡನೆ ಮಹಾ ಮಾಯಾವಿ ಪಂಚಪುಟನು ಪರಾಕ್ರಮದಿಂದ ಹೋರಾಡಿ ಅವನನ್ನು ಕೊಂದನು. ಕಾಲಸೇನನ ಪುತ್ರನಾದ ರೂಪಸೇನನು ಇದನ್ನು ನೋಡಿ ಶೋಕಕ್ರೋಧಗಳಿಂದ ಕೂಡಿದವನಾಗಿ ಆ ಪಂಚಪುಟನನ್ನು ಕುರಿತು ದುರಾತ್ಮಾ, ನೀನು ನನ್ನ ತಂದೆಯಾದ ಕಾಲಸೇನನ ಸಮಸ್ತಾಯುಧಗಳನ್ನು ಮೋಸದಿಂದ ಅಪಹರಿಸಿ ವಂಚಿಸಿ ಕೊಂದಿರುವೆ. ಎಲೈ ಪಾಪಿ ನೀನೆಲ್ಲಿ ಹೋಗುವೆ? ಒಂದು ಕ್ಷಣ ನಿಲ್ಲು. ವಜ್ರಸಮಾನಗಳಾದ ನನ್ನೀ ಬಾಣಗಳಿಂದ ನಿನ್ನ ಮರ್ಮಸ್ಥಾನಗಳನ್ನು ಭೇದಿಸಿ ನಿನ್ನನ್ನು ಕೊಂದು ಯಮಸದನಕ್ಕಟ್ಟುವೆನು ಎಂದು ಹೇಳಿದನು. ಇದನ್ನು ಕೇಳಿ ಪಂಚಪುಟನು ಕೋಪಗೊಂಡು ಆ ರೂಪಸೇನನ ಮೇಲೆ ಬಾಣವೃಷ್ಟಿಗರೆದು ಅವನನ್ನು ಶರಗಳಿಂದ ಮುಚ್ಚಿದನು. ಈ ರೀತಿ ಬಾಣ ಸಮೂಹಗಳಿಂದ ಮುಚ್ಚಲ್ಪಟ್ಟರೂ ರೂಪಸೇನನು ಆ ಸಮಸ್ತ

ಬಾಣಗಳನ್ನೂ ಕ್ಷಣಾರ್ಧದಲ್ಲಿ ಭೇದಿಸಿ ಹೊರಬಂದು ಅವನನ್ನು ರಥಶೂನ್ಯನನ್ನಾಗಿ ಮಾಡಿ ತನ್ನ ತೀಕ್ಷ್ಣವಾದ ಖಡ್ಗವನ್ನು ಒರೆಯಿಂದ ಹಿರಿದು ಕರ್ಣಕುಂಡಲಯುಕ್ತವಾದ ಆ ಪಂಚಪುಟನ ಶಿರವನ್ನು ಶರೀರದಿಂದ ಬೇರ್ಪಡಿಸಿದನು. ತನ್ನ ತಂದೆಯನ್ನು ಕೊಂದ ಪಂಚಪುಟನನ್ನು ಕೊಂದು ರೂಪಸೇನನು ಸೇಡು ತೀರಿಸಿಕೊಂಡವನಾಗಿ ಪರಾಕ್ರಮದಿಂದ ಹೋರಾಡಿ ವೈರಿ ಸೇನೆಯನ್ನು ಓಡಿಸಿದನು.

ಶೂರನಾದ ಶೂದ್ರಕನು ಯುದ್ಧದಲ್ಲಿ ಶಕ್ತಿರಾಜನ ಸಮಸ್ತಸೈನ್ಯಗಳನ್ನೂ ಇಂದ್ರನು ವೃತ್ರನನ್ನು ಕೊಂದು ಅಸುರಸೇನೆಯನ್ನು ಹಿಮ್ಮೆಟ್ಟಿಸುವಂತೆ ಹಿಮ್ಮೆಟ್ಟಿಸಿದನು. ಶೂದ್ರಕನು ತನ್ನನ್ನು ಅವಮಾನಗೊಳಿಸಿದ ಶಕ್ತಿರಾಜನನ್ನು ವಧಿಸಿ ತನ್ನ ಛಲವನ್ನು ತೀರಿಸಿಕೊಂಡನು. ಆಗ ಅವನು ತಾನು ಶಕ್ತಿರಾಜನಲ್ಲಿ ಹಿಂದೆ ಸೇವೆ ಸಲ್ಲಿಸಿದುದನ್ನು ನೆನೆಸಿಕೊಂಡು ಪ್ರತ್ಯುಪಕಾರವಾಗಿ ಅವನ ಪುತ್ರನಾದ ಚಿತ್ರವರ್ಮನಿಗೆ ಪಟ್ಟಾಭಿಷೇಕ ಮಾಡಿ ಅವನನ್ನು ರೂಪಸೇನನಿಗೊಪ್ಪಿಸಿ ವೈಜಯಂತೀಪುರಕ್ಕೆ ಹೋದನು. ಮಹಾಪರಾಕ್ರಮಿಯಾದ ರೂಪಸೇನನು ಸಣ್ಣವನಾದ ಚಿತ್ರವರ್ಮನಿಗೆ ರಾಜ್ಯಾಡಳಿತದಲ್ಲಿ ಶಿಕ್ಷಣವನ್ನು ಕೊಟ್ಟು ಅವನ ಸಲುವಾಗಿ ಪರಿತಾಣಪುರದಲ್ಲಿ ಕೆಲಕಾಲವಿದ್ದು ನಂತರ ಆಮೋದಪಟ್ಟಣಕ್ಕೆ ಬಂದು ತನ್ನ ಸೋದರರಿಂದ ಕೂಡಿದವನಾಗಿ ಧರ್ಮದಿಂದ ರಾಜ್ಯವಾಳುತ್ತಿದ್ದನು.

ದೇವಾಂಗವಂಶಜರಾದ ಕಾಲಸೇನನ ಪುತ್ರರು ಸಮುದ್ರದ ತೆರೆಗಳಂತೆ ಲೋಕದಲ್ಲೆಲ್ಲಾ ವ್ಯಾಪಿಸಿ ಪ್ರವರ್ಧಮಾನರಾಗಿ ಅಭಿವೃದ್ಧಿಗೊಂಡರು. ಋಷಿಗಳಿಂದ ಉಪನಯನ ಮಾಡಲ್ಪಟ್ಟ ಆ ಕಾಲಸೇನನ ಮಕ್ಕಳ ಗೋತ್ರಗಳು ಒಂದುನೂರೆರಡಿದ್ದು ಅವು ಶಾಖೋಪಶಾಖೆಗಳಾಗಿ ಒಂದುಸಾವಿರದ ಐದುನೂರು ಸಂಖ್ಯೆಯುಳ್ಳವುಗಳಾದವು. ದೇವಾಂಗವಂಶ ಸಂಭೂತರಾದ ಕಾಲಸೇನನ ಮಕ್ಕಳ ಮೂರುಸಾವಿರದ ಒಂದನೂರೈವತ್ತು ಮನೆತನದವರು ದೇವರ್ಷಿಯಾದ ನಾರದರಿಂದ ಉಪದೇಶ ಹೊಂದಿ ವೈಷ್ಣವರಾದರು. ಉಳಿದವರು ಶೈವರಾಗಿಯೇ ಉಳಿದರು.

ಸೂತನೆನ್ನುತ್ತಾನೆ. ಎಲೈ ತಪಸ್ವಿಗಳಿರಾ ಪವಿತ್ರವೂ ಪಾಪನಾಶಕವೂ ಶ್ರೇಷ್ಠವೂ ರಮ್ಯವೂ ಆದ ಮಹಾತೇಜಸ್ವಿಯಾದ ದೇವಾಂಗನ ಚರಿತ್ರೆ ಎಲ್ಲವನ್ನೂ ಹೇಳಿದೆನು. ಯಾರು ಈ ಚರಿತ್ರೆಯನ್ನು ಪ್ರತಿನಿತ್ಯ ಕೇಳುವರೋ, ಭಕ್ತಿಯಿಂದ ಅನ್ಯರಿಗೆ ಹೇಳುವರೋ ಅವರಿಗೆ ಸರ್ವಕಾರ್ಯಗಳು ಸಿದ್ಧಿಸಿ ಅವರು ದೀರ್ಘಾಯುಷಿಗಳಾಗುವರು. ಯಾರು ಪೌರಾಣಿಕನನ್ನು ಪೂಜಿಸಿ ಈ ಚರಿತ್ರೆಯನ್ನು ಆದರದಿಂದ ಕೇಳುವರೋ ಅವರ ಸಮಸ್ತ ಇಷ್ಟಾರ್ಥಗಳನ್ನು ಮಹಾದೇವನು ನೆರವೇರಿಸುವನು. ಯಾರು ಈ ಪುರಾಣವನ್ನು ಪಠಿಸಿ ರೇಷ್ಮೆಯ ವಸ್ತ್ರವನ್ನು ದಾನಮಾಡುವರೋ ಅವರು ಬ್ರಹ್ಮ

ಲೋಕದಲ್ಲಿ ಮರ್ಯಾದೆ ಹೊಂದುವರು. ಯಾರು ಯೋಗಶಿಖಾಮಣಿಯಾದ ದೇವಾಂಗನ ಪವಿತ್ರವಾದೀ ಪುರಾಣವನ್ನು ಕೇಳುವರೋ ಅವರು ಶ್ರೀ ಚೌಡೇಶ್ವರಿಯ ಅನುಗ್ರಹದಿಂದ ಸರ್ವೇಷ್ಟಾರ್ಥಗಳನ್ನು ಪಡೆಯುವರು. ಬ್ರಹ್ಮಾಂಡ ಪುರಾಣದ ಪವಿತ್ರವಾದ ಪುಣ್ಯಕರವಾದ ಸಕಲ ಇಷ್ಟಾರ್ಥಗಳನ್ನು ನೆರವೇರಿಸುವ ದೇವಾಂಗ ಋಷಿಯ ಚರಿತ್ರೆಯನ್ನು ಶೌನಕನೇ ಮೊದಲಾದ ಸಮಸ್ತ ಋಷಿಗಳೂ ವ್ಯಾಸ ಶಿಷ್ಯನಾದ ಸೂತನಿಂದ ಕೇಳಿ ಬಹಳ ಸಂತೋಷಪಟ್ಟರು.

ಇಲ್ಲಿಗೆ ಬ್ರಹ್ಮಾಂಡ ಪುರಾಣದ ಬ್ರಹ್ಮನಾರದ ಸಂವಾದ ರೂಪ ಉತ್ತರ ಖಂಡದ ದೇವಾಂಗ ಚರಿತ್ರೆಯಲ್ಲಿ ದೇವಾಂಗವಂಶಕಥನವೆಂಬಲ್ಲಿಗೆ ಇಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

— ಓಂ ತತ್ಸತ್ —

ಓಂ ಶಾಂತಿಃ ಶಾಂತಿಃ ಶಾಂತಿಃ

ದೇವಾಂಗ ಪುರಾಣವು ಸಮಾಪ್ತವಾದುದು



ಶ್ರೀ ದೇವಾಂಗದ ರಂಗದಾಸ್ಯಯ್ಯ ಲಾ॥ ಕಾಡಪ್ಪನವರು ಶ್ರೀ ದೇವಾಂಗದ ಪುಟ್ಟಮಲ್ಲಪ್ಪನವರು ಕೋ॥ ಯಜಮಾನ್
ಶಂಕರೈಯ್ಯನವರು. ಮಹಾಸಂಸ್ಥಾನ ಮೈಸೂರಿನಲ್ಲಿರುವ ದೇವಾಂಗದವರು ಶ್ರೀ ರಾಮಲಿಂಗ ಚೌಡೇಶ್ವರಿ ಶಿಲಾ ಪ್ರತಿಷ್ಠೆ
ದೇವಸ್ಥಾನವೂ "ಸ್ವಮಥಾಭಿಮಾನಿ ಆರ್ಪೇಯ ಯಜಮಾನ್ ಶಂಕರೈಯ್ಯ ಸಂಸ್ಥಾನ ಮೈಸೂರು"

ಚಿತ್ರ : ದೇವಾಂಗ ಮತ ಪ್ರಕಾಶಿಕೆ ಕೃಪೆಯಿಂದ

ಗುರುಗಳ ಪರಂಪರೆ

ಗಾಯತ್ರಿ ಪೀಠ ಪರಂಪರೆ
ಹಾಗೂ
ದೇವಾಂಗ ಜಗದ್ಗುರು
ಶ್ರೀ ಶ್ರೀ ಶ್ರೀ ದಯಾನಂದಪುರಿ ಮಹಾಸ್ವಾಮಿಗಳು

ದೇವಾಂಗ ಮಹರ್ಷಿಯ ಅವತಾರ ಸತ್ಯಯುಗದಲ್ಲೇ ಆಗಿದೆ. ಅಂದು ದೇವ ಮಾನವರು ಮಾನಸಂರಕ್ಷಣೆಯ ಸಾಧನವಿಲ್ಲದೆ ಪರಿತಪಿಸುತ್ತಿರುವಾಗ ಈ ಅವತಾರವಾಗಿದೆ. ನಂತರ ಈತನ ವಂಶಜರು ವಿಶ್ವವ್ಯಾಪಿಯಾಗಿ ರಾಜ್ಯ ಆಳಿದ್ದಾರೆ. ದೇವತೆಗಳನ್ನು, ಮಾನವರನ್ನು ಸಂರಕ್ಷಿಸಿದ್ದಾರೆ. ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ರಕ್ಷಿಸಿದ್ದಾರೆ.

ಕ್ರಿ.ಶ. 8 ನೆಯ ಶತಮಾನದಿಂದಲೂ ಈ ಜನಾಂಗದವರಿಗೆ ಹಂಪಿ ಹೇಮಕೂಟ ಶ್ರೀ ಗಾಯತ್ರಿ ಪೀಠವೇ ಜಗದ್ಗುರು ಪೀಠವಾಗಿದೆ. ದೇವಾಂಗನು ಸಪ್ತಾವತಾರಗಳನ್ನು ಪಡೆದ ನಂತರ ಶ್ರೀ ಮುದ್ದುಸಂಗಮಹಾಮುನಿಗಳೇ ಈ ಜನಾಂಗದಲ್ಲಿ ಜಗದ್ಗುರುಗಳಾದರು. ಈ ಮುದ್ದುಸಂಗಮಹಾಮುನಿಗಳ ಕಾಲದಲ್ಲಿ ಹಂಪಿಯಲ್ಲಿ ಶ್ರೀ ಗಾಯತ್ರಿ ಪೀಠ ಸ್ಥಾಪನೆ ಆಯಿತು. ಇವರ ವಂಶದಲ್ಲಿ ಐವರು ಜಗದ್ಗುರುಗಳು ಪರಂಪರಾಗತವಾಗಿ ಶೋಭಿಸಿದರು. ಅನಂತರ ಈ ಗುರುಪೀಠಕ್ಕೆ ಪೀಠಾಧಿಕಾರಿ ಇಲ್ಲದಂತಾಯಿತು.

ಆಗ ಸಮಾಜದವರು ಗುರುಪೀಠದ ಪುನರುದ್ಧಾರಕ್ಕಾಗಿ ಅನೇಕಸಾರಿ ಪ್ರಯತ್ನಿಸಿದರೂ ಕಾರ್ಯಸಾಧುವಾಗಲಿಲ್ಲ. 1972 ರಲ್ಲಿ ಪ್ರಪ್ರಥಮವಾಗಿ ಅಖಿಲ ಕರ್ನಾಟಕ ದೇವಾಂಗ ಮಹಾ ಸಮ್ಮೇಳನ ಬೆಂಗಳೂರಿನಲ್ಲಿ ನಡೆಯಿತು. ಆ ಸಮ್ಮೇಳನದಲ್ಲಿ ಗುರು ಪೀಠಕ್ಕೆ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಲು ಉನ್ನತ ಮಟ್ಟದಲ್ಲಿ ಸಮಿತಿಯೊಂದನ್ನು ರಚಿಸಲಾಯಿತು.

1972 ರಿಂದ ಈ ವಿಷಯದಲ್ಲಿ ಬೆಂಗಳೂರಿನ ಗಣ್ಯರಾದ ಶ್ರೀ ಡಿ. ಹನುಮಂತಪ್ಪನವರು, ವೈ. ವಿ. ತಿಮ್ಮಯ್ಯ (ವೈ. ಹೆಚ್. ಅಪ್ಪಾಜಿ),

ಬಿ.ಜಿ. ವೀರಣ್ಣನವರು ಬಾಗಲಕೋಟೆಯ ದಾನವೀರ ಶ್ರೀಮಂತ ವೆಂಕಪ್ಪ ವಾಸಪ್ಪ ಸಕ್ರಿ ಮತ್ತು ಹಲವಾರು ಗಣ್ಯರು ಅತ್ಯಂತ ಅಭಿಮಾನದಿಂದ ಶ್ರಮವಹಿಸಿ ಇಡೀ ಕರ್ನಾಟಕದಲ್ಲಿ ಕಾರ್ಯನಿರತರಾಗಿ ಜನಾಂಗದಲ್ಲಿ ನವಚೇತನ ನೀಡಿದರು.

ಈ ದಿಸೆಯಲ್ಲಿ ಮುಂದುವರೆದು ಅಖಿಲ ಕರ್ನಾಟಕ ಹಂತದಲ್ಲಿ ಸಮಿತಿಯನ್ನು ರಚಿಸಿದರು. ಅದರಲ್ಲಿ ಮೇಲ್ಕಂಡವರು ಅಲ್ಲದೆ ಎಫ್.ಎಮ್. ಭರದ್ವಾಜ್, ಬಿ.ಬಿ. ಬಣ್ಣದ, ಒ.ವಿ. ನಾರಾಯಣಪ್ಪ ಅರಳಿಕಟ್ಟಿ, ಮೋಹನ್‌ರಾವ್ ಹುಬ್ಳೀಕರ್ ಮುಂತಾದ ಪ್ರಮುಖರು ಶ್ರೀ ಗಾಯತ್ರಿ ಪೀಠದ ಪುನರುದ್ಧಾರ ಕಾರ್ಯಕ್ಕೆಗೊಂಡರು.

ಹೀಗೆ ಎಲ್ಲಾ ದೇವಾಂಗ ಜನಾಂಗದವರ ಸದಾಶಯದಿಂದ ರೂಪಿತವಾದ ಜಗದ್ಗುರು ಮಠ ಪುನರುದ್ಧಾರ ಸಮಿತಿಯವರು ಹಾಗೂ ಶ್ರೀ ಪಳನೀಸ್ವಾಮಿಯವರು ಶ್ರೀ ಗಾಯತ್ರಿ ಪೀಠದ ಪುನರುದ್ಧಾರ ಮಾಡಿ, ಅಲ್ಲಿ ಶ್ರೀ ಗಾಯತ್ರಿ ವಿಗ್ರಹವನ್ನು ಪ್ರತಿಷ್ಠಾಪಿಸಿ, ಮೊದಲೇ ಅಲ್ಲಿ ಸ್ಥಾಪಿತವಾಗಿದ್ದ ರಾಮಲಿಂಗೇಶ್ವರನಿಗೂ, ಶ್ರೀ ಚೌಡೇಶ್ವರೀ ಅಮ್ಮನವರಿಗೂ ಸಹ ನಿತ್ಯ ಪೂಜೆಯಾಗುವಂತೆ ಏರ್ಪಡಿಸಿದರು.

ಒಂದು ಸುದಿನ; ಶ್ರೀ ಶ್ರೀ ಮುದ್ದುಸಂಗಮಹಾಮುನಿಗಳ ವಂಶಸ್ಥರಾದ ಶ್ರೀಮತಿ ಲಕ್ಷ್ಮೀದೇವಮ್ಮ ಶ್ರೀ ಶಂಕರಯ್ಯ ಸ್ವಾಮಿಗಳು ದೇವಾಂಗ ಮಠ ಕಂಪ್ಲಿ, ಇವರ ಸುಪುತ್ರರಾದ ಶ್ರೀ ನಿರಂಜನಸ್ವಾಮಿಯವರನ್ನು ಆರಿಸಿ ಜಗದ್ಗುರುಗಳೆಂದು ನಿಯೋಜಿಸಿ ಶಾಸ್ತ್ರಾಧ್ಯಯನ ಮತ್ತು ವೇದಾಧ್ಯಯನಕ್ಕಾಗಿ ಬೆಂಗಳೂರಿನ ರಾಜರಾಜೇಶ್ವರಿ ದೇವಸ್ಥಾನದ ಸಂಸ್ಥಾಪಕರಾದ ಪೂಜ್ಯ ಶ್ರೀ ಶ್ರೀ ಶ್ರೀ ತಿರುಚ್ಚಿ ಸ್ವಾಮಿಗಳವರ ಕೃಪಾಶ್ರಯಕ್ಕೆ ಒಪ್ಪಿಸಿದರು.

ಶ್ರೀ ಶ್ರೀ ಶ್ರೀ ತಿರುಚ್ಚಿ ಸ್ವಾಮಿಯವರು 1985 ರಲ್ಲಿ ನಿರಂಜನಸ್ವಾಮಿಗಳವರಿಗೆ ಶ್ರೀ ದತ್ತಾತ್ರೇಯ ಚೈತನ್ಯಸ್ವಾಮಿಗಳೆಂದು ನಾಮಕರಣ ಮಾಡಿ ಬ್ರಹ್ಮಚರ್ಯ ದೀಕ್ಷೆ ನೀಡಿದರು. ಆ ನಂತರ ಆಗಸ್ಟ್ 29 ರಂದು ಅನೇಕ ಧರ್ಮಗುರುಗಳ ಸಮಕ್ಷಮ ಶ್ರೀ ಚೈತನ್ಯ ಸ್ವಾಮಿಗಳಿಗೆ ಸನ್ಯಾಸದೀಕ್ಷೆ ನೀಡಿ ದಯಾನಂದ ಪುರಿ ಸ್ವಾಮಿಗಳೆಂದು ಅಭಿದಾನ ಮಾಡಿದರು. ನಂತರವೂ ಶ್ರೀಗಳವರ ಅಧ್ಯಯನ ಮುಂದುವರೆಯಿತು. ಶ್ರೀ ಶ್ರೀಗಳವರಿಗೆ ಇನ್ನು ಪಟ್ಟಾಭಿಷೇಕವಾಗದಿದ್ದರೂ ಸಹ ಬೆಂಗಳೂರಿನ ಮತಬಾಂಧವರು ಶ್ರೀ ಶ್ರೀಗಳವರನ್ನು ಆಶ್ರಮದಿಂದ ನಗರಕ್ಕೆ ಬರಮಾಡಿಕೊಂಡು

ಅತ್ಯಂತ ಶ್ರದ್ಧಾ ಭಕ್ತಿ ಭಾವಗಳಿಂದಲೂ, ವಿಜೃಂಭಣೆಯಿಂದಲೂ ಮೈಸೂರು ಬ್ಯಾಂಕ್ ಆಂಜನೇಯಸ್ವಾಮಿ ದೇವಸ್ಥಾನದಿಂದ ಶ್ರೀ ಚೌಡೇಶ್ವರಿ ದೇವಸ್ಥಾನ, ದೇವಾಂಗ ಸಂಘದವರೆವಿಗೆ ತಳಿರು-ತೋರಣಗಳಿಂದ ಅಲಂಕರಿಸಿ ಪಲ್ಲಕ್ಕಿಯಲ್ಲಿ ಮೆರವಣಿಗೆ ಮಾಡಿದರು.

ಜಗದ್ಗುರುಗಳವರ ಪಟ್ಟಾಭಿಷೇಕ ನಡೆಯಬೇಕೆಂದು ದೇಶದ ನಾನಾ ಮೂಲೆಗಳಿಂದ ಒತ್ತಾಯ ಬಂದಿತು. ಆಗ ಸಮಿತಿಯವರು ಕರ್ನಾಟಕ ಮತ್ತು ತಮಿಳುನಾಡು ಸಮಾಜದ ಹಿರಿಯರೊಡನೆ ಸಮಾಲೋಚಿಸಿ ಹಂಪೆಯಲ್ಲಿರುವ ಮೂಲ ಪೀಠ ಶ್ರೀ ಗಾಯತ್ರಿ ಪೀಠದಲ್ಲಿ ಶ್ರೀ ಶ್ರೀ ಶ್ರೀಗಳಿಗೆ ಪಟ್ಟಾಭಿಷೇಕ ಮಹೋತ್ಸವವನ್ನು ನೆರವೇರಿಸಲು ಪ್ರಯತ್ನಿಸಿ ಸಫಲರಾದರು.

30-4-1990 ರ ಅಮೃತಘಳಿಗೆಯಲ್ಲಿ ಶ್ರೀ ಶ್ರೀ ಶ್ರೀ ದಯಾನಂದಪುರಿ ಮಹಾಸ್ವಾಮಿಗಳವರಿಗೆ ಪಟ್ಟಾಭಿಷೇಕವು ಭಕ್ತಿಪೂರ್ಣ ಆನಂದಸಾಗರದಲ್ಲಿ ನೆರವೇರಿಸಲ್ಪಟ್ಟು, ಇಡೀ ಜನಾಂಗವೇ ಧನ್ಯವಾಯಿತು ಎಂದು ನಮ್ಮ ದೇವಾಂಗ ಜನತೆಯು ಸಂತೋಷಪಟ್ಟಿತು. ಈ ಸಂದರ್ಭದಲ್ಲಿ ಲಕ್ಷಾಂತರ ಜನಸಮುದಾಯವು ಭಾರತಾದ್ಯಂತ ನಾನಾ ಮೂಲೆಗಳಿಂದ ಬಂದು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದುದು ನಯನ ಮನೋಹರವಾಗಿದ್ದಿತು.

ಪಟ್ಟಾಭಿಷೇಕದ ನಂತರ ಶ್ರೀಗಳವರು ರಾಜ್ಯದ ನಾನಾ ಮೂಲೆಗಳಿಗೆ ಪ್ರವಾಸ ಮಾಡಿದ್ದಾರೆ. ಹಾಗೆಯೇ ಆಂಧ್ರ, ತಮಿಳುನಾಡು, ಮಹಾರಾಷ್ಟ್ರ ರಾಜ್ಯಗಳಿಗೆ ಭೇಟಿಕೊಟ್ಟರು. ಶ್ರೀಗಳವರ ವರ್ಚಸ್ಸು, ವಾಙ್ಮಯತೆಗೆ ಜನ ಮಾರುಹೋದರು. ಅಖಿಲ ಭಾರತ ದೇವಾಂಗ ಸಂಘಟನೆ ಬಗ್ಗೆ ಶ್ರೀಯವರು ತೀವ್ರ ಗಮನಹರಿಸಿ ಜನತೆಯನ್ನು ಹುರಿದುಂಬಿಸಿದರು. ಶ್ರೀ ಶ್ರೀಗಳವರು ಹೋದೆಡೆಯೆಲ್ಲಾ ಜನ ಹಿಂಡು ಹಿಂಡಾಗಿ ಸ್ವಾಮಿಯವರ ದರ್ಶನಕ್ಕೆ ಕಾದಿರುತ್ತಿದ್ದರು. ಹಗಲು ರಾತ್ರಿ, ಬಿಸಿಲು ಮಳೆಯೆನ್ನದೆ ಜನತೆ ಶ್ರೀಯವರ ನಿರೀಕ್ಷಣೆಯಲ್ಲಿರುತ್ತಿದ್ದುದನ್ನು ನೋಡಿದವರಿಗೆ ಆನಂದಾಶ್ರುಗಳು ವರ್ಷಿಸುತ್ತಿದ್ದುವು.

ಹೀಗೆ ಪ್ರವಾಸಮಾಡುತ್ತಿರುವಾಗ ದೇವಾಂಗ ಜನತೆಯು ನಿತ್ಯ ಎದುರಿಸುತ್ತಿರುವ ಸಮಸ್ಯೆಗಳನ್ನು ಅಂದರೆ ಅದು ದಾಂಪತ್ಯ ಸಮಸ್ಯೆಯಾಗಿರಲಿ,

ಮಕ್ಕಳ ಸಮಸ್ಯೆಯಾಗಲಿ, ಕುಟುಂಬ, ವೈಯಕ್ತಿಕ ದ್ವೇಷ, ಗ್ರಾಮದಲ್ಲಿರುವ ಅಡಚಣೆ, ರೋಗರುಜಿನಗಳು, ದೆವ್ವ ಪೀಡೆ ಪೀಡಿತರಾಗಿರಲಿ, ರಾಜಕೀಯ ಸಮಸ್ಯೆಯಾಗಲಿ, ಅಣ್ಣತಮ್ಮಂದಿರ ಜಗಳವಾಗಲಿ ಹೀಗೆ ಒಂದೇ ಎರಡೇ, ನಾನಾರೀತಿಯ ಸಮಸ್ಯೆಗಳನ್ನು ಶ್ರೀಯವರು ತಮ್ಮ ವಾಗ್ಝರಿಯಿಂದಲೂ ತಪೋಮಹಿಮೆಯಿಂದಲೂ ನಿವಾರಿಸುತ್ತಿದ್ದಾರೆ.

ಬೆಂಗಳೂರು ದೊಮ್ಮಸಂದ್ರದ ರಸ್ತೆಯ 18ನೇ ಕಿ.ಮೀ. ಕಲ್ಲಿನ ಸಮೀಪ ಶ್ರೀ ಎಂ.ಆರ್. ಮುನಿಶಾಮಯ್ಯ ಎಂಬುವವರು ಶ್ರೀಯವರ ದಿವ್ಯ ತೇಜಸ್ಸನ್ನು ಕಂಡು ತಾವು ಬೇರೆ ಜನಾಂಗದವರಾದರೂ ಸಹ ತಮ್ಮ ವಿಶಾಲವಾದ ಜಮೀನಿನ ಆಸ್ತಿಯಲ್ಲಿ ಒಂದು ಎಕರೆ ವಿಸ್ತೀರ್ಣದ ಭೂಮಿಯನ್ನು ಶ್ರೀ ಮಠಕಟ್ಟಲು ದಾನ ನೀಡಿ ಪುಣ್ಯ ಭಾಜನರಾಗಿದ್ದಾರೆ. ಈ ಜಮೀನಿನಲ್ಲಿ ಶ್ರೀಮಠ ಕಟ್ಟಲು ದಿನಾಂಕ 19-6-98 ರ ಶುಭದಿನ ವಿಜೃಂಭಣೆಯಿಂದ ಭೂಮಿಪೂಜೆ ಜರುಗಿದ್ದು ದೇವಾಂಗ ಮಹಾ ಸಮ್ಮೇಳನಾನಂತರ ಕಟ್ಟಡದ ಕಾರ್ಯ ಪ್ರಾರಂಭವಾಗಲಿರುವುದು ಮಹಾನ್ ಸಂತೋಷದ ಸಂಗತಿಯಾಗಿದೆ.

ಈ ಮಧ್ಯೆ ಶ್ರೀಮಠದ ಆಶೀರ್ವಚನ, ಪ್ರವಚನ, ಶ್ರೀಮಠದ ವಾರ್ತೆಗಳನ್ನು ಪ್ರಚಾರ ಮಾಡುವ ಸಲುವಾಗಿ ಹಾಗೂ ಜನಾಂಗ ಸಂಘಟನೆಗಾಗಿ ತಮ್ಮದೇ ಆದ ಪತ್ರಿಕೆ ಇರಬೇಕೆಂಬ ಅವಶ್ಯಕತೆ ಮನಗಂಡು ಶ್ರೀ ಶ್ರೀಗಳ 4ನೇ ವರ್ಷದ ಪಟ್ಟಾಭಿಷೇಕ ಮಹೋತ್ಸವ ಸಮಾರಂಭದಲ್ಲಿ 1994ನೇ ಜುಲೈ ತಿಂಗಳಲ್ಲಿ ಹೇಮತುಂಗ ಎಂಬ ತ್ರೈಮಾಸಿಕ ಪತ್ರಿಕೆಯನ್ನು ಹೊರತಂದರು. ಜನಾಂಗದಲ್ಲಿ ವಿದ್ಯಾಭಿವೃದ್ಧಿಯಾಗಬೇಕೆಂದು ಹಂಪೆಯಲ್ಲಿ ಶ್ರೀ ಮಠದ ಆಶ್ರಯದಲ್ಲಿ ಹೈಸ್ಕೂಲ್, ವೇದಪಾಠಶಾಲೆಗಳನ್ನು ಪ್ರಾರಂಭಿಸಿದ್ದಾರೆ. ಸಂಸ್ಕೃತ ಮನೆಮಾತಾಗದೆ ಸರ್ವಾಂಗೀಣ ಅಭಿವೃದ್ಧಿ ಸಾಧ್ಯವಿಲ್ಲವೆಂದು ಭಾವಿಸಿ, ಪ್ರತಿವರ್ಷ ಬೇಸಿಗೆಯಲ್ಲಿ ಸಂಸ್ಕೃತ ಸಂಭಾಷಣೆ, ವೇದಾಧ್ಯಯನ, ಯೋಗಾಸನ ಶಿಕ್ಷಣ ಶಿಬಿರಗಳನ್ನು ಏರ್ಪಡಿಸಿರುತ್ತಾರೆ.

ಅಲ್ಲದೆ ಹಂಪೆಯಲ್ಲಿ ಸುಂದರವಾದ ಮಠವನ್ನು ಪ್ರಶಾಂತ ವಾತಾವರಣದಲ್ಲಿ ಕಟ್ಟಲಾಗಿದೆ. ಮಠದ ಅಗತ್ಯತೆಯನ್ನು ಮನಗಂಡು ಪಾಕಶಾಲೆ, ಅತಿಥಿಗಳ ವಸತಿ, ಸಿಬ್ಬಂದಿ ವಸತಿ ಇತ್ಯಾದಿಗಳ ಕಟ್ಟಡ ತಯಾರಾಗಿರುತ್ತೆ. ನಿತ್ಯವೂ ಅಲ್ಲಿ ನೂರಾರು

ಜನ ಯಾತ್ರಿಕರು, ಸಮಾಜ ಬಂಧುಗಳು ಬಂದು ಶ್ರೀ ಮಠದ ದರ್ಶನ ಮಾಡುತ್ತಾರೆ. ಸಮಾಜ ಬಂಧುಗಳಿಗೆ ಊಟದ ವ್ಯವಸ್ಥೆ ಇದೆ. ಅಲ್ಲದೆ ಬಡ ಹಾಗೂ ಅನಾಥ ವಿದ್ಯಾರ್ಥಿಗಳಿಗೆ ಊಟವಸತಿ ಸಕಲ ಸೌಕರ್ಯಗಳನ್ನು ನೀಡಿ ಉಚಿತ ವಿದ್ಯಾರ್ಜನೆ ಮಾಡಲು ಅನುಕೂಲ ಒದಗಿಸಿರುತ್ತಾರೆ.

ಈ ಎಲ್ಲಾ ಚಟುವಟಿಕೆಗಳ ಮಧ್ಯೆ ತಮಿಳು ನಾಡಿನ ಭಕ್ತರು ಶ್ರೀ ಶ್ರೀಗಳವರ ಸಾನ್ನಿಧ್ಯವನ್ನು ಹೆಚ್ಚು ಹೆಚ್ಚಾಗಿ ಬಯಸಿ ತೀವ್ರ ಕಾರ್ಯಕ್ರಮ ಹಮ್ಮಿಕೊಂಡರು. ಶ್ರೀಗಳವರು ತಮಿಳು ನಾಡಿನಲ್ಲಿ ಹೆಚ್ಚು ಪ್ರವಾಸ ಕೈಗೊಂಡರು. ಆ ರಾಜ್ಯದವರು ತಮಿಳುನಾಡಿನಲ್ಲಿ ಶಾಖಾಮಠವೊಂದನ್ನು ಸ್ಥಾಪಿಸಬೇಕೆಂದು ಆಶಿಸಿರುತ್ತಾರೆ. ಈ ಬಗ್ಗೆ ತುಂಬಾ ಸುತ್ತಾಡಿ ಹಾಗು ಶ್ರಮಪಟ್ಟು ಉಡುಮಲ್ ಪೇಟೆಗೆ 20 ಕಿ.ಮೀ. ದೂರದಲ್ಲಿರುವ ತ್ರಿಮೂರ್ತಿ ಬೆಟ್ಟವೆಂದು ಖ್ಯಾತಿಯಾಗಿರುವ ಬೆಟ್ಟದ ತಪ್ಪಲಿನಲ್ಲಿ ಸುಂದರವಾದ, ನಯನ ಮನೋಹರವಾದ ಸ್ಥಳವನ್ನು ಆರಿಸಿ ಕ್ರಯಕ್ಕೆ ತೆಗೆದುಕೊಂಡು ಶಾಖಾಮಠ ಕಟ್ಟಲು ಭೂಮಿ ಪೂಜೆ ನೆರವೇರಿಸಿದರು. ನಂತರ ದಿನಾಂಕ 1-2-98 ರ ಶುಭದಿವಸ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ತ್ರಿಮೂರ್ತಿ ಬೆಟ್ಟದ ಶಾಖಾಮಠದ ಉದ್ಘಾಟನೆ ಅತಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಹಾಗೂ ಅಂದು ತಮಿಳಿನಲ್ಲಿಯೂ 'ಹೇಮತುಂಗ' ಪತ್ರಿಕೆಯ ಬಿಡುಗಡೆಯೂ ಆಯಿತು.

ಮಹಾರಾಷ್ಟ್ರದ ದೇವಾಂಗ ಸಮಾಜದವರು ಶ್ರೀ ಶ್ರೀಯವರ ಸಂದರ್ಶನ ಸೌಭಾಗ್ಯ ಹಾಗೂ ಆಶೀರ್ವಾದ ಪಡೆಯಲು ಸಂತೋಷದಿಂದ ಗುರುಸೇವೆಗೆ ಕಂಕಣಕಟ್ಟಿ ನಿಂತಿದ್ದಾರೆ. ದೇವಾಂಗ ಜನಾಂಗಕ್ಕೆ ಗುರುಗಳೊಬ್ಬರು ಇದ್ದಾರೆಂಬುದೇ ಅವರಿಗೆ ಅತಿ ಸಂತೋಷದಾಯಕವಾದ ಸಂಗತಿಯಾಗಿದೆ. ಶ್ರೀ ಶ್ರೀಗಳವರು ಅಲ್ಲಿ ಸಂಚಾರ ಹೊರಟಾಗ ಆ ಕಡೆಯ ಜನರು ಗುರುಗಳಿಗೆ ಅತ್ಯಂತ ವಿನಯ ಭಕ್ತಿಗಳಿಂದ ಆದರಿಸಿ ಸತ್ಕರಿಸಿದ್ದಾರೆ. 17-5-97 ರಿಂದ 19-5-97 ರವರೆಗೆ ಅದ್ದೂರಿಯಾಗಿ ಮಹಾರಾಷ್ಟ್ರ ದೇವಾಂಗ ಕೋಷ್ಠಿ ಸಮ್ಮೇಳನವು ಶ್ರೀಗಳವರ ಸಾನ್ನಿಧ್ಯದಲ್ಲಿ ಅವರಿಂದ ಉದ್ಘಾಟಿಸಿ ಅತಿ ವಿಜೃಂಭಣೆಯಾಗಿ ನೆರವೇರಿತು.

ಹೀಗೆ ಗುರುಗಳವರು ದೇವಾಂಗ ಸಂಘಟನೆ ಮಾಡುತ್ತಾ ಪ್ರವಾಸ ಕೈಕೊಂಡಿದ್ದರ ಫಲವೇ 'ಅಖಿಲ ಭಾರತ ದೇವಾಂಗ ಮಹಾಸಮ್ಮೇಳನ - 98' ಏರ್ಪಟ್ಟಿದೆ. ಪೂಜ್ಯರು ದೇವಾಂಗ ಜನಾಂಗದವರ ಶ್ರೇಯಸ್ಸಿಗಾಗಿ ಹಗಲಿರುಳೂ, ಶ್ರಮಿಸುತ್ತಿದ್ದಾರೆ. ಇಂಥಹ ಸದ್ಗುರುಗಳ ಮಾರ್ಗದರ್ಶನದಲ್ಲಿ ದಿನಾಂಕ 4, 5, 6 ಡಿಸೆಂಬರ್ 98 ರಂದು ಸಮ್ಮೇಳನವು ನೆರವೇರಿ ದೇವಾಂಗ ಜನಾಂಗಕ್ಕೆ ಅಭಿವೃದ್ಧಿಯಾಗಲೆಂದು ಹಾರೈಸುತ್ತಾ ಶ್ರೀ ಶ್ರೀ ಶ್ರೀಗಳವರ ಪಾದಾರವಿಂದಗಳಿಗೆ ನಮಸ್ಕರಿಸುತ್ತಾ ವಿರಮಿಸುತ್ತೇವೆ.

ಎಸ್.ಬಿ. ಮುನಿಶಂಕರಪ್ಪ

ಸ್ತೋತ್ರಗಳು

ಶ್ರೀ ಶಾಂಭವಿ ಅಷ್ಟೋತ್ತರ ಶತನಾಮಾವಳಿ

೧ ಓಂ ಶಾಂಭವ್ಯೈ ನಮಃ
,, ಶಂಭುಪ್ರಿಯಾಯೈ ನಮಃ
,, ಶಾಕಂಬರ್ಯೈ ನಮಃ
,, ಬನಶಂಕರ್ಯೈ ನಮಃ
,, ತಾಂಡವೇಶ್ವರ್ಯೈ ನಮಃ
,, ಅಮೃತಾಯೈ ನಮಃ
,, ಸಿಂಹವಾಹಿನ್ಯೈ ನಮಃ
,, ವಿಮಲಾಯೈ ನಮಃ
,, ಮಹೇಶ್ವರ್ಯೈ ನಮಃ
೧೦ ,, ಮನೋನ್ಮನ್ಯೈ ನಮಃ
,, ಚೌಡೇಶ್ವರ್ಯೈ ನಮಃ
,, ದೇವಾಂಗ ಪೂಜಿತಾಯೈ ನಮಃ
,, ದೇವಾಂಗ ಕುಲಪಾಲಿನ್ಯೈ ನಮಃ
,, ಉನ್ಮೀಲನ್ಯೈ ನಮಃ
,, ಹ್ರೀಂಕಾರ್ಯೈ ನಮಃ
,, ಓಂಕಾರ ರೂಪಿಣ್ಯೈ ನಮಃ
,, ಅನ್ನಪೂರ್ಣೇಶ್ವರ್ಯೈ ನಮಃ
,, ವಾಣ್ಯೈ ನಮಃ
,, ಪಾರ್ವತ್ಯೈ ನಮಃ
೨೦ ,, ಗಾಯತ್ರ್ಯೈ ನಮಃ
,, ಸಾವಿತ್ರ್ಯೈ ನಮಃ
,, ಸರಸ್ವತ್ಯೈ ನಮಃ
,, ಚಾಮುಂಡಾಯೈ ನಮಃ
,, ಮೃಡಾಣ್ಯೈ ನಮಃ
,, ಸುಮತ್ಯೈ ನಮಃ
,, ಹೈಮವತ್ಯೈ ನಮಃ

ಓಂ ಮಹಾಮಾಯಾಯೈ ನಮಃ
" ಶರ್ವಾಣ್ಯೈ ನಮಃ
" ಗಿರಿಜಾಯೈ ನಮಃ
೩೦ " ಗೀರ್ವಾಣ್ಯೈ ನಮಃ
ಓಂ ಮಧುಮತ್ಯೈ ನಮಃ
" ಕಾತ್ಯಾಯನ್ಯೈ ನಮಃ
" ದಯಾರಸ ಪೂರಿತಾಯೈ ನಮಃ
" ಅಂಬಿಕಾಯೈ ನಮಃ
" ಕಂಬುಕಂಠ್ಯೈ ನಮಃ
" ಕಲ್ಯಾಣ್ಯೈ ನಮಃ
" ರುದ್ರಾಣ್ಯೈ ನಮಃ
" ಭವಾನ್ಯೈ ನಮಃ
" ರಮಾಯೈ ನಮಃ
೪೦ " ಭವಾನ್ಯೈ ನಮಃ
" ಗೌರ್ಯೈ ನಮಃ
" ಲಕ್ಷ್ಮ್ಯೈ ನಮಃ
" ಧರಣ್ಯೈ ನಮಃ
" ಧಾರಿಣ್ಯೈ ನಮಃ
" ವಿಶ್ವಾತ್ರಿಕಾಯೈ ನಮಃ
" ಸರ್ವಮಂಗಳಾಯೈ ನಮಃ
" ಮಾತಂಗ್ಯೈ ನಮಃ
" ದೇವ್ಯೈ ನಮಃ
" ನಿರ್ಮಲಾಯೈ ನಮಃ
೫೦ " ಶಾಂತ್ಯೈ ನಮಃ
ಕಾಂತ್ಯೈ ನಮಃ
" ಸಚ್ಚಿದಾನಂದ ರೂಪಿಣ್ಯೈ ನಮಃ
" ಪರಾಯೈ ನಮಃ
" ಚಂಡ್ಯೈ ನಮಃ
" ಕಾಳ್ಯೈ ನಮಃ
" ಕೌಮಾರ್ಯೈ ನಮಃ
" ಬಾಲೆಯ್ಯೈ ನಮಃ
" ಪಿಂಡಾಂಡಮಯ್ಯೈ ನಮಃ

ಓಂ ಜಗನ್ಮಾತಾಯೈ ನಮಃ

೬೦ ,, ಸುಲಲಿತಾಯೈ ನಮಃ

,, ಶುಭ್ಯಾಯೈ ನಮಃ

,, ಪರಬ್ರಹ್ಮ ಸ್ವರೂಪಿಣ್ಯೈ ನಮಃ

,, ಸುಮುಖ್ಯೈ ನಮಃ

,, ಕುಜ ಸಂಹಾರಿಣ್ಯೈ ನಮಃ

,, ರಾಮಲಿಂಗೇಸನರ್ಧಾಂಗ್ಯೈ ನಮಃ

,, ರಾಮನಾಥ ಪ್ರಿಯಾಯೈ ನಮಃ

,, ಕನಕ ದುರ್ಗಾಯೈ ನಮಃ

,, ಕಹಂಕಾಳ್ಯೈ ನಮಃ

,, ಕಲಿಕಲಕ್ಷ ನಾಶಿನ್ಯೈ ನಮಃ

೭೦ ,, ಖಂಡೇಂದು ತಿಲಕಾಯೈ ನಮಃ

,, ಗದಾ ಧಾರಿಣ್ಯೈ ನಮಃ

,, ತ್ರಿಶೂಲಿನ್ಯೈ ನಮಃ

,, ಗಾಯತ್ರೀ ಪೀಠಾಧೀಶ್ವರ್ಯೈ ನಮಃ

,, ಋಗ್ರೂಪಾಯೈ ನಮಃ

,, ಋಕ್ಯಾಖಾಧೀಶ್ವರ್ಯೈ ನಮಃ

,, ಋಣತ್ರಯ ವಿಮೋಚಿನ್ಯೈ ನಮಃ

,, ಭಕ್ತ ಪ್ರಿಯಾಯೈ ನಮಃ

,, ಭಕ್ತ ಜನೋದ್ಧಾರಿಣ್ಯೈ ನಮಃ

,, ಆಶ್ರಿತ ವತ್ಸಲಾಯೈ ನಮಃ

೮೦ ,, ಶರಣಾಗತ ರಕ್ಷಿಣ್ಯೈ ನಮಃ

,, ಐಹಿಕಾಮುಷ್ಮಿಕ ಫಲಪ್ರದಾಯೈ ನಮಃ

,, ಪೂರ್ಣಾಯೈ ನಮಃ

,, ಕ್ಷಮಾಯೈ ನಮಃ

,, ನಿರಾಕಾರಾಯೈ ನಮಃ

,, ಉಮಾಯೈ ನಮಃ

,, ಕೋದಂಡಪಾಣ್ಯೈ ನಮಃ

,, ಧನಧಾನ್ಯೇಶ್ವರ್ಯೈ ನಮಃ

,, ರೋಹಿಣ್ಯೈ ನಮಃ

,, ಸಿದ್ಧ ಚಾರಣ ಸೇವಿತಾಯೈ ನಮಃ

೯೦ '' ಯಜ್ಞಪ್ರಿಯಾಯ್ಯೈ ನಮಃ

'' ವಸುದೇವತಾಯ್ಯೈ ನಮಃ

ಓಂ ಹಿರಣ್ಮಯ್ಯೈ ನಮಃ

'' ಸೌಮ್ಯಾಯ್ಯೈ ನಮಃ

'' ಯೋಗಾಯ್ಯೈ ನಮಃ

'' ಬ್ರಹ್ಮಾಂಡ ಭಾಂಡೋದರಾಯ್ಯೈ ನಮಃ

'' ವಿಶ್ವಂಭರಾಯ್ಯೈ ನಮಃ

'' ವಿಶ್ವಮೋಹಿನ್ಯೈ ನಮಃ

'' ವಸುಂಧರಾಯ್ಯೈ ನಮಃ

'' ವಿದ್ಯಾಧರ ಪೂಜಿತಾಯ್ಯೈ ನಮಃ

೧೦೦ '' ದೇವಶಾಲಿ ವರಪ್ರದಾಯ್ಯೈ ನಮಃ

'' ವರರುಚಿ ಸೇವಿತಾಯ್ಯೈ ನಮಃ

'' ಸರ್ವಜ್ಞ ಪಾಲಿನ್ಯೈ ನಮಃ

'' ಪುಷ್ಪದಂತಾರ್ಚಿತಾಯ್ಯೈ ನಮಃ

'' ದಾಸಿಮಾರ್ಯಾತವನಿ ಧ್ಯನುಗ್ರಹದಾಯಿನ್ಯೈ ನಮಃ

'' ಭೇತಾಳ ಶಾಪ ವಿಮೋಚಿನ್ಯೈ ನಮಃ

'' ದೇವಲ ವಂಶ ಪೂಜಿತಾಯ್ಯೈ ನಮಃ

'' ದೇವಾಂಗ ಪಂಚವರ್ಣ ಪ್ರದಾಯಿನ್ಯೈ ನಮಃ

೧೦೮ '' ದೇವಲ ದ್ವಿಜವೃಂದ ಸೇವಿತಾಯ್ಯೈ ನಮಃ

★★★★

ಶ್ರೀ ಚೌಡೇಶ್ವರಿ ಅಮ್ಮನವರ ದಂಡಕ

ಶ್ರೀ ಜಗದಾಂಬ ಶೃಂಗಾರ ಚೌಡಾಂಬ ರಾಜರಾಜೇಶ್ವರಿ ರಮಣೀಯ ಮುಖಾಂಬ- ಭುಜಗಭೂಷಣರಾಣಿ ಭಲರೆ ಗೀರ್ವಾಣಿ ಅಜಸುರಾರ್ಚಿತಪಾದ ಅಂಬುಜಪಾಣಿ ನಿನ್ನ ವರ್ಣಿಸಲು ನಾನೆಷ್ಟರವನು- ನಿನ್ನ ನಿಜವ ತಿಳಿಯಲ್ ನಾನೆಷ್ಟರವನು- ಪನ್ನಗೇಂದ್ರರು ಮುಖ್ಯ ಪ್ರಮತಗಣಂಗಳು ಕಿನ್ನರೇಶ್ವರರು ಕೃಷ್ಣನೂ ಚಿನ್ಮಯ ಮೂರ್ತಿ ನಿನ್ನಂ ಸ್ತುತಿಸಿ ಕಾಣದಾದರೂ- ಆದಿ ಪರಂಜ್ಯೋತಿ - ಆನಂದರೂಪಿಣಿ- ನಾದ ವಿನೋದಿನಿ ನನ್ನ ಪಾಲಿನ ದೇವಿ- ಶೂಲಢಮರುಗಪಾಣಿ- ಸುಂದರಾಕಾರಿ- ಮೂಲಮಂತ್ರಾ ಧಾರಿ- ಮುಖ್ಯಕೌಮಾರಿ -ಬೇಡಿಕೊಂಬೆನು ನಿನ್ನ- ವೈದೇಹಿ ಬಾ- ಚೌಡೇಶ್ವರಿ ಬಾ- ಶಾಂಭವಿ ಬಾ- ಆಡುತ್ತ ಪಾಡುತ್ತ ಅಲಿವೇಣಿ ಬಾ ನವಕೋಟಿಶಕ್ತಿಯರ ನರಸಿಂಹಿಬಾ- ನಗೆಮುಖದ ತಾಯಿ ನಡೆದು

ಬಾರಮ್ಮ-ತಡಮಾಡದೆ ಬೇಗ ಬಾರಮ್ಮ ಜಾಲಾರಿಗಂಗೆ - ಜಯ ಜಯಜಗದಾಂಬ-ಜಯಶ್ಯಾಮಲಾಂಬ-ಜಯ ಸದ್ಗುಣಕದಂಬ-ಜಯಶಾರದಾಂಬ- ತಾಯಿ ತಂದೆಯು ಗುರುವು ದಾತೃ ದೈವವೆಲ್ಲವೂ ನೀನೆ - ಎಲ್ಲ ರೂಪಗಳ ಧರಿಸಿ ತಾನಾಗಿರುವೆ ನೀನು-ಮಲ್ಲಿಕಾರ್ಜುನರಾಣಿ-ಮಹಿಮ ಕಲ್ಯಾಣಿ - ಪಲ್ಲವಾದರಪಾಣಿ ಭಕ್ತಸಂತ್ರಾಣಿ - ಶರಣು ಶಾಂಭವಿ ಗೌರಿ ಶೈಲಕುಮಾರಿ-ಶಂಕರ ಸದಾಚಾರಿ-ಜಯ ದೃಢಶಾಲಿ ನಾದಾಂತ ಸಂಚಾರಿ-ನಟನವಿಹಾರಿ-ಆದಿಮೂಲವು ನೀನೆ-ಎಲ್ಲವೂ ನೀನೆ-ಆದಿಗೂ ಆದಿಯಾಗಿ ಬೆಳಗುವವಳು ನೀನೆ-ಮೂರ್ತಿತ್ರಯರಿಗೆ ಮೂಲವೂ ನೀನೆ-ಕರುಣದಿಂ ನನ್ನ ವಶವಾಗಿರು ನಾರೀಮಣಿ ತಾಯಿ-ನಾಕಸುರವಲ್ಲಿ ಪಾಲಿಸು ನಮ್ಮನ್ನು ಬಂಗಾರ ಪುತ್ಥಳಿಯಮ್ಮ, ಪತಿತಪಾವನ ಶೀಲೆ ಹೆಚ್ಚು ಹೇಳುವುದೇನು, ಪರಮ ನೀಚನು ನಾನು ಪತಿತನು ನಾನು-ದುರಿತ ಕರ್ಮಿಯು ನಾನು-ದುಷ್ಟನು ನಾನು, ಗುಣಹೀನನು ನಾನು ಕುಟಿಲನು ನಾನು - ದೃಢದಿಂ ನೀ ದಯೆತೋರಿ ಕಾಪಾಡಮ್ಮ-ಗುರುಭಕ್ತಿಮರೆತು ಗುರುವ ನರಿಯದವನು ನಾನಾದೆ-ಅಮ್ಮಯ್ಯ ನೀನು ಕೃಪೆಯಿಂದ ಈ ವೇಳೆ ನಮ್ಮ ಚಿಂತಿ ತಾರ್ಥಗಳನ್ನೆಲ್ಲ ಪೂರೈಸು-ಅಂಬಾ ಪರಾಕು-ಹಡೆದಮ್ಮ ನೀನಲ್ಲವೇ ಕಡೆಹಾಯ್ದು ತಾಯೆ-ನಿನ್ನ ನಂಬಿದ ಮೇಲೆ ನನಗೇನು ಶಂಕೆ-ಮರೆತಾದರೂ-ಕೈ ಬಡಿದಾದರೂ-ಕನಸಿ ನಲ್ಲಾದರೂ-ಒಂದು ಸಲವಾದರೂ-ನಿನ್ನ ನಾಮಸ್ಮರಣೆಮಾಡಿದವನೆ ಧನ್ಯನು, ಅವನೇ ವಸುಧೆ ಮಾನ್ಯನು-ಭವಬಂಧರಹಿತನು, ನಿತ್ಯ ಭಕ್ತಿಪರನಹುದು-ಮುಕ್ತನೂ ಸತ್ಯಸಂಧನೂ ಅವನೆ-ಸರ್ವಜ್ಞನವನೆಂದು ವೇದಗಳುಸುರಿತವೆ-ಮುನಿಕುಲವೆಲ್ಲ ನಿನ್ನಂ ಶರಣು ಪೊಂದಲು-ನಿನಗೆ ಶರಣೆಂದೆ-ನಿನ್ನ ಭಂಟನೆಂದೆ ನೀನೆ ದಿಕ್ಕೆಂದೆ-ನಿನ್ನ ಬೇಡಿಕೊಂಡೆ ಈ ಸಮಯ ಸಕಲ ಬಂಧಗಳು ತೊಲಗೆ ಸದ್ಭಕ್ತಿ ಘುಟ್ಟಲು-ಗುರುಭಕ್ತಿಯುತನಾದೆ-ಗುಣವಂತನಾದೆ-ನಮ್ಮ ಕಷ್ಟಗಳು ತೀರಿದವು-ಅಮ್ಮಯ್ಯ ನಿಮಗೆಷ್ಟು ಕರುಣವೂ ನಮ್ಮ ಮೇಲೆ - ನಿನ್ನ ನಂಬಿದ ನನಗೆ ಸಕಲ ಸಂಪದಗಳು ದೊರಕಿದವು - ನನ್ನ ಸತ್ಕೀರ್ತಿ ಹೆಚ್ಚಿತು-ನಿತ್ಯ ಕಲ್ಯಾಣಿ-ಓ ನೀರಜ ಪಾಣಿ-ಮುಕ್ತ ಕೋಕಿಲವಾಣಿ-ನಮ್ಮಂ ನೀನು ದಯಂದಿಂ ಕಟಾಕ್ಷಿಸು-ವಾರಾಹಿ ವೈಷ್ಣವಿಗೌರಿ ಕೌಮಾರಿ-ಭೈರವಿ ಪರದೇವಿ ಭಾರತಿ_ದೇವಿ-ಓಂಕಾರಮಯಗಾತ್ರಿ ವನನಿಧಿಪುತ್ರಿ, ಶ್ರೀ ದೇವಿ ಭೂದೇವಿ ಶ್ರೀ ಮಹಾದೇವಿ, ಗಾಯತ್ರಿ ಸಾವಿತ್ರಿ ಸರಸ್ವತಿ ಸತ್ಯಳಾಗಾತ್ರಿ-ವಿಖ್ಯಾತಿಯಿಂದ ವೀರ ವೈಷ್ಣವಿ ಬಾ-ತಡ ಮಾಡದೆ ಬೇಗ ಬಾ ಜಾಲಾರಿ ಗಂಗೆ-ವೀರಭದ್ರಾದಿ ಷಣ್ಮುಖ ಭೈರವರೊಡಗೂಡಿದ ವೀರಶಕ್ತಿಯೇ ಬಾ-ಭಕ್ತರಂ ಪೊರೆವ ಅಂಬೆ ಕರುಣಿಸು-ಕನಕಾಂಗಿ ಕೈಲಾಸದಿಂ ಪೊರಮಟ್ಟು-ತರುಣೀಮಣಿ ಸಿಂಹಾಸನವನೇರಲು-ಪ್ರಮಥ ಗಣಂಗಳು ಪರಿವಾರ ಸಹಿತ ಕ್ರಮವಾಗಿ ದೇವಗಣಂಗಳು ಕೋಟಿಗಳ ನಡುವೆ ಭೇರಿನಿನಾದಂಗಳಂ ಮಾಡಿ ಭಯಂಕರವಾಗಿ ಭೋರ್ಗರೆಯ-ವೀರಕಹಳೆಗಳು - ವಿಜಯಸಿಂಹ ನಾದಗಳು ಢಣಾಢಣಾ ಎಂದು ಧಿಕ್ಕಿಗಳು ಧಿಮಿಧಿಮಿಯೆಂದು ದೇವ ದುಂದುಭಿಗಳು ಮೊಳಗಿ ಕವಿಕಿವುಡಾಗಿ ಗಡಚಿಕ್ಕಲ ಸಪ್ತತಾಳಗತಿಗಳು ಮೊರೆಯ-ಸಂತೋಷದಿಂ ಕಾಂತಿ ವೈಭವದಿಂ ಈಶ್ವರೀ ಬಂದು ಮರೆಯೆ - ತಾಯಿಯ ಮುಖ ಚಂದ್ರಕಾಂತಿಯಿಂ ಪ್ರಕಾಶಿಸಲು-ಕರುಣೆಯಿಂ ಕೂಡಿ ನೇತ್ರಂಗಳಂ ವರ್ಣಿಸಲಳವೆ-ಶಂಖದೋಲೆಯಿಂದಲಂಕರಿಸಿದ ಕರ್ಣಂಗಳು-ಮುಕುರ ದಿಂದೊಪ್ಪುವ ನಾಸಿಕವು-ಪೂರ್ಣಾಲಂಕಾರದಿಂದೊಡಗೂಡಿದ ಚುಕ್ಕಿಗಳ ಮೇಲ್ಕಟ್ಟು ಚಲುವಿನಿಂ ಹೊಳೆ ಹೊಳೆವ

ರೂಪವಂ ಶೂರವೃಂದವು ಕಂಡು- ವೀರರು ದೇವದುಂದುಭಿಗಳಂ ದಿಕ್ಕುದಿಕ್ಕುಗಳಲ್ಲಿ ಮೊರೆಯಿಸಲಾಗ- ಭಟರು ಆರ್ತಿಯಿಂ ಅಂಜಲೀ ಬದ್ಧರಾಗಿ ಹೊಗಳಲು- ಅಮ್ಮ ಬಂದಳಾಗ ನವಕೋಟಿ ರೂಪಿ- ಅಮ್ಮ ಬಂದಳು ರಕ್ತ ಬೀಜಾಸುರವಿಹಾರಿ- ಅಮ್ಮ ಬಂದಳು ಕುಜನ ಸಂಹಾರಿ- ಇದೋ ಅಮ್ಮ ಬಂದಳು ಚಂಡಿಕಾ ಎಂದುಸ್ತುತಿಸಲು ಗಂಡಪೆಂಡಾರಂಗಳು ಶಬ್ದಮಾಡಲು ಗಿರಿಗಳುದುರಲು, ಕೂರ್ಮ ಶೇಷರು ಭೀತರಾಗಲು ಮೇದಿನಿಯು ಬಾಯ್ಬಿಟ್ಟು ಕಂಪಿಸಲು- ನಕ್ಷತ್ರಗಳು ಚೆಲ್ಲಾಪಿಲ್ಲಿಯಾಗುದುರಲು- ದಿಕ್ಕುಗಳು ಬೆದರಲು- ರಾಕ್ಷಸರು ಭೀತಿಯಿಂ ಪಲಾಯನಗೈದಂ ನೋಡಿ- ಅಮ್ಮ ಶ್ರೀ ಚೌಡೇಶ್ವರಿ ದೇವಿಗೆ ಸಾಷ್ಟಾಂಗಮೆರಗಿ ಕೈಮುಗಿದು ಅರ್ಘ್ಯಪಾದ್ಯಗಳನಿತ್ತು- ರತ್ನ ಮಂಟಪದ ಮಧ್ಯೆ ರಾರಾಜಿಸುವ ಉತ್ತಮ ಸಿಂಹಪೀಠದಲ್ಲಿ ಬಿಜಮಾಡಿಸಿ ಕುಳ್ಳಿರಿಸಿ ಮುಖಮಜ್ಜನವ ಮಾಡಿ- ಮೋರೆಗೆ ಕನ್ನಡಿಯಂ ಪಿಡಿದು- ಸಕಲ ಶೃಂಗಾರವಂ ಭಕ್ತಿಯಿಂ ಮಾಡಿ- ಪರಿಮಳಗಂಧ ಕಸ್ತೂರಿಗಳಂ ನೊರೆದು ಸಾಮ್ರಾಣಿ ಗುಗ್ಗುಳ ಆಗರು ಜವ್ವಾಜಿ ಧೂಪಂಗಳ ಸುವಾಸನೆಯು ಪಸರಿಸಲು- ಕುಂಕಮ ಕಸ್ತೂರಿ ಬೊಟ್ಟನಿಟ್ಟು- ನಿಷ್ಠೆಯಿಂ ಮಂಗಳವಾದ್ಯಂಗಳಂ ಬಾರಿಸೆ- ನೀಲವೇಣಿಯನು ಮೊಲ್ಲೆ ಮಲ್ಲಿಗೆ ಶೇವಂತಿಗೆ, ಪರಿಮಳದ ಪಾರಿಜಾತ, ಸಂಪಿಗೆ ಕೇದಿಗೆ ಸಣ್ಣಜಾಜಿ, ಕರವೀರ ಪುಷ್ಪಂಗಳ ವಿಮಲ ಹಾರಂಗಳಂ ಅಧಿಕವಾಗರ್ಪಿಸಿ- ಪರಿಮಳ ಧೂಪಗಳನ್ನು ಹಾಕಿ- ಷಡ್ರಸಂಗಳು ಸಕಲಭಕ್ಷ್ಯಂಗಳು ದಿವ್ಯಫಲಂಗಳಂ ಪಾದಪದ್ಮಂಗಳಿಗರ್ಪಿಸಿ- ಕರ್ಪೂರ ಆರತಿಗಳನೆತ್ತಿ -ನಮ್ರತೆಯಿಂ ಕೈಮುಗಿದು - ನೀಲವೇಣಿಯನು ಷೋಡಶೋಪಚಾರಗಳಿಂದರ್ಚಿಸಿ ಮಂಗಳವಾದ್ಯಂಗಳ ನಿನಾದವು ಮೇರೆ ಮೀರೆ ಶ್ರೀದೇವಿ ತನ್ನ ಆಯುಧಗಳಂ ಧರಿಸೆ ಒಂದು ಕಡೆ ದೇವಗಣಂಗಳ ವಾದ್ಯ- ಒಂದು ಕಡೆ ದೇವಕನ್ಯೆಯರ ಸೇವೆ- ಒಂದು ಕಡೆ ಪುತ್ರವರ್ಗಂಗಳ ಸೇವೆ - ಒಂದು ಕಡೆ ಸಪ್ತಮಾತೆಯರ ಸೇವೆ - ಒಂದು ಕಡೆ ಶಾಕಿನಿ ಢಾಕಿನಿ ಸಕಲ ಪಿಶಾಚಿಗಳ ಭೀಕರತೆಯಿಂ ಕೂಡಿದ ಕಾಲಭೈರವರ ವಾದ್ಯ ಶಂಖಗಳ ಸುನಾದ- ಒಂದು ಕಡೆ ಅಮೋಘ ವಾದ್ಯಗಳಿಂ ಮೊರೆವ ವಿಪ್ರರ ವೇದ ಘೋಷಣೆಗಳು ಮಿತಿಮೀರಲು- ತುಂಬುರ ನಾರದರು ಹರ್ಷದಿಂಪಾಡಲು- ರಂಭಾದಿ ಅಪ್ಸರೆಯರು ಸರಸ ಗಂಭೀರದಿಂ ನರ್ತಿಸೆ- ಬ್ರಹ್ಮದೇವೇಂದ್ರರು ಆಗ ಅಮ್ಮನನು ಆದರದಿಂ ಸ್ತುತಿಸುತ್ತ ಪಂಚಮುಖ ಪರದೇವಿ ಪರಬ್ರಹ್ಮಸ್ವರೂಪಿ ಪಂಚಾಕ್ಷರಿಯು ನೀನೆ- ಪಾರ್ವತಿಯು ನೀನೆ ಮುಮ್ಮೂರ್ತಿಗಳು ನೀನೆ- ಮೂಲವು ನೀನೆ ಮುಮ್ಮೂರ್ತಿಗಳಿಗಾದಿಮೂಲವೂ ನೀನೆ- ನಾರಾಯಣಿಯು ನೀನೆ ನರಸಿಂಹಿಯು ನೀನೆ- ಪಾರಾಯಣಿಯು ನೀನೆ - ಪ್ರವಣವೂ ನೀನೆ- ಪರಶಕ್ತಿಯು ನೀನೆ ನಾದವೂ ನೀನೆ- ನಗಜಾತೆಯೂ ನೀನೆ- ವೇದಗಳು ನೀನೆ- ವೈದೇಹಿಯೂ ನೀನೆ- ವರಲಕ್ಷ್ಮಿಯು ನೀನೆ- ಭಾರತಿಯು ನೀನೆ ನಮ್ಮ ಭಾಗ್ಯ ದೇವತೆಯೂ ನೀನೆ- ಭದ್ರಕಾಳಿಯು ನೀನೆ- ರಣಚಾಮುಂಡಿ ರಣದುರ್ಗಿ ನೀನೆ- ಭವದೂರಿ ನೀನೆ- ರುದ್ರಕನ್ಯೆಯು ನೀನೆ ಮುಕ್ತಿಕನ್ಯೆಯೂ ನೀನೆ- ಮಹಿಮೆಯು ನೀನೆ - ಗಿರಿಜಾತೆಯು ನೀನೆ- ಶಾಕಂಬರಿಯು ನೀನೆ- ಬನದವ್ವೆಯೂ ನೀನೆ, ಬನಶಂಕರಿಯು ನೀನೆ- ಗೀರ್ವಾಣಿಯು ನೀನೆ- ಪರಲೋಕ ಸುಂದರಿ ಪ್ರಣವವೂ ನೀನೆ- ಅಕ್ಷರಗಳೂ ನೀನೆ- ಎರಡಕ್ಷರಗಳೂ ನೀನೆ- ಅಕ್ಷರಕ್ಷರಗಳಿಗೆ ಆಧಾರವೂ ನೀನೆ- ಓಂ ಕಾರಿಯೂ ನೀನೆ- ವೈದೇಹಿನೀನೆ- ಶಂಕರಿಯು ನೀನೆ- ಆನಂದಿಯು ನೀನೆ- ಕ್ಲೀಂಕಾರಿಯು ನೀನೆ- ಹಿತಮತಿಯೂ ನೀನೆ- ಕ್ರಿಯಾಸಕ್ತಿಯು ನೀನೆ- ಝೀಂಕಾರಿಯು ನೀನೆ

ಪದ್ಮಿನಿಯು ನೀನೆ- ಪದ್ಮಾಕ್ಷಿಯೂ ನೀನೆ- ಭದ್ರ ಕನ್ಯೆಯು ನೀನೆ ಬಹಳವೂ ನೀನೆ ಜಗದಾಂಬ ನೀನೆ- ಹ್ರೀಂಕಾರಿಯು ನೀನೆ- ಸಚರಾಚರವೂ ನೀನೆ- ಹಸುರುತೇಜವು ನೀನೆ ಅಮರರೂ ನೀನೆ - ಅಷ್ಟದಿಕ್ಕುಗಳೂ ನೀನೆ- ಆಕಾಶವೂ ನೀನೆ- ಶ್ರೇಷ್ಠಳಾದ ಚೌಡಮ್ಮ ಭೂದೇವಿ ನೀನೆ- ನಿಜಭಕ್ತಿಯ ಶರಣು ನಿನಗೆ- ಜನನಿ ಜನಕರು ನೀನೆ- ಗುರುದೈವವೂ ನೀನೆ- ಗುಣನಿಧಿಯು ನೀನೆ- ಮೊರೆಬಿದ್ದೆನಮ್ಮ-ನಮ್ಮ ಪಾಲಿನ ದೇವಿ ಜಯಜಯ ಜಗದಾಂಬ-ಜಯ ಶಾರದಾಂಬ-ಜಯಭಕ್ತಕದಂಬ-ಜಯತು ಚೌಡಾಂಬ. ಭೂತಪ್ರೇತ ಪಿಶಾಚ ಬ್ರಹ್ಮರಾಕ್ಷಸರುಗಳಂ ನಿನ್ನ ಖಡ್ಗವಂ ಝಳಪಿಸಿ ಕೊಲ್ಲು ತಾಯಿ- ಬಹ್ಮಹತ್ಯ ಶಿಶುಹತ್ಯಗಳ ಪಾತಕಗಳನ್ನು ಪರಿಹರಿಸಮ್ಮ- ಉತ್ತಮಜನ್ಮದ ಪ್ರತಿಬಂಧಗಳನು ನಿವಾರಿಸು ನಮ್ಮಮ್ಮ-ಜ್ವರ ಮೃತ್ಯುಜ್ವರಂಗಳನು, ಪಾಪಜ್ವರಂಗಳನು ಹೊರದೂಡಿ ಚಂಡಾಡುವೆ ನಮ್ಮಮ್ಮ- ಜ್ವರ ಕುಷ್ಟ ಗುಲ್ಮ ರೋಗಾದಿ ದೋಷಂಗಳಂ ಶೀಘ್ರವಾಗಿ ತೊಲಗಿಸು ತಾಯಿ- ಇದಕೆ ಸಾಕ್ಷಿಯು ನೀನೆ ಹೌದಮ್ಮ- ನೀನೊಲಿದ ನಿಜಭಕ್ತರಿಗೆ ಉನ್ನತಭೋಗಭಾಗ್ಯಂಗಳ ನೀಡುವೆ ತಾಯಿ-ಪುತ್ರಪೌತ್ರ ಪಾರಂಪರ್ಯ ಸಾಯುಜ್ಯಗಳನು ಕೃಪೆಯಿಂ ಕರುಣಿಸು ನಮ್ಮಮ್ಮ, ನಿನ್ನ ಮೂಲಮಂತ್ರವನು ನಿಜವಾಗಿ ನಾಲಿಗೆಯಿಂ ಪಠಿಸುವ ನಿಜ ಭಕ್ತರಿಗೆ ಪ್ರೇಮದಿಂ ಮೋಕ್ಷವನ್ನಿತ್ತು ಕಾಪಾಡಮ್ಮ ಒಕ್ಕಲೇರೆ ಪುರ ನಿವಾಸಿ- ನಿನ್ನ ಕೀರ್ತಿಯಂ ದಿಕ್ಕು ದಿಕ್ಕುಗಳಿಗೆ ಚಂದದಿಂ ಹರಡಿ ಭಕ್ತರನು ಪೊರೆಯೆ ತಾಯಿ-ರೇಣುಕಾಪುರಿ ವೇಣುಗೋಪಾಲನ ಸಹೋದರಿ ಜಗದಾಂಬ ಶ್ರೀ ಚೌಡೇಶ್ವರಿ ದೇವಿ ಸಾಷ್ಟಾಂಗವೆರಗಿದೆ ನಿನಗೆ, ರಕ್ಷಿಸು ದೇವಾಂಗ ಕುಲವನ್ನೆಲ್ಲ ನಮ್ಮದ್ದು.

--- ಸಂಪೂರ್ಣ ----

ಶ್ರೀ ಚೌಡೇಶ್ವರಿ ಅಮ್ಮನವರ ಖಡ್ಗಗಳು

ಅಹಹಾ ಶಾಂಭವಿ :-

ಶ್ರೀ ಪಾರ್ವತೀ ದೇವಿ ಶೃಂಗಾರ ಕೌಮಾರಿ-ಕುಟಿಲಕುಂತಳೆ ರೌದ್ರಿ ಅಘೋರ ರೂಪಿ-ತಾರಕಾರಿ ಕರಾಳಿ ಕಾಪಾಲಿನಿ ನಾಮಾಂಕಿತ ದುರ್ಗಿ ಮಹಾಕಾಳಿ ಧೂಮಕೇಶಿ-ಭದ್ರಕಾಳಿ ಮನೋಹರಿ ಭದ್ರಾಕ್ಷಿ ಕಾಮಾಕ್ಷಿ ವಿಮಲ ವಿಶಾಲಾಕ್ಷಿ ವಜ್ರಮುಷ್ಟಿ-ಶಾಕಂಬರೀ ಶಾಂಭವೀ ಶಂಕರೀ ವಿಮಲಾಂಬಿಕಾದೇವಿ-ಭಕ್ತಪೋಷಿಣಿ-ಪರಜಗನ್ಮಾತೆ ತನ್ಮಾತೆ ವರಗಳಂ ವರ್ಷಿಸು ನೀನು-ದೇವಾಂಗದ ದಶಸಹಸ್ರ ಕುಲಗಳಂ ಕರುಣೆಯಿಂ ಹೆತ್ತವ್ವೆ-ಸರಸಮೃದುವಾಣಿ-ಘನವೇಣಿ ಶಂಭುರಾಣಿ-ಬಾದಾಮಿ ಕ್ಷೇತ್ರದೋಳ್ ನೆಲೆನಿಂತ ಏಕದಾಂಬೆ ಸರಸ ಸದ್ಗುಣ ನಿಖಿಲಾಂಬೆ ಶ್ರೀ ರಾಮಲಿಂಗೇಶನರ್ಧಾಂಗಿ ದೇವಾಂಗನಂ ಪೊರೆದ ಶ್ರೀ ಚೌಡಮಾಂಬೆ.

ಅಹಹಾ ಶಾಂಭವಿ :-

ಶಿವಲಿಂಗ ಪೂಜೆಯಲಿ ಅತಿಶಯದ ಶೃಂಗಾರ-ಸುಜ್ಞಾನ ದೇವಾಂಗ ಕುಲಕೆ ಮಂಗಳಾಕರದಾದ ಬ್ರಹ್ಮ ವೈದಿಕ ಮಂತ್ರತಂತ್ರ ಜ್ಞಾನದೊಳ್ ಮೇಲೆ ದೇವಾಂಗ

ಕುಲವು- ಶಿವನಹಣೆಯ ಮಧ್ಯದಿಂ ಹೊರಬಂದರ್ರೈ ಮಿರುಪ ದೇವಾಂಗದವರು- ಇಂಗಿ ತಜ್ಞರು ಇವರು ಇಹಪರವ ಬಲ್ಲವರು- ವಸ್ತ್ರಭೂಷಣಾಲಂಕಾರ ವೈಭವದ ನಿರ್ಮಾಣ ಸೂತ್ರಗಳ ಕರುಣಿಸಿ ಸಲಹಿದೆಯೌ ತಾಯಿ ಸುರರುಮೆಚ್ಚಿ- ಸಕಲರ ರಕ್ಷಕಿ ಜಗದಾಂಬೆ ಕೌಹಲಪುರವಿಹಾರಿ- ಸರಸ ಸದ್ಗುಣ ನಿಖಿಲಾಂಬೆ ಶ್ರೀ ರಾಮಲಿಂಗೇಶನರ್ಧಾಂಗಿ ದೇವಾಂಗನಂ ಪೊರೆದ ಶ್ರೀ ಚೌಡಮಾಂಬೆ.

ಅಹಹಾ ಶಾಂಭವಿ:-

ಮಲೆತ ವೈರಿಗಳನ್ನೆಲ್ಲ ಮಲೆತುಮರ್ದಿಸುತ ನೀ ದೇವಾಂಗ ದಾಸರಿಗೆದಾರಿ ತೋರು ಕಪಟ ಶತ್ರುಗಳ ಕತ್ತುಗಳಂ ಕತ್ತರಿಸಿ ಕರುಣೆಯಿಂದ ಕಾಪಾಡು ನೀ ಯೆಮ್ಮ ತಾಯಿ ಮತ್ಸರದಿಂಮದಿಸಿದವರ ಮದವ ಮುರಿದಿಟ್ಟು ಮಮತೆಯಿಂದೆಮ್ಮ ಭಯವ ಪರಿಹರಿಸು ತಾಯೆ- ರಾಜಸಭೆಯೊಳ್ ರಂಜಿಸಲ್ ವಿದ್ಯೆಗಳ ಕೊಟ್ಟೆಮಗೆ ಅನುವುಮಾಡೌ ತಾಯೆ- ಗುರುತರ ಧ್ವನಿಗಳಲ್ಲಿ ಗುಣವರಂಗಳ ಪಡೆಯೆ ಮಾರ್ಗದರ್ಶನವೀವ ಮಾತೆ ನೀನು- ಅಖಿಲ ಜಗಕೆಲ್ಲ ಆಧಾರನೀನೌ ನಿರ್ಭಯದ ತವುರಾದ ಜಲಜ ನೇತ್ರಿ- ಸರಸ ಸದ್ಗುಣ ನಿಖಿಲಾಂಬೆ ಶ್ರೀ ರಾಮಲಿಂಗೇಶನರ್ಧಾಂಗಿ ದೇವಾಂಗನಂ ಪೊರೆದ ಶ್ರೀ ಚೌಡಮಾಂಬೆ.

ಅಹಹಾ ಶಾಂಭವಿ:-

ತವಪಾದಧೂಳಿ ಸೋಕಿನಿಂ ಚರಾಚರಗಳೆಲ್ಲ ಪಾವನಗಳಾದವು, ನಿನ್ನ ನಿರಂತರದ ಪ್ರಾರ್ಥನೆಯಿಂ ದೇವಾಂಗನೈಶ್ವರ್ಯಗಳಂ ಹೊಂದಿದನು, ತವಪಾದಪೂಜೌಗ್ಯೆವ ದೇವಾಂಗಭಕ್ತರಿಗೆ ವರಂಗಳವೀಯಮ್ಮ- ತಾಯೆ ಅವರ ವಂಶದವರೆಲ್ಲ ಸಹಸ್ರ ಸಂಖ್ಯೆಯಲ್ಲಿ ಸ್ವರ್ಗದೊಳೆ ಸುಖಿಂಬಾಳ್ವೆ, ಇಂತು ಕರುಣಿಸೌ ಕೋಮಲಾಂಗಿ ಶೌರಿ ಸೋದರಿ ಜಗದಾಂಬೆ ಸರಸ ಸದ್ಗುಣನಿಖಿಲಾಂಬೆ, ಶ್ರೀ ರಾಮಲಿಂಗೇಶನರ್ಧಾಂಗಿ ದೇವಾಂಗನಂ ಪೊರೆದ ಶ್ರೀ ಚೌಡಮಾಂಬೆ.

ಅಹಹಾ ಶಾಂಭವಿ:-

ತಂತು ನಿಮಿತ್ತದಿಂ ದೇವಲನು ಕ್ಷೀರಾಬ್ದಿಗೆಡೆ ಪೋಗಲ್ ದೈತ್ಯರ್ ತಡೆದು ನಿಲ್ಲಲ್, ಅಂಬೆ ಓ ಜಗದಾಂಬೆ ನಿನ್ನಂ ಕೂಗಲ್, ಕಡುಬೇಗದಿಂ ಸಿಂಹವಾಹಿನಿಯಾಗಿ ಬಂದು ನಿಂತೆಯಮ್ಮ, ಹರನರಾಣಿಯೇ ಆದಿಶಕ್ತಿಯೇ ಮಹಾಮಾಯೆಯೇ ದುರ್ಗಿ ನಿನ್ನ ಕರವಾಲಕಾಹುತಿ ಯಾದವರೆಲ್ಲ ರಕ್ಕಸರು, ನಿನ್ನ ಕೃಪೆಯಿಂ ದೇವಲನು ಸರಾಗದಿಂ ವಿಷ್ಣು ನಾಭಿಯೊಲಗಣ ತಂತುಬೀಜಗಳ ಪಡೆದನಮ್ಮ, ಅಂಬೆ ಜಗದಂಬೆ ದೇವಾದಿಗಳ ಪೊರೆದಮ್ಮ ನಿನ್ನ ಸಮರುಂಟ, ಸರಸ ಸದ್ಗುಣ ನಿಖಿಲಾಂಬೆ, ಶ್ರೀರಾಮಲಿಂಗೇಶನರ್ಧಾಂಗಿ ದೇವಾಂಗನಂ ಪೊರೆದ ಶ್ರೀ ಚೌಡಮಾಂಬೆ.

ಅಹಹಾ ಶಾಂಭವಿ:-

ಶ್ರೀಕಂಠನರಸಿಯೇ ಶೃಂಗಾರ ವೇಣಿಯೇ ಚಿತ್ರಪ್ರತಿಮೆಯೋಳ್ ಬೆಳಗಿರುವೆ ನೀನು, ತಿಲಪುಷ್ಪವಂ ಮುಡಿದು ಪನ್ನೀರಲಿ ಮಿಂದು ಮೈ ಕಾಂತಿಯಿಂ ಪ್ರಜ್ವರಿಸಿರುವೆ, ಕುವಲಯ ನೇತ್ರಿಯೇ ಕೋಕಿಲ ವಾಣಿಯೇ ಕನಕಾದ್ರಿ ತಪ್ಪಲಿನ ವೈಭವವೇ ಅಹುದಮ್ಮ ನೀನು, ಕನಕಕಾಂತಿಸ್ವರೂಪಿಣಿಯೇ ಕೈಲಾಸವಾಸಿನಿಯೇ ಸುರರಾಜಪೂಜಿತೆಯೇ ಸುರರ ಹೆಮ್ಮೆಯಾರಾಣಿಯೇ ಕರುಣಸೌತಾಯೇ ವರವನಿತ್ತೆಮ್ಮನು. ಸೋಮ ರವಿಬಿಂಬವನಣಕಿಸಿ ಮಂದಹಾಸವಂ ಸೂಸುವ ತಾಯೆ-ವಜ್ರ ಮರುಟಧಾರಿಣಿ ಜಗದಂಬೆ-ಸರಸ ಸದ್ಗುಣ ನಿಖಿಲಾಂಬೆ-ಶ್ರೀರಾಮಲಿಂಗೇಶರರ್ಧಾಂಗಿ ದೇವಾಂಗನಂ ಪೊರೆದ ಶ್ರೀ ಚೌಡಮಾಂಬೆ.

ಅಹಹಾ ಶಾಂಭವಿ:-

ವರವಿದ್ಯೆಗಳ ಜಾಡಾದ ವೇದಂಗಳ ಜಾಣ್ಮೆಯಾದ ದೇವಾಂಗ ರಾಜ್ಯೋದಯ ಯಾದಮ್ಮ ನಿನಗೆ ಶರಣು ಶರಣು, ದೀನರಕ್ಷಕಿ ಶಿಷ್ಟಪೋಷಕಿ ದುಷ್ಟಶಿಕ್ಷಕಿ ದಕ್ಷೆ ದೇವಿ, ವಾಮಾಕ್ಷಿ ಸರ್ವಲೋಕಾಕ್ಷಿ ಶರಣು ಶರಣು, ಭಕ್ತಕಲ್ಪತರು ಭವ್ಯ ಪಾದಾಂಭೋಜೆ ಶತಕೋಟಿ ಸೂರ್ಯತೇಜೋದ್ಭಾಸಿತೆ ಶರಣು ಶರಣು, ವಿಭುಧಸನ್ನುತೆ ಭವ್ಯವಿಖ್ಯಾತೆ ಶುಭಕಾರ್ಯ ಸಾಗರೆ ಗಂಭೀರ ಗೌರವೆ ಶರಣು ಶರಣು, ಭವಭಂಗಧವಳಾಂಗಿ ಶರಣು ಶರಣು, ಸರ್ಪರಾಜಭೂಷಿತೆ ಮೃದುಲಧ್ವನಿ ಮಂಜುಳೆ ಶರಣು ಶರಣು, ಶಮದಮಾದಿ ಸದ್ಗುಣ ಭೂಷಿತೆ ಶರಣು ಶರಣು, ಶಾಂತರಾಭೀಷ್ಟಪ್ರದಾಯಿನಿ ಶರಣು ಶರಣು ಸರಸ ಸದ್ಗುಣ ನಿಖಿಸಾಂಬೆ, ರಾಮಲಿಂಗೇಶನಾರ್ಧಾಂಗಿ ದೇವಾಂಗನಂ ಪೊರೆದ ಶ್ರೀ ಚೌಡಮಾಂಬೆ.

ಅಹಹಾ ಶಾಂಭವಿ:-

ಬಾ ಲೋಕಸುಂದರಿಯೇ, ಬಾ ಜಗನ್ಮೋಹಿನಿಯೆ, ಬಾರಮ್ಮ, ಬಾ ಭಾರತಿಯೆ ಸರ್ವವಿನುತೆಯೆ, ಬಾ ಪರಮೇಶ್ವರಿಯೆ, ಬಾ ತ್ರಿಪುರಸುಂದರಿಯೆ, ಬನ್ನಿರೈ ಬನ್ನಿರಮ್ಮ, ಗಾಯತ್ರಿ ಸಾವಿತ್ರಿ ಸರಸ್ವತಿಯರೆ, ಬಾ ಬನಶಂಕರಿಯೆ, ಬಾ ಶಾಕಂಬರಿಯೇ ಬಾ ಬಾ ಬನದವಯವೇಯೇ ಬಾ ಬಾ ಬಾದಾಮಿ ಕ್ಷೇತ್ರವಾಸಿನಿಯೇ ಬಾ, ಬನ್ನಿರೈ ಸಪ್ತ ಮಾತೆಯರೆ, ಬನ್ನಿರೈ ನವದುರ್ಗಿಯರೆ, ಬನ್ನಿರೈ ನವಕೋಟಿಶಕ್ತಿಯರೆ ಬನ್ನಿ ಚತುಷ್ಷಷ್ಟಿಕೋಟಿ ಯೋಗಿನಿಯರೆ, ಬಾ ಬಾ ದೇವತೆಗಳೆಲ್ಲರ ಮಾತೆ ಆದಿತಿಯೇ, ಬಾ ಬಾ ಮಹಾಲಕ್ಷ್ಮಿಯೇ, ಬಾ ಪಾರ್ವತಿಯೇ, ಬಾ ಬೊಮ್ಮನರಸಿಯೆ, ಬಾ ಬಾ ದೇವಾಂಗನರ್ಧಾಂಗಿ ದೇವದತ್ತೆಯೆ, ಬಾ ಬಾ ಸಪ್ತಕೋಟಿ ಮಹಾ ಮಂತ್ರೋಪಮಂತ್ರಗಳ ಮಾತೆಯೆ ಬಾರಮ್ಮ, ಬಾ, ಮಂದಹಾಸದಿಂ ಬಾ ಮಂದಾಕಿನಿಯೆ, ಬಾ ಜಾಹ್ನವಿಯೆ ಬಾ ಗೋದಾವರಿಯೆ, ಬನ್ನಿರೈ ಕಾವೇರಿ ಕೃಷ್ಣೆ ತುಂಗೆ ಭದ್ರೆಯರೆ, ಬಾ ಶರವೇಗದಿಂ ಬಾ ಶರಾವತಿಯೆ, ಬನ್ನಿ ನೀವೆಲ್ಲ ವಿದ್ಯುದ್ವೇಗದಿಂ ಬಂದೆಮ್ಮ ಇಷ್ಟಾರ್ಥವನ್ನೆಲ್ಲ ಪೂರೈಸಿ ದೇವಾಂಗ

ಕುಲವನ್ನೆಲ್ಲ ಪಾವನಗೈದು ಕರುಣೆಯಿಂ ಸಲಹುವುದು, ಸರಸ ಸದ್ಗುಣನಿಖಿಲಾಂಬೆ, ಶ್ರೀ ರಾಮಲಿಂಗೇಶನರ್ಧಾಂಗಿ ದೇವಾಂಗನಂ ಪೊರೆದ ಶ್ರೀ ಚೌಡಮಾಂಬೆ.

ಅಹಹಾ ಶಾಂಭವಿ :-

ಆದಿಪರಂಜ್ಯೋತಿ ಅಖಿಲಾಂಡಕೋಟಿ ಬ್ರಹ್ಮಾಂಡ ನಾಯಕಿ, ಮುಮ್ಮೂರ್ತಿಗಳ ಹೆತ್ತಮ್ಮ ಮೋಹನಾಂಗಿ, ಹರಿಹರ ಬ್ರಹ್ಮಾದಿಗಳು ನಿನ್ನ ಕೀರ್ತಿಯ ಪೊಗಳಲರಿಯಲಮ್ಮ, ನಿನ್ನಮಲಾರ್ಧಾಂಗವನು ಪರಮೇಶನೇ ಪೂಜೆಗೈದನಮ್ಮ ಪರಮಕಲ್ಯಾಣಿ, ಕಾಲಾಕಂಧರ ರಾಣಿ, ಘನ ನೀಲಘನವೇಣಿ ಮಿರುಪ ತ್ರಿಶೂಲ ಡಮರುಗಪಾಣಿ ವಿಮಲ ಮುಕುರಾಂಬೆ ಅಂಬೆ ಜಗದಾಂಬೆ, ಶಾಂಭವಿ ಮುದಾಂಬೆ, ಶುಧದೃಷ್ಟಿದಾತೆ ತಾಯೇ ಮುದದಿರಕ್ಷಿಸು ದೇವಾಂಗ ಮಕ್ಕಳನ್ನೆಲ್ಲ, ಸರಸ ಸದ್ಗುಣ ನಿಖಿಲಾಂಬೆ, ಶ್ರೀ ರಾಮಲಿಂಗೇನಶರ್ದಾಂಗಿ ದೇವಾಂಗನಂ ಪೊರೆದ ಶ್ರೀ ಚೌಡಮಾಂಬೆ.

ಶ್ರೀ ಚೌಡೇಶ್ವರಿ ಅಮ್ಮನವರ ಪರಾಕುಗಳು

ಅಹಹಾ ಶಾಂಭವಿ :-

ಗಡುತರಾಸುರ ವೀರಪಡೆಮತ್ತೆ ದೇವಾಂಗ ಒಡನೆ ಧ್ಯಾನಿಸಲಾಗ ಬಹುಪರಾಕು -ಗಡಬಡಿಸಿ ಮೃಡನಂಕಬಿಡುತ ಗುಡುಗುಡುತಟ್ಟಿ ಮಾಡೆ ಸಿಡಿಲಿನಾರ್ಭಟ ಬಹುಪರಾಕು- ಕಡೆಗಾಲದೊಳು ಚಳಚ್ಚಳ ಥಳತ್ಥಳ ಘಳೋಜ್ವಲನು ಹುಟ್ಟರು ಬೇಗ ಬಹುಪರಾಕು- ಒಡುದು ಛಟ ಛಟ ಘಟ ಘಟೆನುತ ದಿಗುತಟವೆಲ್ಲ ನಡುಗುತಿರೆ ಬ್ರಹ್ಮಾಂಡ ಬಹುಪರಾಕು- ದೃಢ ತರುಣ ಬಿರಿಯೆ ನಿರಿ ನಿರಿ-ಬಹುಪಲಾಕು-ಸಡಗರದಿ ಬಂದವರ ಕೊಂದೆಯೆ ಬಹುಪರಾಕು- ತಡೆಯಲಾರಮ್ಮ ಕಡೆಹಾಯ್ಸು ಭಕ್ತರೆಮ್ಮ ಮೃಡೆ ಮಹಿಷೂರ ನರಹರಿಪುರದೊಡತಿ ಕಡುಕಷ್ಟಕೊಡದೆ ಕಡೆಹಾಯ್ಸಮ್ಮ - ಸರಸ ಸದ್ಗುಣ ನಿಖಿಲಾಂಬೆ ಬಹುಪರಾಕು- ಶ್ರೀ ರಾಮಲಿಂಗೇಶನರ್ಧಾಂಗಿ ದೇವಾಂಗನಂ ಪೊರೆದ ಶ್ರೀ ಚೌಡಮಾಂಬೆ ಬಹುಪರಾಕು- ಪರಾಕಮ್ಮ ಬಹುಪರಾಕು.

ಅಹಹಾ ಶಾಂಭವಿ :-

ಶ್ರೀ ದೇವಾಂಗ ಮಕ್ಕಳಾ ಪೂರ್ಣಾಶ್ರಿತ ಜನಸಂರಕ್ಷಕೀ ಬಹುಭಾಗ್ಯದಾಯಿನೀ ಬಹುಪರಾಕು- ಅರುಣ ಪ್ರಭಾವಾಣಿ ಪುರುಷಾರ್ಥ ಪ್ರದಾಯಿನಿ ಬಹುಪರಾಕು- ವೀಣಾ ವಿನೋದಿನಿ ವಿಶ್ವ ಸಂಮೋಹಿನೀ ಬುಧಜನೋದ್ಧಾರಿ ಬಹುಪರಾಕು- ದುರ್ಜನ ಮರ್ಧಿನೀ ದುರಿತ ಸಂಹಾರಿಣೀ ಪುಣ್ಯ ಸಂಧಾಹಿನೀ ಬಹುಪರಾಕು- ಫಲಿತ ನವರತ್ನ ದಾಯಿನೀ

ಬಹುಪರಾಕು-ವಸುಧೆ ಶುಭ ಫಲದಾಂಬೆ ಬಹುಪರಾಕು-ಅಮ್ಮ ಜಗದಮ್ಮ ಸರಸ ಸದ್ಗುಣ ನಿಖಿಲಾಂಬೆ ಬಹುಪರಾಕು ಶ್ರೀ ರಾಮಲಿಂಗೇಶನಾರ್ಧಾಂಗಿ ದೇವಾಂಗನಂ ಪೊರೆದ ಶ್ರೀ ಚೌಡಮಾಂಬೆ ನಿನಗೆ ಬಹುಪರಾಕು-ಪರಾಕಮ್ಮ ಬಹುಪರಾಕು.

ಅಹಹಾ ಶಾಂಭವಿ :-

ಓಂಕಾರೇಶ್ವರೀ ಬಹುಪರಾಕು ಶ್ರೀ ಚೌಡೇಶ್ವರೀ ಬಹುಪರಾಕು ಭವಾನೀ ಬಹುಪರಾಕು-ಉಮಾಮಹೇಶ್ವರೀ ಬಹುಪರಾಕು-ಶ್ರೀ ಸೋಮೇಶ್ವರೀ ಬಹುಪರಾಕು-ಜಂಬುಲಿಂಗೇಶ್ವರೀ ಬಹುಪರಾಕು-ರಾಮನಾಥೇಶ್ವರೀ ಬಹುಪರಾಕು-ಋಕಾಷಾಖಾಧೀಶ್ವರೀ ಬಹುಪರಾಕು-ಗಂಗಾದರೇಶ್ವರಿ ಬಹುಪರಾಕು-ಚಂಡಿಕೇಶ್ವರೀ ಬಹುಪರಾಕು-ಚಂದ್ರಮೌಳೇಶ್ವರೀ ಬಹುಪರಾಕು-ಜಗನ್ನಥೇಶ್ವರೀ ಬಹುಪರಾಕು-ಏಕಾಂಬರೇಶ್ವರೀ ಬಹುಪರಾಕು-ತ್ರಿಣೇತ್ರೆಶ್ವರೀ ಬಹುಪರಾಕು-ಶ್ರೀ ಬ್ರಹ್ಮೇಶ್ವರೀ ಬಹುಪರಾಕು- ಶ್ರೀ ವಾಲುಕೇಶ್ವರೀ ಬಹುಪರಾಕು-ಧವಳೇಶ್ವೈರೀ ಬಹುಪರಾಕು-ಸರಸ ಸದ್ಗುಣ ನಿಖಿಲಾಂಬೆ ಬಹುಪರಾಕು-ಶ್ರೀ ರಾಮಲಿಂಗೇಶನರ್ಧಾಂಗಿ ದೇವಾಂಗನಂ ಪೊರೆದ ಶ್ರೀ ಚೌಡಮಾಂಬೆ ನಿನಗೆ ಬಹುಪರಾಕು-ಪರಾಕಮ್ಮ ಬಹು ಪರಾಕು.

ಅಹಹಾ ಶಾಂಭವಿ :-

ಆದಿಶಕ್ತಿಯೇ ಬಹುಪರಾಕು-ಮಹಾಮಾಯೆ ಬಹುಪರಾಕು-ದೇವಾಂಗ ರಕ್ಷಿಣಿ ಬಹುಪರಾಕು-ಬ್ರಹ್ಮನ ಪಟ್ಟಣದರಾಣಿ ಬಹುಪರಾಕು-ಶ್ರೀ ದೇವರ ದಾಸಿಮಾರ್ಯನ ತಾಯಿ ಬಹುಪರಾಕು-ಸಪ್ತ ಮಾತೆಯರ ದೇವೀ ಬಹುಪರಾಕು-ಶಂಖ ಚಕ್ರ ಪಾಶಾಂಕುಶಧಾರಿಣಿ ಬಹುಪರಾಕು-ಗಾಯತ್ರಿದೇವಿ ಬಹುಪರಾಕು-ಹತ್ತು ಸಾವಿರ ಕುಲಗಳನ್ನೆಲ್ಲ ಕಾಯಿ ತಾಯಿ ಬಹುಪರಾಕು-ಕೌಹಳ ಪುರದಲ್ಲಿ ನೆಲಸಿದ ತಾಯಿಗೆ ಬಹುಪರಾಕು-ಅಲಗು ಸೇವೆಯ ಗೊಳ್ಳುವ ತಾಯಿಗೆ ಬಹುಪರಾಕು-ಶ್ವೇತಾಶ್ವರೋಹಿಣಿ ಬಹುಪರಾಕು-ಭಂಡಾರ ಮಹಾಜನನಿ ಬಹುಪರಾಕು-ನಿಗಮಾಗಮ ಶಕ್ತಿ ಬಹುಪರಾಕು-ಮಂತ್ರ ಮಂತ್ರಗಳ ಮಾತೆ ಬಹುಪರಾಕು-ಅಮರವಂದಿತೆ ಬಹುಪರಾಕು ಋಷಿವೃಂದವಂದಿತೆ ಬಹುಪರಾಕು-ಸರಸ ಸದ್ಗುಣ ನಿಖಿಲಾಂಬೆ ಬಹುಪರಾಕು-ಶ್ರೀ ರಾಮಲಿಂಗೇಶನರ್ಧಾಂಗಿ ದೇವಾಂಗನಂ ಪೊರೆದ ಶ್ರೀ ಚೌಡಮಾಂಬೆ ನಿನಗೆ ಬಹುಪರಾಕು-ಪರಾಕಮ್ಮಾ ಬಹುಪರಾಕು.

ಶ್ರೀ ಚೌಡೇಶ್ವರೀ ಉದಯರಾಗ

ಏಳಮ್ಮ ಬೆಳಗಾಯಿತು । ಏಳು ಶಂಕರಿ ಚಿದಾಭಾಸೆ ಚಿದ್ರೂಪೆ ವರ । ಕಾಳಿ ಕೌಮಾರಿ ಚಿಚ್ಛಕ್ತಿ ಈಶ್ವರೀ ಗೌರಿ । ಏಳು ಭವನಾಶೆ ಭುವನೇಶೆ ಪರಮೇಶ್ವರಿಯೆ । ಚೌಡಾಂಬ ಏಳಂಬ

ಸ್ನಾನಸಂಧ್ಯವು ನಿತ್ಯ । ದಾನ ಜಪ ತಪದಿಂ । ತಾನುದಯಕಾಲದೊಳು। ಹೀನಯೋಚನೆಯಿಲ್ಲ । ದಾ ನಿಮಿಷ ಸನ್ನಿಹಿತ । ಜ್ಞಾನಾನಂದದ । ದಾನಿ ದೇವಾಂಗ ಜನರು। ಮಾನರಕ್ಷಣೆಯ ಕೃತವೇನು ಮಾಡದೆ ಮೊದಲು । ಸಾನುರಾಗತಿ ಪದವ ತಾನೋಡಲುಜ್ಜುಗಿಸೆ। ಧ್ಯಾನ ಮಾಡುತ ಬಂದು ಮೌನದೊಳು ನಿಂದಿಹರು । ನೀನು ಪವಡಿಸಿದ ಮಾತೇ । ಚೌಡಾಂಬ ಏಳಂಬ ಬೆಳಗಾಯಿತು. ॥೧॥

ಮಾತು ಮಾತಿಗೆ ಶಕುತಿ । ಯಾತ್ಮಜರು ಸರ್ವರು ಪು । ನೀತರಾಗಲು ನಿನ್ನ । ಪ್ರೀತಿಪಾತ್ರರು ಆಗಿ । ಖ್ಯಾತಿ ಪಡೆದಡಿಗಡಿಗೆ । ಸೂತ್ರ ವಸ್ತ್ರದ ಕಾರ್ಯ ।. ಆತುರದಿ ಮಾಡಬೇಕು ॥ ಭೀತರಹ ಭಕುತಜನ । ರೀ ತೆರದೊಳಿಗೆ ಜಗನ್ಮಾತೆಯಾತಕೆ ಶಯನ । ದಾತಿಶಯ ತ್ರಿಕರಣದಿ । ಆತುಮದಿ ವಂಚನೆಯ । ಮಾತೆಲ್ಲ ನಿಶ್ಚಯವು । ಜಾತಿನಾಯಕ ರತ್ನವೇ ॥ ಚೌಡಾಂಬ ಏಳಂಬ ಬೆಳಗಾಯಿತು ॥೨॥

ಚಾರು ಮಕುಟವನಿಟ್ಟ । ಹಾರ ಪದಕವ ತೊಟ್ಟ ತೋರ ಕುಂಡಲ ಪಟ್ಟ । ಸಾರಕಾಂತಿ ವಿಶಿಷ್ಟೆ । ಓರೆ ದೃಷ್ಟಿಯ ದಿಟ್ಟೆ । ಸಾರ ನೋಡಲದೆಷ್ಟೋ । ಭೂರಿಕಾರ್ಯವ ಬಿಟ್ಟ । ಪಾರ ಭಕುತರು ಬಂದರೇ ॥ ಆರು ಇವರಂದದಲಿ । ಕಾರ್ಯ ಕಾರಣವ । ಸಂಸಾರ ಭಾರವ । ಮೊದಲು ಮೂರೈಸದಲೆ ದೇವಿ । ಕಾರ್ಯಗೆ ಮನ ಘನವ । ಸೂರೆ ಗೊಡುವರು ಪದಕೆ । ಮಾರಿಹರು ತನುಧನವನೂ । ಚೌಡಾಂಬ ಏಳಂಬ ಬೆಳಗಾಯಿತು ॥೩॥

ಇಷ್ಟು ಬೇಸರವೆ ಬಲು । ದುಷ್ಟ ಮೂರುತಿ ಮಕ್ಕಳಿಷ್ಟವನು ಕೈಕೊಂಬು । ದೆಷ್ಟು ಭಾರವೆ ಮಾತೆ । ಸೃಷ್ಟಿಯೊಳಗುಳ್ಳಖಿಲ ಪುಷ್ಟ ನಿಗ್ರಹಕ್ಕಿಂತ । ಶಿಷ್ಟ ಕಾರ್ಯವು ದೊಡ್ಡದೇ ॥ ಕಡು ಬಡತನವರಿತು । ಹೊಟ್ಟೆಯುರಿವದೇಕೊ ನೀ । ಕೊಟ್ಟ ಭಾಷೆಯ ಮರೆತೆ ಅಷ್ಟ ಮಹದೈಶ್ವರ್ಯ ಕೋ । ಇಷ್ಟು ಯಡರಡಸೆ ಕೈಬಿಟ್ಟೆನೆಂಬುವದಕೋ ಯತೇಷ್ಟದಲಿ ಚಿಂತಿಸುವೆಯೋ । ಚೌಡಾಂಬ ಏಳಂಬ ಬೆಳಗಾಯಿತು. ॥೪॥

ಅರಿಗುಸುರುವದು ಕೆಲ । ರೂರ ಬಿಟ್ಟರು ಮತ್ತು । ಮಾರಿದರು ಮನೆ ಘನವ । ಊರು ಊರೊಳಗೆಲ್ಲ । ಪೂರಣದ ಭಕುತರಿಗೆ ದಾರಿದ್ರ ಬಂದುದು । ದ್ವಾರ ಮಾಡಲಿಕೆ ಈಗ ॥ ವೀರ ಕಂಕಣ ಬೇಕೆ । ಕ್ರೂರ ವಾಹನದಾಕೆ - ಭೂರಿಯಾಯುಧವೇಕೆ । ಸಾರ್ವ ಪ್ರಮಥರ ಸೂಕಿ । ತೋರ್ವಸಾಹಸದಿದಕೆ । ಆರು ಶತ್ರು ಪರಾಕೆ । ತೋರೆ ಮುಖಬಿಂಬ ಸಾಕೆ । ಚೌಡಾಂಬ ಏಳಂಬ ಬೆಳಗಾಯಿತು. ॥೫॥

ಆದಿಯೊಳು ದೇವಾಂಗ । ಭೂಧರ ಕೃಪಾಪಾಂಗ । ಕಾದಿರಕ್ಕಸರೊಡನೆ ಭೇದಿಸಲು ಧ್ಯಾನಿಸುವ ॥ ನಾದ ಮಾತ್ರಕೆ ಬಂದು । ಸಾಧಿಸಿದ ಮಹಾಕಾರ್ಯ । ವೇದಯಾಂಬುಧಿಯಿದೆನಿತು।। ಮೋದಪಡೆದೊಸ್ತ್ರಗಳು । ಆದುದಕೆ ಒಂದೊಂದು । ಸಾದರದೊಳಖಿಳರೆಂ । ತೋಧರಿಪರೆಂದರೆ

ವಿ । ನೋದದಲಿ ಅಕ್ಷಯ - ಸಮೋದಯವನೆಸಗಿದವ । ಳಾದೆ ಇದಕೇನು ಚಿಂತೇ ॥ ಚೌಡಾಂಬ ಏಳಂಬ ಬೆಳಗಾಯಿತು ॥೬॥

ಬರದೆ ಹರನೆಡೆಗೆ ಸುರ । ತರುಣಿಯರು ತಾವಂದು । ಬರಿಯ ಬೆತ್ತಲೆ ಲಜ್ಜೆ ತೋರದ ಪಶುಗಳ ವೋಲು । ತರಗೆಲೆಯ ಸುತ್ತಿ ಪದಕೆರಗಿರಲು ಬೇಗ । ಹರಿತಂದು ಕರುಣದಿಂದ । ಬರಮಾಡಿ ಮನು ಮುನಿಯ । ಗುರುವಿನಿಸಿ ಸುರತತಿಯ । ತರಣಿಯ ಸಹೋದರಿಯ । ಕರವ ಪಿಡಿಸಿದ ಪರಿಯ । ಉರುತದ ಸಾಹಸಕೆ । ಸರಿಯೇ ಬಡ ಭಕುತರಿಗೆ । ದರುಶನವನಿತ್ತು ಪೊರೆಯೆ ॥ ಚೌಡಾಂಬ ಏಳಂಬ ಬೆಳಗಾಯಿತು ॥೭॥

ಆರ್ಥಿಯಿಂದೆರಗುವರು । ನಿತ್ತ ಬನ್ನಿರಿ ಪ್ರೀತಿ । ಪುತ್ರರಿರ ದೇವಾಂಗ । ಪೆತ್ತ ಬ್ರಾಹ್ಮಣವರ್ಣ । ದುತ್ತಮೋತ್ತಮ ವಂಶ - ಕಿತ್ತೆ ಬೇಡಿದುದನಿತ । ಚಿತ್ತಕನು ಮಾನವೇಕೆ - ಎತ್ತ ಪೋಗದ ತನ್ನ । ಸುತ್ತಿ ಮುತ್ತುವ ಪೂಜೆ । ಸುತ್ತ ಬಲು ಬಡ ತನವು । ವತ್ತರಿಸಿದರು ಬಿಡದೆ । ಮತ್ತೆ ಮತ್ತೆಯ ಘಾಸಿ । ವೆತ್ತಿತ್ತೈ ಹಾಯೆಂದೆ । ಸುತ್ತ ಮೊಲವಾಲ ಸುರಿಸಿ । ಚೌಡಾಂಬ ಏಳಂಬ ಬೆಳಗಾಯಿತು ॥೮॥

ಮೊರೆವ ಮಂಗಳ ವಾದ್ಯ । ವರ ರವವನಾಲಿಸದೆ । ತರುಣಿ ಮುತ್ತೈದೆಯರ ಹಾಡುಗಳ ಕೇಳಿಸದೆ । ಪರಿಪರಿಯ ಪಕ್ಷಿಗಳ । ಸ್ವರಗಳ ಲಾಲಿಸದೆ । ಮರೆದು ಮಲಗುವರೆ ತಾಯೆ । ಪರಮ ಶ್ರೀ ದೇವಾಂಗ - ರಿಗಿತ್ತ ಅಭಯವನು । ಸ್ಮರಿಸಿ ರಕ್ಷಿಸದಿರಲು । ಪರಿಹಾಸವೆಂಬುದನು । ಅರಿತು ಜನರಪವಾದ । ಹರಿಸಿ ಸಂಪದ ಬರಿಸೆ । ಹರುಷದಿಂ ದುಪ್ಪವಡಿಸೇ ॥ ಚೌಡಾಂಬ ಏಳಂಬ ಬೆಳಗಾಯಿತು ॥೯॥

ಉರುತರದ ಮೈಸೂರು । ನರಹರಿಯ ಪುರಮಿನ್ನು ।
ಧರೆಯೊಳಗ ಪ್ರತಿಯೊಂದು । ಪುರಮಧ್ಯೆ ವಾಸಿಸುತ ।
ಕರೆದು ಭಕುತರನೆಲ್ಲ । ವರವಿತ್ತು ಮನ್ನಿಸುವ ।
ದರಿದೆ ವಂಶಕೆ ಆದಿಯಿಂ । ಬರಿದೆ ತಾಯಾಗಿರುವ ।
ದರಿಯದೇ ಲೋಕಮದ ॥ ನೊರೆಯಲೇತಕೆ ಮಾತೆ ।
ಕರುಣದಲಿ ಕೈಯ ಮಿಡಿ । ದರು ಬಿಟ್ಟರಾರು ಧಿ
ಕ್ಕರಪರಿವನರಿಯೆಯಾ । ಸರುವ ಭಾರುವ ನಿನ್ನದೇ
ಚೌಡಾಂಬ ಏಳಂಬ ಬೆಳಗಾಯಿತು ॥೧೦॥

ಶ್ರೀ ಚೌಡೇಶ್ವರೀ ಲಾಲಿ

ಲಾಲಿ ಶಂಕರಿಯ ತಂಗಿ । ಕೌಮಾರಿ । ಲಾಲಿತೇಶ್ವರಿ ಶುಭಾಂಗೀ ।
ಲಾಲಿ ಕಲ್ಯಾಣಿ ಭೃಂಗ - ನೀಲಾಂಗಿ । ಬಾಲ ಚೂಡಾಂಬ ಲಾಲೀ ॥ ಪ ॥

ಮಂಜುಭಾಷಿಣೀಂಬಿಕಾ । ರಾಜಕಳ । ಪುಂಜರಂಜಿತ ಕನ್ಯಕಾ ।
ಸಂಜನಿತ ವಂಶ ಭಜಕಾ । ಭಯದತ್ತ । ಸಂಜೀವಿನೀ ಸುತಿಲಕಾ ಲಾಲಿ ॥೧॥

ಸರ್ವಮಂಗಳ ಸನ್ನುತೇ । ಪಾರ್ವತಿಯ । ಪೂರ್ವಸುಂದರ ಮೂರುತೀ ।
ಪರ್ವಣೇಂದ ವಿಜೃಂಭಿತೇ । ದೇವಾಂಗ । ಸರ್ವಸಂಪದ ಸಂಭೃತೇ ॥೨॥

ನಿತ್ಯ ನಿರ್ಮಲೇ ನಿರ್ಗುಣೇ । ನಿರ್ಲೇಪೆ । ಸತ್ಯಾತ್ಮ ಚಿದ್ರೂಪಿಣೇ ।
ಮರ್ತ್ಯಮರಾದಿ ಪ್ರಾಣೇ । ಸ್ಮರೋಲ್ಲ ಸತ್ವಧರೆ ಸುಪ್ರವೀಣೆ ॥೩॥

ಅಕಳಂಕ ಚರಿತ ಭರಿತೇ । ಸುಕೃತನಖ । ನಿಕರ ಸುಖರ ವಿಜೃಂಭಿತೇ ।
ಸಕಳ ಕರಿ ಕುಳ ಕಾಜಿತೇ । ತಂತುಕೃತ । ಭಕುತ ಗಣ ಗುಣ ಪೂಜಿತೇ ॥೪॥

ಮಹಮಾಯೇ ವಿಹಿತಭಾಯೇ । ವಸನೇಶ । ಬಹುಭಯ ನಿವಾರ್ಯ ಕಾಯೇ ।
ಮಹಿಷೂರು ಪುರಿನೀಕಾಯೇ । ಮನು ಮೌನಿ - ಸಹಕಾರಿ ವಂಶಸ್ವೀಯೆ ॥೫॥

ಶ್ರೀ ಚೌಡೇಶ್ವರೀ ಜೋಗುಳ

ಶ್ರೀಶಲೋಕೇಶೆ ಜೋ ಜೋ । ಭಜಕ ಜನ । ಪೋಷಿಸುವಿಲಾಸೆ ಜೋ ಜೋ ।
ಭಾಸುರಾಂಗಿಯೆ ಜೋ ಮಹದ್ದಾರ್ಯ ಕುಲವಾಸೆ ಚೌಡಾಂಬ ಜೋ ಜೋ ॥

ಆದಿಯೋಳು ಸರ್ವಜಗವಾ । ಇರವನರಿ । ತಾದರಣೆಯಿಂದ ವಸ್ತ್ರ ।
ಸಾಧಕನ ತೋರಿ ಮಾನವನು ಕಾಯ್ದು । ಮಹದೇವಿ ನೀನೇ ಜೋ ಜೋ ॥೧॥

ದೇವಾಂಗ ಸದ್ವಂಶದೀ । ಆಚರಿಸೆ । ದೇವಿತವಜನನೋತ್ಸಮ ।
ಭೂವಿಹಿತ ಮೆಂದಮರರೂ । ತೂಗುವ ಸ್ವ । ಭಾವವಿದೆ ಕಾತ್ಯಾಯಿನೀ ಜೋ ಜೋ ॥೨॥

ರತ್ನನಿರ್ಮಿತವಾಗಿಹ । ಸೌವರ್ಣ । ದತ್ಯಧಿಕ ತೊಟ್ಟಿಲಿಟ್ಟೂ । ಮುತ್ತು
ಕುಂದಣ ಕೆತ್ತಿಹ । ಒರಜಿಯೆಯ । ತ್ತ ತೂಗುವ ಗೌರಿಯೇ ಜೋ ಜೋ ॥೩॥

ಅಂದು ತೂಗುವ ಮಾಳ್ಕೆಯೋಳ್ ದೇವಾಂಗ ಬಂಧುಯುವತಿ ವೃದ್ಧರೂ
ಮಂದಗಮನದಿ ಶೃಂಗಾರಮಂ ಗೈದು । ಬಂದು ತೂಗುವರೆ ಬೇಗ ಜೋ ಜೋ ॥೪॥

ಹಾರ ಕಂಕಣ ಪದಕವೂ । ಅಂದುಗೆಯ ಪಾರಗೆಜ್ಜೆಯ ವೈಖರೀ ।
ತೋರುತಿರೆ ತೊಟ್ಟಿಲಿನ್ನೂ । ತೂಗಿದರು ನೀರೆಯರು ಜಗಧೀಶ್ವರೀ ಜೋ ಜೋ ॥೫॥

ಶಚಿ ಸರಸ್ವತಿ ಲಕ್ಷ್ಮಿಯ । ರೈತಂದು ಪ್ರಚುರ ಪೀತಾಂಬರವನೂ ।
ಅಚರ ದೇವಾಂಗನಿಂದ । ತಂದಿಟ್ಟ । ರುಚಿರ ಕಾಳೆಯ ತೂಗುವರೆ ಜೋ ಜೋ ॥೬॥

ಭಾಮಿನೀ ಮಣಿಯರಾದದಿಕಧಿ ಪರ । ಕಾಮಿನಿಯರಂದು ಬಂದು ।
ಸೌಮನಸ್ತದಿ ಪಾಡುತಾ । ತೂಗಿದರು । ಹೈಮವತಿ ಜಗಧೀಶ್ವರೀ ಜೋ ಜೋ ॥೭॥

ಅವಿರಳೆಯ ಭವಹರಳೆಯ । ದೇವಾಂಗ ಕುಲ । ಭವೆ ಶಿವೆ ಭವಾನಿ ನನ್ನ ।
ತವಕನಿಂ ನಾಗಕನ್ಯೆ । ಯರು ಬಂದು । ಸುವಿಲಾಸದಿಂ ತೂಗುವರೆ ಜೋ ಜೋ ॥೮॥

ರುದ್ರಾಣಿ ಶರ್ವಾಣಿಯೇ । ಸಂಪದ । ಸಮೃದ್ದೆ ಪರಶಕ್ತಿವಲಯೇ ।
ಸದ್ಧರ್ಮ ಸಹಕಾರಿಯೇ । ತೂಗುವೆವು ಹೃದ್ದೇವಿ ಸದ್ಭಾವೆಯೇ ಜೋ ಜೋ ॥೯॥

ಸರ್ವಮಂಗಳೆಯಪರ್ಣಾ । ಪಾರ್ವತಿಯೆ ದುರ್ಗಿಯೆ ಮೃಡಾಣಿ ಮಾಲೇ ।
ಹರ್ಯಕ್ಷವಾಹೆ ಚಂಡಿ । ಕೆಯೆ ತೂಗು । ತಿರ್ವೆಂಬಿಕೆ ಶಯನಿಸೇ ಜೋ ಜೋ ॥೧೦॥

ಆರ್ಯೆ ದಾಕ್ಷಾಯಿಣಿ ವರ । ಗಿರಿಜೆಯುಪರಾಗಿ ಮೇನಕಾತ್ಮಜೇ ।
ಭಾರತೀ ಪರಿಪೂಜಿತಾ । ಪಾದ ಸರ । ಸೀರುಹೆಯೆ ತೂಗುತಿಹೆವೇ ಜೋ ಜೋ ॥೧೧॥

ಜಯ ಜಯ ಜಗನ್ಮಾತೆಯೇ । ಲೋಕೈಕೆ । ಜಯ ಜಯ ಶಿವೋತ್ಸಂಗಿಯೇ ।
ಜಯತು ಜಯತು ನರಹರಿ ಪುರೀ । ಮಹಿಷೂರುಪುರವರಾಂತರದ ನಿಲಯೇ ಜೋ ಜೋ
॥೧೨॥

ಶ್ರೀಶೆ ಲೋಕೇಶೆ ಜೋ ಜೋ । ಭಜಕ ಜನ । ಪೂಷೆ ಸುವಿಲಾಸೆ ಜೋ ಜೋ ।
ಭಾಸುರಾಂಗಿಯೆ ಜೋ ಮಹ । ದ್ದಾರ್ಢ್ಯಕುಲವಾಸೆ ಚೌಡಾಂಬ ಜೋ ಜೋ
॥ ಜೋ ಜೋ ॥೧೩॥

ಶ್ರೀ ಚೌಡೇಶ್ವರೀ (ಸಪ್ತವಿಂಶತಿ) ನಕ್ಷತ್ರಮಾಲಿಕಾ

ಪಾಹಿ ನಿತ್ಯ ಸತ್ಯರೂಪಿ । ಪಾಹಿಯನ್ನಪೂರ್ಣವ್ಯಾಪಿ ।
ಪಾಹಿ ಚಿದ್ವಿಲಾಸೆ ಈಶೆ । ಪಾಹಿ ಸರ್ವಮಂಗಳೇ ॥

ಪಾಹಿ ಕಲ್ಪಭೂರುಹಾತ್ಮೆ । ಪಾಹಿ ನಿರ್ಮಲೇ ಮಹಾತ್ಮೆ ।
ಪಾಹಿ ಶ್ಯಾಮಲೆ ಸ್ವಲೀಲೇ । ಪಾಹಿ ಚೌಡಮಾಂಬಿಕಾ ॥ ॥೧॥

ಶರ್ವೆ ಸರ್ವಮಂಗಳೇ । ಅಪರ್ಣೇ ಮುಕ್ತಿದಾತೆ ಶಕ್ತಿ ।
ಪಾರ್ವತೀ ಪರಾತ್ಪರೇ । ಸುರೋರಗಾದ್ಯ ಸತ್ಕರೇ ॥
ಶರ್ವರೀಶಜೂಟಸಾಂಕ । ಮಂಡಿತೇ ಶಿವರ್ಚಿತೇಯ ।
ಖರ್ವ ಮಂತ್ರ ಮೂರ್ತಿ ಭರ್ತೆ । ಪಾಹಿ ಚೌಡಮಾಂಬಿಕಾ ॥ ॥೨॥

ಲೋಕರಕ್ಷೆ ನಾಕಪಕ್ಷೆ । ಸೌಕುಮಾರಿ ಶಂಕರೀ ಪ ।
ರಾಕು ರಾಮಲಿಂಗ ಸಂಗಿ । ಶ್ರಿಕರೀ ಸುಖೇಚರೀ ॥
ಶಾಕಿನೀ ಪತಾಕಿನೀ ಪಿ । ನಾಕಿನೀಅವಲೋಕಿನೀ ಸ ।
ಪಾಕಶಾಸನಾಭಿವಂದ್ಯೆ । ಪಾಹಿ ಚೌಡಮಾಂಬಿಕಾ ॥ ॥೩॥

ಹಾರಹೀರ ಭೂರಿ ಕಾಂತಿ । ಸಾರೆ ನೀರದಾಂಗಿ ಶ್ರಂ ।
ಗಾರನಾರೀ ಶೇಕರೀ । ಸ್ವಯಂಭುವಂಶಸ್ವೀಕರೀ ॥
ಕ್ರೂರರೂಪೆ ಭೀಕರೀ ಸು । ರಾರಿವರ್ಗಧಿಕ್ಕರೀ ।
ಮುರಾರಿಯೈಕಸೋದರೀ । ಸುಪಾಹಿ ಚೌಡಮಾಂಬಿಕಾ ॥ ॥೪॥

ದೇವದತ್ತೆ ಪಾವನೇ । ಸ್ವಭಾವ ಸಿಂಹವಾಹನೇ ಸು ।
ಭಾವ ಬೋಧ ನಾದಬಿಂದು । ಚಿತ್ಕಳಾ ಸುವಾಸಿನೇ ।
ದೇವಿ ದೇವತಾಂಗ ಭಕ್ತ । ತುಂಗ ವಂಶಭಂಗನಾಶೆ ।
ಶ್ರೀ ವಿಲಾಸಸಾಭಿಲಾಷೆ । ಪಾಹಿ ಚೌಡಮಾಂಬಿಕಾ ॥ ॥೫॥

ನಾಗವೇಣಿ ರಾಗವಾಣಿ । ಆಗಮ ಪ್ರವೀಣೇ ಜಾಣೇ ।
ಯೋಗಮಾರ್ಗವರ್ಗವೇದ್ಯ । ಸಾಧ್ಯೇ ಸತ್ಕುಲೋದಯೇ ॥
ಸಾಗರ ಕೃಪೋದರೇ । ಸುಭಾಗಧೇಯಿ ಭಾಗ್ಯದಾಯಿ ।
ಶ್ರೀ ಗುರಾತ್ಮ ಮಾತೆ ನಾಥೆ । ಪಾಹಿ ಚೌಡಮಾಂಬಿಕಾ ॥ ॥೬।

ನೂತನಾಂಬರ ಪ್ರದಾತೆ । ಪಾತಕೇಷ್ವ ನಾಶಭೂತೆ ।
ದಾತೆಸರ್ವ ಲೋಕಮಾತೆ । ಪಾತಿಭಾಷಿಕಾತ್ಮಿಕಾ ।
ಭೂತದೂತಿಕಾ ಪುನೀತೆ । ಭೂತಳೈಕಗೋತ್ರಜಾತೆ ।
ಗಾತ್ರ ಸುಂದರಾ ವಿಜೃಂಭ । ಪಾಹಿ ಚೌಡಮಾಂಬಿಕಾ ॥ ॥೭।

ಅಕ್ಷಯಾನ್ನ ಭಕ್ಷ್ಯ ಲೇಹ್ಯ । ಲಕ್ಷಸಂಖ್ಯ ಸ್ವರ್ಣದಾಯಿ ।
ಲಕ್ಷಣೇಕ್ಷಣ ಪ್ರಭೇ । ಮಹೇಶ್ವರೀ ತ್ರಿಯಕ್ಷರೀ ।
ಸುಕ್ಷಮಾವಿಚಕ್ಷಣಾನು । ರಕ್ಷಣಾ ಭಯೇಕ್ಷಣೇ ।
ಪ್ರದಕ್ಷಿಣಾರ್ಹ ಪೂರ್ಣಕುಂಭ । ಪಾಹಿ ಚೌಡಮಾಂಬಿಕಾ ॥ ॥೮॥

ಜ್ಞಾನಶೀಲ ದಾನಶಾಲಿ । ಮಾನರಕ್ಷಣೈಕ ಪಕ್ಷ ।
ಧ್ಯಾನಕುಕ್ಷಿ ಶೈವಪಕ್ಷೆ । ದೈವಶಾಲಿ ಮಾಲಿಕಾ ।
ನ್ಯೂನ ಕಾರ್ಯಕಾನನಾ । ವಿದಗ್ಧವಿಘ್ನಭಗ್ನೆ ಸಂವಿ ।
ಧಾನ ಪಂಚಪಾತಕಘ್ನೆ । ಪಾಹಿ ಚೌಡಮಾಂಬಿಕಾ ॥ ॥೯॥

ಪಂಚಭೂತ ಸಂಚಯ ಪ್ರ । ಪಂಚವ್ಯಾಪಿ ಸಚ್ಚರಿತ್ರೆ ।
ಚಂಚಲಾಕ್ಷಿ ನೀಲಕಂಠ । ವಾಹನೋತ್ಸುಕಾತ್ಮಿಕಾ ॥
ಪಂಚಸೇನ ರಾಕ್ಷಸಾ । ವಿಮುಂಚರಕ್ತ ಬಿಂದುನಾಶೆ ।
ಪಂಚವರ್ಣಕರ್ತೃ ಪ್ರೀತೆ । ಪಾಹಿ ಚೌಡಮಾಂಬಿಕಾ ॥ ॥೧೦॥

ಕಾಳಿ ನೀಲಕುಂತಳಾಭ್ರ । ಜಾಲಕಾಯ ಭಾಯಸ್ವೀಯ ।
ಫಾಲನೇತ್ರ ಗಾತ್ರವಸ್ಯೆ । ಶಾಶ್ವತೇ ಸಮೂಹಿತೇ ।
ಭ್ರೂಲತಾ ಸ್ವಲೀಲತಾತ । ಮಾಲಪತ್ರಚಿತ್ರಿತಾಕ ।
ಫಾಲಭಸ್ಮಧಾರೆ ಧೀರೆ । ಪಾಹಿ ಚೌಡಮಾಂಬಿಕಾ ॥ ॥೧೧॥

ಸಾಮಗಾನಲೋಲೆ ನಿತ್ಯ । ನೇಮಪಾಲೆ ಶಂಧು ಲೀಲೆ ।
ವ್ಯೋಮಕೇಶ ಹಸ್ತನ್ಯಸ್ತೆ । ವಕ್ಷಕುಟ್ಮಲಸ್ತನೇ ।
ಕಾಮಶಾಸ್ತ್ರಕೋವಿದೇ । ಸುಧಾಮಲಿಂಗ ಸಂಪದೇ ।
ಸದಾಮಹಾಸುಖೀಶಲಬ್ಧೆ । ಪಾಹಿ ಚೌಡಮಾಂಬಿಕಾ ॥ ॥೧೨॥

ಅಂತರಾತ್ಮ ಮಾನಸಾವಿ । ಚಿಂತ ಶಾಂತ ಪ್ರತ್ಯಗಾತ್ಮ ।
ಭ್ರಾಂತಿಹೀನ ಶುದ್ಧಜ್ಞಾನ । ನಿರ್ವಿಕಾರ ಭಾಸುರಾ ।
ಸಾಂತಲಿಂಗ ದೇಹಭಂಗ । ತಂತು ಕಾರಣಜ್ಞಸುಜ್ಞ ।
ಸಂತತಾಭಯಪ್ರದಾಯಿ । ಪಾಹಿ ಚೌಡಮಾಂಬಿಕಾ ॥ ॥೧೩॥

ಶಿಷ್ಟೆ ಭಾವಿಶಿಷ್ಟೆ ತುಷ್ಟೆ । ನಿಷ್ಠೆ ಸಪ್ತಮಾತೃಕಾಸ ।
ಮಷ್ಟೆ ಕಷ್ಟಕಾರ್ಯನಷ್ಟೆ । ಅಷ್ಟಮಾತೃ ಕೇಷ್ಟೆಯೇ ।

ಅಷ್ಟಮಾಹಿಮಾಂತರೋಪ । ಧಿಷ್ಮೈಕೃಷ್ಣವರ್ಣಸಂ ।
ಪಾಷ್ಟೆ ದುಷ್ಟನಿಗ್ರಹಾಂಬ । ಪಾಹಿ ಚೌಡಮಾಂಬಿಕಾ ॥ ॥೧೪॥

ವಾಸುಕೀಶಭೂಷತ್ರೈ । ಪುರೀ ವಿನಾಶ ಸ್ವಪ್ರಕಾಶ ।
ತೋಷವಾಂಛಿತೇಶ್ವರೀ । ಭಯಾಪಹಾರಿ ಸುಂದರೀ ॥
ಭಾಸುರೋದ್ವಿಶೇಷ । ಷಡ್ಗುಣೈಶ್ವರೀ ಕೃಪಾಕರೀ ।
ದಾಸಬೃಂದವಂದನೀಯೆ । ಪಾಹಿ ಚೌಡಮಾಂಬಿಕಾ ॥ ॥೧೫॥

ಅಪ್ರತೀಯ ಸ್ವಪ್ರತಾಪೆ । ಸುಪ್ತ್ಯವಸ್ಥ ಜಾಗ್ರರೂಪೆ ।
ಪುಷ್ಪದಂತಪೂಜಿತೋ । ಪರಿಸ್ಥ ಸುಪ್ರದೀಪಿತೇ ॥
ತಪ್ತಕಾಂಚನಾಭಿರಾಮ । ತೃಪ್ರಚೇಲಕಂಚುಕಾಮ ।
ಹಾಪ್ತ ಸದ್ವಧೂಲಲಾಮ । ಪಾಹಿ ಚೌಡಮಾಂಬಿಕಾ ॥ ॥೧೬॥

ಇಂದು ಪೂರ್ಣಬಿಂಬ । ಸುಂದರಾನನ ಪ್ರಭೋದಯಾಮ ।
ದಂಬ ಶಂಭ ಡಂಭ । ನಿಗ್ರಹೋಗ್ರ ವಿಗ್ರಭೋಜ್ವಲ ॥
ಮಂದುಯಾನ ಸುಭ್ರಮಾರ । ವಿಂದಪಾದದ್ವಂದ್ವಮಾಭಿ ।
ನಂದವಂದನಾ ನಿಕಾಯೆ । ಪಾಹಿ ಚೌಡಮಾಂಬಿಕಾ ॥ ॥೧೭॥

ಧೂಮ್ರವಕ್ತ್ರ ಖಡ್ಗಜಿಹ್ವ । ನಾಮಧಾಮ ಶೌರ್ಯ ನಿ ।
ರ್ನಾಮ ಭೀಮಕಾಮತಪ್ತ । ಆಮ್ರತೋಮಲಾಧರೇ ॥
ಸೌಮನಸ್ಯ ಮೌನಿಬೃಂದ । ಸಾಮರಸ್ಯ ಭಾವಸೇವ ।
ನಾಮತೀವ ಸಾವಧಾನೆ । ಪಾಹಿ ಚೌಡಮಾಂಬಿಕಾ ॥ ॥೧೮॥

ಪಾರಿಕಾಂಕ್ಷಿತಾಸುಚಿತ್ತ । ಪಾರಿಜಾತ ಪಾದಪೋತ್ತ ।
ಮಾರ್ಯಪೂಜಿತೋಕ್ತವ್ಯಕ್ತ । ಸಾರಭೂತ ಮಾಂತ್ರಿಕಾ ॥
ಮಾರವಾರಣೈಕಭಾವ । ಮೂರುತೋನ್ನತಾದಿ ಜೀವ ।
ಸಾರಸಾಕ್ಷಿ ಲೋಕಕುಕ್ಷಿ । ಪಾಹಿ ಚೌಡಮಾಂಬಿಕಾ ॥ ॥೧೯॥

ಕರ್ಮನಾಶೆ ಭಕ್ತಪೋಷೆ । ಪಾರ್ವತೀ ಪರೇಶವಾಸೆ ।
ಸರ್ವಭೂತ ಸ್ವಪ್ರಕಾಶೆ । ವಾಗ್ವರಾತಿ ಸೇವಿತೇ ॥
ಧರ್ಮಗೇಯ ಹರ್ಮ್ಯವಾಹ । ಸಾರ್ವಭೌಮ ದೇವಶ್ರೀಮ ।
ನುರ್ಮಯಾದಿ ಪೌರುಷಾರ್ಥಿ । ಪಾಹಿ ಚೌಡಮಾಂಬಿಕಾ ॥ ॥೨೦॥

ಆದ್ಯನಾದಿ ವೇದವೇದ್ಯೆ । ಶ್ರೀ ದಯಾಂಬುಧೀಸುಖೋದ ।
ಯಾದಿಕಾರಣ ಪ್ರಮಾದೆ । ವಾದ ಸರ್ವಸಮ್ಮುದೇ ॥
ಬೋಧರೂಪೆ ಷಣ್ಮುಖೀ । ಬುಧಾದಿವಂದ್ಯೆ ಶಾಂಭವೀ ಸು ।
ನಾದಬಿಂದು ಚಿತ್ಕಳಾತ್ಮೆ । ಪಾಹಿ ಚೌಡಮಾಂಬಿಕಾ ॥ ॥೨೦॥

ಮಂಗಳಾಂಗಿ ದೇವದಾಸ । ಅಂಗವಸ್ತ್ರಸ್ವೀಕರಾಭ ।
ವಾಂಗ ಶೋಭಿತಾಷ್ಟರೀ । ಸ್ವಲಿಂಗ ಲಕ್ಷಿತೇಶ್ವರೀ ॥
ಭ್ರುಂಗನೀಲ ಕುಂತಳೋಗ್ರ । ಸಂಗರಾಗ್ರ ರಂಜಿತೇ ಮ ।
ತಂಗಕನ್ಯೆ ಸುಪ್ರಸನ್ನ । ಪಾಹಿ ಚೌಡಮಾಂಬಿಕಾ ॥ ॥೨೨॥

ವಂದನೀಯೆ ಭಕ್ತಬೃಂದ । ವಂದನೀಯೆ ಸತ್ರಸಂಧೆ ।
ವಂಧನೀಯೆ ಭಕ್ತಹೃತ್ಕು । ಶೇಶಯ ಸುಮಾಲಯಾ ।
ವಂದನೀಯ ಮನ್ಮಹರ್ಷಿ । ಬಂಧುರಾತ್ಮ ಗೋತ್ರವರ್ಗ ।
ಸಿಂಧುವರ್ಧನೇಂದ್ವನಂದಿ । ಪಾಹಿ ಚೌಡಮಾಂಬಿಕಾ ॥ ॥೨೩॥

ತ್ರಾಹಿ ಶಂಕರೀ ಯುದಾರಿ । ತ್ರಾಹಿ ತ್ರ್ಯಕ್ಷರೀ ಕುಮಾರಿ ।
ತ್ರಾಹಿ ಹೈಮವಂತೆ ಗೌರಿ । ತ್ರಾಹಿ ಸಕ್ಷಮೋಪರಿ ॥
ತ್ರಾಹಿ ಸರ್ವಪಾಪನಾಶೆ । ತ್ರಾಹಿ ಶತ್ರುಶಾಪನಾಶೆ ।
ತ್ರಾಹಿ ಸರ್ವತಾಪನಾಶೆ । ಪಾಹಿ ಚೌಡಮಾಂಬಿಕಾ ॥ ॥೨೪॥

ಪಾಲಯಾ ಶಿವಾನುಕೂಲ । ಪಾಲಯಾ ಮಹೋಜ್ವಲೀಯ ।
ಪಾಲಿತಾಸ್ಮದೀಯ । ವಸ್ತ್ರಕರ್ತೃವಂಶಶೀಲಯಾ ।
ಪಾಲಯಾ ಕೃಪಾಲಯಾನು ।ಪಾಲಯೇಪ್ಸಿತಾಭಯಾ ಸು ।
ಬಾಲಚಂದ್ರ ಮೌಳಿಲೀಲ । ಪಾಹಿ ಚೌಡಮಾಂಬಿಕಾ ॥ ॥೨೫॥

ಭಕ್ತ ಸಂಪದಾಧಿಕಾರಿ । ಭಕ್ತ ಚಿಂತಿತೋಪಕಾರಿ ।
ಭಕ್ತ ಬೀಜ ಮೂಲಮಂತ್ರ । ಭಕ್ತಿ ಸುಸ್ಥಿತೋಂಕರೀ ॥
ಭಕ್ತ ಮುಕ್ತ ಬ್ರಹ್ಮಸೂತ್ರರಕ್ತಿ । ವ್ಯಕ್ತಿಯುಕ್ತ ।
ಭುಕ್ತಿ ಯುಕ್ತಿ ನೈಕುರಂಬ । ಶಕ್ತಿ ಪಾಹಿ ಚೌಡಮಾಂಬಿಕಾ ॥ ॥೨೬॥

ಋಕ್ಷಸಪ್ತವಿಂಶತೀ ಸು । ಲಕ್ಷಣಾಂಬ ನಾಮಕಾಶ ।
ಮಕ್ಷಮೂಲ ಸಾರ್ವಕಾಲ । ಯಃ ಪಠಂತಿ ಮಾನವಾಃ ॥

ಅಕ್ಷಯಾಯ ಮೋಕ್ಷದಾಯಿ । ರಕ್ಷಣಾಂಗೆ ಪುತ್ರಮುಖ್ಯ ।
ಲಕ್ಷ್ಮಿಸಂಪದಾನುಲಬ್ಧ । ಪಾಹಿ ಚೌಡಮಾಂಬಿಕಾ ॥ ॥೨೭॥

॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

ಶ್ರೀ ಚೌಡೇಶ್ವರಿ ಅಮ್ಮನವರ ಮಂಗಳಗಳು

೧

ಮಂಗಳ ಜಯ ಜಯ ಮಂಗಳ । ಜಯ ಮಂಗಳ ಶುಭ ಮಂಗಳ ಶ್ರೀ ಚೌಡೇಶ್ವರಿ ತಾಯಿಗೆ । ಮಂಗಳ ಜಯ ಜಯ ಮಂಗಳ ॥ ಪ ॥

ಪರಮಕಲ್ಯಾಣಿಗೆ ವರನೀಲವೇಣಿಗೆ । ಸರ್ವರ ಸಲಹುವ ಶರ್ವಾಣಿಗೆ । ದುರಿತಪಾಪಗಳ ಪರಿಹರಿಸೋ ತಾಯಿಗೆ । ವರಗುಣದಾ ಬನಶಂಕರಿಗೆ ॥ ಮಂಗಳ ಜಯ ಜಯ ಮಂಗಳ ॥೧॥

ಓಂಕಾರಿ ಬೀಜಾಕ್ಷರಿ ಮಹಮ್ಮಾಯಿಗೆ ಬಿಂಕದಂದೊಳವ ಗೋಚರ ತಾಯಿಗೆ। ಶಂಕರನರ್ಧಾಂಗಿ ಚೆಲುವುಳ್ಳ ಮೂರ್ತಿಗೆ ಶಂಕೆಯಿಲ್ಲದಾ ಬನಶಂಕರಿಗೆ । ಮಂಗಳ ಜಯ ಜಯ ಮಂಗಳ ॥೨॥

ವರ ಬೆಂಗಳೂರು ದೇವಾಂಗದಪೇಟೇಲಿ ಸ್ಥಿರವಾಗಿ ನೆಲಸಿದ ಸುಂದರೀಗೆ । ಹೊಳೆವ ಗೋಚರ ತಾಯೆ ಪಾಲಿಪ ದೇವಿಗೆ ವರಗುಣದಾ ಚೌಡೇಶ್ವರಿ ತಾಯಿಗೆ । ಮಂಗಳ ಜಯ ಜಯ ಮಂಗಳ ॥೩॥

೨

ಮಂಗಳಂ ಜಯ ಮಂಗಳಂ । ಮಂಗಳಂ ಮಹಾ ಸುಂದರೀಗೆ ಶಂಕರೀಗೆ ಶಾಂಭವೀಗೆ। ಮಂಗಳಂ ಜಯ ಮಂಗಳಂ ॥ ಪ ॥

ಪಂಚರತ್ನದ ಪದಕವನುಟ್ಟು । ಪದ್ಮಪೀಠದಲಿ ಕುಳಿತಿಹಳೆ । ಮಿಂಚು ಮುತ್ತಿನ ಮೂಗುತಿಯಿಟ್ಟು ಮಿಗಿಲಾಭರಣವ ಧರಿಸಿಹಳೆ । ಅಚ್ಚರನ್ನದ ಸೀರೆಯನುಟ್ಟು ಅನಂತರೂಪು ತಾನಾಗಿಹಳೆ । ಸಂಚಿತವಾದಕುಚಗಳ ನಲಿಸುತ ಸದಾ ಮುಕ್ತೆ ತಾನಾಗಿಹಳೆ । ಮಂಗಳಂ ಜಯ ಮಂಗಳಂ ॥೧॥

ಕಾಲಾಲಂದಿಗೆ ಕೈಯಲಿ ಕಂಕಣ ಲಲಾಟಚಂದ್ರನ ಇಟ್ಟಿಹಳೆ । ತಳಿರುಕಾಂತಳೆ ಕಮಲಾಮುಖಿಯಳೆ ಹೊಳೆವ ಮುತ್ತಿನ ಓಲೆಯನಿಟ್ಟಿಹಳೆ । ಒಳಗೆ ಹೊರಗೆ ತನ್ನ ಪ್ರಭೆಗಳ ತೋರುಗ ಓಲಾಡಿ ತಾ ನಗುವಳೆ ತಾ ನಲೀವಳೆ । ಮಂಗಳಂ ಜಯ ಮಂಗಳಂ ॥೨॥

ಚಿನ್ನದದಂಡೆ ರನ್ನದಭಾಪುರಿ ಹೊನ್ನಿನಡಾಬು ಇಟ್ಟಿಹಳೆ । ಎಣಿಕೆ ಇಲ್ಲದ ಮಾಣಿಕ್ಯಸರಗಳ ಎಡಬಲದಲಿ ತಾ ಕಟ್ಟಿಹಳೆ । ಸಣ್ಣಬಣ್ಣದ ಕುಪುಸವ ತೊಟ್ಟು ಕನ್ಯೆಯರ ನೋಡಿ ನಗೂವಳೆ। ಧನುರ್ಬಾಣವ ಭಾಸುರಕರದಲಿ ಅಂಕುಶ ಆಯುಧ ಪಿಡೀದಳೆ । ಮಂಗಳಂ ಜಯ ಮಂಗಳಂ ॥೩॥

ದುಂಡುತೋಳಿನ ಧಿಮಿಧಿಮಿಕಾರಳೆ ಚಂಡಮುಂಡ ಸಂಹಾರಳೆ । ಮಂಡೆ ಶ್ರೀಶಳೆ ಮಾಯಾಭೂರ್ಣತಳೆ ಮಹಾಯೋಗವಿಲಾಸಳೆ । ಮುಂಡೆಕಿರೀಟಳೆ ದಂಡೆಯ ಮುಡಿವಳೆ ದುಂಡುಮಲ್ಲಿಗೆ ಪಿಡೀದಳೆ । ಹಿಂಡುಹಿಂಡು ದೈತ್ಯರನೆಲ್ಲ ಖಂಡ್ರಿಸಿ ದೇವಿ ಕೊಂದಳೆ । ಮಂಗಳಂ ಜಯ ಮಂಗಳಂ ॥೪॥

ಆದಿ ದೇವಿಯೆ ಅದ್ವಯರೂಪಳೆ ಅನಂತಕೋಟಿ ಪ್ರಭೇಯಳೆ । ಸದಾಮುಕ್ತಳೆ ನಿತ್ಯಾನಂದಳೆ ಚಿದಾನಂದನೈಶ್ವರ್ಯಳೆ । ಮಂದಶಾಸಳೆ ಮದಸಂಹಾರಳೆ ಮುದ ಸಾಗಕ ನಿವಾಸಳೆ । ಸದಚಿದ್ರೂಪಳೆ ಅದನಮಗೀವಳೆ ನಾದಾಮೃತ ಗುರುರೂಪಳೆ । ಮಂಗಳಂ ಜಯ ಮಂಗಳಂ ॥೫॥

ದೇವಿ ಚೌಡೇಶ್ವರಿ

(ರಾಗ ॥ ಬೇಗಡೆ ॥ ಇದಿ)

॥ ದೇವಿ ಚೌಡೇಶ್ವರಿ ಕೃಪಾಕರಿ
ದೇವಾಂಗಕುಲ ಭಾಸ್ಕರಿ ಚಾಮುಂಡೇಶ್ವರಿ

॥ ಸೇವಕಜನ ಪರಿಪಾಲಿನಿ ಶಂಕರಿ
ಭಾವಜಾರಿಸತಿ ಭಕ್ತಮಂದಾರಿ ॥ ೧

ಚರಣ

॥ ದೇವಲಮುನಿ ಪ್ರಾರ್ಥನಾಭಯಕರಿ
ದಾನವ ಧೂಮ್ರವಕ್ತ್ರಸೋದರ ಸಂಹಾರಿ ॥ ೨

॥ ಪಾವನಿ ಪರಮಾನಂದೆ ಓಂಕಾರಿ
ಭಾವುಕ ರಾಮದಾಸವಂಶೋದ್ಧಾರಿ ॥ ೩

ಸಂಗೀತ ವಿದ್ವಾನ್ ಸಿ. ಹೊನ್ನಪ್ಪ ಭಾಗವತರ್

ಪಾಲಿಸೆಮ್ಮ ಚೌಡೇಶ್ವರಿ

(ರಾಗ॥ಕಾಪಿ॥ರೂಪಕ)

ಪಾಲಿಸಮ್ಮ ರಾಮಲಿಂಗಚೌಡೇಶ್ವರಿ
ನೀಲಮೇಘಶ್ಯಾಮ ಕೃಷ್ಣ ಪ್ರೇಮಸೋದರಿ ಗೌರಿ ॥ಅ.ಪ.॥
ಫಾಲಲೋಚನಿ ಪರಶಿವ ಪ್ರಿಯಪ್ರಾಣವಲ್ಲಭೆ
ಕಾಲಕಾಲದಿ ಭಜಿಸಿ ನಿನ್ನ ಬೇಡುವೆ ಭಕ್ತಾರ್ಥಿಗಳನು ॥ ಚರಣ

ನಿನ್ನ ಕರುಣೇಯಿಂದ ಬೆಳೆದ ದೇವಾಂಗಕುಲವಿದು
ನಿನ್ನ ಚರಣಸೇವೆಗೈದು ಬೆಳಗುತಿರುವುದು
ಅನ್ನಪೂರ್ಣೆ ನಿನ್ನ ಮಹಾಶಕ್ತಿ ನಮ್ಮದು
ಬಿನ್ನಹವನು ಕೇಳಿ ನಮ್ಮ ಪೊರೆವ ಬಿರುದು ನಿನ್ನದು॥ ॥೧॥
ವೇದಮಾತೆ ನಾದಪ್ರೀತೆ ಸಾಧುಸಜ್ಜನ ಸದಾವಿನುತೆ
ಆದಿಶಕ್ತಿ ಅಮರಾರ್ಚಿತೆ ಭೇದರಹಿತೆ ಮಾತೆ - ನಮ್ಮ
ಕ್ರೋಧ ಮದ ಮಾತ್ಸರ್ಯಗಳನು ಮರೆಸಿ ಕಾಯೆ ದಾತೆ - ಸರ್ವ
ಸೋದರ ಭಾವೈಕ್ಯವ ನಮ್ಮ ಸಮಾಜಕರುಹು ಸುಪ್ರೀತೆ ॥ ॥೨॥

ಸ್ಥಿರಚಿತ್ತವ ಕರುಣಿಸೆಮಗೆ ಪರರಿಗಹಿತ ಬಯಸದಿರಲು
ವರ ದೇವಲಯಮುನಿಯ ಕೃಪೆಗೆ ಪಾತ್ರರಾಗಿ ಬಾಳಲು
ಧರೆಯೊಳಿಹ ದೇವಾಂಗಬಂಧುಭಗಿನಿಯರೊಂದಾಗಲು
ಚಿರಶಾಂತಿಗಳಿಂದ ರಾಮದಾಸ ಪಾಡಿ ನಲಿಯಲು ॥.

ಸಂಗೀತ ವಿದ್ವಾನ್ ಸಿ. ಹೊನ್ನಪ್ಪ ಭಾಗವತರ್

ಶ್ರೀ ಸ್ಕಾಂದಪುರಾಣಾಂತರ್ಗತ ಶ್ರೀ ದೇವಾಂಗಾಷ್ಟೋತ್ತರ-ಶತನಾಮಧ್ಯಾನಶ್ಲೋಕಾಃ

ಅಥ ಮೂಲಮಂತ್ರಮ್

ದೇವಾಂಗೋ ಮಹಾದೇವೋ ದೇವಲೋ ದೇವಪಾಲಕಃ ।
ಮಹಾದೇವ ಸ್ಥಿತಜ್ಯೋತಿ ಸೃಷ್ಟಿಸ್ಥಿತ್ಯಂತಕಾರಕಃ
ಚೂಡಾಂಬಿಕಾಖ್ಯಸನ್ಮುಕ್ತಾ ಶುಕ್ತಿ ಚಿಚ್ಛಕ್ತಿಧಾರಕಃ
ಬ್ರಹ್ಮವಿಷ್ಣ್ವೀಶಸಂಪೂಜ್ಯ ಪಾದಪಂಕಜಭಾಸಿತಃ
ಪರಮಾತ್ಮಾ ಪರಂಜ್ಯೋತಿಃ ಪರಬ್ರಹ್ಮಾ ಪರಾತ್ಪರಃ
ಪರಮೇಶ್ವರ ಸಹಸ್ರಾರ ಪದ್ಮಾಂತರ ಪ್ರಭಾಸಕಃ
ಯಜ್ಞಕರ್ತಾ ಯಜ್ಞಭೋಕ್ತಾ ಯಜ್ಞಸೂತ್ರ ಸ್ವರೂಪಕಃ
ವಿಶ್ವಕರ್ತಾ ವಿಶ್ವಭರ್ತಾ ವಿಶ್ವರಾಡ್ವಿಶ್ವಕಾರಣ
ನಿರಾಲಂಬೋ ನಿರಾಕಾರೋ ನಿರಾಭಾಸೋ ನಿರಾಕುಲಃ
ನಿರ್ವಿಕಲ್ಪೋ ನಿರಾತಂಕೋ ನಿಷ್ಕಳಂಕೋ ನಿರಂಜನಃ
ಸರ್ವಕರ್ತಾ ಸರ್ವಸಾಕ್ಷೀ ಸರ್ವ ಕಾರಣಕಾರಕಃ
ಸೂತ್ರ ಕಾರ್ತ ಸೂತ್ರಧಾರೀ ಸೂತ್ರಾತ್ಮಾ ಸೂತ್ರದಾಯಕಃ

ವೇದವೇದಾಂಗ ಸಂವೇದ್ಯೋ ಸಚ್ಚಿದಾನಂದ ವಿಗ್ರಹಃ
ಮಹಾ ದೇವೋ ಮಹದ್ರೂಪೋ ಮಹಾವಾಕ್ಯಾರ್ಥಗೋಚರ
ನಿತ್ಯಶುದ್ಧೋ ನಿತ್ಯತೃಪ್ತೋ ನಿರ್ಗುಣೋ ನಿರುಪದ್ರವಃ
ಸತ್ವಾದಿಗುಣಸಂಯುಕ್ತೋ ಸಾಕಾರೋ ಸಕಲಾನ್ವಿತಃ
ಸರ್ವಲೋಕ ಪ್ರತೀಕಾಶ ಸ್ಸರ್ವಲೋಕ ಪ್ರಿಯಂಕರಃ
ಸರ್ವಭೂತಸ್ವರೂಪಶ್ಚ ಸರ್ವಭೂತಾಧಿನಾಯಕ
ಭೂರ್ಭುವಾದಿಲೋಕೇಶ ಸ್ತ್ವತಲಾದ್ಯಧಿನಾಯಕಃ
ಸದ್ಯೋಜಾತಮುಖೋತ್ಪನ್ನೋ ಬ್ರಹ್ಮಣೇ ವೇದದಾಯಕಃ
ಸೂರ್ಯಚಂದ್ರಾಗ್ನಿನಿಲಯೋ ಸೌಮ್ಯೋ ಪ್ರಣವಮಂದಿರಃ
ಶೈವಮುದ್ರಾಂಕಿತಧರೋ ಶೈವಾಜ್ಞಪರಿಪಾಲಕಃ
ಗಾಯತ್ರೀಜನನಾಧಾರಃ ಗಾಯತ್ರಿಪೀಠನಿರ್ಣಯಃ
ಕ್ಷೀರಾಬ್ಧಿಸಂಗತ ಸ್ಸ್ವರ್ಣತಂತುಸಂಪಾದನೋತ್ಸುಕಃ

ಶ್ರೀಮನ್ನಾರಾಯಣಧ್ಯಾನ ಚಿಂತನೋಲ್ಲಾಸಮಾನಸಃ
ದೇವಗಂಧರ್ವ ಸಂಸೇವ್ಯೋ ದೇವದತ್ತಾಮನೋಹರಃ
ನಂದಿಕೇತನಸಂಯುಕ್ತೋ ನಕ್ರರುಂಡಲಧಾರಕಃ
ಮಾಯಾತೀತೋಮನುಬ್ರಹ್ಮಾ ಮಾಯಾಂಗೋಮಹಿಮಾಢ್ಯಕಃ
ಜ್ಯೋತಿರ್ಮಯಶ್ಚಿನ್ಮಯಾತ್ಮಾ ಶ್ಯುಚಿರ್ಭೂತ ಸ್ಸುಖಪ್ರದಃ
ಆಮೋದಪತ್ತನಾಧೀಶ ಸ್ತ್ವಗ್ನಿದತ್ತಾ ಮನಃಪ್ರಿಯಃ
ಬ್ರಾಹ್ಮಣ್ಯಕ ಪ್ರತಿಷ್ಠಾತಾ ಬ್ರಹ್ಮ ವಿದ್ಯಾಪ್ರದಾಯಕಃ
ರಾಮಲಿಂಗೇಶ್ವರಾಕಾರೋ ರಾಮಚಂದ್ರ ಪ್ರಪೂಜಿತಃ
ವಿದ್ಯಾಧರಃ ಪುಷ್ಪದಂತೋ ಬೇತಾಳೋ ಭೂತಶಿಕ್ಷಕಃ
ವರವಿದ್ಯಾವ್ಯಾಪಕಶ್ಚ ವರರುಚ್ಯವತಾರಕಃ
ಚಿಂತಿತಾಚ್ಯುತಪಾದಾಬ್ಜ ಶ್ಚಿತ್ರಯೋಗಿ ಸ್ವರೂಪಕಃ
ದೇವಶಾಲಿಸಮಾಖ್ಯಾತೋ ದೇವದಾಸೋ ಮಹಾಮತಿಃ
ದೇವಾಂಗಬ್ರಹ್ಮವಂಶಾದ್ಯೋ ದೇವಯಜ್ಞ ಫಲಪ್ರದಃ
ಅಷ್ಟಾಂಗಯೋಗನಿರತ ಸ್ತ್ವಪ್ರಾಕೃತ ದ್ವಿಜಾವನಃ
ಚತುಷ್ಷಷ್ಠಿಕಳಾಧೀಶ ಶ್ಚಾತುರ್ವರ್ಣ್ಯೋಪದೇಶಕಃ
ಜಗದಂತರ್ಬಹಿರ್ವ್ಯಾಪ್ತೋ ಜಗತ್ಸೇವ್ಯೋ ಜಗದ್ಗುರುಃ
ಏವಂ ಶ್ರೀದೇವದೇವಾಂಗ ನಾಮ್ನಾ ಮಷ್ಟೋತ್ತರಂಶತಂ
ಸ್ವರ್ಗಾಪವರ್ಗಫಲದಂ ಸರ್ವಾರಿಷ್ಟನಿವಾರಣಂ
ಪಠತಾಂ ಶ್ರುಣ್ವತಾಂ ಭಕ್ತ್ಯಾಸರ್ವಾಭೀಷ್ಟಪ್ರದಂ ಶುಭಂ
ತ್ರಿಸಂಧ್ಯಂಚ ಪಠನ್ನಿತ್ಯಂ ಸರ್ವಾನ್ ಕಾಮಾನ್ ಅವಾಪ್ನುಯಾತ್
ಇತಿ ಶ್ರೀ ಸ್ಕಾಂದಪುರಾಣೇ ಸನತ್ಕುಮಾರ ಸಂಹಿತಾಯಾಂ
ರಜತಾಚಲಖಂಡೇ ಗುರುಜ್ಞಾನ ಸುಧಾರ್ಣವೇ ಅಷ್ಟಾದಶೋಧ್ಯಾಯಃ
ಶ್ರೀ ದೇವಾಂಗಷ್ಟೋತ್ತರ ಶತನಾಮ ಧ್ಯಾನ ಶ್ಲೋಕಂ ಸಂಪೂರ್ಣಂ

ಓ ಶಾಂತಿಃ ಶಾಂತಿಃ ಶಾಂತಿಃ

ಶ್ರೀ ದೇವಾಂಗಾಷ್ಟೋತ್ತರ ಶತನಾಮಾವಳಿ

ಓಂ ಶ್ರೀದೇವಾಂಗತಾಯ ನಮಃ
ಓಂ ಮಹಾದೇವಾಯ ನಮಃ
ಓಂ ದೇವಾಲಾಯ ನಮಃ
ಓಂ ದೇವಾಪಾಲಕಾಯ ನಮಃ
ಓಂ ಮಹಾದೇವಸ್ಥಿತಜ್ಯೋತಿಷೇ ನಮಃ
ಓಂ ಸೃಷ್ಟಿಸ್ಥಿತ್ಯಂತಕಾರಕಾಯ ನಮಃ
ಓಂ ಚೂಡಾಂಬಿಕಾಖ್ಯಸನ್ಮುಕ್ತಾಶುಕ್ತಿ ಚಿಚ್ಛಕ್ತಿಧಾನಕಾಯ ನಮಃ
ಓಂ ಬ್ರಹ್ಮವಿಷ್ಣ್ವೀಶಸಂಪೂಜ್ಯ ಪಾದಪಂಕಜಭಾಸಿತಾಯ ನಮಃ
ಓಂ ಪರಮಾತ್ಮಾಯ ನಮಃ
ಓಂ ಪರಂಜ್ಯೋತಿಷೇ ನಮಃ ೧೦
ಓಂ ಪರಬ್ರಹ್ಮಣೇ ನಮಃ
ಓಂ ಪರಾತ್ಪರಾಯ ನಮಃ
ಓಂ ಪರಮೇಶ್ವರ ಸಹಸ್ರಾರ ಪದ್ಮಾಂತರ ಪ್ರಭಾಸಕಾಯ ನಮಃ
ಓಂ ಯಜ್ಞಕರ್ತ್ರೇ ನಮಃ
ಓಂ ಯಜ್ಞಭೋಕ್ತ್ರೇ ನಮಃ
ಓಂ ಯಜ್ಞಸೂತ್ರಸ್ವರೂಪಕಾಯ ನಮಃ
ಓಂ ವಿಶ್ವಕರ್ತ್ರೇ ನಮಃ
ಓಂ ವಿಶ್ವಭರ್ತ್ರೇ ನಮಃ
ಓಂ ವಿಶ್ವರಾಜೇ ನಮಃ
ಓಂ ವಿಶ್ವಕಾರಣಾಯ ನಮಃ ೨೦
ಓಂ ನಿರಾಲಂಬಾಯ ನಮಃ
ಓಂ ನಾರಾಕಾರಾಯ ನಮಃ
ಓಂ ನಿರಾಭಾಸಾಯ ನಮಃ
ಓಂ ನಿರಾಕುಲಾಯ ನಮಃ
ಓಂ ನಿರ್ವಿಕಲ್ಪಾಯ ನಮಃ
ಓಂ ನಿರಾತಂಕಾಯ ನಮಃ
ಓಂ ನಿಷ್ಕಳಂಕಾಯ ನಮಃ
ಓಂ ನಿರಂಜನಾಯ ನಮಃ
ಓಂ ಸರ್ವಕರ್ತ್ರೇ ನಮಃ
ಓಂ ಸರ್ವಸಾಕ್ಷಯೇ ನಮಃ ೩೦

ಓಂ ಸರ್ವಕಾರಣ ಕಾರಕಾಯ ನಮಃ
ಓಂ ಸೂತ್ರಕರ್ತ್ರೇ ನಮಃ
ಓಂ ಸೂತ್ರಧಾರಿಣೇ ನಮಃ
ಓಂ ಸೂತ್ರಾತ್ಮನೇ ನಮಃ
ಓಂ ಸೂತ್ರದಾಯಕಾಯ ನಮಃ
ಓಂ ವೇದವೇದಾಂಗ ಸಂವೇದ್ಯಾಯ ನಮಃ
ಓಂ ಸಚ್ಚಿದಾನಂದ ವಿಗ್ರಹಾಯ ನಮಃ
ಓಂ ಮಹಾದೇವಾಯ ನಮಃ
ಓಂ ಮಹದ್ರೂಪಾಯ ನಮಃ
ಓಂ ಮಹಾವಾಕ್ಯರ್ಥೋಗೋಚರಾಯ ನಮಃ ೪೦
ಓಂ ನಿತ್ಯಶುದ್ಧಾಯ ನಮಃ
ಓಂ ನಿತ್ಯತೃಪ್ತಾಯ ನಮಃ
ಓಂ ನಿರ್ಗುಣಾಯ ನಮಃ
ಓಂ ನಿರುಪದ್ರವಾಯ ನಮಃ
ಓಂ ಸತ್ವಾದಿಗುಣಸಂಯುಕ್ತಾಯ ನಮಃ
ಓಂ ಸಾಕಾರಾಯ ನಮಃ
ಓಂ ಸಕಲಾನ್ವಿತಾಯ ನಮಃ
ಓಂ ಸರ್ವಲೋಕ ಪ್ರತೀಕಾಶಾಯ ನಮಃ
ಓಂ ಸರ್ವಲೋಕ ಪ್ರಿಯಂಕರಾಯ ನಮಃ
ಓಂ ಸರ್ವಭೂತಸ್ವರೂಪಾಯ ನಮಃ ೫೦
ಓಂ ಸರ್ವಭೂತಾಧಿನಾಯಕಾಯ ನಮಃ
ಓಂ ಸರ್ವಭೂತಾಧಿನಾಯಕಾಯ ನಮಃ
ಓಂ ಭೂರ್ಭುವಾದಿಲೋಕೇಶಾಯ ನಮಃ
ಓಂ ಅತಲಾದ್ಯಧಿನಾಯಕಾಯ ನಮಃ
ಓಂ ಸದ್ಯೋಜಾತಮುಖೋತ್ಪನ್ನಾಯ ನಮಃ
ಓಂ ಬ್ರಹ್ಮಣೇ ವೇದದಾಯಕಾಯ ನಮಃ
ಓಂ ಸೂರ್ಯಚಂದ್ರಾಗ್ನಿ ನಿಲಯಾಯ ನಮಃ
ಓಂ ಸೌಮ್ಯಾಯ ನಮಃ
ಓಂ ಪ್ರಮಾಣಮಂದಿರಾಯ ನಮಃ
ಓಂ ಶೈವಫಾಲಾಕ್ಷಸಂಭೂತಾಯ ನಮಃ
ಓಂ ಶಿವಾಯ ನಮಃ ೬೦
ಓಂ ಶೈವಾಗಮಾರ್ಚಿತಾಯ ನಮಃ
ಓಂ ಶೈವಮುದ್ರಾಂಕಿಯ ಧರಾಯ ನಮಃ

ಓಂ ಶೈವಾಜ್ಞಾ ಪರಾಪಾಲಕಾಯ ನಮಃ
ಓಂ ಚೂಡಾಂಬಿಕಾ ತನೂಜಾತಾಯ ನಮಃ
ಓಂ ಪಂಚಚಾರ್ಯ ಪ್ರತಿಷ್ಠಕಾಯ ನಮಃ
ಓಂ ಗಾಯತ್ರೀ ಜನನಾಧಾರಾಯ ನಮಃ
ಓಂ ಗಾಯತ್ರೀಪೀಠ ನಿರ್ಣಯಾಯ ನಮಃ
ಓಂ ಕ್ಷೀರಾಬಿಧಿಸಂಗತಾಯ ನಮಃ
ಓಂ ಸ್ವರ್ಣತಂತುಸಂಪಾದನೋತ್ಸುಕಾಯ ನಮಃ
ಓಂ ಶ್ರೀಮನ್ನಾರಾಯಣಧ್ಯಾನಚಿಂತನೋಲ್ಲಾಸಮಾನಕಾಯ ನಮಃ ೭೦
ಓಂ ದೇವಗಂಧರ್ವ ಸಂಸೇವ್ಯಾಯ ನಮಃ
ಓಂ ದೇವದತ್ತಾಮನೋಹರಾಯ ನಮಃ
ಓಂ ನಂದಿಕೇತನಸಂಯುಕ್ತಾಯ ನಮಃ
ಓಂ ನಕ್ತುಕುಂಡಲಧಾರಕಾಯ ನಮಃ
ಓಂ.ಮಾಯಾತೀತಾಯ ನಮಃ
ಓಂ ಮನುಬ್ರಹ್ಮಣೇ ನಮಃ
ಓಂ ಮಾಯಾಂಗಾಯ ನಮಃ
ಓಂ ಮಹಿಮಾಢ್ಯಕಾಯ ನಮಃ
ಓಂ ಜ್ಯೋತಿರ್ಮಯಾಯ ನಮಃ
ಓಂ ಚಿನ್ಮಯಾತ್ಮನೇ ನಮಃ
ಓಂ ಶುಚಿಭೂರ್ತಾಯ ನಮಃ ೮೦
ಓಂ ಸುಖಪ್ರದಾಯ ನಮಃ
ಓಂ ಆಮೋದಪತ್ತನಾಧೀಶಾಯ ನಮಃ
ಓಂ ಅಗ್ನಿದತ್ತಾ ಮನಃಪ್ರಿಯಾಯ ನಮಃ
ಓಂ ಬ್ರಾಹ್ಮಣ್ಯಕ ಪ್ರತಿಷ್ಠಾತ್ರೇ ನಮಃ
ಓಂ ಬ್ರಹ್ಮವಿದ್ಯಾ ಪ್ರದಾಯಕಾಯ ನಮಃ
ಓಂ ರಾಮಲಿಂಗೇಶ್ವರಾಕಾರಾಯ ನಮಃ
ಓಂ ರಾಮಚಂದ್ರ ಪ್ರಪೂಜಿತಾಯ ನಮಃ
ಓಂ ವಿದ್ಯಾಧರಾಯ ನಮಃ
ಓಂ ಪುಷ್ಪದಂತಾಯ ನಮಃ ೯೦
ಓಂ ಬೇತಾಳಾಯ ನಮಃ
ಓಂ ಭೂತಶಿಕ್ಷಕಾಯ ನಮಃ
ಓಂ ವರವಿದ್ಯಾವ್ಯಾಪಕಾಯ ನಮಃ
ಓಂ ವರರುಚ್ಯವತಾರಕಾಯ ನಮಃ
ಓಂ ಚಿಂತಿತಾಚ್ಯುತಪಾದಾಬ್ಜಾಯ ನಮಃ ೯೫

ಓಂ ಚಿತ್ರಸೋಗಿಸ್ವರೂಪಾಯ ನಮಃ
ಓಂ ದೇವಶಾಲಿಸಮಾಖ್ಯಾತಾಯ ನಮಃ
ಓಂ ದೇವದಾಸಾಯ ನಮಃ
ಓಂ ಮಹಾಮತಯೇ ನಮಃ
ಓಂ ದೇವಾಂಗಬ್ರಹ್ಮವಂಶಾದ್ಯಾಯ ನಮಃ ೧೦೦
ಓಂ ದೇವಯಜ್ಞ ಫಲಪ್ರದಾಯ ನಮಃ
ಓಂ ಅಷ್ಟಾಂಗಯೋಗ ನಿರತಾಯ ನಮಃ
ಓಂ ಅಪ್ರಾಕೃತದ್ವಿಜಾನಾಯ ನಮಃ
ಓಂ ಚತುಷ್ಷಷ್ಠಿಕಳಾಧೀಶಾಯ ನಮಃ
ಓಂ ಚಾತುರ್ವರ್ಣ್ಯೋಪದೇಶಕಾಯ ನಮಃ ೧೦೫
ಓಂ ಜಗದಂತರ್ಬಹಿರ್ವ್ಯಾಪ್ತಾಯ ನಮಃ
ಓಂ ಜಗತ್ಸೇವ್ಯಾಯ ನಮಃ
ಓಂ ಜಗದ್ಗುರುವೇ ನಮಃ ೧೦೮

ಇತಿ ಶ್ರೀ ದೇವಾಂಗಾಷ್ಟೋತ್ತರ ಶತನಾಮವಳಿ ಸಂಪೂರ್ಣಂ

ದೇವಾಂಗ ಬ್ರಹ್ಮವಿರ್ಭಾವಕಾಲೇ ಪರಮೇಶ್ವರಕೃತ ಸ್ತೋತ್ರಮ್

ಅಸ್ಯ ದೇವಲ ಮಂತ್ರಸ್ಯ ಗಾಯತ್ರೀ ನಿರ್ಣಯಃ ಖಲು
ತ್ವಮೇವದೇವಲೋ ಮೂರ್ತಿಂ ಸಮ್ಯಕ್ಚಿಂತಯ ಸದೃಡಂ
ಆದ್ಯಕ್ಷರಮತೋ ಬ್ರಹ್ಮಾ ಜ್ಞೇಯಾಂಛಂದಾಂಸಿ ದೇವತಾಃ
ಅಹಂವೈ ದೇವಲೋ ಧ್ಯಾನಂ ಜಾತರೂಪಮಯಂ ಮನುಃ
ಯಸ್ಯ ಕೇಶೇಷುಜಲಧೋ ನದ್ಯಸ್ಸರ್ವಾಂಗಸಂಧಿಷು
ಸೂರ್ಯಚಂದ್ರಾಯಸ್ಯನೇತ್ರೌ ದೇವಾಂಗ ಬ್ರಹ್ಮಣೇ ನಮಃ
ಆಗಮಾ ಅಪಿಚತ್ವಾರೋ ಯಸ್ಯನಿಶ್ವಾಸ ಸಂಭವಾಃ
ಸರ್ವೋಪನಿಷದಸ್ಸಾಂಗ ದೇವಾಂಗ ಬ್ರಹ್ಮಣೇ ನಮಃ
ಓಂಕಾರೋ ಯಸ್ಯಭವನಂ ನಾದಃಕಲ್ಯಾಣಮಂಟಪಂ
ಬಿಂದು ಸಿಂಹಾಸನಂ ಯಸ್ಯ ದೇವಾಂಗ ಬ್ರಹ್ಮಣೇ ನಮಃ
ಯನ್ನೇತ್ರಕೂಪಸಂಭೂತೋ ಮಕ್ಷಿಕಾಲಾಗ್ನಿ ರುಚ್ಯತೇ
ಪಂಚಭೂತಾತ್ಮರೂಪಾಯ ದೇವಾಂಗಬ್ರಹ್ಮಣೇ ನಮಃ
ತೃಣವೃಕ್ಷಲತಾವಲ್ಲೀ ಶಾಖಾಪರ್ವತ ಮಾದಯಃ

ಯಸ್ಯದೇಹಸ್ಥ ರೋಮಾಳ್ಯಃ ದೇವಾಂಗ ಬ್ರಹ್ಮಣೇ ನಮಃ
ಶಿಕ್ಷಾ ಯಸ್ಯ ಜಗಚ್ಛಿಕ್ಷಾ ಕಲ್ಪಯೇ ವಿಶ್ವಕಲ್ಪಕಃ
ಕಲ್ಪಸೂತ್ರಾಣಿ ಯತ್ಸೂತ್ರಂ ದೇವಾಂಗಬ್ರಹ್ಮಣೇ ನಮಃ
ಯಸ್ಯಲೀಲಾವತಾರಾಣಾಂ ಯದ್ಯಚ್ಚಾರಿತ್ರ ಮದ್ಭುತಂ
ಕಥಯಂತಿ ಕಥಾಗಾಥಾಃ ದೇವಾಂಗಾಯ ನಮೋ ನಮಃ

ಇತಿ ಶ್ರೀ ಸ್ಕಾಂದಪುರಾಣೇ ಸನತ್ಕುಮಾರ ಸಂಹಿತಾಯಾಂ
ರಜತಾಚಲಖಂಡೇ ಗುರುಜ್ಞಾನಸುಧಾರ್ಣವೇ ಏಕೋನವಿಂವತ್ಯಧ್ಯಾಯಃ
ಮಂಗಳಮ್

ಶ್ರೀ ದೇವಲ (ದೇವಾಂಗ) ಸುಪ್ರಭಾತ

ಶ್ರೀಮತ್‌ಸೌಖ್ಯ ಶಾಂತಿದಾತ ನಿರುತ ಓ, ವಸ್ತ್ರ ಸೂತ್ರಕರ್ತ।
ಶ್ರೀಮದ್ಗುರುದೇವ ದೇವಲ ಮುನಿವರ ಏಳಯ್ಯ ಕರುಣಾಕರ ॥ ಪ ॥

ವಂದನವ್ವೆ! ತವಪೂಜ್ಯಪಾದದಡಿಯೊಳ್ ತಿಳಿಬೆಳಗು ತಾಂ ಮೂಡಿದೆ।
ವಂದನ್ವೆ ತವ ಕರುಣಾಪೂರ್ಣಪದದೊಳ್ ಚಿರಶಾಂತಿ ನಲಿದಾಡಿದೆ।
ವಂದನವ್ವೆ! ಆನಂದಯೋಗ ಮೂರ್ತೇ ನೀ ಯೋಗದಿಂ ಏಳ್ವುದು।
ಸುಂದರನ್ವೆ! ಗುರುದೇವ ದೇವಲ ಮುನಿವರ! ಏಳಯ್ಯ ಬೆಳಗಾದುದು। ॥೧॥

ತವಚರಣಾಮೃತ ಕಾರಣದಿಂದ ಧರೆಯೊಳ್ ವರ ಸುಪ್ರಭಾತವಿದು।
ಶಿವಶಕ್ತೀರ್ವರ ಕೃಪೆಯ ತಂದು ಜೊತೆಯೊಳ್ ಪಾವಿತ್ರ್ಯಮಂ ನೀಡುತ।
ಕವಿದಿರ್ದಾಘನದಂಧಕಾರ ಕಳೆದುಳಿದು ಚಿತ್ಕಳೆಯ ತಾಂ ನೀಡ್ದುದ್ವೆ।
ಭವನಾಶ! ಗುರುದೇವ ದೇವಲ ಮುನಿವರ! ನೀ ಯೋಗದಿಂ ಏಳ್ವುದು ॥೨॥
ಮಿಗೆಯೊಳ್ ರಾಜಿಪ ನಿನ್ನ ಚರಣದಡಿಯೊಳಾ ದಿನಕರನು ಮೇಲೇರುತ।
ಬಗೆಬಗೆಯೊಳ್ ಜಗ ಜೀವರಾಶಿಗೆಲ್ಲಂ ಪೊಸತನವ ತಾಂ ತುಂಬುತ।
ಸೊಗದಿಂ ಸರ್ವಕೆ ಪುಷ್ಟಿ ನೀಡುತಿಹನ್ವೆ ಜಡಮೆಲ್ಲಮಂ ನೀಗುತ।
ಜಗದೀಶ! ಗುರುದೇವ ದೇವಲ ಮುನಿವರ; ಏಳಯ್ಯ! ಬೆಳಗಾದುದು ॥೩॥

ಗುಡಿಮಂದಿರಗಳ ಘಂಟೆ ಭೇರಿ ಧ್ವನಿಗಳ್ ಕತ್ತಲೆಯ ತಾಂ ಪರಿದವ್ವೆ।
ಬಿಡದೆ ಜಪ ತಪ ಯಜ್ಞ ಯಾಗ ಸುವಿಚಾರ ಗುರುಕುಲದಿ ನಡೆದಿರ್ಪವ್ವೆ।
ಮಡಿಯಿಂ ನಿಂದಿಹರೆಲ್ಲರ್ ತವದರ್ಶನಾರ್ಥಂ ಸಕಲರ್ಗೆ ಕೃಪೆಮಾಡಲು।
ಮೃಡರೂಪ। ಗುರುದೇವ ದೇವಲ ಮುನಿವರ। ನೀ ಯೋಗದಿಂ ಏಳ್ವುದು ॥೪॥

ಸ್ಮೃತಿಯಿಂ ಕಾದಿವೆ ಹಂಪಿ ಹೇಮಕೂಟ- ಗಾಯತ್ರೀ ಪರಮ ಪೀಠ ।
ಜತೆ- ಹರಿವರ್ ತವ ಪಾದ ತೊಳೆಯಲೆಂದೇ ತುಂಗೆ- ಭದ್ರೆಯಾರ್ ನಿರುತ ।
ಅತಿಸುಫಲತೆಯಿಂ ಬಾಗಿ ಬೆಳಗುತಿಸಳಾ ಭೂದೇವಿ ರವಿಜ್ಯೋತಿಯಂ ।
ಯತಿಶ್ರೇಷ್ಠ! ಗುರುದೇವ ದೇವಲ ಮುನಿವರ! ಏಳಯ್ಯ! ಬೆಳಗಾದುದು ॥ ೫ ॥

ಸತ್ಯಂ ಜ್ಞಾನ ಸುಖಾತ್ಮ ಪೂರ್ಣ ತತ್ವ ಅವ್ಯಕ್ತ ಮೂಲರೂಪ ।
ನಿತ್ಯಂ ನಿರ್ಮಲ ಶಾಂತಿ ಕಾಂತಿರೂಪ ಸರ್ವಾತ್ಮರಂ ಪ್ರೇರಕ ।
ಮಿಥ್ಯಾ ಮರವೆಯ ಕಳೆದು ತತ್ವ ಬೆಳಗಲ್ ನೀಂ ಧರೆಗೆ ವ್ಯಕ್ತಾದುದ್ದೈ ।
ತತ್ವಾತ್ಮ! ಗುರುದೇವ ದೇವಲ ಮುನಿವರ! ತವಪಾದಗಳಲಿ ವಂದನ ॥ ೬ ॥

ಸೃಷ್ಟಿಸ್ಥಿತಿಲಯ ಕರ್ತರಾಗಿ ಮೆರೆವಾ ಅಜ- ಹರಿ- ಹರರ್ ಮೂವರಿಂ ।
ಸೃಷ್ಟಿಸಲಾಗದೆ ವಸ್ತ್ರಸೂತ್ರ ನಿನ್ನಂ ಸುರವರು ಪ್ರಾರ್ಥಿಸಿದರ್ರೈ ।
ಸೃಷ್ಟೀಶ ಶಿವ ನಿನ್ನ ಸ್ಮರಿಸಿ ಕರೆಯಲ್ ಫಾಲನೇತ್ರದಿಂದುದಿಸಿದೆ ।
ಶಿಷ್ಟಾತ್ಮ! ಗುರುದೇವ ದೇವಲ ಮುನಿವರ! ತವಪಾದಗಳಲಿ ವಂದನ ॥ ೭ ॥

ಪರತರರರ ವಸ್ತ್ರ ಸೂತ್ರ ನೀಡಿ ಧರೆಯೊಳ್ ಸತ್ಕಾಯಕಂ ತಿಳಿಸಲು ।
ತ್ವರಿತದಿ ಮೂಜಗದವರ ಮಾನಕಾಯಲ್ ಸಂಸ್ಕೃತಿಯ ನೀಂ ಕಲಿಸಲು ।
ನಿರುತದಿ ನಿನ್ನಯ ಪರಮಧರ್ಮ ಬೆಳಗಲ್ ಅವತಾರಮಂ ತಾಳಿದೆ ।
ಕರುಣಾತ್ಮ! ಗುರುದೇವ ದೇವಲ ಮುನಿವರ! ತವಪಾದಗಳಲಿ ವಂದನ ॥ ೮ ॥

ಕರದೋಳ್ ದಂಡಕಮಂಡಲ ತುಳಸಿಮಾಲಾ ಕಂಕುಳದಿ ಕೃಷ್ಣಾಜಿನ ।
ಶಿರದೊಳ್ ಶಿಖೆಮುಡಿ ನೊಸಲಭಸ್ಮದಾಮೇಲ್ ಶ್ರೀಗಂಧದ ಮುದ್ರೆಯಿಂ ।
ಕೊರಳೋಳ್ ವರರುದ್ರಾಕ್ಷಿಮಾಲೆ ಪದದೋಳ್ ಪಾದುಕೆಗಳಿಂ ಬೆಳಗಿದ್ದೈ ।
ಪರಮಾತ್ಮ! ಗುರುದೇವ ದೇವಲ ಮುನಿವರ! ತವಪಾದಗಳಲಿ ವಂದನ ॥ ೯ ॥

ಕೌಶಲ್ಯಾತ್ಮಕ ಕಾಷಾಯ ವಸ್ತ್ರಧಾರಿ ನೀನಾದರ್ಶ ಪೂಜ್ಯನಾಗಿ ।
ಈಶತ್ವದ ಘನ ಯಜ್ಞೋಪವೀತ ಧರಿಸಿ ಚಿಜ್ಜ್ಯೋತಿಯಿಂ ಬೆಳಗುತ ।
ದೋಷತ್ವದ ಸಮೂಲ ಕಳೆದು ಧರ್ಮಂ ಉದ್ಧರಿಸಲವತರಿಸಿದೆ ।
ಪೋಷಕನ್ನೆ ! ಗುರುದೇವ ದೇವಲ ಮುನಿವರ! ತವಪಾದಗಳಲಿ ವಂದನ ॥ ೧೦ ॥

ತವ ಅವತಾರದಿ ಪಾವನಾಯ್ತು ಧರೆ ತಾಂ ಸುರಲೋಕ ನಲಿದಾಡ್ದವ್ವೆ ।
ಜವದಿಂ ಬಾಗುತೆ ಕೃಪೆಯ ಪಡೆದು ಮೆರೆದರ್ ಜಲವಾಯು ಶಿಖಿನಭಗಳು ।

ಸುವಿಶಾಲತ್ವಂ ತಾಳುತೆಲ್ಲ ಭೂತಗಳ್ ಪಗೆತನವ ತಾಂ ತೊರೆದುವೈ।
ಶಿವತೇಜ! ಗುರುದೇವ ದೇವಲ ಮುನಿವರ! ತವಕರುಣೆ ಸರ್ವಾತ್ಮಕ ॥೧೧॥

ಹರಿಯಿಂ ಸೂತ್ರದ ತಂದು ಪಡೆದು ನಡೆಯಲ್ ಪಥದೊಳಗೆ ದೈತ್ಯರೈವರ್ ।
ಎರಗಲ್ ಕದನಕೆ ನೀ ದೇವಿದಯದಿಂ ವಧಿಸಿ ಆ ಪಂಚವಿಧ ರಕ್ತದೊಳ್ ।
ವರತಂತುಗಳನೆ ಬೆರೆಸಿ ಪಂಚವರ್ಣಮಂ ಧರೆಯೊಳಗೆ ನೀಂ ಸೃಜಿಸಿದೆ ।
ಪರದೈವ! ಗುರುದೇವ ದೇವಲ ಮುನಿವರ! ತವ ಶೌರ್ಯವತಿ ಅನುಪಮ ॥೧೨॥

ಯುಗಯುಗದೊಳ್ ಅವತಾರಗೈದು ವಸ್ತ್ರಂ ಯಜ್ಞೋಪವೀತವಂ ಸೃಜಸಿ ।
ಜಗದೊಡೆಯರ ಕಲ್ಯಾಣ ಸಮಯದೊಳ್ ನೀ ಮಾಂಗಲ್ಯ ಸೂತ್ರವಿತ್ತು ।
ಮಿಗೆ ಸಂತುಷ್ಟಿಯಗೊಳಿಸಿ ''ವೃಷಭಧ್ವಜ'' ವ ಶಿವನಿಂದ ನೀಂ ಪಡೆದೆಯ್ಯೆ ।
ಜಗದೀಶ! ಗುರುದೇವ ದೇವಲ ಮುನಿವರ । ತವಸೇವೆ ಚಿರನೂತನ ॥೧೩॥

ಶಾಪಾನುಗ್ರಹ ಶಕ್ತಿಪಡುದ ಗುರುನೀಂ ಭಕ್ತರ್ಗೆ ಕೃಪೆ ಮಾಡುತ ।
ಪಾಪಿಗಳಂ ಸದೆಬಡಿಬಡಿದು ಶಾಂತಿನೀಡಿ ತ್ರೈಲೋಕ್ಯಕಂ ಮಾನಮಂ ।
ರೂಪಿಸಿ ಸತತಂ ಸರ್ವಧರ್ಮ ಬೆಳಗಕಾ ವರಸ್ಮೃತಿಯ ನೀಂ ರಚಿಸಿದೆ ।
ತಾಪಸಿಯೆ । ಗುರುದೇವ ದೇವಲ ಮುನಿವರ! ತ್ರೈತಾಪ ಪರಿಹಾರಕ ॥೧೪॥

ಘನ ಸೌಂದರ್ಯದ ವರಬ್ರಹ್ಮ ತೇಜ ನಿನ್ನಂ ಆ ರಂಭೆ ಅತಿಮೋಹಿಸಿ ।
ಮನದೊಳ್ ನಿನ್ನನೆ ಬಯಸಿ ಕಾಮಕೆಳೆಸಲ್ ನೀ ನೀತಿಯಂ ಬೋಧಿಸಲ್ ।
ಮನ್ನಿಸದೆ ಕಾಮಾಂಧಲಾಗಿ ನಿನ್ನ ಜರಿಯಲ್ ನೀನಚಲನಾಗಿರ್ದೆಯ್ಯೆ ।
ಚನ್ನಿಗನೆ! ಗುರುದೇವ ದೇವಲ ಮುನಿವರ! ಅಂತಲ್ ಬಹಿರ್ ಸುಂದರ ॥೧೫॥

ವರದೇವಾಂಗಾವತಾರ ಪೂರ್ತಿಯಾಗಲ್ ಈಶಾಜ್ಞೆಯಿಂ ಪಡೆಯುತ ।
ಧರೆಯೊಳ್ ಆಶ್ರಿತರಾಷ್ಟಮೂರ್ತಿಯಾಗಿ ನೀ ರಾಮಲಿಂಗವಾದೆ ।
ಕರೆಯಲ್ ಶಿವ ತಾಂ ಮತ್ತೆ ಧರ್ಮಮಸಗಲ್ ಸಪ್ತಾವತಾರ ತಳೆದೈ ।
ಸುರವರನೆ! ಗುರುದೇವ ದೇವಲ ಮುನಿವರ! ಭವತಾಪ ಸಲೆ ನಾಶಕ ॥೧೬॥

ವರವಿದ್ಯಾಧರ-ಪುಷ್ಪದಂತ-ಬೇತಾಳ-ವರರುಚಿಯು ನೀನಾಗುತೆ ।
ಮೆರೆದೈ ನೀಂ ಘನ ಚಿತ್ರಯೋಗಿಯಾಗಿ ದೇವಶಾಲಿ-ದಾಸಮಾರ್ಯ ।
ಪರಿಪರಿ ಲೀಲೆಯಂ ತೋರಿ ಜೀವರೆಬ್ಬಿಸಲಾ ಯುಗಯುಗದಿ ಅವತರಿಸಿ ।
ಚರಿತಾತ್ಮ । ಗುರುದೇವ ದೇವಲ ಮುನಿವರ । ತವ ಪಹಿಮೆ ಅತಿ ಅನುಪಮ ॥೧೭॥

-ಸ್ಮೃತಿ- ಶಾಸ್ತ್ರ- ಅತಿ ನೀತಿ- ನ್ಯಾಯ- ಗಣಾತಂ ವರದೇವಿಭಾಗವತಮಂ।
ಸ್ತುತಿಯೋಗ್ಯಂ ಮನಸೂತ್ರ- ಋಗ್ ಭಾಷ್ಯಮಂ- ಘನವಚನ ಸಾಬಿತ್ಯಮಂ।
ಪ್ರತಿ ಅವತಾರದಿ ರಚಿಸಿ ಜ್ಞಾನಕೃತಿಗಳ್ ಸುಜ್ಞಾನಮಂ ಬೆಳಗಿದ್ದೈ।
ಮತಿದಾನಿ! ಗುರುದೇವ ದೇವಲ ಮುನಿವರ! ಜಗಕೆಲ್ಲ ನೀಂ ದರ್ಶಕ ॥೧೮॥

ಸದ್ಧರ್ಮದಾ.ಕಹಳೆ ಮತ್ತೆ ನಡೋಳ್ ನೀನೀತತ ಮೊಳಗಿಸಲ್ಕೆ।
ನಿದ್ರೆಯೊಳಿಹ ತವ ಧರ್ಮ ಪೀಠದಿರವಂ ಗತವೈಭವಕ್ಕೆತ್ತಲು।
ಉದ್ಧರಿಸ್ಯೆ.ಶ್ರೀ ದೇವಾಂಗಜಗದ್ಗುರುಪೀಠಮಮ್ ಭುವನೇಶ್ವರೀ ಕರುಣದೀಂ।
ಚಿದ್ಘನನೆ! ಗುರುದೇವ ದೇವಲ ಮುನಿವರ! ತವ ಪಾದಗಳಲಿ ಮಂಗಲಂ ॥೧೯॥

ಭಯಭಕ್ತಿಯಲಿಂ'' ಕಿರಿಯ ಕಂದ'' ಪಾಡ್ದೀ ತವ ಸುಪ್ರಭಾತಕೊಲಿದು।
ದಯದೀ ಧರ್ಮದ ಕ್ಷಾಮಕಳೆದು ಭಕ್ತರ್ ಸಂತುಷ್ಟಿಯಂ ಗೊಳಿಸಲು।
ಜಯಮಂಗಲಮಂ ಜಗಕೆ ನಿಡ್ದೆ ಹರಸಲ್ ಮತ್ತೀಗ ಅವತರಿಪುದು.।
ಭವನಾಶ! ಗುರುದೇವ ದೇವಲ ಮುನಿವರ! ತವಪಾದಗಳಲಿ ಮಂಗಲಂ ॥೨೦॥

ಓ, ದೇವಾಂಗನೆ।! ಶೃಂಗ ಮಹಿಮ ಗುರುವೆ! ಶುಭ ಮಂಗಲಂ ಪಾಡುತ।
ಈ ದೇಹವನಾಂ ತಟ್ಟೆಗೊಳಿಸಿ ಅದರೋಳ್ ಪಂಚೇಂದ್ರಿಯಂಗಳೆಲ್ಲಂ।
ಮೋಹದಿ ಪಂಚಾರತಿಯ ಮಾಡಿ ಬೆಳಗುವೆಂ ವರಜ್ಞಾನಜ್ಯೋತಿ ಎತ್ತಿ।
ವೇದಾತ್ಮ! ಗುರುದೇವ ಮುನಿವರ! ನಿನ್ನಡಿಗೆ ಮಹಾಮಂಗಲ ॥೨೦॥

ಕಿರಿಯಕಂದ

ಶ್ರೀ ದೇವಲ ಮಹರ್ಷಿಯ ಪ್ರಪತ್ತಿ

ಶ್ರೀ ಮದ್ವೇದ ವೇದಾಂತ ಪಾರಾವಾರ। ಪಾರೀಣ ಪ್ರಭಾಕರ ಪ್ರಕಾಶಂ। ಸದಾಶಿವ ಫಾಲಚಕ್ಷೋದ್ಭವ ಜ್ಯೋತಿ ಸ್ವರೂಪಂ। ಅಗ್ನಿ ಮನು ದೇವಾಂಗ ನಾಮಧೇಯ ಪ್ರಸಿದ್ಧಂ। ಜಟಾಮೇಖಲಕೌಪೀನ ಭಸ್ಮ ರುದ್ರಾಕ್ಷ ಸ್ಫಟಿಕಮಾಲಾಲಂಕೃತಂ। ಮಹಾ ಪ್ರಭಾಭಾಸಮಾನನಕ್ರಕುಂಡಲ ಕರ್ಣಯುಗ್ಮಳ ಭೂಷಿತಂ। ದೇದೀಪ್ಯಮಾನ ಯಜ್ಞೋಪವೀತ ಧಾರಣಂ। ಕಾಷಾಯಾಂಬರ ಕಟಿಸೂತ್ರ, ದಂಡ ಕಮಂಡಲ ಪಾದುಕಾಯುಗ್ಮ ಶೋಭಿತಂ। ಶಿವಚಿನ್ಮಯ ಶೋಭಮಾನ ಸುರಾರ್ಚಿತಂ। ವೇದತ್ರಯ ಸ್ತೋತ್ರಾರ್ಹವಕ್ತ್ರಂ। ನಾರದಾದಿ ಮುನಿಪೂಜಿತ ಪಾದಪದ್ಮಂ। ವಿಷ್ಣುರ್ನಾಭಿ ಸರೋಜಾತ ಸೌವರ್ಣ ತಂತು ಸಂಪಾದನ ಕಾರಣಂ। ವಜ್ರದಂಷ್ಟ್ರಾದಿ

ಪಂಚ ಮಹಾಸುರ ನಾಶನ ಕಾರಣಂ । ರಕ್ತಬೀಜಾದಿ ನಕ್ತಂಚರ ನಾಶನಾರ್ಥಂ । ಶ್ರೀ ಚೌಡಮಾಂಬಾ ಪ್ರಸನ್ನಂ । ಪಂಚವಿಧ ಸೂತ್ರ ಪ್ರಕಲ್ಪಿತ ಕಾರಣಂ । ನಾನಾವಿಧ ವಸ್ತ್ರ ಸೂತ್ರಾದಿ ಬ್ರಹ್ಮಾದಿನಾಂ ಸಮರ್ಪಿತಂ । ಬ್ರಹ್ಮಾದಿಸುರ ಸ್ತೋತ್ರಾರ್ಹಮಾನಂ । ಸ್ವರ್ಗ ಮರ್ತ್ಯ ಪಾತಾಳಾದಿ ಸರ್ವಲೋಕ । ಮಾನಸಂರಕ್ಷಣಾರ್ಥಂ। ಆಮೋದಪುರಿ ನಿವಾಸಂ । ದೇವದತ್ತಾ ಅಗ್ನಿದತ್ತಾ ಭಾರ್ಯಾ ಪರಿವೃತಂ । ಸದಾ ಶೈವ ಪಂಚಾಕ್ಷರೀ ಶಿವಪೂಜಾಸಕ್ತಮಾನಸಂ । ಭಕ್ತ ಜನ ಮನೋಲ್ಲಾಸಂ । ಭಕ್ತಜನ ಅತ್ಯುನ್ನತ ಕಲ್ಪಭೋಜಸ್ವರೂಪಂ । ಶ್ರೀ ಹೇಮಕೂಟ ಶೂನ್ಯಸಿಂಹಾಸನ ಗಾಯತ್ರೀ ಪೀಠಸ್ಥಾಪಿತಂ । ನಿರುಪಮ ನಿರ್ಮಲಾನಂದ । ಶ್ರೀ ದೇವಾಂಗ ವಿದ್ಯಾಧರಃ ಪುಷ್ಪದತ್ತ ಬೇತಾಳ । ವರರುಚಿ ದೇವಶಾಲೀ ದೇವದಾಸೋ ಸಪ್ತಾವತಾರ ಗ್ರಂಥ ನಿರ್ಮಾಣ ಜನಕಂ । ಯಮ ನಿಯಮ ಆಸನ ಪ್ರಾಣಾಯಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧ್ಯಷ್ಟಾಂಗಯೋಗ ನಿರತಂ । ಶಿವಷಡಾಧಾರಪಂಕೇಶುಹೋಪರಿ ದಿವ್ಯ ಸಹಸ್ರಾರ ಕಮಲಕುಹ ಶಂಕರಾಳ ನಿವಾಸಂ । ಉನ್ಮನಿ ಮನೋನ್ಮನಿ ನಂದ ಕಂದಂ ಸಾಕಾರ ಸಾಂದ್ರಂ । ಇಡಾಪಿಂಗಳ ಸುಷುಮ್ನಾಂತರ್ಗತ ಪರಮಹಂಸಸ್ವರೂಪಂ । ಚಿದಾಕಾಶಭಾಸಮಾನ ದಿವ್ಯಲಿಂಗಪ್ರಕಾಶಂ । ರಾಮಲಿಂಗೇಶಂ ಪಾಹಿಮಾಂ ಪಾಹಿಮಾಂ ॥ ಓಂ ॥

ಶ್ರೀ ದೇವಲ ಪಂಚಕ ಸ್ತೋತ್ರ

ಓಂಕಾರ ಸಂಜಾತ ಸಮಸ್ತ ಶಾಸ್ತ್ರ
ಪುರಾಣ ಪುಣ್ಯಾಗಮ ಶಂಸಿತಾಯ ।
ಶ್ರೀಕಾರ ರೂಪಾಯ ಸುಖಾಲಯಾಯ
ನಮೋಸ್ತು ತಸ್ಮೈ ಶ್ರೀ ಗುರುದೇವಲಾಯ ॥ ॥೧॥
ಜನ್ಮಾದಿ ಸಂಸಾರ ವಿಮೋಚಕಾಯ
ಈಶಾಯ ಶ್ರೀಶಾಯ ಜಗದ್ಧಿತಾಯ ।
ನಾನಾ ಕಳಾಜ್ಞಾನ ನಿದರ್ಶನಾಯ
ನಮೋಸ್ತು ತಸ್ಮೈ ಶ್ರೀ ಗುರುದೇವಲಾಯ ॥ ॥೨॥
ಮಾತ್ಸರ್ಯ ದೋಷಾದಿ ವಿದೂರಕಾಯ
ಮಾತಾ ಪಿತುರ್ದುಃಖ ನಿವಾರಕಾಯ ।
ಚೌಡೇಶ್ವರೀ ಪೂಜನ ತತ್ಪರಾಯ
ನಮೋಸ್ತು ತಸ್ಮೈ ಶ್ರೀ ಗುರುದೇವಲಾಯ ॥ ॥೩॥
ಶೀಲ ವ್ರತಾಚಾರ ಸದಾ ರತಾಯ
ಶ್ರೀಶೈಲ ವಾಸಾಯ ಸುಖಾಸನಾಯ ।
ಶೇಷಾದಿ ಸೇವ್ಯಾಯ ಸನಾತನಾಯ
ನಮೋಸ್ತು ತಸ್ಮೈ ಶ್ರೀ ಗುರುದೇವಲಾಯ ॥ ॥೪॥

ಗೀರ್ವಾಣ ವಂದ್ಯಾಚ ಗುರೂತ್ತಮಾಯ
ಯಕ್ಷಾಂಗನಾಲೋಲ ವಿಲೋಕನಾಯ ।
ವಿಜ್ಞಾನ ವಿದ್ಯಾಧರ ನಾಮಕಾಯ
ನಮೋಸ್ತು ತಸ್ಮೈ ಶ್ರೀ ಗುರುದೇವಲಾಯ ॥ ॥೫॥

ಇತಿ ಶ್ರೀ ದೇಲಪಂಚಕ ಸ್ತೋತ್ರಮ್ ಸಂಪೂರ್ಣಮ್

ಶ್ರೀ ದೇವಲ ಅಷ್ಟಕಂ

ಇಂದ್ರಾದಿ ದೇವಮುನಿ ಪೂಜಿತಮಂಘ್ರಿಪದ್ಮಂ
ಹಸ್ತೇ ದಂಡಕಮಂಡಲಂ ಅಮಿತ ಪ್ರಕಾಶಂ ।
ಪಂಚಾಕ್ಷರೀ ಜಪಧೃತ ಮಂತ್ರಸಾರಂ
ದೇವಾಂಗ ಮೌನಿ ತಿಲಕಂ ಸತತಂ ಭಜಾಮಿ ॥೧॥

ಕಾರುಣ್ಯಸಾಗರಮನಂತ ಜಟಾ ಕಲಾಪಂ ।
ಸ್ಮರಮನಂತ ಮತಿ ಭಾನುಪ್ರಕಾಶಂ ।
ತೇಜೋಮಯಂಚ ದಿವಸಾದಿ ಭವಂ ಧುರೀಣಾಂ ।
ದೇವಾಂಗ ಮೌನಿ ತಿಲಕಂ ಸತತಂ ಭಜಾಮಿ ॥೨॥

ದೇಹಾಭಿಮಾನ ಘನರಕ್ಷಣ ದಕ್ಷಣೀಯಂ ।
ನಾನಾವಿಧ ಸ್ವರ್ಣಾಭರಣ ಭೂಷಿತಂ ಚಾ ।
ಭೂನಾಥ ಜಗನ್ನುತ ದಾಸ ಪ್ರಣವ ವಾಕ್ಯಾಂ ।
ದೇವಾಂಗ ಮೌನಿ ತಿಲಕಂ ಸತತಂ ಭಜಾಮಿ ॥ ೩ ॥

ಕೃಷ್ಣಾಜಿನಾಂಬರಧರಂ ಕರಚಾರುದಂಡಂ
ಯಜ್ಞೋಪವೀತಮಮಲಂ ನಿಗಮಾಂತವೇದ್ಯಂ ।
ಯಜ್ಞಾದಿ ಕರ್ಮನಿರತಂ ಬಹುಗ್ರಂಥಸಾರಂ
ದೇವಾಂಗ ಮೌನಿ ತಿಲಕಂ ಸತತಂ ಭಜಾಮಿ ॥ ೪ ॥

ಭೂತೇಶಮಾತ್ರ ಜನಿತಂ ತವಪಾದ
ಸ್ವರ್ಗಾಪವರ್ಗ ಫಲದಂ ಬಹುದುಃಖ ನಾಶಂ ।

ಸಂಸಾರಸಾಗರ ವಿಮುಕ್ತ ಧರಣೀಯ ನಾದಂ
ದೇವಾಂಗ ಮೌನಿ ತಿಲಕಂ ಸತತಂ ಭಜಾಮಿ ॥೫॥

ಚಂದ್ರಶೇಖರ ಮನೋದ್ಭವಂ ಫಾಲನೇತ್ರ ಜನನಂ
ವರತಂತು,ಮುನೀಶಂ ಸ್ಮರಣಾಕ್ಷ ಹಾರಂ।
ವೇದಾಂತವೇದ್ಯ ಮತುಲಂ ಬಹುತಂತ್ರ ಜಾಲಂ
ದೇವಾಂಗ ಮೌನಿ ತಿಲಕಂ ಸತತಂ ಭಜಾಮಿ ॥೬॥

ಆನಂದರೂಪ ಮಮುಜ್ವಲ ಭಾನುಕಾಂತಿ
ಪೂರ್ಣೇಂದುಬಿಂಬ ಸದೃಶಂ ಮುಖಮಂಡಳಂ ಚ।
ಪಾಷಾಂಡ ಷಂಡ ಮತಮತ್ತ ಗಜೇಂದ್ರ ಸಿಂಹಂ
ದೇವಾಂಗ ಮೌನಿ ತಿಲಕಂ ಸತತಂ ಭಜಾಮಿ ॥೭॥

ಸ್ವಯಂಭೂರ್ಮನು ನಿತ್ಯ ನಿಜಭಾವ ವಿಜಯಂ
ಬ್ರಹ್ಮಾಂಡ ಸೃಷ್ಟ ತ್ರಿಭುವನ ಮಾನ ಕವಚಂ
ಶ್ರೀ ರಾಮಲಿಂಗ ಮಾನಸನಿಜಾನ್ವಿತ ಹೃದಯಂ
ದೇವಾಂಗ ಮೌನಿ ತಿಲಕಂ ಸತತಂ ಭಜಾಮಿ ॥೮॥

ಇತಿ ದೇವಾಂಗ ಅಷ್ಟಕ ಸ್ತೋತ್ರಮ್ ಸಂಪೂರ್ಣಮ್

ದೇವಾಂಗ ಸ್ತೋತ್ರಮಾಲ

ವಿರಚಿತ ಶ್ರೀ ಸಿ. ಹೊನ್ನಪ್ಪ ಭಾಗವತರ್ ಮತ್ತು ಕು. ರಾ. ಸೀ

(ರಾಗ- ನಾಟಕುರಂಜಿ- ಆದಿತಾಳ)

ಶಿವಶಂಕರ ಪರಮೇಶನ ದಯದಿಂ
ದವತರಿಸಿದ ಗುರು ದೇವಲ ಮುನಿಯೆ
ತವಗುಣ ಚರಿತ್ರೆಯ ಕವನದಿ ನುತಿಪೆವು
ಭವನಹಿತ ಶ್ರೀ ಪರಮಪಿತ ॥

(ರಾಗ- ಅಠಾಣ)

ದೇವವಾನವರು ದೈನ್ಯದಿ ಮೊರೆಯಿಡೆ
ಪಾವನ ಮೂರುತಿ ಬ್ರಹ್ಮನು ಮರುಗಲು

ನಿರುತದಿ ನಿನ್ನಯ ಚರಣವ ನುತಿಪೆವು
ಪೊರೆ ದೇವಾಂಗರ ಗುರುದೇವ ॥೧೨॥

॥ ಮಂಗಳಂ ॥

ಶ್ರೀಮದ್ದೇವಾಂಗ ನಾಮ ಮಹಿಮೆ

ದೇವಾಂಗಂ ದೇವಮಾತಂ ದೇವಲಂ ವರರುಚಿಂ ಬೇತಾಳಂ
ಪುಷ್ಪದಂತಂ ವಿದ್ಯಾಧರಂ ದೇವ ದಾಸಿಮಾರ್ಯನಂ
ಭಕ್ತ್ಯಾ ಚೇಮಾನಿ ನಾಮಾನಿ ಸಪ್ತಭದ್ರಾಣಿ ಯೋಜಪೇತ್
ಶತ ಕೃತ್ವೋ ಭಕ್ತಿಯುಕ್ತೇ ಜಪ್ತ್ವಾ ನಿರೋಗತಾಂ ವ್ರಜೇತ್ ॥೧॥

ಲಕ್ಷಧಾಯ ಜಪೇತ್ ಯೋಗೀ ಬಂಧನಾನ್ಮುಚ್ಯತೇ ॥
ಜಪ್ತ್ವಾಚ ದಶಲಕ್ಷಂಚ ಮಹಾವಂಧ್ಯಾ ಪ್ರಸೂಯತೇ ॥
ಹವಿಶ್ಯಾ ಶೀಯತಃ ಶುದ್ಧೋ ದರಿದ್ರೋ ಧನವಾನ್ ಭವೇತ್ ॥
ಶತ ಲಕ್ಷಂಚ ಜಪ್ತ್ವಾತ್ ಜೀವನ್ಮುಕ್ತೋ ಭವೇನ್ನರಃ ॥
ಶುದ್ಧೋ ದೇವಾಂಗ ಕ್ಷೇತ್ರೇ ಸರ್ವ ಸಿದ್ಧೀ ಭವೇನ್ನರಃ ॥೨॥

ಓಂ ದೇವಾಂಗೋ ದೇವದೂತೋ ಮಹಾತ್ಮನಃ ॥
ರಂಭಾ ವಿಜಯಂ ಮನುಸಖಂ ಅಂಗಾಕ್ಷೋ ಮಿತವಿಕ್ರಮ ॥
ವಸ್ತ್ರನಿರ್ಮಾಣಶ್ಚೈವ ದೇವ ಮಾನವ ದಾನವ ಮಾನಂ ರಕ್ಷ್ಯಕಂ ॥
ದೇವೇಂದ್ರ- ಶೋಕವಿನಾಶಕಂ ॥ ಕಾಳ ರಕ್ತಸಂ ದರ್ಪಹರಾ ॥
ಪವಿತ್ರೇ ದೇವಂಗ ಸಪ್ತನಾಮಾನಿ ದೇವ ಮಹಾತ್ಮನಃ ॥
ಸ್ವಪ ಕಾಲೇ ಪಠೇನ್ನಿತ್ಯಂ ಯಾತ್ರಾಕಾಲೇ ವಿಶೇಷತಃ ॥
ತಸ್ಯಮೃತ್ಯುಭಯಂ ನಾಸ್ತಿ ಸರ್ವತ್ರ ವಿಜಯಿಭವೇತ್ ॥

(ಸಾಧಾರ)
ಬ್ರ ॥ ಶ್ರೀ ವೆಂಕಣಶಾಸ್ತ್ರಿ

ದೇವಲ ಮುನಿ

ಸಂಗೀತವಿದ್ವಾನ್ ಶ್ರೀ ಸಿ. ಹೊನ್ನಪ್ಪ ಭಾಗವತರ್
(ರಾಗ ॥ ಭೈರವಿ ॥ ರೂಪಕ)

ಶಿವನ ಫಾಲ ನೇತ್ರದಿ ಗುರು
ದೇವಲ ಮುನಿ ಅವತರಿಸಿ
ಶಿವಾಜ್ಞೆಯ ಶಿರದಿ ಧರಿಸಿ
ಶಿವಕಾರ್ಯ ನಿಷ್ಠೆಯೊಳಾಚಾರಿಸಿ ॥ ಅ. ಪ. ॥
ದೇವ ಮಾನವರಿಗೆ ಸೂತ್ರ
ಭಾವಿಸಿ ವಸ್ತ್ರಗಳ ನೀಡಿ
ದೇವಿ ಚೌಡೇಶ್ವರೀ ಕೃಪೆಯೊಳು
ದೇವಾಂಗರ ಪೊರೆವೆ ಗುರುವೆ ॥
ಗಾಯತ್ರೀ ದೇವಿಯ ಪ್ರಾರ್ಥಿಸಿ
ಪ್ರಾಕೃತಾಪ್ರಾಕೃತ ಭೇದಗಳ
ಬ್ರಾಹ್ಮಣರೆಂದೆನಿಸಿ ನಮ್ಮ
ಹೃದಯವಾಸಿನಿ ಯಾಗಿಸಿ ॥

ಪಾವನಾತಿಶಯದಿ ತನ್ನ
ದೇವಾಂಗ ವಂಶವನುದ್ಧರಿಸಿ
ಕಾವ ಸದ್ಗುರುವೆ ರಾಮದಾಸ
ಭಾವಪೂರ್ಣದಿ ಭಜಿಸಿ ತಣಿವ ॥

ದೇವಲ ಪ್ರಾರ್ಥನೆ

ಶ್ರೀ ಗುರುನಾಥ ನಾಗಲೋಟಿ

ನಮಿಸುವೆನ್ನೈ! ಪ್ರಭು ದೇವಲನೆ!
ಕ್ಷಮಿಸ್ಯೆ! ಎನ್ನನು ಹೇ, ಶುಭಕರನೇ ॥ ಪ ॥

ಜಗದಾದಾ। ರನು ಚಿರಸುಖದಾತನು।
ಭಗವದ್ರೂಪನು ಕರುಣಾಕರನು!
ಸಗುಣವತಾರದಿ ಧರೆಯಲವತರಿಸಿದ।
ಜಗವಂದಿತನೆ ಹೇ, ಸುರವರನೆ ॥ 1 ॥

ಮಾನವ ಕುಲಕೆ ಮಾನವ ನೀಡಿದೆ।
ದಾನವನು ಪಿಡಿಯೆ ನೀ ವಧೆಗೈದೆ।
ಮೌನದಿ ಸೇವಿಪ ಭಕುತರ ಕರುಣಿಸಿ।
ಜ್ಞಾನವ ನೀಡುವೆ ಹೇ, ಗುರುವರನೇ ॥ 2 ॥

ವರದೇವಾಂಗನೆ। ಧರ್ಮವ ಬೆಳಗಿಸು।
ನಿರುತದಿ ನಿನ್ನಯ ಕೃಪೆ ಎನಗಿರಿಸು।
ಅರಿಯದೆ ನಿನ್ನನು ಮರೆದಪರಾಧವ।
ತ್ವರಿತವಿ ಮನ್ನಿಸು ಹೇ, ಮುನಿವರನೆ ॥ 3 ॥

ಶ್ರೀ ದೇವಲ ಜೋಗುಳ

ಜೋ.......... ಜೋ.......... ಜೋ........... ಜೋ........... ॥

ಭುವನ ಪಾಲನ ದೇವಲನೆ ಜೋ। ವಸ್ತ್ರ ವಿರಚಿತ ಮಹಿಮನೆ ಜೋ ॥
ಶಿವಪಾರ್ವತಿಯರಿಗೆ ವಸ್ತ್ರಕೊಟ್ಟವಗೆ ಜೋ। ಚಂದ ಜೋ। ಚಲುವ ಜೋ..... ॥೧॥

ಭುವಿ ಭಕ್ತರಿಗೆ ವಸ್ತ್ರ ಕೊಟ್ಟವಗೆ ಜೋ। ಶಾಂತಿಸಾಗರನಿಗೆ ಜೋ। ರನ್ನ ಜೋ
ಚಿನ್ನ ಜೋ। ಮುದ್ದುಮೋಹನಗೆ ಜೋ.... ॥೨॥
ಧರ್ಮ ತತ್ವವ ಬೋಧಿಸಿದವಗೆ ಜೋ। ಸುರಾಸುರಗೆ ವಸ್ತ್ರಕೊಟ್ಟವಗೆ ಜೋ।
ಚಂದ ಜೋ। ಚಲುವ ಜೋ। ಕುವರ ಜೋ..... ॥೩॥

ದೇವಲ ಮಹಿಮೆ

ರಾಗ : ಯಮನ ತಾಳ : ತಿನತಾಳ

ದೇವಲ ಮುನಿಯನು ಭಜಿಸಲು ಮನುಜಾ । ವಾಂಛಿತ ಫಲಗಳು ಸಿಗುವುದು ಸಹಜ ॥ ಪ ॥

ಪರಶಿವ ನೇತ್ರಗಳಿಂದುದಯಿಸಿದಾ ऽऽ । ಪರಮ ಪಾವನನ ನಾಮವನುತಿಸೂऽऽ ।
ಪರಮಾನಂದದ ಪದವದು ದೊರೆವುದು । ದಿವ್ಯ ಜೀವನ ಮಾರ್ಗವಹುದೂ ॥ ೧ ॥

ಧರೆಯೊಳು ಸುಸ್ಥಿರ ದೇವಾಂಗ ಮತ । ಶಾಶ್ವತಗೊಳಿಸಿದ ವೀರ ದೇವಾಂಗನ ।
ಅನುದಿನ ಸ್ಮರಿಸಲು ಪರಮ ಪದವು ತಾ । ಅಂಗೈಯಲಿಪ್ಪದು ಮರೆಯದಿರೋ ನೀ ॥ ೨ ॥

ಮಗಳೇ ನೀ ಬಾರವ್ವಾ

ಮಗಳೆ ನೀ ಬಾರವ್ವಾ । ಮುತ್ತಿನಂಥಾ ಮಗಳೇ ನೀ ಬಾರವ್ವಾ ।
ಮಂಗಳ ಮಾತೋಂದऽ । ನೀ ಕೇಳವ್ವಾ ॥ ಪ ॥ ಮಗಳೆ ನೀ ಬಾರವ್ವಾ ॥
ಶ್ರೇಷ್ಠ ದೇವಾಂಗನ ಸ್ಮರಣೆ ನಿರುತಗೈದು । ಧರೆಯೊಳು ನೀ ಸುಖಿಸವ್ವಾ ॥ ಅ. ಪ. ॥
ಮಗಳೆ ನೀ ಬಾರವ್ವಾ ॥

ಗುಲಾಬಿ ಜಾಜಿ ಸಂಪಿಗೆ ಮಲ್ಲಿಗೆ ಎಲ್ಲ ಕುಸುಮಗಳ ತಾರವ್ವಾ ।
ಹೃದಯ ತುಂಬಿ ಆ ಗುರುವಿನ ಪಾದದಿ ಅರ್ಪಿಸವ್ವಾ ॥ ೧ ॥

ಕಣಿಯ ಹೇಳುವವರ ಕಂಡು ನೀ ದೇವರ ಕೇಳುವದೇಕವ್ವಾ ।
ಧರೆಗೆ ಶಾಂತಿಯನು ದಯಪಾಲಿಸುವ ದೇವಾಂಗನಿಗೆ ನೀನೆರಗವ್ವಾ ॥ ೨ ॥

ಕಂಡ ಕಂಡ ಕಲ್ಲುಮರಗಳಿಗೆ ಕೈ ಮುಗಿದರೆ ನಿನಗೇನಾಗುವುದವ್ವಾ ।
ತಂದೆ ದೇವಲನ ಪದಾಂಬುಜಕೆರಗಿದೊಡೆ ಸಕಲ ತಾಪ ಹರಿಯುವದವ್ವಾ ॥ ೩ ॥

ಸುತ್ತ ಸುತ್ತಿರುವ ಸಂಸಾರ ಬಂಧನವಿದು ಬಹುಗೋಳವ್ವಾ ।
ಗುರು ದೇವಾಂಗನ ದಯವೊಂದಿದ್ದರೆ ಸುಖಸಂಪದ ಸಹಜವಹುದವ್ವಾ ॥ ೪ ॥

ಶ್ರೀ ದೇವಲ ಆರತಿಗಳು

೧

ಜಯತು ಜಯ ಶ್ರೀ ಗುರು ದೇವಲ । ನತಭಕ್ತವೃಂದಾ ಭಯನಿವಾರಕಾ ದಯಾನಂದಾ ॥ಪ॥

ಪರಿಪರಿಯ ಜನ್ಮದೊಳು ತಿರುತಿರುಗಿ । ಬಳಲುತ್ತ ಬರುವ ನರರ ದುಃಖವ ನೋಡಿ ಸಲೆಮರುಗಿ ॥ ಆದಿಶಕ್ತಿಯ ಕರುಣದಿಂದ । ನಾನಾವಿಧವಸ್ತ್ರ ಸೂತ್ರ ಸುರಮುನಿಗಳಿಗೆ ಕೊಟ್ಟ ಪರಮೇಶಾ ದುರಿತೌಘನಾಶಾ ॥೧॥

ಅನುಭವಶಾಸ್ತ್ರ ನೋಡಿ ತನ್ನನುಭವ ಜನರಿಗೆ ಬೋಧಿಸಿ । ಜನನ ಮರಣದ ಬಾಧೆಯನು ದೂರಮಾಡಿದ ಗುರುದೇವಾ ವರಚಿತ್ರ ಭಾವಾ ॥೨॥

ಹೇಮಕೂಟದಲಿ ಗಾಯತ್ರೀಯ ನೆಲೆಗ ಒಲಿಸಿ । ಒದಗಿರ್ದ ಭಕ್ತರ ಹೃದಯಸಂದಿಗ್ಧವನೆ ಪರಿಹರಿಸಿ ॥ ಆದಿಯೊಳಿರುತಿಹ ಜೀವ ಭಾವವನೋದುದು ಕೇವಲ ಆತ್ಮಜ್ಞಾನದ । ಸದಮಲಾನಂದದೊಳು ಮುಳುಗಿಸಿದಾ ಚಿದಖಂಡನಾದ ॥೩॥

೨

ಆರತಿ ಬೆಳಗಿರಿ ದೇವಾಂಗನಿಗೆ । ಸುರಾಸುರಾರ್ಚಿತ ಸಚ್ಚಿದಾನಂದನಿಗೆ ॥ ಪ ॥
ಸತ್ಯಾನಂದನಿಗೆ । ನಿತ್ಯಾನಂದನಿಗೆ । ಸ್ತುತ್ಯ ನಿರಂಜನ ಭಕ್ತೋದ್ಧಾರನಿಗೆ ॥೧॥

ಸೃಷ್ಟಿಸ್ಥಿತಿಲಯ ಕಾರ್ಯಕರ್ತನಿಗೆ । ಶ್ರೇಷ್ಠ ಶಿವ ಪಾರ್ವತಿಗೆ । ವಂದ್ಯನಾದವಗೆ ॥೨॥

ಸಂಚಿತವಳಿದು ಸಿಶ್ಚಿಂತಸುಮನದಲ್ಲಿ । ಪಂಚತತ್ವದ ಪಂಚಾರತಿ ಪಿಡಿದು ॥೩॥
ಹೇಮಕೂಟ ಪೀಠಿಕೆ । ಜ್ಞಾನಭಂಡಾರಕೆ । ಒಡೆಯ ಶ್ರೀ ದೇವಾಂಗ ಮುನಿಗೆ ॥೪॥

೩

ಶರಣು ಗುರು ಶರಣಾರ್ತಿ ಗುರುವೆ ದೇವಲಮೂರ್ತಿ ।
ಪರಮಮಂಗಳ ಮೂರ್ತಿ ಧರೆಯ ತುಂಬಿದಕೀರ್ತಿ ॥ಪ॥

ಸುರರ ಪ್ರಾರ್ಥನೆ ಕೇಳಿ ಹರನಚಿಚ್ಛಕ್ತಿಯಲಿ । ಭರದಿ ಅವತರಿಸಿದನು ವಸನಮನು ನಾಮ ದಲಿ । ಶಿವನ ಮಾತಿಗೆ ಮಣಿದು ಸಗರಕಾದನು ಒಡೆಯ । ರವಿಯ ಸೋದರಿ ಒಲಿಯೆ ಆತಗಾದನು ಭಾವಮೈದುನ ॥೧॥

ಕರ್ಮಯೋಗವ ಅರಿತು ಮಗ್ಗಸೂತ್ರವ ರಚಿಸಿ । ಮರ್ಮಸೂತ್ರದೊಳಿರಿಸಿ ವರ್ಣಸಾಸಿರ ಸೃಜಿಸಿ ॥ ಸರ್ವಸಿದ್ಧತೊಗೊಳಿಸಿ ನೇಯ್ದುನಯ ವಸ್ತ್ರವನು । ಉರ್ವಿಯಲ್ಲಿ ಕುಶಲ ಕಲೆಯನೇ ಇಳಿಸಿದನು. ॥೨॥

ಮೂರುಲೋಕಕ್ಕೋಸ್ತ್ರವ ಪ್ರದಾನಗೈಯುತ್ತಿರಲು । ಚಾರುರೂಪದ ನಿಧಿಗೆ ಮಾರುಹೋದಳು ರಂಭೆ ॥ ದಾರಿತಡೆದಳು ಅಂದು ಮಾರಲೀಲೆಯಗೊಂಬೆ । ತೀರದಾಯಿತು ಆಶೆ ತ್ಯಾಗಿದೇವಲನಿಂದ । ನಾರಿಕೋಪದಿ ಶಪಿಸೆ ಆದ ತಳೆದ ಸಂಯಮದಿಂದ ॥೩॥

ಅವಳ ಶಾಪದಿ ದೇವ ಮರ ಮರಳಿ ಭವಕಿಳಿದ । ಯಕ್ಷ ಬೇತಾಳಾದಿ ಏಳು ಜನ್ಮವ ಕಳೆದ ॥ ಅವನ ವಂಶಜರಿಳಿವು ಕರ್ಮ ಧರ್ಮದ ಇಳಿವು । ಇಂತು ಇಂತು ಯುಗಯುಗಕಿಳಿದ ದೇವಾಂಗದವರಿರವು । ಶಾಂತ ಶ್ರೀಹರಿಸ್ಮರಣೆ ಹೃದಯ ಮನಕದು ಶಾಂತಿ ॥೪॥

೪

ಬಾಗಿಬೆಳಗಿತು ಭಕುತಿ ಜ್ಯೋತಿ ಮುನಿಯ ಮೂರ್ತಿಗೆ ॥ಪ॥

ಬಾಗಿಬೆಳಗು ತೂಗಿಬೆಳಗು ರಾಗವಿಡಿದು ಹಾಡಿಬೆಳಗು । ಲೋಕವಂದ್ಯನಾದ ಗುರು ದೇವಾಂಗಮುನಿಯ ಮೂರ್ತಿಗೆ ॥೧॥

ಬಾಗಿ ಚರಣಕೆರಗಿ ಬೆಳಗು ನೇಯ್ಗೆಯೋಗಿಯಾಗಿ ಜಗಕೆ । ಸಾಗಿ ಬಂದ ಶ್ರೀ ದೇವಾಂಗ ದೇವಲಮುನಿಯ ಮೂರ್ತಿಗೆ ॥೨॥

ತ್ಯಾಗಿ ಬೆಳಗು ಭೋಗಿ ಬೆಳಗು ತ್ಯಾಗಿ ಭೋಗಿಯಾಗಿ ನೇಯ್ಗೆ । ಯೋಗಿಯಾಗಿ ಮೆರೆದ ನಮ್ಮ ದೇವಲ ಮುನಿಯ ಮೂರ್ತಿಗೆ ॥೩॥

ಮಾನದಿಂದ ಮಣಿದು ಬೆಳಗು ಮಾನಕಾಯ್ದ ಮೂಲಬ್ರಹ್ಮ । ಜ್ಞಾನನಿಧಿ ಶಿವಾಂಶಸಂಭೂತ ಮುನಿಯಮೂರ್ತಿಗೆ ॥೪॥

ವಾಸುದೇವ ಬಿಸಜನಾಭ ಕಾಶಿಪೀತ ವಸನ ಶೋಭ । ಶೇಷಶಯನ ಶ್ರೀಹರಿಯ ಸ್ಮರಿಸಿ ಮುನಿಯ ಮೂರ್ತಿಗೆ ॥೫॥

ಶ್ರೀ ದೇವಾಂಗ ಮಂಗಳ

ಮಂಗಳಂ ಜಯ ಮಂಗಳಂ ॥ ಪ ॥

ಈಶನ ಶಿರದೊಳು ವಾಸಿಪಗೇ । ಭಾಸುರ ಮನು ದೇವಾಂಗನಿಗೇ ।
ಶ್ರೀಶನ ನಾಭಿಸರೋಜದ ತಂತುವ । ನೀಸಿತಂದಸುರವಿನಾಶನಿಗೇ ॥ ಮಂಗಳಂ ॥೧॥

ಅಮರ ಪುರೋಹಿತನಾದವಗೇ । ದಿನಮಣಿ ಸಹೋದರಿಯರಸನಿಗೇ ।
ಪ್ರಮದೆ ಚೌಡೇಶ್ವರಿ ಸಮರ ಪ್ರಸನ್ನದ । ಅಮಲಾನ್ವಯ ವರವರದನಿಗೇ ॥ ಮಂಗಳಂ ॥೨॥

ಭೂಮಿಯಾಕಾಶವನಾಳಿದಗೇ । ಕ್ಷೇಮ ಚಿಂತನ ವಸನೇಶನಿಗೇ ।
ಪ್ರೇಮ ವಿದ್ಯಾಧರ ಪುಷ್ಪದಂತನಿಗೆ ಭೂತ । ಸ್ವಾಮಿ ಬೇತಾಳ ವರರುಚಿಗೇ ॥ ಮಂಗಳಂ ॥೩॥

ದೇವಶಾಲಿ ದೇವದಾಸನಿಗೆ । ದೇವದತ್ತೆಯ ವರರಮಣನಿಗೇ ।
ದೇವತೆಗಳ ಮೊರೆಯನು ತಾ ಲಾಲಿಸಿ । ಪಾವನ ಮಾಡಿದ ಮನುಮುನಿಗೇ ॥ ಮಂಗಳಂ ॥೪॥

ಏಳವತಾರವನೆತ್ತವಗೇ । ತೋಳೊಳು ಧರಣಿಯ ಪೊತ್ತವಗೇ ।
ಬಾಲಕಿ ಪುರುಷರ ಜಾಲದಿ ಮಾನವ । ಪಾರಿಸಿ ತರಗೆಲೆಯೋಡಿಸಿದವಗೇ ॥ ಮಂಗಳಂ ॥೫॥

ಐದು ವರ್ಣಕೆ ಕರ್ತನಾದವಗೆ । ಐದು ಭೂತದ ಮೂಲಕಾರಣಗೆ ।
ಐದೆ ಅಯೋನಿಜನಾದ ಸರ್ವೇಶಗೆ । ಮೈದೋರಿದ ದೇವಾಂಗನಿಗೇ ॥ ಮಂಗಳಂ ॥೬॥

ತಂತುವಿನಲಿ ಜಗವಾಂತವಗೆ । ಸತತ ನಿಜದಲಿ ನಿಂತವಗೇ ।
ಶಾಂತನು ಮಹಿಮಾನಂತನು ದಶ । ನಾಮವಾಂತ ಸದ್ಗುರು ದೇವಾಂಗನಿಗೇ ॥ ಮಂಗಳಂ ॥೭॥

ಮಂಗಳ ದೇವಾಂಗಗೆ

ಸಂಗೀತ ವಿದ್ವಾನ್ ಸಿ. ಹೊನ್ನಪ್ಪಭಾಗವತರ್

(ರಾಗ ॥ ಸುರಟಿ ॥ ಆದಿ)

ಮಂಗಳಂ ಮಂಗಳಂ, ಮಂಗಳಂ ದೇವಾಂಗಗೆ ॥ ಚ ॥

ಶಿವನ ಫಾಲನೇತ್ರದಿ ಉದಿಸಿದ ಕುವರಗೆ
ಶಿವಾಜ್ಞೆಯ ಶಿರದಿ ಧರಿಸಿದವಗೆ
ಜವದಿ ಕಾರ್ಯಗಳ ಸಾಧಿಸಿ ಹರುಷದಿ
ದೇವತೆಗಳಿಗೆ ವಸ್ತ್ರ ಸೂತ್ರವಿತ್ತ ಮುನಿಗೆ ॥೧॥

ನಾರಾಯಣನ ಪೂಜಿಸಿ ಒಲಿಸಿ- ಅ
ಪಾರ ಸುದರ್ಶನ ಪಡೆದವಗೆ
ಘೋರ ರಾಕ್ಷಸರ ಮಾಯವರಿತುರ
ಮಾರವಣನ ಚಕ್ರ ಬೀರಿದ ಮುನಿಗೆ ॥೨॥

ಪರದೇವತೆ ಶ್ರೀ ಚೌಡೇಶ್ವರಿಯು - ಮುನಿ
ಸ್ಮರಿಸಲಾಕ್ಷಣ ಬಂದು ಮೊರೆ ಕೇಳಿ ಮರುಗಿ
ವರವನಿತ್ತು ದಾನವರ ಸಂಹರಿಸಿ
ಕರದಿ ರಂಕಣ ಕಟ್ಟಿ ಹರಿಸಿದ ಮುನಿಗೆ ॥೩॥

ಗುರುವರ ನಮ್ಮ ವಂಶವನುದ್ಧರಿಸಿ
ವರಗಳ ಕರುಣಿಸಿ ಭವಗಳ ಹರಿಸಿ
ಪರಶಿವ ರಾಮಲಿಂಗದಾಸರೆನಿಸಿದಾ
ವರದೇವಾಂಗ ಗುರು ಚಿನ್ಮಯ ರೂಪಗೆ ॥೪॥

ಆರತಿ ಬೆಳಗುವೆ

ಶ್ರೀ ಗುರುನಾಥ ನಾಗಲೋಟಿ

ಆರತಿ ಬೆಳಗುವೆ ನಾ, ಶ್ರೀಗುರು ದೇವಲಗೆ
ಧಾರುಣಿ ತ್ರಯರಿಗೆ ಮಾನವ ನೀಡಿದ ಆಗಣಿತ ಮಹಿಮನಿಗೆ

ಆದಿಶಕ್ತಿ ಶ್ರೀ ಭಗವತಿದೇವಿಯ ।
ಪಾದದೊಲುಮೆಯ ಪಡೆದವಗೆ ॥

ಸಾಧು ಶಿವನ ಶ್ರೀ ಜ್ಞಾನನೇತ್ರದಿಂ ।
ಮೇದಿನಿಯಲವತರಿಸಿದ ಮುನಿವರಗೆ ॥೧॥

ವ್ಯಾಪಕನಾಗುತೆ ಸಪ್ತಾವತಾರದಿ ।
ಪಾಪಕ್ಷಯಿಸಿದ ಶ್ರೀ ದೇವಾಂಗಗೆ ॥
ಶಾಪಾನುಗ್ರಹ ಶಕ್ತಿಯ ಪಿಡಿದು ।
ತಾಪತ್ರಯ ಪರಿಹರಿಸಿದ ದೇವಗೆ ॥೨॥

ಆಶ್ರಿತ ಜನಗಳ ನಿರುತದಿ ಪೋಷಿಪ ।
ಸಾಸಿರ ನಾಮದ ಕರುಣಾಮಯಗೆ ॥
ಭೂಷಿಪ ವಸ್ತ್ರ ಸೂತ್ರವ ನೀಡಿ ।
ಆಶೀರ್ವದಿಸಿದ ದೇವಲಮುನಿಗೆ ॥೩॥

ದೇವದತ್ತೆಯ ಮಂಗಳ

ಮಂಗಳಂ ಮಂಗಳಂ ಶ್ರೀ ಮಹಾದೇವೀ ಮಂಗಳಂ ಮಂಗಳಂ ॥ ಪ ॥

ಕಶ್ಯಪನುದರದಿ ವಿಶ್ವಾಸದಲಿ ಪುಟ್ಟಿ । ಶಾಶ್ವತದಲಿ ದೇವದತ್ತೆಯಾಗಿ ।
ವಿಶ್ವಪ್ರಪಂಚಕೆ ಐಶ್ವರ್ಯ ಕೊಡುವಂಥ ದೇವಾಂಗದೇವೀ ॥ ಮಂಗಳಂ ॥ ॥೧॥

ವಿದ್ಯಾವಳಿಯೆಂಬ ಪೆಸರಿನಿಂದಲಿ ಬಂದು । ವಿದ್ಯಾಧರನಿಗೆ ನೀವನಿತೆಯಾಗಿ ।
ಸಿದ್ಧಸಾಧ್ಯರಿಗೆಲ್ಲ ಸಿರಿಯ ಸಂಪತವಿತ್ತು । ಗದ್ದುಗೆಯಲಿ ಕುಳಿತಿರ್ದ ಮಹಾದೇವಿ ॥
॥ಮಂಗಳಂ॥ ॥೨॥

ಪುಷ್ಪಗಂಧಿನಿ ಎಂಬ ನಾಮವನು ನೀ ಧರಿಸಿ ॥ ಪುಷ್ಪದಂತನಿಗೆ ನೀ ವನಿತೆಯಾಗಿ ।
ಪುಷ್ಪಗಳಿಂದಲಿ ಪೂಜೆ ಮಾಡಿಸಿಕೊಂಬ । ಪುಷ್ಯರಾಗದ ಪದಕ ಧರಿಸಿದ ದೇವೀ ॥
॥ ಮಂಗಳಂ ॥ ॥೩॥

ಯಕ್ಷಕನ್ನಿಕೆಯಾಗಿ ಎಲ್ಲರ ಪಾಲಿಸಿ ಲಕ್ಷಣವಂತೆ ನೀನಾಗಿ ಜಗದಿ
ಸಾಕ್ಷಾತ್ಕಾರಿಣಿಯೆ ಸರ್ವಜನರಿಗೆಲ್ಲ । ಮೋಕ್ಷದಾಯಿನಿ ಎಂಬ ಮುದ್ದು ಮಹಾದೇವಿ ॥
॥ ಮಂಗಳಂ ॥ ॥೪॥

ವರರುಚಿಯಿಂದಲಿ ವಿಶ್ವಾಸದಾಯಕಿ । ಪರಮಪಾವನೆ ಭಕ್ತಪಾಪಹಾರಿ ।
ಸಿರಿವಂತೆ ನೀನಾಗಿ ಶಿವಪೂಜೆಯ ಮಾಳ್ವ । ಶರಣಾರ ಪೊರೆವಂಥ ಶಾಂತಸ್ವರೂಪೀ ।
॥ ಮಂಗಳಂ ॥ ॥೫॥

ದೇಹವಾಸಿನಿಯೆಂಬ ದೇವತೆ ನೀನಾಗಿ । ದೇವಶಾಲಿಗೆ ಧರ್ಮಪತ್ನಿಯಾಗಿ ।
ಸೋಹವೆಂದವರಿಗೆ ಸಂತೋಷವನು ಕೊಡುವ । ಸಾಹಸವುಳ್ಳಂಥಾ ಸುಂದರರೂಪೀ ।
॥ ಮಂಗಳಂ ॥ ॥೬॥

ದುರ್ಗಾಳಾಂಬ ಎಂಬ ನಾಮದಿ ನೀ ಬಂದು । ಸ್ವರ್ಗಮರ್ತ್ಯದಿ ನೀನು ಸಂತೋಷದಿ ।
ಭರ್ಗನ ಭಜಿಸುವ ಭಕ್ತ ದೇವಾಂಗನ ಕುಲಕ್ಕೆಲ್ಲಾ ಶುಭವರವಿತ್ತ ದೇವಿ ॥
॥ ಮಂಗಳಂ ॥ ॥೭॥

ಉಪನಯನ ಮಂಗಳಾಷ್ಟಕ

ಆದೌ ಗಣೇಶಸ್ತದನು ಸ್ವಯಂಭುಸ್ತತೋ ಗಿರೀಶಸ್ತದನಂತರಂ ಹರಿಃ ।
ಏತೇ ಸದಾದೇವಗಣಾಸ್ಸತತಂ । ವಟೋಶ್ಚಿರಾಯುಶ್ಶುಭಕೀರ್ತಿ ವಿದ್ಯಾಃ ।
ಶ್ರೀ ದೇವಾಂಗ ಪರಾತ್ಪರಾದಿ ಪುರುಷಃ । ಕುರ್ವನ್ ಸದಾ ಮಂಗಳಂ ॥
ಸುಮೂಹೂರ್ತಾಸ್ಸಾವಧಾನ । ಸುಲಗ್ನಾಸ್ಸಾವಧಾನ ॥೧॥

ಸುಮೇರು ಸೌರತ್ನ ಗಿರೀಂದ್ರನೀಲ । ಕೈಲಾಸವಿಂಧ್ಯಾಚಲ ಹೇಮಕೂಟಾಃ ।
ಗಿರ್ಯಸ್ಸಮಸ್ತಾಸ್ಸತತಂದಿಶಂತು । ವಟೋಶ್ಚಿರಾಯುಶ್ಶುಭಕೀರ್ತಿ ವಿದ್ಯಾಃ ।
ಶ್ರೀ ದೇವಾಂಗ ಪರಾತ್ಪರಾದಿ ಪುರುಷಃ । ಕುರ್ವನ್ ಸದಾ ಮಂಗಳಂ ॥
ಸುಮೂಹೂರ್ತಾಸ್ಸಾವಧಾನ । ಸುಲಗ್ನಾಸ್ಸಾವಧಾನ ॥೨॥

ಗೋದವರೀ ಸಿಂಧು ಮಲಾಪಹಾರಿ । ವೇಗವತೀ ನಾದವತೀ ಪ್ರಶಸ್ತಾಃ ।
ಸದ್ಯಾಸ್ಸಮಸ್ತಾಸ್ಸತತಂ ದಿಶಂತು । ವಟೋಶ್ಚಿರಾಯುಶ್ಶುಭಕೀರ್ತ್ತಿ ವಿದ್ಯಾಃ ।
ಶ್ರೀ ದೇವಾಂಗ ಪರಾತ್ಪರಾದಿ ಪುರುಷಃ । ಕುರ್ವನ್ ಸದಾ ಮಂಗಳಂ ॥
ಸುಮೂಹೂರ್ತಾಸ್ಸಾವಧಾನ । ಸುಲಗ್ನಾಸ್ಸಾವಧಾನ ॥೩॥

ಕೃಷ್ಣಾಜಿನಂ ದರ್ಭಮಈಚ ಮೌಂಜೀ । ಪಾಲಾಶದಂಡ ಪರಿಧಾನ ಶಾಠೀ ।
ಯಜ್ಞೋಪವೀತಾನಿ ದಿಶಂತುತಾನಿ । ವಟೋಶ್ಚಿರಾಯುಶ್ಶುಭಕೀರ್ತ್ತಿ ವಿದ್ಯಾಃ ।
ಶ್ರೀ ದೇವಾಂಗ ಪರಾತ್ಪರಾದಿ ಪುರುಷಃ । ಕುರ್ವನ್ ಸದಾ ಮಂಗಳಂ ॥
ಸುಮೂಹೂರ್ತಾಸ್ಸಾವಧಾನ । ಸುಲಗ್ನಾಸ್ಸಾವಧಾನ ॥೪॥

ತಾಂಬೂಲ ಗಂಧಾಕ್ಷತ ಪತ್ರಪುಷ್ಪಾ । ದೀಪಾಂಕುರಾಶೀರ್ವಚನಾನಿಯಾನಿ ।
ಪುಣ್ಯಹವಾಕ್ಯಾನಿ ವಿಶಂತುತಾನಿ । ವಟೋಶ್ಚಿರಾಯುಶ್ಶುಭಕೀರ್ತ್ತಿ ವಿದ್ಯಾಃ ।
ಶ್ರೀ ದೇವಾಂಗ ಪರಾತ್ಪರಾದಿ ಪುರುಷಃ । ಕುರ್ವನ್ ಸದಾ ಮಂಗಳಂ ॥
ಸುಮೂಹೂರ್ತಾಸ್ಸಾವಧಾನ । ಸುಲಗ್ನಾಸ್ಸಾವಧಾನ ॥೫॥

ಮಂದಾರ ಧಾತ್ರೀರುಹ ಪಾರಿಜಾತ । ಸಂತಾನ ಕಲ್ಪದ್ರುಮ ಚಂದನಾನಿ ।
ಕಲ್ಪದ್ರುಮಾಖ್ಯಾನಿ ದಿಶಂತುತಾನಿ । ವಟೋಶ್ಚಿರಾಯುಶ್ಶುಭಕೀರ್ತ್ತಿ ವಿದ್ಯಾಃ ।
ಶ್ರೀ ದೇವಾಂಗ ಪರಾತ್ಪರಾದಿ ಪುರುಷಃ । ಕುರ್ವನ್ ಸದಾ ಮಂಗಳಂ ॥
ಸುಮೂಹೂರ್ತಾಸ್ಸಾವಧಾನ । ಸುಲಗ್ನಾಸ್ಸಾವಧಾನ ॥೬॥

ಜಂಭಾರಿ ವೈಶ್ವಾನರ ಕಾಲಪುಣ್ಯಾ । ಸ್ಸರಿತ್ಪತಿರ್ವಾಯು ಕುಬೇರ ಈಶಾಃ ।
ಏತೇ ಸದಾ ದಿಕ್ಪತಿಯಯೋದಿಶಂತು । ವಟೋಶ್ಚಿರಾಯುಶ್ಶುಭಕೀರ್ತ್ತಿ ವಿದ್ಯಾಃ ।
ಶ್ರೀ ದೇವಾಂಗ ಪರಾತ್ಪರಾದಿ ಪುರುಷಃ । ಕುರ್ವನ್ ಸದಾ ಮಂಗಳಂ ॥
ಸುಮೂಹೂರ್ತಾಸ್ಸಾವಧಾನ । ಸುಲಗ್ನಾಸ್ಸಾವಧಾನ ॥೭॥

ಓಂಕಾರ ಸವ್ಯಾಹೃತಿ ಮಂತ್ರಮುದ್ರಾಃ । ಗಾಯತ್ರೀ ಸಾವಿತ್ರೀ ಸರಸ್ವತಿಸ್ಸ್ವರಾಃ ।
ಛಂಧಾಂಸಿ ವೇದಶ್ಚ ದಿಶಂತುತಾನಿ । ವಟೋಶ್ಚಿರಾಯುಶ್ಶುಭಕೀರ್ತ್ತಿ ವಿದ್ಯಾಃ ।
ಶ್ರೀ ದೇವಾಂಗ ಪರಾತ್ಪರಾದಿ ಪುರುಷಃ । ಕುರ್ವನ್ ಸದಾ ಮಂಗಳಂ ॥
ಸುಮೂಹೂರ್ತಾಸ್ಸಾವಧಾನ । ಸುಲಗ್ನಾಸ್ಸಾವಧಾನ ॥೮॥

ವಿದ್ಯಾಃ । ಶ್ರೀ ದೇವಾಂಗ ಪರಾತ್ಪರಾದಿ ಪುರುಷಃ । ಕುರ್ವನ್ ಸದಾ ಮಂಗಳಂ ॥
ಸುಮೂಹೂರ್ತಾಸ್ಸಾವಧಾನ । ಸುಲಗ್ನಾಸ್ಸಾವಧಾನ ॥೯॥

ಯೋವೈತಾಂ ಬ್ರಹ್ಮಣೋ ವೇದಾ ಅಮೃತೇನಾಮೃತಾಂ ಪುರೀಂ ।
ತಸ್ಮೈ ಬ್ರಹ್ಮ ಚ ಬ್ರಹ್ಮಾಚಾ ಆಯುಃ ಕೀರ್ತಿಂ ಪ್ರಜಾಂದದುಃ ॥೧॥

ಶತಮಾನಂ ಭವತಿ ಶತಾಯುಃ ಪುರುಷಶ್ಶತೇಂದ್ರಿಯ
ಆಯುಷ್ಯೇಂದ್ರಿಯೇ ಪ್ರತಿತಿಷ್ಠತಿ ।

॥ ಓಂ ಶಾಂತಿಃ ಶಾಂತಿಃ ಶಾಂತಿಃ ॥ ಹರಿಃ ಓಂ ॥

★★★★★★★

ವಿವಾಹ ಮಂಗಳಾಷ್ಟಕ

ಓಂ ಶ್ರೀ ಹಂಸ ವಿರಾಡ್ಡಿರಣ್ಯ ಪರಮಾಕಾಶಸ್ಥಿತಾಲಂಕೃತಂ ।
ಪ್ರತ್ಯೇಕಾತ್ಮ ಪರಾತ್ಪರಂ ಭವಹರಂ ಪ್ರಜ್ಞಾನವರ್ಸಾತ್ಮಕಂ ।
ಗಾಯತ್ರೀ ಪ್ರಣಶ ಸ್ವರೂಪಮಖಿಲಂ ಚಿತ್ಸೌಖ್ಯ ಚಿದ್ರೂಪಕಂ ।
ಶ್ರೀ ದೇವಾಂಗ ಪರಾತ್ಪರಾದಿ ಪುರುಷಃ । ಕುರ್ವನ್ ಸದಾ ಮಂಗಳಂ ॥
ಸುಮೂಹೂರ್ತಾಸ್ಸಾವಧಾನ । ಸುಲಗ್ನಾಸ್ಸಾವಧಾನ ॥೧॥

ಗಂಧರ್ವೈರ್ಮುನಿಭಿಃ ಸುರೈರ್ಹರಿಹರಃ ಬ್ರಹ್ಮಾದಿಭಿಃರ್ವಂದಿತಃ ।
ಗಾಯತ್ರ್ಯಾಗಮ ವೇದಶಾಸ್ತ್ರ ವಿನುತ ಸೃಷ್ಟಿಸ್ಥಿತಿ ಪಾಲ ।
ನಿತ್ಯಾನಂದ ಕದಂಬರಾಟ್ಪರತರ ಪ್ರತ್ಯಕ್ಷ ಯಜ್ಞಾಧಿಪಃ ।
ಶ್ರೀ ದೇವಾಂಗ ಪರಾತ್ಪರಾದಿ ಪುರುಷಃ । ಕುರ್ವನ್ ಸದಾ ಮಂಗಳಂ ॥
ಸುಮೂಹೂರ್ತಾಸ್ಸಾವಧಾನ । ಸುಲಗ್ನಾಸ್ಸಾವಧಾನ ॥೨॥

ಲಕ್ಷ್ಮ್ಯೈರಂಜಿತ ದಿವ್ಯಕಾಂಚನ ನಖ ಸಂಪೂರ್ಣ ಚಂದ್ರಪ್ರಭಃ ।
ಭೇರಿ ಕಾಹಳ ಶಂಖ ಮಂಗಳರವೈ ಪುಣ್ಯಾಂಗನಾಶೀರವೈಃ ।
ಶ್ರೀ ಗೋವಿಂದ ರಮಾಪತೇ ಸುರಪತೇರ್ಲಾವಣ್ಯಕನ್ಯಾ ಶುಚಿಃ ॥
ಶ್ರೀ ದೇವಾಂಗ ಪರಾತ್ಪರಾದಿ ಪುರುಷಃ । ಕುರ್ವನ್ ಸದಾ ಮಂಗಳಂ ॥
ಸುಮೂಹೂರ್ತಾಸ್ಸಾವಧಾನ । ಸುಲಗ್ನಾಸ್ಸಾವಧಾನ ॥೩॥

ಪೃಥ್ವೀವಾರಿ ಹುತಾಶನಾನಿಲ ನಭೋ ನಕ್ಷತ್ರರಾಶೀಗ್ರಹಂ ।
ಯೋಗಾನ್ ಷಡೃತುಮಾಸಂವತ್ಸರ ತಿಥಿರ್ಲಹಗ್ನಾತಿಮೂರ್ಧಾದಿನಾ ।
ನಿರ್ಮಾಣಾಧಿಕಮೂರ್ತಿ ಸದ್ಗುರುವರಂ ಕಲ್ಯಾಣ ಲೀಲಾಧರಂ ।
ಶ್ರೀ ದೇವಾಂಗ ಪರಾತ್ಪರಾದಿ ಪುರುಷಃ । ಕುರ್ವನ್ ಸದಾ ಮಂಗಳಂ ॥
ಸುಮೂಹೂರ್ತಾಸ್ಸಾವಧಾನ । ಸುಲಗ್ನಾಸ್ಸಾವಧಾನ ॥೪॥

ನಿರ್ವಣ್ಣಾಂಬರ ಚಿತ್ಪಕಾಶನಿರತಂ ನಿತ್ಯೋತ್ಸವಾಲಂಕೃತಂ ।
ಸರ್ವಂ ಚಿತ್ಕಳರೂಪ ದೀಪಕಧಿಕಂ ಜ್ಯೋತಿರ್ಮಯಾಕಾರಕಂ ।
ಧೌರೇಯಂ ದಿವಿಜೇಂದ್ರ ವಂದಿತಗುರುಂ ದೀಕ್ಷಾತ್ರಯಾಧೀಶ್ವರಂ ।
ಶ್ರೀ ದೇವಾಂಗ ಪರಾತ್ಪರಾದಿ ಪುರುಷಃ । ಕುರ್ವನ್ ಸದಾ ಮಂಗಳಂ ॥
ಸುಮೂಹೂರ್ತಾಸ್ಸಾವಧಾನ । ಸುಲಗ್ನಾಸ್ಸಾವಧಾನ ॥೫॥

ಶುದ್ಧಬ್ರಹ್ಮ ನಿರಾಮಯಂ ನಿರುಪಮಂ ನಿತ್ಯೋತ್ಸವಂ ನಿರ್ಮಲಂ ।
ದಕ್ಷಬ್ರಹ್ಮ ಮರೀಚಿ ನಿರ್ಜರ ನವಬ್ರಹ್ಮಾಂತಕಂ ಹ್ರೀಂಶ್ರೀಯಂ ।
ಕೋಟೀಂದ್ವರ್ಕ ವಿಭಾಸಿನಿ ನಿರ್ಮಲಬಿಂಬ ನಿತ್ಯೋತ್ಸವಾಲಕೃಂತಂ ।
ಶ್ರೀ ದೇವಾಂಗ ಪರಾತ್ಪರಾದಿ ಪುರುಷಃ । ಕುರ್ವನ್ ಸದಾ ಮಂಗಳಂ ॥
ಸುಮೂಹೂರ್ತಾಸ್ಸಾವಧಾನ । ಸುಲಗ್ನಾಸ್ಸಾವಧಾನ ॥೬॥

ಭಕ್ತಶ್ರೇಷ್ಠ ವಿಧಾತ ಶುಭ್ರನುತ ವಿಷ್ವಕ್ಸೇನ ಸಂಪ್ರಸ್ತುತಂ ।
ಸೂಕ್ಷ್ಮಾಕಾರ ಚಿದಂಬರೇಶ ಪ್ರಮುಖಂ ಸರ್ವಾಂಶ ಭೂತಾತ್ಮಕಂ ।
ಮುಕ್ತ್ಯಾಖ್ಯಪ್ರಮದಾ ವಿವಾಹ ಶುಭದಂ ಮೌನೀಂದ್ರ ಮುಖ್ಯಾರ್ಚಿತಂ ।
ಸುಮುಹೂರ್ತಾಸ್ಸಾವಧಾನ । ಸುಲಗ್ನಾಸ್ಸಾವಧಾನ ॥೭॥

ಶಂಭು ಶಂಕರ ಸರ್ವನಿರ್ಮಿತ ಶಿವಂ ಸರ್ವಜ್ಞ ಧಾತ್ರೀಧರಂ ।
ಸಾಕ್ಷಾತ್ಕಾರ ಗಿರೀಶವಾಸವಿನುತಂ ಚಿತ್ಸೌಖ್ಯ ಚಿದ್ರೂಪಕಂ ।
ಸ್ವರ್ಗಾರೋಹಣ ದೀರ್ಘದೇಹ ಭುವಿರಕ್ಷಾ ಪನ್ನಗಾಲಂಕೃತಂ ।
ಶ್ರೀ ದೇವಾಂಗ ಪರಾತ್ಪರಾದಿ ಪುರುಷಃ । ಕುರ್ವನ್ ಸದಾ ಮಂಗಳಂ ॥
ಸುಮೂಹೂರ್ತಾಸ್ಸಾವಧಾನ । ಸುಲಗ್ನಾಸ್ಸಾವಧಾನ ॥೮॥

ಯೋವೈತಿಂ ಬ್ರಹ್ಮಣೋ ವೇದಾ ಅಮೃತೇನಾಮೃತಾಂ ಪುರೀಂ ।
ತಸ್ಮೈ ಬ್ರಹ್ಮಚ ಬ್ರಹ್ಮಚಾ ಆಯುಕೀರ್ತಿಂ ಪ್ರಜಾಂದದುಃ ॥
ರಾಜಾಧಿರಾಜಾಯ ಪ್ರಸಹ್ಯಸಾಹಿನೇ
ನಮೋ ವಯಂ ವೈಶ್ರವಣಾಯ ಕುರ್ಮಹೇ

ಸಮೇ ಕಾಮಾನ್ ಕಾಮಮಾಯ ಮಹ್ಯಂ
ಕಾಮೇಶ್ವರೋ ವೈಶ್ರವಣೋ ದದಾತು
ಕುಬೇರಾಯ ವೈಶ್ರವಣಾಯ ಮಹಾರಾಜಾಯ ನಮಃ

ಪುತ್ರ ಕಾಮಃ ಪಶು ಕಾಮೋ ದೀರ್ಘಾಯುತ್ವಂಚ
ಧನಂ ಧಾನ್ಯಂ ತೇಜೋಬಲಂ ಧೃತಿ
ಪುಷ್ಟಿಂಚ ವರ್ಧತಾಂ ಪುತ್ರಕಾಮೋ ಭವ ॥

॥ ಓಂ ಶಾಂತಿಃ ಶಾಂತಿಃ ಶಾಂತಿಃ ॥
ಹರಿಃ ಓಂ

ದೇವದಾಸ್ಮೈಯ್ಯನವರ ಮಂಗಳಂ

ಮಂಗಳಾರತಿಯ ತಂದೆತ್ತಿರೆ । ಕೋಮಲಾಂಗ ಕೃಪಾಂಗ
ದೇವಾಂಗಗೇ ಮಂಗಳಾರತಿ ತಂದೆತ್ತಿರೇ ದಾಸ್ಮೈಯ್ಯನಿಗೆ ॥ ಪ ॥

ಬಲಗಡೆ ಬಲಕಂಡಿ ನಡುವೆ ಮಗ್ಗದ ಗುಂಡಿ ।
ಎಡದಲ್ಲಿ ಕಂಡಿಕೆ ಹರಿವಾಣವು ।
ಬಲಗೈಲೆತ್ತುವ ಬಾಳಾ ಚೆದಿನಕುಂಟೆ ।
ಅಂದುಳ್ಳ ದಾಸ್ಮೈಯ್ಯಗಾರತಿಯ ಮಂಗಳಾರತಿಯ ॥ ॥೧॥
ಥಳಥಳಿಸುವ ಲಾಳಿ ತಾಮ್ರಾದಶೂಲಗಿ ।
ಅಚ್ಚುಗಟ್ಟಿಕೆ ಶೇಡುಮುಳ್ಳುಗಳೂ ।
ಚಂದನದ ಹಲಗೇಗೆ ಚದುರಾದ ಕೀಲ್ಕೋಟ್ಟು ।
ಅಂದುಳ್ಳ ದಾಸ್ಮೈಯ್ಯಗಾರತಿ ಮಂಗಳಾರತಿಯ ॥ ॥೨॥

ನೆಟ್ಟನೆವೆರಡಗ್ಗ ನಡುವೆ ಹಿಮ್ಮಣಿ ಗೂಟ ।
ಮೆಟ್ಟುವಾವೆರಡು ಹಾವಿಗೆ ಪಾದ ।
ಮೆಟ್ಟೂವ ಗಿಣಿಗಾಡ ಅಂಬಾರ ದಂಡಿಗೆ ।
ಪಟ್ಟಾದ ಪ್ರೌಢಗಾರತಿಯ ಮಂಗಳಾರತಿಯ ॥ ॥೩॥

ಹಗ್ಗದಲಿ ಹರಿಜಾಣ ಮಗ್ಗದಲಿ ಸೂಜಾಣ ।
ಸಲಗೇಲಿ ಸಂಪನ್ನ ದಾಸ್ಮೈಯ್ಯನೂ ।
ಬಿಸಲೀಗೆ ಬಾಡುತ ನೆರಳೀಗೆ ಅಂಜುತ ।
ಅಳವುಳ್ಳ ದಾಸ್ಮೈಯ್ಯಗಾರತಿಯ ಮಂಗಳಾರತಿಯ ॥ ॥೪॥

ಹಾಸು ಹನ್ನೆರಡೊರುಷ ಊಕೆ ಹದಿನಾಲ್ಕು ವರುಷ ।
ದೇಶದೇಶವ ತಿರುಗಿ ಕರತಂದು ಶಂಕರಿಯ ।
ಆಗ ಮಾಡಿಕೊಟ್ಟಳು ದಾಸ್ತ್ರ್ಯಯಗೂಕೆಯ ।
ಮಂಗಳಾರತಿಯ ತಂದೆತ್ತಿರೆ ॥೫॥

★★★★★★★

ಸರ್ವಜ್ಞನಿಂದ ಪೂರ್ವಜನ್ಮ ಸ್ಮರಣೆ

ಅಂದು ಜೇಡರ ದಾಸ । ಹಿಂದೆ ನಾ ವರರುಚಿಯು ।
ಇಂದು ಸರ್ವಜ್ಞ ನಾ ನಿಮ್ಮ ಕರುಣದ ।
ಕಂದ ಕಾಣಯ್ಯ ಸರ್ವಜ್ಞ ॥೧॥

ಮುನ್ನ ಕೈಲಾಸದಲಿ । ಪನ್ನಗ ಽ ಧರನಾಳು ।
ಎನ್ನಯ ಪೆಸರು ಪುಷ್ಪದತ್ತನು ಎಂದು ।
ಮನ್ನಿಪರು ದಯದಿ ಸರ್ವಜ್ಞ ॥2॥
ಅಂದಿನಾ ಪೂದತ್ತ ಬಂದ ವರರುಚಿಯಾಗಿ ।
ಮುಂದೆ ಅವ ಸಾಲೆ ಸರ್ವಜ್ಞನೆಂದೆನಿಸಿ ।
ನಿಂದವನು ನಾನೆ ಸರ್ವಜ್ಞ ॥೩॥

ದೇವಾಂಗದವರನ್ನು ಕುರಿತ ಸರ್ವಜ್ಞ ವಚನಗಳು

ಕಟ್ಟಿ ಜಾಡನ ಉಂಕೆ । ಮುಟ್ಟುವುದು ಮೂರೂರ ।
ಬಟ್ಟೆಯು ನಾಲ್ಕು ಪದ ಮೂರು, ಅವನೂರು ।
ಬೆಟ್ಟದ ಮೇಲೆ ಸರ್ವಜ್ಞ ॥೧॥

ಕೋಟಿ ವಿದ್ಯೆಗಳಲ್ಲಿ । ಮೇಟಿವಿದ್ಯೆಯೆ ಮೇಲು ।
ಮೇಟಿಯಂ ರಾಟ ನಡೆವುದಲ್ಲದೆ ದೇಶ ।
ದಾಟವೆ ಕೆಡುಗು ಸರ್ವಜ್ಞ ॥೨॥

ಬೇಡಂಗೆ ಶುಚಿಯಿಲ್ಲ । ಬೋಡಂಗೆ ರುಚಿಯಿಲ್ಲ ।
ಕೂಡಲ್ಲದಂಗೆ ಸುತರಿಲ್ಲ । ಜೇಡತಾ
ಮೂಢಾತ್ಮನಲ್ಲ ಸರ್ವಜ್ಞ ॥೩॥

ಅಗ್ಗ ಬಡವಗೆ ಲೇಸು । ಬುಗ್ಗೆಯ ನಗೆ ಲೇಸು ।
ತಗ್ಗಿದ ಗದ್ದೆ ಉಳ ಲೇಸು, ಜೇಡಂಗೆ
ಮಗ್ಗ ಲೇಸೆಂದ ಸರ್ವಜ್ಞ ॥೪॥

ಪ್ರಸ್ತವನು ನುಡಿಯೆ ಪ್ರ । ಶಸ್ತವಾಗಿರ ಬೇಕು ।
ಪ್ರಸ್ತವನು ತಪ್ಪಿ ನುಡಿದರೆ ದೇವಾಂಗ ।
ದುಸ್ತು ಬಿದ್ದಂತೆ ಸರ್ವಜ್ಞ ॥೫॥

ಬೇಡ ಕಾಯದೆ ಕೆಟ್ಟ । ಜೇಡ ನೇಯದೆ ಕೆಟ್ಟ ।
ನೋಡದೆಲೆ ಕೆಟ್ಟ ಕೃಷಿಕನು, ಸತಿಯ ಬಿ ।
ಟ್ಟಾಡಿದವ ಕೆಟ್ಟ ಸರ್ವಜ್ಞ ॥೬॥

ಮಂಜಿನಿಂ ಮಳೆ ಲೇಸು । ಪಂಜು ಇರುಳಲಿ ಲೇಸು ।
ಪಂಜರವು ಲೇಸು ಅರಗಿಳಿಗೆ, ಜಾಡಂಗೆ ।
ಗಂಜಿ ಲೇಸೆಂದ ಸರ್ವಜ್ಞ ॥೭॥

ಗಾಜು ನೋಟಕೆ ಲೇಸು । ಮೋಜು ಇರುಳಲಿ ಲೇಸು ।
ರಾಜಾಂಗವಸ್ತ್ರ ಉಡಲೇಸು, ಊಟಕ್ಕೆ ।
ರಾಜಾನ್ನ ಲೇಸು ಸರ್ವಜ್ಞ ॥೮॥

ಉತ್ತಮದ ದೇವಾಂಗ । ವಸ್ತ್ರವನು ಧರಿಸುವಡೆ ।
ಮುತ್ತು ಮಾಣಿಕವ ತೊಡುವರೆ ಮಾಡುವುದ ।
ನಿತ್ಯದಾನವನು ಸರ್ವಜ್ಞ ॥೯॥

ಸರ್ವಜ್ಞನ ಪೂರ್ವ ಜನ್ಮದ ಸ್ಮರಣೆ ಬಗ್ಗೆ ಜಯಂತಿ ಪತ್ರಿಕೆಯ ಸಂಪಾದಕರಾಗಿದ್ದ ಕವಿಭೂಷಣ ಬೇಟಗೇರಿ ಕೃಷ್ಣಶರ್ಮರವರು ತಮ್ಮ ''ಹಿರಿಯ ಜೀವ'' ಕವನದಲ್ಲಿ ಮಾಡಿರುವ ಪ್ರತಿಪಾದನೆ.

'' ಯಾರ ಅಭಿಶಾಪವೋ ಸರ್ವಜ್ಞ ಮೂರುತಿಗೆ ।
ಅಮರನಲ್ಲವೆ 'ಪುಷ್ಪದತ್ತ' ಗಂಧರ್ವನಲ್ಲವೆ ? ''

॥ ಶ್ರೀ ರಾಮಲಿಂಗ ಚೌಡೇಶ್ವರೀ ಪ್ರಸೀದ ॥
ಓಂ ಸೂತ್ರ ವಸ್ತ್ರಕರ್ತ ಶ್ರೀ ದೇವಾಂಗ ಮನು ಬ್ರಹ್ಮಣೇ ನಮಃ

ಶ್ರೀ ಸ್ಕಾಂದ ಪುರಾಣ ವರ್ಣವೈಭವಖಂಡದಲ್ಲಿನ ದೇವಾಂಗಧರ್ಮದ ಗೋತ್ರ, ಸೂತ್ರ, ಶಾಖಾ ಪ್ರವರಗಳು

''ಮನುಗೋತ್ರವೆಂದೂ, ಅಶ್ವಲಾಯನಸೂತ್ರವೆಂತಲೂ, ಋಕ್‌ಶ್ಯಾಖೆಯೆಂತಲೂ, ಸದ್ಯೋಜಾತ ಪ್ರವರವೆಂತಲೂ, ಸರ್ವರೂ ಹೇಳತಕ್ಕದ್ದು''

ಅಷ್ಟಪ್ರಭುಗಳು

ಪೂರ್ವದಿಕ್ಕಿನವರು - ಗಾರ್ಗೇಯಋಷಿ ಗೋತ್ರ, ಅಂಗಿರಸ ಸೂತ್ರ, ಬ್ರಹ್ಮ ಪ್ರವರ. ಇವರ ಬೆಡಗು ರಾಗರದವರು, ಮುಂಡಗಿಯವರು, ಹಂಪರಗೊಂಡೆಯವರು, ಮೊಳಗಾನವರು, ಗಂಜಿಯವರು, ಶೀಲವಂತರು, ಭಾವಿಕಟ್ಟೆಯವರು. ಇವರ ಗ್ರಾಮ ಅಂತರವೇದಿ. ಇವರ ವಾಹನ ಎರಳೆ. ಇವರಿಗೆ ವಜ್ರಾಯುಧ, ಪೀತವಸ್ತ್ರ, ಮೆಣಸಿನ ತಳಿಗೆ. ೧೦೮ ಅಡಿಕೆ, ೧೦೮ ವೀಳ್ಯೆ ಬಾಬುಗಳುಂಟು.

ಆಗ್ನೇಯ ದಿಕ್ಕಿನವರು - ವಾಲ್ಮೀಕಿಋಷಿಗೋತ್ರ, ಜಮದಗ್ನಿಸೂತ್ರ, ಭರ್ಗೋದೇವಪ್ರವರ. ಇವರ ಬೆಡಗು-ತಾತನವರು, ಪಿನ್ನಪತಿಯವರು, ಶಾಖದವರು, ಪೂರೇನವರು, ಕೆಂಚೇನವರು, ಮೇಡೇನವರು, ಕುಸುಮೇಯವರು, ಜಂತಮೇಯವರು, ಮೂಗುತಿಯವರು, ಹೊನ್ನಕಳಸದವರು, ಹುತ್ತದವರು. ಇವರ ಗ್ರಾಮ ತೇಜೋವತಿ. ವಾಹನ ಮೇಷ, ಶ್ವೇತವಸ್ತ್ರ, ಶ್ವೇತಾಯುಧ, ಬೆಳ್ಳಿಯತಳಿಗೆ. ಇವರಗೆ ೯೬ ಅಡಿಕೆ, ೯೬ ವೀಳ್ಯೆ ಬಾಬು.

ದಕ್ಷಿಣ ದಿಕ್ಕಿನವರು - ಸುಗ್ರೀವೃಷಿಗೋತ್ರ ಮಹಿಮ್ನಋಷಿಸೂತ್ರ, ಶ್ರೀವತ್ಸಪ್ರವರ. ಇವರ ಬೆಡಗು - ಕರೀಬೈಚನವರು, ಬಿಚ್ಚನವರು, ಬಿಜ್ಜಲದವರು. ಶೈವವತಿ ಪಟ್ಟಣದವರು. ರಕ್ತವಸ್ತ್ರ ದಂಡಾಯುಧ, ಮಹಿಷವಾಹನ, ಉಪ್ಪಿನತಳಿಗೆ, ೮೫ ಅಡಿಕೆ ೮೫ ವೀಳ್ಯಬಾಬು.

ನೈಋತ್ಯ ದಿಕ್ಕಿನವರು - ಸ್ವಯಂಭೂಮನುಗೋತ್ರ, ಚಿತ್ರ ಋಷಿಸೂತ್ರ, ಶೇಷಪ್ರವರ. ಇವರ ಬೆಡಗು- ಚಂದ್ರಗೌಡರು, ಅಮರನಗೌಡರು, ಲಿಂಗನಗೌಡರು, ಸಂಗನಗೌಡನವರು, ಚಿತ್ತಗೌಡನವರು, ಭೂಟಗೌಡನವರು, ಚಿಮ್ಮಗೌಡನವರು, ಚೌಡಗೌಡನವರು, ಚಿಮ್ಮಣಗೌಡನವರು, ಮುತ್ತೇನವರು ಮುತ್ತಿನ ಕಣಜದವರು, ಕಲ್ಲುಮೂಲೆಯವರು. ಶುದ್ಧಮತಿಪಟ್ಟಣ (ಕಾಂತಿ) ಕುಂತಾಯುಧ, ಹಸಿರುವಸ್ತ್ರ, ಶುಕವಾಹನ, ಬೆಲ್ಲತದಳಿಗೆ, ಇವರಿಗೆ

೯೮ ಅಡಿಕೆ, ೯೮ ವೀಳ್ಯ ಬಾಬುವುಂಟು.

ಪಶ್ಚಿಮದಿಕ್ಕಿನವರು - ಉಪಮನ್ಯುಗೋತ್ರ, ಅಧ್ವಮುನಿ ಸೂತ್ರ, ವಸಿಷ್ಠಪ್ರವರ. ಇವರ ಬೆಡಗು ಸುಕಮಿಕೆಯವರು, ಜೇರಿಗೆಯವರು, ಹೆಗ್ಗಡಿಯವರು, ಸಂಜ್ಞೆಯವರು, ಮೇಡಿಯವರು, ಸುಬ್ಬಾನವರು, ಸೂರಮೆಯವರು, ಚೂರಿಯವರು, ಶ್ವೇತಾವತಿಪಟ್ಟಣ, ಪುರುಷಾಯುಧ, ಮೃಗವಾಹನ, ನೀಲಿವಸ್ತ್ರ ಅರಿಸಿನತಳಿಗೆ ೧೦೧ ಅಡಿಕೆ, ೧೦೧ ವೀಳ್ಯೆ.

ವಾಯವ್ಯ ದಿಕ್ಕಿನವರು - ಜಾಬಾಲಿ ಋಷಿಗೋತ್ರ, ದಾಕ್ಷಾಯಣೀ ಋಷಿಸೂತ್ರ ಶ್ರೀವತ್ಸಋಪ್ರವರ. ಇವರ ಬೆಡಗು- ಕಂದನವರು, ಉಳ್ಳಿನವರು, ನಳಾವತಿ ಪಟ್ಟಣ, ಗಂಡೆರಳ ವಾಹನ, ತೋಮರಾಯುಧ, ಕಡೆದಡಿವಸ್ತ್ರ, ಬೆಳ್ಳುಳ್ಳಿ ತಳಿಗೆ, ಇವರಿಗೆ ೪೮ ಅಡಿಕೆ, ೪೮ ವೀಳ್ಯೆಬಾಬು.

ಉತ್ತರ ದಿಕ್ಕಿನವರು - ಜನಕಋಷಿಗೋತ್ರ, ಅಗಸ್ತ್ಯಸೂತ್ರ ಮಾಲ್ಯ ದೇವಋಷಿಪ್ರವರ ಇವರ ಬೆಡಗು- ಬೀರಣಗೆಯರು, ರುದ್ರಗಂಟಿಯವರು, ಕಡೆಬೈಚಿನವರು, ಕಮಳಾವತಿ ಪಟ್ಟಣ, ಖಡ್ಗಾಯುಧ, ಶಾಮವರ್ಣ ವಾಹನ, ಸುವರ್ಣತಳಿಗೆ, ಇವರಿಗೆ೯೮ ಅಡಿಕೆ ೯೮ ವೀಳ್ಯೆ ಬಾಬು.

ಈಶಾನ್ಯ ದಿಕ್ಕಿನವರು - ತ್ರಿಯಂಬಕಋಷಿ ಗೋತ್ರ, ಬಾರ್ಹಸ್ಪತ್ಯಮುನಿ ಸೂತ್ರ, ರುದ್ರಮುನಿಪ್ರವರ. ಬೆಡಗು - ರುದ್ರನವರು, ರುದ್ರಗಂಟಿಯವರು ಭೂಕೈಲಾಸಪಟ್ಟಣ, ವೃಷಭವಾಹನ ತ್ರಿಶೂಲಾಯುಧ ಅಕ್ಕಿಕಣಕದ ತಳಿಗೆ, ಚಿತ್ರವಸ್ತ್ರ. ಇವರಿಗೆ ೩೫ ಅಡಿಕೆ,೩೫ ವೀಳ್ಯೆಬಾಬು.

ಈ ಪ್ರಕಾರ ಪುರಾಣ ಪ್ರಸಿದ್ಧವಾದ ಶೃತಿವಾಕ್ಯವೂ, ಆಗಮ ಸಿದ್ಧಾಂತವೂ ಇರುವುದು.

ಅಷ್ಟದಿಶಾಧಿಕಾರಿಗಳಾದ ಹಿರಿಯರು

1ನೆಯವರು - ಮಾತಂಗಋಷಿ ಗೋತ್ರ ಇವರ ಬೆಡಗು - ಸಕ್ಕರಿಯವರು.
2ನೆಯವರು - ವಾಸುದೇವಋಷಿ ಗೋತ್ರ ಇವರ ಬೆಡಗು - ಲಿಂಗದವರು.
3ನೆಯವರು - ಮರೀಚಿಋಷಿ ಗೋತ್ರ ಇವರ ಬೆಡಗು- ಭಿನ್‌ರಾಜನವರು.
4ನೆಯವರು - ಕೃತುಋಷಿ ಗೋತ್ರ ಇವರ ಬೆಡಗು - ಚಿಲಕದವರು.
5ನೆಯವರು - ಸನಕಋಷಿ ಗೋತ್ರ ಇವರ ಬೆಡಗು - ಪಾಲಮನಿಯವರು.
6ನೆಯವರು - ಸಾನಂದಋಷಿ ಗೋತ್ರ ಇವರ ಬೆಡಗು - ಕುಬಸದವರು, ಘನಮುಖಿಯವರು.
7ನೆಯವರು - ವಸಿಷ್ಠಋಷಿ ಗೋತ್ರ ಇವರ ಬೆಡಗು - ಭಂಟನವರು.
8ನೆಯವರು - ಪೌಲಸ್ತ್ಯಋಷಿ ಗೋತ್ರ ಇವರ ಬೆಡಗು - ರುದ್ರಾಕ್ಷಿಯವರು.

64 ಋಷಿಗಳ ಗೋತ್ರಗಳು ಮತ್ತು ಬೆಡಗುಗಳು

೧. ಸದಾನಂದಋಷಿ ಗೋತ್ರ - ಬೆಡಗು - ದೊಡ್ಡಮನೆಯವರು, ಬೀರಣೆಯವರು, ಹಿರೇಮನೆಯವರು, ಮಾಮನೆಯವರು.

೨. ಅಗಸ್ತ್ಯಋಷಿಗೋತ್ರ - ಬೆಡಗು - ಕೊಂಗೆಯುವರು, ಮುತ್ತಿನವರು, ಕಟ್ಟೇಮನೆಯವರು.

೩. ವರತಂತ್ರಋಷಿ ಗೋತ್ರ - ಬೆಡಗು - ವರತಂತ್ರದವರು, ಮತ್ಸ್ಯದವರು, ಪಾದದವರು.

೪. ಘಲ್ಲದೇವಋಷಿ ಗೋತ್ರ - ಬೆಡಗು - ಹೊನ್ನಿನವರು, ಹೊನ್ನುಂಗುರದವರು, ಬಸನೂರವರು.

೫. ಶತಾನಂದಋಷಿ ಗೋತ್ರ - ಬೆಡಗು - ಸುರಗಿಯವರು, ಸೂರಿಮೆಯವರು.

೬. ಸಾಂಖ್ಯಾಯನಋಷಿ ಗೋತ್ರ - ಬೆಡಗು - ಶೂರಣೆಯವರು, ಕಡಗೋಲದವರು.

೭. ದ್ವೈಪಾಯನಋಷಿ ಗೋತ್ರ - ಬೆಡಗು - ಪುಟ್ಟೊಡ್ಡೆಯವರು, ಪಟ್ಟಿಯವರು.

೮. ಹರಿತ್ರಋಷಿ ಗೋತ್ರ - ಬೆಡಗು - ಬಿಳಸೂರವರು, ಜೋಳಿಗೆಯವರು, ಕೇಶನೂರವರು, ತೇಜದವರು, ಉದ್ದಿನವರು.

೯. ಮೈತ್ರದ್ಯುಮ್ನಋಷಿ ಗೋತ್ರ - ಬೆಡಗು - ಘಂಟೆಯವರು, ಭಾಗ್ಯದವರು.

೧೦. ನಾಗರದೇವಋಷಿ ಗೋತ್ರ - ಬೆಡಗು - ದಟ್ಟಿಯವರು, ಮುಂಡಾಸದವರು, ಚಳ್ಳೆಯವರು.

೧೧. ಶೌನಕಮಹಾದೇವಋಷಿ ಗೋತ್ರ - ಬೆಡಗು - ಕನಕದವರು, ದುಮ್ಮೆಯವರು, ದುಬ್ಬರದವರು.

೧೨. ಪಿಪ್ಪಲದೇವಮಹಾಋಷಿ ಗೋತ್ರ - ಬೆಡಗು-ಸಾತ್ವಿಕದವರು, ಗಣೇವತಾರದವರು, ಕಲ್ಲುಕೋಟೆಯವರು, ಮೇಗೋಟೆಯವರು, ಬಂಧುವೊತ್ತದವರು. ಒಂದುಮಾತಿನವರು, ಸಣ್ಣವತಾರದವರು.

೧೩. ನಾರದದೇವ ಮಹಾಋಷಿ ಗೋತ್ರ - ಬೆಡಗು - ಗುಡ್ಡನವರು, ಹಸಿಕೆಯವರು, ಮಹಾಪಾಪಾಟರದವರು, ಮೂಸಲದವರು, ಬಜ್ಜನವರು.

೧೪. ಸೋಮಕದೇವ ಮಹಾಋಷಿ ಗೋತ್ರ - ಬೆಡಗು - ಬಣ್ಣದವರು, ಬಣ್ಣದ ಸರದವರು.

೧೫. ಶಿಲಾದಯಮಹಾಋಷಿ ಗೋತ್ರ - ಬೆಡಗು - ಮೂಳಗೊಂಡನವರು, ಮಾಲಕದವರು.

೧೬. ವಾಲಖಿಲ್ಯಋಷಿಗೋತ್ರ - ಬೆಡಗು - ಗಂಜೀಹೋಳಿನವರು, ಭಾಂಡಾರದವರು.

೧೭. ಆಶ್ರಿತದೇವಮಹಾಋಷಿ ಗೋತ್ರ - ಬೆಡಗು - ಉಜ್ಜನವರು, (ಉಗ್ಗಿನವರು).

೧೮. ಭೃಗುದೇವಮಹಾಋಷಿ ಗೋತ್ರ - ಬೆಡಗು - ಮಂಡೆಯವರು, ಗುಮ್ಮನವರು, ಮಾಡದವರು, ಮಾಡದವರು, ಕಡ್ಲೆ - ಪುರಿಯವರು, ನಾಚಕದವರು, ಜಾಲಕಲ್ಲದವರು.

೧೯. ಬೃಂದದೇವಮಹಾಋಷಿ ಗೋತ್ರ - ಬೆಡಗು - ಚಾಣಕಲ್ಲವರು, ಕನ್ನಡಿಯವರು.

೨೦. ಶೃಂಗದೇವಮಹಾಋಷಿ ಗೋತ್ರ - ಬೆಡಗು - ಮುಚ್ಚಳದವರು, ಕಡ್ಡಿಯವರು, ಕಡಪಿಯವರು.

೨೧. ಕಾತ್ಯಾಯನದೇವಮಹಾಋಷಿ ಗೋತ್ರ - ಬೆಡಗು - ಹುಗರಿಯವರು, ತೊಗರಿಯವರು. ಕೋಮರನವರು, ಕೋಡಂಗಿಯವರು, ಮಸಾನದವರು, ಜಾಜಿಯವರು.

೨೨. ವೇದವ್ಯಾಸಮಹಾಋಷಿ ಗೋತ್ರ - ಬೆಡಗು - ಅಜ್ಜಿಯವರು, ದರ್ಜಿಯವರು, ಜವ್ವಾಜಿಯವರು.

೨೩. ಅಗಚ್ಚದೇವಋಷಿ ಗೋತ್ರ - ಬೆಡಗು - ರೊದ್ಧನವರು, ಮುದ್ಗಲ್‌ನವರು, ಅದಗಾನವರು, ಗಾಂಗೆಯವರು, ಪತ್ತಿಯವರು, ಮುತ್ತಲದವರು, ಮಂಡೋಕದವರು.

೨೪. ಗಾರ್ಗೇಯಋಷಿ ಗೋತ್ರ - ಬೆಡಗು - ಸಪ್ಪೆಯವರು, ಕಂಭದದವರು.

೨೫. ಯಜ್ಞದೇವಋಷಿ ಗೋತ್ರ - ಬೆಡಗು - ಸಣ್ಣ ಅಕ್ಕಿಯವರು.

೨೬. ಇಂದ್ರಮನುದೇವಋಷಿ ಗೋತ್ರ - ಬೆಡಗು - ಬಸವಪತ್ರಿಯವರು.

೨೭. ದಾಲ್ಬ್ಯದೇವಋಷಿ ಗೋತ್ರ - ಬೆಡಗು - ಸೊಬಗಿನವರು, ಸೋಗೆಯವರು, ಸಾಭಿನದವರು, ಗುಂಡಕಲ್ಲದವರು.

೨೮. ಭೃಂಗದೇವಋಷಿ ಗೋತ್ರ - ಬೆಡಗು - ಅಡಿಕೆಯವರು, ಕಟಗಿಯವರು, ತುಳಶೇಯವರು.

೨೯. ದ್ವಂದ್ವದೇವಋಷಿ ಗೋತ್ರ - ಬೆಡಗು - ರಾಗದವರು, (ಗಾಯನದವರು), ತಾಳದವರು, ಬೆತ್ತದವರು, ತಿತ್ತಿಯವರು.

೩೦. ಭಾಸ್ಕರದೇವಋಷಿ ಗೋತ್ರ - ಬೆಡಗು - ಗಂಧದವರು, ಪುನಗಿನವರು, ಬ್ಯಾಳದವರು, ಅಂಕದವರು.

೩೧. ಕೌಶಿಕಋಷಿ ಗೋತ್ರ - ಬೆಡಗು - ಚಿಕ್ಕನವರು, ಬೆನಕನವರು, ಬೆಳಕಿನವರು.

೩೨. ಬಕದಾಲ್ಬ್ಯಋಷಿ ಗೋತ್ರ - ಬೆಡಗು - ಶೋಭನದವರು, ಸಂಬಾರದವರು, ಜೀರಿಗೆಯವರು.

೩೩. ಗಾಲವದೇವಋಷಿ ಗೋತ್ರ - ಬೆಡಗು - ಬೆಣ್ಣೆಯವರು, ಚಪ್ಪರದವರು, ಮಂತ್ರಗಾರರು, ರಹಸ್ಯದವರು, ಭೂಷಣದವರು, ಆಗಸದವರು, ಸಂಸಾರದವರು, ಸಾರಸ್ವತರು, ಮಾವಿಲದವರು, ಪಿಟಕದವರು.

೩೪. ವಿಶ್ವಾಮಿತ್ರಋಷಿ ಗೋತ್ರ - ಬೆಡಗು - ಹಂಪರಗೊಂಡಿಯವರು, ಕಂದನವರು, ಶ್ರೀರಾಮನವರು.

೩೫. ಪತಂಜಲಿ ಗೋತ್ರ - ಬೆಡಗು - ಕಡಗದವರು, ಕಡೇಯವರು, ಕಾರಣದವರು, ಮಲ್ಕದವರು, ಚಿನ್ನದವರು, ಹೊನ್ನಪುಟ್ಟಿನವರು, (ಹೊನ್ನಝುಲ್ಲಿಯವರು).

೩೬. ಋಗ್ವದೇವಋಷಿ ಗೋತ್ರ - ಬೆಡಗು - ಜಬ್ಬಿಲದವರು, ಬಿಜ್ಜಲದವರು, ಚಿಬ್ಬಲದವರು.

೩೭. ಮಾಲ್ಕದೇವಋಷಿ ಗೋತ್ರ - ಬೆಡಗು - ದಶಾಂಗದವರು, ಧೂಪದವರು.

೩೮. ಸಾತ್ವಿಕಋಷಿ ಗೋತ್ರ - ಬೆಡಗು - ಉಂಗುರದವರು, ಕೊಂಡೂವಿನವರು, ತೊಂಡೆ

ಹೂವಿನವರು, ತತ್ವದವರು, ಬೋದನವರು, ಪೆಂಡೆಯವರು, ಭೋಜನದವರು.

೩೯. ಆಂಜನದೇವಋಷಿ ಗೋತ್ರ - ಬೆಡಗು - ನಾಣ್ಯದವರು, ಭಂಗಾರದವರು, ರತ್ನದವರು.

೪೦. ಮಂತ್ರದೇವಋಷಿ ಗೋತ್ರ - ಬೆಡಗು - ಸರಿಗೆಯವರು, ಬಾಣದವರು, ಭಕ್ತ ಮಾಲಿಕದವರು.

೪೧. ಇಂದ್ರದ್ಯುಮ್ನಋಷಿ ಗೋತ್ರ - ಬೆಡಗು - ಅಳ್ಳಿಯವರು, ಅಮರಾವತಿಯವರು, ದೇವಲೋಕದವರು, ಗೌಡದವರು, ಹಳ್ಳಿಯವರು.

೪೨. ಭರದ್ವಾಜಋಷಿ ಗೋತ್ರ - ಬೆಡಗು - ಮರದಭರ್ತರವರು, ಕಮಲದವರು, ಮಧುರದವರು, ಶಿಕಾಕೋಲದವರು, ಖಡ್ಗದವರು, ಮುದ್ಗರದವರು.

೪೩. ಮೈತ್ರದೇವಋಷಿ ಗೋತ್ರ - ಬೆಡಗು - ಕೊರವಂಜಿಯವರು, ಪರೋಪನವರು, ಅಲ್ಲನವರು.

೪೪. ಮಾಂಡವ್ಯಋಷಿ ಗೋತ್ರ - ಬೆಡಗು - ಮಿಂಚಿನವರು, ಕಂಚಿನವರು, ಎಂಜಲದವರು, ಶೀತಲದವರು, ತೊಲಗದವರು, ಜೂಜಲದವರು, ಪ್ರಸಂಗದವರು, ಭರಣದವರು, ಬೆಳ್ಳಿಯವರು.

೪೫. ಸನಾಗರಋಷಿ ಗೋತ್ರ - ಬೆಡಗು - ಬೆಳ್ಳುಳ್ಳಿಯವರು.

೪೬. ಸಚ್ಚಿದಾನಂದಋಷಿ ಗೋತ್ರ - ಬೆಡಗು - ಹಸಬೆಯವರು, ಕೊಟಗಿಯವರು, ಕರಡಿಯವರು.

೪೭. ಅಕ್ಷಯದೇವಋಷಿ ಗೋತ್ರ - ಬೆಡಗು - ದೊಡ್ಡತಲೆಯವರು, ಬೆಳಗೇರಿಯವರು.

೪೮. ತಾಮ್ರಪರ್ಣಋಷಿ ಗೋತ್ರ - ಬೆಡಗು - ಗಂಗೆಯವರು, ಮಿಡಿಯವರು.

೪೯. ಹರಮುನಿ ಗೋತ್ರ - ಬೆಡಗು - ಕಿಚಡಿಯವರು, ಬಾಗಲೂರವರು.

೫೦. ಧೂರ್ಮಬಿಂದುಋಷಿ ಗೋತ್ರ - ಬೆಡಗು - ಪ್ರಧಾನಿಯವರು, ಕಾಲದವರು, ಪಟ್ಟದವರು.

೫೧. ಚಾಂದ್ರಾಯಣಋಷಿ ಗೋತ್ರ - ಬೆಡಗು - ಶಕುನದವರು, ರಜತದವರು ಮತಂಚಾರದವರು.

೫೨. ದೇವದತ್ತಋಷಿ ಗೋತ್ರ - ಬೆಡಗು - ನೇಮದವರು, ಮಯೂರದವರು, ಕುಲಜೀವರು.

೫೩. ಭಾವಜಋಷಿ ಗೋತ್ರ - ಬೆಡಗು - ಬಿನ್ನಲದವರು ಗಿನ್ನಲದವರು.

೫೪. ಮೃತುಂಜಯಋಷಿ ಗೋತ್ರ - ಬೆಡಗು - ಶಾಗೂರಿಯವರು, ಚನ್ನೂರವರು, (ಚನ್ನಾವರಿಯವರು) ಕಾರ್ಲನವರು.

೫೫. ಕಾಮುಕಋಷಿ ಗೋತ್ರ - ಬೆಡಗು - ಮಾತಂಗದವರು, ಇರಸಾಲದವರು, ಯೋಗದವರು, ಸದರಿನಮೇಲೆ ಗಂಗೆತಂದವರು.

೫೬. ಮತ್ಸ್ಯಋಷಿ ಗೋತ್ರ - ಬೆಡಗು - ಆನೆಯವರು, ಕುದುರೆಯವರು.

೫೭. ಮುಖಮುನಿ ಗೋತ್ರ - ಬೆಡಗು - ಕರವಾಲದವರು, ಸಹನದವರು.

೫೮. ಕಿಂದಮಋಷಿ ಗೋತ್ರ - ಬೆಡಗು - ಅಂಜಲಿಯವರು, ಕುದ್ದಾಲದವರು, ಸಜ್ಜನರು, ಕಲ್ಲಿನವರು.

೫೯. ಭರ್ಗಮುನಿ ಗೋತ್ರ - ಬೆಡಗು - ಮಂಜರಿಯವರು, ಗುತ್ತಿಯವರು.

೬೦. ಭಾಸ್ಕರಮುನಿ ಗೋತ್ರ - ಬೆಡಗು - ಅಸಿಯವರು, ಪವಳದವರು.

೬೧. ಭೃಂಗಮನ್ಯುಋಷಿ ಗೋತ್ರ - ಬೆಡಗು - ಕಾಕಂಡಿಯವರು, ನಿಡಗುಂದಿಯವರು.

೬೨. ಋತ್ವಿಜಋಷಿ ಗೋತ್ರ - ಬೆಡಗು - ಉಳ್ಳಿಯವರು.

೬೩. ದೇವರ್ಷಿ ಗೋತ್ರ - ಬೆಡಗು - ಸಿಂಹಾಸನದವರು (ಪಟ್ಟದವರು) ಮೋಹನದವರು.

೬೪. ಜಂಭಾರಿಮುನಿ ಗೋತ್ರ - ಬೆಡಗು - ರಂಜನದವರು, ಮುಂಡನದವರು, ಕಾಂತಿಯವರು, ತುಂಬರಗುದ್ದಿಯವರು, ಕಟ್ಲಿಯವರು, ಡಿಂಗರಿಯವರು.

ಈ ಚೌಷಷ್ಟಿಋಷಿ ಗೋತ್ರದಿಂದ ಅನೇಕ ಶಾಖೆಗಳು ಉತ್ಪನ್ನವಾಗಿ ಬೇರೆ ಬೇರೆ ಋಷಿ ಗೋತ್ರವನ್ನು ವಹಿಸಿರುತ್ತವೆ. ಆದರೆ ಅವುಗಳಲ್ಲಿ ದೊರೆತಷ್ಟು ಮಟ್ಟಿಗೆ ಕೆಳಗೆ ವಿವರಿಸಲಾಗಿದೆ.

೧. ರಾಜರ್ಷಿ ಗೋತ್ರ - ಬೆಡಗು - ರಾಜನವರು.

೨. ಮನುಮಹರ್ಷಿ ಗೋತ್ರ-ಬೆಡಗು- ನಾಗಾಭರಣದವರು, ಪಂಚಾಕ್ಷರೀಯವರು, ಶಿವಜ್ಞಾನದವರು, ಕಂಬೀಕಾವಡಿಯವರು.

೩. ತೃಣಬಿಂದುಋಷಿ ಗೋತ್ರ - ಬೆಡಗು - ಪೈಜಣದವರು, ಶೀಮೆಯವರು, ಬರಿವಂತರದವರು.

೪. ಶಾಂಡಿಲ್ಯಮುನಿ ಗೋತ್ರ-ಬೆಡಗು-ಪೊಂಗಲದವರು, ಹೊನ್ನಕಳಸದವರು ಲಲಾಟದವರು, ತಿಲಕದವರು, ಕಳಸದವರು.

೫. ದೂರ್ವಾಸಮುನಿ ಗೋತ್ರ - ಬೆಡಗು - ಭುಜಂಗದವರು, ಎಡಮಾಲೆಯವರು, ಪರಟೆಯವರು, ಆಲಮಟ್ಟದವರು, ಮತ್ತಾಲದವರು, ಸುಮ್ಮಾನದವರು.

೬. ಪರಾಶರಋಷಿ ಗೋತ್ರ - ಬೆಡಗು - ಬಗ್ಗಾನವರು, ಬಗ್ಗದವರು, ಶಾಮ ವಂತಿಯವರು, ಮಂಗಳಗಿರಿಯವರು.

೭. ಭಿಮಕಋಷಿ ಗೋತ್ರ - ಬೆಡಗು - ಬಿಣಗಿಯವರು, ಕೊಂಡೀವೀರದವರು, ಗುಟಿಕಿಯವರು, ಜಲಸ್ತಂಭದವರು.

೮. ಮುದ್ಗಲಋಷಿ ಗೋತ್ರ - ಬೆಡಗು - ಆವಿಳದವರು, ಗೋದಾವರಿಯವರು, ಅಪಿಲದವರು, ಪೆರೀನಾಯನರವರು.

೯. ಗೌತಮಋಷಿ ಗೋತ್ರ - ಬೆಡಗು - ದೇವನವರು ಚಕ್ಕುತ್ತಿಯವರು, ಬೊಮ್ಮಚ್ಚನವರು ಬೊಮ್ಮನವರು.

೧೦. ಕ್ರೌಂಚಮುನಿ ಗೋತ್ರ - ಬೆಡಗು - ಬಾಗೇನಪಲ್ಲಿಯವರು, ಗುಮ್ಮಚ್ಚಿನವರು, ಮಟ್ಟಿಯವರು.

೧೧. ರಹಸ್ಯಮುನಿ ಗೋತ್ರ - ಬೆಡಗು - ಕೊಪ್ಪರಿಗೆಯವರು, ಎದ್ದಶೆಯವರು, ಪದ್ಧತಿಯವರು, ಹೇಳಿಕೇಳಿಯವರು.

೧೨. ಕಪಿಲಋಷಿ ಗೋತ್ರ - ಬೆಡಗು - ಮರಕತದವರು, ಪಶುಪತಿಯವರು.

೧೩. ಸಾಂಖ್ಯಾಯನಋಷಿ ಗೋತ್ರ - ಬೆಡಗು - ಮಿಡೇದವರು, ಗಚ್ಚದವರು, ಮಿಂಚಲದವರು, ಶೂನ್ಯದವರು.

೧೪. ಮಾನ್ಯಋಷಿ ಗೋತ್ರ - ಬೆಡಗು - ಕಪ್ತದವರು, ಗೊಜ್ಜೆಯವರು, ಅವಿನದವರು, ಟೋಣಪಿಯವರು, ಗೋಸೂರವರು.

೧೫. ಮೃಕಂಡುಋಷಿ ಗೋತ್ರ - ಬೆಡಗು - ಗೊಗ್ಗೆಯವರು, ದೀಪದವರು, ಗರುಡನವರು, ಗಾರುಡನವರು.

೧೬. ವಾಮದೇವಋಷಿ ಗೋತ್ರ - ಬೆಡಗು - ಪುಲಕನವರು, ವೃಂದಾವನದವರು, ಚಿತ್ರದವರು, ಜಂತಲಿಯವರು.

೧೭. ಸವಿತೃಋಷಿ ಗೋತ್ರ - ಬೆಡಗು - ತೂಪರಿಯವರು, ಆಲಪಲ್ಲಿಯವರು.

೧೮. ಶಕುನಋಷಿ ಗೋತ್ರ - ಬೆಡಗು - ಪೃಥ್ವಿಯವರು, ಮರದತ್ತನವರು, ಮುಸುಕಿನವರು, ಸೂರಟಿಯವರು, ಮಲ್ಲೂರವರು, ಮಸ್ತಿಲದವರು.

೧೯. ಉಷನಯನಋಷಿ ಗೋತ್ರ - ಬೆಡಗು - ತಾರತಮ್ಯದವರು, ಶೃಂಗರಕವಿಯವರು, ಬಾಲ ಕವಿಯವರು, ರುದ್ರವೀಣೆಯವರು.

೨೦. ಜಮದಗ್ನಿಋಷಿ ಗೋತ್ರ - ಬೆಡಗು - ಇಂಧನದವರು, ಕಟಕದವರು.

೨೧. ಅಮರಋಷಿ ಗೋತ್ರ - ಬೆಡಗು - ಸಜ್ಜೆಯವರು, ಆಗಸದವರು, ಕಲ್ಲನವರು.

೨೨. ಪ್ರತಾಪಋಷಿ ಗೋತ್ರ - ಬೆಡಗು - ಬನ್ನಿಪತ್ರೆಯವರು, ಚಿಂತಾಲದವರು, ಮಾನ್ಯಾಡದವರು, ರಾವುತನವರು.

ಶ್ರೀ ದೇವಾಂಗ ಮಹರ್ಷಿಯ ಪ್ರಥಮ ಪತ್ನಿಯ ದೇವದತ್ತಿಯು ಕಶ್ಯಪ ಬ್ರಹ್ಮನ ಪುತ್ರಿಯಾಗಿರುವುದರಿಂದ ಈ ದೇವಾಂಗ ವಂಶಸ್ಥರು ಆಕೆಯಿಂದ ಉದಿತರಾದುದರಿಂದ ಉಭಯಕುಲ ಪರಿಶುದ್ಧರಾದ ಬ್ರಾಹ್ಮಣ ಶ್ರೇಷ್ಠರೆಂದು ನಿಶ್ಚಯವಾಗುತ್ತಿದೆ. ಈ ದೇವದತ್ತೆಯ ಗರ್ಭದಲ್ಲಿ ಜನಿಸಿದ ಪ್ರಥಮ ಅಷ್ಟಕುಮಾರರನ್ನು ಎಂಟು ದಿಕ್ಕುಗಳ ಋಷಿಗಳಿಗೆ ದತ್ತಕವಿತ್ತಂತೆ ಸಂಕಲ್ಪ ಮಾಡಿದರು. ಅವರ ಎಂಟೆಂಟು ಮಕ್ಕಳೇ ೬೪ ದೇವಾಂಗವಂಶದ ಗೋತ್ರಗಳು ಸೃಷ್ಟಿಯ ಆರಂಭದಲ್ಲಿಯ ಶ್ರೀ ದೇವಲ ಮಹರ್ಷಿಯು ತನ್ನಿಂದುದಿಸಿದ ತನ್ನ ವಂಶದ ಗೋತ್ರ ಸೂತ್ರಗಳನ್ನು ನಿರ್ಧರಿಸಿ, ಸಂಕಲ್ಪಿಸಿ ನಿರ್ಣಯಿಸಿದ್ದಾನೆ.

ವಿ.ಸೂ. - ಮೇಲ್ಕಂಡ ಗೋತ್ರಗಳಲ್ಲಿ ಕೆಲವು ಕಡೆ ಗೋತ್ರ ಒಂದೇ ಆಗಿದ್ದು ಬೆಡಗು ಬೇರೆ ಬೇರೆಯಾಗಿಯೂ, ಬೆಡಗು ಒಂದೇ ಆಗಿದ್ದು ಗೋತ್ರವು ಬೇರೆ ಬೇರೆಯಾಗಿಯೂ ಇರುವ ಸಂಭವವಿದ್ದು ಸಂದಿಗ್ಧವಾಗಿರುವುದರಿಂದ ಅವುಗಳನ್ನು ಆಯಾ ಮನೆತನದವರೇ ತಮಗೆ ಪಾರಂಪರ್ಯವಾಗಿ ಬಂದಿರುವಂತೆ ಗೋತ್ರಗಳನ್ನೂ, ಬೆಡಗುಗಳನ್ನೂ ತಮ್ಮ ತಮ್ಮ ಹಿರಿಯರನ್ನು ವಿಚಾರಿಸಿ ನಿರ್ಧರಿಸಿಕೊಳ್ಳುವುದು. ಹೊಸ ಗೋತ್ರಗಳು ಮತ್ತು ಮುದ್ರಣ ಬೆಡಗುಗಳು ದೊರೆತಲ್ಲಿ ದಯವಿಟ್ಟು ನಮಗೆ ಕಳುಹಿಸಿಕೊಟ್ಟರೆ ಅವುಗಳನ್ನು ಮುಂದಿನ ಮುದ್ರಣದಲ್ಲಿ ಸೇರಿಸಲಾಗುವುದು. ಇದರಲ್ಲಿನ ತಪ್ಪುಗಳನ್ನು ದಯವಿಟ್ಟು ತಿಳಿಸಿದರೆ ಸರಿಪಡಿಸಲಾಗುವದು.

ಗೋತ್ರವು ಒಂದೇ ಆಗಿದ್ದು ಬೆಡಗು ಬೇರೆಯಾಗಿದ್ದು ಗೋತ್ರವೂ ಒಂದೇ ಆಗಿದ್ದರೆ ಗೋತ್ರವು ಒಂದೇ ಆಗುವುದರಿಂದ ಸಗೋತ್ರ ವಿವಾಹವು ವಿಹಿತವಲ್ಲವೆಂದು ಹಿಂದಿನಋಷಿ ಮುನಿಗಳ ಅಭಿಪ್ರಾಯ, ಮುಖ್ಯವಾಗಿ ವಿವಾಹಾದಿ ಶರೀರ ಸಂಬಂಧ ಬೆಳೆಸುವವರು ಇದನ್ನು ಗಮನಿಸಬೇಕಾಗಿ ವಿನಂತಿ.

★★★★★

॥ ಶ್ರೀ ಬ್ರಹ್ಮ ಶ್ರೀ ಗುರುರಾಮಲಿಂಗ ॥

ತ್ರಿಯಾರುಷೇಯ ಸದ್ಯೋಜಾತ ಪ್ರವರಾನ್ವಿತ
ಋಕ್‌ಶ್ಯಾಖಾ ಅಶ್ವಲಾಯನಸೂತ್ರ, ಗೋತ್ರದ್ಭವರಾದ

ದೇವಬ್ರಾಹ್ಮಣರ (ಆಂಧ್ರ, ದೇವಾಂಗ) ಸಹೋದರ
ಗೋತ್ರಗಳು ಮತ್ತು ಮನೆತನಗಳ ಹೆಸರುಗಳು

೧. ಮಾಂಡವ್ಯ ಮಹಾಋಷಿ ಗೋತ್ರ- ಮನೆತನಗಳು- ಯರ್ರಂರವರು, ಜಲ್ಲಿಯವರು, ಮೇಡಂರವರು, ಬೂದನೂರವರು.

೨. ಪರ್ವತಮಹಾಋಷಿ (ಪರ್ವತದೇವಮಹರ್ಷಿ) ಗೋತ್ರ- ಮನೆತನ- ಸಜ್ಜಾನವರು.

೩. ಮನ್ಮಹಾಋಷಿ (ಮಾನುನಾ ಋಷಿ) ಗೋತ್ರ- ಮನೆತನ- ಗೊಜ್ಜಲ ನೀಲೇಗಾಳದವರು.

೪. ಅಗಸ್ತ್ಯಋಷಿ ಗೋತ್ರ - ಮನೆತನ - ಅಚ್ಚಗಾಳರವರು, ಚುಂಚಲರವರು, ಪಸುಪುಲದವರು.

೫. ಅಗಸ್ತ್ಯಋಷಿ ಗೋತ್ರ- ಮನೆತನ ಅಗಸದವರು.

೬ ಗಾರ್ಗೇಯಋಷಿ ಗೋತ್ರ - ಮನೆತನ - ಪುಚ್ಚಗಿಂತಲದವರು, ಭೂಷಣದವರು, ಬಾಲವಾಳದವರು.

೭. ಶಾಂಡಿಲ್ಯ ಋಷಿ ಗೋತ್ರ- ಮನೆತನ- ಪೆದ್ದಸದವರು, ಸುನ್ನಾದವರು.

೮. ದೂರ್ವಾಸಋಷಿ ಗೋತ್ರ- ಮನೆತನ- ನಿಮ್ಮಲದವರು, ಶೆಟ್ಟಿಯವರು, ದುಪಟಿಯವರು, ಬೊಮ್ಮನವರು.

೯. ಚರ್ವಣಋಷಿ ಗೋತ್ರ- ಮನೆತನ- ಸಚೇಯವರು.

೧೦. ವಿಶ್ವಾಮಿತ್ರಋಷಿ ಗೋತ್ರ- ಮನೆತನ- ಚಟ್ಪಾದವರು, ಕೂಗಟಿಯವರು, ಕುಂದುಮದವರು, ತಿರುಮಣದವರು.

೧೧. ಚಂದ್ರಕಋಷಿ ಗೋತ್ರ- ಮನೆತನ- ರಾಸುಕುಂಟ್ಲದವರು.

೧೨. ಪಿಪಲಕಋಷಿ ಗೋತ್ರ- ಮನೆತನ- ಶಿರಂತಿಯವರು.

೧೩. ಭೃಗುಋಷಿ ಗೋತ್ರ- ಮನೆತನ- ಕೊಶನದವರು, ಮದಕೂಟಿಯವರು, ಆರಕೊಟಾರದವರು, ಮುನೇಗಾಳದವರು, ಬೊಗ್ಗಿಲದವರು, ಕೇರಿಮೆಲದವರು.

೧೪. ಮನುಋಷಿ ಗೋತ್ರ- ಮನೆತನ- ಪುಟ್ಟಿಯವರು, ದಾಶೆಟ್ಟಿಯವರು.

೧೫. ಶಂಕಣಿಋಷಿ ಗೋತ್ರ- ಮನೆತನ- ಚಿಂತಗಿಂಜಲದವರು.

೧೬. ದಧೀಚಿಋಷಿ ಗೋತ್ರ- ಮನೆತನ- ಕಟಕೆಲದವರು.

೧೭. ಪತಂಜಲಿ ಋಷಿ ಗೋತ್ರ- ಮನೆತನ- ಕರ್ನಾದವರು, ಶಿಂಗಾರಿಯವರು.
೧೮. ರೈಭ್ಯಋಷಿ ಗೋತ್ರ- ಮನೆತನ- ನಿಡದಲದವರು.
೧೯. ವೇಮುಲಋಷಿ ಗೋತ್ರ- ಮನೆತನ- ಆಂಬೆಯವರು.
೨೦. ಪಾಲಕಿಋಷಿ ಗೋತ್ರ- ಮನೆತನ- ಜಾನ್ನಾದವರು.
೨೧. ಸದಾನಂದಋಷಿ ಗೋತ್ರ- ಮನೆತನ- ರಾಗಾದವರು.
೨೨. ವಾಲಖಿಲ್ಯಋಷಿ ಗೋತ್ರ- ಮನೆತನ- ಭಂಡಾರದವರು, ಬೆನಕದವರು, ಪಮ್ಮಿಯವರು.
೨೩. ಅತ್ರಿಋಷಿ ಗೋತ್ರ- ಮನೆತನ- ಕೆಂಪುಲದವರು, ಅಂಪಾಜತ್ತಿನಿಯವರು, ಅಲ್ಲನವರು.
೨೪. ಕಾಳಿಕಾಋಷಿ ಗೋತ್ರ- ಮನೆತನ- ಪಜ್ಜಾದವರು.
೨೫. ದೇವರಾಜಋಷಿ ಗೋತ್ರ- ಮನೆತನ- ಗುಗ್ಗುಳದವರು.
೨೬. ಪರಾಶರಋಷಿ ಗೋತ್ರ- ಮನೆತನ- ಪಾಸಾದವರು (ಪಾಚಾದವರು) ದೇವಿಯವರು.
೨೭. ನಾರದಋಷಿ ಗೋತ್ರ- ಮನೆತನ- ಮಾನುಕೂರಿಯವರು, ಮಾನಕಲದವರು.
೨೮. ಗಾಲವಋಷಿ ಗೋತ್ರ- ಮನೆತನ- ಪಿಡಿಕದವರು.
೨೯. ಶೌನಕಋಷಿ ಗೋತ್ರ- ಮನೆತನ- ಭಂಗಾರಿಯವರು.
೩೦. ಭೃಂಗಿಋಷಿ ಗೋತ್ರ- ಮನೆತನ- ಗವ್ವಲದವರು.
೩೧. ಭಾಸ್ಕರಋಷಿ ಗೋತ್ರ- ಮನೆತನ- ಗಡ್ಡದವರು.
೩೨. ಗೌತಮಋಷಿ ಗೋತ್ರ- ಮನೆತನ- ಬೊಮ್ಮೆತ್ತಿನವರು, ಕೊತ್ತಾರವರು.
೩೩. ದೇವಋಷಿ ಗೋತ್ರ- ಮನೆತನ- ಸಾಧುರವರು.
೩೪. ಮನುಬ್ರಹ್ಮಋಷಿ ಗೋತ್ರ- ಮನೆತನ- ಕಾಮಿನಿಯವರು.
೩೫. ಕಶ್ಯಪಋಷಿ ಗೋತ್ರ- ಮನೆತನ- ಬತ್ತಲದವರು, ವಿದ್ಯಾಪಸ್ತದವರು, ಮುರಾರಿಯವರು, ಅಲಗೆಯವರು, ತುಮ್ಮನವರು.
೩೬. ಕ್ರೌಂಚಲ್ಯಋಷಿ ಗೋತ್ರ- ಮನೆತನ- ಮಟ್ಟದವರು.
೩೭. ಮೌದ್ಗಲ್ಯಋಷಿ ಗೋತ್ರ- ಮನೆತನ- ರೆಡ್ಡಿಯವರು, ಜೇಡಾದವರು, ರೊಬ್ಬಿಯವರು, ಚಿಂತಾರವರು.
೩೮. ಗಾಲಋಷಿ ಗೋತ್ರ- ಮನೆತನ- ಅಗಸದವರು.
೩೯. ಮಾಂಗಲ್ಯಋಷಿ ಗೋತ್ರ- ಮನೆತನ- ರಾಗಿಮಾನುಯವರು.
೪೦. ಇಂದ್ರಜಿಹ್ವಋಷಿ ಗೋತ್ರ- ಮನೆತನ- ದೇವಲೋಕದವರು.
೪೧. ವೇದವ್ಯಾಸಋಷಿ ಗೋತ್ರ- ಮನೆತನ- ಯೆಲುಗೋಟಿಯವರು.
೪೨. ವೃಷಭಋಷಿ ಗೋತ್ರ- ಮನೆತನ- ಬಾಣದವರು.
೪೩. ಸೂರ್ಯವಂಶಋಷಿ ಗೋತ್ರ- ಮನೆತನ- ಗೋಪಾಲದವರು.
೪೪. ಶುಕಬ್ರಹ್ಮಋಷಿ ಗೋತ್ರ- ಮನೆತನ- ರಾಮಾಯಣದವರು.
೪೫. ಕಾತ್ಯಾಯನಋಷಿ ಗೋತ್ರ- ಮನೆತನ- ಮುಕ್ತಾಪುರದವರು.

೪೬. ಕುಂಭಸಂಭವಋಷಿ ಗೋತ್ರ- ಮನೆತನ- ಬಲ್ಲರವರು.

೪೭. ಮೈತ್ರೇಯಋಷಿ ಗೋತ್ರ- ಮನೆತನ- ಪರಸಂರವರು, ಪಂಡ್ಲುರವರು, ನಲ್ಲವಾಳದವರು, ಗುಡಿಯವರು ಒಂಟೆಯವರು, ಉದ್ದಂಡಿಯವರು, ಚಿಂತಂಬೆಯವರು, ಅರಕೋಟಾರದವರು, ಗುನ್ನೆಯವರು.

೪೮. ಸೋಮಕಋಷಿ ಗೋತ್ರ- ಮನೆತನ- ಪೂಲಾದವರು.

೪೯. ಭಾಸ್ಕರದೇವಋಷಿ ಗೋತ್ರ- ಮನೆತನ- ಬಾಡಾರವರು.

೫೦. ವಸುದೇವಋಷಿ ಗೋತ್ರ- ಮನೆತನ- ಯರ‍್ರಾರವರು, ಕೊತ್ತಪೇಟೆಯವರು, ಗದ್ದೆಯವರು, ಕೊಂಡೆಗಾಳದವರು.

೫೧. ಕಶ್ಯಪಋಷಿ ಗೋತ್ರ- ಮನೆತನ- ವಿದ್ಯಾಪಸ್ತದವರು, ಮುರಾರಿಯವರು, ಅಲಗೆಯವರು, ತುಮ್ಮನವರು.

೫೨. ಚತುರ್ಮುಖಬ್ರಹ್ಮಋಷಿ ಗೋತ್ರ- ಮನೆತನ- ಆಟ್ರುರವರು.

೫೩. ಸೋಮೋದ್ಭವಋಷಿ ಗೋತ್ರ- ಮನೆತನ- ಬೈಳೆಯವರು, ಚಿಂತಕಾಯಲದವರು, ಬಾಡಿಗೆಯವರು, ಆದ್ದಿಯವರು.

೫೪. ಯೋಗಬಿಂದುಋಷಿ ಗೋತ್ರ- ಮನೆತನ- ನಿಡದಲದವರು.

೫೫. ಕಪಿಲಋಷಿ ಗೋತ್ರ- ಮನೆತನ- ಪಿಳ್ಳಾರಿಯವರು.

೫೬. ಕಾತ್ಯಾಯನಋಷಿ ಗೋತ್ರ- ಮನೆತನ- ಚಾಯುರವರು.

೫೭. ತೃಣಬಿಂದುಋಷಿ ಗೋತ್ರ- ಮನೆತನ- ಸೀಮೆಯವರು.

೫೮. ವರ್ತಂತುಋಷಿ ಗೋತ್ರ- ಮನೆತನ- ಚನ್ನಾದವರು.

೫೯. ಶಾಲಿದೇವಋಷಿ ಗೋತ್ರ- ಮನೆತನ- ಬೀರನವರು.

೬೦. ಸಾಂಖ್ಯಾಯನಋಷಿ ಗೋತ್ರ- ಮನೆತನ- ಚಚ್ಚಕ್ಕಾಳದವರು.

೬೧. ಸೋಮಕಲಋಷಿ ಗೋತ್ರ- ಮನೆತನ- ಜೀನಗದವರು.

೬೨. ಕೌಶಲ್ಯಋಷಿ ಗೋತ್ರ- ಮನೆತನ- ತೊಟ್ಟಿಂಟಿಯವರು.

೬೩. ಭೃಂಗಂಡಋಷಿ ಗೋತ್ರ- ಮನೆತನ- ನಾರದರವರು.

೬೪. ವಾಲ್ಮೀಕಿಋಷಿ ಗೋತ್ರ- ಮನೆತನ- ಆರೇಯವರು.

೬೫. ಶಂಖದೇವಋಷಿ ಗೋತ್ರ- ಮನೆತನ- ಚಚ್ಚಕ್ಕಾಳದವರು, ಕೊಡಕಲದವರು.

೬೬. ವಿಶ್ವಾವಸುಋಷಿ ಗೋತ್ರ- ಮನೆತನ- ತಪಸಿಯವರು.

೬೭. ಕೌಂಡಿನ್ಯಋಷಿ ಗೋತ್ರ- ಮನೆತನ- ಅಲಸಯ್ಯನವರು, ಯರ‍್ರಾರವರು.

ವಿ.ಸೂ. ಮೇಲ್ಕಂಡ ಗೋತ್ರಗಳಲ್ಲಿ ಕೆಲವು ಕಡೆ ಗೋತ್ರಗಳು ಬೇರೇಬೇರೆಯಾಗಿದ್ದು ಮನೆತನಗಳು ಒಂದೇ ಆಗಿಯೂ, ಗೋತ್ರವು ಒಂದೇ ಆಗಿದ್ದು ಮನೆತನಗಳು ಬೇರೆಬೇರೆಯಾಗಿಯೂ ಇದ್ದು ಸಂದಿಗ್ದವಾಗಿರುವುದರಿಂದ ಅವುಗಳನ್ನು ಆಯಾ ಗೋತ್ರದವರೇ ಹಾಗೂ ಮನೆತನದವರೇ ತಮಗೆ ಪಾರಂಪರ್ಯವಾಗಿ ಬಂದಿರುವಂತೆ ಗೋತ್ರಗಳನ್ನೂ ಮನೆತನದ

ಹೆಸರುಗಳನ್ನೂ ತಮ್ಮ ತಮ್ಮ ಹಿರಿಯರನ್ನು ವಿಚಾರಿಸಿ ನಿರ್ಧರಿಸಿಕೊಳ್ಳುವುದು. ಇದರಲ್ಲಿನ ತಪ್ಪುಗಳನ್ನು ದಯವಿಟ್ಟು ತಿಳಿಸಿದರೆ ಮುಂದೆ ಸರಿಪಡಿಸಲಾಗುವುದು. ಹೊಸ ಗೋತ್ರಗಳು ಹಾಗೂ ಮನೆತನಗಳು ದೊರೆತಲ್ಲಿ ನಮಗೆ ಕಳುಹಿಸಿಕೊಟ್ಟಲ್ಲಿ ಮುಂದಿನ ಮುದ್ರಣದಲ್ಲಿ ಸೇರಿಸಲಾಗುವುದು.

ಒಂದೇ ಗೋತ್ರದಲ್ಲಿ ಗೋತ್ರವು ಒಂದೇ ಆಗಿದ್ದು ಮನೆತನವು ಬೇರೆಯಾಗಿದ್ದರೆ ಗೋತ್ರವು ಒಂದೇ ಆಗುವುದರಿಂದ ಸಗೋತ್ರ ವಿವಾಹವು ವಿಹಿತವಲ್ಲವೆಂದು ಹಿಂದಿನ ಋಷಿಮುನಿಗಳ ಅಭಿಪ್ರಾಯ. ಮುಖ್ಯವಾಗಿ ವಿವಾಹಾದಿ ಶರೀರ ಸಂಬಂಧ ಬೆಳೆಯಿಸುವವರು ಇದನ್ನು ಗಮನಿಸಬೇಕಾಗಿ ವಿನಂತಿ.

★★★★★★★